ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು -ಒಂದು ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಈಶ್ವರರಾವ್. ಎ

ಸಂಶೋಧನ ವಿದ್ಯಾರ್ಥಿ

ಮಾರ್ಗದರ್ಶಕರು

ಡಾ. ಎಂ. ಕೊಟ್ರೇಶ್

ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ,

ಸಮಾಜ ವಿಜ್ಞಾನ ನಿಕಾಯ,

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ-೫೮೩೨೭೬

೨೦೧೨

ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು
-ಒಂದು ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಈಶ್ವರರಾವ್.ಎ
ಸಂಶೋಧನ ವಿದ್ಯಾರ್ಥಿ

ಮಾರ್ಗದರ್ಶಕರು
ಡಾ.ಎಂ.ಕೊಟ್ರೇಶ್
ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ,
ಸಮಾಜ ವಿಜ್ಞಾನ ನಿಕಾಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ-೫೮೩.೨೭

೨೦೧೭

ಸಂಶೋಧಕರ ಪ್ರಮಾಣ ಪತ್ರ

"ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು - ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ.ಎಂ.ಕೊಟ್ರೇಶ್,** ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಸಮಾಜ ವಿಜ್ಞಾನ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 26/9/2017

ಸ್ಥಳ : ವಿದ್ಯಾರಣ್ಯ

ಅಭ್ಯರ್ಥಿ ಸಹಿ

A S Ishwarrao

ಈಶ್ವರರಾವ್.ಎ
ಸಂಶೋಧನ ವಿದ್ಯಾರ್ಥಿ,
ಶಾಸನಶಾಸ್ತ್ರ ವಿಭಾಗ,
ಕನ್ನಡ ವಿಶ್ವ ವಿದ್ಯಾಲಯ,ಹಂಪಿ
ವಿದ್ಯಾರಣ್ಯ.

ಮಾರ್ಗದರ್ಶಕರ ಪ್ರಮಾಣ ಪತ್ರ

ಈಶ್ವರರಾವ್.ಎ ಇವರು **"ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು – ಒಂದು ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಸಮಾಜ ವಿಜ್ಞಾನ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದು, ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸಿದ್ದಾರೆ.

ದಿನಾಂಕ: 26.9.2017

ಸ್ಥಳ : ತುಮಕೂರು.

ಮಾರ್ಗದರ್ಶಕರ ಸಹಿ

ಡಾ.ಎಂ.ಕೊಟ್ರೇಶ್
ಪ್ರಾಧ್ಯಾಪಕರು,
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ,
ತುಮಕೂರು ವಿಶ್ವವಿದ್ಯಾಲಯ,
ತುಮಕೂರು

ಪರಿವಿಡಿ

ಅಧ್ಯಾಯ-೮

ಸಮಾರೋಪ

ಅನುಬಂಧಗಳು

೧) ದೇವಾಲಯಗಳ ಪಟ್ಟಿ

೨) ಪದಕೋಶ

೩) ಗ್ರಂಥ ಋಣ

೪) ಸಂಕ್ಷೇಪಗಳು

೫) ಛಾಯಾ ಚಿತ್ರಗಳು

೬) ಶಿಕಾರಿಪುರ ತಾಲ್ಲೂಕಿನ ನಕ್ಷೆ

ಅಧ್ಯಾಯ-೧

೧.೧.ಪೀಠಿಕೆ

೧.೨.ಅಧ್ಯಯನದ ಉದ್ದೇಶ

೧.೩.ಅಧ್ಯಯನದ ವ್ಯಾಪ್ತಿ

೧.೪.ಅಧ್ಯಯನದ ವಿಧಾನ

೧.೫.ಅಧ್ಯಯನದ ಸ್ವರೂಪ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಯಾವುದೇ ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿ ಅಧ್ಯಯನಕ್ಕೆ ಕೆಲವು ಮೂಲ ಆಕರಗಳು ಅತ್ಯವಶ್ಯಕ. ಭರತಖಂಡದ ದಖ್ಖನ್ ಭಾಗದ ವ್ಯಾಪ್ತಿಗೆ ಬರುವ ಕರ್ನಾಟಕ ಅಧ್ಯಯನಕ್ಕೆ ಶಿಲಾ, ತಾಮ್ರ, ಮರಗಳ ಮೇಲೆ ಸಾರ್ವಜನಿಕವಾಗಿ ಬಿಂಬಿಸುವ ಅಧಿಕೃತ ಘೋಷಣೆಗಳಾದ ಶಾಸನಗಳು ಪ್ರಮುಖ ಆಕರ. ಕರ್ನಾಟಕದಲ್ಲಿ ಶೋಧಿಸಿದ ಆಧಾರಗಳಲ್ಲಿ ಬಿ.ಎಲ್.ರೈಸ್, ಜೆ.ಎಫ್.ಫ್ಲೀಟ್ ಮೊದಲಾದವರು ಕರ್ನಾಟಕದ ಶಾಸನಾಧಾರಿತ ಸಮಗ್ರ ಇತಿಹಾಸ ಮತ್ತು ಸಂಸ್ಕೃತಿಯನ್ನು ಪುನರ್ ರಚಿಸಿದ್ದಾರೆ.

ಮನುಷ್ಯನ ವೇದನೆ ಮತ್ತು ಸಾಧನೆಗಳು ಇತಿಹಾಸದ ಹೆದ್ದಾರಿಯಲ್ಲಿ ಸಮೃದ್ಧವಾಗಿದೆ. ಜಗತ್ತಿನ ಇತಿಹಾಸದಲ್ಲಿ ಭಾರತ ಕೂಡ ತನ್ನದೆ ಆದ ವಿಶಿಷ್ಟ ಸ್ಥಾನಮಾನವನ್ನು ಗಳಿಸಿದೆ. ಕಲ್ಲು ಕಥೆಯನ್ನು ಹೇಳುತ್ತೆ ಕಥೆ ನೈಜತೆಯ ಹಾದಿಯನ್ನು ತೋರುತ್ತದೆ. ಇದೇ ಹಿನ್ನೆಲೆಯಲ್ಲಿ ಶಾಸನ ಅಂದು ತನ್ನ ಮೌನತ್ವದ ನಡುವೆ ಒಂದು ಕಾಲದಲ್ಲಿ ನಡೆದ ವೈಭವಗಳನ್ನು ತಿಳಿಸುವ ಅಂಶವಾಗಿ ದೇವಾಲಯಗಳು ಸತ್ಯವನ್ನು ಸೃಷ್ಟಿಸುತ್ತವೆ. ಇತಿಹಾಸ ನಿರ್ಮಾಣಕ್ಕೆ ಶಾಸನಗಳು ಪ್ರಮುಖ ಆಕರಗಳಾಗಿವೆ. ಈ ಅವಶೇಷಗಳ ಸಂಗ್ರಹಣೆಯಿಂದ ಒಂದು ನಾಡಿನ ನರ ನಾಡಿಯೆನಿಸಿದ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ರಚಿಸಬಹುದು.

ಕರ್ನಾಟಕದಲ್ಲಿ ಕುಂತಳ ಮತ್ತು ಬನವಾಸಿ ಮಹತ್ವಪೂರ್ಣ ಪ್ರಾಮುಖ್ಯತೆಯನ್ನು ಪಡೆದಿದೆ. ಬನವಾಸಿ ಕುಂತಳದ ಮಧ್ಯಭಾಗ ಶಿಕಾರಿಪುರ ತಾಲ್ಲೂಕಿನ ಪ್ರದೇಶಗಳ ಪ್ರಾಚೀನತೆಯ ಬಿಂಬವಾಗಿ ಇತಿಹಾಸವನ್ನು ಮೈದುಂಬಿಸಿಕೊಂಡಿದೆ. ಭಾರತದ ಇತಿಹಾಸದಲ್ಲಿ ರಾಜರುಗಳ ಆಳ್ವಿಕೆ ನಡೆಸಲು ಇರುವ ಕೀಲಿಕೈ ಧಾರ್ಮಿಕ ವ್ಯವಸ್ಥೆಯಾಗಿದೆ. ಇಂತಹ ಧಾರ್ಮಿಕ ವೈಚಾರಿಕ ಅಂಶಗಳು ದೇವಾಲಯಗಳು ನಿರ್ಮಾಣದ ವರದಿಯನ್ನು ಹಿಡಿದಿಟ್ಟಿವೆ. ಈ ಹಿನ್ನಲೆಯಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಜೈನ, ಬೌದ್ಧ, ಶೈವ, ವೈಷ್ಣವ ಮತ್ತು ಶಾಕ್ತ ಪಂಥ ಇತ್ಯಾದಿ ಧರ್ಮಗಳಿಗೆ ಅನುಗುಣವಾಗಿ ದೇವಾಲಯಗಳು ನಿರ್ಮಾಣವಾಗಿ ಬೆಳೆದು ಬಂದಿವೆ. ಪ್ರಸ್ತುತ ಮಹಾ ಪ್ರಬಂಧವನ್ನು ಪುರಾತತ್ವ ಅವಶೇಷಗಳಲ್ಲಿ ಮಹತ್ವವಾಗಿದೆ. "ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು – ಒಂದು ಸಾಂಸ್ಕೃತಿಕ ಅಧ್ಯಯನ" ಎನ್ನುವ ಶೀರ್ಷಿಕೆಯಲ್ಲಿ ಕ್ಷೇತ್ರ ಕಾರ್ಯಾಧಾರಿತ ವಿಷಯವನ್ನು ಆಧರಿಸಿ ರಚನೆ ಮಾಡಲಾಗಿದೆ.

ಶಾಸನಗಳು ಇತಿಹಾಸದ ಬದುಕನ್ನೆ ಹುದುಗಿಸಿಕೊಂಡಿದೆ. ಇವುಗಳಲ್ಲಿ ಅಡಗಿರುವ ವಿಚಾರಗಳನ್ನು ಹೊರಹಾಕುವ ಹಿನ್ನಲೆಯಲ್ಲಿ ದೇವಾಲಯಗಳ ಅಧ್ಯಯನವನ್ನು ಮೈಗೂಡಿಸಿಕೊಂಡು ಶಿಕಾರಿಪುರದ ಶಾಸನಗಳ ಉಲ್ಲೇಖಿತ ಹೆಸರುಗಳ ಆಧಾರದ ಮೇಲೆ ದೇವಾಲಯಗಳ ಹಿನ್ನಲೆಯಲ್ಲಿ ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳ ವಸ್ತು ವಿಷಯವಾಗಿ ಅಧ್ಯಯನ ನಡೆಸಿದೆ. ಇದರ ಮೂಲ ಅತ್ಯಂತ ಪ್ರಾಚೀನ ಕಾಲದ ಇತಿಹಾಸದ ಬೇರುಗಳಲ್ಲಿದೆ. ಅದರ ಹುಡುಕಾಟ ಈ ಪ್ರಬಂಧವಾಗಿದೆ. ಸಮಾಜ ಮತ್ತು ಧರ್ಮ ದೇವಾಲಯ ನಿರ್ಮಾಣದ ಜೊತೆ ಜೊತೆಗೆ ಬೆಳೆದು ಬಂದಿವೆ. ಸಮಾಜ ಮತ್ತು ಅರಸರುಗಳ ಪೋಷಣೆಯಲ್ಲಿ ಬೆಳೆದ ದೇವಾಲಯಗಳನ್ನು ಅಧ್ಯಯನಕ್ಕೆ ಬಳಸಲಾಗಿದೆ. ಕದಂಬರ ಕಾಲದಿಂದ ವಿಜಯನಗರೋತ್ತರ ಕಾಲದವರೆಗೆ ಬೆಳೆದ ದೇವಾಲಯ ಅಧ್ಯಯನ ಶಾಸನೋಕ್ತವಾಗಿ ಉಲ್ಲೇಖವನ್ನು ಗ್ರಹಿಸಿಕೊಂಡಿದೆ. ದೇವಾಲಯಗಳ ಉಚ್ಛ್ರಾಯ ಸ್ಥಿತಿಯನ್ನು ಕಟ್ಟಿದ ಅರಸ, ಸಾಮಂತ, ದಂಡನಾಯಕ, ಅಧಿಕಾರಿವರ್ಗ ಹೀಗೆ ಇವರ ಅಧ್ಯಯನ ಕೂಡ ಮೈಗೂಡಿಸಿಕೊಂಡಿದೆ.

ದೇವಾಲಯಗಳು ಒಂದು ಪ್ರದೇಶದ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಇವುಗಳ ಚರಿತ್ರೆ ರಚನೆಯಲ್ಲಿ ಮಹತ್ವ ಪೂರ್ಣ ಪಾತ್ರವನ್ನು ನಿರ್ವಹಿಸಿವೆ. ಮೂಲ ದೇಗುಲಗಳು ಸರಳ ಮತ್ತು ನೇರವಾಗಿ ಕಾಣಿಸಿಕೊಂಡು ನಂತರ ಸಂಪ್ರದಾಯಗಳ ಬತ್ತಳಿಕೆಯಲ್ಲಿ ಧಾರ್ಮಿಕ ಆಚಾರ ವಿಚಾರಗಳ ದಾರಿಯಲ್ಲಿ ಸಾಂಸ್ಕೃತಿಕ ವಿಕಸನದಲ್ಲಿ ಇವುಗಳು ಬೃಹತ್ ಆಕಾರದ ಸ್ವರೂಪವನ್ನು ಮೈಗೊಂಡಿಸಿಕೊಂಡಿವೆ. ಇಲ್ಲಿಂದಲ್ಲೇ ಧರ್ಮ, ಸಮಾಜ, ನ್ಯಾಯ, ಶಿಕ್ಷಣ, ಆರ್ಥಿಕತೆ, ರಾಜಕೀಯ, ಸಂಸ್ಕೃತಿಗಳ ನಿರ್ಮಾಣ ಮತ್ತು ನಿರ್ನಾಮಗಳ ಕಾರ್ಯಭಾರವನ್ನು ನಿರ್ವಹಿಸಿವೆ. ರಾಜರ ಆಶ್ರಿತ ದೇವಾಲಯಗಳು ದಾನ ದತ್ತಿಗಳಿಂದ ಸಮಾಜ ಮುಖಿ ಕಾರ್ಯವನ್ನು ಕೈಗೊಂಡು ದೇವಾಲಯವು ಸಮಾಜದ ಜೊತೆಗೆ ದೇವಾಲಯದ ಸಂಸ್ಕೃತಿ ಬೆಳೆದು ಬಂದಿದೆ.

ಉದ್ದೇಶ:

ಸಮಾಜ ಮತ್ತು ದೇವಾಲಯಗಳ ಜೊತೆಗಿನ ಸಂಬಂಧವನ್ನು ಬಿಡಿಸುವ ದೃಷ್ಠಿಯಲ್ಲಿ ದೇವಾಲಯ ವಾಸ್ತುವಿನ ಜೊತೆಗೆ ವಿಧಿ–ವಿಧಾನ, ಆಚಾರ, ವಿಚಾರಧಾರೆಗಳನ್ನು ಒಳಗೊಂಡ ಕ್ಷೇತ್ರ ಕಾರ್ಯಗಳ ಅಧ್ಯಯನವನ್ನು ಮೂಡಿಸಲಾಗಿದೆ. ಗತವನ್ನು ವೈಭವವಿಕರಿಸಿ ಘಟನೆಗಳ ವಿಚಾರವನ್ನು ನೋಡುವ ಪ್ರಯತ್ನದ ಒಂದು ಇಣುಕು ಇದಾಗಿದೆ. ಶಾಸನಗಳಲ್ಲಿನ ಆಡಳಿತ ಸ್ವರೂಪ, ಸಾಮಾಜಿಕ ಜೀವನ, ಆರ್ಥಿಕ ವ್ಯವಸ್ಥೆ, ಧಾರ್ಮಿಕ ಕಾರ್ಯಾಚರಣೆ, ಶೈಕ್ಷಣಿಕ ಕೊಡುಗೆಗಳನ್ನು ವಿಶಿಷ್ಠ ರೂಪದಲ್ಲಿ ವಿಭಾಗಿಸಿ ಅಧ್ಯಯನ ಮಾಡುವ ಉದ್ದೇಶ ಒಳಗೊಂಡಿದೆ. ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳನ್ನು ವಿಶೇಷವಾಗಿ ಕೇಂದ್ರಿಕರಿಸಿದಾಗ ಶಾಸನಗಳ ಮೂಲಕ ದೇವಾಲಯಗಳ ಮಹತ್ವವನ್ನು ಕುರಿತ ಅಧ್ಯಯನದ ಅವಶ್ಯಕತೆ ಎದ್ದು ಕಾಣುತ್ತಿದೆ. ನಮ್ಮ ನಾಡಿನ ಜನ

ಜೀವನ ಅರಿಯಲು ಶಾಸನ ಉತ್ತಮ ಸಾಧನವಾಗಿ ಸಮಾಜದೊಂದಿಗಿನ ಬದುಕನ್ನು ಅರಿಯಲು ದೇಗುಲಗಳ ವಿಶಿಷ್ಠ ಸ್ಥಾನವನ್ನು ಮಾಪನ ಮಾಡುವುದು ಈ ಅಧ್ಯಯನದ ಉದ್ದೇಶವಾಗಿದೆ.

ಕುಂತಳ ನಾಡಿನ ಮೂಲಕ ಭಾರತದ ಶ್ರೀಮಂತ ಸಂಸ್ಕೃತಿಗೆ ಶ್ರಮಿಸಿದ ಪ್ರದೇಶಗಳಲ್ಲಿ ಶಿಕಾರಿಪುರದ ತಾಲ್ಲೂಕು ಒಂದು. ಕ್ರಿ. ಶ. ೫ನೇ ಶತಮಾನದಿಂದ ೧೯ನೇ ಶತಮಾನದವರೆಗೆ ಶಾಸನಗಳನ್ನು ಸಾಂಸ್ಕೃತಿಕ ದೃಷ್ಠಿಯಿಂದ ಅಧ್ಯಯನ ಮಾಡಿದರೆ, ಕರ್ನಾಟಕದಲ್ಲಿ ಸಾಂಸ್ಕೃತಿಕ ಇತಿಹಾಸದ ಒಂದು ಸಮಗ್ರ ಚಿತ್ರಣವನ್ನು ರೂಪಿಸುವುದು ಸಾಧ್ಯವಾಗುತ್ತದೆ. ಅಂತಹ ಅಧ್ಯಯನದ ಅಗತ್ಯವು ಅವಶ್ಯಕವಾಗಿದೆ. ಶಿಕಾರಿಪುರದ ತಾಲ್ಲೂಕಿನ ಅನೇಕ ಶಾಸನಗಳಲ್ಲಿ ಗ್ರಾಮ ನಾಮಗಳ ಉಲ್ಲೇಖವಿದೆ.ಆ ಗ್ರಾಮನಾಮಗಳು ಇಂದಿನ ಗ್ರಾಮಗಳ ಹೆಸರುಗಳಿಗೆ ಒರೆ ಹಚ್ಚುತ್ತದೆ. ಹಾಗೇ ದೇವಾಲಯಗಳ ಪೂರಕ ಮಾಹಿತಿಗಳ ಶಾಸನ ಉಲ್ಲೇಖಿತ ರೂಪ ಪಡೆಯಲು ಸಾಧ್ಯವಾಗಿವೆ.

ದೇವಾಲಯಗಳಿಗೆ ಸಂಬಂಧಿಸಿದಂತೆ ಹಲವಾರು ವಿದ್ವಾಂಸರು ತನ್ನದೇ ನೆಲೆಗಳಲ್ಲಿ ಇತಿಹಾಸ ರೂಪಿಸುವಲ್ಲಿ ಮಾಡಿದ ಪ್ರಯತ್ನದ ವರದಿಗಳಲ್ಲಿ ಕೆಲವು ಸೂಕ್ಷ್ಮತೆಗಳನ್ನು ಕೆಣಕುವಲ್ಲಿ ಈ ಅಧ್ಯಯನ ಮಾಡಲಾಗಿದೆ. ಹಾಗಾಗಿ ಇದು ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಕಾರ್ಯಗಳಿಗೆ ಪ್ರಮುಖ ಆದ್ಯತೆಯನ್ನು ನೀಡಿ ದೇವಾಲಯಗಳ ರಚನೆಯನ್ನು ಬಿಡಿಸುವಲ್ಲಿ ಮಾಡಿದ ಕಾರ್ಯಗಾರವಾಗಿದೆ.

ಈವರೆಗಿನ ಸಂಶೋಧನೆಗಳು ಕೆಲವು ರಾಜಮನೆತನಗಳಿಗೆ ಸಂಬಂಧಿಸಿದಂತೆ ಆಡಳಿತ, ಸಮಾಜ, ವ್ಯಕ್ತಿಗಳಿಗೆ ಸೀಮಿತವಾಗಿದ್ದವು. ಆದರೆ, ಇದನ್ನು ಸೇರಿಸಿದಂತೆ ದೇವಾಲಯ ಕಾರ್ಯಾಭಾರ, ನಿರ್ಮಾಣ, ಬೆಳವಣಿಗೆ ಇತ್ಯಾದಿ ರೂಪಗಳಲ್ಲಿ ಸಾಂಸ್ಕೃತಿಕ ಮುಖಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಶಿಕಾರಿಪುರದಂತಹ ಪ್ರದೇಶ ಸ್ಥಳೀಯ ಸಂಶೋಧನೆಯತ್ತ ಸಾಗಿದೆ ಎಂಬುವುದರ ರೂಪವನ್ನು ತೋರ್ಪಡಿಸಲಾಗಿದೆ. ಈ ರೀತಿಯ ಹಲವಾರು ದೇವಾಲಯಗಳು ಪ್ರಸ್ತುತ ಈ ಸಂಶೋಧನ ಪ್ರದೇಶವಾದ ಶಿಕಾರಿಪುರ ತಾಲ್ಲೂಕಿಗೆ ಸೀಮಿತವಾಗಿವೆ.

ಸಂಪ್ರದಾಯಿಕ ಜೀವನದಲ್ಲಿ ದೇವರು ದೇವಾಲಯಗಳು ಬಹುಮುಖ್ಯ ಪಾತ್ರ ನಿರ್ವಹಿಸಿವೆ. ಸಮಾಜ ಮತ್ತು ದೇವಾಲಯಗಳ ಮಧ್ಯೆ ನಿಕಟ ಸಂಬಂಧವಿದೆ. ದೇವಾಲಯಗಳ ವಾಸ್ತುಶಿಲ್ಪ, ಚಿತ್ರ, ಸಂಗೀತ, ನೃತ್ಯ ಇತ್ಯಾದಿ ಕಲೆಗಳನ್ನು ದೇವಾಲಯಗಳು ಪೋಷಿಸಿ ಬೆಳೆಸಿದ ಬಗೆ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಚಿತ್ರಣಗಳ ನಿರ್ವಹಣೆಯ ಕಾರ್ಯಗಳನ್ನು ಅಧ್ಯಯನ ಮಾಡುವುದೇ ಇದರ ಉದ್ದೇಶ. ವ್ಯಕ್ತಿ ಮತ್ತು ಸಮಾಜ ಪರಸ್ಪರ ಒಳಿತಿಗೆ ದೇವಾಲಯಗಳನ್ನು ಪೂಜಿಸುತ್ತಿದ್ದರು. ಸಮಾಜದ ನೆಲೆ ಬಂದಾಗ ಎಲ್ಲರೂ ಒಂದೆಡೆ ಬೆರೆತು ಪೂಜಿಸುವ ವಿಧಿ-ವಿಧಾನಗಳ ಅಧ್ಯಯನದ

ಅವಶ್ಯಕತೆ ಇದರ ಉದ್ದೇಶ. ಎಲ್ಲರ ಒಳಿತಿಗಾಗಿ ಪೂಜೆ ಸಲ್ಲಿಸುತ್ತಾ "ಸರ್ವೇ ಜನಃ ಸುಖಿನೋಭವಂತು" ಎಂಬ ಉದಾತ್ತ ಭಾವನೆಯನ್ನು ಬೆಳೆಸಿಕೊಂಡ ನಮ್ಮ ಪೂರ್ವಿಕರ ಬದುಕು ಅನುಕರಣೀಯ. ಈ ಅನುಕರಣೀಯತೆಯನ್ನು ಕೆಣಕುವಲ್ಲಿ ಈ ಅಧ್ಯಯನ ಮಾಹಿತಿಗಳನ್ನು ಒಳಗೊಂಡಿದೆ.

(ಕರ್ನಾಟಕದಲ್ಲಿ ದೇವಾಲಯ ಬೆಳವಣಿಗೆ ಕದಂಬರ ಕಾಲದಿಂದ ಹಿಡಿದು ಕಲ್ಯಾಣ ಚಾಳುಕ್ಯರು, ಹೊಯ್ಸಳರ ಕಾಲದಲ್ಲಿ ಸುವರ್ಣ ಮಟ್ಟದಲ್ಲಿದ್ದು, ನಂತರ ದಿನಗಳಲ್ಲಿ ಇಳಿಕೆ ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ಕೆಲವು ವಿದ್ವಾಂಸರ ಅಂಶಗಳನ್ನು ಅಧ್ಯಯನದಲ್ಲಿ ಬಳಸಿಕೊಂಡು ಭಾಗಶಃ ಪರಿಪಕ್ವ ಅಧ್ಯಯನವನ್ನು ಮಾಡಿ ಶಿಕಾರಿಪುರ ತಾಲ್ಲೂಕಿನಲ್ಲಿ ದೇವಾಲಯಗಳ ಮೆರಗನ್ನು ಚಿತ್ರಿಸುವ ಪ್ರಯತ್ನಗಳನ್ನು ಮಾಡಲಾಗಿದೆ.)

ಪ್ರಸ್ತುತ ಸಂಶೋಧನ ಪ್ರಬಂಧದ ವಿಷಯ "ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು-ಒಂದು ಸಾಂಸ್ಕೃತಿಕ ಅಧ್ಯಯನ"ವೂ ಸಹ ಕೆಲವು ನಿರ್ದಿಷ್ಟ ಉದ್ದೇಶಗಳನ್ನು ಹೊಂದಿದೆ. ವಿಶೇಷವಾಗಿ ಶಾಸನೋಕ್ತ ದೇವಾಲಯಗಳ ಸರ್ವೇಕ್ಷಣೆ, ದಾಖಲೀಕರಣ ಹಾಗೂ ಅಧ್ಯಯನಗಳಲ್ಲಿ ಕಂಡುಬರುವ ವಿಷಯಗಳನ್ನು ವರ್ಗೀಕರಿಸುವುದು ಮತ್ತು ಪ್ರಸ್ತುತ ಪಡಿಸುವುದು.

ಪ್ರಸ್ತುತ ಪ್ರದೇಶದ ದೇವಾಲಯಗಳನ್ನು ಕುರಿತು ನಡೆದಿರುವ ಅಧ್ಯಯನಗಳ ವರದಿಗಳನ್ನು ಸಂಗ್ರಹಿಸುವುದು ಮತ್ತು ಅಧ್ಯಯನ ನಡೆಸುವುದು. ತಾಲ್ಲೂಕಿನ ವಿವಿಧ ಹಳ್ಳಿಗಳಲ್ಲಿರುವ ದೇವಾಲಯಗಳು ವಿವಿಧ ಆಯಾಮಗಳಲ್ಲಿರುವ ಶಿಲ್ಪಗಳು, ಕೋಟೆ-ಕೊತ್ತಲಗಳ ದಾಖಲೀಕರಣ ಮತ್ತು ಅಧ್ಯಯನ ಕ್ಷೇತ್ರ ಕಾರ್ಯದಲ್ಲಿ ಕಂಡು ಬರುವ ವಿಷಯ ಕುರಿತು ವರ್ಗೀಕೃತ ಸಾಂಸ್ಕೃತಿಕ ಅಂಶಗಳು ಹಾಗೂ ಈಗಾಗಲೇ ಪ್ರಕಟಗೊಂಡಿರುವ ಸಾಂಸ್ಕೃತಿಕ ಅಂಶಗಳೊಂದಿಗೆ ತುಲನಾತ್ಮಕ ಅಧ್ಯಯದಿಂದ ಹೊರ ಬಂದ ಐತಿಹಾಸಿಕ ಅಂಶಗಳನ್ನು ದಾಖಲಿಸುವುದು.

ಒಟ್ಟಾರೆ ಜಂಬೂದ್ವೀಪ, ಭರತ, ಕುಂತಳನಾಡು, ಬನವಾಸಿ-೧೨೦೦೦, ನಾಗರ ಖಂಡ-೭೦, ಜಿಡಗೂರು-೭೦, ಎಡನಾಡು-೭೦, ಶಾಂತಳಿಗೆ-೧೦೦೦ಗಳ ನಡುವೆ ಬದುಕನ್ನು ಕಟ್ಟಿಕೊಳುತ್ತ ಅವುಗಳನ್ನು ಕಟ್ಟಿದ ಕೀರ್ತಿ ಶಿಕಾರಿಪುರ ತಾಲ್ಲೂಕಿಗೆ ಸಲ್ಲಬೇಕು. ಇಂತಹ ಮಹತ್ವದ ವಿಷಯಗಳ ತೋರ್ಪಡಿಸುವ ಪ್ರಯತ್ನ ಅಧ್ಯಯನ ಉದ್ದೇಶದಲ್ಲಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನಾ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಉದ್ದೇಶ ದೃಷ್ಟಿಯಲ್ಲಿ ತಾಲ್ಲೂಕಿನಲ್ಲಿ ಕಂಡು ಬರುವ ದೇವಾಲಯಗಳ ಸರ್ವೇಕ್ಷಣೆ ಕಾರ್ಯ ನಡೆಸಿ ದಾಖಲಿಸಲಾಗಿದೆ. ಇಲ್ಲಿ ಕಂಡುಬರುವ ಶಾಸನಗಳ ಸಹಾಕಾರದಿಂದ ಐತಿಹಾಸಿಕ ಕಾಲದ ರಾಜಕೀಯ ಮತ್ತು ರಾಜಕೀಯೇತರ ವಿವರವನ್ನು ಕಟ್ಟಿಕೊಳ್ಳಲಾಗಿದೆ.

ವ್ಯಾಪ್ತಿ :

ಒಂದು ಸಂಶೋಧನಾ ಯಶಸ್ಸಿಗೆ ತನ್ನದೆಯಾದ ಮೀತಿ ವ್ಯಾಪ್ತಿ ಇರಬೇಕು. ಸುಂದರ ಮೂರ್ತಿ ನಿರ್ಮಾಣಕ್ಕೆ ಶಿಲ್ಪಿ ಶಿಲೆಯ ನಿಖರವಾದ ಆಕಾರವನ್ನು ಪಡೆದು ನೈಜ ಮೂರ್ತಿ ಶಿಲ್ಪವಾಗಿಸಬಲ್ಲ. ಹಾಗೆ ಪ್ರಸ್ತುತವಾದ ಅದರದೆ ಆದ ಚೌಕಟ್ಟು ಇರಬೇಕು. ಸಂಶೊಧನೆಗೆ ಈ ವ್ಯಾಪ್ತಿಯನ್ನು ಇತಿಹಾಸ ಸ್ಪಷ್ಟ ರೂಪಕ್ಕೆ ಕಂಡುಕೊಳ್ಳುವ ಹಿನ್ನಲೆಯಲ್ಲಿ ಶಿಕಾರಿಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಪ್ರಸ್ತುತ ನೆಲೆಗಳಾದಿಯಾಗಿ ಅಧ್ಯಯನವನ್ನು ಕೈಗೊಂಡು ಶಾಸನೋಕ್ತ ದೇವಾಲಯಗಳನ್ನು ಒಳಗೊಂಡ ಶಾಸನ ಆಧಾರಿತ ದೇಗುಲಗಳ ವಾಸ್ತು ಲಕ್ಷಣಗಳನ್ನು ಕ್ರಮ ಬದ್ಧತೆಯಿಂದ ಸ್ಪಷ್ಟವಾದ ಇತಿಹಾಸ ರಚಿಸಲಾಗಿದೆ.

ಪ್ರಸ್ತುತ ಅಧ್ಯಯನವು ಚರಿತ್ರೆಯ ಹಿನ್ನೆಲೆಯಲ್ಲಿ ಕಥೆಗಳನ್ನು ಸೇರಿಸುವ ಬದಲು ಕಣ್ಣಿಗೆ ಕಾಣುವ ಸತ್ಯತೆಗಳ ಕಡೆ ಗಮನ ನೀಡಿ ಸಾಂಪ್ರದಾಯಿಕ ಜೀವನದಲ್ಲಿ ದೇವಾಲಯಗಳ ಮುಖ್ಯಘಟ್ಟ ಹಾಗೂ ಸಮಾಜದೊಂದಿಗೆ ಹೊಂದಿದ ನಿಕಟ ಸಂಬಂಧಗಳ ವ್ಯಾಪ್ತಿಯಲ್ಲಿ ವಿಶ್ಲೇಷಿಸಿದೆ. ಸಮಾಜದ ನೆಲ–ಜಲ ಬಂದಾಗ ಎಲ್ಲರು ಒಂದೆಡೆ ಬೆರೆತು ಪೂಜಿಸುವ ಸಂಸ್ಕೃತಿ ಭಾರತೀಯರಲ್ಲಿ ಮನೆ ಮಾಡಿದೆ. ಇಂತಹ ಕಾಲ ಘಟ್ಟದಲ್ಲಿ ಕದಂಬ ಕಾಲದಿಂದ ವಿಜಯನಗರರೋತ್ತರ ಕಾಲದವರೆಗೆ ಶೈವ, ವೈಷ್ಣವ, ಬೌದ್ಧ, ಜೈನ ಪಂಥಗಳ ಉಲ್ಲೇಖಿತ ಶಾಸನಗಳನ್ನು ಕೇಂದ್ರಿಕರಿಸಿ ಅಧ್ಯಯನ ಮಾಡುವ. ದೇವಾಲಯಗಳೊಂದಿಗೆ ಶಾಸನ ನಂಟನ್ನು ಬಿಡಿಸುವ ಪ್ರಯತ್ನ ಇದಾಗಿದೆ.

ಶಿಕಾರಿಪುರ ತಾಲ್ಲೂಕಿನ ಪ್ರದೇಶಗಳು ಅಧ್ಯಯನ ವ್ಯಾಪ್ತಿಯಾಗಿದ್ದು, ಅರಸುಗಳ ಆಚಾರ–ವಿಚಾರಗಳು, ಆಳಿದ ರಾಜರು ಅವರ ಕಾಲದಲ್ಲಿ ರಚನೆಗೊಂಡ ಜೀರ್ಣೋದ್ಧಾರವಾದ ದೇವಾಲಯಗಳು, ವಾಸ್ತು ಶಿಲ್ಪ ಕಲೆಗಳು, ಈ ಕಾಲಾವಧಿಯಲ್ಲಿ ನಿರ್ಮಾಣಗೊಂಡಿರುವ ಶಾಸನ ಉಲ್ಲೇಖಿತ ದೇವಾಲಯಗಳ ವಾಸ್ತು ಲಕ್ಷಣಗಳು, ಕ್ರಮಾನುಗತ ವಿಚಾರಗಳು, ಅಷ್ಟೇ ಅಲ್ಲದೆ ಸಂಶೋಧನೆಗೆ ಪೂರಕವಾದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ವಿವರಗಳು ಒಳಗೊಂಡಂತೆ ವ್ಯಾಪ್ತಿಯಲ್ಲಿ ಕಟ್ಟಿಕೊಂಡಲಾಗಿದೆ.

ವಿಧಾನ :

ಯಾವುದೇ ಸಂಶೋಧನೆಗೆ ಅಧ್ಯಯನ ಶಿಸ್ತು, ಕ್ರಮ, ವಿಧಾನ, ಬಹುಮುಖ್ಯ ಸಮಸ್ಯೆಗಳ ಪರಿಹಾರ ಹುಡುಕುತ್ತಾ ಅವಶ್ಯಕತೆಯ ಅಧ್ಯಯನಗಳನ್ನು ನಡೆಸುವ ಹಾದಿಯಲ್ಲಿ ಪೂರಕ, ನೇರ, ವೈಶಿಷ್ಟ್ಯತೆಗಳನ್ನು ಜೋಡಿಸುತ್ತಾ ಒಂದು ರೂಪವನ್ನು ನೀಡಿ ಅದಕ್ಕೆ ಸಮಾಜದ ಜನರಿಗೆ ನೈಜತೆ ರೂಪವನ್ನು ತೋರಿಸುವ ಪ್ರಯತ್ನ ಪ್ರಮುಖ

ವಿಧಾನಗಳಿಂದ ಮಾತ್ರ ಸಾಧ್ಯ ಪ್ರಸ್ತುತ ಅಧ್ಯಯನವು ಚರಿತ್ರೆಯ ಹಿನ್ನೆಲೆಯಲ್ಲಿ ಕಟ್ಟುವಾಗ ತಾನೂ ಪೂರ್ಣಗೊಳ್ಳುವ ಪರಿಪಕ್ವತೆಯನ್ನು ಕಟ್ಟುವ ರೂಪಕ್ಕೆ ಬದ್ಧವಾದ ವಿಧಾನಗಳನ್ನು ಅನುಸರಿಸುವುದು ಮುಖ್ಯ. ಶಾಸನ ಉಲ್ಲೇಖಿತ ವಿಷಯಾನುಕ್ರಮಗಳನ್ನು ನೈಜತೆಯ ಕಡೆ ಗಮನ ನೀಡಿ ಶಾಸನಗಳ ಹಿನ್ನಲೆಯನ್ನು ಭೂತಕಾಲದ ಪರದೆಯನ್ನು ಬಿಡಿಸುವ ಪ್ರಯತ್ನ ನಡೆದಿದೆ.

ಸಮಾಜ, ಜನತೆ, ದೇಗುಲ, ವಿಧಿ ವಿಧಾನದಲ್ಲಿ ಸಂಸ್ಕೃತಿ ಸಂಪ್ರಾದಯಗಳ ಕ್ಷೇತ್ರ ಕಾರ್ಯಗಳ ನಿಟ್ಟಿನಲ್ಲಿ ಅಧ್ಯಯನ ಹಾದಿ ಸಾಗಿ ಗತವೈಭವಗಳ ಘಟನೆಗಳಲ್ಲಿ ಒಂದು ಇಣುಕು ನೋಟ ಇದಾಗಿದೆ. ಪ್ರಸ್ತುತ ಅಧ್ಯಯನದ ವಿಷಯ ವಸ್ತುವಿನ ಬೇಟೆಯನ್ನು ಸಂಗ್ರಹಿಸುವ ಸಲುವಾಗಿ ಶಿಕಾರಿಪುರ ತಾಲ್ಲೂಕಿನ ಶಾಸನಗಳು, ದೇವಾಲಯಗಳು, ಧರ್ಮಗಳ ಚೌಕಟ್ಟಿನ ಪರಿಧಿಯಲ್ಲಿ ಅಧ್ಯಯನ ನಡೆಸಿದ ಎಲ್ಲಾ ವಿದ್ವಾಂಸರ ಪ್ರಕಟಿತ ಕೃತಿಗಳನ್ನು ಗಮನದಲ್ಲಿಟುಕೊಂಡು ಇವುಗಳನ್ನು ಹೊರತುಪಡಿಸಿ ಸ್ಪಷ್ಟತೆಯ ನಿಲುವನ್ನು ಪಡೆಯುವ ನಿಟ್ಟಿನಲ್ಲಿ ಆಕಾರ ಗ್ರಂಥಗಳ ಪಟ್ಟಿಯನ್ನು ರಚಿಸಿ ಇದಕ್ಕೆ ಪೂರಕ ಮಾಹಿತಿಗಳನ್ನು ಸಂಗ್ರಹಿಸಲು ಕ್ಷೇತ್ರ ಕಾರ್ಯ ವಿಧಾನವನ್ನು ಅನುಸರಿಸಲಾಗಿದೆ.

ಹೀಗೆ ಪ್ರಕಟಿತ ವಿಷಯಗಳನ್ನು ಸಂಗ್ರಹಿಸಿದ ನಂತರ ತಾಲ್ಲೂಕಿನ ಪ್ರತಿ ಗ್ರಾಮಗಳ ಪೂರಕ ಕ್ಷೇತ್ರಕಾರ್ಯ ನಡೆಸಿದ, ನಂತರ ಅದು ಪ್ರಾಥಮಿಕ ಮಾಹಿತಿಯಾನ್ನಾಗಿಸಿಕೊಳ್ಳಲಾಗಿದೆ. ಇಲ್ಲಿ ಕಂಡು ಬರುವ ಇತಿಹಾಸ ಪೂರ್ವ ಕಾಲದಿಂದ ಹಿಡಿದು ಇದುವರೆಗೂ ದೇವಾಲಯ ಮತ್ತು ಶಾಸನಗಳ ಸ್ಥಿತಿಗತಿಗಳನ್ನು ಅಧ್ಯಯನ ನಡೆಸಿ, ಗ್ರಾಮಗಳ ಪಟ್ಟಿ, ದೇಗುಲಗಳ ಪಟ್ಟಿ, ಶಿಲ್ಪಗಳ ಪಟ್ಟಿ, ರೇಖಾಚಿತ್ರ ಇತ್ಯಾದಿ ಅಂಶಗಳನ್ನು ಕ್ರಮಬದ್ಧವಿಧಾನಗಳಲ್ಲಿ ಕ್ರೋಢೀಕರಿಸಿದೆ. ಆ ಗ್ರಾಮವಾರು ದೇವಾಲಯಗಳ ಸ್ಥಿತಿ-ಗತಿ ಜನರ ಮನಸ್ಸಿನಲ್ಲಿ ಉಳಿದ ಮೌಢ್ಯತೆ, ಪ್ರಬುದ್ಧತೆಗಳನ್ನು ಸಂಗ್ರಹಿಸಿ, ಇವುಗಳ ಪೂರಕ ರೂಪ ನೀಡುವ ಪ್ರಯತ್ನ ಈ ಪ್ರಬಂಧದಲ್ಲಿ ಮೂಡಿಸಲಾಗಿದೆ. ಹಾಗೆ ಜನರ ಮುಂದೆ ಸತ್ಯತೆಗಳ ಬಿಚ್ಚಿಡುವ ಪ್ರಾಮಾಣಿಕ ಪ್ರಯತ್ನ ಈ ಕ್ಷೇತ್ರಕಾರ್ಯಗಳಲ್ಲಿ ಕಂಡುಕೊಳ್ಳಲಾಗಿದೆ.

ದೇವಾಲಯಗಳ ಪ್ರಾದೇಶಿಕ ನೆಲೆಗಳಲ್ಲಿ ಅವುಗಳ ಪರಿಸರದಲ್ಲಿ ಕಂಡುಬರುವ ಶಾಸನಗಳು ಮತ್ತು ಶಿಲ್ಪಿಗಳನ್ನು ಗ್ರಹಿಸಿ ವ್ಯವಸ್ಥಿತವಾಗಿ ಅಧ್ಯಯನಕ್ಕೆ ಒಳಪಡಿಸಿ ಅವುಗಳ ಸ್ಥಳ, ಗ್ರಾಮ, ಕಾಲಮಾನ, ರಾಜಮನೆತನ, ಶೈಲಿ, ಭಂಗಿ, ಲಕ್ಷಣ, ದೃಷ್ಟಿಯಿಂದ ಪರಿಶೀಲಿಸಲಾಗಿದೆ. ಅವುಗಳ ಛಾಯಾ ಚಿತ್ರಗಳನ್ನು ದಾಖಲೆ ಮಾಡಲಾಗಿದೆ. ಹಾಗೆ ಕೆಲವು ಶಾಸನಗಳ ಮಾಹಿತಿ ಸಂಗ್ರಹಕ್ಕೆ ಶಾಸನ ಪಡಿಯಚ್ಚು ಮತ್ತು ಛಾಯಾ ಪ್ರತಿಯನ್ನು ತೆಗೆದು ಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸ್ವರೂಪ:

ಭಾರತದಲ್ಲಿ ಇತಿಹಾಸ ಪೂರಕ ಅಸಂಖ್ಯಾತವಾದ ಶಾಸನಗಳು ಲಭ್ಯವಿದೆ. ಅದರಲ್ಲೂ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಪ್ರತಿ ಹಳ್ಳಿಗಳಲ್ಲಿಯೂ ಶಾಸನಗಳಿವೆ. ಕಾಲ ಕಳೆದಂತೆ ಹೊಸ ರೂಪ ನೀಡಿ ಅದರ ಸುತ್ತಣ ಜನರ ಮನಸ್ಸು ಮೌಢ್ಯತೆಯ ನಂಬಿಕೆಯ ಕಥೆಯನ್ನು ಕಟ್ಟಿದೆ. ಸಂಸ್ಕೃತಿಗಳನ್ನು ರೂಪಿಸುವಲ್ಲಿ ಭೌಗೋಳಿಕ, ಧಾರ್ಮಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಮೌಲ್ಯಗಳು ಮುಖ್ಯವಾದದ್ದು. ಸಮುದ್ರ ತೀರ ಪ್ರದೇಶಗಳಲ್ಲಿ ವಾಸಿಸುವ ಜನರಿಗೂ ಸಮುದ್ರವನ್ನು ಕಂಡರಿಯದ ಜನರಿಗೂ ಜೀವನದ ವಿಧಿ- ವಿಧಾನಗಳ ವ್ಯತ್ಯಾಸಗಳಿರುತ್ತವೆ.ಇಂತಹ ಕಾರಣಗಳಿಂದಾಗಿ ಸಂಸ್ಕೃತಿಯಲ್ಲಿ ವಿಶೇಷತೆ ಕಾಣಬಹುದು.

ಶಿಕಾರಿಪುರ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ ಶಾಸನಗಳು ಬಳ್ಳಿಗಾವಿಯ ಭಾಗಗಳಲ್ಲಿ ಕಲ್ಯಾಣ ಚಾಳುಕ್ಯರ ಆಳ್ವಿಕೆ ಕಾಲದಲ್ಲಿ ಕಂಡರಿಸಿದಾಗಿವೆ. ಇದೇ ರೀತಿ ಇತರರ ಆಳ್ವಿಕೆಯ ಕಾಲದಲ್ಲೂ ಕಂಡರಿಸಿದ ಶಾಸನಗಳನ್ನು ದೇವಾಲಯ ಅವಲಂಬಿಸಿ ತನ್ನದೇ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದೆ. ಕಲೆ ಮತ್ತು ಸಂಸ್ಕೃತಿಗಳಿಂದ ದೇವಾಲಯಗಳ ವೈಭವ ಕಂಡು ಬಂದರೆ, ಕೆಲವಡೆ ಅವು ಹಾಳಾಗಿ ಅವನತಿಯ ಹಂತಗಳನ್ನು ತಲುಪಿ ಇಲ್ಲಿಯ ಜನರ ವಸತಿಗಳಾಗಿಯೇ ಕಾಣಸಿಗುತ್ತವೆ. ಹಾಗಾಗಿ ಶಾಸನ ಮತ್ತು ದೇವಾಲಯಗಳ ಮಾಹಿತಿಯನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಅವುಗಳ ವಿಶಿಷ್ಟ ಅಂಶಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳನ್ನು ವರ್ಗೀಕರಿಸಲಾಗಿದೆ.

ಮೊದಲನೆಯ ಅಧ್ಯಾಯ ಸಂಶೋಧನೆಗೆ ಸಂಬಂಧಿಸಿದಂತೆ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ, ಅಗತ್ಯತೆಗಳನ್ನು ಒಳಗೊಂಡಿದೆ. ಹಾಗೆಯೇ ಸ್ಥಳೀಯ ಮಟ್ಟದ ಅಧ್ಯಯನಗಳು. ಪ್ರಸ್ತುತ ಅಧ್ಯಯನದ ಮಹತ್ತರವಾದ ಅಂಶಗಳನ್ನು ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಭೌಗೋಳಿಕ ಅವಲೋಕನ ಮಾಡುತ್ತಾ ಶಿಕಾರಿಪುರ ಪದದ ಬಗ್ಗೆ ಚರ್ಚಿಸಲಾಗಿದೆ. ಭೌಗೋಳಿಕ ಪರಿಸರ ನೈಸರ್ಗಿಕತೆ, ಕೃಷಿ, ಕೈಗಾರಿಕೆ, ವ್ಯಾಪಾರ, ನದಿ, ಕೆರೆ, ಬಾವಿ, ನೀರಾವರಿ, ಜನಸಮುದಾಯ, ಬುಡಕಟ್ಟು ಜನರು, ಅರಣ್ಯ, ಪ್ರಾಣಿ ಸಂಪತ್ತು, ಬೆಟ್ಟಗಳ ಬಗ್ಗೆ ಮತ್ತು ತಾಲ್ಲೂಕಿನ ಸ್ಥಳನಾಮಗಳ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಶಿಕಾರಿಪುರದ ಪ್ರಾಚೀನತೆಯಿಂದ ಸ್ವಾತಂತ್ರ್ಯದವರೆಗಿನ ರಾಜಕೀಯ ಇತಿಹಾಸವನ್ನು ಹಾಗೂ ವಿವಿಧ ಅರಸರುಗಳ ಕಾಲಘಟ್ಟದಲ್ಲಿ, ಸಾಮ್ರಾಜ್ಯಗಳ ಕಾಲಘಟ್ಟವಲ್ಲಿ ಶಿಕಾರಿಪುರ ತಾಲ್ಲೂಕನ್ನು ಆಳ್ವಿಕೆಯಾದ ಬಗ್ಗೆ ಸಂಶೋಧನಾ ಪೂರಕವಾಗಿ ನೀಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಶಾಸನ ವೈಶಿಷ್ಟ್ಯತೆಯಲ್ಲಿ ಶಿಕಾರಿಪುರ ತಾಲ್ಲೂಕಿನ ಶಾಸನಗಳ ವೈಶಿಷ್ಟ್ಯ ಅಂಶಗಳನ್ನು ನೀಡಲಾಗಿದೆ. ಸಂಶೋಧನೆಗೆ ಪೂರಕವಾಗಿ ಶಾಸನದಲ್ಲಿ ಉಲ್ಲೇಖಿತ ರಾಜಕೀಯ ವ್ಯವಸ್ಥೆ, ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಪರಿಸ್ಥಿತಿ, ಶಿಕ್ಷಣ, ಧರ್ಮಗಳ ನಡೆ-ನುಡಿಗಳ ಬಗ್ಗೆ ತಿಳಿಸಲಾಗಿದೆ. ಅಧ್ಯಾಯದಲ್ಲಿ ತಾಲ್ಲೂಕಿನ ಶಾಸನಗಳ ಅಧ್ಯಯನ ಒಳಗೊಂಡಿದೆ. ದೇವಾಲಯಗಳ ಪಟ್ಟಿ, ಶಾಸನದ ಸಂಖ್ಯೆ, ಯಾವ ದೇವಾಲಯದ ಉಲ್ಲೇಖಗಳ ಮಾಹಿತಿ ಇದೆ. ಗ್ರಂಥ ಕೃತಿಗಳ ಪ್ರಕಟಗೊಂಡಿದ್ದು. ಅವುಗಳಲ್ಲಿ ಕಂಡುಬರುವ ಕಾಲಮಾನ, ಆಳ್ವಿಕೆ ಮನೆತನ, ದೇವಾಲಯ ಹೆಸರು, ಇತ್ಯಾದಿಗಳನ್ನು ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಶಿಕಾರಿಪುರದಲ್ಲಿನ ದೇವಾಲಯಗಳ ರಚನೆ, ಬೆಳವಣಿಗೆ, ಅವುಗಳ ಕಾರ್ಯ ನಿರ್ವಹಣೆ, ಆಡಳಿತ, ವಿಧಿ-ವಿಧಾನಗಳ, ಅಂಗಭೋಗ-ರಂಗಭೋಗಗಳ ಬಗ್ಗೆ ತಿಳಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಶಿಕಾರಿಪುರ ಶಾಸನೋಕ್ತ ದೇವಾಲಯಗಳನ್ನು ಅವುಗಳ ಲಕ್ಷಣಗಳ ಹಿನ್ನೆಲೆಯಲ್ಲಿ ಶೈವ ,ವೈಷ್ಣವ, ಜೈನ ಬಸಿದಿ, ಶಾಕ್ತ ದೇವಾಲಯಗಳಾಗಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

ಏಳನೆಯ ಅಧ್ಯಾಯದಲ್ಲಿ ದೇವಾಲಯ ಹಾಗೂ ಅವುಗಳ ಪರಿಸರದಲ್ಲಿ ಲಭ್ಯವಿರುವ ಶಿಲ್ಪಗಳನ್ನು ಸಂಗ್ರಹಿಸಿ ಅವುಗಳ ಗುಣ-ಲಕ್ಷಣಗಳಿಗೆ ಪೂರಕವಾಗಿ ಶೈವ, ವೈಷ್ಣವ, ಜೈನ, ಶಾಕ್ತ ಶಿಲ್ಪಗಳು ಹಾಗೂ ಪಂಚತಂತ್ರ ಶಿಲ್ಪಗಳ ರೂಪದಲ್ಲಿ ಅಧ್ಯಯನ ನಡೆಸಿದೆ ಹಾಗೂ ಶಿಲ್ಪಿಗಳ ಹೆಸರುಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಎಂಟನೆಯ ಅಧ್ಯಾಯವು ಸಮಾರೋಪವಾಗಿದ್ದು, ಈ ತಾಲ್ಲೂಕಿನಲ್ಲಿ ಕಂಡು ಬರುವ ಶಾಸನಗಳು, ದೇವಾಲಯಗಳಿಗೆ ಸಂಬಂಧಿಸಿದ ಅಧ್ಯಯನ ಕಾರ್ಯ ಬಗ್ಗೆ ಸ್ಪಷ್ಟ ನಿರ್ದೇಶನಕ್ಕಾಗಿ ದೇವಾಲಯ ಪಟ್ಟಿ, ಗ್ರಂಥಋಣ, ತಳವಿನ್ಯಾಸ, ದೇವಾಲಯಗಳ ಛಾಯಾಚಿತ್ರಗಳ ವಿವರಗಳನ್ನು ನೀಡಲಾಗಿದೆ.

ಸಮಯಕ್ಕೆ ಸಲ್ಲಿಸಿದ ಸೇವೆಗಳಲ್ಲಿ ದೇಗುಲಗಳಾಗಬಹುದು ಅಥವಾ ಶಾಸನಗಳಾಗಬಹುದು. ಅವುಗಳನ್ನು ವಿಶ್ಲೇಷಿಸಿ ಅಧ್ಯಯನ ಕೈಗೊಳ್ಳುವ ಹಂತದಲ್ಲಿ ಶಿಕಾರಿಪುರದ ಅವಶೇಷಗಳ ಹುಡುಕಾಟದಲ್ಲಿ ಸತ್ಯತೆಯನ್ನು ಮೂಡಿಸುವಲ್ಲಿ ಹಲವಾರು ಪ್ರಯತ್ನಗಳು ನಡೆಯುತ್ತಲೇ ಇವೆ. ಇಂತಹ ಪ್ರಯತ್ನಗಳಲ್ಲಿ ನಿಯತಕಾಲಿಕೆಗಳು, ಅಭಿನಂದನ ಗ್ರಂಥಗಳು, ಸ್ಮರಣ ಸಂಚಿಕೆಗಳು ಇತ್ಯಾದಿಗಳು ಈ ಪ್ರಯತ್ನದಲ್ಲಿ ತನ್ನದೆ ಆದ ಕಾಣಿಕೆಗಳನ್ನು ನೀಡಿವೆ. ಆದರೆ, ಪ್ರತ್ಯೇಕವಾಗಿ ಶಿಕಾರಿಪುರ ತಾಲ್ಲೂಕಿನಲ್ಲಿ ಕಂಡುಬರುವ ಐತಿಹಾಸಿಕ ಹೊರೆಯನ್ನು ಬಿಚ್ಚಿ ತೋರಿಸುವ ಕಾರ್ಯಗಳು ನಡೆಯಬೇಕಾಗಿದೆ.

ಚಿಕ್ಕ ಪುಟ್ಟ ಅಧ್ಯಯನಗಳಿಗೆ ಪ್ರೇರಣೆ ನೀಡುವ ಸಲುವಾಗಿ ಕೆಲವಾರು ವಿದ್ವಾಂಸರು ತಮ್ಮ ಅಂಶಗಳನ್ನು ಲೇಖನ, ಗ್ರಂಥಗಳ ಮೂಲಕ ತೋರ್ಪಡಿಸಿದ್ದಾರೆ. ದೇವಾಲಯ ಹಾಗೂ ಶಾಸನಗಳನ್ನು ಕುರಿತಂತೆ ನಡೆದ ಅಧ್ಯಯನಗಳನ್ನು ನೆನೆಯುವಾಗ ಕಂಡು ಬರುವ ವಿದ್ವಾಂಸರ ಕೃತಿಗಳಲ್ಲಿ ಎಂ.ಚಿದಾನಂದಮೂರ್ತಿಯವರ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ಹೆಚ್.ಎಸ್.ಗೋಪಾಲರಾವ್‌ರವರ "ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು-ಒಂದು ಸಾಂಸ್ಕೃತಿಕ ಅಧ್ಯಯನ", ಹೆಚ್.ಆರ್.ರಘುನಾಥ ಭಟ್‌ರವರ "ಕರ್ನಾಟಕ ಶಾಸನ ಕಲೆ", ಸ.ಸ.ಮರುಳಯ್ಯ ಸಂಪಾದಿಸಿರುವ "ಬಳ್ಳಿಗಾವೆ ಕ್ಷೇತ್ರದರ್ಶನ", ಡಾ.ಭೋಜರಾಜ ಬ ಪಾಟೀಲರವರ "ನಾಗರಖಂಡ-೭೦-ಒಂದು ಅಧ್ಯಯನ", ಬಿ.ವಿ.ವಸಂತಕುಮಾರರವರು ಸಂಪಾದಿಸಿರುವ "ಮಹಾದಾನ ಸ್ಮರಣ ಸಂಚಿಕೆ", ಆರ್.ಶೇಷಾಶಾಸ್ತ್ರಿಯವರ "ಕರ್ನಾಟಕದ ವೀರಗಲ್ಲುಗಳು", ದೇಸಾಯಿಯವರ "ಶಾಸನ ಪರಿಚಯ", ಎಂ.ಎಂ.ಅಣ್ಣಿಗೇರಿಯವರ "ಶಾಸನ ಸಾಹಿತ್ಯ ಸಂಚಯ", ಆರ್.ನರಸಿಂಹಾಚಾರ್ಯರವರ "ಶಾಸನ ಪದ್ಯಮಂಜರಿ", ಭೋಜರಾಜ ಬ ಪಾಟೀಲರವರ "ತೊಗರ್ಸಿ ಪಂಚಮಠ", ಚೆನ್ನಕ್ಕ ಎಲಿಗಾರರವರ "ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ", ಜೆ.ಎಂ.ನಾಗಯ್ಯರವರ "೬ನೇ ವಿಕ್ರಮಾಧಿತ್ಯನ ಶಾಸನಗಳ ಅಧ್ಯಯನ", ದೇವಾಲಯ ಅಧ್ಯಯನದಲ್ಲಿ ಶಿವರಾಮ ಕಾರಂತರ "ಚಾಲುಕ್ಯ ವಾಸ್ತು ಮತ್ತು ಶಿಲ್ಪ". ಅವರದೆ ಇನ್ನೊಂದು ಕೃತಿ "ಭಾರತೀಯ ಶಿಲ್ಪ", ಬಾ.ರಾ.ಗೋಪಾಲರವರ "The Chalukya's of Kalyana and Kalochurie's", ಕೆ.ಇಸ್ಮಾಯಿಲ್ ರವರ "Karnataka Temple", ಎಂ.ಎಸ್.ನಾಗರಾಜರಾವ್ ರವರ "Chalukyas of Kalyana" , ಬಿ.ವಿ.ವಸಂತಕುಮಾರರವರ "ಶಿಕಾರಿಪುರ ತಾಲ್ಲೂಕಿನ ಸಾಂಸ್ಕೃತಿಕ ಸಂಕಥನ ಅಧ್ಯಯನ" ಇತ್ಯಾದಿಗಳು.

ಕರ್ನಾಟಕದಲ್ಲಿ ಶಾಸನಗಳಾಗಲಿ, ದೇವಾಲಯಗಳಾಗಲಿ ಸುವರ್ಣ ಮಟ್ಟಕ್ಕೆ ಏರಿದ ಕಾಲ ಅಥವಾ ಘಟ್ಟವೆಂದರೆ ಕಲ್ಯಾಣ ಚಾಲುಕ್ಯರ ಮತ್ತು ಹೊಯ್ಸಳರ ಕಾಲ. ಇಂತಹ ಸ್ಥಿತಿಯಲ್ಲಿ ಶಾಸನಗಳಲ್ಲಿ ಉಲ್ಲೇಖಿತ ದೇವಾಲಯಗಳ ಅಧ್ಯಯನಕ್ಕೆ ಹಾಗೂ ಸಂಶೋಧನೆಗಳಿಗೆ ಪೂರಕ ಅಸ್ತ್ರವಾದವು. ಒಟ್ಟಾರೆ ಅಧ್ಯಯನದಲ್ಲಿ ಶಾಸನಗಳಿಗೆ ಪ್ರತ್ಯಕ್ಷದರ್ಶಿಯಾಗಿ ಸಂಶೋಧನೆಯನ್ನು ಕಟ್ಟಿಸಿಕೊಂಡು ಭಾಗಶಃ ಪರಿಪಕ್ವ ಅಧ್ಯಯನವನ್ನು ಮಾಡಿ, ಶಿಕಾರಿಪುರ ತಾಲ್ಲೂಕಿನ ಮೆರುಗನ್ನು ಚಿತ್ರಸುವ ಪ್ರಯತ್ನಗಳು ಇಲ್ಲಿ ನಡೆದಿವೆ.

ಅಧ್ಯಾಯ-೨
ಭೌಗೋಳಿಕ ಅವಲೋಕನ

೨.೧. ಪದ ನಿಷ್ಪತ್ತಿ

೨.೨. ಭೌಗೋಳಿಕ ಪರಿಸರ

- ೨.೨.೧. ನೈಸರ್ಗಿಕ ಸಂಪನ್ಮೂಗಳು
- ೨.೨.೨. ಕೃಷಿ ಭೂಮಿ, ನದಿಗಳು, ಕೆರೆಗಳು, ಬಾವಿಗಳು ಮತ್ತು ನೀರಾವರಿ
- ೨.೨.೩. ಜನ ಸಮುದಾಯ,ಬುಡಕಟ್ಟುಗಳು
- ೨.೨.೪.ಅರಣ್ಯ ಸಂಪತ್ತು, ಪ್ರಾಣಿ ಸಂಪತ್ತು, ಖನಿಜ ಸಂಪತ್ತು ಮತ್ತು ಬೆಟ್ಟಗಳು

೨.೩. ತಾಲ್ಲೂಕಿನ ಸ್ಥಳಗಳ ವಿಶ್ಲೇಷಣೆ

ಅಧ್ಯಾಯ-೨

ಭೌಗೋಳಿಕ ಅವಲೋಕನ

ಪದನಿಷ್ಪತ್ತಿ :

"ಶಿಕಾರಿಪುರ" ಎಂಬ ಪದದ ಅರ್ಥ ಹುಡುಕುವ ನಿಟ್ಟಿನಲ್ಲಿ ಸಾಗಿದಾಗ ಶಿಕಾರಿ ಎಂದರೆ ಬೇಟೆ ಎಂತಲೂ ಪುರ ಎಂದರೆ ನಗರ, ಪಟ್ಟಣ ಎಂತಲೂ ಗ್ರಹಿಸಬಹುದು. ಈ ಹೇಳಿಕೆ ನೈಜತೆಗೆ ಹತ್ತಿರ ಕೂಡಾ! ಶಿಕಾರಿಪುರ ತಾಲ್ಲೂಕಿನಲ್ಲಿ ಶಿಕಾರಿಗಾಗಿ ಬರುವ ರಾಜರ ಕಥೆಗಳೂ ಕೂಡಾ ಇದಕ್ಕೆ ಪೂರಕವಾಗಿ ನಿಂತಿವೆ.

ಅಪಾರ ವನ ಸಂಪತ್ತು ಹಾಗೂ ಮೃಗ ಸಂಪತ್ತಿನ ಈ ಭೂಭಾಗ ಶಿಕಾರಿಪುರ ಎಂದು ಕರೆಯಲ್ಪಟ್ಟಿತು. ಕುಮದ್ವತಿ ಬಲದಂಡೆಯ ಮೇಲಿರುವ ಶಿಕಾರಿಪುರ ಅತ್ಯಂತ ಪ್ರಾಚೀನ ಇತಿಹಾಸ ಪೌರಾಣಿಕ, ಜನಪದ, ಐತಿಹ್ಯಗಳ ಪರಂಪರೆಯ ಮುಸುಕು ಹೊತ್ತ ತಾಲ್ಲೂಕು. ನಾಗರಖಂಡ-೭೦ರ ರಾಜ್ಯದ ಶಾಸನ ಒಂದರಲ್ಲಿ ಶಿಕಾರಿಪುರವನ್ನು ಜೇಡುಗೂರು ಎಂದು ಕರೆಯಲಾಗಿದೆ. ಮಾಳಯ, ಮಲ್ಲಯ್ಯ ಅಥವಾ ಮಳಿಯ ಎಂಬುವನಿಂದ ಆರಂಭಗೊಂಡ ಈ ಊರು ಮೂಲದಲ್ಲಿ ಮಳಿಯನ ಹಳ್ಳಿ, ಮಾಳೇನಹಳ್ಳಿ ಎಂತಲೂ ಕರೆಯಲ್ಪಟ್ಟಿದೆ. ಅಷ್ಟೇ ಅಲ್ಲ ಕೆಳದಿಯ ಅರಸನ ಕಾಲಕ್ಕೆ ಬೆಳೆಯುತ್ತಿದ್ದ ಭತ್ತ ಮಹಾಧಾನ್ಯದಿಂದಾಗಿ ಮಹಾಧನ್ಯಪುರ ಎಂಬುದಾಗಿ ಕರೆಯಲಾಗಿದೆ. (ವಸಂತಕುಮಾರ.ಬಿ.ವಿ.(ಸಂ)೧೯೯೮, ಮಹಾದಾನ ಸ್ಮರಣ ಸಂಚಿಕೆ,ಪುಟ-೧೫) ಇಲ್ಲಿನ ಶಾಸನಗಳಲ್ಲಿ ವಿವರವಾಗಿ ಕೊಟ್ಟಿರುವ ದಾನ ದತ್ತಿಗಳು ಯಾವುದು ಕಾರಣ ಎಂಬುದು ಇನ್ನೂ ಸಂಶೋಧನೆಗೆ ಒಳಪಡಿಸಬೇಕಾಗಿದೆ. ಶಿಕಾರಿಪುರವನ್ನು ಕುಂತಳ ಪ್ರಾಂತ್ಯ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಮೈಸೂರು ಅರಸೊತ್ತಿಗೆಯ ಹೆಸರಿನಲ್ಲಿ ನವಾಬಗಿರಿ ಮಾಡಿದ ಹೈದರ್ ಮತ್ತು ಟಿಪ್ಪು ಆಡಳಿತ ಕಾಲಕ್ಕೆ ಶಿಕಾರಿಗೀಡಾದ ಇಲ್ಲಿನ ಘನ ಗಹ್ವರವಾದ ಕಾಡು ಅಪಾರ ವನ ಸಂಪತ್ತು ಹಾಗೂ ಮೃಗ ಸಂಪತ್ತು ಈ ಭೂಭಾಗ ಶಿಕಾರಿಪುರ ಎಂದು ಕರೆಯಲ್ಪಟ್ಟಿತು.

ಶಿಕಾರಿ ಎಂದರೆ ಬೇಟೆ, ಬೇಟೆಗೆ ಗುರಿಯಾಗುವ ಪ್ರಾಣಿ ಎಂಬರ್ಥಗಳು ಲಭ್ಯವಿದೆ. ಪುರ ಎಂದರೆ ಹೊನಲು, ಪ್ರವಾಹ, ಕೋಟೆ, ದುರ್ಗ, ಪಟ್ಟಣ, ನಗರ, ಒಂದು ಬಗೆಯ ಗಡ್ಡೆ, ನಾಗರ ಮುಸ್ತೆ, ಗುಗ್ಗುಳ ಎಂಬ ಅರ್ಥವಿದೆ. ಭೌಗೋಳಿಕವಾಗಿ ವಿಭಜಿಸಿದ್ದಾಗ ಶಿಕ ಅಂದರೆ ತಲೆಯ ಭಾಗವೆಂತಲೂ, ಆರಿ ಎಂದರೆ ನೀರು ಎಂತಲೂ ಕರೆಯುತ್ತಾರೆ. ಒಟ್ಟಾರೆಯಾಗಿ ಭೂಮಿಯ ಎತ್ತರಕ್ಕೆ ನೀರು ಸಿಗುವುದು ಎಂಬ ಹಿನ್ನಲೆಯಲ್ಲಿ ಶಿಕಾರಿ ಎಂಬ ಹೆಸರು ಬಂದಿರಬಹುದು ಎಂಬುದಾಗಿ ಡಾ॥

ಭೋಜರಾಜ.ಬ.ಪಾಟೇಲ್ ರವರು ತಿಳಿಸಿದ್ದಾರೆ. ಭೌಗೋಳಿಕವಾಗಿ ಈ ಭಾಗದ ಜನ ಮೂಲವಾಗಿರಬಹುದು ಎಂಬ ನಂಬಿಕೆಗೆ ಕಾರಣವಾಗಿರುತ್ತದೆ. ಶಿಕಾರಿಪುರ ಎಂಬ ಹೆಸರು ಬರುವ ಮುನ್ನ ತನ್ನದೇ ಆದ ಹೋರಾಟದಲ್ಲಿ ಹೊಸ ರೂಪಗಳನ್ನು ಕಾಲದಿಂದ ಕಾಲಕ್ಕೆ ಕಾಣುತ್ತ ಆಗಿನ ಸ್ಥಿತಿಗೆ ತಕ್ಕದಾದ ಬೆಳವಣಿಗೆಯನ್ನು ಕಾಣುತ್ತಾ ಹಲವಾರು ರಾಜ ಪರಂಪರೆಯನ್ನು ಕೈಗಳಲ್ಲಿ ಪೋಷಿಸಿ ಶಿಕಾರಿಪುರ ಎಂಬ ಹೆಸರು ಪಡೆಯುವಲ್ಲಿ ಮುನ್ನುಗ್ಗಿದೆ.

ಭೌಗೋಳಿಕ ಪರಿಸರ:

ಮಲೆನಾಡಿನ ಮದುಮಗಳು ಎಂದೇ ಪ್ರಸಿದ್ಧಿಯಾದ ಶಿವಮೊಗ್ಗವೂ ಕರ್ನಾಟಕದಲ್ಲಿ ಒಂದು ಭಾಗ. ಇಲ್ಲಿನ ನಡೆ, ನುಡಿ, ಸಿರಿ, ಸಂಸ್ಕೃತಿ, ಸಂಪತ್ತು, ಕಲೆ, ವಾಸ್ತು, ಶಿಲ್ಪ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಹೆಸರು ಗಳಿಸುವಲ್ಲಿ ಪ್ರಶಂಸನೀಯ ಜಿಲ್ಲೆ. ಇದರ ವ್ಯಾಪ್ತಿಯೊಳಗೆ ೭ ತಾಲ್ಲೂಕುಗಳಿದ್ದು, ಪ್ರತಿ ತಾಲ್ಲೂಕುಗಳೂ ತಮ್ಮದೇ ಆದ ವಿಶೇಷತೆಯನ್ನು ಕಟ್ಟಿಕೊಂಡಿದೆ. ಇವುಗಳಲ್ಲಿ ಶಿಕಾರಿಪುರವೂ ಒಂದಾಗಿದ್ದು, ತನ್ನದೇ ಆದ ಐತಿಹಾಸಿಕ ಸಂಪತ್ತನ್ನು ಇಟ್ಟುಕೊಂಡು ಸಂಶೋಧಕರನ್ನು ಕೈಬೀಸಿ ಕರೆಯುತ್ತಿದೆ.

ಶಿಕಾರಿಪುರ ಮೂಲ ಊರು, ಕುಮದ್ವತಿ ದಂಡೆಗೆ ಒತ್ತಿಕೊಂಡೆ ಇದ್ದ ದಾಖಲೆಗಳಿವೆ. ನಗರ, ನಾಗರೀಕತೆ, ಸಂಸ್ಕೃತಿಗಳ ಬೆಳವಣಿಗೆ ನದಿ ದಂಡೆಯಲ್ಲೇ ಎಂಬುದು ಐತಿಹಾಸಿಕ ಸತ್ಯ. ಇಂದು ಗಬ್ಬೂರು ಎಂದು ಕರಿಸಿಕೊಳ್ಳುವ ನೆಲೆ ಈ ಊರಿನ ಗರ್ಭಭಾಗ, ಗರ್ಭಜ ಊರು, ಗಬ್ಬೂರು. ಈ ಭಾಗಕ್ಕೆ ಗಗ್ರಿ ಎಂದು ಕರೆಯಲಾಗಿದೆ. ಪಾರಸೀ ಭಾಷೆಯಲ್ಲಿ ಗಗ್ರಿ ಎಂದರೆ ಖಜಾನೆ, ಟಂಕಶಾಲೆ ಎಂಬ ಅರ್ಥವಿದೆ. ಇದಕ್ಕೆ ಹೊಂದಿಕೊಂಡಂತೆ ಕೋಟೆಯ ಅವಶೇಷಗಳು ಇರುವ ಕಾರಣ ಮೇಲಿನ ಎಲ್ಲಾ ಅಂಶಗಳಿಗೂ ಒಂದು ಐತಿಹಾಸಿಕ ಪರಂಪರೆ ಇದೆ.

ನೈಸರ್ಗಿಕ ಸಂಪನ್ಮೂಲಗಳು:

ಶಿಕಾರಿಪುರ ತಾಲ್ಲೂಕು ಮಲೆನಾಡು ಮತ್ತು ಮೈದಾನಗಳ ಮಧ್ಯೆ ಇರುವ ಪ್ರದೇಶವಾಗಿರುವುದರಿಂದ ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ದಟ್ಟಕಾಡುಗಳು ಪೂರ್ವದ ಕಡೆ ತೆಳುವಾದ ಕುರಚಲು ಕಾಡುಗಳಿವೆ. ಇಲ್ಲಿನ ಅರಣ್ಯ ವಿಸ್ತೀರ್ಣ ೪೦.೧೭೨ ಹೆಕ್ಟೇರ್‌ಗಳು ಉಳಿದಂತೆ ವ್ಯವಸಾಯ ಯೋಗ್ಯ ಭೂಮಿ ಹಾಗೂ ಜನವಸತಿಗೆ ಅನುಕೂಲವಾಗಿದೆ. ವ್ಯಾಪಾರ, ವಾಣಿಜ್ಯಗಳಿಗೆ ಅನುಕೂಲವಾಗುವಂತೆ ಮಾರುಕಟ್ಟೆಗಳ ಸಂಪರ್ಕ ರಸ್ತೆಗಳು ಸುವ್ಯವಸ್ಥಿತ ರೀತಿಯಲ್ಲಿ ಇದೆ. ತಾಲ್ಲೂಕಿನಲ್ಲಿ ಒಟ್ಟು ೧೭೯ ಹಳ್ಳಿಗಳಿದ್ದು, ತನ್ನದೇ ವಿಶೇಷತೆಯನ್ನು ಮೈಗೂಡಿಸಿಕೊಂಡಿದೆ. ಶಿಕಾರಿಪುರವು ಮಧ್ಯಮ ಉಷ್ಣಾಂಶದಿಂದ ಕೂಡಿದ್ದು ಫೆಬ್ರವರಿಯಿಂದ ಏಪ್ರಿಲ್ ತಿಂಗಳವರೆಗೆ ಬೇಸಿಗೆ ಉಷ್ಣತೆ ಇದೆ. ಬಿಸಿಲು ಹೆಚ್ಚಿದ ಪರಿಣಾಮವಾಗಿ ಮಳೆ ಬರುವುದು ಸರ್ವೆ ಸಾಮಾನ್ಯ. ಇತ್ತ

ಪೂರ್ಣ ಮಲೆನಾಡು ಅಲ್ಲ, ಅತ್ತ ಪೂರ್ಣ ಬಯಲು ಸೀಮೆಯೂ ಅಲ್ಲ ಅಂದರೆ ಅರೆ ಮಲೆನಾಡಿನ ಭಾಗವಾಗಿದೆ. ಜೂನ್‌ನಿಂದ ಸೆಪ್ಟಂಬರ್ ತಿಂಗಳವರೆಗೆ ಮಳೆ ಬಿರುಸಾಗಿ ಬರುತ್ತದೆ. ಇದು ಶೀತೋಷ್ಣ ವಲಯ ಪ್ರದೇಶವಾಗಿದ್ದು, ಗರಿಷ್ಟ ಉಷ್ಣತೆ ೩೦ಡಿಗ್ರಿ, ಕನಿಷ್ಠ ಉಷ್ಣತೆ ೧೫ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಇಲ್ಲಿಯ ಮಳೆಯ ಪ್ರಮಾಣ ವರ್ಷಕ್ಕೆ ಸರಾಸರಿ ೮೦"ರಿಂದ೧೧೦" ಬೀಳುತ್ತದೆ.

ಈ ಭಾಗದಲ್ಲಿ ವ್ಯವಸಾಯ ಕೈಗಾರಿಕಾ ಬೆಳವಣಿಗೆಯಿಂದಾಗಿ ಆರ್ಥಿಕ ದೃಷ್ಠಿಕೋನದ ಮೇಲೆ ಪ್ರಭಾವ ಬೀರಿದೆ. ಇಂಥಹ ನೆಲೆ ಐತಿಹಾಸಿಕ ಆಕರಗಳಲ್ಲಿ ಒಂದಾಗಿ ಕಾಲಗರ್ಭದಲ್ಲಿ ಹುದುಗಿರುವ ಅಂಶಗಳನ್ನು ಹೊರತರಬೇಕಾಗಿದೆ. ಈ ನಿಟ್ಟಿನಲ್ಲಿ ಅಧ್ಯಯನ ಮಾಡುವಾಗ ಇಲ್ಲಿಯ ಪರಿಸರ ಪರಿಪಕ್ವತೆಯನ್ನು ಸೂಚಿಸುತ್ತಿದೆ. ಶಿಕಾರಿಪುರ ಭೌಗೋಳಿಕ ಪರಿಸರದ ಹಿನ್ನಲೆಯಲ್ಲಿ ಇಲ್ಲಿಯ ಅರಣ್ಯ ಭೂಮಿ, ವ್ಯವಸಾಯ ಭೂಮಿ, ವಸತಿ ಭೂಮಿ, ವ್ಯಾಪಾರ ವಾಣಿಜ್ಯ ಭೂಮಿ, ಬೀಳು ಭೂಮಿ ಎಂತೆಲ್ಲಾ ವಿಭಾಗಿಸಬಹುದು. ಎಲ್ಲವೂ ಕೂಡ ಇಲ್ಲಿನ ನೆಲೆಯ ನಾಗರಿಕತೆ ಕಟ್ಟುವಲ್ಲಿ ಸಹಕಾರಿಯಾಗಿದೆ.

ಕೃಷಿ ಭೂಮಿ, ನದಿಗಳು,ಕೆರೆಗಳು, ಬಾವಿಗಳು ಮತ್ತು ನೀರಾವರಿ:

ಶಿಕಾರಿಪುರದಲ್ಲಿ ಹಳ್ಳಿಗಳು ಸೇರಿದಂತೆ ಒಟ್ಟು ೮೮೪೨೧.೬೯ ಹೆಕ್ಟರು ಭೂಮಿ ಒಳಗೊಂಡಿದ್ದು, ಕಸಬಾ, ಹಿತ್ತಲ, ಹೊಸೂರು, ಶಿರಾಳಕೊಪ್ಪ, ಸುಣ್ಣದಕೊಪ್ಪ ಹೋಬಳಿಗಳಾಗಿ ವಿಂಗಡಿಸಬಹುದು. ಇದರಲ್ಲಿ ಸಾಗುವಳಿ ಭೂಮಿಯಲ್ಲಿ ಖುಷ್ಕಿ ಭೂಮಿ ೨೫೪೫೦.೯೬, ತರಿ ಭೂಮಿ ೧೯೮೫೪.೫೩, ಭಾಗಾಯ್ತ ಭೂಮಿ೨೪೪೩೨.೧೬, ಒಟ್ಟಾರೆ ೪೭೭೩೮.೪೨ ಹೆಕ್ಟರು ಭೂಮಿಯನ್ನು ಗುರುತಿಸಬಹುದು. ರೈತರ ಸಂಖ್ಯೆಯಲ್ಲಿ ಅತಿ ಸಣ್ಣ ೧೫೦೦೩, ಸಣ್ಣ ೧೯೪೧೫, ದೊಡ್ಡ ೬೧೪೦, ಒಟ್ಟು ೪೦೫೫೮ ಜನ ರೈತರನ್ನು ಕಾಣಬಹುದು. ಭೂಮಿಯು ಕಪ್ಪು, ಕಂದು, ಕೆಂಪು ಮಣ್ಣುಗಳನ್ನು ಹೊಂದಿದ್ದು, ಇಲ್ಲಿಯ ಭೂ ಪ್ರದೇಶ ಪರಿಸರವಿದ್ದರೆ, ಕೆಲವು ಕಡೆ ಒಂದೇ ಬೆಳೆ ತೆಗೆಯಲು ಅನುಕೂಲ ಮಾಡಿಕೊಡುತ್ತವೆ. (ಮಾಹಿತಿ:ಅರಣ್ಯ ಇಲಾಖೆ, ಶಿಕಾರಿಪುರ) ಕೃಷಿಯಲ್ಲಿ ಯಾಂತ್ರಿಕ, ಮಡಗಸ್ಕರನ ಪದ್ಧತಿ ಮೂಲಕ ಬೆಳೆಯನ್ನು ಬೆಳೆಯುತ್ತಾರೆ. ೨೩೦೦೦ ಎಕರೆ ಭತ್ತ, ೨೫೦೦೦ ಎಕರೆ ಬಗರ್ ಹುಕುಂ ಸೇರಿದಂತೆ ಮೆಕ್ಕೆ ಜೋಳ ಬೆಳೆಯುತ್ತಾರೆ. ನೀರಾವರಿ, ತುಂತೂರು, ಹನಿ ನೀರಾವರಿಗಳನ್ನು ಬಳಸುತ್ತಾರೆ. ನೀರಾವರಿಗೆ ಅಂಜನಾಪುರ, ಅಂಬ್ಲಿಗೊಳ, ಮದಗದಕೆರೆ ಹಾಗೂ ಇತರೆ ಪ್ರಾದೇಶಿಕ ಕೆರೆಗಳನ್ನು ಬಳಸುತ್ತಾರೆ. ಜೊತೆಗೆ ಮಳೆ ಹಾಗೂ ಕೊಳವೆ ಬಾವಿಗಳ ಸಹಕಾರದಿಂದ ಫಸಲುಗಳನ್ನು ಬೆಳೆಯುತ್ತಾರೆ. ಭೂಮಿಯ ಫಲವತ್ತತೆಯಲ್ಲಿ ಲವಣಾಂಶ ಸಾಮಾನ್ಯವಿದ್ದು, ರಸಸಾರ ತಟಸ್ಥ ಮತ್ತು ಸಾವಯವ ಇಂಗಾಲ ಮಧ್ಯಮ ಮತ್ತು ಕಡಿಮೆ ಹೊಂದಿದೆ. ಹಾಗೆ ರಂಜಕ ಅಧಿಕವಿದ್ದು, ಪೊಟಾಷ್ ಮಧ್ಯಮವಿದೆ.

ಗಂಧಕ ಮಿಶ್ರಿತವಿದ್ದರೆ, ಸತು, ಭೋರಾನ ಅಧಿಕವಿದೆ. ರೇಷ್ಮೆ ಸಾಗಣಿಕೆ, ಮೀನುಗಾರಿಕೆ ಕೂಡ ಕಂಡು ಬರುತ್ತದೆ. ರೇಷ್ಮೆ ಒಟ್ಟು ೮.೬ ಹೆಕ್ಟರ್ ಭೂಮಿಯಿದ್ದು, ಸುಮಾರು ೧೪ ಹಳ್ಳಿಗಳಲ್ಲಿ ೪೦-೪೫ ಜನ ಬೆಳೆಗಾರರು ಕಂಡು ಬರುತ್ತಾರೆ.

ಶಿಕಾರಿಪುರದ ಗಬ್ಬೂರಿಗೆ ಹೊಂದಿಕೊಂಡಂತೆ ಕುಮದ್ವತಿ ನದಿ ಇದ್ದು, ಇದು ತುಂಗಭದ್ರ ಉಪನದಿಗಳಲ್ಲಿ ಒಂದಾದ ಕುಮದ್ವತಿ ನದಿಯೂ ಒಂದು. ಇದು ಶಿಕಾರಿಪುರ ತಾಲ್ಲೂಕಿನ ಜನರಿಗೆ ನೀರುಣಿಸುವ ಜೀವನದಿಯಾಗಿದೆ. ಹಾಗಾಗಿ ಈ ನದಿಯನ್ನು ಶಿಕಾರಿಪುರದ ವರನದಿ ಎಂದು ಗುರುತಿಸಬಹುದು. ಹೊಸನಗರ ತಾಲ್ಲೂಕಿನ ಹುಂಚ ಎಂಬ ಜೈನ ಕ್ಷೇತ್ರದ ಅಗಸ್ತ್ಯ ಪರ್ವತದಲ್ಲಿ ಹುಟ್ಟಿ ಉತ್ತರಾಭಿಮುಖವಾಗಿ ಹೊಸನಗರ ತಾಲ್ಲೂಕಿನ ಈಶಾನ್ಯ ಭಾಗದಲ್ಲಿ ಹರಿದು ಮುಂದೆ ಶಿವಮೊಗ್ಗ ತಾಲ್ಲೂಕಿನ ಕುಂಸಿಯ ಮೂಲಕ ಶಿಕಾರಿಪುರ ತಾಲ್ಲೂಕಿನ ದಕ್ಷಿಣಕ್ಕೆ ಪ್ರವೇಶಿಸುತ್ತದೆ. ಅಂಜನಾಪುರ ಜಲಾಶಯಕ್ಕೆ ನೀರೋದಗಿಸಿ ಮುಂದೆ ಶಿಕಾರಿಪುರವನ್ನು ಬಳಿಸಿಕೊಳ್ಳತ್ತದೆ. ಈ ತಾಲ್ಲೂಕಿನಲ್ಲಿ ಕುಮದ್ವತಿ ನದಿ ಹರಿಯುವ ಉದ್ದ ಸುಮಾರು ೨೫ ಕಿ.ಮೀ.ಗಳು.

ಈ ತಾಲ್ಲೂಕಿನಲ್ಲಿ ಸುಮಾರು ೧೨೦ ಕೆರೆಗಳಿವೆ. ಪ್ರತಿ ಗ್ರಾಮ ಒಂದೊಂದು ಕೆರೆಯನ್ನು ಒಳಕೊಂಡಿದೆ. ಪ್ರಾದೇಶಿಕ ನೆಲೆಗೆ ಬೇಕಾಗುವ ಕುಡಿಯುವ ನೀರನ್ನು, ಕೃಷಿಗೆ ಬೇಕಾಗುವ ನೀರನ್ನು ಒದಗಿಸುತ್ತವೆ. ಮದಗ ಕೆರೆ, ಮುರುಗಣ್ಣನ ಕೆರೆ, ಹೊಸಕೆರೆ, ದೊಡ್ಡ ಕೆರೆ, ಕಾಳಿಕೆರೆ, ಬಾಲಕೆರೆ, ಹೂವಿನಕೆರೆ, ಮಸಿಕೆರೆ, ಹಿರೇಕೆರೆ, ಹುಲುಗಿನಕಟ್ಟೆಕೆರೆ, ಜಿಟ್ಟಿಕೆರೆ, ಕಪ್ಪೆಹೊಂಡ, ಹರಡಿಹಳ್ಳ, ಕೊಪ್ಪದಕೆರೆ, ಆನೆಕೆರೆ, ಮಾದವನಕೆರೆ, ತಾವರೆಕೆರೆ, ಊರಮುಂದಿನಕೆರೆ, ಕೋಟೆಕೆರೆ, ಭರ್ಮನ ಕೆರೆ, ಗಳಗಿನಹಳ್ಳದಕೆರೆ, ಜಿಗಳಿಕಟ್ಟೆ, ತೆಂಗಳಕೆರೆ, ಬಳಗಟ್ಟೆ, ಜೆಡೆಗಿಂಡಿಕೆರೆ, ತುರುವೆಕೆರೆ, ಕಡ್ಲೆಕಟ್ಟೆ, ಗೌಡವಕೆರೆ, ತೋಟದಕೆರೆ, ಮಾಸ್ತಿ ಕಟ್ಟೆ, ಜೌವಗೆರೆ, ಜಾಲಿಕಟ್ಟೆ, ಕೋಗಿಲೆ ಕೆರೆ, ಬೇಗೂರು ಕೆರೆ, ಚೆನ್ನಪ್ಪನ ಕೆರೆ, ಸೊಳೆ ಹೊಂಡ, ರಾಮಜೀಹೊಂಡ, ಹೆಗ್ಗೆರೆ, ಕಾನೆಹೊಂಡ, ಹುಚ್ಚರಾಯನ ಕೆರೆ, ಜಡೇಗಂಡಿ ಕೆರೆ, ವಟ್ಟಿಗೆರೆ, ಅಡಗಟ್ಟೆ ಕೆರೆ, ತುರುಕನ ಕಟ್ಟೆ, ತುಂಬೇಕೆರೆ, ಬೆಂಡೆ ಕೆರೆ, ಗೌರಿಕೆರೆ, ಕುಟ್ರಳ್ಳಿ ಕೆರೆ, ಜಂಡಕೆರೆ, ಮರದ ಕೆರೆ, ಶಾನಭೋಗನ ವಡ್ಡು ಇತ್ಯಾದಿ ಕೆರೆಗಳು ಇವೆ.

ಹಾಗೆ ಪ್ರಾಚೀನ ಕಾಲದ ಬಾವಿಗಳು ಕೂಡ ಕಂಡು ಬರುತ್ತವೆ. ಶಿಕಾರಿಪುರದಿಂದ ಮಾಸೂರು ಹೋಗುವ ಮಾರ್ಗದ ಮಧ್ಯೆ ಹೊಸನಗರ ಸಮೀಪ ರಸ್ತೆಯ ಬಲಬದಿಯಲ್ಲಿ ಬಾವಿಯೊಂದು ಇದು ಬಸವೇಶ್ವರ ದೇವಾಲಯದ ಮುಂದಿನ ಭಾಗದಲ್ಲಿ ಕಂಡುಬರುವ ಈ ಬಾವಿ ಬಸವಣ್ಣನ ಬಾವಿಯೆಂದು ಕರೆಯುತ್ತಾರೆ. ಅಂಬಾರಗೊಪ್ಪಕ್ಕೆ ಹೋಗುವ ಬಂಗಲಿ ಬೂತ್ತಪ್ಪನ ರಸ್ತೆ ಕೊನೆಯಲ್ಲಿ ಬಲಬದಿಯ ಗದ್ದೆಯೊಂದರಲ್ಲಿ ಕಂಡು ಬರುತ್ತದೆ. ಅಂಭಾರಕೊಪ್ಪದಿಂದ ಸುರುಗಿಹಳ್ಳಿ ಹೋಗುವ ರಸ್ತೆಯ ಎಡಬದಿಯಲ್ಲಿ, ಆಪಿನಕಟ್ಟೆಯ ಬಸವೇಶ್ವರ ದೇವಾಲಯ ಎಡಬದಿಯ ರಸ್ತೆಯ ಗದ್ದೆಯಲ್ಲಿ ಇನ್ನೊಂದು ಬಾವಿ

ಕಂಡುಬರುತ್ತವೆ. ಶಿಕಾರಿಪುರ ನಗರದಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಪುರಾತನ ಕಾಲದ ಬಾವಿಯಿದ್ದು, ಅದನ್ನು ಬಾದ್ರಷನ ಬಾವಿಯೆಂದು ಈವಾಗಲ್ಲೂ ಕರೆಯುತ್ತಾರೆ. ಶಿವಗಿರಿ ಕಲ್ಯಾಣ ಮಂಟಪದ ಬಳಿ ಜನಪನ ಬಾವಿಯಿದ್ದು, ಶಿಕಾರಿಪುರದಲ್ಲಿ ನಡೆಯುವ ಸಾಂಪ್ರದಾಯಿಕ ದೇವತಾ ಕಾರ್ಯಗಳಿಗೆ ಈ ಬಾವಿಯನ್ನು ಪೂಜೆಗೆ ಬಳಸುತ್ತಾರೆ. ಶಿಕಾರಿಪುರದಲ್ಲಿ ನೀರಿನ ಪ್ರಮಾಣ ಕಡಿಮೆಯಾದರೆ ಇಲ್ಲಿನ ಸಾಕಷ್ಟು ಮನೆಗಳಿಗೆ ನೀರನ್ನು ನೀಡುವ ಕುರುಗುಂಡೆ ಹೊಂಡ ಕೂಡ ಬಾವಿಯ ರೂಪದಲ್ಲಿ ಜನರಿಗೆ ವರಪ್ರಸಾದವಾಗಿದೆ. ಹೀಗೆ ತಾಲ್ಲೂಕಿನ ಹಲವಾರು ಪ್ರದೇಶಗಳಲ್ಲಿ ಬಾವಿಗಳು ಜನರ ಕುಡಿಯುವ ನೀರಿನ ಮೂಲವಾಗಿವೆ. ಶಿಕಾರಿಪುರದಿಂದ ಶಿರಾಳಕೊಪ್ಪಕ್ಕೆ ಹೋಗುವ ಎಡಬದಿಯ ರಸ್ತೆಯಲ್ಲಿ ಶಿವಾಜಿಗುಡ್ಡವೆಂದು ಕರೆಯುವ ಪ್ರದೇಶವಿದೆ. ಇದನ್ನು ಕ್ವಾಟೆ ಎಂದು ಸಂಭೋಧಿಸುತ್ತಾರೆ. ಈ ಪ್ರದೇಶ ಪ್ರಾಚೀನ ಸಂಸ್ಕೃತಿಯ ನೆಲೆಯಾಗಿದ್ದು, ಇದಕ್ಕೆ ಸುತ್ತಲೂ ನೀರಿದ್ದು. ಒಂದು ಕಡೆ ದಾರಿಯಿದೆ. ಇದು ಹಿಂದಿನ ಕಾಲದಲ್ಲಿ ಕೋಟೆಯ ಭೂ ಭಾಗವಾಗಿದ್ದು ಇತ್ತಿಚಿನ ದಿನಗಳಲ್ಲಿ ಈ ಪ್ರದೇಶವನ್ನು ಸರ್ಕಾರಿ ಕಟ್ಟಡಗಳ ಬಳಕೆಗೆ ಒಳಗಾಗಿದೆ.

ಅಂಜನಾಪುರದ ಬಳಿ ಕುಮದ್ವತಿ ಜಲಾಶಯವನ್ನು ನಿರ್ಮಿಸಲಾಗಿದೆ. ಕ್ರಿ.ಶ.೧೯೩೬ರಲ್ಲಿ ಪೂರ್ಣಗೊಂಡ ಜಲಾಶಯದಿಂದ ಸುಮಾರು ೮೦೦ ಹೆಕ್ಟೇರ್ ಭೂಮಿಗೆ ನೀರು ಸಿಗುತ್ತದೆ. ಇಲ್ಲಿಯ ಪ್ರಾಜೆಕ್ಟ್‌ನ್ನು ಅಂಜನಾಪುರ ರಿಸರ್ವ ಪ್ರಾಜೆಕ್ಟ್ ಎಂದು ಕರೆಯುತ್ತಾರೆ. ಇದರ ಎತ್ತರ ೪೯.೫೦ಮೀಟರ್. ಇದರ ಗೇಟ್ ೭೦ಇದ್ದು, ೪.೦೦*೧.೦೦ಮೀಟರ್ ಇದೆ. ಇದರ ಉಪನದಿಯಾದ ಸಾಲೂರು ಹಳ್ಳಕ್ಕೆ ಅಡ್ಡಲಾಗಿ ಅಂಬ್ಲಿಗೊಳ ಜಲಾಶಯವನ್ನು ನಿರ್ಮಿಸಲಾಗಿದೆ. ಕ್ರಿ.ಶ. ೧೯೬೪ರಲ್ಲಿ ನಿರ್ಮಾಣವಾಗಿದೆ. ೧೧೦೦ ಎಕರೆಕ್ಕೂ ಹೆಚ್ಚಿನ ಪ್ರದೇಶಕ್ಕೆ ನೀರನ್ನು ಒದಗಿಸುತ್ತದೆ. ಇದರ ಎತ್ತರ ೬೨.೧೨ ಮೀಟರ್, ಇದರ ಅಚ್ಚುಕಟ್ಟು ಪ್ರದೇಶ ೨೮೦೦ ಹೆಕ್ಟೇರುಗಳು.

ಜನ ಸಮುದಾಯ, ಬುಡಕಟ್ಟುಗಳು:

ಶಿಕಾರಿಪುರ ಪುರಸಭೆ ವ್ಯಾಪ್ತಿವಾಗಿದ್ದು, ೧೭೭ಹಳ್ಳಿಗಳು, ೪೩ ಗ್ರಾಮ ಪಂಚಾಯತಿಗಳು, ೫ ಹೋಬಳಿಗಳು, ೧ ಪಟ್ಟಣ ಪಂಚಾಯಿತಿಯನ್ನು ಹೊಂದಿದೆ. ಇಲ್ಲಿಯ ಜನಸಂಖ್ಯೆ ಒಟ್ಟು ೧೮೫೩೫೦ ಇದ್ದು, ೯೩೩೪೯ ಜನ ಪುರುಷರು, ೯೧೪೦೧ ಜನ ಮಹಿಳೆಯರು ಇದ್ದಾರೆ. ಸುಮಾರು ೪೦೮೩೪ ಕುಟುಂಬಗಳು ಕಂಡು ಬರುತ್ತವೆ. ಅಧಿಕವಾಗಿ ಪರಿಶಿಷ್ಟ ಜಾತಿ ಇದ್ದು, ವಿವಿಧ ಜಾತಿಯ ಜನರು ಕಂಡು ಬರುತ್ತಾರೆ. ಲಿಂಗಾಯಿತ, ಕುರುಬ, ಮುಸ್ಲಿಂ. ಮರಾಠ, ಬ್ರಾಹ್ಮಣ, ಬೋವಿ, ಬಂಜಾರ, ಲಂಬಾಣಿ, ನೆಯ್ಕಾರ್, ವಿಶ್ವಕರ್ಮ, ಮಡಿವಾಳ, ಕುಂಬಾರ, ಕಮ್ಮಾರ, ಒಕ್ಕಲಿಗ, ನಾಮದೇವ ಸಿಂಪಿ, ಜೈನ, ಉಪ್ಪಾರ, ಆದಿಕರ್ನಾಟಕ, ಅಕ್ಕಸಾಲಿಗ, ಗಾಣಿಗ. ಬೆಸ್ತರ ಇತ್ಯಾದಿ ಜಾತಿಯ ಜನ ಸಮುದಾಯ ಕಂಡು ಬರುತ್ತವೆ. ಮೂಲತಃ ಮಾತೃಭಾಷೆ

ಕನ್ನಡವಾಗಿದೆ. ಗೌಳಿಗ, ಮರಾಠಿ, ಹಕ್ಕಿ ಪಿಕ್ಕಿ, ಕುರಿ ಕುರುಬರು ಇತ್ಯಾದಿ ಬುಟಕಟ್ಟುಗಳಿವೆ. ಇವರುಗಳು ಸಕ್ಕರೆ ಸಿದ್ದಪ್ಪನ ಮಟ್ಟಿ, ಮರಾಠಿ ಕ್ಯಾಂಪ್, ಚಿಕ್ಕಾಪುರ, ಮದಗದ ಹಾರ್ನಳ್ಳಿ, ತುಮ್ಮಿನಕಟ್ಟೆ, ಇತ್ಯಾದಿ ಭಾಗಗಳಲ್ಲಿ ಕಂಡು ಬರುತ್ತಾರೆ.

ಅರಣ್ಯ ಸಂಪತ್ತು, ಪ್ರಾಣಿ ಸಂಪತ್ತು, ಖನಿಜ ಸಂಪತ್ತು ಮತ್ತು ಬೆಟ್ಟಗಳು :

ಶಿಕಾರಿಪುರ ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವಾಗ ಪ್ರಾದೇಶಿಕ ನೆಲೆಗಳ ಪೂರ್ವ ಹಿನ್ನೆಲೆ ಅಗತ್ಯವಿದೆ. ಹಾಗಾಗಿ ಶಿಕಾರಿಪುರದ ಗ್ರಾಮಗಳ ಬೆಳವಣಿಗೆ ಜೊತೆಗೆ ಅಲ್ಲಿಯ ಸಂಸ್ಕೃತಿ ಸಂಪ್ರದಾಯಗಳ ನೆಲೆಯಲ್ಲಿ ಅಲ್ಲಿಯ ಗ್ರಾಮದ ಹೆಸರುಗಳು ಬದಲಿ ರೂಪಗಳನ್ನು ಪಡೆಯುತ್ತಾ ಅಲ್ಲಿಯ ಮೂಲ ಬೇರುಗಳ ನಾಮಗಳನ್ನು ಇಂದಿಗೆ ಬದಲಾಗಿದೆ. ಶಿಕಾರಿಪುರದ ತಾಲ್ಲೂಕಿನದ್ಯಾಂತ ಹಲವಾರು ಬೆಟ್ಟಗಳ ಸಾಲು ಸಾಲು ಎದ್ದು ಕಾಣುತ್ತದೆ. ಅರಣ್ಯ ಭಾಗವಾದ ಈ ಪ್ರದೇಶದಲ್ಲಿ ಅಂಬ್ಲಿಗೊಳ, ಶಿಕಾರಿಪುರ, ಶಿರಾಳಕೊಪ್ಪ ಎಂಬುದಾಗಿ ಮೂರು ವಿಭಾಗವಾಗಿ ಮಾಡಿಕೊಳ್ಳಲಾಗಿದೆ. ಹಾಗೆ ಎಸ್.ಎಫ್.ಆರ್.ಎಫ್, ಎಂ.ಎಫ್, ಎಸ್,ಆರ್ ಹೀಗೆಲ್ಲಾ ಅರಣ್ಯ ಭೂಮಿಯನ್ನು ವಿಭಾಗಿಸಲಾಗಿದೆ. ಹಲವಾರು ಬೆಟ್ಟಗಳಿಂದ ಕೂಡಿದ ಈ ಭಾಗದಲ್ಲಿ ನಾಗಿ-ಭೋಗಿ ಬೆಟ್ಟ, ಬೆಳದೂರ ಮನ್ನ ಜಂಗ, ಕರಡಿಬೆಟ್ಟ, ಬಾಜಿಮಟ್ಟಿ, ಮಾಸ್ತಿ ಬೈಲು, ಗಂಗವ್ವನ ಸರ, ತೊಗರ್ಸಿ ಬೆಟ್ಟ ಇತ್ಯಾದಿಗಳಿವೆ. ತೇಗ, ಬೀಟೆ, ಶ್ರೀಗಂಧ, ಹೊನ್ನೆ, ಆಕಾಶಿ, ನೀಲಗಿರಿ, ಬಿದಿರು, ಮತ್ತಿ, ನಂದಿ, ನೀರಲೆ, ಜಂಬೆ, ತಾರೆ, ಹುನಾಲು, ತಡಸಾಲು ಇತ್ಯಾದಿ ಮರಗಿಡಗಳನ್ನು ಗುರುತಿಸಬಹುದು. ಅರಣ್ಯ ಭಾಗದಲ್ಲಿ ಜಿಂಕೆ, ನವಿಲು, ಕಾಡು ಹಂದಿಗಳಿದ್ದು, ಹುಲಿ, ಚಿರತೆ ವಿರಳವಾಗಿವೆ.

ಶಿಕಾರಿಪುರದಲ್ಲಿ ಸಾಕು ಪ್ರಾಣಿಗಳು ಲಭ್ಯವಿದೆ. ಹಸು, ಎಮ್ಮೆ, ಕುರಿ, ಆಡು, ನಾಯಿ, ಹಂದಿ, ಕೋಳಿ ಇತ್ಯಾದಿ ಪ್ರಾಣಿಯ ಗುಂಪುಗಳನ್ನು ಕಂಡು ಕೊಳ್ಳಬಹುದು. ಇವುಗಳಿಗೆ ಸಂಬಂಧಿಸಿದಂತೆ ಪಶುವೈದ್ಯಕೀಯ ವಿಭಾಗದಲ್ಲಿ ೨೬ ಸೆಂಟರಗಳಲ್ಲಿ ಆರೋಗ್ಯ ಕ್ಷೇತ್ರಗಳಿವೆ. ೩ ಆಸ್ಪತ್ರೆಗಳು, ೧೧ ಪ್ರಾಥಮಿಕ ಆಸ್ಪತ್ರೆಗಳು, ೧೨ ಪಶು ಚಿಕಿತ್ಸೆ ಕೇಂದ್ರಗಳಿವೆ. ಸುಮಾರು ೮೩೭೦ ದನಗಳು-ಎಮ್ಮೆಗಳು, ೮೦೦೦ ಕುರಿಗಳು, ೨೦೦೦೦ ಮೇಕೆ(ಆಡು)ಗಳು, ೨೫೦, ಹಂದಿಗಳು ೩೦೦೦೦ ಕೋಳಿಗಳು ಹಾಗೂ ೧೫ ಫಾರಂಗಳು ಇವೆ. ವಿಶೇಷವಾಗಿ ಹಸುಗಳಲ್ಲಿ ಹೆಚ್.ಎಫ್, ಜರಸಿ, ಅಮೃತ ಮಹಲ್, ಹಳ್ಳಿಕಾರ ಜಾತಿಗಳಿವೆ. ಎಮ್ಮೆಗಳಲ್ಲಿ ಮುರ್, ಸೃತಿ ಮತ್ತು ಲೋಕಲ್ ಜಾತಿಯಲ್ಲಿ ಕಂಡುಬರುತ್ತವೆ. ಕುರಿಗಳಲ್ಲಿ ಡೆಕ್ಕನಿ ಜಾತಿಗೆ ಸೇರಿವೆ. ತಾಲ್ಲೂಕಿನ ಕೆಲವು ಬೆಟ್ಟಗಳಲ್ಲಿ ಖನಿಜ ಸಂಪತ್ತು ಬಗ್ಗೆ ಊಹಾಪೋಹಗಳಿವೆ. ನಾಗಿ-ಭೋಗಿ ಬೆಟ್ಟಗಳ ಸಾಲಿನಲ್ಲಿ ನಿಕ್ಷೇಪಗಳ ಬಗ್ಗೆ ಅಲ್ಲಿಯ ಜನರಲ್ಲಿ ನಂಬಿಕೆ ಇದೆ.

ಮೀನುಗಾರಿಕೆಗೆ ಸಂಬಂಧಿಸಿಂತೆ ಸುಮಾರು ೧೩೫ ಕೆರೆಗಳು, ೩ ಜಲಾಶಯಗಳು ಮೀನು ಸಾಕಣಿಕೆಗೆ ಬಳಸಿಕೊಳ್ಳಲಾಗಿದೆ. ಮದಗ ಕೆರೆ, ಅಂಜನಾಪುರ, ಅಂಬ್ಲಿಗೊಳ ಒಳಗೊಂಡಂತೆ ಇಲಾಖೆಗೆ ಸಂಬಂಧಿಸಿದ ಕೆರೆಗಳಲ್ಲಿ ಮೀನುಗಾರಿಕೆ ಮಾಡಲಾಗುತ್ತಿದೆ. ಅಂಜನಾಪುರ ಜಲಾಶಯ ೧೩೫೦ ಹೆಕ್ಟರ್, ಅಂಬ್ಲಿಗೊಳ ೧೧೨೫ಹೆಕ್ಟರ್, ಮದಕೆರೆ ೩೦ ಹೆಕ್ಟರ್ ಒಳಗೊಂಡಿದೆ. ಸುಮಾರು ೨೫೦೦ ಜನರ ಮೀನುಗಾರಿಕೆಯನ್ನು ನಂಬಿಕೊಂಡ ಕುಟುಂಬಗಳಿವೆ. ಕಟ್ಲ, ಕುಹ, ಮುರಗಲ, ಗೌರಿ, ಇತ್ಯಾದಿ ಮೀನಿನ ಪ್ರಭೇದಗಳು ಕಂಡು ಬರುತ್ತವೆ.

ತಾಲ್ಲೂಕಿನ ಸ್ಥಳನಾಮಗಳ ವಿಶ್ಲೇಷಣೆ

ಶಿಕಾರಿಪುರ ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವಾಗ ಪ್ರಾದೇಶಿಕ ನೆಲೆಗಳ ಪೂರ್ವ ಹಿನ್ನೆಲೆ ಅಗತ್ಯವಿದೆ. ಹಾಗಾಗಿ ಶಿಕಾರಿಪುರದ ಗ್ರಾಮಗಳ ಬೆಳವಣಿಗೆ ಜೊತೆಗೆ ಅಲ್ಲಿಯ ಸಂಸ್ಕೃತಿ ಸಂಪ್ರದಾಯಗಳ ನೆಲೆಯಲ್ಲಿ ಅಲ್ಲಿಯ ಗ್ರಾಮದ ಹೆಸರುಗಳು ಬದಲಿ ರೂಪಗಳನ್ನು ಪಡೆಯುತ್ತಾ ಅಲ್ಲಿಯ ಮೂಲ ಬೇರುಗಳ ನಾಮಗಳನ್ನು ಇಂದಿಗೆ ಬದಲಾಗಿದೆ. ಆದರೆ ಪೂರ್ವದಲ್ಲಿ ಈ ಗ್ರಾಮಗಳಿಗೆ ತನ್ನ ನಾಮಗಳು ಬರುವಲ್ಲಿ ಅಲ್ಲಿಯ ಸ್ಥಳಗಳ ಮಹತ್ವ ಅರಿಯಲೆ ಬೇಕಾಗುತ್ತದೆ. ಕನ್ನಡದಲ್ಲಿ ಮೊದಲು ಸ್ಥಳನಾಮಗಳ ಅಧ್ಯಯನ ಶಂ.ಭಾ.ಜೋಶಿಯವರ ಕಾಲದಲ್ಲಿ ನಡೆದ ಸಂಶೋಧನೆಗಳು ಫಲಕಾರಿಯಾಗಿದೆ. ಮಾನವ ತನ್ನ ಬದುಕಿನ ಆರ್ಥಿಕ ರೂಪುರೇಷೆಯಲ್ಲಿ ಪಶುಪಾಲನೆಯನ್ನು ಕೈಗೊಂಡು ಅವುಗಳ ಪೋಷಣೆಯಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣ ಬೆಳೆಸಿದ ಹಾಗಾಗಿ ತನ್ನ ಮೂಲ ಬೇರುಗಳ ಗ್ರಾಮಗಳ ಹೆಸರುಗಳನ್ನು ಬೇರೆಡೆಗಳಲ್ಲಿ ಬಳಸುತ್ತ ಅಲ್ಲಿಯೇ ಜೀವನ ರೂಪಿಸಿಕೊಂಡ. ಅನುಕೂಲಕರ ವಾತಾವರಣಕ್ಕೆ ತಕ್ಕಂತೆ ಸ್ಥಳಗಳನ್ನು ವಿವಿಧ ರೂಪಗಳಲ್ಲಿ ಕಂಡುಕೊಂಡು ಉದಾಹರಣೆಗೆ, ನೆಲೆ, ಊರು, ಗದ್ದೆ, ಹೊಳೆ, ನದಿ, ಕಟ್ಟೆ, ಮನೆ, ಪೇಟೆ ಇತ್ಯಾದಿ.

ಹೀಗೆ ನೆಲೆ ನಿಂತ ಪ್ರಾದೇಶಿಕತೆಯಲ್ಲಿ ನೆಲೆಗೊಂಡ ಸ್ಥಳದ ಜೊತೆಗೆ ತನ್ನನು ರೂಪಿಸಿಕೊಂಡು ಆ ಪ್ರದೇಶಕ್ಕೆ ಒಂದು ಹೆಸರನ್ನು ಇಟ್ಟು ಅದು ತನ್ನ ಜೀವಿತ ಅವಧಿಯಲ್ಲಿ ಒಂದು ಕುರುಹಾಗಿ ಕಂಡು ಕೊಂಡು ಹೆಸರಾಗಿದೆ. ಶಿಕಾರಿಪುರ ತಾಲ್ಲೂಕಿನ ಸ್ಥಳನಾಮಗಳ ಬಗ್ಗೆ ಒಂದು ಅಧ್ಯಯನ ಅಗತ್ಯವಿದೆ. ಸ್ಥಳ ನಾಮಗಳನ್ನು ಕುರಿತಾಗಿ "ಹೆಸರಿನಲ್ಲೇನಿದೆ" ಕೃತಿಯಲ್ಲಿ ಆರ್.ಕೆ. ಮಣಿಪಾಲರವರು ಮನುಷ್ಯ ತನ್ನ ಅಲೆಮಾರಿ ಜೀವನದ ಪ್ರಮಾಣ ಮುಗಿಸಿ ಬದುಕಿನ ಮುಂದಿನ ಸವಾಲುಗಳಿಗೆ ಪ್ರಕೃತಿಯನ್ನು ತನ್ನ ಹಿಡಿತಕ್ಕೆ ಮಾಡಿಕೊಂಡು ಗ್ರಾಮ, ಹಳ್ಳಿ, ಊರುಗಳಾಗಿ ರೂಪಿಸಿ ತನ್ನ ಬದುಕಿನ ಭಾವನೆಗೆ ಅರ್ಥವನ್ನು ಕಂಡುಕೊಂಡ ಎಂಬ ಅಂಶವನ್ನು ಅರ್ಥೈಸಿದ್ದಾರೆ.

ಸ್ಥಳ ನಾಮಗಳು ಸಾಂಸ್ಕೃತಿಕ ಮಹತ್ವವಾಗಿದೆ. ಶಿಕಾರಿಪುರದ ತಾಲ್ಲೂಕಿನ ಸ್ಥಳ ನಾಮಗಳ ಮೂಲ ಹುಡುಕುವಾಗ ಅವುಗಳನ್ನು ವರ್ಗೀಕರಿಸಿ ಸ್ಥೂಲ ರೂಪವನ್ನು ಅಧ್ಯಯನ ಮಾಡಬಹುದು. ಎಂ. ಚಿದಾನಂದ ಮೂರ್ತಿಯವರು ಸ್ಥಳ ನಾಮಗಳಿಗೆ ಪ್ರತ್ಯೇಕ ಪದಗಳ ಗುಂಪುಗಳಾಗಿ ವಿಂಗಡಿಸಿದ್ದಾರೆ. ಇವು ಇಲ್ಲಿಯ ಪರಿಸರ, ಬೆಟ್ಟ, ನದಿ, ಕಾಡು, ಮರ, ಹೂವು, ಮನುಷ್ಯರ ಹೆಸರುಗಳಲ್ಲಿ ಕರೆದುಕೊಂಡಿದನ್ನು ವ್ಯಕ್ತಪಡಿಸುತ್ತವೆ.

ಶಿಕಾರಿಪುರದ ತಾಲ್ಲೂಕಿನ ಸ್ಥಳ ನಾಮಗಳ ವರ್ಗೀಕರಣ ಮಾಡಿ, ಪಟ್ಟಿ ಮಾಡಲಾಗಿದೆ. ಊರು ಜನ ವಾಸ ಮಾಡುವ ಸ್ಥಳ ಇದನ್ನು ನೆಲೆಯಾಗಿ ನಿಲ್ಲು, ಭದ್ರವಾಗಿ ನಿಲ್ಲಿಸು, ಗ್ರಾಮ, ಪಟ್ಟಣ, ತೊಡೆ ಎಂಬ ರೂಪದಲ್ಲಿ ಕಾಣಬಹುದು. ಅಂದರೆ ಅಲೆಮಾರಿ ಒಂದೆಡೆ ನೆಲೆ ನಿಂತು ಅಲ್ಲಿಯ ಸ್ಥಳಕ್ಕೆ ಒಪ್ಪಿ ಸಂಪ್ರದಾಯವನ್ನು ರೂಢಿಸಿಕೊಂಡ ಎಂದರ್ಥ. ತಾಲ್ಲೂಕಿನಲ್ಲಿ ಈಸೂರು, ಗಬ್ಬೂರು, ಚಿಕ್ಕಜಂಬೂರು, ಬನ್ನೂರು, ಬೇಗೂರು, ಮಳೂರು, ಸಾಲೂರು, ಹಳಿಯೂರು, ಹೊಸೂರು ಇತ್ಯಾದಿ ಗ್ರಾಮಗಳಿವೆ. ಶಾಸನಗಳಲ್ಲಿ ಕೂಡ ಉಲ್ಲೇಖವಿದೆ. ಉದಾಹರಣೆಗೆ "ಗೊಬ್ಬೂರು ಧಾರಣಿ ಸಾರ್ವಭೋಮ ಮಲ್ಲಿಕಾರ್ಜುನ ಭಟ್ಟ ಸುಕವೀಂದ್ರ" ಗೊಬ್ಬೂರಿನ ಹೆಸರು ಉಲ್ಲೇಖವಿದೆ. ಹಾಗೆ "ಗಗ್ಗನ ಹೊಸವೂರು" ಅಂದರೆ ಗೊಗ್ಗದ ಹೊಸೂರು, ಹಾಗೆ "ಅಗ್ರಹಾರ ಸಾಲಿಯೂರು ಮಹಾಜನ" ಇಲ್ಲಿ ಸಾಲೂರಿನ ಉಲ್ಲೇಖವಿದೆ.

ಕಟ್ಟೆಯನ್ನು ಗಟ್ಟೆ, ಘಟ್ಟ ಎಂಬ ರೂಪದಲ್ಲಿ ಕೂಡ ಕಾಣಬಹುದು. ಕಟ್ಟೆ ಎಂದರೆ ಜಗಲಿ, ವೇದಿಕೆ, ಒಡ್ಡು, ಸೇತುವೆ, ಕೊಳ, ಜಲಾಶಯ, ಪಾತಿಮಡಿ, ಬಿದಿರು ಇತ್ಯಾದಿ ಅರ್ಥಗಳಲ್ಲಿ ನೋಡಬಹುದು. ಇದನ್ನು ದಾರಿಹೋಕರಿಗೆ ನೀರಿನ ದಾಹ ನೀಗಿಸಲು ಮಾಡಿದ ನೀರಡಿಕೆಯ ಸ್ಥಳವಾಗಿ ಗುರುತಿಸಬಹುದು. ಶಿಕಾರಿಪುರದಲ್ಲಿ ಯರೆಕಟ್ಟೆ, ಬಗನಕಟ್ಟೆ, ಹುಲುಗಿನ ಕಟ್ಟೆ ಹೋತನಕಟ್ಟೆ, ಕೆಂಗಟ್ಟೆ, ತರಲಗಟ್ಟ, ಅಡಿಗಟ್ಟೆ, ಹುಣಸೆಕಟ್ಟೆ ಇತ್ಯಾದಿ ಗ್ರಾಮಗಳು ಲಭ್ಯವಿದೆ. ಇವುಗಳ ಹೆಸರು ಶಾಸನಗಳಲ್ಲೂ ಉಲ್ಲೇಖವಿದೆ. ಹುಲುಗಿನಕೊಂಡ ಇದರ ರೂಪಂತರವೇ ಹುಲುಗಿನ ಕಟ್ಟೆ ಹಾಗೆ ಮುಗಟ್ಟೆ ಇದು ಮುಂಗಟ್ಟೆಯ ರೂಪ.

ಕೆರೆ ಎಂದರೆ ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ, ತಟಾಕ, ಜಲಾಶಯ ಎಂಬ ಅರ್ಥವನ್ನು ನೀಡುತ್ತದೆ. ತಾಲ್ಲೂಕಿನಲ್ಲಿ ಮುಗಳಗೆರೆ, ಅರಿಸನಗೆರೆ, ಕೊರಟೆಗೆರೆ, ಯಳಗೆರೆ ಇತ್ಯಾದಿ ರೂಪದಲ್ಲಿ ಕಂಡು ಬರುತ್ತವೆ. ಶಾಸನದ ದ್ವಯ ಮುಗಳಿಕೆರೆ ಎಂಬುದಾಗಿದೆ. ಮುಚ್ಚಡಿ ಇದು ಕುಂದದ ವರ್ಗೀಕವಾಗಿದೆ. ಉದಾಹರಣೆಗೆ ಶಾಸನದಲ್ಲಿ "ಮುಚುಕುಂದಪುರ" ಎಂಬ ಉಲ್ಲೇವಿದೆ. ಅಗ್ರಾಹಾರ ಮುಚಡಿ ಮುಚ್ಚಡಿಗಳು ಕಾಣಬಹುದು. ಶಾಸನಗಳು ಹಿರಿಯ ಮುಚುಡಿ, ಮುಚುಕಂದಪುರ, ಮುಚುಂಡಿ ಎಂಬ ಉಲ್ಲೇಖವಿದೆ.

ಕಲ್ ಎಂದರೆ ಬಂಡೆ, ಕಲ್ಲು ಎಂಬರ್ಥವನ್ನು ನೀಡುತ್ತದೆ. ಶಿಲಾಯುಗದ ನಿವಾಸ ಸ್ಥಳಗಳ ನಿರ್ದೇಶನವಾಗಿದೆ. ಕಲ್ಮನೆ, ಕಲ್ಲುಕೊಪ್ಪ, ಕಲವತ್ತಿ ಇತ್ಯಾದಿ ಗ್ರಾಮಗಳಿವೆ. ಕೊಪ್ಪ ಎಂದರೆ ಚಿಕ್ಕಹಳ್ಳಿ ಕೆಲವು ಊರುಗಳ ಹೆಸರಿನ ಕೊನೆಗೆ ಸೇರಿಸುವ ಶಬ್ದವಾಗಿದೆ. ಅಮಟೆಕೊಪ್ಪ, ನಳನಿಕೊಪ್ಪ, ಬಾಳೆಕೊಪ್ಪ, ಮುಗಳಿಕೊಪ್ಪ, ಯಳನೀರು ಕೊಪ್ಪ, ಮಂಚಿಕೊಪ್ಪ, ಮಾಳಗೊಂಡನಕೊಪ್ಪ, ಶೀಲವಂತನಕೊಪ್ಪ, ಸನ್ಯಾಸಿಕೊಪ್ಪ, ಹಾರೋಗೊಪ್ಪ, ಜಕ್ಕಿನ ಕೊಪ್ಪ, ಬೆಲವಂತನಕೊಪ್ಪ, ಗೊದ್ದನ ಕೊಪ್ಪ, ಇತ್ಯಾದಿ ಗ್ರಾಮಗಳು ಕೊಪ್ಪದಿಂದ ಅಂತ್ಯವಾಗುತ್ತವೆ. ಶಾಸನದಲ್ಲಿ ಸಿರಿಗುಪ್ಪೆಗೊಳ ಉಲ್ಲೇಖವಿದೆ. ಇದು ಇಂದಿನ ಶಿರಾಳಕೊಪ್ಪಕ್ಕೆ ಪೂರಕವಾಗಿರಬಹುದು ಸಿರಿಯಾಳಕೊಪ್ಪ.

ಹಳ್ಳಿ ಚಿಕ್ಕ ಊರು, ಗ್ರಾಮ ಎಂಬರ್ಥವಿದೆ. ಹಳ್ಳಿಯ ಮೂಲಕ ರೂಪ ಪಳ್ಳಿ ಎಂದರೆ ನೆಲಸುರಿಕೆ, ತಂಗುವಿಕೆ ಎಂದು ಕರೆಯಬಹುದು. ಶಿಕಾರಿಪುರದಲ್ಲಿ ಇಟ್ಟಗಿಹಳ್ಳಿ, ಕೋಡಿಹಳ್ಳಿ, ಕಪ್ಪನಹಳ್ಳಿ, ಚಿಕ್ಕಜೋಗಿನಹಳ್ಳಿ, ಕಡೇನಂದಿಹಳ್ಳಿ, ಪುನೇದಹಳ್ಳಿ, ಮುತ್ತನಹಳ್ಳಿ, ಸುರುಗಿಹಳ್ಳಿ, ಮುದ್ದಿನಹಳ್ಳಿ, ಕೊರಲಹಳ್ಳಿ, ನಾಗಿಹಳ್ಳಿ, ಉತ್ರಾಣಿಹಳ್ಳಿ, ಅರಳಿಹಳ್ಳಿ ಬಸವನಂದಿಹಳ್ಳಿ, ಧೂಪದಹಳ್ಳಿ, ಕಾನಳ್ಳಿ, ಕಿಟ್ಟದಹಳ್ಳಿ, ಚಿಕ್ಕಜೋಗಿಹಳ್ಳಿ, ಭೈರನಹಳ್ಳಿ ಇತ್ಯಾದಿ ಗ್ರಾಮಗಳು ಕಂಡು ಬರುತ್ತವೆ.

ಪುರ ಎಂದರೆ ಕೋಟೆ, ದುರ್ಗ, ಪಟ್ಟಣ, ನಗರ, ಒಂದು ಬಗೆಯ ಗಡ್ಡೆ, ಗುಗ್ಗುಳ, ಎಂಬರ್ಥಗಳು ಲಭ್ಯವಿದೆ. ಇವು ಆ ಪ್ರದೇಶಗಳ ಹಿರಿತನ ಅಂದರೆ ಗಾತ್ರದಲ್ಲಿ ದೊಡ್ಡದನ್ನು ಸೂಚಿಸುತ್ತವೆ. ಶಿಕಾರಿಪುರದಲ್ಲಿ ಅಣ್ಣಾಪುರ, ಅಂಜನಾಪುರ, ಕವಾಸಪುರ, ಕೋಟಿಪುರ, ಚೆನ್ನಾಪುರ, ತಿಮಲಾಪುರ, ದಾಸನಪುರ, ನರಸಾಪುರ, ಭದ್ರಾಪುರ, ಮಲ್ಲಾಪುರ, ಮುಡಪಸಿದ್ದಾಪುರ, ಶಿವಪುರ, ಸದಾಶಿವಪುರ, ಸಂಕಲಾಪುರ, ಶಿಕಾರಿಪುರ ಎಂಬ ಹೆಸರುಗಳು ಕಂಡು ಬರುತ್ತವೆ. ಶಾಸನಗಳಲ್ಲಿ ಕೆಂಚಾಪುರ, ದೂಪಾಪುರ, ಬಯಿರಾಪುರ(ಭೈರಾಪುರ), ಕರಹಡಪುರ ಎಂಬ ಉಲ್ಲೇಖವಿದೆ.

ಇದಲ್ಲದೆ ತಾಳಗುಂದ, ನಿಂಬೆಗೊಂದಿ, ಬಳ್ಳಿಗಾವಿ, ಅಂಬ್ಲಿಗೊಳ, ಬಂದಳಿಕೆ, ಕಣಸೋಗೆ, ಕಾಗಿನಲಿ, ಚುರ್ಚಗುಂಡಿ, ತೊಗರ್ಸಿ ನೆಲವಾಗಿಲು, ನೇರಲಿಗೆ, ಮತ್ತಿಕೋಟೆ, ಕಣಿಯ, ಕವಲಿ, ಕೊಟ್ಟ, ಕೊಳಗಿ, ಗಾಮ, ಬಿಳಿಕಿ, ಭೋಗಿ, ಸಂಡ, ಹಿತ್ತಲ, ಹರಿಗಿ ಇತ್ಯಾದಿ ಗ್ರಾಮಗಳು ಸೇರಿದಂತೆ ಸುಮಾರು ೧೭೭ ಗ್ರಾಮಗಳು ಶಿಕಾರಿಪುರದಲ್ಲಿ ಕಂಡು ಬರುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಮನುಷ್ಯ ತನ್ನ ಬದುಕಿನ ನೆಲೆಯನ್ನು ಕಂಡುಕೊಂಡು ಅವು ಬೆಟ್ಟ ಪ್ರದೇಶ, ವ್ಯವಸಾಯ ಯೋಗ್ಯ, ನೀರಾವರಿ ಪ್ರದೇಶವನ್ನು ಜೀವನ ಶೈಲಿಯಲ್ಲಿ ಅಳವಡಿಸಿಕೊಂಡನು. ಶಿಕಾರಿಪುರ ತಾಲ್ಲೂಕಿನಲ್ಲಿ ಸಿಗುವ ಪ್ರಮುಖ ಶಾಸನಗಳನ್ನು ಅವಲೋಕಿಸಿ ಅವುಗಳಲ್ಲಿ ಗ್ರಾಮಗಳ ಉಲ್ಲೇಖಿತ ಹೆಸರುಗಳನ್ನು ಅಧ್ಯಯನ ಕೈಗೊಂಡಾಗ ಬೇಗೂರು, ಮಾಳೆನಹಳ್ಳಿ, ಹಿರೇಜಂಬೂರು, ಉಡುಗಣಿ,

ಅಡಗಂಟಿ, ಹಳಿಯೂರು, ಕನಸೋಗಿ, ಸೀರೆಹಳ್ಳಿ, ತೊಗರ್ಸಿ, ಮಾಯತಮ್ಮನ ಮುಚಡಿ, ಈಸೂರು, ಸಾಲೂರು, ಸಂಡ, ಮುಗಳಗೆರೆ, ಶಿಕಾರಿಪುರ ಹೆಸರುಗಳು ಕಾಣಸಿಗುತ್ತವೆ.

ಬೇಗೂರು :

ಬೇಗೂರಿನ ಹೆಸರು ಒಳಗೊಂಡ ಶಾಸನವೊಂದು ಶ್ರೀ ಮಲ್ಲಿಕಾರ್ಜುನ ದೇವಾಲಯಕ್ಕೆ ಸಂಬಂಧಿಸಿದಂತೆ ತಾಮ್ರ ಶಾಸನವಿದೆ. ಇದರಲ್ಲಿ ಶ್ರೀ ಗಣೇಶ ನಮಃ ಎಂಬ ಶ್ಲೋಕ ಮೂಲಕ ಗಜರಾಜನನ್ನು ನೆನೆಯುತ್ತಾ ಪ್ರಾರಂಭವಾಗುವ ಈ ಶಾಸನ ಶಿಕಾರಿಪುರ ಅಗ್ರಹಾರಗಳಲ್ಲಿ ಒಂದಾದ ಬೇಗೂರು ಹಾಗೂ ಸುತ್ತಮುತ್ತಲಿನ ಹಲವಾರು ಗ್ರಾಮಗಳ ಹೆಸರುಗಳ ಉಲ್ಲೇಖವಿದೆ. ಶಾಸನ ಪಾಠದಲ್ಲಿ "ಬನವಾಸಿ ಪನ್ನಿಚ್ಛಾಸಿರ ಸಹಸ್ರ ತಂತ್ಮಧ್ಯೇ ಬಡಗಣ ಎಡನಾಡ ಎಪ್ಪತ್ತರ ತನ್ಮಧ್ಯೆ ಶ್ರೀ ಅನಾಧ್ಯಾಗ್ರಹಾರ ಬೇಗೂರು ಗ್ರಾಮತ್" ಬನವಾಸಿ ಹನ್ನೆರೆಡು ಸಾವಿರದಲ್ಲಿ ಬರುವ ಎಡವಟ್ಟೆಪ್ಪತ್ತರಲ್ಲಿ ಅಗ್ರಹಾರವಾದ ಬೇಗೂರನ್ನು ಶಿಕಾರಿಪುರ ತಾಲ್ಲೂಕಿನಲ್ಲಿದ್ದು, ಇದನ್ನು ಗ್ರಾಮೀಣ ಜನರು ಸ್ವರ್ಣಪಲ್ಲಿಪುರ ಎಂಬ ಹೆಸರು ಹೇಳುತ್ತಾರೆ. ಇಲ್ಲಿನ ಮಲ್ಲಿಕಾರ್ಜುನ ದೇವಾಲಯ ತ್ರಿಕೂಟ ಗರ್ಭಗೃಹ ಇದ್ದು ಗ್ರಾಮದ ಪ್ರಮುಖ ದೇವಾಲಯವಾಗಿದೆ.

ಮಾಳೇನಹಳ್ಳಿ :

ಶಿಕಾರಿಪುರ ತಾಲ್ಲೂಕಿನ ಅರಿಶಿಣ ಗೆರೆ ಗ್ರಾಮದಲ್ಲಿ ದೊರೆತ ಶಾಸನದಲ್ಲಿ ಮಾಳೇನಹಳ್ಳಿ ಎಂಬ ಪ್ರದೇಶದ ಉಲ್ಲೇಖವಿದೆ. ಮಾಳೆನಹಳ್ಳಿ ಎಂದರೆ ಶಿಕಾರಿಪುರಕ್ಕೆ ಮೂಲ ಹೆಸರು ಇದಾಗಿರಬಹುದು. ಹಾಗೂ ಇದೇ ಶಾಸನದಲ್ಲಿ ಬಯಿರಾಪುರ, ಅರಿಸಿನಗೇರಿ, ಹಿತ್ತಲ ಗ್ರಾಮದ ಉಲ್ಲೇಖವಿದೆ. ಶಾಸನ ಮೊದಲು ಗಣೇಶನ ಶ್ಲೋಕದಿಂದ ಕೂಡಿದ್ದು, ಶ್ರೀಗಣಾದೀಪತೆಯೇ ನಮಃ ಎಂಬ ಪದಸಾಲುಗಳನ್ನು ಕಾಣಬಹುದು. ಇದು ಒಡೆಯರ ಕಾಲಕ್ಕೆ ಸೇರಿದ್ದು, ಕ್ರಿ.ಶ. ೧೫೧೫ರ ಕಾಲದ್ದಾಗಿದೆ. ಒಡೆಯರು ನಾಯಕತನ ಕೆಲಸದ ಪಾಲನೆಗೆ ಶ್ರೀಹರಿಹರನಾಥ ಪ್ರೀತಿಯಾಗಿ ಬಯಿರಾಪುರ ದಾನ ನೀಡಿದ ಭೂಮಿಯ ವಿಷಯ ಪ್ರಸ್ತಾಪಿಸಿದೆ.

ಹಿರೇಜಂಬೂರು :

ಹಿರೇಜಂಬೂರಿನ ಶ್ರೀ ವೀರಭದ್ರಗುಡಿಯ ಬಳಿ ಇರುವ ಶಿಲಾ ಶಾಸನದಲ್ಲಿ ಜಂಬೂರಿನ ಗ್ರಾಮದ ಉಲ್ಲೇಖವಿದೆ. ಈ ಶಾಸನ ಕ್ರಿ.ಶ. ೧೦೦೮ರ ಕಾಲದ ಅವಧಿಯಾಗಿದ್ದು, ಅಗ್ರಹಾರ ಜಂಬೂರೂ ಎಂಬ ಪದದ ಉಲ್ಲೇಖವಿದೆ. ಈ ಶಾಸನವನ್ನು ಮಠದ ಅಗ್ನಿಷ್ಠಗೆಯು ಸೂಕ್ತ ರೀತಿಯಲ್ಲಿ ನಡೆದುಕೊಂಡು ಹೋಗಲು ಅಲ್ಲಿಗೆ ಉಪ್ಪು, ಎಣ್ಣೆಗೆ ಹಣವನ್ನು ಗದ್ಯಾಣ ರೂಪದಲ್ಲಿ ಬಿಟ್ಟು ಉಲ್ಲೇಖ ಒಳಗೊಂಡಿದೆ.

ಉಡುಗಣಿ :

ಬಿಳಿಕಿ ಗ್ರಾಮ ವೀರಭದ್ರ ದೇವಾಲಯದ ಉತ್ತರ ಕಡೆ ನೆಟ್ಟಿರುವ ಶಾಸನದಲ್ಲಿ ಉಡುಗಣಿಯನ್ನು ಸೀಮೆ ಬಿಳಿಕಿ ಗ್ರಾಮ ಎಂಬ ಉಲ್ಲೇಖವಿದೆ. ಇದು ಕೆಳದಿ ಚೆನ್ನಮ್ಮಾಜಿಯ ಕಾಲ ಕ್ರಿ.ಶ. ೧೪೯೦ರ ಅವಧಿಯಲ್ಲಿ ಶಿಲಾ ಶಾಸನವಾಗಿದೆ. ಇದರಲ್ಲಿ ಉಡುಗಣಿಗೆ ಬಿಳಿಕಿ ಗ್ರಾಮದ ವೀರಭದ್ರ ದೇವರಿಗೆ ನೀಡಿದ ನಂದಾ ದೀಪ್ತಿ ಬಗ್ಗೆ ಉಲೇಖವಿದೆ.

ಅಡಗಂಟಿ :

ಶಿಕಾರಿಪುರ ತಾಲ್ಲೂಕು ಅಡಗಂಟಿ ಗ್ರಾಮದ ಬಸವನ ದೇವಾಲಯದ ಮುಂದೆ ಇರುವ ಶಾಸನದಲ್ಲಿ ಅಡಗಂಟಿಯ ಪದ ಉಲ್ಲೇಖವಿದೆ. ಈ ಶಾಸನ ಕಲ್ಯಾಣ ಚಾಳುಕ್ಯರ ಕಾಲಕ್ಕೆ ಸೇರಿದ್ದು ಕ್ರಿ.ಶ.೧೦೫೮ಲಕ್ಕೆ ಹಾಕಿಸಲಾಗಿದೆ. ಶಾಸನದಲ್ಲಿ "ಅಡಗಂಟಿಯ ಗೊಗ್ಗಿಯ ಮಗಂಮಾಚಯ್ಯ" ಎಂಬ ಉಲ್ಲೇಖವಿದೆ. ಹಾಗೆ ಇದರಲ್ಲಿ "ಬೇಡರಘಟ್ಟಿ ಮಡಿಯಂಗೆರಿಯವಿರಿದು ತುರುವಂಕೊಣ್ಡು ಪೆಣ್ಡಿರುಡೆಯನುರ್ಚ್ಚಿದರಂ" ಎಂಬ ಉಲ್ಲೇಖವಿದ್ದು. ಇದು ಹಸುಗಳ ರಕ್ಷಣೆಯ ಜವಾಬ್ದಾರಿಯನ್ನು, ಹೆಣ್ಣಿನ ರಕ್ಷಣೆಯನ್ನು ಪ್ರತಿಬಿಂಬಿಸುತ್ತದೆ.

ಹಳಿಯೂರು :

ಶಿಕಾರಿಪುರ ಮೂಲ ಊರು ಎಂಬ ವಾಡಿಕೆ ಇದೆ. ಪ್ರಸ್ತುತ ಹಳಿಯೂರು ಎಂಬ ಪ್ರದೇಶವಿದೆ. ತಾಳಗುಂದ ದೇವಾಲಯದ ಮುಂದೆ ನೆಟ್ಟ ವೀರಗಲ್ಲಿನಲ್ಲಿ ಇದರ ಉಲ್ಲೇಖವನ್ನು ಒಳಗೊಂಡಿದೆ. ಅಳವೂರನಲ್ಲಿ ಹೆಂಡತಿಯರ ಉಡುಪನ್ನು ಬಿಚ್ಚಿ ತುರುಗಳನ್ನು ಕದಿಯಲು ಬಂದವರನ್ನು ಕೊಂದ ವೀರನಿಗಾಗಿ ಹಾಕಿಸಿದ ಶಾಸನವಾಗಿದೆ. ಇದರಲ್ಲಿ ಅಳಹೊರ ಎಂಬ ಪದ ಹಳಿಯೂರು ಪದಕ್ಕೆ ಸಾಮಿಪ್ಯವಿರುವುದರಿಂದ ಈ ಹಳಿಯೂರು ಅಳಹೂರ ಆಗಿರಬಹುದು.

ಕಣಸೋಗಿ :

ಕಣಸೋಗಿ ಗ್ರಾಮದ ರಾಮೇಶ್ವರ ದೇವಾಲಯದ ಮುಂದೆ ನೆಟ್ಟ ವೀರಗಲ್ಲಿನಲ್ಲಿ "ಕಂಣಸೋಗಯರು ಕಾವಿಗೌಡನ ತಮ್ಮ ಏಚಗೌಡನು ಪಂಚಾಳರ ಬೂತನಿರುದು ತುರುವಂ" ಎಂಬ ಉಲ್ಲೇಖವಿದೆ. ಇದು ಹೊಯ್ಸಳರ ವೀರಬಲ್ಲಾಳನ ಕಾಲದಾಗಿದ್ದು ಹಸುಗಳ ರಕ್ಷಣೆಯ ವೀರಗಲ್ಲು ಇದಾಗಿದೆ.

ಸೀರಿಹಳ್ಳಿ :

ಸೀರಿಹಳ್ಳಿ ಕಲ್ಲೇಶ್ವರ ದೇವಾಲಯದ ಮುಂದೆ ಇರುವ ಮಾಸ್ತಿಕಲ್ಲಿನಲ್ಲಿ ಸಿರಹಳಿ ಎಂಬ ಪದ ಉಲ್ಲೇಖವಿದೆ. ಇದು ಗಲುಡಬೊಂಗ ಮಗ ಉಡರು ಇತನ ಸತಿ ಹರಿಮಾ ಸುರಲೋಕ ಪ್ರಾಪ್ತವಾಗಿರುವ ವಿಶೇಷತೆ ಇದು ತಿಳಿಸುತ್ತದೆ.

ತೊಗರ್ಸಿ :

ತೊಗರ್ಸಿಯ ಮಲ್ಲಿಕಾರ್ಜುನ ದೇವರ ಹೆಸರು ಉಲ್ಲೇಖಿಸುವ ಶಾಸನ ಸಿಕ್ಕಿದ್ದು, ಇದರಲ್ಲಿ ತೊಗರಸೆಯ ಮಲ್ಲಿಕಾರ್ಜುನ ದೇ(ತ್ರುಟಿತ) ಎಂಬ ವಾಕ್ಯವಿದೆ. ತೊಗರಸೆ ಪದವೆ ತೊಗರ್ಸಿಯ ರೂಪದಲ್ಲಿದೆ.

ಮಾಯತಮ್ಮನ ಮುಚಡಿ :

ಮಾಯತಮ್ಮನ ಮುಚಡಿ ಹಸುಗಳ ರಕ್ಷಣೆಯಲ್ಲಿ ವೀರನ ಬಗ್ಗೆ ಶಾಸನದಲ್ಲಿ ಉಲ್ಲೇಖಿಸುತ್ತಾ, ಪ್ರಮುಖವಾಗಿ ಹಿರಿಯ ಮುಚುಂಡಿಯ ಶ್ರೀ ರಾಮೇಶ್ವರ ದೇವರ ಉಲ್ಲೇಖವಿದೆ.

ಈಸೂರು :

ಸಾಲೂರು ಕೆರೆಯ ಮೇಲೆ ರಾಷ್ಟ್ರಕೂಟರ ನೃಪತುಂಗ ಅರಸನ ಕಾಲದ ಶಾಸನದಲ್ಲಿ ಅಗ್ರಹಾರ ಸಾಲಿಯೂರ ಎಂಬ ಉಲ್ಲೇಖವಿದೆ.

ಸಾಲೂರು :

ಕಲ್ಯಾಣ ಚಾಳುಕ್ಯರ ಕಾಲದ ಶಾಸನದಲ್ಲಿ ಅಗ್ರಹಾರ ಸಾಲಿಯೂರ ಎಂಬ ಉಲ್ಲೇಖವಿದೆ. ಇನ್ನೊಂದು ಶಾಸನದಲ್ಲಿ ಸಾಲಿವುರು ಎಂಬ ಪದ ಗ್ರಾಮದ ಹೆಸರಿಗೆ ಸಾಮಿಪ್ಯವಿದೆ.

ಸಂಡ :

ಪುನೇದಹಳ್ಳಿ ಗ್ರಾಮದ ಸಿದ್ಧರಾಮೇಶ್ವರ ದೇಗುಲದ ಮುಂದಿನ ಶಾಸನದಲ್ಲಿ ಸಾಂಡಿಲ್ಯ ಗ್ರಾಮ ಎಂಬ ಪದ ಉಲ್ಲೇಖವಿದೆ.

ಶಿಕಾರಿಪುರ :

ಬಳ್ಳಿಗಾವಿಯ ಕೇದಾರೇಶ್ವರ ದೇವಾಲಯದ ಕಲ್ಲಿನಲ್ಲಿ "ತ್ತಾಲ್ಲೂಕು ಶಿಕಾರಿಪುರ" ಎಂಬ ಉಲ್ಲೇಖವಿದೆ. ಇದು ಮೈಸೂರು ಮಹಾ ಕೃಷ್ಣರಾಜ ಭೂ ಪಾಲಕರು ಶ್ರೀ ಕೇದರೇಶ್ವರ ದೇವರ ಗುಡಿ, ತ್ರಿಪುರಾಂತಕ ದೇವರು ಹಾಗೂ ಗರುಡಗಂಭ ಬಳಿಬಂದ ವಿಷಯವಿದೆ. ಹಾಗೆ ಶೇಷಾದ್ರಿ ಐಯ್ಯರ್ ಕೂಡ ಬಂದಿರುವ ಉಲ್ಲೇಖವಿದೆ.

ಅಧ್ಯಾಯ–೩

ಶಿಕಾರಿಪುರ ತಾಲ್ಲೂಕಿನ ರಾಜಕೀಯ ಇತಿಹಾಸ

೩.೧ ಪ್ರಾಗಿತಿಹಾಸ
೩.೨ ಇತಿಹಾಸ ಕಾಲ
೩.೩ ಶಾತವಹಾನರು
೩.೪ ಕದಂಬರು ಮತ್ತು ರಾಷ್ಟ್ರಕೂಟರು
೩.೫ ಕಲ್ಯಾಣ ಚಾಳುಕ್ಯರು
೩.೬ ಕಳಚೂರ್ಯರು ಮತ್ತು ಹೊಯ್ಸಳರು
೩.೭ ವಿಜಯ ನಗರ ಅರಸರು, ಮೈಸೂರು ಒಡೆಯರು
೩.೮ ಸಶಸ್ತ್ರ ಬಂಡಾಯ ಕಾಲ ಮತ್ತು ಸ್ವಾತಂತ್ರ್ಯ ಹೋರಾಟದ ಕಾಲ

ಅಧ್ಯಾಯ-೩

ಶಿಕಾರಿಪುರ ತಾಲ್ಲೂಕಿನ ರಾಜಕೀಯ ಇತಿಹಾಸಗಳು

ಕುಮದ್ವತಿ ಬಲದಂಡೆಯ ಮೇಲಿರುವ ಶಿಕಾರಿಪುರ ಅತ್ಯಂತ ಪ್ರಾಚೀನ ಇತಿಹಾಸ, ಪೌರಾಣಿಕ, ಜನಪದ, ಐತಿಹ್ಯಗಳ ಪರಂಪರೆಯ ಮುಸುಕು ಹೊತ್ತ ತಾಲ್ಲೂಕು ಕೇಂದ್ರವಾಗಿದೆ. ಈ ಊರು ಮೂಲದಲ್ಲಿ ಮಾಳೇನಹಳ್ಳಿ ಎಂದು ಕರೆಯಲ್ಪಡುತ್ತಿತ್ತು. ಶಿಕಾರಿಪುರ ಕ್ರಿ.ಶ.೧೬೭೯ರ ಹಾಗೂ ಅರಿಷಿಣಗೆರೆಯ ಕ್ರಿ.ಶ.೧೫೧೫ರ ಶಾಸನದಲ್ಲಿ ಈ ಊರನ್ನು ಮಾಳೇನಳ್ಳಿ ಎಂದು ಗುರುತಿಸುತ್ತವೆ ಕೆಳದಿ ಅರಸರ ಶಾಸನದಲ್ಲಿ ನವಾಬಗಿರಿ ಮಾಡಿದ ಹೈದರಾಲಿ ಮತ್ತು ಟಿಪ್ಪು ಘನಗಹ್ವರವಾದ ಕಾಡು, ಅಪಾರ ವನ ಸಂಪತ್ತಿನ ಶಿಕಾರಿಗೆ ಬಲಿಯಾದ ಈ ಭೂ ಭಾಗವು ಶಿಕಾರಿಪುರ ಎಂದು ಕರೆಯಲ್ಪಟ್ಟಿತು.

ಶಿಕಾರಿಪುರ ತಾಲ್ಲೂಕು ೧೭೯ ಗ್ರಾಮಗಳನ್ನು ಹೊಂದಿದ್ದು, ಪ್ರತಿಯೊಂದು ಗ್ರಾಮವು ದೇವಾಲಯ, ಬಸದಿ, ಸ್ತಂಭ ಶಾಸನ ನಿಸಿದಿ ಕಲ್ಲು, ಮಾಸ್ತಿಕಲ್ಲು, ವೀರಗಲ್ಲು, ದಾನ ಶಾಸನಗಳು, ಗೋಸಾನ ಶಿಲ್ಪ, ಭಗ್ನ ಮೂರ್ತಿಗಳು, ಪಂಚತಂತ್ರ ಕಥೆ ಕಥಾನಕ ಶಿಲ್ಪ ಮುಂತಾದ ಒಂದೊಂದು ಐತಿಹಾಸಿಕ ಸ್ಮಾರಕಗಳಿಂದ ತುಂಬಿ ತುಳುಕುತ್ತಿದೆ. ೧೨ನೇ ಶತಮಾನದ್ದೆಂದು ಊಹಿಸಲಾದ ಇಲ್ಲಿನ ಆಂಜನೇಯ ತಾಲ್ಲೂಕಿನ ಜಾಗೃತ ದೇವಾಲಯಗಳಲೊಂದು ೧೯೪೧ರ ಮೈಸೂರು ಪುರಾತತ್ವ ಇಲಾಖೆ ವರದಿ ಪ್ರಕಾರ ಈ ದೇಗುಲವನ್ನು ನಿರ್ಮಿಸಿದವರು ವೀರಶೈವ ಹುಚ್ಚಪ್ಪಸ್ವಾಮಿ. ಇದರ ಭಾವೈಕ್ಯದ ಮೊದಲ ಹೆಜ್ಜೆಯಾಗಿದೆ. ಕಾನೂರು ಬಸವಣ್ಣ, ಬೀರಪ್ಪ, ಆನೇಕಲ್ ಭೂತಪ್ಪ, ದುರ್ಗುಮ್ಮ, ಶಿವಗಿರಿ ಶಿವಾಜಿ, ಗಿಡ್ಡಯ್ಯ, ದೊಡ್ಡಪೇಟೆ ವಿಠಲ, ಬಸವಣ್ಣ ಮಾರಿಕಾಂಬ ಹೀಗೆ ಜನರ ಮನೆ ದೈವಗಳಾಗಿ ಶಿಕಾರಿಪುರದ ಆರಾಧ್ಯ ದೈವಗಳಾಗಿವೆ.

ನಾಗರೀಕತೆ ಸಂಸ್ಕೃತಿಗಳ ಬೆಳವಣಿಗೆ ನದಿ ದಂಡೆಯಲ್ಲಿಯೇ ಎಂಬುದು ಐತಿಹಾಸಿಕ ಸತ್ಯ. ಇಂದು ಗಬ್ಬೂರು ಎಂದು ಕರೆಸಿಕೊಳ್ಳುವ ನೆಲೆ ಈ ಊರಿನ ಗರ್ಭಭಾಗ, ಗರ್ಭದ ಊರು, ಗಬ್ಬೂರು. ಈ ಭಾಗದ ಮೇಲೆ ಗಗ್ರಿ ಎಂದು ಕರೆಸಿಕೊಳ್ಳುವ ಪ್ರದೇಶವಿದೆ. ಪಾರಸೀ ಭಾಷೆಯಲ್ಲಿ ಗಗ್ರಿ ಎಂದರೆ ಖಜಾನೆ, ಟಂಕಶಾಲೆ ಎಂದು ಅರ್ಥವಿದೆ. ಇದಕ್ಕೆ ಹೊಂದಿಕೊಂಡಂತೆ ಕೋಟೆ ಅವಶೇಷಗಳು ಕಂಡು ಬರುತ್ತವೆ. ಅಧ್ಯಯನ ವಿಷಯ ವ್ಯಾಪ್ತಿಯಲ್ಲಿ ಪ್ರಾಚೀನತೆ ಗುರುತಿಸುವ ರೂಪುರೇಷೆಯಲ್ಲಿ ಮಹಾಪುರಾಣ, ದಂತಕಥೆಗಳು, ಕಾವ್ಯಗಳು, ಸಾಹಿತ್ಯ, ಆಧಾರದ ಹಿನ್ನೆಲೆಯಲ್ಲಿ ಬಿಡಿಸಲಾಗಿದೆ. ಶಿಕಾರಿಪುರ ರಾಮಾಯಣದ ತುಣುಕುಗಳನ್ನು ಅನುಭವಿಸಿದೆ. ಈ ನಿಟ್ಟಿನಲ್ಲಿ ಐತಿಹ್ಯವಿರುವ ಸಿರಿನಾಡಾಗಿ ಶ್ರೀರಾಮಚಂದ್ರನು ೧೪ ವರ್ಷ ವನವಾಸದಲ್ಲಿರುವಾಗ ದಂಡಕಾರಣ್ಯದ ಭಾಗಗಳಲ್ಲಿ ಸಂಚರಿಸುತ್ತಿರುವಾಗ ನೆರೆಯ

ಸೊರಬ ತಾಲ್ಲೂಕಿನ ಕುಪ್ಪೆಗೆ ಹೋಗುವ ಮಾರ್ಗದಲ್ಲಿ ತಂಗಿದ್ದನೆಂದು, ಶಿಕಾರಿಪುರ ಮತ್ತು ಶಿವಳ್ಳಿ ಕ್ಷೇತ್ರಗಳು ಪಾವನ ನೆಲೆಗಳೆಂದು ಶಿವನಪಾದಗಳಿಂದ ಸ್ಪರ್ಶವಾಗಿವೆ ಎಂಬುದು ಪ್ರತೀತ. ಈ ಕಥೆಗೆ ಪೂರಕವಾಗಿ ಹೇಳುವುದಾದರೆ ದಾನ ಕೊಡದೆ ಕೈಲಾಸ ಕಾಣಬೇಕೆಂದು ಹಟ ಹಿಡಿದ ಶಿವಭಕ್ತ ಶರಣನೊಬ್ಬನ ದೃಢವಾದ ನಿರ್ಧಾರಕ್ಕೆ ಮೆಚ್ಚಿ ತಾನು ಬಂದ ಕುರುಹುಗಾಗಿ ಶಿವನು ತನ್ನ ಪಾದಗಳನ್ನು ಬಿಟ್ಟು ಹೋದ ಕ್ಷೇತ್ರವೇ ಶಿವನ ಪಾದ ಎಂದು ನಾಮಕರಣವಾಗಿದೆ. (ವಸಂತಕುಮಾರ.ಬಿ.ವಿ.(ಸಂ)೧೯೯೮,ಮಹಾದಾನ ಸ್ಮರಣ ಸಂಚಿಕೆ, ಪು೧೮) ಮಾರಯ್ಯ-ಮಾರವ್ವೆಯವರು ದುಡಿಮೆಯೇ ದೇವರು ಎಂದು ಬಾವಿಸಿ ಕೃಷಿ ಕಾರ್ಯದಲ್ಲಿ ನಿರತರಾಗಿದ್ದರು. ಇವರು ಭಿಕ್ಷಾಟನೆಯನ್ನು ಪ್ರಬಲವಾಗಿ ವಿರೋಧಿಸುತ್ತಾ ಯಾರಿಗೂ ಒಂದು ಬಿಡಿಕಾಸಾಗಲಿ, ಹಿಡಿಧಾನ್ಯವನ್ನಾಗಲಿ ದಾನಮಾಡದೇ "ಇಕ್ಕದ ಮಾರಯ್ಯ ಕೊಡದ ಮಾರವ್ವೆ" ಎಂಬ ಅನ್ವರ್ಥಕ ನಾಮದಿಂದ ಪ್ರಖ್ಯಾತರಾಗಿದ್ದರು.

ಮಹಾಭಾರತದಲ್ಲಿ ಕಂಡುಬರುವ ರಾಕ್ಷಸರಲ್ಲಿ ಬಲಿಷ್ಠನಾದ ಬಕಾಸುರನ ತಮ್ಮನಾದ ಕಿರ್ಮಿರನು ಈ ತಾಲ್ಲೂಕಿನ ದೋಣನಗುಡ್ಡೆಯಲ್ಲಿ ಇದ್ದನೆಂದು ಕಿರ್ಮಿರನನ್ನು ಇವರು ಕೊಂದರೆಂದು ಆದ್ದರಿಂದ ಈ ಕ್ಷೇತ್ರಕ್ಕೆ ದೋಣನಗುಡ್ಡೆಯೆಂದು ಹೆಸರಾಯಿತೆಂದು ಒಂದು ದಂತಕಥೆಯಿದೆ. ವಿರಾಟನಗರವಾದ ಹಾನಗಲ್ ಪ್ರಾಂತ್ಯಕ್ಕೆ ದೇಗುಲದ ಅವಶೇಷವಿದ್ದು ಇಲ್ಲಿಯ ಶಾಸನದಲ್ಲಿಯೂ ಉಲ್ಲೇಖವಿದೆ. ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪ ಪ್ರಾಂತ್ಯವು ಭಕ್ತ ಸಿರಿಯಾಳನ ದಾನವಂತಿಕೆಯ ಮಹತ್ವ ಪಡೆದ ಈ ಸ್ಥಳ ಐತಿಹಾಸಿಕ ಹಿನ್ನಲೆಯ ವೀರರ ನೆಲೆಯಾಗಿತ್ತು. ಜನಪದ ಲೋಕಕ್ಕೆ ಬೆಲೆ ಕಟ್ಟಿದ ಕಥೆಯ ಮದಗ ಶಿಕಾರಿಪುರದಿಂದ ಸುಮಾರು ೧೧ ಕಿ.ಮೀ. ದೂರದಲ್ಲಿರುವ ಪುಟ್ಟಗ್ರಾಮ. ಮದಗದ ಕೆಂಚಮ್ಮಳ ಜನಹಿತಕ್ಕಾಗಿ ಕೆರೆಗೆಹಾರ ಮಾಡಿಕೊಂಡು ಕೆರೆಯಲ್ಲಿ ನೀರು ನಿಲ್ಲುವಂತೆ ಮಾಡಿದ ಇಲ್ಲಿನ ಜನಪದ ಕಥೆ ಅದ್ಭುತವಾಗಿದೆ. ಮದಗದ ಊರ ಪ್ರಮುಖನಾದ ಮಲ್ಲನಗೌಡನು ಮದಗದ ಜನತೆಗೆ ಶಾಶ್ವತವಾದ ನೀರು ಕೊಡಲೆಂದು ಊರದೇವಿಯಾದ ಗಂಗಮ್ಮಳ ಇಚ್ಛೆಯಂತೆ ತನ್ನ ಮಗ ಗೂಳೇಸನ ಹೆಂಡತಿಯು ಮತ್ತು ಮುದ್ದು ಸೊಸೆಯಾದ ಕೆಂಚಮ್ಮಳನ್ನು ಕೆರೆಗೆ ಬಲಿಕೊಡುತ್ತಾನೆ. ಇದು ಮಲೆನಾಡಿನ ಪ್ರಸಿದ್ಧ ಜನಪದ ಕಥೆಯಾಗಿದೆ. ಈ ಕೆರೆಯು ಇಂದಿಗೂ ಇದ್ದು ಕುಮದ್ವತಿ ನದಿಯ ನೀರು ಹರಿದು ಇದಕ್ಕೆ ಸೇರುತ್ತದೆ.

ಪ್ರಾಗಿತಿಹಾಸ :

ಇತಿಹಾಸವನ್ನು ಆಕರಗಳ ದೃಷ್ಠಿಕೋನದಲ್ಲಿ ಪೂರ್ವ ಇತಿಹಾಸ ಮತ್ತು ಇತಿಹಾಸ ಆರಂಭಕಾಲ ಎಂಬುದಾಗಿ ವಿಂಗಡಿಸಲಾಗಿದೆ. ಶಿಕಾರಿಪುರದ ಹಳ್ಳಿಗಳು ಪೂರ್ವ ಇತಿಹಾಸ ಹುಡುಕುವ ಪ್ರಯತ್ನಕ್ಕೆ ಒಳಗಾಗದೆ ಇರುವುದರಿಂದ ಇತಿಹಾಸದ ಆರಂಭದ ಕಾಲಕ್ಕೆ ಸೀಮಿತವಾದ ಆಕರಗಳನ್ನು ಪಡೆಯುವಲ್ಲಿ ಫಲವತ್ತಾಗಿದೆ. ಈ ಹಿನ್ನಲೆಯಲ್ಲಿ ಪುರಾತತ್ವ ನೆಲೆಗಳು ಗುರುತಿಸುವಾಗ ಕಂಡುಬರುವ ಹಳ್ಳಿಗಳೆಂದರೆ ಈಸೂರು, ಕರಿಗೆ, ಕೋಡಿಹಳ್ಳಿ, ತಾಳಗುಂದ, ಬಳ್ಳಿಗಾವಿ, ಮಾಳೂರು, ಮಳವಳ್ಳಿ, ತೊಗರ್ಸಿ, ಉಡುಗಣಿ,

ಪುನೇದಹಳ್ಳಿ, ನೇರಲಗಿ, ಕುಪ್ಪಟೂರು, ಜಂಬೂರು, ಕರ್ನೆಲ್ಲಿ ಇತ್ಯಾದಿ. ಈಸೂರು ಗ್ರಾಮದಲ್ಲಿ ಇತಿಹಾಸ ಆರಂಭದ ಕಾಲದಲ್ಲಿ ಬಳಕೆಯಾದ ಇಟ್ಟಿಗೆ ಕಟ್ಟಡಗಳು ದೊರತಿವೆ. ಕರಿಗೆಯಲ್ಲಿ ವೀರಗಲ್ಲುಗಳು ಹಾಗೂ ಇತಿಹಾಸ ಆರಂಭ ಕಾಲದ ಮಡಿಕೆಗಳು ಸಿಕ್ಕಿವೆ. ಕೋಡಿಹಳ್ಳಿಯಲ್ಲಿ ವೀರಗಲ್ಲುಗಳು ಶಾಸನಗಳು ದೊರೆತಿವೆ. ಈ ನೆಲೆ ಶಾತವಾಹನ ಕಾಲದಲ್ಲಿದ್ದು, ಮಧ್ಯ ಕಾಲೀನ ಇತಿಹಾಸದ ಶಿಲ್ಪಕಲೆ ದೊರೆಯುತ್ತದೆ. (ಇಂ.ಆ.ರಿ,೧೯೮೫-೮೬,ಪುಟ-೪೭) ತಾಳಗುಂದದಲ್ಲಿ ಇತಿಹಾಸ ಪೂರ್ವಕಾಲಕ್ಕೆ ಸಂಬಂಧಿಸಿದ ಬಗ್ಗೆ ಪುರಾತತ್ವ ಆಕರಗಳು ದೊರೆತಿವೆ. ಬಳ್ಳಿಗಾವಿ ಗ್ರಾಮವು ಆಕರಗಳ ನೆಲೆಯಾಗಿದ್ದು, ಈ ನೆಲೆಯನ್ನು ಧಾರವಾಡದ ಕರ್ನಾಟಕದ ವಿಶ್ವವಿದ್ಯಾನಿಲಯದ ಶಾಸನ ಶಾಸ್ತ್ರ ಮತ್ತು ಪ್ರಾಚೀನ ಭಾರತೀಯ ಇತಿಹಾಸ ವಿಭಾಗಳಿಂದ ಡಾ.ಎ.ಸುಂದರ್ ರವರ ನೇತೃತ್ವದಲ್ಲಿ ಉತ್ಖನನ ನಡೆಸಿ, ಇತಿಹಾಸ ಆರಂಭ ಕಾಲ ಎಂದು ಗುರುತಿಸಲಾಗಿದೆ.

ಮಳೂರಿನ ಭಾಗದ ಅಧ್ಯಯನವನ್ನು ಸಿ.ಎಸ್.ಶೇಷಾದ್ರಿಯ ಅಡಿಯಲ್ಲಿ ಡಿ.ನರಸಿಂಹಯ್ಯರವರು ಉತ್ಖನನ ಮಾಡಿದಾಗ ಈ ಭಾಗವನ್ನು ಶಾತವಾಹನ ನೆಲೆ ಹಾಗೂ ಮಧ್ಯಕಾಲೀನ ಶಿಲ್ಪಕಲೆಯನ್ನು ಗುರುತಿಸಲಾಗಿದೆ. (ಇಂ.ಆ.ರಿ,೧೯೮೫-೮೬,ಪುಟ ೪೭) ಮಳವಳ್ಳಿ ಕೂಡ ಇತಿಹಾಸ ಆರಂಭದ ನೆಲೆಯಾಗಿದ್ದು, ಆಕರಗಳು ಸಿಕ್ಕಿವೆ. ನೇರಲಗಿ ನೆಲೆಯ ಭಾಗದಲ್ಲಿ ದೇವಾಲಯಗಳು ಶಿಲ್ಪಕಲೆಗಳು ಗುರುತಿಸಿ ಅಧ್ಯಯನ ಕೈಗೊಳ್ಳುವಾಗ ಕದಂಬ ವಂಶಾವಳಿಯ ಆಳ್ವಿಕೆ ಕಾಲದ ಶಿವ ದೇವಾಲಯ ಹಾಗೂ ಶಿವಲಿಂಗಗಳು ದೊರೆತಿವೆ. ಗಣೇಶನ ವಿಗ್ರಹವಿದ್ದು, ಇದು ಎರಡು ಕೈಗಳನ್ನು ಹೊಂದಿದೆ. ಕುಪ್ಪಗದ್ದೆಯ ಭಾಗದಲ್ಲಿ ಕ್ರಿ.ಶ ೪-೫ನೇ ಶಾತಮಾನಕ್ಕೆ ಸೇರ ಬರುವ ಶಿಲ್ಪಗಳು ಸಿಕ್ಕಿವೆ. ಇವು ಮಹಿಷ ಮರ್ದಿನಿ ಶಿಲ್ಪಕಲೆಗೆ ಹೋಲುವ ರೀತಿಯಲ್ಲಿ ಇದ್ದು, ಕಾಡು ಕೋಣ ತಲೆ ಇಲ್ಲದ ರೀತಿಯಲ್ಲಿ ತನ್ನ ದೇಹ ನಾಲಿಗೆ ಮಾತ್ರ ಹೊಂದಿದೆ. ಜಂಬೂರಿನಲ್ಲಿ ನಾಗರಿ ಹಾಗೂ ಸಂಸ್ಕೃತ ಭಾಷೆಯ ಶಾಸನ ಗುರುತಿಸಲಾಗಿದೆ. ಪುನೇದಹಳ್ಳಿಯಲ್ಲಿ ವೀರಗಲ್ಲುಗಳು ಹಾಗೂ ಮಧ್ಯಕಾಲೀನ ಶಿಲ್ಪಗಳು ದೊರೆತಿವೆ. ತೊಗರ್ಸಿಯ ಭಾಗದಲ್ಲಿ ಹೊಯ್ಸಳರ ಕಾಲದ ದೇವಾಲಯ ಹಾಗೂ ನಾಯಕರ ಕಾಲದ ದೇವಾಲಯಗಳು ಹಾಗೂ ಶಾಸನಗಳು ಸಿಕ್ಕಿವೆ. ಉಡುಗಣಿ ಭಾಗದಲ್ಲಿ ಶಿಥಿಲವಾದ ಶಿಲ್ಪಗಳು ಹಾಗೂ ವೀರಗಲ್ಲುಗಳು, ಮಧ್ಯಕಾಲೀನ ಶಿಲ್ಪಗಳು ದೊರೆತಿವೆ.

ಇತಿಹಾಸ ಕಾಲ:

ಇತಿಹಾಸ ಆರಂಭ ಕಾಲದ ರೂಪರೇಷಗಳನ್ನು ಗುರುತಿಸುವಾಗ ಮೌರ್ಯರ ಕಾಲದಿಂದ ಸ್ವಾತಂತ್ರ್ಯ ಪೂರ್ವಯುಗದವರೆಗೆ ಹಲವಾರು ಅಂಶಗಳು ಮೂಡಿಬರುತ್ತವೆ. ಈ ನಿಟ್ಟಿನಲ್ಲಿ ಶಿಕಾರಿಪುರದ ಹಲವಾರು ಹಳ್ಳಿಗಳಲ್ಲಿ ಐತಿಹಾಸಿಕ ಆಕರಗಳ ಹಿನ್ನೆಲೆಯಲ್ಲಿ ಗುರುತಿಸಬಹುದು. ಶಿಕಾರಿಪುರ ಮೂಲ ಊರು ಕುಮದ್ವತಿ ದಂಡೆಗೆ ಹೊಂದಿಕೊಂಡಿದೆ. ನಗರ, ನಾಗರೀಕತೆ, ಸಂಸ್ಕೃತಿಗಳ ಬೆಳವಣಿಗೆ ನದಿದಂಡೆಯಲ್ಲೇ ಎಂಬುದು ಐತಿಹಾಸಿಕ ಸತ್ಯ. ಈ ಕೋಟೆಯ ಆಳ್ವಿಕೆಯ ಹಿನ್ನಲೆಯಲ್ಲಿ ಪಾಳೇಗಾರನಾಗಿದ್ದ ಮಾಳೆಯನು ಗತಿಸಿದ ನಂತರ ಕ್ರಿ.ಶ. ೧೪೪೪ ರಲ್ಲಿ ಕರೀಂಗೌಡ ಪಾಳೇಗಾರನಾದ. ಇವನ ನಂತರ ಇವನ ಮಗನಾದ ನಾಗಗೌಡ ದಕ್ಷ ಪಾಳೇಗಾರನಾಗಿದ್ದು, ಈ ಪ್ರಾಂತ್ಯವನ್ನು ರಕ್ಷಿಸಲೆಂದು ಶಿಕಾರಿಪುರದ ಹೊರಭಾಗದ ಶಿರಾಳಕೊಪ್ಪ ಮಾರ್ಗದ ತಿರುವಿನ ಎಡಬದಿಯಲ್ಲಿ

ಬಲವಾದ ಮಣ್ಣಿನ ಕೋಟೆಯನ್ನು ಕಟ್ಟಿದ. ವಿಶಾಲವಾದ ಈ ಕೋಟೆ ೪ ಬುರುಜುಗಳನ್ನು ಹೊಂದಿದ್ದು, ಇದರ ಕೆಲವು ಕುರುಹುಗಳು ಮಾತ್ರ ಉಳಿದವೆ. ಕೋಟೆಯೊಳಗೆ ಶ್ರೀ ಆಂಜನೇಯ ಸ್ವಾಮಿಯ ವಿಗ್ರಹವಿದ್ದು, ಇದು ಕೋಟೆಯ ಹೊರಗೆ ಆಂಜನೇಯ ಸ್ವಾಮಿ ದೇವಸ್ಥಾನ ಎಂಬ ಹೆಸರು ಈಗಲೂ ಇದೆ. ಇಲ್ಲಿಯ ವಿಪರೀತ ಮಳೆಯಿಂದ ಮಣ್ಣಿನ ಕೋಟೆ ಅವನತಿ ಹೊಂದಿದದು. ಇನ್ನೂ ಸ್ಪಷ್ಟ ರೀತಿಯಲ್ಲಿ ಅಧ್ಯಯನ ಆಗಬೇಕಾಗಿದೆ.

ಶಿಕಾರಿಪುರದ ಕೆಲವು ನೆಲಗಳಲ್ಲಿ ನಂದರ ಮತ್ತು ಮೌರ್ಯರ ಕುರುಹುಗಳು ಕಂಡು ಬರುತ್ತವೆ. ಇತಿಹಾಸದ ಆರಂಭದ ಕೆಲವು ನೆಲೆಗಳಲ್ಲಿ ಇಟ್ಟಿಗೆಗಳ ಅವಶೇಷಗಳು ದೊರಕ್ಕಿದ್ದು, ಇವುಗಳು ಕ್ರಿ.ಪೂ.೩ನೇ ಶತಮಾನ ಎಂದು ಗುರುತಿಸಬಹುದು. ಪ್ರಮುಖವಾಗಿ ತಾಳಗುಂದ ಮತ್ತು ಮಳವಳ್ಳಿಯಲ್ಲಿ ಈ ಅಂಶಗಳನ್ನು ಕಾಣಬಹುದು. ಮಳವಳ್ಳಿಯಲ್ಲಿ ಪ್ರಾಕೃತ ಶಿಲಾಸ್ಥಂಭ ಶಾಸನಗಳು ದೊರೆತಿವೆ. ಇದು ಶಿವಮೊಗ್ಗ ಜಿಲ್ಲೆಯಲ್ಲೆ ದೊರಕಿರುವ ಹಳೆಯ ಸ್ಮಾರಕವಾಗಿವೆ. ಈ ಸ್ಮಾರಕವು ಹಲವಾರು ರಾಜಮನೆತನಗಳ ಮೇಲೆ ಬೆಳಕು ಚೆಲ್ಲುತ್ತದೆ. ಮಳವಳ್ಳಿ ರಾಜರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಗುರುತಿಸಲು ಸಾಧ್ಯವಾಗಿದೆ. ಇಲ್ಲಿನ ಸ್ಮಾರಕಗಳನ್ನು ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಿಸಲು ಪ್ರಯತ್ನವನ್ನು ನಡೆಸಬೇಕು. ಬಂದಳಿಕೆಯಲ್ಲಿ ಮೌರ್ಯರು ಆಳ್ವಿಕೆ ನಡೆಸಿದರು ಎಂಬುದಕ್ಕೆ ಸಾಕ್ಷಿಯಾಗಿ ಶಾಸನಗಳಲ್ಲಿ ಉಲ್ಲೇಖಿತ ಅಂಶಗಳು ದೊರೆಯುತ್ತವೆ.

ಕ್ರಿ.ಶ.೧೫೦ರ ಪೂರ್ವದಲ್ಲಿಯೇ ಮಳವಳ್ಳಿ ಮಹಾದೇವ ದೇವಾಲಯ ಉಲ್ಲೇಖಗೊಂಡಿದೆ. ವಾಸ್ತುಶಿಲ್ಪ ಮೂರ್ತಿಶಿಲ್ಪ ಕಲೆಗಳ ಬೆಳವಣಿಗೆಯ ದೃಷ್ಟಿಯಿಂದ ಇಲ್ಲಿಯ ದೇವಾಲಯ ಗಮನಾರ್ಹವಾಗಿದೆ. ಮೌರ್ಯರ ನಂತರದಲ್ಲಿ ಈ ಭಾಗ ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದಕ್ಕೆ ಉಲ್ಲೇಖಗಳು ದೊರೆಯುತ್ತವೆ. ಕರ್ನಾಟಕದಲ್ಲಿ ಕದಂಬರ ಪೂರ್ವದಲ್ಲಿ ಬನವಾಸಿ ಮತ್ತು ಬಳ್ಳಿಗಾವಿ ಪ್ರದೇಶದಲ್ಲಿ ಅನೇಕ ಚಿಕ್ಕ ಪುಟ್ಟ ರಾಜ್ಯಗಳಿದ್ದವು. ಇವರ ಒಂದು ಶಾಖೆಯು ಬನವಾಸಿಯಿಂದ ಕುಂತಳವನ್ನು ಆಳುತ್ತಿದ್ದಿತು. ಈ ಪ್ರದೇಶ ಇನ್ನೊಂದು ವಂಶದವರು ಚುಟುಕುಲಾನಂದ ಸಾತಕರ್ಣಿಗಳೆಂದು ಉಕ್ತವಾಗಿದೆ. ಈ ಭಾಗದಲ್ಲಿ ಶಾತವಾಹನರ ಮಾಂಡಳಿಕರಾಗಿ ಆಳ್ವಿಕೆ ಮಾಡಿದ್ದಾರೆ ಈ ಭಾಗದಲ್ಲಿ ಶಾತವಾಹನರ ವಂಶ್ಥರು ಇದ್ದು, ಅವರ ಆಡಳಿತದಲ್ಲಿ ಪ್ರಭಾವ ಬೀರಿದ್ದರು. ಮಳವಳ್ಳಿಯಲ್ಲಿ ಪ್ರಾಕೃತ ಮೊದಲ ಶಾಸನ ಪ್ರಕಾರ ಆರಂಭಿಕ ಆಳ್ವಿಕೆ ಹಾರಿತೀಪುತ್ರ ಶಾತಕರ್ಣಿ. ಈತ ವಿಣ್ಹು ಕಡ್ಡ ಚುಟುಕುಲಕ್ಕೆ ಸೇರಿದವನು. ವೈಜಯನ್ತಿಪುರ ರಾಜನಾಗಿದ್ದನು ಎಂಬುದಕ್ಕೆ ಸಾಕ್ಷಿಯಾಗಿ ಕಲ್ಲೇಶ್ವರ ದೇವಸ್ಥಾನದ ಮುಂದೆ ಇರುವ ಕಂಬದ ಮೇಲೆ ಕಾಣಬಹುದು. ಇದು ಕ್ರಿ.ಶ.೧೫೦ನೆಯ ಕಾಲಕ್ಕೆ ಶಾತವಾಹನರ ಕಾಲಕ್ಕೆ ಸೇರಿದ್ದಾಗಿದೆ. ಶಾತವಾಹನರ ಕಾಲಕ್ಕೆ ಸೇರಿದ ನೆಲೆಗಳು ಕಡೇಹಳ್ಳಿ ಮತ್ತು ಮಳೂರುಗಳಲ್ಲಿ ಅವಶೇಷಗಳನ್ನು ಗುರುತಿಸಬಹುದು. ಇದೇ ಕಾಲಕ್ಕೆ ಗುರುತಿಸುವ ನೆಲೆಗಳಲ್ಲಿ ಜಂಬೂರು ಇಲ್ಲಿ ನಾಗರಿ ಮತ್ತು ಸಂಸ್ಕೃತ ಭಾಷೆಯ ಶಾಸನಗಳನ್ನು ಕಾಣಬಹುದು.

ಪಲ್ಲವರ ಉಲ್ಲೇಖ ಕೂಡ ಶಿಕಾರಿಪುರದ ತಾಳಗುಂದ ಸಂಸ್ಕೃತ ಶಾಸನಗಳಲ್ಲಿ ಕಾಣಬಹುದು. ಕದಂಬರ ಶಾಸನದಲ್ಲಿ ಕದಂಬರ ರೀತಿ ರಾಜ್ಯಾಡಳಿತಕ್ಕೆ ಒಳಪಡದೇ ಇಲ್ಲಿ ಓಡಾಡಿ ಉಲ್ಲೇಖಗಳಿವೆ. ಆದರೆ ಪಲ್ಲವರ ವಂಶಾವಳಿ ಇಲ್ಲಿ ನೆಲೆ ನಿಂತಿರುವ ಅಂಶಗಳಾಗಲಿ ಅಥವಾ ಅವರ ನೆಲೆಯಾದ ಕುರಿತು ಕುರುಹುಗಳು ಇಲ್ಲ. ಕದಂಬರ ನೆಲೆಗಳಲ್ಲಿ ಮಹತ್ತರವಾದ ಸ್ಥಳವೆಂದರೆ ತಾಳಗುಂದ. ಇದನ್ನು ಸ್ಥಾನಕುಂದೂರು, ಸ್ಥಾನಗುಂದೂರು ಎಂಬ ಹೆಸರಿನಿಂದ ಕರೆಯುತ್ತಿದ್ದು, ಕದಂಬರ ಆಳ್ವಿಕೆಯ ವಿಚಾರವಾಗಿ ಬೆಳಕು ಚೆಲ್ಲುತ್ತದೆ. ಈ ಶಾಸನದಿಂದ ಕದಂಬರ ಕಾಲದಲ್ಲಿ ಈ ಕ್ಷೇತ್ರವು ಪ್ರಸಿದ್ಧ ಅಗ್ರಹಾರವಾಗಿದ್ದು ಇದನ್ನು ಮಯೂರ ಶರ್ಮನ ಪೂರ್ವಜರಾದ ಮುಕ್ಕಣ ಮತ್ತು ತ್ರಿಣೇತರು ಸ್ಥಾಪಿಸಿದರು. ಇಲ್ಲಿ ಹಿಂದೆ ಸುಮಾರು ೩೨ ಸಾವಿರ ಬ್ರಾಹ್ಮಣ ಕುಟುಂಬಗಳು ನೆಲಸಿದ್ದವು. ಕರ್ನಾಟಕದ ಇತಿಹಾಸದಲ್ಲಿ ಮೊದಲ ರಾಜವಂಶಾವಳಿಗಳಲ್ಲಿ ಶ್ರೇಷ್ಠ ರಾಜಮನೆತನವಾಗಿದೆ. ಇಲ್ಲಿ ದೊರೆತ ಸ್ಥಂಭ ಶಾಸನವು ಕ್ರಿ.ಶ.೫ನೇ ಶತಮಾನಕ್ಕೆ ಸೇರಿದ್ದು ಕಾವ್ಯಾತ್ಮಕವಾಗಿದೆ.

ಕದಂಬರ ಮೂಲ ಪುರುಷ ಮಯೂರ ವರ್ಮನು ಕದಂಬ ವಂಶ ಸ್ಥಾಪಿಸಿದ ಬಗ್ಗೆ, ಸುಧಾರಣೆ, ದಿಗ್ವಿಜಯಗಳನ್ನೊಳಗೊಂಡ ತಾಳಗುಂದ ಶಾಸನ ಇದ್ದು, ಸಂಸ್ಕೃತ ಪ್ರಾಚೀನ ಮತ್ತು ಪ್ರಥಮ ಶಾಸನವಾಗಿದೆ. ಇದನ್ನು ಸಂಸ್ಕೃತ ಕವಿ ಕುಬ್ಜನು ಭಾವ ಪೂರ್ಣವಾಗಿ ಬರೆದಿದ್ದಾನೆ. ಇದಕ್ಕಿಂತ ಹಿಂದಿನ ಕದಂಬರ ನೆಲೆ ಮಳವಳ್ಳಿ. ಇಲ್ಲಿಯ ಶಾಸನದ ಪ್ರಕಾರ ಶಿವಸ್ಕಂದ ವರ್ಮನ ಉಲ್ಲೇಖ ದೊರೆಯುತ್ತದೆ. ಬನವಾಸಿ ಕದಂಬರ ರಾಜಧಾನಿಯಾಗಿದ್ದಾಗ ಶಿಕಾರಿಪುರದ ಹಲವಾರು ಭಾಗಗಳು ಆಳ್ವಿಕೆಗೆ ಒಳಪಟ್ಟಿದನ್ನು ಇಲ್ಲಿ ಸ್ಮರಿಸಬಹುದು. ತಾಳಗುಂದ ಸ್ಥಂಭ ಶಾಸನದಿಂದ ಅಲ್ಲಿಯ ಪ್ರಣವೇಶ್ವರ ದೇಗುಲ ಕದಂಬರ ಕೊಡುಗೆಯ ಸ್ಮಾರಕವಾಗಿದೆ. ಆದರೆ ಈ ದೇಗುಲ ಕದಂಬರ ಪೂರ್ವದ್ದಾಗಿದೆ. ಶಾತಕರಣಿ ನಂತರ ದೊರೆತ ಕದಂಬರ ಶಾಸನಗಳಿಂದ ಕದಂಬರ ಆಳ್ವಿಕೆಗೆ ಶಿಕಾರಿಪುರ ಒಳಪಟ್ಟಿತ್ತು ಎಂದು ಸ್ಪಷ್ಟವಾಗುತ್ತದೆ.

ನಾಗರಖಂಡವನ್ನು ಚುಟುಗಳು, ಸೇಂದ್ರಿಕರು, ಸಿಂದರು ಮತ್ತು ಖೇಚರು ಮೊದಲಾದವರು ನಾಗಅರಸರಾಗಿದ್ದಾರೆ. ನಾಗರಖಂಡವು ಜಂಬೂದ್ವೀಪದ ದಕ್ಷಿಣಕ್ಕೆ ಕುಂತಳ ದೇಶದ ಬನವಾಸೆ ನಾಡಿನಲ್ಲಿದೆಯೆಂದು ಶಾಸನಗಳು ಹೇಳುತ್ತವೆ "ನಾಗರಖಂಡಂ ಬನವಾಸೆ ದೇಶದೊ(ಳೆ)". ಆಗ ಸೇಂದ್ರಿಕ ಅರಸ ಪುಗಿಲ್ಲಿಯು "ನಾರ್ಯರ್ಖಂಡ" ಮತ್ತು ಜಿಡುಗೂರುಗಳನ್ನು ಬಳ್ಳಿಗಾವೆಯಿಂದ ಆಳುತ್ತಿದ್ದನು. ಕ್ರಿ.ಶ. ೧೧೧೪ರ ಇಲ್ಲಿಯ ಶಾಸನ ಬನವಸೆ-೧೨೦೦೦ದ ಅಧಿಕಾರಿ ಮಹಾಪ್ರಚಂಡ ದಂಡನಾಯಕ ಗೋವಿಂದರಸ ನಾಗರಖಂಡ-೭೦ರ ಪೆರ್ಗಡೆ ಸೋಮನಾಥ ಮತ್ತು ಬನ್ನದಿಕೆಯ ನಾಳ್ಗಾವುಂಡರನ್ನು ಹೆಸರಿಸಿದೆ. (ಎ.ಕ-೩, ೧೧೧೪, ಸಾಂತೇನಹಳ್ಳಿ, ಹಿರೇಕೆರೂರು) ಬಳ್ಳಿಗಾವೆ ಶಾಸನದಲ್ಲಿ ಶಿಕಾರಿಪುರದ ಮಲ್ಲೇನಹಳ್ಳಿ, ಮಳವಳ್ಳಿ, ಕರ್ನೆಲ್ಲಿ, ಮಾಯಿತಮ್ಮನ ಮುಚಡಿ, ಬಿಳಿಕಿ, ಕಣಸೋಗೆ, ಚಿಕ್ಕಮಾಗಡಿ, ಅಗ್ರಹಾರ ಮುಚಡಿ, ಬಂದಳಿಕೆ, ಸೀರಿಹಳ್ಳಿ, ಮುತ್ತಗಿಗಳು ನಾಗರಖಂಡಕ್ಕೆ ಸೇರುತ್ತವೆ. ನಾಗರ ಖಂಡ - ೭೦ರಲ್ಲಿ ಕದಂಬರ ಅರಸೊತ್ತಿಗೆ ಆರಂಭವಾಗಿದೆ. ಬೋಡಯ್ಯ ಇತರ ಕಲ್ಯಾಣ ಚಾಳುಕ್ಯರ ಪ್ರಥಮ ದೊರೆ ತೈಲ ಉತ್ತರದಲ್ಲಿ ಹಾನುಗಲ್ಲು ಕದಂಬ ವಂಶದ ಮೂಲ ಪುರುಷ ಚಟ್ಟ

ಬನವಾಸಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ಕಾಲದಲ್ಲಿ ನಾಗರಖಂಡವನ್ನು ಬೋಡಯ್ಯ ಆಳುತ್ತಿದ್ದನು. ನಾಗರಖಂಡ ರಾಜಧಾನಿ ಬಂದಳಿಕೆಯಾಗಿದ್ದು, ಇದನ್ನು ಬ್ರಹ್ಮರಸ, ಬೊಪ್ಪರಸ, ಸೋವಿದೇವ, ಬೋಪ್ಪದೇವ, ಬ್ರಹ್ಮಭೂಪಾಲ ಇತ್ಯಾದಿ ಅರಸರುಗಳ ಆಳ್ವಿಕೆಗೆ ಒಳಪಟ್ಟಿತ್ತು.

ನಾಗರಖಂಡದಲ್ಲಿ ಸುಮಾರು ೭೩ ದೇವಾಲಯಗಳು ಶಾಸನೋಕ್ತವಾಗಿವೆ. ಇವುಗಳಲ್ಲಿ ೫೯ ಶೈವ, ೭ವೈಷ್ಣವ, ೭ಜೈನ ಬಸದಿಗಳು ಇವೆ. ಶಾಸನೋಕ್ತವಾಗದ ಅನೇಕ ದೇವಾಲಯಗಳು ಇವೆ. ನಾಗರಖಂಡ ಕಂಪಣ ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ, ಅನೇಕ ವಿಶೇಷತೆಗಳನ್ನು ಮೆರೆದು ಬನವಾಸಿ-೧೨೦೦೦ದ ಕಂಪಣಗಳಲ್ಲಿ ಒಂದು ವಿಶಿಷ್ಠ ಸ್ಥಾನಮಾನ ಪಡೆದಿದೆ. ಅನೇಕ ವರ್ಷ ವೈಭವವಾಗಿ ಮೆರೆದ ಬಂದಳಿಕೆ ನಗರ ಇಂದು ಹಾಳು ಕೊಂಪೆಯಾಗಿದೆ. ಇಲ್ಲಿಯ ಬನಶಂಕರಿ ದೇವಾಲಯದ ಪಶ್ಚಿಮದಲ್ಲಿ ರಾಜಧಾನಿ ಪಟ್ಟಣವಿದೆ. ಕೋಟೆ, ಕಂದಕ ಮೊದಲಾದ ಕುರುಹುಗಳು ಸಿಗುತ್ತವೆ.

ಕದಂಬರ ನಂತರದಲ್ಲಿ ಬಾದಾಮಿ ಚಾಲುಕ್ಯರ ಆಳ್ವಿಕೆಯ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದಿಲ್ಲ. ಆದರೆ ಭಕ್ತ ಸಿರಿಯಾಳನ ಮಹತ್ವ ಇರುವ ಶಿರಾಳಕೊಪ್ಪ ಪ್ರಮುಖ ಕೇಂದ್ರವಾಗಿತ್ತು ಎಂದು ತಿಳಿದು ಬರುತ್ತದೆ. ಗಂಗರ ಕಾಲದ ಆಳ್ವಿಕೆಗೆ ತೊಗರ್ಸಿ ಒಳಪಟ್ಟಿದ್ದು, ಇಲ್ಲಿಯ ಮಲ್ಲಿಕಾರ್ಜುನ ದೇಗುಲ ಕಟ್ಟಿಸಿರಬಹುದು ಎಂಬ ಪ್ರತೀತಿ ಇದೆ. ಇವರ ನಂತರ ರಾಷ್ಟ್ರಕೂಟರ ಕಾಲದಲ್ಲಿ ತಾಳಗುಂದ, ಬಂದಳಿಕೆ, ಮುಗಳಗೆರೆ ಇತ್ಯಾದಿ ಭಾಗಗಳು ಆಳ್ವಿಕೆಗೆ ಒಳಪಟ್ಟಿರುವ ಅಂಶಗಳನ್ನು ಕಾಣಬಹುದು. ರಾಷ್ಟ್ರಕೂಟರು ಬನವಾಸಿ ಪನ್ನಿರ್ಚ್ಛಸಿರ ನಾಡಿನ ಪ್ರಭುಗಳಾಗಿ ಗಂಗರಸರೊಂದಿಗೆ ಹೋರಾಟ ನಡೆಸಿ ಮುಂದೆ ವೈವಾಹಿಕ ಸಂಬಂಧ ಬೆಳಸಿದರು. ಕುನ್ದರಾಜನು ಬನವಾಸೆಯನ್ನು ಆಳುತ್ತಿದ್ದಾಗ ಕದಂಬರ ವಿವರಗಳನ್ನು ಬಂದಳಿಕೆ, ಚಿಕ್ಕಮಾಗಡಿ ಶಾಸನಗಳಲ್ಲಿ ಸಿಗುತ್ತವೆ. ರಾಷ್ಟ್ರಕೂಟರು ಕ್ರಿ.ಶ. ೯೭೨ರಲ್ಲಿ ಆಳ್ವಿಕೆ ಕಡಿಮೆ ಆಗುತ್ತಿದಂತೆ ಕಲ್ಯಾಣ ಚಾಳುಕ್ಯರ ಆಡಳಿತ ಈ ಭಾಗದಲ್ಲಿ ಜಾರಿಗೆ ಬಂದಿರುವುದು ಹಲವಾರು ಶಾಸನಗಳಿಂದ ತಿಳಿಯಬಹುದು. ಬನವಾಸಿಯನ್ನು ರಾಜ್ಯ ಭಾಗವಾಗಿ ಮಾಡಿಕೊಂಡು ಅಧಿಕಾರದ ಗದ್ದುಗೆಯನ್ನು ಚಾಲುಕ್ಯರು ಹಿಡಿದರು. ಈ ನಿಟ್ಟಿನಲ್ಲಿ ಬನವಾಸಿಯ ಭಾಗಕ್ಕೆ ಬಳ್ಳಿಗಾವಿಯೂ ಸೇರಲ್ಪಟ್ಟಿದ್ದು, ಶಿಕಾರಿಪುರದ ಇತರೆ ಭಾಗಗಳು ಆಳ್ವಿಕೆಗೆ ಒಳಪಟ್ಟಿದ್ದನ್ನು ಶಾಸನ ಮತ್ತು ದೇಗುಲಗಳ ಆಧಾರದಿಂದ ತಿಳಿಯಬಹುದು. ಸುಮಾರು ೨೦೦ ವರ್ಷಗಳವರೆಗೆ ಅಧಿಕಾರವನ್ನು ಶಿಕಾರಿಪುರದ ವಿವಿಧ ನೆಲೆಗಳಲ್ಲಿ ಕಂಡು ಕಾಣಬಹುದು. ಚಾಳುಕ್ಯ ಚಕ್ರವರ್ತಿಗಳಾದ ತ್ರಿಭುವನ ಮಲ್ಲ, ಜಯಸಿಂಹ, ಜನಮೇ ಜಯ, ಜಗದೇಕ ಮಲ್ಲದೇವ, ೬ನೇ ವಿಕ್ರಮಾದಿತ್ಯ ಮುಂತಾದವರ ನೇತೃತ್ವದಲ್ಲಿ ಆಡಳಿತ ನಡೆಸಿದ್ದನ್ನು ಕಂಡುಕೊಳ್ಳಬಹುದು. ಬಳ್ಳಿಗಾವಿಯಲ್ಲಿ ಹಲವಾರು ಶಾಸನಗಳ ಕುರುಹುಗಳು ಇದಕ್ಕೆ ಮುಖ್ಯ ಸಾಕ್ಷಿಯಾಗಿವೆ. ಕಲ್ಯಾಣ ಚಾಳುಕ್ಯರ ಆಳ್ವಿಕೆಯಲ್ಲಿ ಬಳ್ಳಿಗಾವಿ ಅವರ ಉಪ ರಾಜಧಾನಿಯಾಗಿತ್ತು. ಬನವಾಸಿ-೧೨೦೦೦ ಅತ್ಯಂತ ಮುಖ್ಯ ಪ್ರಾಂತ್ಯದ ಕೇಂದ್ರವಾಗಿತ್ತು. ಈ ನೆಲೆ ಕುಂತಳ ಪ್ರಾಂತ್ಯವೆನಿಸಿಕೊಂಡಿದ್ದು ತಾಲ್ಲೂಕಿನ ಪ್ರಗತಿಯ ಸುವರ್ಣ ಸಮಯ ಎನ್ನಬಹುದು. ಬಳ್ಳಿಗಾವಿಯನ್ನು ಈ ಕಾಲದಲ್ಲಿ ಬಲಿಪುರ, ಬಳ್ಳಿಗ್ರಾಮ ಎಂಬ

ಹೆಸರುಗಳಿಂದ ಕರೆಯಲಾಗಿದೆ. ೨ನೇ ಜಯಸಿಂಹನ ಕಾಲದಲ್ಲಿ ಜೆಡ್ಡಿಕೆರೆ ದಂಡೆಯ ಮೇಲಿರುವ ನೀಲಕಂಠೇಶ್ವರ ದೇಗುಲ ಕಟ್ಟಿಸಿದ. ಶ್ರೀ ಕೇದಾರೇಶ್ವರ ದೇವಾಲಯವು ಕಲ್ಯಾಣ ಚಾಳುಕ್ಯರ ತ್ರಿಕೂಟಾಚಲಕ್ಕೆ ಮಾದರಿಯಾಗಿದೆ. ಈ ದೇಗುಲ ಚಾವೋಜ, ಸಿಂಗೋಜ, ಬಿಸದೋಜ ಶಿಲ್ಪಗಳಿಂದ ನಿರ್ಮಾಣಗೊಂಡಿದೆ.

ಈ ಕಾಲದಲ್ಲಿ ಪ್ರಸಿದ್ಧವಾದ ಇನ್ನೊಂದು ಗ್ರಾಮವೆಂದರೆ ಬೇಗೂರು. ಈ ಭಾಗದಲ್ಲಿ ಚಾಳುಕ್ಯರ ದೇಗುಲವಿದ್ದು ಅದರ ಪಕ್ಕದಲ್ಲಿ ಹಲವಾರು ಶಾಸನಗಳನ್ನು ಗುರುತಿಸಬಹುದು. ಮುಗಳಗೆರೆಯಲ್ಲಿಯೂ ಕೂಡ ಚಾಳುಕ್ಯರ ಕುರುಹುಗಳನ್ನು ಗುರುತಿಸಬಹುದು. ಬಂದಳಿಕೆಯಲ್ಲೂ ಕಲ್ಯಾಣ ಚಾಳುಕ್ಯರ ಆಡಳಿತ ಪ್ರಭಾವ ಬೀರಿದ್ದನು ಅವರು ಬಿಟ್ಟಿರುವ ದೇಗುಲ ಮತ್ತು ಶಾಸನಗಳಿಂದ ಸ್ಪಷ್ಟವಾಗಿ ತಿಳಿಯಬಹುದು. ಶಾಸನಗಳನ್ನು ಗುರುತಿಸುವಾಗ ಕಲ್ಯಾಣ ಚಾಲುಕ್ಯರ ಶಾಸನಗಳು ಶಿಕಾರಿಪುರದ ತಾಲ್ಲೂಕಿನ ಉದ್ದಗಲಕ್ಕೂ ಹರಡಿವೆ.

ಕಲ್ಯಾಣ ಚಾಳುಕ್ಯರ ಪ್ರಾಬಲ್ಯವನ್ನು ಹತ್ತಿಕ್ಕಿದ ಕಳಚೂರ್ಯರು ತಮ್ಮ ಆಡಳಿತದ ಚುಕಾಣಿಯನ್ನು ಹಿಡಿದರು. ಈ ಪ್ರಾಂತ್ಯದಲ್ಲಿ ಬಿಜ್ಜಳ ಪ್ರಮುಖ ಪಾತ್ರ ವಹಿಸಿದ್ದಾನೆ. ಹಲವಾರು ಶಾಸನಗಳು ತಾಲ್ಲೂಕಿನದ್ಯಾಂತ ದೊರೆತ್ತಿದ್ದು, ಇವು ಇವರ ಆಳ್ವಿಕೆಯನ್ನು ಪ್ರತಿನಿಧಿಸುತ್ತದೆ. ಬಿಜ್ಜಳನ ನೇತೃತ್ವದಲ್ಲಿ ಬಳ್ಳಿಗಾವಿಯಲ್ಲಿ ತನ್ನ ಅಧಿಪತ್ಯವನ್ನು ಸಾಧಿಸಿದ್ದಾನೆ. ಇವನ ಕಾಲದಲ್ಲಿ ಬಳ್ಳಿಗಾವಿಯಲ್ಲಿರುವ ದಕ್ಷಿಣ ಕೇದಾರೇಶ್ವರ ದೇಗುಲವು ಕಾಳಾಮುಖರ ಕೊಡುಗೆಯಾಗಿದೆ. ಈ ಸಮಯದಲ್ಲಿ ಬಿಜ್ಜಳನ ಮಂತ್ರಿಯಾದ ಬಸವೇಶ್ವರ ಪ್ರಭಾವದಿಂದ ವೀರಶೈವ ಪಂಥ ಬೆಳವಣಿಗೆಯಾಗಿದೆ. ವಚನಗಾರ್ತಿ ಅಕ್ಕಮಹಾದೇವಿ ಹಾಗೂ ವಚನಗಾರ ಅಲ್ಲಮಪ್ರಭುರವರ ನೆಲೆಯಾಗಿದೆ. ಇವರ ಕಾಲದಲ್ಲಿ ಸಮಾಜೋ-ಧಾರ್ಮಿಕ ಕಾರ್ಯಗಳು ಸಾಹಿತ್ಯ ಕ್ಷೇತ್ರಗಳ ಮೇಲೆ ಬೆಳಕು ಚಲ್ಲಿದ್ದಾರೆ.

ಕಲ್ಯಾಣ ಚಾಳುಕ್ಯರ ನಂತರ ಕಂಡುಬರುವ ರಾಜವಂಶಸ್ಥರೆಂದರೆ ಹೊಯ್ಸಳರು. ಇವರು ಬೇಗೂರನ್ನು ಅಗ್ರಹಾರ ಮಾಡಿಕೊಂಡಿದ್ದು, ತಾಳಗುಂದದ ಪ್ರಣವೇಶ್ವರ ದೇಗುಲಕ್ಕೆ ದತ್ತಿ ನೀಡಿದ ಉಲ್ಲೇಖವಿದೆ. ಹೊಯ್ಸಳರ ಅರಸ ೨ನೇ ಬಲ್ಲಾಳನ ಪತ್ನಿ ಉಮಾದೇವಿ ಸೈನ್ಯವನ್ನು ಮುನ್ನೆಡೆಸಿದ್ದಳು. ಬಳ್ಳಿಗಾವಿಯ ಗರಿಮೆಗೆ ಕಳಶವಿಟ್ಟ ಕೀರ್ತಿ ವಿಷ್ಣುವರ್ಧನನ ರಾಣಿ ಶಾಂತಲೆಗೆ ಸಲ್ಲುತ್ತದೆ. ತನ್ನ ತವರಿನ ಕೀರ್ತಿಯನ್ನು ವಿಶ್ವವಿಖ್ಯಾತಗೊಳಿಸಲು, ಬೇಲೂರು ಹಳೇಬೀಡಿನ ಶಿಲ್ಪಕೆಲಸಕ್ಕೆ ತನ್ನ ತವರಿನ ಶಿಲ್ಪಿಗಳನ್ನು ಆಹ್ವಾನಿಸಿ ಅವರನ್ನು ಇತಿಹಾಸದಲ್ಲಿ ದಾಖಲಿಸಿ ಹಾಲುಂಡ ತವರಿನ ಋಣ ತೀರಿಸಿದ ಶಾಂತಲೆ ಭಾಗ್ಯವಂತೆ. ಬಳ್ಳಿಗಾವಿಯ ಮಲ್ಲೋಜ, ಬಳ್ಳಿಗಾವಿ ದಾಸೋಜ, ಬಳ್ಳಿಗಾವಿಯ ಚಾವಣ ಇಂದಿಗೂ ಬೇಲೂರಿನಲ್ಲಿ ತಾವು ತಮ್ಮ ಶಿಲ್ಪ ಕೌಶಲ್ಯದ ಜೊತೆಗೆ ಬಳ್ಳಿಗಾವಿಯನ್ನು, ಶಿಕಾರಿಪುರವನ್ನು ಗುರುತಿಸುವಂತೆ ಮಾಡಿದ್ದಾರೆ

ಸಾಂತಳಿಗೆ-೧೦೦೦ ಬನವಾಸಿ ಕದಂಬರು, ರಾಷ್ಟ್ರಕೂಟರು, ಕಲ್ಯಾಣಿ ಚಾಳುಕ್ಯರ ಸಾಮಂತರಾಗಿ ಆಳ್ವಿಕೆ ನಡೆಸಿದ್ದಾರೆ. ಶಿಕಾರಿಪುರ ತಾಲ್ಲೂಕಿನ ಹಳೇಬನ್ನೂರ ಶಾಸನ "ಸಾಸ್ತಳಿಗೆ ಸಾಸಿರದೊಳಗೆ ಶ್ರೀಮದಗ್ರಹಾರ ಬನ್ನಿಯೂರ" ಎಂದು ಹೇಳಿದೆ.

(ಬನ್ನಿಯೂರ= ಬನ್ನೂರು), ಹಾಗಾಗಿ ಸಾಂತಳಿಗೆ ಶಿಕಾರಿಪುರ ತಾಲ್ಲೂಕಿನ ಗ್ರಾಮ ಬನ್ನೂರು ಒಳಪಟ್ಟಿತ್ತು. ಎಡೆನಾಡು-೭೦ ತುಂಬರಹೊಸೂರು ಶಾಸನ "ಪನ್ನಿರ್ಚ್ಛಾಸಿರದ ಕಂಪಣಂ ಎಡೆನಾಟ್ಟೆ ಎಪ್ಪತ್ತರ ಬಳಿಯಗ್ರಹಾರಂ ತುಂಬರಹೊಸೂರು" ಎಂದಿದೆ. ಹಾಗೆ ಗೊಗ್ಗ ಶಾಸನ "ಬನವಸೆ.....ರ್ಚ್ಛಾಸಿರಮುಮಂ ಸುಖದಿನಾಳುತ್ತರಲಾ ಬಳಿಯ ಕಂಪ ಎಡೆ(ನಾ)ಟ್ಟೆ ೭೦" ಎಂದು ತಿಳಿಸುತ್ತದೆ. ಇದು ಬನವಾಸಿಯ ಉಪವಿಭಾಗವಾಗಿತ್ತು.

ಬಳ್ಳವೆನಾಡು-೭೦ ಇದು ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ ಇರಬಹುದು ಎಂದು ಬಿ.ಆರ್.ಗೋಪಾಲರವರು ಊಹಿಸಿದ್ದಾರೆ. ಹೊಯ್ಸಳ ವೀರ ನರಸಿಂಹ ಕಾಲದಲ್ಲಿ ಬೇಲೂರು ಒಡೆಯ ಸಂಕರದೇವರಿಗೆ ಇಲ್ಲಿಯ ಗೌಡ ದತ್ತಿ ನೀಡಿದನು ತಿಳಿಸುತ್ತದೆ. (ಎ.ಕ-೯-೧೫೬,ಬೇಲೂರು, ಹಾಸನ). ಜಿಡ್ಡಿಳಿಗೆ -೭೦ರ ಬಗ್ಗೆ ಶಿಕಾರಿಪುರ ತಾಲ್ಲೂಕಿನ ಅಡಗಂಟಿ ಶಾಸನದಲ್ಲಿ ಇದರ ಉಲ್ಲೇಖವಿದೆ.(ಎ.ಕ.೭-೧೦೫೬,ಅಡಗಂಟಿ,ಶಿಕಾರಿಪುರ). ಬಳ್ಳಿಗಾವೆ ಶಾಸನ "ಜಿಡ್ಡುಳಿಗೆ ಎಪ್ಪತ್ತರ ಬಾಡ ಹಿರಪೂರು" ಎಂದು ಹೇಳಿದೆ. (ಎ.ಕ-೭, ೧೩೫ ಬಳ್ಳಿಗಾವೆ ೧೦೭೮). ಇಲ್ಲಿಯ ಇನ್ನೊಂದು ಶಾಸನ "ಜಿಡ್ಡುಳಿಗೆರ್ಪ್ಪತ್ತರ ಬಳಿಯ ಬಾಡಂ ಪಕ್ಕಳೆಯೂರೂಡೆಯಂ" ಎಂದು ಹೇಳಿದೆ. (ಎ.ಕ-೭-೧೬೬,೧೮೯೨,ಬಳ್ಳಿಗಾವಿ)ಇದು ಕೂಡ ಬನವಾಸಿ ನಾಡಿನ ಉಪವಿಭಾಗವಾಗಿದೆ

ಶಿಕಾರಿಪುರ ನೇರವಾಗಿ ದೊಡ್ಡ ಮನೆತನಗಳ ಅಳ್ವಿಕೆಯಲ್ಲಿ ಒಳಪಟ್ಟಿದ್ದಲ್ಲದೆ, ಕೆಲವು ಚಿಕ್ಕ ಪುಟ್ಟ ರಾಜ ಸಂಸ್ಥಾನಗಳು ಹಿಡಿತವನ್ನು ಸಾಧಿಸಿದೆ. ಸೇವಣರು ಶಿಕಾರಿಪುರದಲ್ಲಿ ಕ್ರಿ.ಶ. ೭೦೦-೧೦೧೧ರವರೆಗೆ ಸಂಸ್ಥಾನವನ್ನು ಸ್ಥಾಪಿಸಿದ್ದು ಕಾಣಬಹುದು. ಇಷ್ಟೆಲ್ಲಾ ರಾಜ್ಯ ಮನೆತನಗಳ ಹಿನ್ನಲೆಯಲ್ಲಿ ಈ ಭಾಗ ಮುಸ್ಲಿಂರ ಆಡಳಿತಕ್ಕೂ ಕೂಡ ಒಳಪಟ್ಟಿದೆ. ಆದಿಲ್ ಶಾಹಿ ಕೆಳದಿ ಗಡಿಯಾದ ಶಿಕಾರಿಪುರದ ಭಾಗಗಳಲ್ಲಿ ಈತನ ಆಳ್ವಿಕೆ ಕಂಡುಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ಕ್ರಿ.ಶ.೧೬೩೨ರ ಶಾಸನದಿಂದ ಮಾಸೂರ್ ಮದಗದ ಕೆರೆಯ ಅಭಿವೃದ್ಧಿಗೆ ಅವನು ನೆರವಾಗಿದ್ದನ್ನು ತಿಳಿಯಬಹುದು.

ವೀರ ಮಹಿಳೆ ಹರಿಯಕ್ಕ ತನ್ನ ತಂದೆಯನ್ನು ಕೊಂದ ವ್ಯಕ್ತಿಯೊಡನೆ ಹೋರಾಡಿ ತನ್ನ ಆತ್ಮ ಬಲಿಯಾದ ಘಟನೆ ಶಿಕಾರಿಪುರದಲ್ಲಿ ದೊರೆಯುತ್ತದೆ.(ಎ.ಕ-೭, ಶಿಕಾರಿ-೨, ಕ್ರಿ.ಶ. ೧೪೪೬) ಹಿರೇಹಾರಿಕದಲ್ಲಿ ೨ ಮಾಸ್ತಿಕಲ್ಲುಗಳಿವೆ ಇಲ್ಲಿ ವೀರ ಪ್ರತಾಪ ರಾಜನ ಹೆಸರು ಉಲ್ಲೇಖಿತವಾಗಿದೆ. .(ಎ.ಕ-೭, ಶಿಕಾರಿ-೩೬, ಕ್ರಿ.ಶ. ೧೪೧೭) ಹರಿಹರನ ಕಾಲದಲ್ಲಿ ನೆಲವಾಗಿಲು ಮೈಲಾರ ದೇವರಿಗೆ ತಿಪ್ಪಯ್ಯ ನಾಯಕ ಅಮೃತ ಪಡಿಗೆ ನಾಲ್ಕು ಹೊನ್ನು ಭೂಮಿಯನ್ನು ನೀಡಿದ ಉಲ್ಲೇಖವಿದೆ. .(ಎ.ಕ-೭, ಶಿಕಾರಿ-೩೧೩, ಕ್ರಿ.ಶ. ೧೩೯೦) ಶ್ರೀಕೃಷ್ಣರಾಯರ ಉಲ್ಲೇಖಿತ ಶಾಸನ ಅರಶಿನಗೆರೆಯಲ್ಲಿದೆ .(ಎ.ಕ-೭, ಶಿಕಾರಿ-೨೫, ಕ್ರಿ.ಶ. ೧೫೧೫)

ವಿಜಯನಗರ ಕಾಲದಲ್ಲಿ ಬನವಾಸಿಯೂ ಹೆಸರಿಗೆ ಮಾತ್ರ ೧೨೦೦೦ ಹಳ್ಳಿಗಳ ನಾಡಗಿತ್ತು. ತೊಗರಸಿ, ಉಡುಗಣಿ (ಉಡುತಡಿ), ಜಂಬೂರು ಬಗ್ಗೆ ಯಡೆಹಳ್ಳಿ ಶಾಸನ ತಿಳಿಸುತ್ತದೆ. .(ಎ.ಕ-೧೫, ೧೮೯-ಯಡೆಹಳ್ಳಿ,ಸಾಗರ). ಶಿಕಾರಿಪುರದಲ್ಲಿ ಕ್ರಿ.ಶ. ೧೬೩೨

ರಲ್ಲಿ ತೂಬು ಕಟ್ಟಿಸಿದ ಉಲ್ಲೇಖಿತ ಶಾಸನ ದೊರೆತಿದೆ. ವೀರ ಆಂಜನೇಯ ದೇಗುಲದ ಕೈಸಾಲೆಯಲ್ಲಿ "ಕಂಠೀರವ ನರಸರಾಜ ಒಡೆಯರ್ ಎ ೧೬೩೮-೫೯ ಏ" ಎಂಬ ಉಲ್ಲೇಖವಿದೆ. (ವಸಂತಕುಮಾರ.ಬಿ.ವಿ.(ಸಂ)೧೯೯೮, ಮಹಾದಾನಸ್ಮರಣ ಸಂಚಿಕೆ, ಪು೩೧). ಕೆಳದಿಯ ವೆಂಕಟಪ್ಪ ನಾಯಕ ಮತ್ತು ಸೋಮಶೇಖರ ನಾಯಕ ಮದರ ಹಳ್ಳಿ ಶಿವಾರ್ಪಿತ ಗ್ರಾಮ ಬಿಟ್ಟ ಉಲ್ಲೇಖವಿದೆ. (ಎ.ಕ-೭, ಶಿಕಾರಿ-೨೭, ಕ್ರಿ.ಶ. ೧೬೬೪) ಕೆಳದಿ ಸೋಮಶೇಖರನ ನಾಯಕ ಕರುಭೈರವಗೆ ಬರೆಸಿ ಕಳುಹಿಸಿದ ಕಾರ್ಯ ಕೋಡಿಹಳ್ಳಿ ಬಸವನ ಪುಂಡತನ ಬಗ್ಗೆ ಉಲ್ಲೇಖವಿದೆ. (ಎ.ಕ-೭, ಶಿಕಾರಿ-೨೧೦, ಕ್ರಿ.ಶ. ೧೭೫೮) ಮೈಸೂರಿನ ಚಾಮರಾಜ ಒಡೆಯರ್ ಬಳ್ಳಿಗಾವಿ ಕೇದಾರೇಶ್ವರ ದೇವರ ಜೀರ್ಣೋದ್ಧಾರಕ್ಕೆ ನೀಡಿದ ದಾನದ ಉಲ್ಲೇಖವಿದೆ. (ಎ.ಕ-೭, ಶಿಕಾರಿ-೯೧, ಕ್ರಿ.ಶ. ೧೮೮೫) ಹೀಗೆ ಹಲವಾರು ಇತಿಹಾಸ ಹುಟ್ಟು ಹಾಕುವ ಶಾಸನಗಳಿಂದ ಶಿಕಾರಿಪುರದಲ್ಲಿ ಎಲ್ಲಾ ರಾಜಮನೆತನಗಳ ಹಿಡಿತವನ್ನು ಗುರುತಿಸಬಹುದು.

ಶ್ರೀಕೃಷ್ಣದೇವರಾಯನ ಆಸ್ಥಾನ ಗುರುವಾಗಿದ್ದ ಶ್ರೀ ವ್ಯಾಸರಾಯ ಸ್ವಾಮಿಗಳು ಮುಕ್ತಿ ಮಾರ್ಗದ ಬೋಧನೆ ಮತ್ತು ಧರ್ಮ ಜಾಗೃತಿ ಮಾಡುತ್ತ ಕನ್ನಡ ನಾಡಿನಲ್ಲಿ ಸಂಚರಿಸುತ್ತಾ ಶಿಕಾರಿಪುರಕ್ಕೆ ಆಗಮಿಸಿದ್ದರು. ಹಂಪೆಯಲ್ಲಿ ಯಂತ್ರೋದ್ಧಾರ ಹನುಮನನ್ನು ಪ್ರತಿಷ್ಠಾಪಿಸಿ, ಧರ್ಮ ಜಾಗೃತಿಯ ಹಿನ್ನಲೆಯಲ್ಲಿ ಆಕರ್ಷಕ ಪ್ರಕೃತಿಯ ಮಡಿಲಲ್ಲಿ ಆಂಜನೇಯ ಪ್ರತಿಷ್ಠೆ ಮಾಡುವಂತೆ ಪ್ರೇರಣೆ ಗೊಂಡರು. ಅದಕ್ಕೆ ಬೇಕಾದ ನಿವೇಶನ ಪರಿಶೀಲನೆ ಮಾಡುವಾಗ ಹುಚ್ಚಪ್ಪ ಒಡೆಯರ್ ಎಂಬುವವರ ಹಕ್ಕಿನಲ್ಲಿರುವ ಭೂಮಿ ಸೂಕ್ತವೆಂದು ಸ್ವಪ್ನ ಬಿದ್ದಿತು. ಅದೇ ಸಂದರ್ಭದಲ್ಲಿ ನಿವೇಶನ ಮಾಲಿಕನಿಗೂ ಸ್ವಪ್ನದಲ್ಲಿ ಆಂಜನೇಯ ಕಾಣಿಸಿಕೊಂಡನು. ಇದರ ಪ್ರತಿಫಲವಾಗಿ ನನ್ನ ಹೆಸರಿನಲ್ಲಿ ದೇಗುಲ ಕಟ್ಟಿಸಲು ಒಪ್ಪಿಗೆಯಂತೆ ಹುಚ್ಚರಾಯ (ಭ್ರಾಂತೇಶ) ನಾಗಿ ಪ್ರತಿಷ್ಠಾಪಿಸಲಾಯಿತು. ಶಿಕಾರಿಪುರದ ಭ್ರಾಂತೇಶ, ಧಾರವಾಡ ಜಿಲ್ಲೆಯ ಸಾಂತೇನಹಳ್ಳಿ ಶಾಂತೇಶ, ಮತ್ತು ಕದರ ಮಂಡಲಗಿಯಲ್ಲಿ ಕಾಂತೇಶನಾಗಿ, ಈ ಮೂರು ಸ್ಥಳಗಳಿಗೆ ಒಂದೇ ದಿನ ದರ್ಶನ ಮಾಡಿದರೆ ಕಾಶಿಗೆ ಹೋದ ಪುಣ್ಯ ಎಂಬ ನಂಬಿಕೆ ಇಂದಿಗೂ ಜನರಲ್ಲಿ ಮನೆಮಾಡಿದೆ. ಶ್ರೀರಾಮಚಂದ್ರ ವಿಗ್ರಹಗಳು ಶಿಕಾರಿಪುರ ತಾಲ್ಲೂಕಿನ ಶಿಲ್ಪಕಲಾ ಕೇಂದ್ರವಾಗಿದ್ದ ತಾಳಗುಂದದಲ್ಲಿ ಅಮರ ಶಿಲ್ಪ ಜಕಣಾಚಾರಿಯ ನೇತೃತ್ವದಲ್ಲಿ ಕೆತ್ತಲ್ಪಟ್ಟು ಬಳ್ಳಿಗಾವಿಯಲ್ಲಿ ಪ್ರತಿಷ್ಠಾಪನೆ ಮಾಡಿ. ಈ ದೇಗುಲಕ್ಕೆ ತರಲಾಯಿತು. (ವಸಂತಕುಮಾರ.ಬಿ.ವಿ.(ಸಂ)೧೯೯೮, ಮಹಾದಾನ ಸ್ಮರಣ ಸಂಚಿಕೆ, ಪು೨೨-೨೩).

ದೋಂಡಿಯ ವಾಘ್ ಎಂಬ ಮರಾಠ ಸರದಾರ ಷಾಜಿ ಸೈನ್ಯದಲ್ಲಿದ್ದು, ಬ್ರಿಟಿಷರ ವಿರುದ್ಧ ಬಂಡೆದ್ದ ಸ್ವಾತಂತ್ರ್ಯ ಹೋರಾಟಗಾರ. ಈತ ಚಿತ್ರದುರ್ಗ ಮತ್ತು ಮಂಗಳೂರು ರೆಸಿಡೆಂಟರಿಂದ ತಪ್ಪಿಸಿಕೊಂಡು ಚನ್ನಗಿರಿ ಪ್ರದೇಶದಿಂದ ಬಸವಪಟ್ಟಣ ಖಾನನ ಮೊರೆ ಹೊಕ್ಕನು. ಅಲ್ಲೂ ಬ್ರಿಟಿಷರ ಉಪಟಳ ಹೆಚ್ಚಿ ಶಿಕಾರಿಪುರದ ಕಡೆಗೆ ಬಂದನು. ಇಲ್ಲಿಯೂ ಕೂಡ ಅವನನ್ನು ಬೆನ್ನು ಹತ್ತಿದಾಗ, ಅಡ್ಡಲಾಗಿದ್ದ ಕುಮದ್ವತಿ ನದಿ ತುಂಬಿತುಳುಕುತ್ತಿತ್ತು. ಆಗ ವಾಘ ಇಲ್ಲಿಯ ಶ್ರೀಹುಚ್ಚಾರಾಯನನ್ನು ಬೇಡಿಕೊಂಡು, ನದಿಯನ್ನು ದಾಟಿದ. ಶಿಕಾರಿಪುರದ ಆಚೆ ಇರುವ ರೆಸಿಡೆಂಟರು ನದಿಯ ಈಚೆಗೆ ಇರುವ ವಾಘನನ್ನು ಹಿಡಿಯಲಾರದೆ, ಕೈ ಕೈ ಹಿಸಿಕಿಕೊಂಡರು. ಅಂತೂ ದೊಂಡಿಯ

ವಾಘ್ ಗೆದ್ದ. ನಂತರ ತನ್ನ ಹರಕೆಯಂತೆ ನೀಳವಾದ ಯುದ್ಧ ಖಡ್ಗವನ್ನೇ ಅರ್ಪಿಸಿ ಭಕ್ತಿ ಮೆರೆದ. ನವರಾತ್ರಿಯ ವಿಜಯದಶಮಿಯಂದು ಬನ್ನಿ ಮುಡಿಯಲು ಈ ಖಡ್ಗವನ್ನೇ ತೆಗೆದು ಕೊಂಡು ಹೋಗುವ ಸಂಪ್ರದಾಯವನ್ನು ಇಂದಿಗೂ ಕಾಣಬಹುದು.

ಇತಿಹಾಸ ಪ್ರಸಿದ್ಧವಾದ ಈಸೂರು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಅವಿಸ್ಮರಣೀಯ ಪಾತ್ರ ವಹಿಸಿದೆ. ಸ್ವಾಭಿಮಾನಿ ಕಲಿಗಳ ತವರಾದ ಈಸೂರು ಕ್ರಿ.ಶ ೧೯೪೨ರ ಚಲೇಜಾವ್ ಚಳುವಳಿಯಲ್ಲಿ ಮೊಟ್ಟ ಮೊದಲ ಕ್ರಾಂತಿಯ ಪತಾಕೆ ಹಾರಿಸಿ ಸ್ವಾತಂತ್ರ್ಯ ಗ್ರಾಮ ಎಂದು ಘೋಷಿಸಿಕೊಂಡು ಬ್ರಿಟಿಷರ ವಿರುದ್ಧ ಎದೆ ಸೆಟ್ಟೆಸಿ ನಿಂತ ವೀರರು ಇವರಾಗಿದ್ದಾರೆ. "ಏಸೂರು ಕೊಟ್ಟರೂ ಈಸೂರು ಕೊಡವು" ಎಂಬ ಹೆಸರು ಇತಿಹಾಸ ಸೇರಿತು. ಆ ಹೋರಾಟದಲ್ಲಿ ಬ್ರಿಟೀಷ್ ಏಜೆಂಟರಾದ ಇನ್‌ಸ್ಪೆಕ್ಟರ್ ಕೆಂಚೇಗೌಡ ಅಮಲ್ದಾರ್ ಚೆನ್ನಕೃಷ್ಣಯ್ಯರವರನ್ನು ಸ್ವಾತಂತ್ರ್ಯ ರಾಜ್ಯಕ್ಕೆ ಬಲಿ ನೀಡಿ, ಬಂದಿಯಾದ ಗುರಪ್ಪ, ಮಲ್ಲಪ್ಪ, ಸೂರ್ಯನಾರಾಯಣಚಾರಿ, ಶಂಕ್ರಪ್ಪ ಮತ್ತು ಹಾಲಪ್ಪ ಐವರು ಸ್ವಾತಂತ್ರ್ಯ ವೀರರು ಗಲ್ಲು ಕಂಬಕ್ಕೆ ದುರ್ಗಪ್ಪ, ರಾಮಣ್ಣ, ಸಿದ್ದಮ್ಮ, ಹನುಮಂತಪ್ಪ, ಸುಬ್ಬರಾಯ, ವೀರಬಸಪ್ಪ, ಪಾರ್ವತಮ್ಮ, ಲಿಂಗೋಜಿ, ಜಯಣ್ಣ, ರಂಗಪ್ಪ ಮೊದಲಾದವರಿಗೆ ಅಜೀವ ಶಿಕ್ಷೆ ವಿಧಿಸಿದಾಗ "ಭೋಲೋ ಭಾರತ್ ಮಾತಾ ಕಿ ಜೈ" ಎಂಬ ಘೋಷಣೆಯೊಂದಿಗೆ ಶಿಕ್ಷೆಯನ್ನು ಸ್ವೀಕರಿಸಿದ್ದಾರೆ. (ವಸಂತಕುಮಾರ.ಬಿ.ವಿ.,(ಸಂ) ೧೯೯೮,ಮಹಾದಾನ ಸ್ಮರಣ ಸಂಚಿಕೆ, ಪು೨೬).

ಅಧ್ಯಾಯ–೪

ಶಿಕಾರಿಪುರ ತಾಲ್ಲೂಕಿನ ಶಾಸನಗಳ ವೈಶಿಷ್ಟ್ಯತೆ

೪.೧ ಪೀಠಿಕೆ

೪.೨ ರಾಜಕೀಯ ವ್ಯವಸ್ಥೆ

೪.೩ ಸಾಮಾಜಿಕ ಸ್ಥಿತಿಗತಿ

೪.೪ ಆರ್ಥಿಕ ಪರಿಸ್ಥಿತಿ

೪.೫ ಧರ್ಮ

೪.೬ ಶಿಕ್ಷಣ

೪.೭ ಶಿಕಾರಿಪುರ ತಾಲ್ಲೂಕಿನ ಪ್ರಮುಖ ಶಾಸನಗಳು

ಅಧ್ಯಯ-೪
ಶಿಕಾರಿಪುರ ತಾಲ್ಲೂಕಿನ ಶಾಸನಗಳ ವೈಶಿಷ್ಟ್ಯತೆ

ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿ ರಚನೆಗೆ ಮಹತ್ವದ ಆಕರ ಸಾಮಾಗ್ರಿಯೆನಿಸಿದ ಶಾಸನಗಳನ್ನು ಹೊರಗಡೆ ತರುವ ಪ್ರಯತ್ನ ಒಂದನೆ ಶತಮಾನದಿಂದಲೂ ನಡೆಯುತ್ತಿದೆ. ಶಾಸನಗಳ ಲಿಪಿಗಳನ್ನು ಅಧ್ಯಯನ ಮಾಡಿ ಅವುಗಳ ಬೆಳವಣಿಗೆಯ ವಿವಿಧ ಹಂತ ಮತ್ತು ಲಕ್ಷಣಗಳನ್ನು ತಿಳಿಸಲಾಗಿದೆ. ಹೊಲವನ್ನು, ಹಣವನ್ನು, ಮನೆಯನ್ನು, ಆದಾಯದ ಒಂದು ಭಾಗವನ್ನು ಬಿಟ್ಟುಕೊಟ್ಟ ವಿಷಯವನ್ನು ಹೇಳುವ ಶಾಸನಗಳು ದಾನ ಶಾಸನಗಳು ತುಲನಾತ್ಮಕವಾಗಿ ನೋಡಿದರೆ ಸಂಖ್ಯೆಯಲ್ಲಿ ವೀರ ಶಾಸನಗಳಿಗಿಂತ ದಾನ ಶಾಸನಗಳೇ ಹೆಚ್ಚು. ವೀರನ ಸಾವಿನ ವರ್ಣನೆಯನ್ನು ಕುಟುಂಬಗಳಿಗಾಗಿ ರಾಜನೋ, ಊರಿನವರೊ, ಸಂಬಂಧಿಕರೊ, ದಾನದತ್ತಿಯನ್ನು ನೀಡಿ ಶಾಸನ ಹಾಕಿಸಿದನ್ನು ಕಾಣಬಹುದು. ಇದು ವೀರ ಶಾಸನಗಳೆಂದು ಕರೆಯಿಸಿಕೊಳ್ಳುತ್ತದೆ. ದಾನಗಳನ್ನು ಉಲ್ಲೇಖಿಸುವ ತಾಮ್ರ ಶಾಸನಗಳು ಕೂಡ ದಾನಗಳನ್ನು ಪ್ರತಿಬಿಂಬಿಸುತ್ತವೆ. ದಾನ ಶಾಸನಗಳಲ್ಲಿ ಜೈನ ದಾನ ಶಾಸನಶಿಲ್ಪ, ಶೈವ ದಾನ ಶಾಸನ ಶಿಲ್ಪ, ಶಿವಲಿಂಗ ಚಿತ್ರ, ಆಕಳು, ನಂದಿಯ ಶಿಲ್ಪ, ಮಂಟಪ ಭಕ್ತ, ವೈಷ್ಣವ ದಾನ ಶಾಸನ ಶಿಲ್ಪ, ಶಂಖ, ಚಕ್ರ, ವೈಷ್ಣವ ದೇವತೆ ಶಿಲ್ಪ, ವಾಮನನ ಶಿಲ್ಪ ಇರುತ್ತವೆ. ಹೀಗೆ ಶಾಸನಗಳ ಒಳನೋಟದಲ್ಲಿ ಅವುಗಳ ಬೇರೆ ಬೇರೆ ರೂಪಗಳಿದ್ದರೂ ಅವುಗಳನ್ನೇ ದಾನ, ದತ್ತಿ, ತಾಮ್ರ, ಸ್ಮಾರಕ ಶಾಸನಗಳು ಎಂಬುದಾಗಿ ಗುರುತಿಸಬಹುದು.

ಶಾಸನದ ಭಾಷೆ ಕನ್ನಡ, ಹಳಗನ್ನಡಗಳಲ್ಲಿ ಕಂಡುಬರುತ್ತವೆ. ಶಾಸನ ರಚನೆಯಲ್ಲಿ ಕವಿ, ಲಿಪಿಗಾರ, ರೂವಾರಿಗಳ ಪಾತ್ರ ಪ್ರಾಮುಖ್ಯತೆ ಪಡೆದಿರುತ್ತವೆ ಹಾಗೂ ಶಾಸನೋಕ್ತ ಕಲಾಕಾರರಾಗಿರುತ್ತಾರೆ. ರೂವಾರಿಗಳ ಹೆಸರಿನ ಹಿಂದೆ ಕಲ್ಕುಟಿಗ, ಕಲ್ಲಂಕಡಿದಾ, ಕಂಡರಣಿಕಾರ, ಸರಸ್ವತೀಗಣ, ಶಾಸನಾಚಾರ್ಯ, ಸೂತ್ರದಾರಿ, ವಿಶ್ವಕರ್ಮ, ಬಡಗಿ, ಆಚಾರಿ, ರೂವಾರಿಗಳ ಉಲ್ಲೇಖವಿರುತ್ತದೆ. ಇವರ ಹೆಸರಿಗೆ ಓಜ, ಆಚಾರಿ, ಶಿಲ್ಪಿ ಉಪಸರ್ಗಗಳಿವೆ. ಇದಲ್ಲದೆ ಕಂಡರಿಸು, ಹೊಯ್, ಪೊಯ್ ಇತ್ಯಾದಿ ಪದಗಳು ಸೂಚಕವಾಗಿವೆ. ಶಾಸನ ಕವಿಗಳನ್ನು ಗುರುತಿಸುವಾಗ ಬೇಗೂರಿನ ಶಾಸನದಲ್ಲಿ ಕವಿರಾಜ ಪಂಡಿತ ಮಾಳಯ್ಯನ ಕವಿತೆ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೦೫, ಕ್ರಿ.ಶ.೧೧೯೩) ಶ್ರೀ ಮತ್ ಸಹಜ ಸಾರಸ್ವತ/ವಾಚಕ ವಾರಿ ಜಾಸನಂ ನಾನಾ ವಿಧಾವ ಧಾರಣ ಚಕ್ರವರ್ತಿ ಮಲ್ಲಿಕಾರ್ಜುನ ಭಟ್ಟಂ ಕಾವಿರಾಜ ಸಂಭವಂ (ಎ.ಕ-೭, ಶಿಕಾರಿ.೯೮, ಕ್ರಿ.ಶ.೧೧೦೩) ಗೊಬ್ಬರ ಧಾರಣಾ ಸಾರ್ವಭೌಮ ಮಲ್ಲಿಕಾರ್ಜುನ ಭಟ್ಟಂ ಸುಕವಿಂದ್ರ ಷಣ್ಮುಖಂ (ಎ.ಕ-೭, ಶಿಕಾರಿ.೯೯, ಕ್ರಿ.ಶ.೧೧೦೩) ಮಲ್ಲಿಕಾರ್ಜುನ ಭಟ್ಟನು ೯೮(೧೧೧೨)ಮತ್ತು ೯೯(೧೧೧೨) ಶಾಸನಗಳಿಗೆ ಸಾಹಿತ್ಯ ಪಾಠವನ್ನು ಒದಗಿಸಿದನು.

ತಾಳಗುಂದ ಶಾಸನದಲ್ಲಿ ಲಿಪಿಕಾರರ ಬಗ್ಗೆ ತಿಳಿಸಿದೆ. ಕುಬ್ಜಂ ಸ್ವಕಾವ್ಯಮಿದಶ್ಮತಲೇ ಲೀಲೇಖ ಎಂಬ ಉಲ್ಲೇಖವಿದೆ.(ಎ.ಕ-೭, ಶಿಕಾರಿ.೨೪, ಕ್ರಿ.ಶ.೫ನೇ ಶ) ಕೋಮ್ಮರಾಜಂ ಬರೆವರ ಬದಗಂ ಭಾರತೀಕರ್ಣ್ಣಪೂರಂ ಬಿರುದುಗಳು ಇವನ ಲಿಪಿ ಸೌಂದರ್ಯ ಸಿದ್ಧಿಯನ್ನು ಸಾರುತ್ತವೆ (ಎ.ಕ-೭, ಶಿಕಾರಿ.೨೯೩, ಕ್ರಿ.ಶ.೧೦೮೦) ಅದೇ ಶಾಸನದಲ್ಲಿ ಶಾಸನದ ರೂವಾರಿ ಬಗ್ಗೆ ವ್ಯಕ್ತ ಪಡಿಸುತ್ತದೆ. ಶಿಲ್ಪಿ ಲಲಾಟ ಪಟ್ಟಂ ಸರಸ್ವತಿ ಗಣ ಪಾದ ಪಂಕಜ ಭ್ರಮರಂ ಜಿನಪಾದಾರಾದಕಂ ಪದ್ಮೋಜನ ಶಿಲ್ಪಿ ಕಾಕರ್ಮ ಎಂಬ ಅಂಶ ಕಾಣಬಹುದು. (ಎ.ಕ-೭, ಶಿಕಾರಿ.೨೯೩, ಕ್ರಿ.ಶ.೧೦೮೦) ಸಂಸ್ತ್ರಕರ್ಮ್ಮಿಳ ಚಾವುದ್ದೋಜ ಖಣ್ದರಿಸಿದಂ(ಎ.ಕ-೭, ಶಿಕಾರಿ.೧೬೯, ಕ್ರಿ.ಶ.೧೦೬೭) ರಾಜ ಮರ್ಯಾದೆಯಿಂದ ಮೆರೆದ ಶಿಲ್ಪಗಳಾಗಿದ್ದಾರೆ. ಕೆಲವರು ಸಮಾಜದ ಪುಣ್ಯಕಾರ್ಯಗಳಲ್ಲಿ ಪಾಲುಗಾರರಾದುದಕ್ಕೂ ಹೀಗೆ ನಿರ್ದಶನಗಳುಂಟು. ಸಿಲ್ಪಿಗಳತಿ ವಿಮಳಗುಣಾ/ಕಲ್ಪರ್ಬಾವಣನು ಮೆಸೆವ ರಾವಣನುಂಸ / ತ್ಕಲ್ಪರ್ಥ ಮ / ಶ್ರವಣಾ / ನಲ್ಪಸೋರ್ದಾರುದಾತ್ತ ವಿಮಳಚರಿತ್ರಕ...... ಎನಿಸಿದ ಬಾವಣನುಂ ರಾಣನು ಮಿರ್ಬ್ಬರುಂ ನಿಜ ಶಿಲ್ಪಕುಳಕಳಂಕಮಂ ಕಳೆಯಲೆಂದು ಕುಸುಮೇಶ್ವರ ದೇವರ ಪ್ರತಿಷ್ಠೆಯಂ ಮಾಡಿದ (ಎ.ಕ-೭, ಶಿಕಾರಿ.೧೧೨, ಕ್ರಿ.ಶ.೧೧೩೯) ಶಾಸನವೂ ಸಾಹಿತ್ಯದಲ್ಲಿ ಅಳೆಯುವಾಗ ಚಂಪೂಕಾವ್ಯಗಳ ಉಲ್ಲೇಖ ಕಾಣಬಹುದು. (ಎ.ಕ-೭, ಶಿಕಾರಿ.೧೩೬, ಕ್ರಿ.ಶ.೧೦೬೮) ಕಂದಪ್ರಾಸರಹಿತವಾಗಿದೆ. (ಎ.ಕ-೭, ಶಿಕಾರಿ.೧೨೩, ಕ್ರಿ.ಶ.೧೧೪೯) ಶಿಕಾರಿಪುರ ತಾಲ್ಲೂಕಿನ ಕ್ರಿ.ಶ ೧೦೭೬ರ ವೀರಗಲ್ಲನು ಜಕ್ಕೋಜ ಮಾಡಿದನು. ಇವನಿಗೆ ಚಿತ್ತಾರದ ಜಕ್ಕ ಎಂದು ಕರೆಯುತ್ತಿದ್ದರೆಂದು ಶಾಸನದಿಂದ ತಿಳಿಯಬಹುದು. ಆ ವೀರಗಲ್ಲನ್ನು ಮಾಡಿದಕ್ಕಾಗಿ ಅವನಿಗೆ ಸರ್ವ ಭೂಮಿಯನ್ನು ಉಂಬಳಿಯಾಗಿ ನೀಡಿದರೆಂದು ಶಾಸನವು ಉಲ್ಲೇಖಿಸುತ್ತದೆ(ಕೆ.ಜಿ.ಭಟ್ ಸೂರಿ (ಸಂ), ೨೦೦೯, ಕರ್ನಾಟಕ ಶಾಸನ ಸಂಶೋಧನೆ, ಹಂಪಿ).

ಯಾವುದೇ ಒಂದು ಆಳ್ವಿಕೆಯ ಅವಧಿಯ ಘಟನೆಗಳನ್ನು ಕಾಲನುಕ್ರಮಸಾರವಾಗಿ ನಿರೂಪಿಸುವ ಪದ್ಧತಿಯೂ ಶಾಸನಗಳಲ್ಲಿ ಕಂಡು ಬರುತ್ತವೆ. ಶಾಸನಗಳನ್ನು ಹಾಕಿಸಲು ಹಲಾವಾರು ಉದ್ದೇಶಗಳು ಕಾಣಬಹುದು. ಅಂದರೆ ದಾನವನ್ನು ಕೊಡುವ ವ್ಯಕ್ತಿಯ ಉದಾರ ದೃಷ್ಠಿ, ಹೆಸರು ಶಾಶ್ವತವಾಗಿ ನಿಲ್ಲಬೇಕೆಂಬ ಅಂಶ, ರಾಜಾಜ್ಞೆಗಳನ್ನು ಪ್ರಸಾರ ಮಾಡುವ ಸಾಧಕವಾಗಿದೆ. ಈ ಅಂಶಗಳು ರಾಜನೋ, ಖಾಸಗಿಯವರೋ, ಊರಿನವರೋ, ಕುಟುಂಬದವರೋ ಹಾಕಿಸಿದ್ದಾಗಿದೆ. ಶಾಸನದ ಮೂಲ ಅರ್ಥ ರಾಜಾಜ್ಞೆ ಎಂಬುದು ಮೊದಲ ಹಂತ. ನಂತರದಲ್ಲಿ ಇದು ಬೇರೆ ಬೇರೆ ಸ್ಥಿತಿಯನ್ನು ಕಂಡುಕೊಂಡಿದೆ. ಹಾಗಾಗಿ ಶಾಸನ ವೈವಿಧ್ಯತೆಯ ಅಧ್ಯಯನವನ್ನು ಶಿಕಾರಿಪುರ ತಾಲ್ಲೂಕನ್ನು ಸೀಮಿತಮಾಡಿಕೊಂಡು ಇದರ ಅಧಿಕಾರ ನಿರ್ವಹಿಸಿದ ಅರಸರ ಕಾಲದ ಶಾಸನಗಳನ್ನು ಆಧರಿಸಿ ಅಧ್ಯಯನ ಮಾಡಲಾಗಿದೆ. ಶಿಕಾರಿಪುರ ತಾಲ್ಲೂಕಿನಲ್ಲಿ ಕಾಣಬಹುದಾದ ಶಾಸನಗಳಲ್ಲಿ ಹೆಚ್ಚಾಗಿ ದಾನ ನೀಡಿದ್ದನ್ನು ಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲಿ ಅಧ್ಯಯನವನ್ನು ಕೈಗೊಳ್ಳುವಾಗ ತನ್ನದೇ ತನವನ್ನು ಬಿಚ್ಚಿ

ತೋರ್ಪಡಿಸುತ್ತವೆ. ದತ್ತಿಗೆ ಸಂಬಂಧಿಸಿದಂತೆ ದೇವತೆಗಳಿಗೆ, ದೇವಾಲಯಗಳ ಪರವಾಗಿ ಅರ್ಚಕರಿಗೆ, ಸಂಘಸಂಸ್ಥೆಗಳಿಗೆ ನೀಡಿದ ದತ್ತಿಗಳನ್ನು ದಾನಗಳನ್ನು ಹೇಳುವ ಶಾಸನಗಳು ಈ ವರ್ಗದಲ್ಲಿ ಅಳವಡಿಸಲಾಗಿದೆ. ಚರಿತ್ರೆ ಇವುಗಳಲ್ಲಿ ಅನುಷಾಂಗಿಕ ಸಾಮಾಗ್ರಿಯಾಗಿ ಮಾತ್ರ ಕಾಣಿಸಿಕೊಳ್ಳುತ್ತದೆ.

ಶಾಸನ ಎಂಬ ಮಾತು ಮೊದಲು ರಾಜಾಜ್ಞೆಯನ್ನು ಸೂಚಿಸುತ್ತದೆ. ಈ ರಾಜಾಜ್ಞೆ ಅಲ್ಲಿಯ ಪ್ರಾದೇಶಿಕ ಜನರಿಗೆ ನೀಡುವ ಡಂಗುರ ವಾಕ್ಯವಾಗಿದ್ದು, ಇದನ್ನು ಮೀರಿದವರಿಗೆ ಶಿಕ್ಷೆಯನ್ನು ಕೂಡ ವಿಧಿಸಲಾಯಿತು. ಹಾಗಾಗಿ ಇದು ಆಜ್ಞೆ ಎಂಬ ರೂಪವನ್ನು ಪಡೆದುಕೊಂಡಿದೆ. ಶಾಸನ ಎಂದರೆ ಕೌಟಿಲ್ಯನ ದೃಷ್ಟಿಕೋನದಲ್ಲಿ ರಾಜಾಜ್ಞೆಯಾಗಿತ್ತು. ಈ ಶಾಸನಗಳು ದಾನ ಪ್ರತೀಕವಾಗಿದ್ದರೆ ಅವುಗಳ ರಾಜನ ವಂಶದ ಚಿಹ್ನೆ, ದಾನ ಪ್ರಮಾಣಿಕೃತ, ರಾಜನ ಸಹಿ, ದಾನ, ಕಾಲ ಇತ್ಯಾದಿ ವಿಚಾರಗಳು ಒಳಗೊಂಡಿರುತ್ತವೆ. ಇವು ಹೆಚ್ಚಾಗಿ ತಾಮ್ರ ಶಾಸನಗಳನ್ನು ಉಲ್ಲೇಖಿಸಬಹುದು.

ಮಂಗಳ ಶ್ಲೋಕದಿಂದ ಶಾಸನಗಳು ಪ್ರಾರಂಭವಾಗುತ್ತವೆ. ಅವುಗಳ ಆರಂಭದಲ್ಲಿ ಮಂಗಳವಾಚಕ ಪದಗಳಾದ ಸ್ವಸ್ತಿ, ಶ್ರೀ, ಓಂ, ಸ್ವಸ್ತಿಶ್ರೀ ಇತ್ಯಾದಿ ಇರುವುದು ಕಾಣಬಹುದು. ಹಾಗೇ ಶ್ಲೋಕಗಳು ಶೈವ ಶಾಸನವಾಗಿದ್ದರೆ ಶಿವಸ್ತೋತ್ರದಿಂದಲೋ, ವೈಷ್ಣವ ಶಾಸನವಾಗಿದ್ದರೆ ವಿಷ್ಣು ಸುತ್ತಿಯಿಂದಲೋ, ಜೈನ ಶಾಸನಗಳಾಗಿದ್ದರೆ ಜಿನ ಸ್ತುತಿಯಿಂದಲೋ ಪ್ರಾರಂಭವಾಗಿರುತ್ತವೆ. ಇದನ್ನು ಅನುಕರಿಸಿ ಹೇಳುವಾಗ,

ವಿಶುದ್ಧ ಜ್ಞಾನ ದೇಹಾದ ತ್ರಿವೇದೀ ದಿವ್ಯ ಚಕ್ಷುಷೇ
ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನಮಸ್ಸ್ಯೋಮರ್ಧಧರಿಣೇ
(ಎ.ಕ-೭, ಶಿಕಾರಿ.೧೪, ಕ್ರಿ.ಶ.೧೦೮೯)

ಎಂಬುದಾಗಿ ಶಿವಸ್ತುತಿಯನ್ನು ಹೇಳುತ್ತದೆ. ಇನ್ನೊಂದು ಉದಾಹರಣೆಯೆಂದರೆ

ಪ್ರತ್ಯಕ್ಷ ವಸ್ತು ವಿಷಯಮ ಜಗದ್ಧಿತಾಯ
ವಿಶ್ವಸ್ಥಿತಿ ಪ್ರಳಯ ಸಂಭವಕಾರಣಾಯ
ಸರ್ವಾತ್ಮನೇ ವಿಜಿತಕೋಪ ಮನೋಭವಾಯ
ತಭ್ಯಂ ನಮಃ ತ್ರಿಭುವನ ಪ್ರಭವೇ ಶಿವಾಯ//
(ಎ.ಕ-೭, ಶಿಕಾರಿ.೧೬, ಕ್ರಿ.ಶ.೧೦೮೫)

ಎಂಬ ಉಲ್ಲೇಖ ಬೇಗೂರಿನ ಶಾಸನದಲ್ಲಿ ದೊರೆಯುತ್ತದೆ. ಅದೇ ರೀತಿ ಸುಂದರವಾದ ಶಿವಸ್ತೋತ್ರಗಳಲ್ಲಿ ಕಾಣುವ ಶಾಸನವೆಂದರೆ,

ಶ್ರೀಮತ್ತ್ರೈಲೋಕ್ಯ ವಾದಸ್ಯ ಲಕುಳೀಶಸ್ಯ ಶಾಸನಂ
ಜಯತ್ಯನುಗತಾತ್ಮೇಷ್ಟ ದೃಷ್ಟಾದೃಷ್ಟ ಫಲಪ್ರದಂ
ಯೋ ಧರ್ಮಾಲಿನಟೀಂ ಶಾಸ್ತಿ ವೇದ ದಂಡ ದರೋ ನಟ:
ತಚ್ಛಾಸನಂ ಜಯತ್ಯೇತತ್ತ್ರಿಲೋಕೀ ಮಂಗಳಪ್ರದಂ
(ಎ.ಕ-೭, ಶಿಕಾರಿ.೯೯, ಕ್ರಿ.ಶ.೧೧೧೩)

ಎಂದು ಹೇಳುತ್ತಾ ಶಿವನ ಅವತಾರಗಳಲ್ಲಿ ಲಕುಲೀಶನ ಪ್ರಾರ್ಥನೆಯನ್ನು ಕಾಣಬಹುದು. ವೈಷ್ಣವ ಶಾಸನಗಳಲ್ಲಿ ವಿಷ್ಣು ಸ್ತುತಿಗಳನ್ನು ಪರಿಗಣಿಸುವಾಗ

ನಮಸ್ತುಂಗ ಶಿರಶ್ಚುಂಬಿಚಂದ್ರ ಚಾಮರ ಚಾರವೇ/
ತ್ರೈಲೋಕ್ಯ ನಗರಾಂಭ ಮೂಲ ಸ್ತಂಭಾಯ ಶಂಭವೇ//
ನಮಸ್ತಾಂಬ್ರಃ ಜಜಾಳ ಬಾಳ ಚಂದ್ರಾರ್ಧ್ದ ಧಾರಿಣೇ/
ಬ್ರಹ್ಮಾಂಡ ಮಿಂಡ ಪಾರಂಭಾ ಪೂರ್ಣ್ಣಕುಂಭಾಯ ಶೇಳವೇ
ಜಯತ್ಯಾವಿಃಕೃತಃ ವಿಷ್ಣೋರ್ವ್ಯ ರಾಹಂ ಕ್ಷೋಭಿತಾರ್ಣ್ಣ ವಂ/
ದಕ್ಷಿಣೋನ್ನತದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪ://
(ಎ.ಕ-೭, ಶಿಕಾರಿ.೧೩೭, ಕ್ರಿ.ಶ.೧೧೧೪)

ವೈಷ್ಣವ ಚೂಡಾಮಣಿಯ ಬಗ್ಗೆ ತಿಳಿಸುತ್ತ ಶಿವನ ಸ್ತುತಿಗಳನ್ನು ಇದು ತಿಳಿಸುತ್ತದೆ. ವಿಷ್ಣುವಿನ ಸ್ತುತಿ ಇರುವ ಶಾಸನದಲ್ಲಿ

ಶ್ರೀ ಓಂ ನಾರಾಯಣಾಯ/
ಜಯತ್ಯಾವಿಷ್ಕೃತಂ ವಿಷ್ಣೋರ್ವ್ಯಾ ರಾಹಂ ಕ್ಷೋಭಿತಾರ್ಣ್ಣ
ವಂದಕ್ಷಿಣೋನ್ನತ ದಂಷ್ಟ್ರಾಗ್ರವಿಶ್ರಾಂತ ಭುವನಂ ವಪು://
(ಎ.ಕ-೭, ಶಿಕಾರಿ.೧೨೩, ಕ್ರಿ.ಶ.೧೧೫೫)

ಕಂಡುಬರುವ ಸ್ತುತಿಗಳಾಗಿ ಕಾಣಬಹುದು. ಅದೇ ರೀತಿ ಜೈನ ಶಾಸನಗಳು ಸಾಮಾನ್ಯವಾಗಿ ಜಿನ ಸ್ತುತಿಯಿಂದ ಆರಂಭವಾಗಿವೆ. ಅವುಗಳನ್ನು ಕಾಣುವಾಗ ಬಳ್ಳಿಗಾವಿಯ ಶಾಸನ

ಸ್ವಸ್ತಿ ಸಮಸ್ತ ಸುರಾ ಸುರ ಮಸ್ತಕಮಕುಟಾಶ್ಮ ಜಾಳ ಜಳ ಧೌತ ಪದಂ
ಪ್ರಸ್ತುತ ಜಿನೇಂದ್ರ ಶಾಸನ ಮಸ್ತು ಚಿರಂಭದ್ರ ಮಖಿಳ ಭವ್ಯಜನಾನಂ
ಶ್ರೀ ಮತ್ಸರ ಮಗಂ ಭೀರ ಸ್ಯಾದ್ಯಾದಾ ಮೋಘಲಾಂಚ್ಛನಂ
ಜೀಯಾತ್ತ್ರೈಲೋಕ್ಯನಾಥ ಶಾಸನಂ ಜಿನ ಶಾಸನಂ//
(ಎ.ಕ-೭, ಶಿಕಾರಿ.೧೨೪, ಕ್ರಿ.ಶ.೧೦೭೭)

ಎಂಬ ಉಲ್ಲೇಖ ದೊರೆಯುತ್ತದೆ. ಇನ್ನೊಂದು ಶಾಸನದಲ್ಲಿ

ಶ್ರೀಮತ್ಪ ಮಗಂ ಭೀರಸ್ಯಾದ್ಯಾದಾಮೋಘ ಲಾಂಛನಂ
ಜೀಯಾತ್ತ್ರೈಲೋಕ್ಯನಾಥ ಶಾಸನಂ ಜಿನ ಶಾಸನಂ//

ಎಂದು ಬಳ್ಳಿಗಾವಿಯ ಶಾಸನಗಳಲ್ಲಿ ಮತ್ತೆ ಮತ್ತೆ ಕಾಣಬಹುದು.

ಹೀಗೆ ಶಾಸನಗಳಲ್ಲಿ ಶಿವ, ವಿಷ್ಣು, ಜಿನರನ್ನು ಪ್ರಾರ್ಥನ ಶ್ಲೋಕಗಳಲ್ಲಿ ವ್ಯಕ್ತಪಡಿಸಿದ ಪರಿ ಇದಾಗಿವೆ. ನಂತರದಲ್ಲಿ ಶಾಸನವು ದಾನವನ್ನೊ, ದತ್ತಿಯನ್ನೊ ನೀಡಿದ್ದರ ಬಗ್ಗೆ ವಿವರಿಸುವ ಮೊದಲು ರಾಜನ ಉಲ್ಲೇಖಗಳು ಅನೇಕ ಶಾಸನಗಳಲ್ಲಿ ಕಾಣಬಹುದು. ಉದಾಹರಣೆಗೆ ಚಾಳುಕ್ಯ ಭರಣಂ ಶ್ರೀಮತ್ತಿ ಭುವನ ಮಲ್ಲ ದೇವರ ವಿಜಯ ರಾಜ್ಯ ಮುಕ್ತರೋತ್ತ (ಎ.ಕ–೭, ಶಿಕಾರಿ.೯೪, ಕ್ರಿ.ಶ.೧೧೯೪) ಚಾಳುಕ್ಯ ಭರಣಂ ತ್ರೈಲೋಕ್ಯ ಮಲ್ಲ (ಎ.ಕ–೭, ಶಿಕಾರಿ.೧೧೫, ಕ್ರಿ.ಶ.೧೧೫೬) ಚಾಳುಕ್ಯ ಭರಣಂ ಶ್ರೀಮದಾಹವ ಮಲ್ಲದೇವರ ರಾಜ್ಯ ಮುಕ್ತ (ಎ.ಕ–೭, ಶಿಕಾರಿ.೮೩, ಕ್ರಿ.ಶ.೧೦೫೮) ಇದರ ಜೊತೆಗೆ ಅತನ ಕಾಲಾವಧಿಯನ್ನು ಸೂಚಿಸಿರುತ್ತದೆ.

ರಾಜ್ಯ, ರಾಜ ಹಾಗೂ ಕಾಲಮಾನವನ್ನು ನೀಡಿದ ನಂತರವೇ ಆತನ ಸಂಸಾರ ಮನೆತನಗಳ ಬಗ್ಗೆ, ದಾನ/ದತ್ತಿ ಸ್ವೀಕರಿಸಿದ ವ್ಯಕ್ತಿಯ ಸ್ವವಿವರ ಕೂಡ ರೂಪಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತ ವಿಷಯವಾಗಿ ಆ ಕಾಲದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಇತ್ಯಾದಿ ಕ್ಷೇತ್ರಗಳಿಗೆ ಕುರಿತಾಗಿ ಚರ್ಚೆಗೆ ಎಳೆಯಲಾಗಿರುತ್ತದೆ. ಕೊನೆಯಲ್ಲಿ ಈ ಶಾಸನಗಳನ್ನು ಕಾಪಾಡಿಕೊಂಡು ಗೌರವಿಸಿಕೊಂಡು ಬರುವವರಿಗೆ ಶ್ರೇಯಸ್ಸು ಬಯಸಲಾಗಿದೆ. ಒಂದು ವೇಳೆ ಇದಕ್ಕೆ ವಂಚಿಸಿದ ವ್ಯಕ್ತಿಗಳಿಗೆ ಕಷ್ಟಪರಗಳನ್ನು ಕೆಲವೊಮ್ಮೆ ಬಳಸಿಕೊಂಡು ಶಾಪಗಳನ್ನು ನೀಡಿರುವುದು ಕಾಣಬಹುದು.

ಶಾಸನದ ಕೊನೆಯಲ್ಲಿ ಇದನ್ನು ರಚಿಸಿದ ಕವಿ, ಶಿಲ್ಪಿ ಇತ್ಯಾದಿಯಾಗಿ ಅವರ ಹೆಸರುಗಳನ್ನು ಕಾಣಬಹುದು. ಬಳ್ಳಿಗಾವಿಯ ಶಾಸನವೊಂದರಲ್ಲಿ "ವಿನುತ ಮಧುರೋಕ್ತಿಯಿಂತಂನನತಿಶಯ ವಚೋವಿಭೂತಿಗಿದುವೆಯ ಶಾಶ್ಯಾಸನಮಾದುದೆಂಬಿನಂ ಶಾಸನ ಮಾನಿದಂ ಬರೆದನಾಶುಕ ವಿನಿಟಳಾಕ್ಷಂ//"ಹೀಗೆ ಬರೆದವನ ಹೆಸರು ಉಲ್ಲೇಖವಿದೆ (ಎ.ಕ–೭, ಶಿಕಾರಿ.೯೮, ಕ್ರಿ.ಶ.೧೧೧೦೩) ಅದೇ ರೀತಿ ಶಾಸ್ತ್ರ ಕರ್ಮಚಾವುಂಡೋಜಂ ಕಂಡರಿಸಿದ ಚಾವುಂಡನ ಬಗ್ಗೆ ಉಲ್ಲೇಖ ಸಿಗುತ್ತದೆ. (ಎ.ಕ–೭, ಶಿಕಾರಿ.೧೪೯, ಕ್ರಿ.ಶ.೧೦೬೭) ಶಿಲ್ಪಿಯ ಹೆಸರು ತುಂಬ್ರಿ ಹೊಸೂರಿನ ಶಾಸನವೊಂದರಲ್ಲಿ

ದೊರೆತಿದೆ. ಶಿಲ್ಪಿಕ ಲಲಾಟ ಪಟ್ಟಂ ಸರಸ್ವತೀಗಣ ಪಾದಪಂಕಜ ಭ್ರಮರಂಜನ ಪಾದಾರಾಧಕಂ ಪದ್ಮೋಜನ ಶಿಲ್ಪಿಕಾಕರ್ಮ ಎಂದು ಉಲ್ಲೇಖ ನೋಡಬಹುದು (ಎ.ಕ-೭, ಶಿಕಾರಿ.೨೩೬, ಕ್ರಿ.ಶ.೧೦೮೦).

ಶಿಕಾರಿಪುರ ತಾಲ್ಲೂಕಿನ ಒಂದು ಇಣುಕ ನೋಟದಲ್ಲಿ ಇವರ ಹೆಚ್ಚಿನ ಅಂಶಗಳು ಶಾಸನಗಳ ಮೂಲಕ ದೊರೆಯುತ್ತವೆ. ಈ ನಿಟ್ಟಿನಲ್ಲಿ ಶಾಸನಗಳನ್ನು ಅಧ್ಯಯನ ದೃಷ್ಟಿಕೋನದಲ್ಲಿ ವೈವಿಧ್ಯತೆಯ ಅಳತೆಗೋಲಿನಲ್ಲಿ ಸಿಲುಕಿಸಿ ಅರ್ಥತೆಗಳ ಅಂಶಗಳ ಕಡೆ ಎಡೆಮಾಡಿಕೊಂಡಾಗಲೂ ಅವಕಾಶಗಳು ಸಿಗುತ್ತವೆ. ಈ ಹಿನ್ನೆಲೆಯಲ್ಲಿ ಶಾಸನಗಳನ್ನು ದಾನ/ದತ್ತಿಯ ರೂಪದಲ್ಲೋ, ತಾಮ್ರ ಶಾಸನದ ರೂಪದಲ್ಲೋ ಅಥವಾ ಸ್ಮಾರಕ ರೂಪದಲ್ಲೋ ವಿಂಗಡಿಸಿ ಅಧ್ಯಯನ ಕೈಗೊಳ್ಳಲಾಗಿದೆ.

ದಾನ/ದತ್ತಿ ಶಾಸನಗಳು :

ದಾನ ಅಥವಾ ದತ್ತಿಯ ಪ್ರಕ್ರಿಯೆಯಲ್ಲಿ ಶಾಸನಗಳನ್ನು ಅವುಗಳ ದಾನವನ್ನು ದೇವಸ್ಥಾನಗಳಿಗೆ, ಮಠಗಳಿಗೆ, ವಿದ್ವಾಂಸರಿಗೆ, ಗುರುಗಳಿಗೆ, ವೈಯಕ್ತಿಕವಾಗಿಯೋ, ವಿದ್ಯಾರ್ಥಿಗಳಿಗೆ ನೀಡಿದು. ಅದರಲ್ಲಿ ಹಣದ ರೂಪವಾಗಿಯೋ, ಮನೆಯ ರೂಪವಾಗಿಯೋ, ಹೊಲದ ರೂಪವಾಗಿಯೋ ಅಂದರೆ ಅದರ ಒಂದು ಆದಾಯದ ಭಾಗವಾಗಿಯೋ ಜೊತೆಗೆ ಗ್ರಾಮದ ರೂಪದಲ್ಲೋ ನೀಡಿರುವ ಅಂಶಗಳು ಶಾಸನಗಳ ಮೂಲಕ ಪ್ರತಿಕ್ರಿಯೆಯಾಗಿರುವುದು ಕಂಡುಕೊಳ್ಳಬಹುದು. (ಭಗವತಿ.ಎಸ್.ಎಸ್.೨೦೦೪ ಪುಟ ೧೨೨) ದಾನ ಮಾತ್ರದಿಂದ ದಾನದ ಫಲವು ಸಿದ್ಧಿಸುವುದರಿಂದ ಶಾಸನದ ಅವಶ್ಯಕತೆ ಎಲ್ಲಿ ಎಂಬ ಪ್ರಶ್ನೆ ಏಳಬಹುದು. ದಾನವು ಅಭಿವೃದ್ಧಿ ಹೊಂದಬೇಕಾದರೆ ಇನ್ನೂ ಅತಿಶಯವಾದ ಫಲವನ್ನು ಪಡೆಯಬೇಕಾದರೆ ಶಾಸನವನ್ನು ಹಾಕಿಸಲೇಬೇಕು. ಈ ದಾನ ಅಥವಾ ದತ್ತಿಯ ಪ್ರಕ್ರಿಯೆಗಳು ಧಾರ್ಮಿಕವಾಗಿ ಶೈಕ್ಷಣಿಕವಾಗಿ ನೀಡಿದ್ದನ್ನು ಇಲ್ಲಿ ಸ್ಮರಿಸಲು ಸಾಧ್ಯತೆಗಳು ಹೆಚ್ಚಿನ ಒತ್ತು ನೀಡಲಾಗಿದೆ. ಜಂಬೂರಿನ ಮಠದಲ್ಲಿ ನಡೆಯುತ್ತಿದ್ದ ಪಾಠ ಶಾಲೆಯೊಂದರಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಭೂಮಿಯನ್ನು ಅನೇಕ ಕಾರಣಗಳಿಗೆ ಬಿಟ್ಟ ಸಂಗತಿಗಳನ್ನು ಶಾಸನ ತಿಳಿಸುತ್ತದೆ. (ಭಗವತಿ ಎಸ್.ಎಸ್. ಮೇಲಿನಮನಿ.ಹೆಚ್.ಎಸ್,೨೦೦೪, ಕನ್ನಡ ಶಾಸನ ಅಧ್ಯಯನ, ಪುಟ-೧೨೨).

ದಾನ ಫಲ ಮಹಾತ್ಮೆಯನ್ನು ವಿವರಿಸಿ ದಾನ ನೀಡುವಂತೆ ಪ್ರೇರಣೆ ನೀಡಲು ಧರ್ಮ ಪ್ರಸಂಗಗಳನ್ನು ಏರ್ಪಡಿಸಲಾಗುತ್ತಿತ್ತು. ಧರ್ಮ ಪ್ರಸಂಗವೊಂದರಲ್ಲಿ ವಿವರಿಸಲಾಗಿರುವ ದಾನ ಫಲ ಮಹಾತ್ಮೆಯು ಹೀಗಿದೆ. ಅಂತ್ಯ ಧರ್ಮ ಮರಪುಟ್ಟಿಸಿ ಭೂಮಿ ದಾನದ ಮಹಾತ್ಯ ಮುಮನನ್ನು ದಾನದ ಮಹೋನ್ನತಿಯುವಂ ವಿದ್ಯಾದಾನದ

ಮಹತ್ವ ಮುವಂ ಪೇಳ್ವುದೆಂತೆಂದಡೆ//ಶ್ಲೋಕ//ಸರ್ವೋಷಾಮೇವ ದಾನನಂ ಭೂಮಿದಾನಂ ಪರಂ ಸ್ಮಿತಂ/ಸರ್ವ್ವಪಾಪಾಹರಂ ತದ್ವಿಸ್ವಗ್ಗ್ಯಂ ಚಾಹುರ್ಮ್ಮನೀಷಣಃ// ತಪಸ್ವೀ ನೋಧಯ ಜ್ವಾನಃ ಸತ್ಯಮಂ ತೋ ಬಹುಶ್ರುತಾಃ ಗುರುದೇವ ಪರಶ್ಚೈವನಾತಿ ಕ್ರಮಂತಿ ಭೂಮಿಪ//ನಾಸ್ತಿ ಭೂಮಿಸಮೋದಾನಂ ನಾಸ್ತಿ ಭೂಮಿ ಸಮೋನಿಧಿ: ನಾಸ್ತಿ ಸತ್ಯ ಸಮೋಧರ್ಮ್ಮೋನ ಪಾಪಮನೃತಾತ್ಪರಂ//ಸರ್ವ್ವ ಸಸ್ಯಜಲೋಪೇತಂ ಸರ್ವ್ವ ಬಾಧಾ ವಿವರ್ಜಿತಂ/ಗ್ರಾಮಂ ಶಿವಾಯಯೋದದ್ವಾತ್ತ ಸ್ಯಪುಣ್ಯ ಫಲಶ್ರುಣು// ಸೂರ್ಯ್ಯ ಕೋಟಿ ಪ್ರತಿಕಾಶೈರ್ದ್ದಿ ವ್ಯಸ್ತ್ರಿ ಕೋಟಿ ಸಂಯುತ್ಯೆ:// ಹೀಗೆ ಧರ್ಮ ಪ್ರಸಂಗಗಳಲ್ಲಿ ವಿವಿಧ ಬಗೆಯ ದಾನಗಳು ಮತ್ತು ಅವುಗಳಿಂದ ಲಭಿಸುವ ಫಲಗಳನ್ನು ವಿವರಿಸಲಾಗುತ್ತಿತ್ತು. (ಎ.ಕ-೭, ಶಿಕಾರಿ.೧೮೫, ಕ್ರಿ.ಶ.೧೧೪೯)

ದೇವಾಲಯಗಳ ಮತ್ತು ಅವುಗಳ ಜೊತೆಗೆ ಇದ್ದ ಮಠಗಳ ಎಲ್ಲಾ ಕಾರ್ಯಗಳನ್ನು ಸಮರ್ಪಕವಾಗಿ ನಡೆಸಲು ಸೂಕ್ಷ್ಮಗಳನ್ನು ಗಮನಿಸಿ ನೀಡುತ್ತಿದ್ದ ದಾನದ ವಿವರಗಳನ್ನು ತಾಳಗುಂದದ ಒಂದು ಶಾಸನವು ಒದಗಿಸಿದೆ. ಧರ್ಮ ಪ್ರಸಂಗದ ಮೂಲಕ ದಾನ ಫಲವನ್ನು ವಿವರಿಸುತ್ತಾ ಶಾಸನವು "ಕೇಶವ ದಂಡನಾಯಕನು ಸ್ಥಾನಗೂಡ ಗ್ರಾಮಕ್ಕೆ ಬಂದು ಅಲ್ಲಿ ಪ್ರಣವೇಶ್ವರ ದೇವರಿಗೆ ವಿಶೇಷ ಪೂಜೆಯನ್ನು ಮಾಡಿಸಿ ಸ್ಥಾನಗೂಡ ಗ್ರಾಮದ ಮೂವತ್ತಿರ್ಚಾಸಿರ ಮಹಾಜನಗಳು, ಸ್ವಯಂ ಪಾಕಿದೇವರ ಮತ್ತವಲ್ಲಿ ನಡೆವನುಭವಣೆಕಾರಿ, ಹೆರ್ಗ್ಗಡೆ, ಕರಣಮನ್ನೆಯ ಮಂತಾದ ಸಮಸ್ತ ಪ್ರಭುಗಾವುಂಡುಗಳು ಹೆಗ್ಗಡೆ ಕರಣಗಳ ಸನ್ನಿಧಿಯಲ್ಲಿ ದೇವರ ಅಂಗಭೋಗ, ರಂಗಭೋಗ, ನಿತ್ಯ ನೈಮಿತ್ತಿಕ ಪೂಜೆ ಗದ್ದುಗೆ ಬಲಿಹೋಮ, ಚೈತ್ರ ಪವಿತ್ರ ಮಾಟಕೂಟನವಕರ್ಮ: ನಾಲ್ಕು ವೇದ ಖಂಡಿಕ, ಎರಡು ಭಟ್ಟವೃತ್ತಿಕಂ ನಡಕ್ಷರ ಸಿಕ್ಷೆ, ಆರು ಫಳಯಾರ ಖಂಡಿಕದ ಉಪಾಧ್ಯಾಯರು ಮತ್ತು ಛಾತ್ರದ ಗ್ರಾಸ, ವಸ್ತ್ರ, ಸತ್ರ ಇತ್ಯಾದಿಗಳಿಗೆ ನೀಡಿರುವ ದಾನಗಳನ್ನು ವಿವರಿಸಿದೆ. (ಎ.ಕ-೭, ಶಿಕಾರಿ.೧೮೫, ಕ್ರಿ.ಶ.೧೧೫೮) ಹೀಗೆ ದಾನಕ್ಕೆ ಕುರಿತಾಗಿ ಶೈಕ್ಷಣಿಕ ಹಾಗೂ ಧಾರ್ಮಿಕ ವಿಚಾರವಾಗಿ ಪ್ರಸ್ತಾಪಗಳು ಕಂಡು ಬರುತ್ತವೆ.

ಈ ದಾನ/ದತ್ತಿ ಎಂಬ ಅಂಶಗಳು ಮೂಡಿ ಬಂದಿರುವುದು ಕದಂಬರ ಕಾಲದಲ್ಲೆ. ಅಂದರೆ ಮಯೂರವರ್ಮ ತಾಳಗುಂದ ಅಗ್ರಹಾರ ಸ್ಥಾಪಿಸಿ ಬ್ರಾಹ್ಮಣ ಕುಟುಂಬಗಳಿಗೆ ದಾನ ನೀಡಿದ್ದನ್ನು ಶಾಸನದ ಮೂಲಕ ತಿಳಿಯಬಹುದು. ದಾನಗಳಲ್ಲಿ ಮೊದಲೇ ತಿಳಿಸಿದಂತೆ ಧಾರ್ಮಿಕ ದತ್ತಿ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ನೀಡಿದ ದಾನಗಳ ಶಾಸನಗಳನ್ನು ಬೇರೆ ಬೇರೆಯಾಗಿ ಅಧ್ಯಯನ ಮಾಡಲಾಗಿದೆ.

ಧಾರ್ಮಿಕ ದಾನ/ದತ್ತಿಯ ಶಾಸನಗಳು :

ಈಸೂರಿನಲ್ಲಿ ಸುರನೇಮಿದೇವರ ಗುಡ್ಡದೇವಿಸೆಟ್ಟಿ ಕ್ರಿ.ಶ.೧೦೮೦ರಲ್ಲಿ ಜಿನ ಬಸದಿಗೆ ಆಹಾರ ದಾನ ಮೊದಲಾದ ಸಂಗತಿಗಳಿಗೆ ಭೂ ದಾನದ ಉಲ್ಲೇಖ ಬರುತ್ತದೆ. (ಎ.ಕ-೭, ಶಿಕಾರಿ.೭, ಕ್ರಿ.ಶ.೧೦೮೦). ಬೇಗೂರಿನ ಅಗ್ರಹಾರದಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ಕಾಣಬಹುದು. ಕ್ರಿ.ಶ.೧೦೩೧ರಲ್ಲಿ ಚಾಳುಕ್ಯ ಜಯಸಿಂಹನ ಕಾಲದಲ್ಲಿ ಬೇಗೂರಿನ ಮಾರಸಿಂಗ ಗಾವುಂಡನ ತಮ್ಮ ದೇಕಗಾವುಂಡನು ಒಂದು ಶಿವಾಲಯ ಮಾಡಿಸಿದ್ದಾನೆ. ಅದಕ್ಕಾಗಿ ಮಾರಸಿಂಗ ಗೌಡನ ವಿನಂತಿಯ ಮೇರೆಗೆ ಚಾಳುಕ್ಯ ರಾಜ ಜಯಸಿಂಹ ದತ್ತಿ ಬಿಟ್ಟಿದ್ದಾನೆ. ಇದು ದೇಗುಲದ ಕೆರೆಯ ಕೆಳಭಾಗದ ಗದ್ದೆ, ತೋಟವನ್ನು ದಾನ ಬಿಟ್ಟಿರುವುದು ದೇವರ ಪೂಜಾ ನಿಮಿತ್ತ ಎಂಬುದು ಶಾಸನದಲ್ಲಿ ಉಲ್ಲೇಖವಿದೆ(ಎ.ಕ-೭, ಶಿಕಾರಿ.೨೦, ಕ್ರಿ.ಶ.೧೦೩೨). ಜಗದೇವರಸನು ತನ್ನ ಮಗ ಬರ್ಮರಸನ ಜೊತೆಗೆ ಚತುರ ಬುಧ ಜನ ಪರಿವಾರ ಸಹಿತ ಬಂದು ದಕ್ಷಿಣ ಕೇದಾರ ಮತ್ತು ಆಸ್ಥಾನದ ಆಚಾರ್ಯ ಗೌತಮಾರ್ಯನ ಗುಣಗಳನ್ನು ಹೇಳಿ ದೇವರಿಗೆ ಹಲವು ದಾನಗಳನ್ನು ನೀಡಿದ್ದಾನೆ(ಎ.ಕ-೭, ಶಿಕಾರಿ.೧೦೩, ಕ್ರಿ.ಶ.೧೧೪೯) ಹಾಗೆಯೇ ಮಾಯಿದೇವರಸನು ಬಳ್ಳಿಗಾವಿಗೆ ಬಂದು ಉಳಿದುಕೊಂಡು ಅಲ್ಲಿ ದೇವರ ಕಾರ್ಯ ಮಾಡುವಾಗ ಪಂಡಿತರ ವರ್ಣನೆ ಮಾಡಿದ್ದನ್ನು ಕೇಳಿ ಧರ್ಮದ ಹಿನ್ನೆಲೆಯಲ್ಲಿ ದಾನ ನೀಡಿದ್ದಾನೆ (ಎ.ಕ-೭, ಶಿಕಾರಿ.೧೦೪, ಕ್ರಿ.ಶ.೧೧೫೬). ಅದೇ ರೀತಿ ದೇವಾಲಯಕ್ಕೆ ದಾನ ನೀಡಿದ್ದನ್ನು ಬಳ್ಳಿಗಾವಿಯ ಕ್ರಿ.ಶ ೧೦೫೧ರ ಶಾಸನ ವ್ಯಕ್ತಪಡಿಸುತ್ತದೆ. (ಎ.ಕ-೭, ಶಿಕಾರಿ.೧೨೯, ಕ್ರಿ.ಶ.೧೦೫೧) ಕಾಳಿಕಾ ದೇವಿಯ ಸೇವೆಗಳಿಗಾಗಿ ಆಕೆಯ ಭಕ್ತನಾದ ಅಧಿಕಾರಿಯೊಬ್ಬನು ನೀಡಿರುವ ದಾನವನ್ನು ದಾಖಲಿಸಿದೆ. (ಎ.ಕ-೭, ಶಿಕಾರಿ.೧೩೩, ಕ್ರಿ.ಶ.೧೧೩೧)

ಮಹಾಪ್ರಧಾನ ದಂಡನಾಯಕ ಬರ್ಮ ದೇವರನ್ನು ಬಳ್ಳಿಗಾವಿಯ ಪೂಜಾರಿ ಸಿಂಗಣ ಮಾಡಿಸಿದ. ಮಲ್ಲಿಕಾರ್ಜುನ ದೇವ ಸ್ನಾನ ನೇವೇದ್ಯಕ್ಕೆ ಅಲ್ಲಿಯ ಕೆರೆಯ ಗದ್ದೆಯನ್ನು ದಾನ ಬಿಡಲಾಗಿದೆ(ಎ.ಕ-೭, ಶಿಕಾರಿ.೧೩೫, ಕ್ರಿ.ಶ.೧೦೭೮) ಸಹವಾಸಿ ಹರಪ ಭಟ್ಟನ ಕುಲವಧು ನಾಗಿಯಕ್ಕನು ತಾರಾಭಗವತಿಯನ್ನು ಮಾಡಿಸಿ ಹಲವು ದಾನಗಳನ್ನು ಬೌದ್ಧ ಭಳಾರರ ಕಲಂ ಕರ್ಚ್ಚಿಗೆ ನೀಡಿದ್ದಾಗಿದೆ. (ಎ.ಕ-೭, ಶಿಕಾರಿ.೧೬೯, ಕ್ರಿ.ಶ.೧೦೬೭) ಅದೇ ರೀತಿ ಶ್ರೀ ಮತ್ತು ಜಯನ್ತಿ ಪ್ರಬೌದ್ಧ ವಿಹಾರವನ್ನು ಮಾಡಿಸಿ ಅದಕ್ಕೂ ತಾನು ಮಾಡಿಸಿದ ತಾರಾಭಗವತಿಯ ಶ್ರೀ ಕೇಶವ ದೇವರ, ಲೋಕೇಶ್ವರ ದೇವ ಬೌದ್ಧದೇವರ ಸಮಸ್ತ ಪರಿಹಾರ ದೇವರ ಅರ್ಚನೆ ಪೂಜೆ ನಿಮಿತ್ತ ದಾನ ಬಿಟ್ಟಿರುವುದು ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೭೦, ಕ್ರಿ.ಶ.೧೦೬೫) ಧಾರ್ಮಿಕವಾಗಿ ಕಣ್ಣಸೋಗೆಯನ್ನು ಬ್ರಾಹ್ಮಣರಿಗೆ ದತ್ತಿ ಬಿಟ್ಟಿದ್ದನ್ನು ಕ್ರಿ.ಶ.೧೦೭೭ರ ಕಣ್ಣಸೋಗೆಯ ಶಾಸನದಲ್ಲಿ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೭೦, ಕ್ರಿ.ಶ.೧೦೭೭)

ಚೈತ್ರ ಪವಿತ್ರಗಳಿಗೆ ದೊರೆತಷ್ಟೆ ಮಹತ್ವವು ಸಂಕ್ರಾಂತಿ ಪರ್ವಕ್ಕೆ ಲಭಿಸಿವುದು ಗಮನಾರ್ಹವಾಗಿದೆ. ದೇವಾಲಯಗಳಿಗೆ ಸಂಬಂಧಿಸಿದ ಬಹುತೇಕ ದಾನಗಳು ಉತ್ತರಾಯಣ ಸಂಕ್ರಾಂತಿ ದಿನವೇ ನೀಡಲ್ಪಟ್ಟಿರುತ್ತವೆ. ಹಲವು ಶಾಸನಗಳು ಆ ದಿನವನ್ನು ಸಂಕ್ರಾಂತಿ ಪರ್ವ ಎಂದು ಉಲ್ಲೇಖಿಸಿವೆ. (ಎ.ಕ-೭, ಶಿಕಾರಿ.೨೯೨, ಕ್ರಿ.ಶ.೧೦೭೭) ಇದರಲ್ಲೆ ಮೆಚಿಸೆಟ್ಟಿ, ಅವನ ಹೆಂಡತಿ ದೋರಿಕಟ್ಟೆ ಮತ್ತು ದಾಸಿ ಸೆಟ್ಟಿಯರು ಧರ್ಮ, ಕಥಾ, ಕಥನ ಪ್ರಸಂಗದಿಂದ ಧರ್ಮ ಚಿತ್ತ ಹುಟ್ಟಿ ಮರಿಯಸೆಯಲ್ಲಿ ತಾವು ಪ್ರತಿಷ್ಠೆ ಮಾಡಿದ ಮಲ್ಲಿಕಾರ್ಜುನ ದೇವರ ನೈವೇಧ್ಯ ಮತ್ತಿತರ ಸೇವೆಗಳಿಗೆ ದಾನ ಬಿಟ್ಟಿದ್ದಾರೆ. (ಎ.ಕ-೭, ಶಿಕಾರಿ.೨೯೨, ಕ್ರಿ.ಶ.೧೦೭೭) ತುಂಬರು ಹೊಸೂರುನಲ್ಲಿ ಶ್ರೀ ಮಲ್ಲಿಕಾರ್ಜುನ ದೇವರ ದಾಸಿಯಾದ ಹಾಗೂ ಜಕ್ಕ ಸೆಟ್ಟಿಯ ಪತ್ನಿಯಾದ ಚಟ್ಟವೆಯು ಮೂಲಸ್ಥಾನ ರಾಮೇಶ್ವರ ದೇವರ ನೈವೇದ್ಯಕ್ಕೆಂದು ದಾನ ನೀಡಿದ ವಿವರಗಳಿವೆ. (ಎ.ಕ-೭, ಶಿಕಾರಿ.೨೯೬, ಕ್ರಿ.ಶ.೧೦೬೫) ಸಂಡದ ಶಾಸನದಲ್ಲಿ ಅಗ್ರಹಾರಕ್ಕೆ ಕ್ರಿ.ಶ.೧೦೮೯ರಲ್ಲಿ ಈಶ್ವರ ಜೀಯನ ಮಗ ದತ್ತಿಯನ್ನು ನೀಡಿದ ಬಗ್ಗೆ ಉಲ್ಲೇಖವಿದೆ (ಎ.ಕ-೭, ಶಿಕಾರಿ.೨೯೬, ಕ್ರಿ.ಶ.೧೦೬೫) ಇವುಗಳು ಧಾರ್ಮಿಕ ವಿಚಾರಗಳನ್ನು ಒಳಗೊಂಡಿರುವ ಶಾಸನಗಳಾಗಿವೆ. ಅದೇ ರೀತಿ ವಿದ್ಯಾದಾನಕ್ಕೆ ದಾನ ನೀಡಿದ್ದರ ಕುರಿತು ಶಾಸನಗಳನ್ನು ಕಾಣಲು ಸಾಧ್ಯವಾಗಿದೆ.

ಚಾಳುಕ್ಯ ತ್ರಿಭುವನ ಮಲ್ಲದೇವನ ಕಾಲದಲ್ಲಿ ಶಿಕಾರಿಪುರ ತಾಲ್ಲೂಕು ಬೇಗೂರು ಅಗ್ರಹಾರದಲ್ಲಿ ಸಾವಿರದ ಮುನ್ನೂರಕ್ಕೂ ಅಧಿಕ ಸಂಖ್ಯೆಯ ವೈದಿಕ ವಿದ್ವಾಂಸರಿದ್ದರೆಂದು, ಅಗ್ರಹಾರದ ದೇವಸ್ಥಾನವೂ ಸಹ ಒಂದು ಕಲಿಕೆಯ ಮಠವಾಗಿತ್ತು. ಮಹಾ ಮಂಡಳೇಶ್ವರ ಲಕ್ಷರಸನು ಕ್ರಿ.ಶ.೧೦೬೮ರಲ್ಲಿ ಇಲ್ಲಿಯ ವಿದ್ಯಾರ್ಥಿಗಳ ಆಹಾರಕ್ಕಾಗಿ ಭೂದಾನ ನೀಡಿದ್ದನು. (ಎ.ಕ-೭, ಶಿಕಾರಿ.೧೩, ಕ್ರಿ.ಶ.೧೦೬೮) ಅಲ್ಲಿಯ ಇನ್ನೊಂದು ಶಾಸನದಲ್ಲಿ ಶ್ರೀ ಮತ್ತಿಲೋಚನ ಪಂಡಿತ ದೇವರ ಕಾಲಂ ಕರ್ಚಿ ದತ್ತಿಯನ್ನು ಬಿಟ್ಟಿದ್ದರ ಬಗ್ಗೆ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೯, ಕ್ರಿ.ಶ.೧೦೬೬) ಚಾವುಂಡರಾಯನು ಬಳ್ಳಿಗಾವಿಯ ಶ್ರೀ ಮಜ್ಜಗದೇಕ ಮಲ್ಲೇಶ್ವರ ದೇವರ ಮುಂದೆ ಗಂಡು ಭೇರುಂಡ ಸ್ಥಂಭವನ್ನು ನಿಲ್ಲಿಸಿ ಶ್ರೀಮದ್‌ನಂತ ಶಿವಾಚಾರ್ಯರ ಕಾಲ್ತೊಳೆದು ದತ್ತಿ ಬಿಡಲಾಗಿದೆ (ಎ.ಕ-೭, ಶಿಕಾರಿ.೧೮೧, ಕ್ರಿ.ಶ.೧೦೪೭) ಇದರಿಂದ ವಿದ್ಯಾಭ್ಯಾಸದ ಸಂದರ್ಭದಲ್ಲಿ ನಿರಾತಂಕವಾಗಿ ನಡೆಯುತ್ತವೆ. ಊಟ, ಬಟ್ಟೆ, ವಸತಿಗಳಿಗಾಗಿಯೇ ಗುರು-ಶಿಷ್ಯರು ತೊಂದರೆ ಅನುಭವಿಸಿದರೆ ವಿದ್ಯಾಭ್ಯಾಸವು ಸುಗಮವಾಗಿ ನಡೆಯಲು ಸಾಧ್ಯವೇ ಇಲ್ಲವಾಗುತ್ತದೆ. ಇದರಿಂದಾಗಿ ಗುರು-ಶಿಷ್ಯರು ಜೀವನಾವಶ್ಯಕತೆಗಳಿಗೆ ದಾನಿಗಳ ವ್ಯವಸ್ಥೆ ಮಾಡುತ್ತಿದ್ದರು (ಎ.ಕ-೭, ಶಿಕಾರಿ.೧೨೬, ಕ್ರಿ.ಶ.೧೦೩೬)

ಬೌದ್ಧ ವಿದ್ಯಾಕೇಂದ್ರಗಳಿಗೆ ಸಂಬಂಧಿಸಿದಂತೆ ಬಳ್ಳಿಗಾವಿಯ ಕ್ರಿ.ಶ.೧೦೬೪ರ ಶಾಸನವು ಜಯಂತಿ ಪ್ರಬೌದ್ಧ ವಿಹಾರ ಮಾಡಿಸಿ ದತ್ತಿ ಬಿಟ್ಟಿರುವುದನ್ನು ತಿಳಿಸುತ್ತದೆ. (ಎ.ಕ-೭, ಶಿಕಾರಿ.೧೭೦, ಕ್ರಿ.ಶ.೧೦೬೪) ಬಳ್ಳಿಗಾವಿಯ ಕೇದಾರೇಶ್ವರ ದೇಗುಲದ ಕೋಡಿಮಠ ನಾಗಯಿಯ ಮಧುಸೂದನ ದೇಗುಲ ಮತ್ತು ರಾಮೇಶ್ವರ ದೇಗುಲಗಳಿಗೆ ಸೇರಿದ ಮಠಗಳು ಪ್ರೌಢ ವಿಧ್ಯಾ ಕೇಂದ್ರಗಳಾಗಿದ್ದವು. ಖರ್ಚಿಗಾಗಿ ೮೦ ಮತ್ತರು ಭೂಮಿಯನ್ನು ನೀಡಲಾಗಿತ್ತು. ಕಾಳಾಮುಖ ವಿದ್ಯಾಕೇಂದ್ರಗಳು ಬೇಗೂರು, ಮತ್ತಿಕೋಟೆ, ಗೊಗ್ಗ ಮೊದಲಾದ ಕಡೆ ಇದ್ದವು ಎಂಬ ಉಲ್ಲೇಖವಿದೆ.(ವಸಂತಕುಮಾರ್.ಬಿ.ವಿ, ೨೦೦೯,ಶಿಕಾರಿಪುರ ತಾಲ್ಲೂಕಿನ ಸಾಂಸ್ಕೃತಿಕ ಸಂಕಥನ.).ಕೋಡಿಮಠದಲ್ಲಿ ವಾಸಿಸುವ ವಿದ್ಯಾರ್ಥಿ ಹಾಗೂ ಯತಿಗಳ ಆಹಾರಗಳಿಗಾಗಿ ನೀಡಲಾದ ದತ್ತಿಯಾಗಿದೆ.

ಬೇಗೂರಿನ ಶಾಸನಗಳಲ್ಲಿ ಸತ್ರಕ್ಕಾಗಿ ದಾನ ನೀಡಿದ ಉಲ್ಲೇಖವಿದೆ. ದೇವಾಲಯದ ಜೊತೆ ಇಲ್ಲದ ಸತ್ರಗಳು ಖಾಸಗಿ ಸ್ವರೂಪದವಾಗಿದ್ದು ದೇವಾಲಯದ ಜೊತೆಗಿದ್ದು ಸತ್ರಗಳು ಮಠಕ್ಕೆ ಹೊಂದಿಕೊಂಡು ಸಾರ್ವಜನಿಕ ಸ್ವರೂಪ ಪಡೆದಿದ್ದವು ಎಂದು ತಿಳಿದು ಬರುತ್ತದೆ. ಅದೇ ಬೇಗೂರು ಅಗ್ರಹಾರದಲ್ಲಿ ಬೇಗೂರು ಮಹಾಜನ ಮೂನ್ನೂರ್ವರು ಚಟ್ಟಗೋಸಿಯನ್ನು ಒಪ್ಪಿಸಿ ದೇಸಿಗ ಪ್ರವಾಸಿಗರ ಆಹಾರ ದಾನಕ್ಕೆ ಒಂದು ಸತ್ರವನ್ನು ಮಾಡಿ ಅದಕ್ಕೆ ಇಪ್ಪತ್ತೈದು ಕಮ್ಮ ಭೂಮಿಯನ್ನು ಒಂದು ಮನೆಯನ್ನು ನೀಡಿದ್ದಾರೆ. (ಎ.ಕ-೭, ಶಿಕಾರಿ.೧೪, ಕ್ರಿ.ಶ.೧೧೪೯) ಹೀಗೆ ದಾನ/ದತ್ತಿಗಳ ಶಾಸನಗಳನ್ನು ಪರಿಶೀಲಿಸಬಹುದು. ಇದರಲ್ಲಿ ಶೈಕ್ಷಣಿಕ, ಧಾರ್ಮಿಕ ಪ್ರವಾಸಿಗರಿಗಾಗಿ ದಾನ ಮಾಡಿದ್ದನ್ನು ಕಾಣಬಹುದು.

ತಾಮ್ರ ಶಾಸನಗಳು:

ದಾನವನ್ನು ಕುರಿತಾಗಿ ಹೇಳುವಾಗ ತಾಮ್ರ ಶಾಸನಗಳನ್ನು ಅಧ್ಯಯನ ದೃಷ್ಠಿಯಲ್ಲಿ ಬೇರೆ ಬೇರೆಯಾಗಿಯೇ ತಿಳಿಸಲಾಗುತ್ತಿದೆ. ಮೊದಲು ಶಿಲಾಶಾಸನಗಳಲ್ಲಿ ಉಲ್ಲೇಖಿತ ದಾನ/ದತ್ತಿಗಳನ್ನು ಚರ್ಚಿಸಲಾಗಿದೆ. ಅದೇ ರೀತಿ ತಾಮ್ರ ಶಾಸನಗಳಲ್ಲಿ ಕೂಡ ದಾನವನ್ನು ನೀಡಲಾಗಿದೆ. ಆದರೆ ಶಾಸನಗಳು ಶಿಕಾರಿಪುರದಲ್ಲಿ ವಿರಳವಾಗಿ ಕೆಲವು ಕಡೆಗಳಲ್ಲಿ ಮಾತ್ರ ದೊರೆತಿವೆ. ಬಳ್ಳಿಗಾವಿಯ ವಿರಕ್ತ ಮಠದಲ್ಲಿರುವ ಮೂರು ತಾಮ್ರ ಪಟಗಳು ಇವೆ. ಬೇಗೂರಿನ ಮೂರು ಹಲಗೆ ಮೇಲೆ ಇರುವ ಶಾಸನ. ಇದು ಪ್ರಮುಖವಾಗಿ ನೇರವಾಗಿ ಸಿಗದೇ ಹೋಗಿದ್ದರಿಂದ ಸ್ಥಳಿಯರು ಕೊಟ್ಟ ಪ್ರತಿಯಿಂದ ಅಚ್ಚು ಹಾಕಿಸಿದ ಶಾಸನವು ಕ್ರಿ.ಶ.೧೧೯೨ರ ಶಾಸನವಾಗಿದ್ದು, ವರಹಾ ಮುದ್ರೆಯನ್ನು ಹೊಂದಿದೆ. ಹಾಗೇ ಮೂರು ಹಲಗೆಯ ಮೇಲೆ ಉಲ್ಲೇಖಿಸಲಾಗಿದೆ. ಇದು ಪ್ರಮುಖವಾಗಿ ಮೊದಲು ಶ್ರೀಗಣೇಶನನ್ನು ನಮಿಸುತ್ತಾ, ವಿಷ್ಣುವಿನ ಶ್ಲೋಕದಿಂದ ಪ್ರಾರಂಭವಾಗಿರುತ್ತವೆ. ಇದು ಬ್ರಾಹ್ಮಣರು ಸರ್ಪಯಾಗ ಮಾಡಿದ್ದನ್ನು ವಿವರವಾಗಿ

ನೀಡುತ್ತದೆ. ಚಕ್ರವರ್ತಿ ಜನಮೇಜಯನಿಗೆ ಸಂಬಂಧಿಸಿದ್ದಾಗಿದ್ದು ಈ ಶಾಸನದಲ್ಲಿ ಶಿಕಾರಿಪುರ ತಾಲ್ಲೂಕಿನ ಕೆಲವು ಹಳ್ಳಿಗಳ ಉಲ್ಲೇಖವಿದೆ. ಮುದ್ದೇನಹಳ್ಳಿ, ದೂಪದಹಳ್ಳಿ, ಕೆಂಚಾಪುರ, ನೆಲವಾಗಿಲು, ಮುಗಳಗೆರೆ, ತತ್ತಿಕೊಪ್ಪ ಹೀಗೆ ಹಳ್ಳಿಗಳ ಹೆಸರು ಇದೆ. ಇದು ಬೇಗೂರಿನ ಶಾಸನವಾಗಿರುವುದರಿಂದ ಬೇಗೂರಿನಲ್ಲಿ ಬ್ರಾಹ್ಮಣರಿಗೆ ದಾನವನ್ನು ನೀಡಿದ್ದನ್ನು ಅದರಲ್ಲಿ ೧೦೦೦ಗೋವುಗಳನ್ನು ದಾನ ನೀಡಿದ್ದರ ಉಲ್ಲೇಖವಿದೆ. ಸರ್ಪಯಾಗದ ಪ್ರತಿಫಲವಾಗಿ ಈ ದಾನ ನೀಡಲಾಗಿದೆ. (ಎ.ಕ-೭, ಶಿಕಾರಿ.೧೨, ಕ್ರಿ.ಶ.೧೧೯೨).

ಅದೇ ರೀತಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಪ್ರಕಟಿಸಿದ ಶಿಕಾರಿಪುರ ತಾಲ್ಲೂಕಿನಲ್ಲಿನ ಇನ್ನೊಂದು ತಾಮ್ರ ಶಾಸನವೆಂದರೆ ವಿರಕ್ತಮಠ ಬಳ್ಳಿಗಾವಿಯಲ್ಲಿ ಕ್ರಿ.ಶ.೧೧೧೮ರ ಕಾಲದ ಶಾಸನವಾಗಿದೆ. ಇದು ಕೂಡ ಸಿಂಹ ಮುದ್ರೆಯನ್ನು ಒಳಗೊಂಡಿದೆ. ಜೊತೆಗೆ ನಾಗಾಕ್ಷರವನ್ನು ಒಳಗೊಂಡಿದ್ದು ೩ ಪತ್ರಗಳಾಗಿ ಬರೆಯಿಸಿಕೊಂಡಿದೆ. ವಿಷ್ಣುವಿನ ಶ್ಲೋಕದಿಂದ ಪ್ರಾರಂಭವಾಗಿದ್ದು ಗ್ರಾಮವನ್ನು ಬ್ರಾಹ್ಮಣರಿಗೆ ದಾನ ನೀಡಿದ ವಿಚಾರಗಳನ್ನು ಒಳಗೊಂಡಿದೆ. ಒಂದು ಊರನ್ನು ದಾನವಾಗಿ ಕೊಟ್ಟರೆ ಬಹಳ ಪುಣ್ಯ ಬರುತ್ತದೆಂಬ ಉಲ್ಲೇಖವಿದೆ(ಎ.ಕ-೭, ಶಿಕಾರಿ.೧೧೭, ಕ್ರಿ.ಶ.೧೧೧೮) ಹೀಗೆ ತಾಮ್ರ ಶಾಸನವು ಬ್ರಾಹ್ಮಣರನ್ನು ಸಂಬಂಧಿಸಿದ್ದಾಗಿದ್ದು, ದಾನ ನೀಡುವ ವಿಷಯವನ್ನು ಕ್ರಮವಾಗಿ ತಿಳಿಸಿಕೊಡುತ್ತವೆ.

ಸ್ಮಾರಕ ಶಾಸನಗಳು :

'ಯುದ್ಧದಲ್ಲಿ ಗೆದ್ದರೆ ಲಕ್ಷ್ಮೀ ಸತ್ತರೆ ಸ್ವರ್ಗ' ಎಂಬ ನಾಡನುಡಿ ಪ್ರಾಚೀನ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ಈ ವೀರತನದ ಸಂಗತಿ ಸ್ವರ್ಗಕ್ಕೆ ಹೋದ ಸಂಗತಿ ತಿಳಿಯಪಡಿಸಲು ಶಿಲಾ ಶಾಸನವನ್ನೊ, ಗುಡಿಯನ್ನೊ ಮಾಡಿಸುವ ಪದ್ದತಿ ಕರ್ನಾಟಕದಲ್ಲಿ ಪರಂಪರಾಗತವಾಗಿ ಬಂದಿದೆ. ಇದು ತನ್ನ ಆತ್ಮವನ್ನು ಬಲಿ ನೀಡುವ ಪರಿ, ಹಾಗೆಯೇ ಬಲಿಯಾಗುವುದು ಯುದ್ಧವೊಂದಲ್ಲದೇ ಇತರೆ ವಿಧಾನಗಳಲ್ಲಿ ಕೂಡ ಬಲಿಯಾಗಿರುವುದನ್ನು ಕೂಡ ಸ್ಮರಿಸಬಹುದು. ಇಲ್ಲಿ ನಿಷ್ಠೆ, ಸ್ವಾಮಿನಿಷ್ಠೆಯನ್ನು ಕಾಣಬಹುದು. ಆತ್ಮಬಲಿಯೂ ಯುದ್ಧದಲ್ಲಿ ಮಾತ್ರವಲ್ಲದೇ, ದೇಶಕ್ಕಾಗಿಯೋ ಒಡೆಯನಿಗಾಗಿಯೋ ಬಲಿಯಾಗುವ ವಿಧಿ-ಬರಹವನ್ನು ತೋರಿಸುವ ಶಾಸನಗಳು ಸ್ಮಾರಕ ಶಾಸನಗಳಾಗಿ ಹೊರಹೊಮ್ಮುತ್ತವೆ. ಈ ಸ್ಮಾರಕಗಳು ವೀರನ ಕುರಿತು ಸ್ತ್ರೀಯ ಬಲಿಯಾದ ಮಾಸ್ತಿಯ ಕುರಿತು ಹೇಳುವ ಅಂಶಗಳನ್ನು ಶಾಸನಗಳಾಗಿ ಪ್ರತಿಕ್ರಿಯೆ ನೀಡುತ್ತವೆ.

ಮರಣ ಸ್ಮಾರಕಗಳು ಕೇವಲ ಶಿಲ್ಪ ಇಲ್ಲವೆ ಕೇವಲ ಶಾಸನವಾಗಿರಬಹುದಾದರೂ ಸಾಕ್ಷರ-ನಿರಕ್ಷರರಿಗೂ ವೇದ್ಯವಾಗಲೆಂದು ಕೆಲವು ಸಲ ಎರಡನ್ನೂ ಒಳಗೊಂಡಿರುವುದುಂಟು ಇಂಥ ಶಿಲ್ಪಕ್ಕೆ 'ಶಾಸನ ಶಿಲ್ಪ' ಎನ್ನಲಾಗುತ್ತದೆ. ದೇಹತ್ಯಾಗವನ್ನು ಉಲ್ಲೇಖಿಸುವ, ಪ್ರತಿಬಿಂಬಿಸುವ ಶಾಸನಗಳೇ ಸ್ಮಾರಕ ಶಾಸನಗಳು. ಇವು ಲಿಪಿಯಲ್ಲಿಯೋ, ಶಿಲ್ಪದಯಲ್ಲಿಯೋ ಅಥವಾ ಶಿಲ್ಪ ಮತ್ತು ಲಿಪಿಗಳ ರೂಪದಲ್ಲೋ ಹೊರಬರುವುದಾಗಿದೆ. ಇವುಗಳನ್ನು ಧಾರ್ಮಿಕ ಆತ್ಮ ಬಲಿದಾನ, ಲೌಕಿಕ ಆತ್ಮ ಬಲಿದಾನ, ವೀರಮರಣ, ಕಂಬದ ನಿಷಿಧಿ ಶಿಲ್ಪ, ಹರಕೆ ಸಾವಿನ ಶಿಲ್ಪ, ಲೌಕಿಕ ಬಲಿದಾನದ ಶಾಸನ ಶಿಲ್ಪ, ಮಹಾಸತಿ, ಸಹಗಮನ, ಅನುಗಮನ, ವೀರಮಾಸ್ತಿ, ಒಕ್ಕೈಮಾಸ್ತಿ, ಬಹುಕೈ ಮಾಸ್ತಿ, ವೇಳೆವಾಳಿ, ಕೀಳ್ಗುಂಟೆ, ಶೂಲದ ಮೇಲೆ ಬೀಳುವ ಶಿಲ್ಪ, ಸಿಡಿತಲೆ ಹೀಗೆ ಹತ್ತು ಹಲಾವಾರು ಶಿಲ್ಪಗಳು ಲಭ್ಯವಿದೆ. ಇತ್ಯಾದಿ ಸ್ಮಾರಕಗಳು ಇಲ್ಲಿ ವಿಭಿನ್ನವಾಗಿ ಕಂಡುಬರುತ್ತವೆ. ಸ್ಮಾರಕ ಶಾಸನಗಳನ್ನು ಅಧ್ಯಯನ ಮಾಡುವಾಗ ಮೊದಲ ಹಂತದಲ್ಲೇ ಧಾರ್ಮಿಕ, ಲೌಕಿಕ ಆತ್ಮ ಬಲಿದಾನಗಳನ್ನು ಚರ್ಚಿಸಲಾಗಿದೆ.

ಧಾರ್ಮಿಕ ಬಲಿದಾನಗಳನ್ನು ಭಾರತದಲ್ಲಿ ಪುರಾತನ ಕಾಲವನ್ನು ತಿಳಿಸುವುದರ ಜೊತೆಗೆ, ಬಲಿದಾನ ವಿಚಾರಗಳನ್ನು ತೆರೆದಿಡಲಾಗಿದೆ. ಹಿಂದೂಗಳ ಭಾವನೆಯಲ್ಲಿ ಇಂಥಹ ಮರಣದಿಂದ ಮೋಕ್ಷ ಪ್ರಾಪ್ತಿಯೆಂದು ತಿಳಿಯಬಹುದು. ಬ್ರಹ್ಮ ಶಿವನು

'ರವಿಯ ವಿಮಾನಂ ರಾಹುವಿ
ನವಿಮಾನ ಕಡ್ಡಮಾಗೆ ತತ್ವತಿಯಂ ರಾ
ಹುವೆ ನುಂಗಿತೆಂದು ತಡೆದಿರ
ದೇವಹ್ನಿಯಂ ಪೊಕ್ಕು ಮುರುವಿ ಸಾವಿರ ಮುಡ್ಡರ್'

ಎಂದು ಹಿಂದೂಗಳ ಈ ಮರಣವನ್ನು ತೆಗಳುವನಾದರೂ ಪ್ರಾಚೀನ ಕರ್ನಾಟಕದಲ್ಲಿ ಇಂತಹ ಕೆಲವು ಮರಣೋಲ್ಲೇಖಗಳು ದೊರೆಯುತ್ತವೆ. (ಕಲಬುರ್ಗಿ ಬಿ.ಎಸ್,೧೯೫೮ ಪುಟ ೩೮೦) ಕೀರ್ತಿಸೆಟ್ಟಿಯ ಪುತ್ರ ಮಲ್ಲೆಯು ಚಿತಾಪ್ರವೇಶದಿಂದ ಮಡಿದನೆಂದು ಶಾಸನಗಳಿಂದ ತಿಳಿದು ಬರುತ್ತದೆ. ಗಂಗೆ ಮುಂತಾದ ಪವಿತ್ರ ನದಿಗಳಲ್ಲಿ ಮುಳುಗಿ ಸಾಯುವುದೇ ಪುಣ್ಯಪ್ರದವೆಂದು ಭಾವಿಸಿ ಕೆಲವರು ಕಾಶಿ ಮುಂತಾದ ಸ್ಥಳಗಳಿಗೆ ಹೋಗಿ ತಾವೇ ಸ್ವ-ಸಂತೋಷದಿಂದ ಇಲ್ಲವೇ ಇನ್ನೊಬ್ಬರ ಸಹಾಯದಿಂದ ಈ ಕಾರ್ಯವನ್ನು ಕೈಗೊಳ್ಳುತ್ತಾರೆ (ಎ.ಕ-೭, ಶಿಕಾರಿ.೨೯೦, ಕ್ರಿ.ಶ.೧೧೪೧) ಕರ್ನಾಟಕದಲ್ಲಿ ಜರುಗಿದ ಇಂತಹ ಮರಣದ ಏಕೈಕ ಉಲ್ಲೇಖವೆಂದರೆ ಕಲ್ಯಾಣ ಚಾಳುಕ್ಯ ಚಕ್ರವರ್ತಿ ಅಹವಮಲ್ಲನು ಕುರುಗೋಡದ ಸಮೀಪ ತುಂಗ- ಭದ್ರೆಯನ್ನು ಪ್ರವೇಶಿಸಿ ಪ್ರಾಣ ಬಿಟ್ಟನು. (ಎ.ಕ-೭, ಶಿಕಾರಿ.೧೩೬, ಕ್ರಿ.ಶ.೧೦೬೮) ಇಂತಹ ಜಲ ಪ್ರವೇಶ

ಮಹಿಳೆಯರಲ್ಲಿ ಕಂಡುಬಂದಿಲ್ಲ. ಆದರೆ ಮಾಳಿಸೆಟ್ಟಿಯ ಮಡದಿ ಪದ್ಮವ್ವೆ ಮರಣವು ಧಾರ್ಮಿಕ ಆತ್ಮ ಬಲಿದಾನಗಳಲ್ಲಿ ಸೇರಿಸಬಹುದು. (ಎ.ಕ-೭, ಶಿಕಾರಿ.೧೪೮, ಕ್ರಿ.ಶ.೧೧೮೬) ಇವು ಧಾರ್ಮಿಕ ವಿಚಾರಗಳಿಗೆ ಸಂಬಂಧಪಟ್ಟಂತೆ ಆತ್ಮಗಳನ್ನು ಬಲಿಕೊಟ್ಟಿರುವುದಾಗಿ ಸ್ಮಾರಕ ಶಾಸನಗಳಲ್ಲಿ ಪ್ರತಿಕ್ರಿಯೆ ನೀಡುತ್ತವೆ.

ಲೌಕಿಕ ಬಲಿದಾನಗಳ ಶಾಸನಗಳಲ್ಲಿ ಪ್ರಿಯ ವ್ಯಕ್ತಿಯ ಹೆಸರಿನಲ್ಲಿ ಪ್ರಾಣವನ್ನು ತ್ಯಾಗ ಮಾಡಿಕೊಳ್ಳುವ ವಿಧಾನವಾಗಿದೆ. ಈ ಬಲಿದಾನವು ಪತಿಗಾಗಿ ಪ್ರೀತಿಯ ಸತಿಯ ಪ್ರಾಣೋತ್ಕ್ರಮಣ, ವ್ಯಕ್ತಿಗಾಗಿ ಪ್ರಿಯ ವ್ಯಕ್ತಿಯ ಪ್ರಾಣೋತ್ಕ್ರಮಣ ಇದರಲ್ಲಿ ಸಹಗಮನ ಹಾಗೂ ವೇಳವಾಳಿ ಎಂಬ ಅರ್ಥಗಳಲ್ಲಿ ಕಾಣಬಹುದು. ವೀರ ಶಾಸನ ಶಿಲ್ಪ, ವ್ಯಕ್ತಿ-ವ್ಯಕ್ತಿ ಹೋರಾಟ ಶಿಲ್ಪ, ತುರುಗೋಳ್ ಶಿಲ್ಪ, ಪೆಣ್ಬುಯ್ಯಲ್, ಊರುಳಿವಿಗಾಗಿ ಕಳ್ಳರೊಡನೆ ಹೋರಾಟ, ವ್ಯಕ್ತಿ- ಪ್ರಾಣಿ ಹೋರಾಟ ಶಿಲ್ಪ, ಹಂದಿ, ಹುಲಿ ಬೇಟೆ ಇತ್ಯಾದಿ ರೂಪದಲ್ಲಿ ಕಂಡುಬರುತ್ತವೆ.

ಮಾಸ್ತಿಕಲ್ಲುಗಳು :

ಕರ್ನಾಟಕದಲ್ಲಿ ಪುರಾತನ ಕಾಲದಿಂದಲೂ ಸತ್ತಿರುವ ವ್ಯಕ್ತಿಯ ಜೊತೆಗೆ ಆತನ ಪ್ರಿಯವಸ್ತುಗಳನ್ನು ಹೂಳುವುದು ಅಥವಾ ಸುಡುವುದು ಬೆಳೆದು ಒಂದು ಸಾಂಪ್ರದಾಯಕ ದಾರಿಯಾಗಿದೆ. ಈ ಮಾರ್ಗವೇ ಮಾಸ್ತಿಯಾಗಿ ಪ್ರತಿಬಿಂಬಿಸುತ್ತಿದೆ. ಈ ಮಾಸ್ತಿಕಲ್ಲುಗಳಿಗಿಂತ ಮೊದಲು ಈ ಸ್ತ್ರೀಯ ಸಂವೇದನೆ ತಿಳಿಯುವುದೆಂದರೆ ಮರಣದ ತರುವಾಯ ತನ್ನ ಪತಿ ಮನಸಾ, ಇಲ್ಲವೇ ಮನಸ್ಸಿಲ್ಲದೆ ಅನ್ಯರಿಗೆ ವಶವಾಗಬಹುದೆಂಬ ಪುರುಷನ ಪ್ರತಿಷ್ಠೆ ಪತಿಯ ಮರಣದ ತರುವಾಯ ತನ್ನ ಬದುಕುವಿಕೆ ಮತ್ತು ಪಾವಿತ್ರ್ಯಗಳ ಅನಿಶ್ಚಿತತೆ ಕಾರಣವಾಗಿ ಸ್ತ್ರೀವರ್ಗವೇ ಇದನ್ನು ರೂಪಿಸಿಕೊಂಡಿರಬಹುದು.

ಸತಿ ಪದ್ಧತಿಗೆ ಬಳಸುವ ಪದ ಬಹುಶಃ ಶಿವನ ಪತ್ನಿ ದಾಕ್ಷಾಯಣಿ ಅಥವಾ ಸತಿದೇವಿ. ಪತಿಯ ಪರವಾಗಿ ನಿಂತು, ದಕ್ಷಬ್ರಹ್ಮನ ಯಜ್ಞದಲ್ಲಿ ಪ್ರಾಣಾರ್ಪಣೆ ಮಾಡಿದ ಘಟನೆಯೇ ಗಂಡನಿಗಾಗಿ ಹೆಂಡತಿ ಚಿತಾ ಪ್ರವೇಶ ಮಾಡುವ ಈ ಸತಿ ಪದ್ಧತಿಗೆ ಮೂಲವಾಗಿರಬೇಕು. ಇದಕ್ಕೆ ಗೌರವ ಸೂಚಿ ಪದ ಮಹಾಸತಿ, ಇದರ ತದ್ಭವ ರೂಪ ಮಾಸ್ತಿ. ಮಾಸ್ತಿಕಲ್ಲುಗಳಲ್ಲಿ ಸ್ತ್ರೀವಿಗ್ರಹವಿರುವ ಕಡೆ ಗಮನಿಸಬೇಕಾದ ಕೆಲವು ಸಂಗತಿಗಳಿವೆ. ಸ್ತ್ರೀ ಅಥವಾ ಮಾಸ್ತಿ ಸಾಮಾನ್ಯವಾಗಿ ತನ್ನ ಬಲಗೈಯನ್ನು ಮೇಲಕ್ಕೆ ಚಾಚಿ ಎಡಗೈಯಲ್ಲಿ ಒಂದು ಕಲಶವನ್ನು ಹಿಡಿದಿರುತ್ತಾಳೆ. ಬಲಗೈಯಲ್ಲಿ ನಿಂಬೆಹಣ್ಣನ್ನು ಹಿಡಿದಿರಿತ್ತಾಳೆ. ಉತ್ತರಾಣಿ ಹಳ್ಳಿಯ ಶಾಸನವೊಂದರಲ್ಲಿ ಬೊಗಾರ ಕಂಡಿಸೆಟ್ಟಿಯ ಮಡದಿ ನಾಗಮ್ಮನ ಚಿತಾಪ್ರವೇಶವನ್ನು ಹೇಳುತ್ತದೆ. ಈಕೆ ಸಹಗಮನವಾಗಿ ಆತನನ್ನು ಸೇರಿದಳು ಎಂದು ಉಲ್ಲೇಖಿಸಿದೆ. (ಎ.ಕ-೭, ಶಿಕಾರಿ.೭೨, ಕ್ರಿ.ಶ.೧೦೫೧).

ಒಟ್ಟಿನಲ್ಲಿ ಕರ್ನಾಟಕದ ದಕ್ಷಿಣ ಭಾಗದಲ್ಲಿ ಮಾಸ್ತಿಕಲ್ಲುಗಳ ಅವಶೇಷಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿವೆ. ಹಾಗಾಗಿ ಶಿಕಾರಿಪುರ ತಾಲ್ಲೂಕಿನಲ್ಲಿ ನೂರಕ್ಕೂ ಹೆಚ್ಚು ಮಾಸ್ತಿಕಲ್ಲುಗಳಿದ್ದು ಇವುಗಳನ್ನು ಒಂದು, ಎರಡು, ಮೂರು, ನಾಲ್ಕು, ಐದು, ಜನ ಸ್ತ್ರೀಯರ ಶಿಲ್ಪಗಳ ಹಾಗೆ ಬಲಗೈ ಒಂದೇ ಮೇಲಕ್ಕೆ ಎತ್ತಿರುವ ಮಾಸ್ತಿ, ಇದಲ್ಲದೇ ಎರಡೂ ಕೈಗಳು ಬಲಗೈ ಇರುವ ಶಿಲ್ಪಗಳು ದೊರೆಯುತ್ತವೆ. ಹಳ್ಳಿಗರ ದೃಷ್ಟಿಯಿಂದ ಮಾಸ್ತಿ ಪುರಾಣದಿಂದ ಇಳಿದುಬಂದ ದೇವತೆ. ಅವಳ ಚರಿತ್ರೆ ಅವರ ರಕ್ತಕ್ಕೆ ತೀರ ಹತ್ತಿರದಲ್ಲಿ ಈಕೆ ದನಕರು, ಬಾಲಕರು, ವೃದ್ಧರು, ಸ್ತ್ರೀ ಪುರುಷ, ಹೊಲಮನೆಗಳಿಗೆ ಸಂಬಂಧಪಟ್ಟ ಪೀಡೆ ನಿವಾರಕ ಅಳಸಿಹಾಕುವ ಅಮರಳು ಎಂಬ ಕಲ್ಪನೆಯಲ್ಲಿ ಇವತ್ತಿಗೂ ಕೂಡ ಬದುಕನ್ನು ಸಮಾಜದಲ್ಲಿ ಸಾಗಿಸುತ್ತಿದ್ದಾಳೆ. ಹಾಗಾಗಿ ಸಮಾಜ ಈಕೆಯನ್ನು (ಮಾಸ್ತಿಯನ್ನು) ಊರ ದೇವತೆಯಾಗಿ ಪೂಜೆಗಳನ್ನು ಗೈಯುತ್ತಿದ್ದಾರೆ.

ತುರುಗೋಳ್:

ಪ್ರಾಚೀನ ಕರ್ನಾಟಕದ ಯುದ್ಧಗಳಲ್ಲಿ ತುರುಗೋಳ್ ಬಹಳ ಪ್ರಸಿದ್ಧವಾದ ಯುದ್ಧವಾಗಿತ್ತು. ಪ್ರತಿ ವೀರರು ಕಳ್ಳರು ಒಂದು ಗ್ರಾಮದ ಅಥವಾ ಒಬ್ಬ ವ್ಯಕ್ತಿಯ ದನಗಳನ್ನು ಅಪಹರಿಸುವ ಘಟನೆಗೆ ತುರುಗೋಳ್ ಎಂದು ಕರೆಯುತ್ತಾರೆ. ತುರುಗಾಳಗಳನ್ನು ಒಂದು ಯುದ್ಧದ ಪ್ರಭೇಧವೆಂದು ಪರಿಗಣಿಸಬಾರದು. ಇದು ಗ್ರಾಮ ಸಮಾಜ ಮತ್ತು ಆರ್ಥಿಕ ವ್ಯವಸ್ಥೆಯ ನಡುವಿನ ಸಂಬಂಧವನ್ನು ಪ್ರತಿಬಿಂಬಿಸುತ್ತದೆ. ಶಾಸನ ಶಿಲ್ಪಗಳು ಗಂಗ, ರಾಷ್ಟ್ರಕೂಟರ ಕಾಲದಲ್ಲಿ ಆರಂಭವಾಗಿ ಕಲ್ಯಾಣ ಚಾಳುಕ್ಯರ ಮತ್ತು ಹೊಯ್ಸಳರ ಅವಧಿಯಲ್ಲಿ ಉಚ್ಛ್ರಾಯದಲ್ಲಿದ್ದು, ವಿಜಯನಗರ ಕಾಲದಲ್ಲಿ ಇಳಿಮುಖವೆಂದು ಗುರುತಿಸಬಹುದು. ಹೀಗಾಗಿ ಪ್ರತಿಯೊಂದು ಕಾಲದಲ್ಲೂ ಸುಂದರ ಕೆತ್ತನೆಯುಳ್ಳ ಹಾಗೂ ಅಸಕ್ತಿಯ ಕೆತ್ತನೆಗಳುಳ್ಳ ತುರಗಾಳಗದ ಶಾಸನ ಶಿಲ್ಪಗಳನ್ನು ಕಾಣಬಹುದು (ಡಿ.ವಿ.ಪರಮಶಿವಮೂರ್ತಿ,೨೦೧೧, ತುರುಗೋಳ್ ಸಂಕಥನ, ಹಂಪಿ.) ಹೋರಾಡಿ ಪ್ರಾಣ ತ್ಯಾಗವನ್ನು ಮಾಡಿ ಸ್ವರ್ಗಕ್ಕೆ ಸಂದ ವೀರರಿಗೆ ಭೂಮಿದಾನ ನೀಡಿದ್ದು, ಆ ಕಾಲದಲ್ಲಿ ತುರುಗಾಳದ ವೀರರಿಗೆ ಸಲ್ಲುತ್ತಿದ್ದ ಮರ್ಯಾದೆಯನ್ನು ಸೂಚಿಸುತ್ತದೆ. ಬಳ್ಳಿಗಾವಿಯ ತುರುಗಳನ್ನು ಶತ್ರುಗಳು ಬಂದು ಹಿಡಿದಾಗ ಬನವಾಸಿ ಹನ್ನೆರಡು ಸಾಸಿರವನ್ನು ಆಳುತ್ತಿದ್ದ ಗೋಂವಿಂದರಸನ ಆಜ್ಞೆಯಂತೆ ರೇವಯ್ಯನು ಹೋರಾಡಿ ಸಾಯುತ್ತಾನೆ. (ಎ.ಕ-೭, ಶಿಕಾರಿ.೨೩೮, ಕ್ರಿ.ಶ.೧೧೮೭).

ವೇಳಾವಳಿ :

ಪ್ರಿಯ ವ್ಯಕ್ತಿಗಾಗಿ ಅರ್ಪಿಸಿದ ವ್ಯಕ್ತಿಯ ನೆನಪಿಗೆ ನಿಲ್ಲಿಸಿದ ಶಿಲ್ಪವೇ ವೇಳಾವಳಿ ಇದು ಪುರುಷರಲ್ಲಿ ಬೆಳದು ಬಂದ ಸಂಸ್ಕೃತಿಯಾಗಿದೆ. ಇದನ್ನು ವೇಳಾ, ವೇಳವಡಿಚ,

ವೇಳಾವಳಿಗಳ ಅರ್ಥ ವಿವೇಚನೆ. ಇದರ ಶುದ್ಧ ರೂಪ ವೇಳ(ಬೇಳ). ಇದರ ಪ್ರಕೃತಿ ರೂಪ ಬೇಳ (ಸುಡು) ಬೇಳ್+ಅಂ=ಬೇಳಂ (ಬೇಳನಾಗಿರುವವನು) ಎಂಬ ಕುನ್ನಾಮ ಬಿಂದು ಕಳೆದುಕೊಂಡು ಬೇಳ ಎಂದು ಬಳಕೆಗೊಂಡಿರಬೇಕು. (ಕಲಬುರ್ಗಿ.ಎಂ,ಎಂ, ೧೯೮೦,ಪು.೫೨/೫೩).

ಪ್ರಾಚೀನ ಕರ್ನಾಟಕದಲ್ಲಿ ಒಡೆಯನಿಗೆ ಶುಭವನ್ನು ಕೋರಿ ಪ್ರಾಣವನ್ನು ಅರ್ಪಿಸುವ ಪ್ರಸಂಗಗಳು, ಹಾಗೆ ಒಡೆಯನ ಮರಣ ಪರಿಸ್ಥಿತಿಯಲ್ಲಿ ವೇಳಾವಳಿ ಪದ್ಧತಿಗಳು ಕೂಡ ಗ್ರಹಿಸಬಹುದು. ಒಡೆಯನಿಗಾಗಿ ತುಳುವ ಚಂದ್ರರ ಭೇರುಂಡೇಶ್ವರ ಕಂಬವನ್ನೇರಿ ಕೆಳಗೆ ನಿಲ್ಲಿಸಿದ ಬಾಣಗಳ ಮೇಲೆ ಬಿದ್ದು ಸತ್ತ ಉಲ್ಲೇಖ ಕ್ರಿ.ಶ.೧೦೬೦ರ ಬಳ್ಳಿಗಾವಿ ಶಾಸನದಲ್ಲಿ ಚಿತ್ರ ಸಹಿತ ಇದೆ. ಸಾಂತರದೇವ ಮಡಿಯಲು ಪೊರವಳೆಯ ಗಾವುಂಡನು ಬೆನ್ನಚರ್ಮವನ್ನು ಸುಲಿಸಿಕೊಂಡು ೩ ದಿನಗಳ ವರೆಗೆ ನೋವನ್ನು ಅನುಭವಿಸಿ ಸತ್ತನೆಂದು ಕ್ರಿ.ಶ.೧೦೭೦ರ ಶಾಸನದಲ್ಲಿ (ಎ.ಕ-೭, ಶಿಕಾರಿ.೬೨, ಕ್ರಿ.ಶ.೧೦೭೦) ಮಹಾಮಂಡಲೇಶ್ವರ ಸೋವಿದೇವನ ಅರಸಿ ಲಚ್ಚಲದೇವಿಯ ಮರಣ ಸಂದರ್ಭದಲ್ಲಿ ವೇಳಾವಾಳಿ ಬೊಪ್ಪಣನು ಮಡಿದನೆಂದು ಕ್ರಿ.ಶ.೧೧೮೫ರ ಬಂದಳಿಕೆ ಶಾಸನದಲ್ಲಿ ಉಲ್ಲೇಖವಿದೆ (ಎ.ಕ-೭, ಶಿಕಾರಿ.೨೪೯, ಕ್ರಿ.ಶ.೧೧೮೫) ಇನ್ನೊಂದು ಶಾಸನದಲ್ಲಿ ಸಿಡಿತಲೆಯ ಬಗ್ಗೆ ಉಲ್ಲೇಖವಿದೆ. ಇದು ಬ್ರಹ್ಮದೇವರಿಗೆ ತನ್ನ ಸಿಡಿತಲೆಯನ್ನು ದೀಪಾವಳಿಯ ಸಂದರ್ಭದಲ್ಲಿ ಕೊಟ್ಟನೆಂದು ಉಲ್ಲೇಖ ದೊರೆಯುತ್ತದೆ. (ಎ.ಕ-೭, ಶಿಕಾರಿ.೨೪೬, ಕ್ರಿ.ಶ.೧೧೨೩) ಸುಮಾರು ಹನ್ನೊಂದನೆಯ ಶತಮಾನದ ಸಮಯಕ್ಕೆ ವೇಳಾವಾಳಿ ಎಂಬ ಪದಗಳನ್ನು ಹಿಂದೆ ಸರಿಸಿ ಲೆಂಕ, ಲೆಂಕಾವಳಿ ಎಂಬ ಪದಗಳ ಈ ಸಂಪ್ರದಾಯಗಳು ಬೆಳೆದು ನಂತರ ಕ್ರಮೇಣ ಕಡಿಮೆಯಾಗಿರಬಹುದು. (ಕಲಬುರ್ಗಿ.ಎಂ.ಎಂ.೧೯೮೦.ಪುಟ.೫೮).

ಪೆಣ್ಬುಯ್ಯಲ್:

ಪೆಣ್ಬುಯ್ಯಲ್ ಎಂದರೆ ಹೆಣ್ಣಿನ ಕೂಗು. ಈ ಪದ ಶಾಸನದಲ್ಲಿ ಬಳಕೆಯಾಗಿಲ್ಲ ಬದಲಿಗೆ ಪೆಣ್ಡಿರುಡೆಯುರ್ಚೆ, ಪೆಣ್ಡಿರ ಉರ್ಚ್ಚಲು, ಉಡೆಉರ್ಚ್ಚೆ, ಪೆಣ್ಡಿರ, ಪೆರಗಿಕ್ಕಿ, ಹೆಂಡಿರುಡೆಯುರ್ಚ್ಚೆ ಎಂಬ ಪದ ಬಳಕೆಯಾಗಿದೆ. (ಡಿ.ವಿ.ಪರಮಶಿವಮೂರ್ತಿ, ೨೦೧೦, ಪೆಣ್ಬುಯಲ್, ಹಂಪಿ.) ತಾಳಗುಂದದ ಶಾಸನದಲ್ಲಿ ಬನವಾಸಿನಾಡಿನ ಮಾಂಡಳಿಕನಾದ ಚೊಳಿಕ್ಯ ಕೇಶಿಮಯ್ಯನು ಸಾಂತಳಿಗೆ ನಾಡಿನಲ್ಲಿನ ಅಳಹೂರನ್ನು ಸೂರೆ ಮಾಡಿ ಪೆಂಡಿರ ಉಡೆಉರ್ಚ್ಚೆಕೊಂಡು ಹೋಗುವಾಗ ಆ ನಾಡಿನ ಕುಲತಿಲಕನಾದ ಮುಕ್ಕಡರ ಸೋವಿಸೆಟ್ಟಿಯ ಮಗನಾದ ಕಾಳೆಯ ನಾಯಕನು ಶತ್ರುಗಳ ಕುದುರೆಯನ್ನು ಕೊಂದು ಹಲವರನ್ನು ಸಾಯಿಸಿ, ತುರುಗಳನ್ನು ಹಿಂತಿರುಗಿಸಿ ಮರಣವನ್ನಪ್ಪುತ್ತಾರೆ. (ಎ.ಕ-೭, ಶಿಕಾರಿ.೧೮೧, ಕ್ರಿ.ಶ.೧೧೭೦) ಹೀಗೆ ಅಡಗಂಟಿ, ಜಂಬೂರು, ಶೀಲವಂತನ ಕೊಪ್ಪ,

ಸಂಡ ಇತ್ಯಾದಿ ಕಡೆಗಳಲ್ಲಿ ಮಹಿಳೆಯರನ್ನು ರಕ್ಷಣೆ ಮಾಡಿ ವೀರರಾದ ಶಾಸನಗಳು ಸಿಗುತ್ತವೆ.

ವೀರಗಲ್ಲುಗಳು :

ವೀರಗಲ್ಲುಗಳನ್ನು ಗುರುತಿಸುವುದು ಬಹಳ ಸುಲಭ. ಸಾಮಾನ್ಯವಾಗಿ ಅವುಗಳ ಮೇಲೆ ಮೂರು ಹಂತದ ಚಿತ್ರಗಳಿರುತ್ತವೆ. ಕೆಳಗಿನ ಹಂತದಲ್ಲಿ ವೀರ ತನ್ನ ಶತ್ರುಗಳೊಡನೆ ಹೋರಾಡುತ್ತಿರುವಂತೆಯೂ, ಮಧ್ಯದ ಹಂತದಲ್ಲಿ ಯುದ್ಧದಲ್ಲಿ ಮಡಿದ ಅವನನ್ನು ದೇವತಾ ಸ್ತ್ರೀಯರು ವೀರ ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆಯೂ, ಮೇಲಿನ ಹಂತದಲ್ಲಿ ಅವನು ಭಗವಂತನ ಸಾನಿಧ್ಯದಲ್ಲಿ ಇರುವಂತೆಯೂ ಕೆತ್ತಲಾಗಿರುತ್ತದೆ. ಕೆಲವು ಕಲ್ಲುಗಳಲ್ಲಿ ನಾಲ್ಕು ಅಥವಾ ಐದು-ಆರು ಹಂತಗಳನ್ನು ಗುರುತಿಸಬಹುದು. ಕೆಲವೊಮ್ಮೆ ವೀರ ಕುದುರೆಯ ಮೇಲೆ ಸವಾರಿ ಮಾಡುತ್ತಿರುವ ಅಥವಾ ಯುದ್ಧ ಮಾಡುತ್ತಿರುವ ಬರಿಯ ವೀರನ ಚಿತ್ರವೂ ಅಥವಾ ಬಿಲ್ಲನ್ನೋ, ಖಡ್ಗವನ್ನೋ ಇರುವ ಚಿತ್ರವೋ ಇಲ್ಲವೇ ಬರಿಯ ವೀರ ಪಕ್ಕದಲ್ಲಿ ದೇವತಾ ಸ್ತ್ರೀಯರು ಕೊಂಡೊಯ್ಯುತ್ತಿರುವ ಚಿತ್ರವೋ ಇರುತ್ತದೆ. ಯುದ್ಧವನ್ನು, ರಣರಂಗವನ್ನೋ, ಕಾಣಿಸುವ ಚಿತ್ರಶಿಲ್ಪಗಳು ವೀರಗಲ್ಲುಗಳೆಂದು ಕರೆಯಿಸಿಕೊಳ್ಳುತ್ತವೆ. ಹಾಗೆ ವೀರನ ಕುರಿತಾಗಿ ಬರಹ ಇರಬಹುದು.

ವೀರಗಲ್ಲುಗಳಲ್ಲಿ ಉದ್ದೇಶಗಳನ್ನು ಕುರಿತು ನೋಡುವಾಗ ರಾಜನ ಪರವಾಗಿ, ಊರಿನ ಪರವಾಗಿ, ಮಹಿಳೆಯರ ಪರವಾಗಿ, ಊರಿನ ದನಗಳ ರಕ್ಷಣಾ ಫಲವಾಗಿ, ಕಳ್ಳರ ವಿರುದ್ಧವಾಗಿ ಇತ್ಯಾದಿ ಕಾರಣಗಳಿಂದ ಅಧ್ಯಯನ ಮಾಡಬಹುದು. ಶಿಕಾರಿಪುರ ತಾಲ್ಲೂಕಿನಲ್ಲಿ ಶಾಸನ ವಿಶ್ಲೇಷಣೆ ಮಾಡುವಾಗ ವೀರಗಲ್ಲುಗಳು ಸಾಮಾನ್ಯವಾಗಿ ತುರುವ(ಹಸು) ರಕ್ಷಣೆಗೆ ನಿಂತು ಹೋರಾಟ ಮಾಡಿ ವೀರರಾದ ಕಥೆಗಳು ಹೆಚ್ಚು. ಈ ರೀತಿ ಹಲವಾರು ಹೋರಾಟಗಳಲ್ಲಿ ಬಲಿಯಾದ ವೀರನ ಮರಣಾನಂತರ ಆತನ ತಾಯಿ, ಹೆಂಡತಿ, ಮಕ್ಕಳ ಸಾಕುವ ಸಲುವಾಗಿ ರಾಜನೋ, ಸಮಾಜವೋ, ಸಂಬಂಧಿಕರೋ, ವಹಿಸಿಕೊಂಡು ದತ್ತಿಯನ್ನು ಬಿಡುತ್ತಿದ್ದರು. ವೀರನು ಸತ್ತ ನಂತರ ಇಪ್ಪತ್ತು ತಲೆಮಾರುಗಳ ವರೆಗೂ ಆತನ ಪರಾಕ್ರಮದ ಕೀರ್ತಿ ಶಾಶ್ವತವಾಗಿ ನಿಲ್ಲುವುದೆಂಬ ಒಂದು ನಂಬಿಕೆ ಇತ್ತು. ಇದು ಕ್ರಿ.ಶ.೧೧೧೫ರ ಶಾಸನದಲ್ಲಿ ಉಲ್ಲೇಖಿಸಲಾಗಿದೆ. (ಎ.ಕ-೭, ಶಿಕಾರಿ.೨೨೦, ಕ್ರಿ.ಶ.೧೧೦೫) ವೀರಗಲ್ಲುಗಳನ್ನು ಇಂಥವರೇ ನಿಲ್ಲಸಬೇಕೆಂಬ ನಿಯಮವೇನು ಇದ್ದಂತೆ ತೋರುವುದಿಲ್ಲ. ಮಡಿದ ವೀರನ ಹತ್ತಿರದ ಸಂಬಂಧಿಗಳು ಹಲವಾರು ಜನ ಒಟ್ಟಿಗೆ ಸೇರಿ ವೀರಗಲ್ಲನ್ನು ನಿಲ್ಲಿಸುತ್ತದ್ದುದು ಉಂಟು. ಮಾಚಗಾವುಂಡ ಎಂಬುವವನು ತುರುಗಳ ಕಾಳಗದಲ್ಲಿ ಸತ್ತಾಗ ಚಟ್ಟಗಾವುಂಡ ಎಂಬುವವನು ಮಾಚಗಾವುಂಡನ ಪತ್ನಿ ಜಕ್ಕಿಯಬ್ಬೆ ಮತ್ತು ಇವರ ಮಗ ನಾಲಯ್ಯ ಎಂಬುವವರು ಕೂಡಿ ಮಾಚಿಗಾವುಂಡನಿಗೆ ವೀರಗಲ್ಲನ್ನು ನಿಲ್ಲಿಸುತ್ತಾರೆ. (ಎ.ಕ-೭, ಶಿಕಾರಿ.೮೩, ಕ್ರಿ.ಶ.೧೦೫೮) ವೀರಗಲ್ಲು ನಿಲ್ಲಿಸುವ

ಸಂದರ್ಭದಲ್ಲಿ ಅನುಗಮನ ಮಾಡುತ್ತಿದ್ದಂತೆ ವೀರಗಲ್ಲಿನ ಪಾಠವೊಂದರಿಂದ ತಿಳಿದು ಬರುತ್ತದೆ. (ಎ.ಕ-೭, ಶಿಕಾರಿ.೩೮, ಕ್ರಿ.ಶ.೧೧೯೧)

ಹಂದಿಯ ಬೇಟೆ, ಹುಲಿ ಬೇಟೆ ಇತ್ಯಾದಿ ಪ್ರಾಣಿಗಳಿಂದ ಬೆಳೆಗೆ, ಊರಿಗೆ ರಕ್ಷಣೆ ಕೊಡುವ ಸಲುವಾಗಿ ಹೋರಾಡಿದ ವೀರರ ಬಗ್ಗೆ ಹೇಳುವಾಗ ಕ್ರಿ.ಶ.೧೦೮೩ ರ ವೀರಗಲ್ಲಿನಲ್ಲಿ ಪೊಡಲೆಯ ಎಂಬುವವನು ಹಂದಿಯ ಬೇಟೆಯಲ್ಲಿ ಕಲಿತನಂ ಬೆರಸಿ ತಳ್ತಿರೆದು ಸುರಲೋಕ ಪ್ರಾಪ್ತನಾದನು ಎಂಬ ಉಲ್ಲೇಖವಿದೆ (ಎ.ಕ-೭, ಶಿಕಾರಿ.೧೪೯, ಕ್ರಿ.ಶ.೧೧೮೩) ಇದೇ ರೀತಿ ಹಲವಾರು ಪ್ರಾಣಿಗಳ ಜೊತೆಗೆ ನಿಂತು ಹೋರಾಡಿದ ಉಲ್ಲೇಖಗಳಿಗಿಂತ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತವೆ.

ವ್ಯಾಪಾರದ ಸಂದರ್ಭದಲ್ಲಿ ಬಲಿಯಾದ ವೀರ ಕಥೆಯನ್ನು ಹೇಳುವ ಶಾಸನ ಕಣಸೋಗೆಯಲ್ಲಿ ಇದೆ. ಈ ಶಾಸನವು ಕಣಸೋಗೆಯ ಮಲ್ಲಸೆಟ್ಟಿಯ ಮಗ ದೇವಣನು ಉಭೆಯ ಗಟ್ಟಿದ ಸಾಳಗ ಬರುವಾಗ ಕಳ್ಳರು ಅವನ ಮೇಲೆ ಬಿದ್ದಾಗ ಅವರಲ್ಲಿ ಕೆಲವರನ್ನು ಕೊಂದು ತಾನೂ ಸಾಯುತ್ತಾನೆ. (ಎ.ಕ-೭, ಶಿಕಾರಿ.೨೧೫, ಕ್ರಿ.ಶ.೧೧೫೮) ಅದೇ ರೀತಿ ಸೀಮೆ ಕಾಳಗವೊಂದರಲ್ಲಿ ಬಲಿಯಾದ ವೀರ ಶಾಸನವೊಂದರಲ್ಲಿ ಹೊಸೂರು ಮತ್ತು ಜಂಬೂರುಗಳ ನಡುವೆ ಗಡಿಯ ಕಾಳಗ ನಡೆಯುವುದು ಎಂಬುದನ್ನು ಕೇಳಿದ ಈಸೂರಿನ ಮಾಳ ಎಂಬುವವನು ಹೊಸೂರಿಗೆ ಬಂದು ಅಲ್ಲಿನ ಸಾಸಿರ್ವದಲ್ಲಿ ಬೆಸನಂ ಬೇಡಿಕೊಂಡು ಜಗಳದಲ್ಲಿ ಭಾಗವಹಿಸಿ ಹಲವರನ್ನು ಕೊಂದು ತಾನೂ ಸಾಯುತ್ತಾನೆ. (ಎ.ಕ-೭, ಶಿಕಾರಿ.೨೯೮, ಕ್ರಿ.ಶ.೧೦೮೯) ಕೋಟೆ ಕಾಳಗದಲ್ಲಿ ವೀರ ಬಲ್ಲಾಳನು ಉದಿರೆಯನ್ನು ಮುತ್ತಬೇಕೆಂದು ಮಹಾಪ್ರಧಾನ ಮಲ್ಲಯ ದಂಡನಾಯಕನಿಗೆ ತಿಳಿಸಿದಾಗ ಇವನ ಆಜ್ಞೆಯಂತೆ ಹರಿಯಣ ಎಂಬುವವನು ಉದಿರೆಯ ಕೋಟೆಯನ್ನು ಮುತ್ತಿ ಗುರಾಣಿ ಹಿಡಿದು ಕೋಟೆಯನ್ನೇರಿ ಅಲ್ಲಿ ಹಲವರನ್ನು ಕೊಂದು ತಾನೂ ಮಡಿದ ವಿಷಯ ತಿಳಿಸುತ್ತದೆ. (ಎ.ಕ-೭, ಶಿಕಾರಿ.೨೨೪, ಕ್ರಿ.ಶ.೧೨೦೩) ಗಡಿ ಸೀಮಾ ಸಂಬಂಧದ ಕಾಳಗದಲ್ಲಿ ಮಡಿದವರಿಗೆ ಹೊನ್ನುಕೊಟ್ಟ ವಿಷಯ ವೀರಗಲ್ಲೊಂದರಿಂದ ತಿಳಿದು ಬರುತ್ತದೆ. (ಎ.ಕ-೭, ಶಿಕಾರಿ.೨೯೮, ಕ್ರಿ.ಶ.೧೦೮೯) ಕಡೇನಂದಿಹಳ್ಳಿಯಲ್ಲಿ ವೀರನನ್ನು ಮೆಚ್ಚಿ ಅವನಿಗೋಸ್ಕರ ಬಾವಿ ಕೆರೆಯ ಕೆಳಗೆ ಗದ್ದೆಯನ್ನು ಬಿಟ್ಟ ವಿಷಯವಿದೆ. (ಎ.ಕ-೭, ಶಿಕಾರಿ.೬೭, ಕ್ರಿ.ಶ.....) ಗೋವಿಂದರಸನು ತೆಂಕಣ ಗೊಗ್ಗಿಯ ಮೇಲೆತ್ತಿ ಕಲ್ಲೂರಂ ಸುಟ್ಟು ನಡೆಸಿದ ಕಾಳಗದಲ್ಲಿ ಪಯನಾಯಕ ನಳಿಯ ಬೊಪೆಯ ಸಾಹಣಿ ಪಲವಂ ಪ್ರಾಪ್ತರಾದ ಎಂಬ ಉಲ್ಲೇಖವಿದೆ(ಎ.ಕ-೭, ಶಿಕಾರಿ.೧೫೭, ಕ್ರಿ.ಶ.೧೧೧೩) ತಾಳಗುಂದದಲ್ಲಿ ವೀರಗಲ್ಲೊಂದರಲ್ಲಿ ವೀರನಿಗೆ ಮೆಚ್ಚಿ ಮೂವತ್ತಿರ್ಚ್ಛಾಸಿರಂ ಕೊಟ್ಟು ಗದ್ದೆ ಕಮ್ಮ ೨೫ ಎಂಬ ಉಲ್ಲೇಖವಿದೆ.(ಎ.ಕ-೭, ಶಿಕಾರಿ.೧೮೨, ಕ್ರಿ.ಶ....).

ಊರುಳಿವಿಗಾಗಿ ಮಡಿದ ವೀರಕಲ್ಲುಗಳಲ್ಲಿ ಪ್ರಮುಖವಾಗಿ ಹೇಳುವಾಗ ಶ್ರೀಮಜಂಬೂರದಿವಬೆಯವೊಪ್ಪಲ ಒಡ ಊರಳಿವಿನಲು ಇದಿರನದಿರೆ ಪರಿದು ಪಾಲರ ಕೊಂದು ಸುರಲೋಕ ಪ್ರಾಪ್ತನಾದ ಇದನ ವೀರತನಕ್ಕೆ ಹೆಕ್ಕೆಯ ರಾಜಣ ಕಲ್ಲನು ನಿಲ್ಲಿಸಿದ ಎಂಬ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೭೬, ಕ್ರಿ.ಶ.೧೧೧೪) ಅದೇ ಊರಿನಲ್ಲಿ ಇನ್ನೊಂದು ಶಾಸನದಲ್ಲಿ ಅಗ್ರಹಾರ ಜಂಬೂರನ್ನು ಕಾದು ಹೋರಾಡಿ ಮಡಿದ ವೀರನ ಶಾಸನ ಇದೆ (ಎ.ಕ-೭, ಶಿಕಾರಿ.೭೭, ಕ್ರಿ.ಶ.೧೧೧೦).

ವೀರಗಲ್ಲುಗಳಲ್ಲಿ ತುರುವನ್ನು ಅಥವಾ ದನಕರುಗಳನ್ನು ರಕ್ಷಣೆಗೈಯುವಾಗ ಮಡಿದ ವೀರರ ಕಥೆಗಳು ಇವೆ. ಮುತ್ತಿಗೆಯ ಗ್ರಾಮದಲ್ಲಿ ಶ್ರೀಮದಾ ನಾ ಅಗ್ರಹಾರ ತಾನದುಂದುರ ತುರುವಂ ಮನ್ನೆಯಂ ಮಗುಲೆ ಅರಸನವಂ ಕಾಯ್ಯೆಮುತಗಿಯ ತಳಾರ ದಾಸಿ ತುರುವಂ ಮಗುಚ್ಚ ಸುರಲೋಕ ಪ್ರಾಪ್ತನಾದ ಇತನ ನೆನಪಿಗೆ ಮಲ್ಲಿಸೆಟ್ಟಿ ಮುಂದೆನಿಂತು ನಿಲ್ಲಿಸಿದ ಕಲ್ಲು ಉದಾಹರಣೆಗೆ ನೀಡಬಹುದು. (ಎ.ಕ-೭, ಶಿಕಾರಿ.೭೦, ಕ್ರಿ.ಶ.೧೦೭೮) ಶ್ರೀ ದಂಡನಾಯಕ ಗೋವಿಂದರಸನ ಕಾಲದಲ್ಲಿ ಬಳ್ಳಿಗಾವಿಯ ಹಸುಗಳನ್ನು ಕದಿಯಲು ಬಂದವರ ವಿರುದ್ಧ ಕಣಿಯ ದೇವಯ್ಯನು ಹೋರಾಡಿ ಕೊಂದು ತಾನೂ ಮಡಿದು ತುರುವನ್ನು ರಕ್ಷಿಸಿದ (ಎ.ಕ-೭, ಶಿಕಾರಿ.೧೪೯, ಕ್ರಿ.ಶ.೧೧೧೦) ತ್ರಿಪುರಾಂತಕ ದೇವರಿಗಾಳುವಕಿರು ಮಾಗುಣಿಯ ತುರುಹರಿವಲ್ಲಿ ಸುರಿಗಿರುದು ಮೆರ್ದು ಸುರಲೋಕ ಪ್ರಾಪ್ತನಾದ (ಎ.ಕ-೭, ಶಿಕಾರಿ.೨೦೪, ಕ್ರಿ.ಶ.೧೯೯೦) ಅದೇ ರೀತಿ ಕಾಚಿಸೆಟ್ಟಿಯ ಮಗ ತೈಲವನು ತುರುವ ಕಾಪಾಡುವಾಗ ಮಡಿದನು ಎಂಬ ಉಲ್ಲೇಖವಿದೆ (ಎ.ಕ-೭, ಶಿಕಾರಿ.೨೦೫, ಕ್ರಿ.ಶ.೧೯೯೨) ಹಾಗೆ ಮಾಗುಡಿಯ ಎರಗಾವುಣ್ಡ ತರುವ ರಕ್ಷಣೆಯಲ್ಲಿ ಮಡಿದು ವೀರನಾದನು (ಎ.ಕ-೭, ಶಿಕಾರಿ.೨೦೭, ಕ್ರಿ.ಶ.೧೯೯೦) ಬರ್ಮಣ ತುರವ ರಕ್ಷಣೆಯಲ್ಲಿ ಪ್ರಾಣನೀಡಿದನು ಎಂಬ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೨೩೮, ಕ್ರಿ.ಶ.೧೦೭೧೩) ಹಿರೇಜಂಬೂರಿನ ತುರುವಗಳನ್ನು ಅಪಹರಿಸಿದವರ ವಿರುದ್ಧ ಹೋರಾಡಿ ಮಡಿದ ವೀರನಾದ ಮಾರೋಜನ ತಮ್ಮ ಸಾದೆಯ ನಾಯಕನನ್ನು ಉಲ್ಲೇಖಿಸಿದೆ. (ಎ.ಕ-೭, ಶಿಕಾರಿ.೨೮೦, ಕ್ರಿ.ಶ.೧೧೨೭)

ರಾಜಕೀಯ ಪರಿಸ್ಥಿತಿ :

ಒಂದು ನಾಡಿನ ಇತಿಹಾಸ ತಿಳಿಯುವಾಗ ಅದಕ್ಕೆ ಪೂರಕವಾದ ರಾಜರ ಇತಿಹಾಸ ಎಂಬರ್ಥದಲ್ಲಿ ಕಾಣುವುದು ಒಂದು ಕಡೆಯಾದರೆ, ಉಳಿದಂತೆ ಅದರ ಹಿತ ಮತ್ತು ಬೆಳವಣಿಗೆ ಜನ-ಸಮಾಜಗಳು ಬೆರೆತಿವೆ. ಇತಿಹಾಸವನ್ನು ಚಿತ್ರಿಸುವ ಗ್ರಂಥಗಳು ರಾಜಕೀಯ ಇತಿಹಾಸ ಪ್ರಧಾನವಾಗಿವೆ. ನಾಡಿನಲ್ಲಿರುವ ಸಮಾಜ, ಕಲೆ, ಧರ್ಮ, ವ್ಯಾಪಾರ ಇತ್ಯಾದಿಗಳ ಕುರಿತಂತೆ ಅಧ್ಯಯನ ಒಳಗೊಂಡಿರುವುದು ವ್ಯವಸ್ಥಿತ ಇತಿಹಾಸ

ವಾಗಿರುತ್ತದೆ. ಕರ್ನಾಟಕ ನಾಡಿನಲ್ಲಿ ಇತಿಹಾಸವನ್ನು ಚಿತ್ರಿಸಿವಾಗ ಕದಂಬರು, ಗಂಗರು, ಚಾಳುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ವಂಶಗಳ ಆಡಳಿತದ ಹಿನ್ನಲೆಯಲ್ಲಿ ರಾಜಕೀಯವನ್ನು ಮೈಗೂಡಿಸಿಕೊಂಡು ತನ್ನದೇ ನೆಲಕ್ಕೆ ಕೊಡುಗೆಗಳನ್ನು ನೀಡುತ್ತಾ ಹೋಗಿದ್ದಾರೆ. ಈ ನಿಟ್ಟಿನಲ್ಲಿ ಅವರ ಆಳ್ವಿಕೆಯ ಸಮಯದಲ್ಲಿ ಇಂದಿಗೂ ಅಳಿದುಳಿದ ಆಕರ- ಆಧಾರಗಳ ರೂಪರೇಷಗಳಲ್ಲಿ ಇತಿಹಾಸ ಕಟ್ಟುವಲ್ಲಿ ಪ್ರಯತ್ನಗಳು ಇಂದಿಗೂ ಮುಂದುವರೆದಿವೆ. ಈ ಹಿನ್ನಲೆಯಲ್ಲಿ ಅಧ್ಯಯನಕ್ಕೆ ಸೂಕ್ತವಾಗಿ ಶಿಕಾರಿಪುರಕ್ಕೆ ಸೀಮಿತವಾಗಿ ಸಂಗ್ರಹಿಸಿದ ಘಟನೆಗಳ ಆಧಾರ ಪ್ರಸ್ತುತ ಅಧ್ಯಯನ ಮಾಡಲಾಗಿದೆ.

ಅಧ್ಯಯನಕ್ಕೆ ಪೂರಕ ಅಂಶಗಳನ್ನು ದೇವಾಲಯಗಳ ಮತ್ತು ಶಾಸನಗಳ ಹಿನ್ನಲೆಯಲ್ಲಿ ರಚಿಸಿಕೊಳ್ಳಲಾಗಿದೆ. ಶಿಕಾರಿಪುರದಲ್ಲಿ ಕ್ರಿ.ಪೂ.೩ನೇ ಶತಮಾನದಿಂದ ಹಿಡಿದು ಇವತ್ತಿನವರೆಗೆ ಸೂಕ್ತವಾದ ಆಕರಗಳು ದೊರೆಯುವ ಭಂಡಾರವಾಗಿದ್ದು, ಈ ನೆಲೆಯಲ್ಲಿ ಹೆಚ್ಚಿನ ಕೊಡುಗೆಯನ್ನು ಕಲ್ಯಾಣ ಚಾಳುಕ್ಯರ ವಂಶಾವಳಿಗಳು ಬಿಟ್ಟು ಹೋಗಿವೆ. ಉಳಿದಂತೆ ಆಳ್ವಿಕೆಗೆ ಒಳಪಟ್ಟಿಲ್ಲವೆಂತಲ್ಲ, ಶಾತವಾಹನರು, ಕದಂಬರು, ಕಳಚೂರ್ಯರು, ಹೊಯ್ಸಳರು ವಿಜಯನಗರ ಅರಸರ ಪೂರಕ ಅಂಶಗಳು ದೊರೆಯುತ್ತವೆ, ಆದರೆ ಕಡಿಮೆ. ಕುಂತಲ ಎಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತಾ ಬನವಾಸಿ-೧೨೦೦೦, ನಾಗರಖಂಡ-೭೦, ಜಿಡ್ಡಳಿಗೆ-೭೦ ಇತ್ಯಾದಿ ಆಳ್ವಿಕೆಯ ಭಾಗಗಳಲ್ಲಿ ಶಿಕಾರಿಪುರದ ಕೆಲವು ಭಾಗಗಳು ಸೇರಲ್ಪಟ್ಟಿವೆ.

ಕನ್ನಡ ನಾಡಿನ ರಾಜಕೀಯ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಹಲವು ಗ್ರಂಥಗಳಲ್ಲಿ ಶಿಕಾರಿಪುರದ ವಿಶ್ಲೇಷಣೆಯ ಮೇಲೆ ಪ್ರಭಾವ ಬೀರಿದೆ. ಕೆಲವು ಪ್ರಮುಖ ರಾಜ ಮನೆತನಗಳ ಪ್ರಸ್ತಾಪ ಸೂಕ್ಷ್ಮವಾಗಿ ಬಂದಿವೆ. ಅದರಲ್ಲೂ ಬಿ.ಎಲ್.ರೈಸ್ ರವರ ಗ್ರಂಥಗಳು ರಾಜಕುಲಗಳ ಚರಿತ್ರೆ ರಚನೆಗೆ ಸಹಕಾರಿಯಾಗಿವೆ. ಶಾಸನಾಧಾರಗಳ ಮೇಲೆ ರಚಿತವಾಗಿರುವ ಪ್ರಮಾಣಭೂತ ಗ್ರಂಥಗಳು ರಾಜಕುಲಗಳ ಚರಿತ್ರೆ ರಚನೆಗೆ ಸಹಕಾರಿಯಾಗಿವೆ. ಇತಿಹಾಸ ಕಟ್ಟುವಲ್ಲಿ ಪೂರಕ ಅಂಶಗಳಾಗಿವೆ. ಶಾಸನಗಳನ್ನು ಅಧ್ಯಯನ ಮಾಡುವಾಗ ರಾಜಕೀಯ ಇತಿಹಾಸದ ಜೊತೆಗೆ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳನ್ನು ಶಾಸನಗಳಿಂದ ಸಂಗ್ರಹಿಸಲಾಗಿದೆ.

ಪ್ರಾಚೀನ ಆಡಳಿತ ವ್ಯವಸ್ಥೆಯಲ್ಲಿ ರಾಜ್ಯಾಡಳಿತ ಮತ್ತು ಊರು(ಗ್ರಾಮ)ಗಳಾಗಿ ವಿಭಜನೆ ಮಾಡಿಕೊಂಡಿದ್ದು ಸರ್ವೇ ಸಾಮಾನ್ಯ. ಏಕೆಂದರೆ ಒಂದನ್ನು ಬಿಟ್ಟು ಇನ್ನೊಂದಿಲ್ಲ. ಗ್ರಾಮಗಳ ಮತ್ತು ನಗರಗಳ ಮೊತ್ತವೇ ರಾಜ್ಯ. ಎಲ್ಲಕ್ಕೂ ರಾಜನೇ ಅಧಿಪತಿ ಎಲ್ಲವೂ ಅವನ ಆಳ್ವಿಕೆಗೆ ಒಳಪಡುತ್ತದೆ.(ಚಿದಾನಂದ ಮೂರ್ತಿ ಎಂ.೨೦೦೨, ಕರ್ನಾಟಕ ಶಾಸನ ಸಾಂಸ್ಕೃತಿಕ ಅಧ್ಯಯನ, ಪುಟ ३३೬) ಪ್ರಾಚೀನರ ಪ್ರಕಾರ ರಾಜ್ಯ

ಎನ್ನುವುದು ರಾಜನಿಗೆ ಸೇರಿದ್ದು (ಜಯಸ್ವಾಲ್.ಕೆ.ಪಿ, ೧೯೬೭ ಹಿಂದೂ ಪೊಲಿಟಿ, ಪು ೧೮೯) ಪ್ರಜೆಗಳ ಹೊಣೆ ಮತ್ತು ಜವಾಬ್ದಾರಿ ರಾಜನ ಕರ್ತವ್ಯವಾಗಿರುತ್ತಿತ್ತು. ರಕ್ಷಿಸಲು ಸಲ್ಲದವನು ರಾಜನೇ ಅಲ್ಲ ಎನ್ನಬಹುದು. ರಾಜನಿರುವುದು ಪ್ರಜೆಗಳಿಗಾಗಿ ಅವರ ಕ್ಷೇಮಕ್ಕಾಗಿ ಐತರೇಯ ಬ್ರಾಹ್ಮಣಕದಲ್ಲಿ ಒಂದು ಕಥೆ ಇದೆ 'ದೇವತೆಗಳಿಗೂ ರಾಕ್ಷಸರಿಗೂ ಯುದ್ಧ ನಡೆಯುತ್ತಿತ್ತು ದೇವತೆಗಳನ್ನು ಅಸುರರು ಸೋಲಿಸಿದರು ಆಗ ದೇವತೆಗಳು ತಮಗೊಬ್ಬ ರಾಜನಿಲ್ಲದಿರುವುದೇ ತಮ್ಮ ಸೋಲಿಗೆ ಕಾರಣವೆಂದು ಭಾವಿಸಿದರು. ಒಬ್ಬ ರಾಜನನ್ನು ಆರಿಸಿಕೊಂಡರು'.(ಜಯಸ್ವಾಲ್.ಕೆ.ಪಿ,೧೯೬೭,ಹಿಂದೂ ಪೊಲಿಟಿ, ಪುಟ ೧೮೯) ಕೌಟಿಲ್ಯನ ಪ್ರಕಾರ ಮುಖ್ಯನ್ಯಾಯವು ಹುಟ್ಟಿಕೊಂಡಿರುವುದರಿಂದ ಈ ರಾಜ ಪದವಿ ರಚನೆಯಾಯಿತು ಈ ನಿಟ್ಟಿನಲ್ಲಿ ಶಿಕಾರಿಪುರದಲ್ಲಿ ಅರಸರ ಅಧಿಪತ್ಯ ಮೂಡಿಬಂದಿದೆ. ಇವುಗಳಲ್ಲಿ ರಾಜರಿಗೆ ಸಂಬಂಧಿಸಿದ ಶಾಸನಗಳಿಂದ ಅವರ ಆಳ್ವಿಕೆ ಬಗ್ಗೆ ಹೆಚ್ಚಿನ ಅಂಶಗಳನ್ನು ಕ್ರೋಢಿಕರಿಸಿದೆ. ಅವರಿಗೆ ಸಂಬಂಧಿಸಿದ ಆಡಳಿತದ ವಿವರವಿದೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಕಲ್ಯಾಣ ಚಾಳುಕ್ಯರಿಗೆ ಸಂಬಂಧಿಸಿದಂತೆ ಲಭಿಸುತ್ತವೆ.

ವಿಕ್ರಮಾದಿತ್ಯನ ಆಳ್ವಿಕೆ ಶಾಂತಿಯುತವಾಗಿತ್ತೆಂದು ಕಂಡುಬರುತ್ತದೆ. ಈತನ ಆಳ್ವಿಕೆಯ ಕೊನೆವರೆಗೆ ಕಲ್ಯಾಣವೇ ರಾಜಧಾನಿಯಾಗಿತ್ತು (ಎ.ಕ-೭, ಶಿಕಾರಿ.೧೦೦, ಕ್ರಿ.ಶ.೧೧೨೯) ವಿಕ್ರಮಾದಿತ್ಯನ ವಂಶಾವಳಿಯನ್ನು ಕಾವ್ಯಗಳಂತೆ ನಿರೂಪಿಸಿದೆ. ಕೆಲವು ಶಾಸನಗಳು ವಿಕ್ರಮಾದಿತ್ಯ ಮತ್ತು ಬೊಂತಾದೇವಿಯರ ಪುತ್ರ ೨ನೇ ತೈಲಪನಿಂದ ಆರಂಭಿಸಿದೆ. (ಇ.ಅ.ಳ, ೨೭೬, ಕ್ರಿ.ಶ.೧೦೭೫).

ಆಡಳಿತ ವ್ಯವಸ್ಥೆ:

ಪ್ರಾಚೀನ ಆಡಳಿತವನ್ನು ಸ್ಥೂಲವಾಗಿ ರಾಜ್ಯಾಡಳಿತ ಹಾಗೂ ಊರುಗಳ ಆಡಳಿತವಾಗಿ ಅಧ್ಯಯನ ಮಾಡಬಹುದು. ಈ ಕಾಲದಲ್ಲಿ ರಾಜನಿಗೆ ಇದ್ದ ಸ್ಥಾನ ಮಾನಗಳು. ಅವನ ಸಹಾಯಕರಾದ ಅಧಿಕಾರಿಗಳು ಇವರನ್ನು ಕುರಿತು ವಿವೇಚನೆ ಮಾಡಿದ್ದಾರೆ. ರಾಜ್ಯಾಡಳಿತದ ಬಹುಭಾಗವನ್ನು ತಿಳಿದುಕೊಂಡಂತಾಗುತ್ತದೆ. ಪ್ರಜೆಗಳು ನಾಯಕನಾದ ರಾಜನನ್ನು ದೈವದ ಮಟ್ಟಕ್ಕೆ ಏರಿಸಿರುವುದು ಕಂಡುಬರುತ್ತದೆ. ರಾಜನು ಬಾಲಕನೇ ಆಗಿದ್ದರೂ ಮನುಷ್ಯ ಅಥವಾ ಶ್ರೀ ಸಾಮಾನ್ಯ ಎಂದು ಕಾಣುವಂತಿಲ್ಲ. ಒಂದು ದೇಶದ ಜನ ಜೀವನವು ಆ ದೇಶದ ರಾಜನನ್ನು ಅವಲಂಭಿಸಿತ್ತು. ರಾಜ್ಯ, ಮಂಡಲ ಎಂಬ ಅರ್ಥದಲ್ಲಿ ಇದ್ದು, ಮಂಡಲವನ್ನು ಆಳುತ್ತಿದ್ದವರಿಗೆ ನಾಳ್ಗಾಂವುಂಡರು ಎಂತಲೂ ಕರೆಯುತ್ತಿದ್ದರು(ಎ.ಕ-೭, ಶಿಕಾರಿ.೨೩೮, ಕ್ರಿ.ಶ.೧೧೨೮) ವಿಭಾಗಗಳನ್ನು ಮಾಡಿರುವುದು ಕಾಣಬಹುದು. ಒಂದು ಶಾಸನದಲ್ಲಿ ಸಾಂತರ ಆಡಳಿತದಲ್ಲಿ ಸಾಂತಳಿಗೆಯ ಕೊಡನಾಡು ರಾಜಕೀಯ ವಿಭಾಗವಾಗಿತ್ತು. (ಎ.ಕ-೭, ಶಿಕಾರಿ.೫೩, ಕ್ರಿ.ಶ.೧೦೨೭)

ವಿಕ್ರಮಾದಿತ್ಯನ ತಮ್ಮ ಜಯಸಿಂಹನು ಯುವರಾಜನಾಗಿ ಪುಲಿಗೆರೆ ಕಾಳವಳ (ಕೋಸವಳ) ಬನವಾಸೆ ನಾಡು, ಬೆಳ್ವುಲ ಮೊದಲಾದ ದಕ್ಷಿಣ ಸಮುದ್ರದ ವರೆಗೆ ಭೂಮಿಯನ್ನು ಆಳುತ್ತಿದ್ದನು. ವಿಕ್ರಮಾದಿತ್ಯ-ಜಯಸಿಂಹರು ಶಾಸನಗಳಲ್ಲಿ ವಿಕ್ರಮಾದಿತ್ಯ ಮತ್ತು ಜಯಸಿಂಹರು ಅನ್ಯೋನ್ಯತೆಯಿಂದ ಇದ್ದರೆಂದು ಹೇಳಲಾಗಿದೆ. ಜಯಸಿಂಹನು ತನ್ನ ಪ್ರಶಸ್ತಿಯಲ್ಲಿ ಅಣ್ಣ ನಾಂಕಕಾರನೆಂದು ಹೇಳಿಕೊಂಡಿರುವುದರಿಂದ ಇವನು ವಿಕ್ರಮಾದಿತ್ಯನಿಗೆ ವಿಶ್ವಾಸಿಯಾಗಿದ್ದನೆಂದು ಸ್ಪಷ್ಟವಾಗುತ್ತದೆ. (ಎ.ಕ-೭, ಶಿಕಾರಿ.೨೯೭, ಕ್ರಿ.ಶ.೧೦೭೯) ಉದಯಾದಿತ್ಯ ಸೈನ್ಯ ಸಮೇತನಾಗಿ ಬನವಾಸಿಗೆ ಬಂದು ಕೋಟೆಯ ಹೊರಗಡೆ ಬೀಡುಬಿಡುತ್ತಾನೆ. ಬಹುಶಃ ಇಲ್ಲಿ ಯುದ್ಧ ನಡೆದಿರಬೇಕು. ಆದರೆ ಅದರ ಬಗ್ಗೆ ವಿವರಣೆ ಮಾತ್ರ ತಿಳಿದು ಬಂದಿರುವುದಿಲ್ಲ. ತುಂಬ್ರಿ ಹೊಸೂರು ಶಾಸನದಲ್ಲಿ ಮಹಾ ಸಾಮಂತಾಧಿಪತಿ ಮಹಾ ಪ್ರಚಂಡ ದಂಡನಾಯಕ ಉದಯಾಧಿತ್ಯನು ಬನವಾಸಿ-೧೨೦೦೦, ಸಾಂತಳಿಗೆ-೧೦೦೦ಗಳನ್ನು ಆಳುತ್ತಿದ್ದನೆಂದು ಹೇಳಲಾಗಿದೆ. (ಎ.ಕ-೭, ಶಿಕಾರಿ.೨೯೫, ಕ್ರಿ.ಶ.೧೦೭೩) ವಿಕ್ರಮಾದಿತ್ಯನು ಕುಮಾರ ವೃತ್ತಿಯಿಂದ ಆಳುತ್ತಿದ್ದನೆಂದು ಹೇಳಲಾಗಿದೆ. (ಎ.ಕ-೭, ಶಿಕಾರಿ.೮೩, ಕ್ರಿ.ಶ.೧೦೫೮) ಜಯಸಿಂಹ ಯುವರಾಜನು ನಿಷ್ಠಾವಂತ ಸಹೋದರನೂ ಆಗಿದ್ದನೆಂದು ಶಾಸನ ಉಲ್ಲೇಖಿಸುತ್ತದೆ (ಎ.ಕ-೭, ಶಿಕಾರಿ.೨೯೭, ಕ್ರಿ.ಶ.೧೦೮೦)

ಆಡಳಿತದಲ್ಲಿ ರಾಜ್ಯವನ್ನು ಹಲವಾರು ವಿಭಾಗೀಯ ಪ್ರಾಂತ್ಯಗಳ ರೂಪದಲ್ಲಿ, ಹಳ್ಳಿಗಳಲ್ಲಿ ಆಳ್ವಿಕೆ ಮಾಡಿದ್ದನ್ನು ಕಾಣಬಹುದು. ಕಾಣನೂರು ಪಾನುಂಗಲ್-೫೦೦ ವಿಭಾಗಗಳಲ್ಲಿ ಇರುತ್ತಿದ್ದವು (ಎ.ಕ-೭, ಶಿಕಾರಿ.೧೫೨, ಕ್ರಿ.ಶ.೧೦೬೦) ಪನ್ನಿಚರಸಿದ ಕಂಪಣಂ, ಎಡೆನಾಡೆ, ಎಪ್ಪತ್ತರಾ ಬಳಿಯ ಅಗ್ರಹಾರಂ ತುಂಬ್ರಿ ಹೊಸೂರು ಎಂದಿದೆ. (ಎ.ಕ-೭, ಶಿಕಾರಿ.೨೯೭, ಕ್ರಿ.ಶ.೧೦೭೯) ಚಿಕ್ಕಮಾಗಡಿ ನಾಗರ ಖಂಡ-೭೦ ರಲ್ಲಿ ಇದ್ದವು ಎಂಬ ಉಲ್ಲೇಖ ಕಂಡುಬರುತ್ತದೆ. (ಎ.ಕ-೭, ಶಿಕಾರಿ.೨೦೪, ಕ್ರಿ.ಶ.೧೯೯೦) ಬಳ್ಳಿಗಾವಿ ನಾಗರ ಖಂಡ-೭೦ರಲ್ಲಿದೆ. (ಎ.ಕ-೭, ಶಿಕಾರಿ.೧೧೪, ಕ್ರಿ.ಶ.೧೯೯೬) ಕಾಲಡಿ ತೊಂಬತ್ತಾರ ಚಾವುಂಡಹಳ್ಳಿ ಎಂದು ಹೇಳಲಾಗಿದೆ. (ಎ.ಕ-೭, ಶಿಕಾರಿ.೧೬೬, ಕ್ರಿ.ಶ.೧೯೯೨) ಜಿಡ್ಡಳಿಗೆ-೭೦ರ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೮೩, ಕ್ರಿ.ಶ.೧೦೫೮) ಇದರಲ್ಲೂ ಜಿಡ್ಡಳಿಕೆ-೭೦ರ ಉಲ್ಲೇಖವನ್ನು ಬಳ್ಳಿಗಾವಿಯ ಶಾಸನದಲ್ಲಿ ತಿಳಿಯಬಹುದು. (ಎ.ಕ-೭, ಶಿಕಾರಿ.೧೩೫, ಕ್ರಿ.ಶ.೧೦೭೮) ಗಜಗಂಡ-೬೦೦ ಉಲ್ಲೇಖ ಬರುತ್ತದೆ(ಎ.ಕ-೭, ಶಿಕಾರಿ.೩೧೧, ಕ್ರಿ.ಶ.೧೧೦೦) ಬನವಾಸೆ ನಾಡ ಕಂಪಣಂ ಮುಗುನ್ದ ಪನ್ನೆರಡರ ಬಳಿಯ ಬಾಡ ಕುನ್ದವಿಗೆ ಎಂದಿದೆ (ಇ.ಅ.-೪, ೨, ಕ್ರಿ.ಶ.೧೦೭೫) ಬನವಾಸೆ......ರ್ಚ್ಛಾಸಿರ ಮುಮಂ ಸುಖದಿಂದಾಳುತ್ತಿರಲಾಬಳಿಯ ಕಂಪಣ ಎಡೆ(ನಾ...ಚೆ)೭೦ರಕ್ಕೆ ಎಂದಿದೆ (ಎ.ಕ-೭, ಶಿಕಾರಿ.೩೧೬, ಕ್ರಿ.ಶ.೧೧೧೭) ಸಾಸ್ತಳಿಗೆ ಸಾಸಿರದೊಳಗೆ ಶ್ರೀಮದಾಗ್ರಹಾರ ಬನ್ನಿಯೂರಲ ಎಂದಿದೆ.(ಮೈ.ಅ.ರಿ.೧೯೩೦, ಸಂಖ್ಯೆ-೭೬, ಕ್ರಿ.ಶ.೧೦೮೦)

ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಬಲದೇವಯ್ಯನು ಬನವಾಸೆ-೧೨೦೦೦, ೧೮ ಅಗ್ರಹಾರ ಸುಂಕವನ್ನು ಆಳುತ್ತಿದ್ದನೆಂದರೆ ಪ್ರಭುವಾಗಿ ರಾಜ್ಯಭಾರ ಮಾಡುತ್ತಿರಲಿಲ್ಲ. (ಎ.ಕ-೭, ಶಿಕಾರಿ.೨೨೫, ಕ್ರಿ.ಶ.೧೨೦೪).

ದೊಡ್ಡ ಗ್ರಾಮಗಳ ಆಡಳಿತ ನಡೆಸುವವರಿಗೆ ನಾಗರ ಖಂಡ-೭೦ ರಲ್ಲಿ ಪ್ರಭು ಗಾವುಂಡರು ಎಂದು ಕರೆದಿದೆ. (ಎ.ಕ-೭, ಶಿಕಾರಿ.೨೨೫, ಕ್ರಿ.ಶ.೧೨೦೪) ಒಂದು ಊರಿನಲ್ಲಿ ನಿರ್ಮಾಣವಾದ ದೇವಸ್ಥಾನಕ್ಕೆ ಬೇರೆ ಊರುಗಳು ದತ್ತಿಗಳನ್ನು ಕೊಡಲು ಮುಂದೆ ಬರುತ್ತಿದ್ದವು. ಅಂಥಹ ಸಮಯಗಳಲ್ಲಿ ತನ್ನ ಊರಿನ ಕಾಣಿಕೆಯನ್ನು ಆಯಾ ಊರಿನ ಗೌಡನೆ ಹೆಸರಿಸಿರುವುದನ್ನು ನೋಡಿದರೆ ಗೌಡನ್ನು ಊರಿನ ಪ್ರತಿನಿಧಿಯೆಂದು ಮಾತ್ರವಲ್ಲದೆ ಊರಿನ ಜನರ ದೃಢವಿಶ್ವಾಸವು ಗೋಚರವಾಗುತ್ತದೆ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಬಹುಶಃ ಆ ಕಾಲಕ್ಕೆ ಅತ್ಯಂತ ಪ್ರಸಿದ್ಧವಾದ ಪಟ್ಟಣವೆಂದರೆ ಬಳ್ಳಿಗಾವಿಯನ್ನು ಶಾಸನಗಳಲ್ಲಿ ಶ್ರೀಮದ ನಾಡಿಪಟ್ಟಣವೆಂದು ಹೇಳಿದೆ. (ಎ.ಕ-೭, ಶಿಕಾರಿ.೯೨, ಕ್ರಿ.ಶ.೧೦೬೮) ಬಳ್ಳಿಗಾವಿಯನ್ನು ಪಟ್ಟಣಗಳ ತಮರ್ಮನೆ ಎಂದು ಹೊಗಳಿವೆ (ಎ.ಕ-೭, ಶಿಕಾರಿ.೧೦೦, ಕ್ರಿ.ಶ.೧೧೭೯) ಆ ಪಟ್ಟಣದ ಪುರಗಳು ಲಕ್ಷ್ಮಿಯ ಮೂರು ಕಣ್ಣುಗಳಿದ್ದಂತೆ ಆಕೆಯ ಕೊರಳ ಮೂರು ಮುತ್ತಿನ ಸರಗಳಿದ್ದಂತೆ ಇದ್ದವೆಂದು ಶಾಸನ ದಾಖಲಿಸುತ್ತದೆ. (ಎ.ಕ-೭, ಶಿಕಾರಿ.೧೦೦, ಕ್ರಿ.ಶ.೧೧೭೯) ನಾಡಿನ ಆಯಾ ಊರಿಗೆ ಮುಖ್ಯಸ್ಥನಾದ ಪ್ರಭು ಗಾವುಂಡ ಅಥವಾ ಊರಗಾವುಂಡನಿರುತ್ತಿದ್ದನು.ಇದಕ್ಕೆ ಕೆಲವು ನಿದರ್ಶನಗಳನ್ನು ಕೊಡಬಹುದು. ಕ್ರಿ.ಶ.೧೦೩೦ ರಲ್ಲಿ ಮಂಡಳಿಕ ಬ್ರಹ್ಮ ದೇವರಸನ್ನು ನಾಡ್ಗಾವುಂಡ ನಾಗಾರ್ಜುನನ್ನು ಊರಗಾವುಂಡ ಅರಾಜ ಗಾವುಂಡರು ಆಳುತ್ತಿದ್ದರು. (ಎ.ಕ-೭, ಶಿಕಾರಿ.೮೧, ಕ್ರಿ.ಶ.೧೦೩೦) ಮಂಡಲೇಶ್ವರನಿಗೂ ನಾಡ ಪ್ರಭುವಿಗೂ ಮಧ್ಯೆ ಮಾನ್ನೆಯ ಅಥವಾ ಮಾನ್ಯ ಎಂಬ ಹೆಸರಿನ ಅಧಿಕಾರಿಯ ಹೆಸರು ಸುಳಿಯುತ್ತದೆ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಕೆಲವೆಡೆ ಮಾನ್ನೆಯ ಎಂಬುದು ನಾಡಪ್ರಭುವಿನ ಸ್ಥಾನದಲ್ಲಿ ಕಾಣಿಸಿಕೊಳ್ಳುವುದುಂಟು (ಎ.ಕ-೭, ಶಿಕಾರಿ.೧೯, ಕ್ರಿ.ಶ.೧೦೬೬) ಬಹುಶಃ ರಾಜ್ಯದ ಬೇರೆ ಬೇರೆ ಭಾಗಗಳ ಆಳ್ವಿಕೆಯ ಹೊಣೆಯನ್ನು ದಂಡನಾಯಕರಿಗೆ ರಾಜನು ಹಂಚಿಕೊಡುತ್ತಿದ್ದನೆಂದು ಕಾಣುತ್ತದೆ. ಮಹಾಪ್ರಚಂಡನಾಯಕ ಪದವಿಯು ದಂಡನಾಯಕ ಪದವಿಗಿಂತ ಮೇಲಿನದು ಎಂದು ಶಾಸನವೊಂದರಿಂದ ತಿಳಿದು ಬರುತ್ತದೆ.

ಪ್ರಭುಗಳು:

ಪ್ರಾಚೀನ ಕರ್ನಾಟಕದ ರಾಜರು ತಾವು ಮೂಲತಃ ದೈವೀ ಪುರುಷನೊಬ್ಬನಿಂದ ಇಳಿದು ಬಂದವರೆಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತಾರೆ. ರಾಜರು ದೈವದ ಅವತಾರ ಎನ್ನುವುದು ನೋಡಬಹುದು. ಉದಾಹರಣೆಗೆ ಕದಂಬ ವಂಶವು ತಮ್ಮ ಮೂಲಪುರುಷ

ಈಶ್ವರನೆಂದು ಭಾವಿಸಿದೆ.(ಚಿದಾನಂದ ಮೂರ್ತಿ ಎಂ.೨೦೧೧, ಕನ್ನಡ ಸಾಂಸ್ಕೃತಿಕ ಅಧ್ಯಯನ, ಪುಟ೩.೨೨)ಚಾಲುಕ್ಯರು ಕೆಲವೆಡೆ ತಮ್ಮ ವಂಶಕ್ಕೆ ವಿಷ್ಣು ಮೂಲವೆಂದು, ಕೆಲವೆಡೆ ಬ್ರಹ್ಮ ಮೂಲವೆಂದು ಹೇಳಿಕೊಂಡಿದ್ದಾರೆ. ಅಶ್ವತ್ಥಾಮನು ಚಾಳುಕ್ಯ ವಂಶಕ್ಕೆ ಮೂಲ ಪುರುಷನೆಂದು ಶಾಸನಗಳು ಹೇಳುತ್ತವೆ.(ಮೈ.ಅ.ರೀ-೧೯೩೫, ಪುಟ.೧೧೭,ಕ್ರಿ.ಶ.೯೫೧) ಸಿಸುಗಾಲಿಯು ಪಾಂಡ್ಯರ ವಂಶಾವಳಿಯನ್ನು ಚಂದ್ರ+ಕಮ್ಮಲದೇವಿ->ಕಾಮ+ಭಾಗಲ ದೇವಿ-> ಚಂದ್ರ+ಸಾವಲದೇವಿ-> ಕಾಮದೇವಿ ಎಂದು ಕೊಡಲಾಗಿದ್ದು ಕೊನೆಯ ಕಾಮದೇವನು ವಿಕ್ರಮಾದಿತ್ಯ ಮಹಾ ಮಂಡಲೇಶ್ವನಾಗಿದ್ದನು (ಎ.ಕ-೭, ಶಿಕಾರಿ.೯೯, ಕ್ರಿ.ಶ.೧೧೧೩) ವಿಕ್ರಮಾದಿತ್ಯ ಮಹಾಮಂಡಳೇಶ್ವರನಾದ ತ್ರಿಭುವನಮಲ್ಲ ಕಾಮದೇವರಸ ಪ್ರಶಸ್ತಿಯನ್ನು ಶಾಸನದಲ್ಲಿ ಗೋಕರ್ಣ್ಣಪುರ ವರಾಧೀಶ್ವರ/ಪಣ್ಡುವಂಶ ಚೂಡಾಮಣಿ /ಗಾವಣಿ ೧ ಪರಾಂಗನನಾದೀನನ್ದನ/ ಬುಧಜನಂನನ್ದನ/ಕೊಂಕಣ ರಾಷ್ಟ್ರಪಾಲ/ಪುಸಿವರ ಸೋಲ /ಕೀರ್ತಿಗೆನಲ್ಲ/ನೀಗಳಂಕಮಲ್ಲ/ಶ್ರೀ ತಶ್ರೀ ಮತ್ತ್ರಿ ಭುವನಮಲ್ಲದೇವ ಪಾದಾರವಿನ್ದ/ವೀರವೃತ್ತಿ ಕನ್ದಳೀಕನ್ದ ಎಂದಿದೆ (ಎ.ಕ-೭, ಶಿಕಾರಿ.೯೯, ಕ್ರಿ.ಶ.೧೧೧೩) ಪೆರ್ಮಾಡಿ ದೇವನು ಕ್ರಿ.ಶ.೧೧೦೩ರಲ್ಲಿ ವಡೇರ ಎಚರಸನ ಬೀಡಿಗೆ ದಾಳಿ ಮಾಡಿದ್ದನ್ನು ತಿಳಿಸುತ್ತದೆ.(ಎ.ಕ-೭, ಶಿಕಾರಿ.೧೧೫, ಕ್ರಿ.ಶ.೧೧೦೩) ಸಿಂದ ವಂಶದ ಮಹಾಮಂಡಳೇಶ್ವರನಾದ ೨ನೇ ಚಟ್ಟರಸನ ಉಲ್ಲೇಖ ಗೊಗ್ಗ ಗ್ರಾಮದ ಶಾಸನದಲ್ಲಿ ಸಿಗುತ್ತದೆ.

ಆಡಳಿತಾಧಿಕಾರಿಗಳು:

ಪ್ರಾಚೀನ ದೊರೆಗಳ ರೀತಿಯಲ್ಲಿಯೇ ರಾಜ ಮನೆತನದವರು ತನ್ನ ಕೈಕೆಳಗೆ ಆಳ್ವಿಕೆ ಸುಲಭ ಮಾಡಿಕೊಳ್ಳಲು ಮಂತ್ರಿ ಮತ್ತು ಇತರೆ ಆಡಳಿತ ವರ್ಗಗಳನ್ನು ಇಟ್ಟುಕೊಂಡಿದ್ದಾರೆ. ಈ ಪದವಿಗಳು ವಂಶಪಾರಂಪರೆಯಾಗಿ ತಂದೆಯಿಂದ ಮಕ್ಕಳಿಗೆ ಹರಿದು ಬರುತ್ತಿದ್ದವು. ವಡ್ಡಾರಾಧನೆಯ ಒಂದು ಕಥೆಯಲ್ಲಿ ರಾಜನು ತನ್ನ ಮಂತ್ರಿಯ ಸಾವಿನ ಬಳಿಕ ಅವನ ಪದವಿಯನ್ನು ಅವನ ಮಕ್ಕಳಿಗೆ ಕೊಟ್ಟಿದ್ದು, ಅವರು ಅನರ್ಹರೆಂದು ತಿಳಿದ ಬಳಿಕ ಅವರ ಪದವಿಯನ್ನು ಕಿತ್ತುಕೊಂಡನು.ಅವರು ಯೋಗ್ಯತೆಯನ್ನು ಸಂಪಾದಿಸಿದ ಮೇಲೆ ಮರಳಿ ಹಿಂದಕ್ಕೆ ಕೊಟ್ಟಿದ್ದನ್ನು ಇಲ್ಲಿ ನೆನೆಯಬಹುದು. (ನರಸಿಂಹಾಚಾರ್.ಡಿ.ಎಲ್,೧೯೫೯, ವಡ್ಡಾರಾಧನೆ, ಪುಟ-೨,೪) ಬನವಾಸೆ ಪನ್ನಿರ್ಚ್ಛಾಸಿರಿಸಿದವಳರಾಯದ ಸುಂಕಮಂ ವಡ್ಡರಾವುಳ ಎರಡುಂಬಿ...ಕಡೆಯು ಮನಳುತ್ತಂ ಎಂದು ಪೆರ್ಗ್ಗಡೆ ಲೋಕನಾಥಯ್ಯನನ್ನು ಶ್ರೀಮದ್ದಣ್ಣನಾಯಕ ಪೇರ್ಗ್ಗಡೆ ಲೋಕನಾಥಯ್ಯ ಎಂದು ಸಾನ್ತಳಿಗೆ ಸಾಸಿರಕ್ಕೆ ಪೇರ್ಗ್ಗಡೆತನಂ ಗೆಯುತ್ತಮಿರೆ ಎಂದು ಉಲ್ಲೇಖವಿದೆ (ಮೈ.ಅ.ರೀ.೧೯೩೦ ಸಂಖ್ಯೆ-೭೬, ಕ್ರಿ.ಶ.೧೦೮೦) ಇಮ್ಮಡಿ ಸೋಮೇಶ್ವರ ಚರ್ಕವರ್ತಿಯಾದಾಗ ತಮ್ಮ ವಿಕ್ರಮಾದಿತ್ಯನ ಮೇಲೆ ನಂಬಿಕೆ ಕಳೆದುಕೊಂಡು ಅವನ

ಅಧಿಕಾರದಲ್ಲಿದ್ದ ಬನವಾಸಿ-೧೨೦೦೦ದ ಒಡೆತನವನ್ನು ಬಿಡಿಸಿ ಲಕ್ಷ್ಮಣನಿಗೆ ಕೊಡುತ್ತಾನೆ. (ಎ.ಕ-೭, ಶಿಕಾರಿ.೧೩೬, ಕ್ರಿ.ಶ.೧೦೬೮) ಮಹಾಸಾಮಂತಾಧಿಪತಿ ಮಹಾಪ್ರಚಂಡನಾಯಕ ತಂಬರಸ ಚಕ್ರಿಯ ಆದೇಶದ ಮೇರೆಗೆ ಚೋಳ ವಂಶದ ವಿವಿಧ ಶಾಖೆಯ ಅರಸನ್ನು ಸೋಲಿಸಿ ಸಾಂತಳಿಗೆ -೧೦೦೦, ಮಂಡಳಿ-೧೦೦೦, ಜಿಡ್ಡಳಿಗೆ -೭೦, ನಾಗರಖಂಡ-೭೦ ಮತ್ತು ಹಲವಾರು ಭತ್ತ ಗ್ರಾಮಗಳನ್ನು ಬಿಣಸ ವೃತ್ತಿಯೆಂಬ ಆಳುತ್ತಿದ್ದನು. (ಮೈ.ಅ.ರೀ.೧೯೩೦ ಸಂಖ್ಯೆ-೭೬, ಕ್ರಿ.ಶ.೧೦೮೦) ಬಡತಿ ಹೊಂದಿದ ಅಧಿಕಾರ ವರ್ಗಗಳನ್ನು ಕೂಡ ಗುರುತಿಸಬಹುದು.

ಮಹಾಸಾಮಂತಾಧಿಪತಿ ಮಹಾಪ್ರಚಂಡನಾಯಕನಾಗಿ ಬಡ್ತಿ ಹೊಂದಿದ್ದನ್ನು ಶಾಸನ ತಿಳಿಸುತ್ತದೆ. (ಎ.ಕ-೭, ಶಿಕಾರಿ.೩೧೧, ಕ್ರಿ.ಶ.೧೧೦೦) ಕ್ರಿ.ಶ. ೧೦೭೯ ರಲ್ಲಿ ಸಾಂತಳಿಗೆ -೧೦೦೦ವನ್ನು ಮಾತ್ರ ಪ್ರಭುವಾಗಿ ಆಳುತ್ತಿದ್ದು ಮುಂದೆ ಒಂದೇ ವರ್ಷದಲ್ಲಿ ಅಂದರೆ ಕ್ರಿ.ಶ. ೧೦೮೦ ರಲ್ಲಿ ತಂಬರಸನು ಸಾಂತಳಿಗೆ -೧೦೦೦ ವಲ್ಲದೆ, ಮಂಡಳಿ -೧೦೦೦, ಜಿಡ್ಡಳಿಗೆ-೭೦, ನಾಗರಖಂಡ -೭೦ ಮೊದಲಾದ ಭತ್ತ ಗ್ರಾಮಗಳನ್ನು ಬೆಳಸ ವೃತ್ತಿಯಿಂದ ಪ್ರಭುವಾಗಿ ಆಳುತ್ತಿದ್ದನೆಂದು ಹೇಳಲಾಗಿದೆ. (ಮೈ.ಅ.ರೀ. ೧೯೩೦,ಸಂಖ್ಯೆ-೭೬, ಕ್ರಿ.ಶ.೧೦೮೦) ಶ್ರೀ ಭೀಮಣಯ್ಯನು ಕ್ರಿ.ಶ. ೧೧೯೫ ರಲ್ಲಿ ಪತ್ತಳೆಕರಣನಾಗಿದ್ದು ಕ್ರಿ.ಶ.೧೧೯೮ ರಲ್ಲಿ ಅಂತಃಪುರಾಧ್ಯಾಕ್ಷ ಹೇರಲಾಳ ಕನ್ನಡ ಸಂಧಿವಿಗ್ರಹಿಯಾಗಿ ಬಳ್ಳಿಗಾವಿಯಲ್ಲಿದ್ದ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೦೬, ಕ್ರಿ.ಶ.೧೧೯೮) ಅನಂತ ಪಾಳಯ್ಯನು ಕ್ರಿ.ಶ.೧೦೮೫ ರಲ್ಲಿ ಪನ್ನಾಯದ ಅಧಿಷ್ಟಾಯಕ ನಾಗಿದ್ದು, ಮುಂದೆ ಕ್ರಿ.ಶ.೧೧೯೭ ರಲ್ಲಿ ಬನವಾಸೆ-೧೨೦೦೦ದ ವಡ್ಡರಾವುಳ ಸುಂಕದಾಧಿಷ್ಟಾಯಕನಾಗಿದ್ದನು (ಎ.ಕ-೭, ಶಿಕಾರಿ.೯೮, ಕ್ರಿ.ಶ.೧೧೦೩).

ಗೋವಿಂದ ರಾಜನು ಬನವಾಸಿ ನಾಡಿನ ವಡ್ಡರಾವುಳ ಸುಂಕದ ಶ್ರೇಣಿ ಅಧಿಕಾರಿ (ಎ.ಕ-೭, ಶಿಕಾರಿ.೧೦೩, ಕ್ರಿ.ಶ.೧೧೩೧) ಗುಂಡಮರಸನು ಬನವಾಸೆ ನಾಡೊಳಗಣ ಕಂಪಣ ಅಗ್ರಹಾರ ವಡ್ಡರಾವುಳ ಹೆಜ್ಜುರಕ ಎರಡು ಬಿಲ್ಕೊಡೆಗಳ ಮಹಾಸಾಮಂತಾಧಿಪತಿ ಮಹಾಪ್ರಚಂಡನಾಯಕ ಶ್ರೇಣಿಯ ಅಧಿಕಾರಿಯಾಗಿದ್ದನು (ಎ.ಕ-೭, ಶಿಕಾರಿ.೧೧೧, ಕ್ರಿ.ಶ.೧೦೮೦) ಬಲದೇವಯ್ಯನು ಕ್ರಿ.ಶ. ೧೦೭೯ ರಲ್ಲಿ ಬನವಾಸಿ -೧೨೦೦೦, ಹದಿನೆಂಟು ಅಗ್ರಹಾರದ ಸುಂಕದ ಅಧಿಕಾರಿ (ಎ.ಕ-೭, ಶಿಕಾರಿ.೨೯೭, ಕ್ರಿ.ಶ.೧೦೭೯) ಹಿರಿಯ ಮಹಾಸಾಮಂತಾಧಿಪತಿ, ಮಹಾಪ್ರಚಂಡ ನಾಯಕನಾದ ಅನಂತ ಪಾಳನ ಕೆಳಗೆ ಮಾದಿರಾಜನು ಬನವಾಸಿ-೧೨೦೦೦ ದ ವಡ್ಡರಾವಿಳ ಸುಂಕದ ಅಧಿಷ್ಠಾಯಕನಾಗಿದ್ದನು. (ಎ.ಕ-೭, ಶಿಕಾರಿ.೧೩, ಕ್ರಿ.ಶ.೧೧೯೭) ಅನಂತ ಪಾಳನ ಕೆಳಗೆ ಬನವಾಸಿ-೧೨೦೦೦ದ ವಡ್ಡರಾವುಳ ಪೆಜ್ಜುರಕ ೨ ಬೀಲ್ಕೊಡೆಯನ್ನು ಆಳುತ್ತಿದ್ದನು. ಈತನ ಮೈದುನನಾದ ತ್ರಿವಳಿಭಟ್ಟನು ಕೆಳಗಿನ

ಅಧಿಕಾರಿಯಾಗಿ ಮಹಾವಡ್ಡಗ್ರಾಮದಲ್ಲಿ ಪೆರ್ಗ್ಗಡೆತನಗೈಯುತ್ತಿದ್ದನು (ಎ.ಕ–೭, ಶಿಕಾರಿ.೧೯೨, ಕ್ರಿ.ಶ.೧೧೦೭) ಮಾದಿರಾಜನಿಗೆ ಸಂಬಳವೆಂದು ಬಿಟ್ಟಿದ್ದ ಕಿರುಕುಳ ಸುಂಕದಲ್ಲಿ ಕೆಲವು ಹಣವನ್ನು ಈತನು ದೇವರಿಗಾಗಿ ದಾನ ಮಾಡಿದ ಉಲ್ಲೇಖವಿದೆ. (ಎ.ಕ–೭, ಶಿಕಾರಿ.೧೩, ಕ್ರಿ.ಶ.೧೯೯೭) ಬರ್ಮದೇವನು ಕ್ರಿ.ಶ.೧೦೭೭ ರಲ್ಲಿ ಮಹಾಸೇನಾಧಿಪತಿಯಾಗಿದ್ದನು (ಎ.ಕ–೭, ಶಿಕಾರಿ.೧೨೪, ಕ್ರಿ.ಶ.೧೦೭೭) ಕ್ರಿ.ಶ.೧೧೦೦ ರ ಸುಮಾರಿಗೆ ಗಜಗಂಡ –೬೦೦ ನ್ನು ಬನವಾಸೆ– ೧೨೦೦೦ದ ... ಸಪ್ತರ್ಧ ಲಕ್ಷದ ಪನ್ನಾಯವನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಸಂದರ್ಭ ಸಿಕ್ಕಾಗ ಒಡೆಯನ ಹಣವನ್ನು ಅಪಹರಿಸುವ ದಂಡನಾಯಕರು ಇದ್ದರೆಂದು ಒಂದು ಶಾಸನ ತಿಳಿಸುತ್ತದೆ (ಎ.ಕ–೭, ಶಿಕಾರಿ.೧೩೭, ಕ್ರಿ.ಶ.೧೧೧೪) ಇನ್ನೊಂದು ಶಾಸನದಲ್ಲಿ ಅವನ ಒಡೆಯನನ್ನು ಮರ್ಧಿಸುವಂತೆಹುದು ಆಗಿದ್ದಿತು. ಅದು ಅನೇಕರನ್ನು ಕಾಪಾಡುವಂತೆ ಆಗಿತ್ತು ಈ ಮಾತುಗಳಲ್ಲಿ ನಿಯೋಗಿ ಅಥವಾ ದೂತನ ಯೋಗ್ಯತೆ ಕರ್ತವ್ಯ ಹೊರೆ ಹೊಣೆಗಳನ್ನು ಪ್ರತಿಫಲಕವಾಗಿರುವುದನ್ನು ಗಮನಿಸಬೇಕು. ಇದು ರಾಜ್ಯದ ಅಥವಾ ರಾಜನ ಹಿತಾಸಕ್ತಿಗಳ ದೂತನನ್ನು ಅವಲಂಬಿಸಿದ್ದವು. ದಂಡನಾಯಕರಾದಂತಹ ಹಿರಿಯ ಅಧಿಕಾರಿಗಳು ನಿಯೋಗಿಗಳಾಗಿ ಹೋಗಿ ಬರುತ್ತಿದ್ದರು. (ಎ.ಕ–೭, ಶಿಕಾರಿ.೧೧, ಕ್ರಿ.ಶ.೧೯೯೮) ಒಂದು ಶಾಸನದಲ್ಲಿ ಹಿರಿಯ ಕನ್ನಡ ಸಂಧಿವಿಗ್ರಹಿ ಉಲ್ಲೇಖವನ್ನು ಕಾಣಬಹುದು. (ಎ.ಕ–೭, ಶಿಕಾರಿ.೨೬೭, ಕ್ರಿ.ಶ.೧೧೪೭) ಶ್ರೀಮನ್ನ ಮಾಹಪ್ರಧಾನರಾದ ರೂಪ ಭಟ್ಟಯ್ಯ ಹದಿನೆಂಟು ಅಗ್ರಹಾರ ನೋಡಿಕೊಳ್ಳುತ್ತಾ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. (ಎ.ಕ–೭, ಶಿಕಾರಿ.೧೭೦, ಕ್ರಿ.ಶ.೧೦೬೫).

ಅನಂತ ಪಾಳಯ್ಯ

ಇಲಾಖೆಯಲ್ಲಿ ಕ್ರಮವಾಗಿ ಬಡ್ತಿ ಹೊಂದುತ್ತಾ ಸಮಾಜದ ಹಿರಿಯ ಮಹಾಸಾಮಂತಾಧಿಪತಿ, ಮಹಾಪ್ರಚಂಡನಾಯಕ ಶ್ರೇಣಿಯ ಸುಂಕಾಧಿಕಾರಿಯಾದ ಶ್ರೇಯಸ್ಸು ಇವನದಾಗಿದೆ. ಇವನ ದಕ್ಷತೆಯನ್ನು ಮೆಚ್ಚಿ ವಿಕ್ರಮಾದಿತ್ಯನು ವೆಂಗಿ–೧೨೦೦೦, ಎಮೆದೆಲೆ–೬೦೦೦ಗಳಾದ ಪ್ರಮುಖ ವಿಭಾಗಗಳಿಗೆ ಪ್ರಭುಗಳಾಗಿ ನೇಮಿಸುತ್ತಾನೆ. ಇದಕ್ಕೂ ಮುಂಚೆ ಇವನು ಬನವಾಸಿ– ೧೨೦೦೦ದ ಪ್ರಭುವಾಗಿದ್ದನ್ನು ಶಾಸನಗಳಿಂದ ತಿಳಿದು ಬರುತ್ತದೆ. ಈ ಸುಂಕ ವಿಭಾಗಕ್ಕೆ ಪ್ರಭುವಾಗಿದ್ದ ಇವನ ಒಪ್ಪಿಗೆಯಿಂದ ಪಾಂಡ್ಯವಂಶದ ಮಾಹಾಮಂಡಳೇಶ್ವರ ಕಾಮದೇವರಸನು ದಾನ ಬಿಡುತ್ತಾನೆ. (ಎ.ಕ–೭, ಶಿಕಾರಿ.೯, ಕ್ರಿ.ಶ.೧೧೧೩) ವಿದ್ವತ್ಪೂಜ್ಯಾಂಗುಣ ರತ್ನ ಸರಿತ್ಪತಿಸಿದನನನ್ತ ಪಾಳ ಚಮೂಪಂ// ಪತಿಹಿತರೊಳಲ್ಲ ಮಗ್ಗದಪತಿಹಿತ ನತಿಶುಚಿ ದಕ್ಷನಾಗಿದ ಎಂದು ಹೇಳುತ್ತದೆ. ಇವನ ಪ್ರಶಸ್ತಿ ಸಕಳನಟನಗ್ನ ಭಗ್ನಗಾಯಕ ವಂದಿಬೃಂದ ಸಸ್ತರ್ಪ್ಪಣಸಮರ್ತ್ಥ ವಿತರಣ ವಿಳಸಂ/ವೀರಲಕ್ಷ್ಮೀ ನಿವಾಸಂ/ವಿರೋದಿ ಪಂಚಾನನಂ/ವಿವೇಕ ಚತುರನನಂ/ಗುಣರತ್ನ ಮಶಿಕಾಳಂಕಾರಂ/ಬುಧ

ಜನಾದಾರಂ/ಲಾಟಕುಳಕುಮದಿವನ ವಿಧುಕರಂ/ಹರಿಚರಣ ಸರಸಿರುಹ ಮಧುಕರಂ ಎಂದು ಉಲ್ಲೇಖವಿದೆ. (ಎ.ಕ-೭, ಶಿಕಾರಿ.೯೮, ಕ್ರಿ.ಶ.೧೧೦೨)ಇವನ (ಇನ್ನೊಬ್ಬ) ಅಳಿಯ ಗೋವಿಂದನು ಮಹಾಸಾಮಂತಾಧಿಪತಿ ಮಹಾಪ್ರಚಂಡನಾಯಕ ಶ್ರೇಣಿಯ ಅಧಿಕಾರಿಯಾಗಿದ್ದನು (ಮೈ.ಅ.ರೀ.೧೯೪೧,ಸಂಖ್ಯೆ-೩೮, ಕ್ರಿ.ಶ.೧೧೦೩)

ಗೋವಿಂದ

ಕಲ್ಯಾಣ ಚಾಳುಕ್ಯರ ಅಧಿಕಾರಿಗಳಲ್ಲಿ ಅನಂತಪಾಳಯ್ಯನನ್ನು ಬಿಟ್ಟರೆ ಗೋವಿಂದ ದಂಡನಾಯಕ ಪ್ರಮುಖ ಸ್ಥಾನವನ್ನು ಪಡೆದಿದ್ದಾನೆ. ಅನಂತಪಾಳಯ್ಯನ ಅಕ್ಕನ ಮಗನಾದ ಈತನು ಮಹಾಸಾಮಂತಾಧಿಪತಿ ಮಹಾಪ್ರಚಂಡನಾಯಕ ಶ್ರೇಣಿಯ ಅಧಿಕಾರಿಯಾಗಿದ್ದಾನೆ. (ಮೈ.ಅ.ರೀ.೧೯೪೧,ಸಂಖ್ಯೆ-೩೮, ಕ್ರಿ.ಶ.೧೧೦೩) ಇಲ್ಲಿ ಇವನ ಪ್ರಥಮ ಉಲ್ಲೇಖವಿದೆ. ಇದರಲ್ಲಿ ತತ್ಪಾದ ಪದ್ಮೋಪಜೀವಿ/ಶ್ರೀ ವನಿತಾಕುಚ ಸಂಭೃತ ಮುಂತಾಳ್ದಲ ಸಮರ್ತ್ಥಾತ್ಮನಾವನೋ ಗೋವಿಂದ ಎಂಬ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೯೮, ಕ್ರಿ.ಶ.೧೧೦೨) ಇವನು ಅನಂತಪಾಳನ ಇನ್ನೊಬ್ಬಳು ಸೋದರಿ ಸೋಮಾಂಬಿಕೆಯ ಪುತ್ರನಾಗಿದ್ದು, ಪರಾಶರ ಗೋತ್ರದವನಾಗಿದ್ದಾನೆ. ಈತನು ಮಹಾಪ್ರಚಂಡದಂಡನಾಯಕ ಶ್ರೇಣಿಯಲ್ಲಿದ್ದುದ್ದನ್ನು ತಿಳಿಸುತ್ತದೆ. (ಎ.ಕ-೭, ಶಿಕಾರಿ.೧೯೨, ಕ್ರಿ.ಶ.೧೧೦೭) ಇಲ್ಲೂ ಕೂಡ ಇವನು ಅಧಿಕಾರ ಶ್ರೇಣಿಯನ್ನು ಉಲ್ಲೇಖಿಸುತ್ತದೆ. (ಎ.ಕ-೭, ಶಿಕಾರಿ.೯೮, ಕ್ರಿ.ಶ.೧೧೦೨) ಈತನ ವಂಶಾವಳಿಯನು ಉಲ್ಲೇಖವಿದೆ. (ಮೈ.ಅ.ರೀ.೧೯೨೭,ಸಂಖ್ಯೆ-೧೫೮, ಕ್ರಿ.ಶ.೧೧೦೮) ಇವನ ತಂದೆಯ ಹೆಸರು ದಾಸಿರಾಜನೆಂಬುದಕ್ಕೆ ಬದಲು ಶಿವರಾಜನೆಂದು ತಪ್ಪಾಗಿ ಹೇಳಲಾಗಿದೆ (ಎ.ಕ-೭, ಶಿಕಾರಿ.೧೩೧, ಕ್ರಿ.ಶ.೧೧೦೩)

"ಸಮಸ್ತಗುಣ ಗಣಾಭರಣ ರಣರಂಗಭೈರವ/ಚಂದ್ರಿಕಾ ಪ್ರಭಾವ ವಿಕಸಿತ ಜಗದ್ವಳಯ ಕೈರವನೂಂ ಸಕಳಸುಂಕ ವಿಜನಕಲ್ಲಭೂ ಜನಂ/ವಿಷಯ ಹಯವತ್ಸರಾಜ ವೀರ ಲಕ್ಷ್ಮೀನಿವಾಸ ಅವಸ್ತಪಾಳ ಪ್ರಸಾದ ಸಾಧಿತಾಧಿಕಾರ/ಲಕ್ಷ್ಮೀವಿಳಾಸನಂ ಮೊದಲಾದ ಪ್ರಶಸ್ತಿಗಳು ಗೋವಿಂದನಿಗೆ ಇದ್ದ ಉಲ್ಲೇಖಗಳು ಕಾಣಬಹುದು (ಎ.ಕ-೭, ಶಿಕಾರಿ.೯೮, ಕ್ರಿ.ಶ.೧೧೦೨) ಶಿಷ್ಟೇಷ್ಟ ಜನ ಭೀಷ್ಟಫಳ ಪ್ರದಾಯಕಂ/ಶ್ರೀಕಾಂತಕಾಂತ ಶ್ರೀಪಾದಪಂಕಜ ಶಿಳೀಮುಖಂ/ಸಮರ ಮುಖ ಷಣ್ಮುಖಂ/ಧರ್ಮ ಶ್ರವಣ ಹರ್ಷ ಪುಳಕಂ/ತ್ರಿಭುವನಮಲ್ಲ ದೇವ ವಿಜಯ ದಕ್ಷಿಣ ಭುಜದಣ್ಣಂ" ಎಂಬ ಉಲ್ಲೇಖ ಗುರುತಿಸಬಹುದು (ಎ.ಕ-೭, ಶಿಕಾರಿ.೧೩೭, ಕ್ರಿ.ಶ.೧೧೧೪).

ಗೋವಿಂದನು ಮೆಲ್ಲಟ್ಟಯ್ಯ, ವಡ್ಡಾರಾವುಳ, ಎರಡುಬೀಳ್ಕೊಡೆ, ಪೆರ್ಜರಕಗಳನ್ನು ಆಳುತ್ತಿದ್ದು, ಸುಂಕಾಧಿಕಾರಿಯಾಗಿ ವೃತ್ತಿ ಪ್ರಾರಂಭಿಸಿದ್ದಾನೆ. (ಎ.ಕ-೭, ಶಿಕಾರಿ.೯೮,

ಕ್ರಿ.ಶ.೧೧೦೨) ಬನವಾಸಿ ೧೨೦೦೦ವನ್ನು ಆಳುತ್ತಿದ್ದನು. (ಮೈ.ಅ.ರೀ.೧೯೪೧,ಸಂಖ್ಯೆ-೩೮, ಕ್ರಿ.ಶ.೧೧೦೩) ಈತನು ಬನವಾಸೆ ೧೨೦೦೦ ವನ್ನು ವಡ್ಡರಾವುಳವನ್ನು ಛತ್ರಚ್ಛಯೆಯಿಂ ಚಪ್ಪನ್ನದಚ್ಚುಪನ್ನಾಯಮಂ ಪಡೆದು ಸುಖವಾಗಿ ಆಳುತ್ತಿದ್ದನು. (ಎ.ಕ-೭, ಶಿಕಾರಿ.೧೩೧, ಕ್ರಿ.ಶ.೧೧೦೩) ಬನವಾಸಿ-೧೨೦೦೦ವನ್ನು ವಡ್ಡರಾವುಳವನ್ನು ಪೆರ್ಜರಕವನ್ನು ಮತ್ತು ಎರಡುಬೀಳ್ಕೊಡೆಯನ್ನು ಆಳುತ್ತಿದ್ದ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೯೨, ಕ್ರಿ.ಶ.೧೧೦೭) ಇದೇ ಉಲ್ಲೇಖವನ್ನು ಮತ್ತೆ ಕಾಣಬಹುದು. (ಎ.ಕ-೭, ಶಿಕಾರಿ.೨೯೪, ಕ್ರಿ.ಶ.೧೧೦೭) ಶ್ರೀಮನು ವಡ್ಡರಾವುಳದ ದಂಡನಾಯಕರ ಗೋವಿಂದರಸನು ಎಂದು ಇದೆ (ಮೈ.ಅ.ರೀ.೧೯೩೭,ಸಂಖ್ಯೆ-೧೫೮, ಕ್ರಿ.ಶ.೧೧೦೮) ಇದೇ ಉಲ್ಲೇಖವನ್ನು ಬಳ್ಳಿಗಾವಿಯ ಶಾಸನದಲ್ಲಿ ಗುರುತಿಸಬಹುದು. (ಎ.ಕ-೭, ಶಿಕಾರಿ.೧೪೯, ಕ್ರಿ.ಶ.೧೧೧೦) ಈತನು ಬನವಾಸೆ -೧೨೦೦೦, ಸಾಂತಳಿಗೆ-೧೦೦೦ ವನ್ನು ಎರಡುನೂರನ್ನು ವಡ್ಡರಾವುಳ ಪಂನಾಯವನ್ನು ರಾಜಧಾನಿ ಬಲಿಪುರದಲ್ಲಿದ್ದು ಆಳುತ್ತಿದ್ದನೆಂದು ಹೇಳಲಾಗಿದೆ. (ಎ.ಕ-೭, ಶಿಕಾರಿ.೧೩೭, ಕ್ರಿ.ಶ.೧೧೧೪).

ಈಶ್ವರಯ್ಯ ನಾಯಕನನ್ನು ಸಂಧಿವಿಗ್ರಹಿಯಾಗಿ ಪಡೆದಿದ್ದು, ಕಾರಣ ಈತನು ಪ್ರಭುವಾಗಿ ಕೆಲಸಮಾಡಿರಬೇಕು.ಈಶ್ವರಯ್ಯ ನಾಯಕನು ಗೋವಿಂದನ ಚರಣಸರಸಿರುಹ ಚಂಚರೀಕ ಎಂದು ತತ್ತ್ರ ಸಾದಂ ಸಾದಿತ ನನ್ನಿ ವಿಗ್ರಹಾದೀಶ್ವರ ಎಂದು ಕರೆದಿದೆ. (ಎ.ಕ-೭, ಶಿಕಾರಿ.೩೧, ಕ್ರಿ.ಶ.೧೧೦೩) ಶ್ರೀ ... ದಣ್ಣನಾಯಕ ಗೋವಿಂದರಸ ಬೆಸದಿಂದ ಬಳ್ಳಗಾವಿಯ ಗೋಗ್ರಹಣ ಸಂದರ್ಭದಲ್ಲಿ ರೇವಣ್ಣನಾಯಕ ಕೆಲವರನ್ನು ಕೊಂದು ಸುರಲೋಕ ಪ್ರಾಪ್ತವಾಗಿದ್ದ ಉಲ್ಲೇಖವಿದೆ (ಎ.ಕ-೭, ಶಿಕಾರಿ.೧೪೯, ಕ್ರಿ.ಶ.೧೧೧೦) ಗೋವಿಂದರಸರು ತೆಂಕಣಗೊಗ್ಗಿ ಮೇಲೆತ್ತಿ ಕಲ್ಲೂರನ್ನು ಸುಟ್ಟ ಉಲ್ಲೇಖ ಬರುತ್ತದೆ. (ಎ.ಕ-೭, ಶಿಕಾರಿ.೧೫೭, ಕ್ರಿ.ಶ.೧೧೧೩)ಸೊಡ್ಡಲನ ತಮ್ಮ ಗೋವಿಂದನ ಭಾವಮೈದುನ ತ್ರಿವಾಜಭಟ್ಟನು ಮಹಾ ವಡ್ಡಗ್ರಾಮವಾದ ತಾಳಗುಂದೂರಿನಲ್ಲಿ ಪೆರ್ಗ್ಗಡೆತನಗೈಯುತ್ತಿದ್ದ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೯೨, ಕ್ರಿ.ಶ.೧೧೦೭) ಗೋವಿಂದನ ಮೈಯ್ದುನನಾದ ತ್ರಿವಾಜಭಟ್ಟನು ಮಹಾವಡ್ಡಗ್ರಾಮವಾದ ಕುಂದೂರಿನಲ್ಲಿ ಪೆರ್ಗ್ಗಡೆತನಗೈಯುತ್ತಿದ್ದ ಉಲ್ಲೇಖವಿದೆ. (ಮೈ.ಅ.ರೀ.೧೯೨೭,ಸಂಖ್ಯೆ-೧೫೮, ಕ್ರಿ.ಶ.೧೧೦೮) ಬಳ್ಳಿಗಾವಿಯಲ್ಲಿದ್ದ ಗೋಪತಿ ಎಂಬುವನು ದಂಡನಾಯಕ ಗೋವಿಂದನ ಸಮ್ಮುಖದಲ್ಲಿ ಪಂಚಮಠಕ್ಕೆ ದಾನ ಬಿಡುತ್ತಾನೆ. (ಮೈ.ಅ.ರೀ.೧೯೪೧,ಸಂಖ್ಯೆ-೩೮, ಕ್ರಿ.ಶ.೧೧೦೩) ಈತನು ದೇವರನ್ನು ಸ್ಥಾಪಿಸಿ, ದಾನಬಿಟ್ಟ ವಿಷಯವಿದೆ.ಒಟ್ಟಾರೆ ಇವನು ವಿಕ್ರಮಾದಿತ್ಯನ ಸಮರ್ಥ ಮಹಾಸಾಮಂತಾಧಿಪತಿ ಮಹಾಪ್ರಚಂಡನಾಯಕರುಗಳಲ್ಲಿ ಒಬ್ಬನಾಗಿದ್ದನು (ಎ.ಕ-೭, ಶಿಕಾರಿ.೯೮, ಕ್ರಿ.ಶ.೧೧೦೨).

ಇನ್ನೊಬ್ಬನಾಯಕ ಗುಂಡಮರಸನ ಉಲ್ಲೇಖ ಕಾಣಬಹುದು. ಮಹಾಸಾಮಂತಾಧಿಪತಿ ಮಹಾಪ್ರಧಾನದಂಡನಾಯಕ ಮನೆವೆರ್ಗ್ಗಡೆ ದಣ್ಡ ನಾಯಕರ ಗುಂಣ್ಡ ಮರಸರು ಎಂದಿದೆ (ಎ.ಕ-೭, ಶಿಕಾರಿ.೧೧೧, ಕ್ರಿ.ಶ.೧೦೮೦) ಶಾಸನೋಕ್ತ ಬಲದೇವನ್ನು ಯುವರಾಜ ಜಯಸಿಂಹನ ಪಾದ ಪದ್ಮೋಪಜೀವಿಯಾಗಿದ್ದನು. ಈತನಿಗೆ ಜಿನನಾಥ ಸ್ವಾಮಿ ಮಹೀವಲ್ಲಭನಾದ ಜಯಸಿಂಹನೇ ಒಡೆಯ, ಮಾಕಣಂ ದಿಭ್ರತಿಯೇ ಗುರು, ಸಾಂತಿಯಕ್ಕನೇ ತಾಯಿ ಲಕ್ಷ್ಮನೇ ಪುತ್ರ.ಇವನ ಪ್ರಶಸ್ತಿ ಶಾಸನದಲ್ಲಿ ಜಿನಕರಣಕವಳ ಭೃಂಗಂ, ಸಾದ ಸೊತ್ತುಂಗ, ಸಮ್ಯಕ್ತರತ್ನಕರಂ ಪದ್ಮಾವತಿ ಲಬ್ದವರ ಪ್ರಸಾದಂ ಸರಸ್ವತೀಕರ್ಣ್ಣಾವ ಎಂಬ ಉಲ್ಲೇಖವಿದೆ.(ಎ.ಕ-೭, ಶಿಕಾರಿ.೨೯೭, ಕ್ರಿ.ಶ.೧೦೭೯) ಭೀವಣಯ್ಯ ಅಂತಃಪುರಾಧ್ಯಾಕ್ಷ ಸಹವಾಸಿಗಳಾಧಿಷ್ಠಾಯಕ,ಹೇರಿಲಾಳ ಕಂನ್ನಡ ಸಂಧಿವಿಗ್ರಹಿ ಮಾನೆ ಪೆರ್ಗ್ಗಡೆಯಾಗಿದ್ದ ಎಂದು ಹೇಳಲಾಗಿದೆ. (ಎ.ಕ-೭, ಶಿಕಾರಿ.೧೦೬, ಕ್ರಿ.ಶ.೧೧೯೮) ಬರ್ಮದೇವ ಸಾಹಸ ವೈನತೆಯ ಹರಚರಣಕಮಳ ಪಟ್ಟರಣ, ಗುಣಗಣ ಭರಣ ದಣ್ಡನಾಥ ಮಣ್ಣನ ಮಾಣಿಕಪುರಂ,ಶರಣಾಗತ ವಜ್ರಪಂಜರ ನಾಮಾಧಿ ಸಮಸ್ತ ಪ್ರಶಸ್ತಿ ಹೊಂದಿದನು (ಎ.ಕ-೭, ಶಿಕಾರಿ.೪೪, ಕ್ರಿ.ಶ.೧೦೭೧)ಈತನು ರಖ್ಷಣಾ ಇಲಾಖೆಯಲ್ಲಿ ಕಾರ್ಯಕೈಗೊಂಡಿದ್ದು ಪ್ರಸ್ತಾಪಿಸಿದೆ.ಇನ್ನೊಂದು ಶಾಸನದಲ್ಲಿ ಸುಜನ ಮುಖದರ್ಪಣ ಆಶ್ರಿತಜನ ಸಂತರ್ಪ್ಪಣ ತಿಸುಣರಗಂಡ ಎಂಬ ಪ್ರಶಸ್ತಿ ಇದೆ. (ಎ.ಕ-೭, ಶಿಕಾರಿ.೧೩೫, ಕ್ರಿ.ಶ.೧೦೭೮)ಚಕ್ರವರ್ತಿ ವಿಕ್ರಮಾದಿತ್ಯನ ಸಲುವಾಗಿ ತಂಬರಸ ಹಲವಾರು ಯುದ್ದವನ್ನು ಮಾಡಿದ್ದಾನೆ. ಈತನಿಗೆ ತಂಬಚಮೂಪನೆಂದು ಮಹಾಸಂಧಿವಿಗ್ರಹಿಯೆಂದು ಕರೆಯಲಾಗಿದೆ. (ಎ.ಕ-೭, ಶಿಕಾರಿ.೧೦೭, ಕ್ರಿ.ಶ.೧೦೭೮) ಜಯಸಂಘದೇವ ಪೇಶಣಹನ್ನಂತನೆಂದು ಹೇಳಲಾಗಿದೆ.ಹೇರಿಲಾಳ ಕನ್ನಡ ಸನ್ನಿ ವಿಗ್ರಹಿಯಾಗಿದ್ದ ಜೋಳರ ರಾಜ್ಯಕ್ಕೆ ದಕ್ಷಿಣ ಘಟ್ಟವನ್ನು ದಾಟಿನುಗ್ಗಿ ರಾಜ ಜೋಳನ ಒಕ್ಕುಲಂ ಬಡಿದು ಅಲ್ಲಿ ಜಯಸ್ಥಂಭವನ್ನು ನೆಡುತ್ತಾನೆ. (ಮೈ.ಅ.ರೀ.೧೯೩೦,ಸಂಖ್ಯೆ-೭೬, ಕ್ರಿ.ಶ.೧೦೮೦) ಬನವಾಸಿ-೧೨೦೦೦, ಸಾಂತಳಿಗೆ -೧೦೦೦ ವನ್ನು ಆಳುತ್ತಿದ್ದ ಉಲ್ಲೇಖವಿದೆ. (ಮೈ.ಅ.ರೀ.೧೯೨೯,ಸಂಖ್ಯೆ-೫೪, ಕ್ರಿ.ಶ.೧೦೮೧)ಇಲ್ಲಿಯೂ ಕೂಡ ಇದರ ಬಗ್ಗೆ ಪ್ರಸ್ತಾಪವಿದೆ. (ಮೈ.ಅ.ರೀ.೧೯೩೦,ಸಂಖ್ಯೆ-೭೫, ಕ್ರಿ.ಶ.೧೮೨).

ವೀರಭಟಸಿರಶ್ಚೇಖರ ನೆನಸಿದ ಕಾಳಿದಾಸ ಚಮೂಪನ ಚಿಕ್ಕಪ್ಪ ಮಹಾದಂಡಾಧಿಪತಿ ಮಹಾಪ್ರಚಂಡದಂಡನಾಯಕ ಸರ್ವೇಶ್ವರ ದಂಡನಾಯಕ ಉಲ್ಲೇಖವು ಇಲ್ಲಿ ಬರುತ್ತದೆ. (ಎ.ಕ-೭, ಶಿಕಾರಿ.೧೧೪, ಕ್ರಿ.ಶ.೧೧೯೬) ಸರ್ವದೇವರಸನು ಗುಪ್ತ ಇಲಾಖೆಯಲ್ಲಿ ಇರಬೇಕು ಕಾಳಿದಾಸ ಚಮೂಪನ ಬಗ್ಗೆ ಕಿರುಯಯ್ಯ ಅಂದರೆ ಚಿಕ್ಕಪ್ಪನಾಗಿದ್ದಾನೆ.ಶಾಸನದಲ್ಲಿ ಈತನ ವಂಶಾವಳಿಯನ್ನು ಚಾವುಂಡ ಚಮೂಪತಿ+ ಕಳೆಯಬ್ಬೆ->ನಾಗವರ್ಮ ದಂಡಾಧೀಶ + ನಾಗಿಯಕ್ಕ-> ಸರ್ವದೇವರಸ ಮತ್ತು ಚಾವುಂಡೇಶ ಎಂದು ಕೊಡಲಾಗಿದೆ.ಸರ್ವದೇವನ ಹೆಂಡತಿ ಶಾಂತಲದೇವಿ ಇವರಿಗೆ ಪುಲಿಗೆರೆಯ ಸೋಮೇಶ್ವರನ ಪ್ರಸಾದದಿಂದ ಹುಟ್ಟಿದ ಮಗ ಸೋವಿದೇವ.

ಗುರುವಾಮದೇವ ಬೃತಿ ಈತನು ಬಳ್ಳಿಗಾವಿಯಲ್ಲಿ ಸರ್ವೇಶ್ವರ ದೇವಾಲಯವನ್ನು ನಿರ್ಮಿಸಿ ಕಳಸರೋಹಣ ಮಾಡಿಸುತ್ತಾನೆ. (ಎ.ಕ-೭, ಶಿಕಾರಿ.೧೧೪, ಕ್ರಿ.ಶ.೧೯೯೬) ಚಿಕ್ಕಮರಸನು ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಮಾನೆ ವೇರ್ಗಡೆ ಗುಂಡರಸ ಪುತ್ರನಾಗಿರಬೇಕು ಏಕೆಂದರೆ ಶಾಸನದಲ್ಲಿ ಗುಂಡಮರಸನ ಉಲ್ಲೇಖದ ತರುವಾಯ ಇವನ ವಂಶದೊಳೆ ಜೇಷ್ಠಾನುದಿತ್ತ ಕೃಷ್ಣನು ಎಂದು ಈತನನ್ನು ಕರೆಯಲಾಗಿದೆ.ಈತನು ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಶ್ರೇಣಿಯ ಅಧಿಕಾರಿಯಾಗಿದ್ದಾನೆ ಶಾಸನದಲ್ಲಿ ದಯವತ್ಸ ರಾಜ್ಯಂರೂಪಮನೋಜಂ ಪರಾರ್ಥ ಜೀಮೂತವಾಹನಯರಿತಟ್ಟ ಭೈರವಂ ಬಿರುದುಗಳಿವೆ.ಈ ಚಿಕ್ಕಮರಸನು ಶ್ರೀ ಬಾರಹಕೋಡಿಯ ಸರ್ವೇಶ್ವರದೇವರಿಗೆ ದಾನವನ್ನು ಬಿಡುತ್ತಾನೆ (ಎ.ಕ-೭, ಶಿಕಾರಿ.೧೧೧, ಕ್ರಿ.ಶ.೧೦೮೦)

ದಂಡನಾಯಕ :

ಕೇಂದ್ರೀಯ ಸುಂಕದ ಅಧಿಕಾರಿಯಾದ ಪೆರ್ಗ್ಗಡೆ ಲೋಕನಾಥಯ್ಯನ ಶಾಸನವಿದೆ ತಂಬರಸನ ಪಾದಪದ್ಮೋಪಜೀವಿಯಾಗಿ ಮಹಾಮಾತ್ಯ ದಂಡನಾಯಕ ಪೇರ್ಗ್ಗಡೆ ಲೋಕನಾಥಯ್ಯನು ಇದ್ದನು. ಇವನು ಸಾಂತಳಿಗೆ-೧೦೦೦ ಕ್ಕೆ ಪೇರ್ಗ್ಗಡೆತನ ಗೆಯ್ಯುತ್ತಿದ್ದನು ಎಂದು ಶಾಸನದಿಂದ ತಿಳಿದುಬರುತ್ತಿದೆ. ಈ ಸಾಂತಳಿಗೆ -೧೦೦೦ದರಲ್ಲಿಯ ಅಗ್ರಹಾರ ಬನ್ನಿಯೂರಿನಲ್ಲಿ ಮಹಾಜನರು ಚಿಕ್ಕಗೋಸಿ ಪೇರ್ಗ್ಗಡೆ ಲೋಕನಾಥಯ್ಯರ ಗಳು ಮುಖ್ಯವಾಗಿ ಅರಸರ ಸಮೀಪಕ್ಕೆ ಬಂದು ಬನ್ನಿಯೂರು ಕೆರೆಯನ್ನು ಅನೇಕ ಸಲ ಅನೇಕ ಅರಸರು ಕಟ್ಟಿಸಿದರೂ ನಿಂತಿಲ್ಲ, ನಿನ್ನ ಹೆಸರಿನಲ್ಲಿ ಕೆರೆಯನ್ನು ಕಟ್ಟಸಿದರೆ ನಿಲ್ಲುತ್ತದೆಂದು ತಂಬರಸರಿಗೆ ನಿವೇದಿಸಲಾಗಿ ಅದಕ್ಕೆ ತಂಬರಸನು ಕೆರೆಯನ್ನು ಕಟ್ಟಿಸಲು ಚಿಕ್ಕಗೋಸಿಗೆ ಹೇಳುತ್ತಾನೆ. (ಮೈ.ಅ.ರೀ.೧೯೩,ಸಂಖ್ಯೆ-೭೬, ಕ್ರಿ.ಶ.೧೦೮೦) ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಭೀಮಣಯ್ಯಗಳ ಆದೇಶದಂತೆ ಮಹಾಪ್ರಧಾನ ದಂಡನಾಯಕ ಪದ್ಮನಾಭಯ್ಯನು ಬನವಾಸೆ-೧೨೦೦೦ವನ್ನು ಸುಖವಾಗಿ ಆಳುತ್ತಿದ್ದ ಎಂದು ಹೇಳಲಾಗಿದೆ.ಇವನು ಆಳುತ್ತಿದ್ದುದು ಸುಂಕವಿರಬೇಕು.ಈತನ ಹೆಂಡತಿ ಚಿಕ್ಕಬ್ಬೆ ಇವರಿಗೆ ಬೊಮ್ಮರಸ,ನಾಗದೇವಯ್ಯ ನಾಯಕ,ಚಿಕ್ಕರಸ,ಲೋಕರಸ,ಬೋಗರಸ ಇವರೈದು ಜನರು ಪುತ್ರರಾಗಿದ್ದಾರೆ ಇವರಲ್ಲಿ ಲೋಕರಸ ಜೋಗರಸರು ಕ್ರಮವಾಗಿ ಬಳ್ಳಿಗಾವಿಯಲ್ಲಿ ಲೋಕೇಶ್ವರ ಜೋಗೇಶ್ವರ ದೇವರನ್ನು ಪ್ರತಿಷ್ಠೆ ಮಾಡಿ ದಾನ ಬಿಟ್ಟ ಉಲ್ಲೇಖವಿದೆ (ಎ.ಕ-೭, ಶಿಕಾರಿ.೧೦೬, ಕ್ರಿ.ಶ.೧೯೮).

ಅನಂತಪಾಳಯ್ಯನ ಅಳಿಯನಾದ ಮಾದಿರಾಜ ಬನವಾಸಿ-೧೨೦೦೦ದ ವಡ್ಡರಾವುಳ ಸುಂಕದಾಧಿಷ್ಠಾಯಕ ನಾಗಿದ್ದನು (ಎ.ಕ-೭, ಶಿಕಾರಿ.೧೩, ಕ್ರಿ.ಶ.೧೦೬೭)

ಕೇಂದ್ರೀಯ ಸೈನ್ಯ ದಂಡನಾಯಕರಾದ ಸಾಯಿಪಯ್ಯ ಶ್ರೀಮನ್ಮಹಾಪ್ರದಾನ...ಸೆತ್ತಿಮನೆ ವೆಗ್ಗೇಡೇಣ್ಣಾಯಕ ಸಾಲಿಪಯ್ಯಗಳ ಆಜ್ಞೆಯ ಮೇರೆಗೆ ಮಹಾಪ್ರಧಾನ.....ರಾಮಯ್ಯನು ಬನವಾಸಿ-೧೨೦೦೦ಆಳುತ್ತಿದ್ದನು. ಆತನ ಪಾದಪದ್ಮೋಪಜೀವಿಯಾಗಿದ್ದ ಮಹಾಸಾಮಂತ ಬೊಪ್ಪರಸನ ಅರ್ಧಾಂಗ ಲಕ್ಷ್ಮಿಯಾದ ಶ್ರೀಯಾದೇವಿ ಗಂಡು ಹಡೆದರೆ ಸಿಡಿತಲೆ ಕೊಡುವುನೆಂದು ಹೇಳಿ ಗಂಡುಹಡೆದಾಗ ದೇಕಯನಾಯಕ ಸಿಡಿದಲೆ ಕೊಟ್ಟ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೨೪೬, ಕ್ರಿ.ಶ.೧೧೨೩)ಪ್ರಾಂತೀಯ ಸೈನ್ಯ ನೋಡಿಕೊಳ್ಳುವ ಮಲ್ಲದೇವರಸನ ಬಗ್ಗೆ ಉಲ್ಲೇಖದಲ್ಲಿ ಮಹಾಪ್ರಧಾನ ಭವಣಯ್ಯ ದಂಡನಾಯಕನ ಮೊಮ್ಮೊಗನಾದ ಈತನನ್ನು ಮಹಾಪ್ರಧಾನ ಸೇನಾಧಿಪತಿ ಸಾವಶಿಗಳಾಧಿಷ್ಠಯಕಂ ಬನವಾಸೆ ನಾಡ ಪೆರ್ಗ್ಗಡೆ ದಂಡನಾಯಕಂ ಎಂದು ಬಳ್ಳಿಗಾವಿ ಶಾಸನದಲ್ಲಿ ಇದೆ. (ಎ.ಕ-೭, ಶಿಕಾರಿ.೧೬೬, ಕ್ರಿ.ಶ.೧೦೯೨) ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಗೋವಿಂದರಾಜನ ಸಂಧಿವಿಗ್ರಹಾಧೀಶ್ವರನಾದ ಈಶ್ವರಯ್ಯ ನಾಯಕನ ಉಲ್ಲೇಖವಿದೆ.ವಶಿಷ್ಠಗೋತ್ರದವನಾದ ಈತನ ವಂಶಾವಳಿ ಹೀಗಿದೆ. ಚಚ್ಚ+ ಭೋಗಾಂಬಿಕೆ -> ಬಾಚಿರಾಜ, ಈಶ್ವರ, ಬಸವಣ, ಧೈರ್ಯವಂತನೂ ಅಪ್ರತಿಮ ಸಾಹಿಸಿಗಳ ವಿಪ್ರದಲ್ಲಿ ಉನ್ನತನೂ ಆದ ಈಶ್ವರನು ಗೋವಿಂದನ ಸಂಧಿವಿಗ್ರಹಿಯಾಗಿದ್ದಾನೆ. ಗೋವಿಂದರಾಜ ಚರಣಸರಸಿರುಹ ಚಂಚರೀಕನುಂ ತತ್ಪ್ರಸಾದಾತ ಸನ್ಧಿ ವಿಗ್ರಹಾಧೀಶ್ವರನು ಮಪ್ಪೀಶ್ವರಯನಾಯಕ ಎಂದು ಈತನನ್ನು ಕರೆಯಲಾಗಿದೆ.ಈತ ಬಳ್ಳಿಗಾವಿಯ ನರಸಿಂಹ ದೇವರಿಗೆ ಪಂಚಮಠಕ್ಕೆ ದಾನ ಬಿಟ್ಟನು.(ಎ.ಕ-೭, ಶಿಕಾರಿ.೧೩೧, ಕ್ರಿ.ಶ.೧೧೦೩)

ಪೆರ್ಗಡೆಗಳು:

ನಾರಾಯಣನ ಬಗ್ಗೆ ಹೇಳುವಾಗ ಬನವಾಸಿ-೧೨೦೦೦ವನ್ನು ಆಳುತ್ತಿರುವಾಗ ಜಿಡ್ಡಳಿಗೆ-೭೦ಕ್ಕೆ ಅರಸಿಮಯ್ಯನ್ನು ನಾಣ್ಣವುಂಡ ಗೈಯ್ಯುಅಡಿಗಟ್ಟೆಗೊಗ್ಗಿ ಸೆಟ್ಟಿಯಮಗ ಮಾಚಯ್ಯನೂ ಗರ್ಾವುರ್ಣ್ದ ಆಳುತಿದ್ದನೆಂದು ಹೇಳಲಾಗಿದೆ. (ಎ.ಕ-೭, ಶಿಕಾರಿ.೮೩, ಕ್ರಿ.ಶ.೧೦೫೮) ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಗೋವಿಂದನ ಮೈಯ್ದುನನ್ನು ಮಾಧವಭಟ್ಟ ಮತ್ತು ಜಾನಕೆಯ ಮಗನು ಆದ ಪ್ರಿಥಿವೀಧರ ತ್ರಿವಳಿಭಟ್ಟನ ಉಲ್ಲೇಖವಿದೆ. ಶ್ರೀಮನ್ಮ್ ದಾವಂಡಿ ಗ್ರಾಮ ತಾಣಗುಂದೂರಿನಲ್ಲಿ ಪೆರ್ಗಡೆಯಾಗಿದ್ದನು. ಮೂವತ್ತಿರ್ಚ್ಛಸಿರದಿಂದ ಭೂಮಿಯನ್ನು ಪಡೆದು ಅಲ್ಲಿ ಕೆರೆಯನ್ನು ತೋಡಿಸಿ ದೇಗುಲವನ್ನು ಮಾಡಿಸಿ, ಅರವಟ್ಟಿಗೆ ಅಂಬಲಿಗೆ ನೀರೆರೆಯುವ ಮಾಣಿಗೆ ಕೆರೆಯ ಜೀರ್ಣೋದ್ಧಾರಕ್ಕೆ ಭೂಮಿಯನ್ನು ಈತನು ದಾನಬಿಟ್ಟನು. (ಎ.ಕ-೭, ಶಿಕಾರಿ.೧೯೨, ಕ್ರಿ.ಶ.೧೧೦೨) ಮುದ್ರಾವಣದ ಪೆರ್ಗಡೆ ಗೋವಿಂದರಾಜ ಎಂದು , ಇವನ ತಮ್ಮ ಪ್ರಸ್ತುತ ಶಾಸನವನ್ನು ಬರೆಸಿದನು. (ಎ.ಕ-೭, ಶಿಕಾರಿ.೨೯೩, ಕ್ರಿ.ಶ.೧೦೮೦)

ತಳಾವರು:

ಈಸವೂರು ಮಾಳದಳರನ್ನು ಯುದ್ಧದಲ್ಲಿ ಭಾಗವಹಿಸಿ ಕೆಲವರನ್ನು ಕೊಂದು ಮರಣಿಸಿದ ವಿವರ ಹೀಗಿದೆ, ಹೊಸವೂರ ಜಂಬೂರು ಗಡಿಯ ಕಾಳಗ ಎಂಬುದು ಈಸವೂರದ ಮಾಳದ ವೀರರಕೆಟ್ಟು ಬಂದು ಪೊಸವೂರ ಸಾಸಿರ್ವ್ವದಲ್ಲಿ ಬೆಸನಂ ಬೇಡಿಕೊಂಡು ಪೆರೊಚ್ಚಿರಗೆ ವರಿದು ಪಲರಂ ಕೊಂದು ಸುರಲೋಕ ಪ್ರಾಪ್ತನಾದ (ಎ.ಕ-೭, ಶಿಕಾರಿ.೨೯೮, ಕ್ರಿ.ಶ.೧೧೮೯) ತಳಾವರನು ಕಳ್ಳರು ಮತ್ತು ದರೋಡೆಕೋರರಿಂದ ಗ್ರಾಮದ ರಕ್ಷಣೆ ಮಾಡುವವನಾಗಿದ್ದನು. ಮಾಚಯನಾಯಕ ಎಂಬ ತಳಾವರನ ಹೆಸರಿದೆ. (ಎ.ಕ-೭, ಶಿಕಾರಿ.೨೩೬, ಕ್ರಿ.ಶ.೧೧೭೪) ಆಡಳಿತದಲ್ಲಿ ರಾಜನಂತೆ ಮಹಿಳೆಯರ ಪಾತ್ರ ಕಾಣಬಹುದು ಇದರ ಜೊತೆಗೆ ಸಾಮಂತರಾಜರ ಬಗ್ಗೆ ಉಲ್ಲೇಖಗಳು ಶಾಸನಗಳಲ್ಲಿ ದಾಖಲೆಗಳಿವೆ. ರಾಜರಂತೆ ತಮ್ಮ ಆಳ್ವಿಕೆಯ ಭಾಗದಲ್ಲಿ ದೇಶ ಸಂಚಾರ ಕೈಗೊಂಡು ಜನರ ಕಷ್ಟ ಸುಖಗಳನ್ನು ವಿಚಾರಿಸುತ್ತಿದ್ದ ಪ್ರಸ್ತಾಪ ಅಲ್ಲಲ್ಲಿ ಕಂಡುಬರುತ್ತಿದೆ.(ಎ.ಕ-೭, ಶಿಕಾರಿ.೨೩೮, ಕ್ರಿ.ಶ.೧೧೨೮) ಚಾಳುಕ್ಯ ಅಹವಮಲ್ಲನ ಪಾದರಭುಜಭ್ರಮರ ಹಂಪ ಪಟ್ಟನ ವಧು ನಾಗಿಯಕ್ಕನನ್ನು ಆಡುವೆಳಳ ......ಣ್ಣ ಬನನಲ್ಲಿದೆ ಪೆಣ್ಣತಿಗುರತುದುಷ್ಟರಂ, ಕಿಡಿಸುವ ಶಿಷ್ಯರಂ ಪೊರೆವನು ಗ್ರಹನಿ......ಮಪ್ಪ ನಾಡವೆ, ಗರ್ಗ್ಗಡೆತನ ಮನ್ತದನ್ತಳೆದು ಮಹಾಮಲ್ಲನ ಚಿತ್ತ ವೃತ್ತಿಯೊ ....ಳೆ ನಲ್ಕೆಪೋಲ್ವ ನರರಾರ್ಗ್ಗಳ ಬಾಪ್ಪುರ ನಾಗಿಯಕ್ಕನಂ, ಅವಳು ನಿರ್ವಹಿಸಿದ ಪೆರ್ಗಡೆತನದ ಸ್ಪಷ್ಟ ಚಿತ್ರ ನೀಡಿದೆ. ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಣೆ ಮಾಡುವ ನಾಡ ಪೇರ್ಗಡೆತನದ ಹೊಣೆಹೊತ್ತುಕೊಂಡು ಚಕ್ರವರ್ತಿ ಅಹವಮಲ್ಲನ ಚಿತ್ರವನ್ನು ಸೆಳೆದಿದ್ದಾಳೆ ಈ ಬಾಪ್ಪುರ ನಾಗಿಯಕ್ಕ (ಎ.ಕ-೭, ಶಿಕಾರಿ.೧೯೯, ಕ್ರಿ.ಶ.೧೦೬೫).

ಯುದ್ಧಗಳು:

ಒಂದು ರಾಜ್ಯದ ಪಕ್ಕದ ರಾಜನು ದಂಡೆತ್ತಿ ಬಂದು ಆ ರಾಜ್ಯದ ಗಡಿಯನ್ನು ಆಕ್ರಮಿಸಿದಾಗ ರಾಜ್ಯದಲ್ಲೇ ಸಣ್ಣಪುಟ್ಟ ಕ್ಷೋಭೆಗಳಾದಾಗ ರಾಜರ ಸೇನೆಯು ರಾಜ್ಯದ ರಕ್ಷಣೆಗಾಗಿ ಹೋರಾಡುತ್ತಿದ್ದರು. ಯುದ್ಧದಲ್ಲಿ ಗೆದ್ದರೂ, ಸತ್ತರೂ ಎರಡಕ್ಕೂ ಗೌರವವಿತ್ತು. ಹೊರಗಿನಿಂದ ದಂಡೆತ್ತಿ ಬಂದ ಶತ್ರು ರಾಜನಿಗೆ ಸಹಾಯಕರಾಗಿ ಅಂತಃ ಕಂಟಕರು ದುಷ್ಟ ಸಾಮಂತರು ಇರುತ್ತಿದ್ದರು (ಎ.ಕ-೭, ಶಿಕಾರಿ.೧೩೬, ಕ್ರಿ.ಶ.೧೦೬೮) ಸ್ತ್ರೀಯರ ಮಾನಭಂಗದ ಉತ್ಕಟ ಪರಿಸ್ಥಿತಿಯಲ್ಲಿ ಶೌರ್ಯ ಪ್ರದರ್ಶನವನ್ನು ಮಾಡದವನಿಗೆ ಬ್ರಹ್ಮಪಾತಕವೂ ಬರುತ್ತದೆ ಎಂದು ಶಾಸನವು ಉಲ್ಲೇಖಿಸಿದೆ. (ಎ.ಕ-೭, ಶಿಕಾರಿ.೫೮, ಕ್ರಿ.ಶ.೧೧೨೪) ಯುದ್ಧದಲ್ಲಿ ಹೋರಾಡಿ ಮಡಿದ ವ್ಯಕ್ತಿ ಜನರ ಕಣ್ಣಲ್ಲಿ ಅವನೊಬ್ಬ ಅದ್ಭುತ ವ್ಯಕ್ತಿಯಾಗುತ್ತಿದ್ದ ಅವನ ಕೀರ್ತಿಯು ಅವನು ಮಾಡಿದ ತ್ಯಾಗವು ಇಪ್ಪತ್ತು ತಲೆಗಳವರೆಗೆ ಇರುತ್ತದೆ ಎಂದು ಶಾಸನವೊಂದು ತಿಳಿಸುತ್ತದೆ. (ಎ.ಕ-೭, ಶಿಕಾರಿ.೨೨೦, ಕ್ರಿ.ಶ.೧೦೧೫) ಸೂರ್ಯಮಂಡಲವನ್ನು ಭೇದಿಸಿ ಮೇಲೆ ಹೋಗ ಬಲ್ಲವರು ಇಬ್ಬರೇ ಪರಿವ್ರಾಜಕನಾದ ಯೋಗಿ ಮತ್ತು ಹೋರಾಡುತ್ತಾ ಸತ್ತವೀರ.

ವೀರನನ್ನು ಯೋಗಿಗೆ ಸಮನಾದ ವ್ಯಕ್ತಿಯೆಂದು ಗೌರವಿಸುವುದು ಇಲ್ಲಿ ನೋಡಬಹುದು. (ಎ.ಕ-೭, ಶಿಕಾರಿ.೩೦೭, ಕ್ರಿ.ಶ.೧೦೧೫) ಹೀಗೆ ಹೋರಾಡಿ ಮಡಿದ ವ್ಯಕ್ತಿಯ ಹೆಸರಲ್ಲಿ ವೀರಗಲ್ಲುಗಳು ಸಾಮಾನ್ಯ, ಅವುಗಳಲ್ಲಿ ಕೆಳಗಿನ ಹಂತದಲ್ಲಿ ಅವನ ಹೋರಾಟದ ಚಿತ್ರ ಮಧ್ಯದ ಹಂತದಲ್ಲಿ ಅವನನ್ನು ಕೈಲಾಸಕ್ಕೆ ಕೊಂಡ್ಯೊತ್ತಿರುವ ದೇವತಾ ಸ್ತ್ರೀಯರು, ಮೇಲಿನ ಹಂತದಲ್ಲಿ ಅವನು ಶಿವನ ಸಾನಿಧ್ಯದಲ್ಲಿರುವ ಶಿಲ್ಪಗಳು ಕಂಡುಬರುತ್ತವೆ. ಈ ವಿಷಯವನ್ನು ಹೇಳುವ ಸಂಸ್ಕೃತ ಶ್ಲೋಕವೊಂದು ಅನೇಕ ವೀರ ಶಾಸನಗಳ ಅಂತ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪೆ ಸುರಾಂಗನಾ ಕ್ಷಣ ವಿಧ್ವಂಸಿನಿ ಕಾಯೇಕಾ ಚಿಂತಾ ಮರಣೇರಣೇ. (ಎ.ಕ-೭, ಶಿಕಾರಿ.೬೦, ಕ್ರಿ.ಶ.೧೧೧೫).

ಎಷ್ಟೋ ವ್ಯಾಪಾರಿಗಳು ಮಹಾ ಶೂರರು ಆಗಿದ್ದರು ಇವರನ್ನು ವೀರ ಬಣರಜುಗಳೆಂದು ಶಾಸನದಲ್ಲಿ ಕರೆಯಲಾಗಿದೆ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಕೊಂತದ ಭೀರ ಎನ್ನುವವನು ಆನೆಗಳ ಒಡ್ಡನ್ನು ಒಡೆಯದಂತೆ ಶಾಸನವೊಂದು ತಿಳಿಸುತ್ತದೆ. (ಎ.ಕ-೭, ಶಿಕಾರಿ.೧೯, ಕ್ರಿ.ಶ.೧೦೬೬) ಯುದ್ಧದ ವ್ಯೂಹದಲ್ಲಿ ಆನೆ ಕುದುರೆ ಕಾಲಾಳುಗಳನ್ನು ಹೇಗೆ ಹೇಗೆ ನಿಲ್ಲಿಸುತ್ತಿದ್ದರೆಂದು ತಿಳಯಲು ಯಾವ ಸಾಧನಗಳು ಇಲ್ಲ. ಸಾಮಾನ್ಯವಾಗಿ ವಿಶಾಲವಾದ ಬಯಲುಗಳನ್ನು ಯುದ್ಧಭೂಮಿಯಾಗಿ ಆರಿಸಿಕೊಂಡು ಅಲ್ಲಿ ಸೇನೆಗಳನ್ನು ಒಡ್ಡುತ್ತಿದ್ದರು (ಎ.ಕ-೭, ಶಿಕಾರಿ.೭೭, ಕ್ರಿ.ಶ.೧೧೧೦) ಅರಸರ ನಡುವೆ ನಡೆದ ಪರಸ್ಪರ ನಡೆದ ಯುದ್ಧಗಳೆಲ್ಲವೂ ಗಡಿಕಾಳಗಗಳು ಹಳ್ಳಿಗಳ ನಡುವೆ ಗಡಿಯ ಬಗ್ಗೆ ಭಿನ್ನಾಭಿಪ್ರಾಯ ಉಂಟಾದರೆ ಇದು ಗಡಿಕಾಳಗಗಳಲ್ಲಿ ಮುಕ್ತಾಯವಾಗುತ್ತಿತ್ತು. (ಎ.ಕ-೭, ಶಿಕಾರಿ೨೯೮, ಕ್ರಿ.ಶ.೧೦೮೯) ಬೀರ ಬಲ್ಲಾಳನ ಮಹಾಪ್ರಧಾನ ಮಲ್ಲಯ ದಂಡನಾಯಕನ ಅಪ್ಪಣೆಯಂತೆ ಹರಿಯಾಣ ಉದರೆಯ ಕೋಟೆಯನ್ನು ಮುತ್ತಿ ಗುರಾಣಿಹಿಡಿದು ಕೋಟೆಯನ್ನೇರಿ ಹಲವರನ್ನು ಕೊಂದು ತಾನೂ ಮಡಿದನು. (ಎ.ಕ-೭, ಶಿಕಾರಿ.೨೪೪, ಕ್ರಿ.ಶ.೧೨೦೩)

ಕ್ರಿ.ಶ. ೯೯೭ ರಲ್ಲಿ ಪಟ್ಟವೇರಿದ ಇರಿವ ಬೆಡಂಗ ಸತ್ಯಾಶ್ರಯ ಕವಿರತ್ನ ರನ್ನನ ಆಶ್ರಯದಾತ. ಸತ್ಯಾಶ್ರಯನ ಮೇಲೆ ಚೋಳರು ಅಪಾರ ಸಂಖ್ಯೆಯ ಸೈನ್ಯದೊಂದಿಗೆ ಮುನುಗ್ಗಿ ಬಂದರು. ಈ ಸಮಯದಲ್ಲಿ ಸತ್ಯಾಶ್ರಯ ಸಾಕಷ್ಟು ನಷ್ಟವನ್ನು ಅನುಭವಿಸಿದನು. (ಎ.ಕ-೭, ಶಿಕಾರಿ.೧೨೫, ಕ್ರಿ.ಶ.೧೦೧೯) ಆಕಾಶ, ಭೂಮಿ, ದಿಕ್ಕು, ಸೈನ್ಯ, ಅರಮನೆ ಈ ಐದು ಸ್ಥಳಗಳಲ್ಲಿ ಆಗುವ ಉತ್ಪಾತಗಳು (ಉತ್ಪಾತ=ಆಕಸ್ಮಿಕವಾದ ಘಟನೆ) ಯುದ್ಧಕ್ಕೆ ಹೊರಟ ಸಂದರ್ಭದಲ್ಲಿ ಇವುಗಳ ಬಗ್ಗೆ ವಿಚಾರ ಮಾಡಲು ಎಷ್ಟೋ ಸಲ ಸಮಯ ವಿರುತ್ತಿರಲಿಲ್ಲ. ಮೊದಲೇ ನಿಶ್ಚಯಿಸಿದಂತೆ ವಿಶಾಲವಾದ ಬಯಲಿನಲ್ಲಿ ಸೈನ್ಯವನ್ನು ಒಡ್ಡುತ್ತಿದ್ದರು. (ಎ.ಕ-೭, ಶಿಕಾರಿ.೭೭, ಕ್ರಿ.ಶ.೧೧೧೦) ಯುದ್ಧಭೂಮಿಯನ್ನು ವಿಸಸನ ಭೂಮಿ ಎನ್ನುತ್ತಾರೆ (ಎ.ಕ-೭, ಶಿಕಾರಿ.೨೪೨, ಕ್ರಿ.ಶ.೧೧೬೩).

ಮೂರನೇ ಸೋಮೇಶ್ವರನ ಆಳ್ವಿಕೆ ಶಾಂತಿಯುತವಾಗಿತ್ತೆಂದು ಕಂಡುಬರುತ್ತದೆ. ಈತನ ಆಳ್ವಿಕೆಯ ಕೊನೆಯ ವರೆಗೆ ಕಲ್ಯಾಣವೇ ಈತನ ರಾಜಧಾನಿಯಾಗಿತ್ತು. ಈತನು ಪಂಡಿತನಾಗಿದ್ದು ಕ್ರಿ.ಶ.೧೧೩೦ರಲ್ಲಿ ಅಂದರೆ ತನ್ನ ಆಳ್ವಿಕೆಯ ಜೊತೆಗೆ ಅಭಿಲಾಷಿತಾರ್ಥ ಚಿಂತಾಮಣಿ ಅಥವಾ ಮಾನಸೋಲ್ಲಾಸ ಎಂಬ ಜ್ಞಾನ ಕೋಶದಂತಹ ಉದ್ಗ್ರಂಥವನ್ನು ರಚಿಸಿದ. ಈತನ ಆಳ್ವಿಕೆಯಲ್ಲಿ ಸೈನಿಕ ಆಕ್ರಮಣಗಳಾವುದನ್ನು ಈತ ಕೈಗೊಂಡಂತೆ ಕಂಡುಬರುವುದಿಲ್ಲ, ಆದರೆ ಬಳ್ಳಿಗಾವಿಯ ಶಾಸನವೊಂದು ಈತನು ದಕ್ಷಿಣಕ್ಕೆ ದಿಗ್ವಿಜಯ ಹೊರಟು ಹುಲ್ಲುನಿಯ ತೀರ್ಥ ಎಂಬಲ್ಲಿ ತಂಗಿದ್ದನೆಂಬ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೦೦ ಕ್ರಿ.ಶ.೧೧೨೯) ಉದಯಾದಿತ್ಯನು ಸೈನ್ಯ ಸಮೇತನಾಗಿ ಬನವಾಸಿಗೆ ಬಂದು ಕೋಟೆಯ ಹೊರಗಡೆ ಬೀಡು ಬಿಡುತ್ತಾನೆ. ಬಹುಶಃ ಇಲ್ಲಿ ಯುದ್ದ ನಡೆದಿರಬೇಕು. (ಎ.ಕ-೭, ಶಿಕಾರಿ.೨೯೫, ಕ್ರಿ.ಶ.೧೦೭೩).

ಮಡಿಕೆದೊರೆಯುದ್ಧ- ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ತಂಬರಸನು ಚಕ್ರವರ್ತಿ ವಿಕ್ರಮಾದಿತ್ಯನ ಆದೇಶದ ಮೇರೆಗೆ ಚೋಳರ ವಿರುದ್ಧ ಯುದ್ಧ ಮಾಡಿದು ಹಳೇ ಬನ್ನೂರು ಶಾಸನದಿಂದ ತಿಳಿದು ಬರುತ್ತದೆ.(ಮೈ.ಅ.ರೀ.೧೯೩೦, ಸಂಖ್ಯೆ.೭೬, ಕ್ರಿ.ಶ.೧೦೮೦) ಜನರಿಗಿಂತ ದನಗಳು ಹೆಚ್ಚು ಅರಕ್ಷಿತ ಸ್ಥಿತಿಯಲ್ಲಿದ್ದಂತೆ ಊಹಿಸಬಹುದು.ಕಳ್ಳರು ಬಂದು ಕದ್ದಾಗ ಗೋವುಗಳನ್ನು ಕದಿಯುತ್ತಿದ್ದ ಗೋವಳರು ಮತ್ತು ಇತರರು ಹುಯ್ಯಲವನ್ನೇಭಿಸುತ್ತಿದ್ದರು. (ಎ.ಕ-೭, ಶಿಕಾರಿ.೭೩, ಕ್ರಿ.ಶ.೧೦೪೮) ಮಹಾಮಂಡಳೇಶ್ವರ ಸೋವಿದೇವನ ರಾಣಿ ಲಚ್ಚಲದೇವಿ ಮಡಿದಾಗ ಮುನ್ನುಡಿದ ಭಾಷೆಯಂತೆ ಬೊಪ್ಪಣನು ಮಡಿಯುವನು (ಎ.ಕ-೭, ಶಿಕಾರಿ.೨೪೯, ಕ್ರಿ.ಶ.೧೧೮೫) ಶಾಂತಿಯುತವಾದ ಸಂಧಾನಗಳು ವಿಫಲವಾದುದ್ದರ ಪರಿಣಾಮವಾಗಿ ಹಳ್ಳಿ ಹಳ್ಳಿಗಳಿಗೆ ಹೋರಾಟವು ನಡೆದು ಅನೇಕರು ಮಡಿಯುತ್ತಿದ್ದರು. ಉದಾಹರಣೆಗೆ ಹೊಸವೂರು ಮತ್ತು ಜಂಬೂರುಗಳ ಮಧ್ಯೆ ಗಡಿಕಾಳಗ ನಡೆದಾಗ ಈಸವೂರಿನ ತಳಾವರನಾದ ಮಾಳ ಎಂಬುವನು ಆ ಊರಿನ ಜನರ ಅಪ್ಪಣೆಯನ್ನು ಬೇಡಿ ಹೋರಾಡಿ ಅನೇಕರನ್ನು ಕೊಂದು ಸುರಲೋಕ ಪ್ರಾಪ್ತನಾಗುತ್ತಾನೆ. (ಎ.ಕ-೭, ಶಿಕಾರಿ.೨೯೮, ಕ್ರಿ.ಶ.೧೦೪೯) ರಾಷ್ಟ್ರಕೂಟರಿಗೂ ಚಾಳುಕ್ಯರಿಗೂ ನಡೆದ ಯುದ್ಧದಲ್ಲಿ ಚಾಳುಕ್ಯರ ವಿಜಯವನ್ನು ಮತ್ತೊಂದು ಶಾಸನವು ತಿಳಿಸುತ್ತದೆ. (ಎ.ಕ-೭, ಶಿಕಾರಿ.೧೨೫, ಕ್ರಿ.ಶ.೧೦೧೯)

ಶಾಸನಗಳಲ್ಲಿ ಆನೆ ಕುದುರೆಗಳ ಜೊತೆಗೆ ರಥದ ಹೆಸರು ಉಲ್ಲೇಖವಾಗಿದೆ (ಎ.ಕ-೭, ಶಿಕಾರಿ.೫೮, ಕ್ರಿ.ಶ.೧೧೨೪) ತುರುಷ್ಕ ದೇಶದ ಕುದುರೆಗಳು ಪ್ರಸಿದ್ಧ. ಕಳಿಂಗ ಕಾಂಬೋಜ ಬಾಹ್ಲೀಕ ದೇಶಗಳ ಕುದುರೆಗಳನ್ನು ತನ್ನ ಕೃತಿಗೆ ಮೆಚ್ಚಿ ಭೋಜರಾಜನು ತನಗೆ ಕೊಟ್ಟಂತೆ ಮೊದಲನೆಯ ನಾಗವರ್ಮನು ಹೇಳಿಕೊಂಡಿದ್ದಾನೆ. (ಎ.ಕ-೭. ಶಿಕಾರಿ.೧೯೭, ಕ್ರಿ.ಶ.೧೧೮೨) ಕರ್ನಾಟಕದಲ್ಲಿ ಇಂತಹ ಪದ್ಧತಿ ಸೇನೆ ಇತ್ತೆ ಎನ್ನುವುದರ

ವಿಚಾರಾರ್ಹವಾದ ಸಂಗತಿ ಇಲ್ಲ. ಅನೇಕ ವರ್ತಕರ ಶ್ರೇಣಿಗಳಿದ್ದವೇನೋ ನಿಜ ಅವುಗಳ ವ್ಯಾಪಾರವೂ ಕರ್ನಾಟಕದ ಗಡಿಯಾಚೆಗೂ ವ್ಯಾಪಿಸಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಕಳ್ಳರ ಭಯವಿದ್ದ ಆ ಕಾಲದಲ್ಲಿ ವ್ಯಾಪಾರಿಗಳ ಜೊತೆಯಲ್ಲಿ ಸೈನಿಕರೂ ಇದ್ದಿರಬೇಕು. ಒಬ್ಬೊಬ್ಬ ವರ್ತಕರೂ ಪ್ರತ್ಯೇಕವಾಗಿ ಸೈನ್ಯವನ್ನು ನೇಮಿಸಿಕೊಂಡಿರುವುದು ಅಸಂಭವ. ಈ ಕೆಲಸವನ್ನು ವರ್ತಕ ಶ್ರೇಣಿಯು ಕೈಗೊಂಡಿರಬಹುದು ಅಷ್ಟೇ ಅಲ್ಲ ವರ್ತಕರೇ ಸ್ವತಃ ವೀರರಾಗಿ ಯುದ್ಧ ಶಿಕ್ಷಣವನ್ನು ಪಡೆದಿದ್ದು ಅವರೇ ಮುಂದೆ ನುಗ್ಗಿ ಕಳ್ಳರ ಕೈಯಲ್ಲಿ ಹೋರಾಡುವ ಸಾಮರ್ಥ್ಯವನ್ನು ಪಡೆದಿದ್ದರು. ಅನೇಕ ಶಾಸನಗಳು ಅವರ ವ್ಯಾಪಾರ ಕೌಶಲ್ಯದ ಜೊತೆಗೆ ದೈಹಿಕ ಪರಾಕ್ರಮವನ್ನು ಹೊಗಳುತ್ತವೆ. ಅವರನ್ನು ವೀರಬಣಜರುಗಳೆಂದು ಶಾಸನಗಳು ಕರೆಯುತ್ತವೆ. ಅವರಿಗೆ ಪ್ರತ್ಯೇಕವಾದ ಧ್ವಜಗಳು, ಲಾಂಛನಗಳು ಇದ್ದವು. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪)

ಬೇಗೂರಿನ ಶಿಲಾ ಶಾಸನದಲ್ಲಿ ಆನೆಯ ಕುಂಭ ಸ್ಥಳಕ್ಕೆ ನೆಟ್ಟಿರುವ ಬಾಣಗಳಿಗೆ ಗರಿಗಳಿರುವುದು ಸ್ಪಷ್ಟವಾಗಿ ಕಾಣುತ್ತಿದೆ. (ಎ.ಕ-೭, ಶಿಕಾರಿ.೫೮) ಶೂಲ, ಕರ್ಕಡೆ, ತೀರಿಕೆ, ಆಯುಧಗಳ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೯೮, ಕ್ರಿ.ಶ.೧೧೦೩) ವೀರಗಲ್ಲುಗಳಲ್ಲಿ ಅಡ್ಡಣ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೨೫, ಕ್ರಿ.ಶ.೧೧೮೩) ಪಂಪ ಭಾರತದಲ್ಲಿ ಅಡ್ಡಣಕ್ಕೆ ಗುರಾಣಿಕೆ ಎಂಬ ಪದ ಬಳಕೆಯಾಗಿದೆ. ಬಂದಳಿಕೆಯ ವೀರಗಲ್ಲುವೊಂದರಲ್ಲಿ ಕೋಟೆಯ ಅಚ್ಚಣಿಗೆಯ ಮೇಲೆ ನಿಂತು ಯುದ್ಧ ಮಾಡುತ್ತಿರುವ ಯೋಧರಿಬ್ಬರು ಕಿವಿಗಿಂತಲೂ ಹಿಂದಕ್ಕೆ ಹೆದೆಯನ್ನೆಳೆದು ಬಿಲ್ಲನ್ನು ಮೇಲಕ್ಕೆತ್ತಿ ಬಾಣ ಪ್ರಯೋಗಿಸುತ್ತಿರುವ ಚಿತ್ರವಿದೆ. ಕುದುರೆಯ ಮೇಲೆ ಬಿಲ್ವರನು ಸೋಲಿಗೆ ತೀರಿಕೆ ಭಿಣ್ಡವಾಳ ಮೆದತ್ತಿ ಕರವಾಳಂ ಎಂಬುದು ಶಾಸನಕಾರನ ಉಲ್ಲೇಖ ಅಶ್ವರೋಹಿಗಳು ಖಡ್ಗವನ್ನು ಹಿಡಿದಂತೆ ಬಿದಿವಾಳವನ್ನು ಹಿಡಿಯುತ್ತಿದ್ದರೆಂದು ಸೂಚನೆ ಇಲ್ಲಿದೆ (ಎ.ಕ-೭, ಶಿಕಾರಿ.೧೩೬, ಕ್ರಿ.ಶ.೧೦೬೮೦.

ಸಾಮಾಜಿಕ ಸ್ಥಿತಿಗತಿಗಳು:

ಮಾನವನು ಸಂಘಜೀವಿಯಾದಂತೆಯೇ ಸಮಾಜಜೀವಿ. ಹಾಗಾಗಿಯೇ ಸಾಮಾಜಿಕ ಮೌಲ್ಯಗಳಿಗೆ ಒಳಪಟ್ಟು ಪ್ರಭಾವಿತನಾಗಿರುತ್ತಾನೆ. ಜೀವನದ ಎಲ್ಲಾ ರಂಗಗಳಲ್ಲೂ ತನ್ನ ಪ್ರಭಾವ ಬೀರುವಂತೆ ಸಮಾಜದಲ್ಲೂ ತನ್ನನ್ನು ತೊಡಗಿಸಿಕೊಂಡಿದ್ದಾನೆ. ಪ್ರಸ್ತುತ ಅಧ್ಯಯನವು ಸಮಾಜವನ್ನು ಚಿತ್ರಸುವಲ್ಲಿ ಶಾಸನಗಳನ್ನು ಉಪಯೋಗಿಸಲಾಗಿದೆ. ಹೀಗಾಗಿ ಅವರ ಸಾಮಾಜಿಕ ಜೀವನ, ಸ್ತ್ರೀಯರ ಸ್ಥಾನ- ಮಾನ, ಸಾಮಾಜಿಕ ಕಾರ್ಯಗಳು, ಜಾತಿ ಮದುವೆ ಇತ್ಯಾದಿ ಅಂಶಗಳನ್ನು ಮೈಗೂಡಿಸಿಕೊಂಡಿದೆ. ವಿಶೇಷವಾಗಿ ಮಹಿಳೆಯರ ನಡೆ-ನುಡಿಗೆ ಹೆಚ್ಚಿನ ಪ್ರಾಶಸ್ತ್ಯತೆ ನೀಡಲಾಗಿದೆ. ಸಮಾಜದ

ಜೊತೆಗೆ ಧಾರ್ಮಿಕ ಅಂಶಗಳು ಒಟ್ಟಿಗೆ ಬೆಳೆದು ಬಂದಿದೆ. ಜನಜೀವನ ಸ್ವರೂಪಕ್ಕೆ ಧರ್ಮ ನಿರ್ಣಾಯಕ ಶಕ್ತಿ. ಸಾಮಾಜಿಕ ಮೌಲ್ಯಗಳಿಗೆ ಒಳಪಟ್ಟು ಮಾನವ ಪ್ರಭಾವಿತನಾಗಿರುತ್ತಾನೆ.

ಸಮಾಜದಲ್ಲಿ ಪುರುಷರಿಗೆ ಪ್ರಮುಖ ಸ್ಥಾನವಿತ್ತು. ಒಂದು ಶಾಸನದಲ್ಲಿ ತಂದೆ ಮಾಡಿದ ಧರ್ಮವನ್ನು ಕಾಪಾಡಿಕೊಂಡು ಬರುವವನು ಗಂಡು ಮಗನೆ ಎಂಬುದಾಗಿ ತಿಳಿಸಿದೆ (ಎ.ಕ-೭, ಶಿಕಾರಿ.೨೮೭, ಕ್ರಿ.ಶ.೧೦೭೨) ಆಸ್ತಿಗೆ ಹಕ್ಕುದಾರರಿಲ್ಲದಿದ್ದಾಗ ಪೂರ್ತಿ ಸ್ಥಿರಾಸ್ತಿಯನ್ನು ಬಳ್ಳಿಗಾವಿಯ ನಾಗೇಶ್ವರ ದೇವಾಲಯಕ್ಕೆ ನೀಡಿದ ಶಾಸನ ದಾಖಲೆಗಳಿವೆ (ಎ.ಕ-೭, ಶಿಕಾರಿ.೧೧೯, ಕ್ರಿ.ಶ.೧೧೮೧) ಮದುವೆಯ ವಿಚಾರದಲ್ಲಿ ಇವತ್ತಿನ ರೀತಿಯ ಸುವ್ಯವಸ್ಥೆ ಅಂದಿನ ಕಾಲದಲ್ಲೂ ಕೂಡ ಗುರುತಿಸಬಹುದು. ಮದುವೆಯಂತಹ ಬಹುಮುಖ್ಯ ಸಂಬಂಧಕ್ಕೆ ಮಹತ್ವ ಪಡೆದಿರಲಿಲ್ಲ. (ಚೆನ್ನಕ್ಕ ಎಲೆಗಾರ,೧೯೮೭, ಪ್ರಾಚೀನ ಕರ್ನಾಟಕ ರಾಣಿಯರು) ಮೂಲಸ್ಥಾನ ರಾಮೇಶ್ವರ ದೇವರ ಗಂಧ, ದೂಪ, ನೀವೆದ್ಯಕ್ಕೆ ಎಪ್ಪತ್ತೊಕ್ಕಲು ಮದುವೆಯ ಪಂದಣ(ಪಂದಣ ಹಣ = ಚಪ್ಪರದ ಹಣ)ಹಣವನ್ನು ಬಿಟ್ಟುಕೊಟ್ಟರು (ಎ.ಕ-೭, ಶಿಕಾರಿ.೨೯೫, ಕ್ರಿ.ಶ.೧೦೭೪) ಮದುವೆಯ ಸಮಯದಲ್ಲಿ ಮದುವಣಿಗ ಮತ್ತು ವದುವಣಗಿತ್ತಿಗಿಯರು ತಲಾ ಒಂದು ಪಣವನ್ನು ಕೊಡಬೇಕೆಂದು ಬಳ್ಳಿಗಾವಿಯ ಸಪ್ಪಿಗರ ಸಂಘವು ತೀರ್ಮಾನಿಸಿ ಆ ಹಣವನ್ನು ಕುಸುಮೇಶ್ವರ ದೇವಸ್ಥಾನಕ್ಕೆ ಕೊಡಬೇಕೆಂದು ನಿರ್ಧರಿಸುತ್ತಾರೆ. (ಎ.ಕ-೭, ಶಿಕಾರಿ.೧೧೨, ಕ್ರಿ.ಶ.೧೧೩೯) ಇದೇ ಹಣ ಮದುವೆಗೆ ಎಂದು ತೆಗೆದು ಕೊಡುತ್ತಿದ್ದರು ಇದನ್ನೇ ಮದುವೆ ಪಂದಣ ಹಣ ಎಂದು ಶಾಸನಗಳಲ್ಲಿ ಕರೆದಿರುವುದನ್ನು ಕಾಣಬಹುದು (ಎ.ಕ-೭, ಶಿಕಾರಿ.೨೯೫, ಕ್ರಿ.ಶ.೧೦೭೪)

ಮದುವೆಯ ನಂತರ ಗಂಡನಿಗೆ ಹೆಂಡತಿ, ಹೆಂಡತಿಗೆ ಗಂಡ ಕೂಡಿ ಬಾಳಿದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಗಂಡನೂ ಕೂಡ ತನ್ನ ಪತ್ನಿಯ ವಿಷಯದಲ್ಲಿ ಅಷ್ಟೇ ಪ್ರಾಮಾಣಿಕತೆಯನ್ನು ತೋರಿಸಬೇಕೆಂದು ಹೇಳುತ್ತಾರೆ. (ಎ.ಕ-೭, ಶಿಕಾರಿ.೨೮೭, ಕ್ರಿ.ಶ.೧೦೧೨) ಮಾದಿಮಯ್ಯ ಎನ್ನುವವನ್ನು ಸ್ವದಾರರತಿ ಧರ್ಮ ನಿರತನ್ ಎಂದು ಶಾಸನವು ಕರೆಯುತ್ತದೆ.(ಚಿದಾನಂದಮೂರ್ತಿ.ಎಂ.,೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೪೬೩) ಪತಿ ನಿಷ್ಠೆಯುಳ್ಳ ಮಹಿಳೆಯರನ್ನು ಕನ್ನಡ ಶಾಸನಗಳು ಪತಿವ್ರತೆ, ಪುರುಷವ್ರತೆ ಎಂದು ಕರೆದಿವೆ. ಪಾಂಡ್ಯ ಚಂದ್ರನ ಮಡದಿ ಸಾವಲದೇವಿಯನ್ನು ಸದೃಢ ಪುರುಷವ್ರತೆಯಾಗಿದ್ದಳೆಂದು ಶಾಸನವೊಂದು ತಿಳಿಸಿದೆ. (ಎ.ಕ-೭, ಶಿಕಾರಿ.೯೯, ಕ್ರಿ.ಶ.೧೧೧೩) ಪುರುಷರು ಮಹಿಳೆಯರ ಬಗ್ಗೆ ಒಳ್ಳೆಯ ನಡೆತೆಯುಳ್ಳ ವ್ಯಕ್ತಿಗಳಾಗಿದ್ದರು. ಪರನಾರಿ ಸಹೋದರ ಎಂಬ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೦೨, ಕ್ರಿ.ಶ.೧೧೬೨) ಹಾಗೆ ಅನ್ಯವನಿತಾ ಪುತ್ರಂ ಎಂಬ ಉಲ್ಲೇಖವಿದೆ (ಎ.ಕ-೭, ಶಿಕಾರಿ.೧೯, ಕ್ರಿ.ಶ.೧೦೬೬) ಉತ್ತಮ ಸಮಾಜವನ್ನು ಮಾಡಿಕೊಂಡು ಪುರುಷ-

ಸ್ತ್ರೀಯರು ವಿಧಿಯ ಆಟಕ್ಕೆ ಬಲಿಯಾಗಲೇಬೇಕು. ಹಾಗೇ ವಿಧಿವೆಯರಾಗಿಯೋ ಅಥವಾ ಸತಿಯರಾಗಿಯೋ ಜೀವನವನ್ನು ಅಂತ್ಯಕಾಣುವುದು ನೋಡಬಹುದು. ವಿಧಿವೆಯರು ಇಲ್ಲವೇ ಸಹಗಮನವನ್ನು ಮಾಡುತ್ತಿದ್ದರು ಅಥವಾ ಉಳಿದ ಜೀವನವನ್ನು ಕಠಿಣವ್ರತಗಳಲ್ಲಿ ಕಳೆಯುತ್ತಿದ್ದರು. ಇದಕ್ಕೆ ಸೋದರಿಯರಾದ ಗುಂಡಮಬ್ಬೆ ಮತ್ತು ಅತ್ತಿಮಬ್ಬೆಯರೇ ನಿದರ್ಶನ. ಕೆಲವರು ತಮ್ಮ ಗಂಡನ ಸಾವಿನ ನಂತರ ಗಂಡನಂತೆಯೇ ನಾಡ ಪ್ರಭುತ್ವವನ್ನು ವಹಿಸಿಕೊಂಡು ನಾಡನ್ನು ಆಳಿದ ಉಲ್ಲೇಖಗಳು ಕಾಣಬಹುದು. ಕೆಲವೊಮ್ಮೆ ವೇಶ್ಯ ವೃತ್ತಿಯನ್ನು ನಡೆಸಲು ಮತ್ತು ಅವರು ಕನ್ನಡಿಗಳನ್ನು ಇಟ್ಟಿಕೊಂಡದಕ್ಕೂ ತೆರಿಗೆಗಳನ್ನು ಕೊಡಬೇಕಾಗಿತ್ತೆಂದು ಕಾಣುತ್ತದೆ. (ಎ.ಕ-೭, ಶಿಕಾರಿ.೨೯೫, ಕ್ರಿ.ಶ.೧೧೭೪) ಈ ನಿಟ್ಟಿನಲ್ಲಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿಯೂ ದೇವದಾಸಿ ಪದ್ಧತಿಯ ಬಗ್ಗೆ ಚರ್ಚೆಗೆ ಒಳಪಡಿಸಲು ಶಾಸನಗಳು ಮೂಲ ಆಕರಗಳಾಗಿವೆ.

ಶಿಕಾರಿಪುರದ ಭಾಗದಲ್ಲಿ ಕೂಡ ಜಾತಿ ವ್ಯವಸ್ಥೆ ತಲೆದೋರಿದ್ದನ್ನು ತಿಳಿಯಬಹುದು. ತಾಳಗುಂದ ಶಾಸನದಲ್ಲಿ ಉಲ್ಲೇಖಿಸುವಂತೆ ಅಹೋ ಕಲಿಯುಗದಲ್ಲಿ ಕ್ಷತ್ರಿಯರು ಬ್ರಾಹ್ಮಣರನ್ನು ಹುಲ್ಲಿಗಿಂತ ಕಡೆಯಾಗಿ ಕಾಣುತ್ತಾರೆ. ಬ್ರಾಹ್ಮಣರು ಎಲ್ಲಾ ಶಾಖೆಗಳನ್ನು ಗುರುಗಳ ಬಳಿ ಅಭ್ಯಾಸ ಮಾಡಿದರು. ಬ್ರಹ್ಮಸಿದ್ಧಿ ಇನ್ನೂ ಕ್ಷತ್ರಿಯರ ಕೈಯಲ್ಲೇ ಇದೆ. ಈ ರೀತಿ ಅವನು ದುಃಖಿಸಿ ಕುಶ ಸಮಿತ್ತು, ಅಜ್ಯ, ಚರುಗಳನ್ನು ಹಿಡಿಯುತ್ತಿದ್ದ ಕೈಯಲ್ಲಿ ಹೊಳೆಯುವ ಆಯುಧಗಳನ್ನು ಹಿಡಿದು ದುರ್ಗಮವಾದ ವನದುರ್ಗವೊಂದರಲ್ಲಿ ರಕ್ಷಣೆಯನ್ನು ಪಡೆದು, ಯುದ್ಧದಲ್ಲಿ ಜಯವನ್ನು ಹೊಂದಿ ಕದಂಬರ ವಂಶಕ್ಕೆ ಮೂಲ ಪುರುಷನಾಗುತ್ತಾನೆ.(ಚಿದಾನಂದಮೂರ್ತಿ.ಎಂ,೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೪೭೯) ಬೇಗೂರಿನ ಬ್ರಾಹ್ಮಣರ ಪ್ರಶಸ್ತಿಯಲ್ಲಿ ಈ ರೀತಿ ಇದೆ. ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಜಪ ಸಮಾಧ್ಯಾದಿ ಸಂಪಂನರು ಮೀಮಾಂಸಕ ಲೋಕಾಯತ ಬೌದ್ಧ ಸಾಂಖ್ಯ ವೈಶೇಷಿಕಾದಿ ಶಾಸ್ತ್ರಗಮ ಕುಶಲರಗ್ನಿ ಷ್ಟೋಮಾದಿ ವಿಶಿಷ್ಟೇಷ್ಟ ವಿದ್ವಜ್ಜನ ಪೂಜಿತರು ದ್ವಾತ್ರಿಂಶತ್ಯಹಸ್ರ ಸಮಯಾಗ್ರ ಗಣ್ಯರನೇಕ ಶ್ರುತಿ ಸ್ಮೃತಿ ಶೃತ್ಯಾರ್ಥ ಕೀರ್ತಿತ್ರಯ ಸಂಪಂನರಪ್ಪ ಶ್ರೀಮದಗ್ರಹಾರ ಬೇಗೂರು ಮಹಾಜನಂ ಎಂದು ಬ್ರಾಹ್ಮಣರ ಬಗ್ಗೆ ಉಲ್ಲೇಖವಿದೆ(ಎ.ಕ-೭, ಶಿಕಾರಿ.೧೪, ಕ್ರಿ.ಶ.೧೦೮೯)

ಜನರಲ್ಲಿ ದೈವ ಭಕ್ತಿಯ ರಾಜರು ಶ್ರೀಮಂತರು ವ್ಯಾಪಾರಿಗಳು ಮತ್ತು ಸಾಮಾನ್ಯರು ಸಹ ದೇವಾಲಯ ಅಥವಾ ಬಸದಿಯನ್ನು ಕಟ್ಟಿಸುತ್ತಿದ್ದರು, ಭೂದಾನ ನೀಡುತ್ತಿದ್ದರು. ಇಂತಹ ಅನೇಕ ದಾನ ಶಾಸನಗಳನ್ನು ನೋಡಬಹುದು. ದೇವಾಲಯಕ್ಕೆ ಅಥವಾ ಬಸದಿಗೆ ದಾನ ಕೊಡುತ್ತಿದ್ದಾಗ ದೂಪ ದೀಪ ನೈವೇದ್ಯಕ್ಕೆ ಅಲ್ಲಿಯ ವಿದ್ಯಾರ್ಥಿ

ತಪೋದನ ಕಚ್ಚಾನಕ್ಕೆ (ಕಚ್ಚಾನ=ದೋತ್ರ) ಕಲಂಕರ್ಚಿ ಎಂದು ಹೇಳಿದೆ. (ಎ.ಕ-೭, ಶಿಕಾರಿ.೧೫೩, ಕ್ರಿ.ಶ.೧೦೫೮) ಶಿಲ್ಪಿಗಳು ಸೌರ ದೇವಾಲಯವನ್ನು ಕಟ್ಟಿಸಿದ್ದಾರೆ. (ಎ.ಕ-೭, ಶಿಕಾರಿ.೧೧೯, ಕ್ರಿ.ಶ.೧೦೮೦) ಬ್ರಾಹ್ಮಣರನ್ನು ಗೌರವದಿಂದ ಕಾಣುತ್ತಿದ್ದುದಕ್ಕೆ ಉಲ್ಲೇಖಗಳಿವೆ. ಮಂಡಳಿಯ ಗಂಗರ ದೊರೆ ನನ್ನಿಯ ಗಂಗ ಪೆರ್ಮಾಡಿಯು ಬೇಗೂರಿನ ಸಾವಿರದ ಮುನ್ನೂರು ಬ್ರಾಹ್ಮಣರಿಗೆ ಪಾದಪೂಜೆ ಮಾಡಿಸುವ ಬಗ್ಗೆ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೩, ಕ್ರಿ.ಶ.೧೧೪೯) ದಾನಗಳ ಮೂಲಕ ಸಮಾಜದ ಉದ್ಧಾರಕ್ಕೆ ಕೆಲವು ವ್ಯಕ್ತಿಗಳು ಮುಂದಾಗುತ್ತಿದ್ದರು. ಅನ್ನದಾನ, ಸುವರ್ಣದಾನ, ಕನ್ಯಾದಾನ, ಗೋದಾನ, ಭೂದಾನಭೈಷ ಜ್ಯಾನೇಕದಾನ ವಿನೋದರಂ ಎಂಬ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೨೩, ಕ್ರಿ.ಶ.೧೧೪೯).

ಜಾತಿಗಳನ್ನು ವಿಂಗಡಿಸುವಾಗ ಮುಖ್ಯವಾಗಿ ಬ್ರಾಹ್ಮಣ, ಕ್ಷತ್ರಿಯರ ಜೊತೆಗೆ ವ್ಯಾಪಾರಿಗಳನ್ನು ಗುರುತಿಸಬಹುದು. ಇದರ ಜೊತೆಗೆ ಚಿಕ್ಕಪುಟ್ಟ ಜಾತಿಯವರನ್ನು ವೃತ್ತಿಯಾಧಾರಿತವಾಗಿ ವಿಂಗಡಿಸಬಹುದು. ಶಿಲ್ಪಿಕ ಲಲಾಟ ಪಟ್ಟಂ ಸರಸ್ವತಿಗಣ ಪಾದ ಪಂಕಜ ಬ್ರಮರಂ ಜಿನ ಪಾದಾರಂಭಕಂ ಪದ್ಮೋಜನ ಶಿಲ್ಪಕಾಕಮ ಇವು ಬ್ರಾಹ್ಮಣ ಶಾಸನದ ಕೊನೆಯಲ್ಲಿ ಬರುವ ಮಾತುಗಳು (ಎ.ಕ-೭, ಶಿಕಾರಿ.೨೯೩, ಕ್ರಿ.ಶ.೧೦೮೦) ಶಿಲ್ಪಿಗಳನ್ನು ರಾಜರು ಗೌರವದಿಂದ ಕಾಣುತ್ತಿದ್ದರು. ರಾಜರು ಇವರಿಗೆ ವಾರ್ಷಿಕ ವೇತನ ಕೊಡುತ್ತಿದ್ದರೆಂದು ಒಂದು ಶಾಸನದಿಂದ ತಿಳಿದು ಬರುತ್ತದೆ. (ಎ.ಕ-೭, ಶಿಕಾರಿ.೧೮, ಕ್ರಿ.ಶ.೧೦೫೪) ಗಣಿಗಾರಿಕೆ ಕೆಲಸ ಕುಲುಮೆ ಕೆಲಸ ಇತ್ಯಾದಿ ಕಾರ್ಯಗಳನ್ನು ಮಾಡುತ್ತಿದ್ದರು. ಕಬ್ಬಿಣದ ಕೆಲಸಗಳನ್ನು ಮಾಡುತ್ತಿದ್ದರು. ಕಮ್ಮಾರರ ಹೆಸರುಗಳು ಹಲವಾರು ಶಾಸನಗಳಲ್ಲಿ ಇವೆ. (ಎ.ಕ-೭, ಶಿಕಾರಿ.೩೦೭, ಕ್ರಿ.ಶ.೧೦೧೬) ಇದಲ್ಲದೆ ಇತರೆ ಕೆಳಜಾತಿಯ ಬಗ್ಗೆ ಶಾಸನಗಳಿಂದ ತಿಳಿಯಬಹುದು. ಒಂದು ಶ್ರೇಣಿಯಿದ್ದಂತೆ ಊಹಿಸಬಹುದುದಾದ ಪಟ್ಟಣರಸಗರು ವರ್ಷಕ್ಕೆ ಪ್ರತ್ಯೇಕ ವೀಸದತ್ತಂ ಕೊಟ್ಟರು (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಇವರ ಕೊತ್ತಳಿಯ ಹೆಸರು ಶಾಸನದಲ್ಲಿದೆ. ಅಗಸರ ಪಾವನ ಮೂಕನು ಜಾಜನು ಕೊತ್ತಳಿ ಎಲ್ಲರಂ ಕೊಡಿ ವಿನಾಯಕಂಗಂ ಸೆಡರಣ್ಣಿಗಂ ಸರಿ ಖಂಡಕೆ ಒಕ್ಕಲಲು ಒಂದು ಪಣವ ಕೊಡುವರು. (ಎ.ಕ-೭, ಶಿಕಾರಿ.೧೧, ಕ್ರಿ.ಶ.೧೦೬೩) ಕ್ಷೌರದ ಕೆಲಸವನ್ನು ಮಾಡುವವನು ನಾವಿದ. ಅಗ್ರಹಾರಗಳಲ್ಲಿ ಬ್ರಾಹ್ಮಣರ ಉಗುರುಗಳನ್ನು ತೆಗೆಯಲು ನಾವಿದರನ್ನು ನೇಮಿಸಿಕೊಳ್ಳುತ್ತಿದ್ದರು. (ಎ.ಕ-೭, ಶಿಕಾರಿ.೧೮೫, ಕ್ರಿ.ಶ.೧೧೫೮) ಬಟ್ಟೆಗಳನ್ನು ನೇಯುತ್ತಿದ್ದರು. ನೇಕಾರರು ಅಥವಾ ಜೇಡರು ಎಂಬ ಉಲ್ಲೇಖ ಒಂದು ಶಾಸನದಲ್ಲಿ ತಿಳಿಸುತ್ತದೆ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಬುಟ್ಟಿಗಳನ್ನು ಹೆಣೆಯುತ್ತಿದ್ದ ಮೇದರು ತಮ್ಮ ಒಂದೊಂದು ಕತ್ತಿಗೂ ಐದು ವೀಸಗಳನ್ನು ಅವರು ಗವರತೇಶ್ವರ ದೇವರಿಗೆ ಬಿಟ್ಟಕೊಟ್ಟರೆಂದು ಶಾಸನದಲ್ಲಿ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪).

ಭಾರತೀಯ ಇತಿಹಾಸದಲ್ಲಿ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಅತ್ಯಂತ ಗೌರವದ ಸ್ಥಾನವಿದೆ. ಋಗ್ವೇದದ ಕಾಲದಲ್ಲಿ ಸ್ತ್ರೀಗೆ ಇದ್ದ ಸ್ಥಾನಮಾನ ನಂತರದ ಕಾಲದಲ್ಲಿ ಕಡಿಮೆಯಾಗಿದೆ. ಅರ್ಥೋಹಿ ಕನ್ಯಾ ಪರಕೀಯ ಏವಾ ಹೆಣ್ಣು ಮನೆಬಿಟ್ಟು ಹೋಗುವವಳು ಅಥವಾ ಪರಕೀಯ ಎಂಬ ವಾಡಿಕೆಯು ಇತ್ತು. (ಚಿದಾನಂದ ಮೂರ್ತಿ.ಎಂ.೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು ೪೫೪) ಕ್ರಿ.ಶ.ಆರಂಭದ ಹೊತ್ತಿಗೆ ಸ್ತ್ರೀ ಎನ್ನುವವಳು ವೇದಾಧ್ಯಯನಕ್ಕೆ ಮತ್ತು ಉಪನಯನಕ್ಕೆ ಅನರ್ಹಳಾಗಿ ಸಂಸಾರದಲ್ಲಿ ಒಂದು ಅಲಂಕಾರವಾಗಿ ಬಹುಮಟ್ಟಿಗೆ ಸ್ವಾತಂತ್ರ್ಯವನ್ನು ವ್ಯಕ್ತಿತ್ವವನ್ನು ಕಳೆದುಕೊಂಡ ವ್ಯಕ್ತಿಯಾಗಿ ಪರಿಣಮಿಸಿದ್ದಳು. ಸಾಮಾಜಿಕ ರಂಗಗಳಲ್ಲಿ ಮಹಿಳೆ ತಾಯಿ, ಸಹೋದರಿ, ಪತ್ನಿ ಹಾಗೂ ಮಗಳಾಗಿ ಕಾರ್ಯ ನಿರ್ವಹಿಸಿದ್ದಾಳು. ಇಂಥಹ ಅಂಶಗಳನ್ನು, ಮೈಗೂಡಿಸಿಕೊಂಡಿದನ್ನು ಶಾಸನಗಳ ಮೂಲಕ ತಿಳಿಯಬಹುದು.

ಬಾಲ್ಯದಲ್ಲಿ ಮಹಿಳೆಗಿಂತ ಪುರುಷರಿಗೆ ಉತ್ತಮ ಗೌರವ ಸ್ಥಾನವಿತ್ತು. ಕೆಲವೊಮ್ಮೆ ಒಳ್ಳೆಯ ಸ್ಥಿತಿಯನ್ನು ಕಾಣಬಹುದು. ಗಂಡನೂ ಕೂಡ ತನ್ನ ಪತ್ನಿಯ ವಿಷಯದಲ್ಲಿ ಅಷ್ಟೆ ಪ್ರಮಾಣಿಕತೆಯನ್ನು ತೋರಿಸಬೇಕೆಂದು ಹೇಳುತ್ತದೆ. (ಎ.ಕ-೭, ಶಿಕಾರಿ.೨೫೭, ಕ್ರಿ.ಶ.೧೦೧೨) ಪತಿ ನಿಷ್ಠೆಯುಳ್ಳ ಮಹಿಳೆಯರನ್ನು ಕನ್ನಡ ಶಾಸನಗಳು ಪತಿವ್ರತೆ, ಪುರುಷವ್ರತೆ ಎಂದು ಕೆರೆದಿದ್ದರು. ರಾಜ್ಯವನ್ನು ತನ್ನ ಕೈಯಲ್ಲಿ ಹಿಡಿದಿದ್ದನ್ನು ಕೆಲವು ಶಾಸನಗಳು ಪ್ರಸ್ತಾಪಿಸುತ್ತವೆ. ಚಾಳುಕ್ಯರ ಚಂದ್ರಾದಿತ್ಯನ ಪ್ರಿಯ ಮಹಿಷಿ ವಿಜಯಮಹಾದೇವಿ ಪತಿಯ ಪರೋಕ್ಷದಲ್ಲಿ ಐದು ವರುಷ ಸ್ವತಂತ್ರ್ಯ ರಾಜ್ಯಭಾರ ಮಾಡಿದ್ದುದ್ದು ಸರ್ವ ವಿದಿತ. (ಎ.ಕ-೭, ಶಿಕಾರಿ.೨೧೯, ಕ್ರಿ.ಶ.೯೧೮) ವ್ಯಾಪಾರದಲ್ಲಿ ಮಹಿಳೆ ಮಹತ್ವವನ್ನು ಪಡೆದುಕೊಂಡಿದ್ದಾಳೆ. ಬಳ್ಳಿಗಾವಿಯ ವ್ಯಾಪಾರಿಗಳಲ್ಲಿ ಪ್ರಚಲಿತ ಇದ್ದ ಪದ್ಧತಿಯನ್ನು ಎರಡು ಶಾಸನಗಳು ಹೀಗೆ ವ್ಯಕ್ತಪಡಿಸಿದೆ. ಮುಮ್ಮುರಿ ದಂಡದ ಹೆಗಲಗವದೆ ಒಣಜಿಗರಲ್ಲಿ ಪಟ್ಟಣದೊಳಗಣ ನಾಡೊಳಗವ, ಪುತ್ರ ಕಥನ ವಪ್ಪಿದು ದೇವರಿಗೆ (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಎಂದು ಶಾಸನದಲ್ಲಿ ಉಲ್ಲೇಖಿಸುತ್ತದೆ.

ವಿದ್ಯಾರ್ಜನೆಗೆ ಹಾಗೂ ಕಲೆಗಳಲ್ಲಿ ತನ್ನದೇ ಚಾಪನ್ನು ಸ್ತ್ರೀ ಮೂಡಿಸಿದ್ದಾಳೆ. ಇದಕ್ಕೆ ಹಲವಾರು ಕಡೆ ಉಲ್ಲೇಖಗಳಿವೆ. ಕರ್ನಾಟಕದ ಪ್ರಥಮ ಅಗ್ರಹಾರ ತಾಳಗುಂದವಾಗಿದ್ದು, ಮಯೂರ ವರ್ಮನೇ ಇದರ ಸ್ಥಾಪಕನೆಂದು ತಿಳಿದುಬರುತ್ತದೆ. ಬ್ರಾಹ್ಮಣ ಕುಟುಂಬಗಳಿಗೆ ದತ್ತಿಯಾಗಿ ನೀಡಿದ ಗ್ರಾಮ ಅಗ್ರಹಾರ ಈ ಕುಟುಂಬಗಳ ಮುಖ್ಯಸ್ಥರನ್ನು ಶಾಸನಗಳು ಮಹಾಜನರು ಎಂದು ಕರೆದಿದೆ. ತಾಳಗುಂದದ ಒಂದು ಶಾಸನ ಇವರು ವೇದ ವೇದಾಂತ ಉಪಾಂಗ ಮೀಮಾಂಸಾದಿ ಶಾಸ್ತ್ರ ಷಟ್ತರ್ಕ ಸ್ಮೃತಿ ಪುರಾಣ ಕಾವ್ಯ ನಾಟಕ ವ್ಯಾಸಾಂಗಗಳಾಗಿದ್ದನ್ನು ತಿಳಿಸುತ್ತದೆ. (ಎ.ಕ-೭, ಶಿಕಾರಿ.೧೭೮, ಕ್ರಿ.ಶ.೧೧೯೨) ಮಹಾಜನರಿಂದ ಒಂದು ಕಡೆಗೆ ವೈದಿಕ ವಿದ್ಯಾಭ್ಯಾಸದ ಘಟಿಕಾಸ್ಥಾನಗಳು

ಬೆಳೆದಂತೆ ಮುಂದೆ ಶೈವ ಲಕುಲೀಶ ಪಾಶುಪತರಿಂದ ಮಠಗಳು ವಿದ್ಯೆಯ ಕೇಂದ್ರಗಳಾಗಿ ಅಸ್ಥಿತ್ವಕ್ಕೆ ಬಂದವು. (ಎ.ಕ-೭, ಶಿಕಾರಿ.೧೦೨, ಕ್ರಿ.ಶ.೧೧೬೨) ಪ್ರಾಚೀನ ಕರ್ನಾಟಕದಲ್ಲಿ ನಡೆಯುತ್ತಿದ್ದ ಪ್ರಾಥಮಿಕ ವಿದ್ಯಾಭ್ಯಾಸದ ಬಗೆಗೆ ಹೆಚ್ಚಿನ ಆಧಾರಗಳಲ್ಲಿ ಮಗುವಿನ ಚೂಡಾ ಕರ್ಮವಾದ ನಂತರ ಅಕ್ಷರಾಭ್ಯಾಸ ಆರಂಭವಾಗಿ ೮ ವರ್ಷಕ್ಕೆ ಓದು ಬರಹ ಸಾಮಾನ್ಯ ಗಣಿತ ನಿಘಂಟು ವ್ಯಾಕರಣವನ್ನು ದೇಶ ಭಾಷೆಯಲ್ಲಿ ಕಲಿಸಲ್ಪಡುತ್ತಿದ್ದವು. ಕೆಲವು ಶಾಸನಗಳಲ್ಲಿ ಬಾಲಶಿಕ್ಷೆಗಳ ಕನ್ನಡಕ್ಷರ ಶಿಕ್ಷೆಯ ಉದಾಹರಣೆಗಳು ಬರುವುದುಂಟು. ಕನ್ನಡಕ್ಷರ ಶಿಕ್ಷೆಯ ಉಪಾಧ್ಯಾಯರಿಗೆ ೫ ಗದ್ಯಾಣ ಸಂಭಾವನೆ ನೀಡಿದೆ. ವಿದ್ಯೆಯ ಜೊತೆಗೆ ಕಲಾವಿದೆಯಾಗಿದ್ದನ್ನು ಕೆಲವು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಚಾಳುಕ್ಯ ಉದಯಾದಿತ್ಯನ ಮಡದಿ ಲಚ್ಚಲಾದೇವಿ ಭುವನ ವಿದ್ಯಾಧರಿ ಸಕಳಕಾಳಾದರಿ ಸಂಗೀತಕ ಪ್ರಸಂಗ ವಿವೇಕ ಚೂಡಾಮಣಿ ಎಂಬ ಬಿರುದನ್ನು ಗಳಿಸಿಕೊಂಡಿದ್ದಾಳೆ. ಕ್ರಿ.ಶ.೧೦೭೦ರ ಶಾಸನವೊಂದು ಇವಳ ನೃತ್ಯದ ಕಲಾ ಕೌಶಲ್ಯವನ್ನು ಪೊಚ್ಚಪೊಸದೇಸೆ ಮಾರ್ಗದೊಲ್ ಅಚ್ಚಿರಿರಸ ಭಾವ ಮಾಜೆ ಬಹುವಿಧಿಗತಿಯೇ.......ಗದೊಳ್, ಗಚ್ಚಾಣಿ ನಿಬ್ಬಾರಣ ಪಾತ್ರ ಮೆನಿಸಿದ ಪಾತ್ರ ಎಂಬುದಾಗಿ ಶಾಸನ ಹೇಳುತ್ತದೆ(ಎ.ಕ-೭, ಶಿಕಾರಿ.೧೯೯, ಕ್ರಿ.ಶ.೧೦೭೦).

ಮಹಿಳೆಯ ಸ್ಥಿತಿಗತಿಗಳ ಬಗ್ಗೆ ತಿಳಿಸುವಾಗ 'ಸೂಳೆ ಸಮಾಜ'ದ ಬಗ್ಗೆ ಶಾಸನ ಈ ರೀತಿ ಉಲ್ಲೇಖಿಸುತ್ತದೆ. ಕಾಳಿದಾಸ ಚಮಂಪಪಂಚಳ ಚೋಳರಿಗಳಂ ಕಿತ್ತಿಕ್ಕಿ ಭಣ್ಣಾರ ಮನಧಿಕ ಗಜೇಂದ್ರಗಳಂ ಪೆಣ್ಣುರವಾಜಿಗಳಂ ತಂದಿತು. ಚಾಳುಕ್ಯ ಚಕ್ರೇಶ್ವರ ತ್ರಿಭುವನ ಮಲ್ಲನಲ್ಲಿ ಮರ್ಯಾದೆ ಪಡೆದೆನೆಂದು ತಿಳಿಸುತ್ತದೆ. (ಎ.ಕ-೭, ಶಿಕಾರಿ.೧೧೪, ಕ್ರಿ.ಶ.೧೦೪೬) ಬಳ್ಳಿಗಾವಿಯಲ್ಲಿ 'ದೇವ ಸೂಳೆ'ಯರಿದ್ದ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೦೧, ಕ್ರಿ.ಶ.೧೧೮೧) ಪಾತ್ರದ ಮಲ್ಲಯ್ಯನ ವಿಷಯ ಬಳ್ಳಿಗಾವಿಯ ಶಾಸನದಲ್ಲಿದ್ದು ಮದ್ದಳೆ ಮಾದಿಗನೊಂದಿಗೆ ಅವಳಿಗೆ ದೇವುತ ವೃತ್ತಿಯಾಗಿ ಎರಡು ಮತ್ತರು ಗದ್ದೆ ೧೦ ಗದ್ಯಾಣ ಹಣ, ಪುರದಲ್ಲಿ ೩ ಮನೆಗಳನ್ನು ಬಿಟ್ಟುಕೊಟ್ಟಿದ್ದರು (ಎ.ಕ-೭, ಶಿಕಾರಿ.೧೦೧, ಕ್ರಿ.ಶ.೧೦೧೦) ಈ ವ್ಯವಹಾರಗಳಲ್ಲಿ ತೆರಿಗೆ ಕೂಡ ಕಂಡುಬರುತ್ತದೆ. ಸಾಮಂತ ಉದಯಾದಿತ್ಯ ಪಿರಿಯರಸಿಯ ಬಿನ್ನಪದ ಮೇರೆಗೆ ಮೂಲಸ್ಥಾನ ರಾಮೇಶ್ವರ ದೇವರಿಗೆ ಎಪ್ಪತ್ತೊಕ್ಕಲು ಮದುವೆಯ ಪಂದರವಣ ಸೂಳೆಯರ ಕನ್ನಡಿವಣ ಬಿಟ್ಟುಕೊಟ್ಟ ಉಲ್ಲೇಖವಿದೆ. ಇದು ದೇವರ ಕಾರ್ಯಗಳಿಗೆ ಬಿಟ್ಟುಕೊಟ್ಟಿದನ್ನು ವ್ಯಕ್ತಪಡಿಸುತ್ತದೆ. (ಎ.ಕ-೭, ಶಿಕಾರಿ.೨೯೬, ಕ್ರಿ.ಶ.೧೦೭೩) ಸುಂದರ ಸ್ತ್ರೀಯರಾದ ಈ ಸೂಳೆಯರಿಗಾಗಿ ಒಳಜಗಳ ಪೆಣ್ಣುಯಲದಂತಹ ಪ್ರಸಂಗಗಳು ಘಟಿಸಿರುವ ಸಾಧ್ಯತೆ ಇದೆ. ಉದವಟ್ಟೆ ಎಂಬ ಸೂಳೆಯನ್ನು ಕದ್ದೊಯ್ದ ವಿಷಯವು ಶಾಸನದಲ್ಲಿದೆ (ಎ.ಕ-೭, ಶಿಕಾರಿ.೩೦೦, ಕ್ರಿ.ಶ.೧೧೮೦).

ಶಾಸನಗಳಲ್ಲಿ ಕನ್ನಡಿವಣ ದೇವಾಲಯದ ಪರಿಚಾರಕ ವರ್ಗದ ಸೂಳೆಯರಿಗೆ ಅನ್ವಯಿಸುತ್ತದೆ. ಪೊಸವೂರಿನ ಮೂಲಸ್ಥಾನ ರಾಮೇಶ್ವರ ದೇವರ ಗಂಧ, ಧೂಪಕ್ಕೆ ಸೂಳೆಯರಲ್ಲಿಯ ಕಡಿವಣವನ್ನು ಕೊಟ್ಟಿರುವವರು. (ಎ.ಕ-೭, ಶಿಕಾರಿ.೨೯೫, ಕ್ರಿ.ಶ.೧೦೭೩) ದಾರಿಹೋಕರಿಗೆ ನೀರು ಒದಗಿಸುವ ವ್ಯವಸ್ಥೆ ಕೆಲವೆಡೆಗಳಲ್ಲಿ ಬಾಲಕರು ನಿರ್ವಹಿಸುತ್ತಿದ್ದಂತೆ ಶಾಸನಗಳಿಂದ ತಿಳಿದುಬರುತ್ತದೆ. (ಎ.ಕ-೭, ಶಿಕಾರಿ.೧೯೨, ಕ್ರಿ.ಶ.೧೧೦೭) ಅರವಟ್ಟಿಗೆಗಳಂತೆ ಪ್ರಾಚೀನ ಕರ್ನಾಟಕದ ಲೋಕ ಸಂಗ್ರಹ ಕೇಂದ್ರಗಳೆಂದರೆ ಅನ್ನಸತ್ರ ಆಯಾ ಊರಿನ ಶ್ರೀಮಂತರು ನಾಯನ್ನರು ಅಲ್ಲಲ್ಲಿ ಸತ್ರಗಳನ್ನು ಇಟ್ಟು ಹಸಿದು ಬಂದವರಿಗೆ ಅನ್ನ, ಬಳಲಿ ಬಂದವರಿಗೆ ಆಶ್ರಯ, ಬಾಯಾರಿ ಬಂದವರಿಗೆ ನೀರನ್ನು ನೀಡಿ ತೃಪ್ತಿ ಪಡಿಸುತ್ತದ್ದುಂಟು ಇವುಗಳಲ್ಲಿ ಮಹಿಳೆಯರು ಸೇವೆ ಸಲ್ಲಿಸುತ್ತಿದ್ದರು. (ಎ.ಕ-೭, ಶಿಕಾರಿ.೧೮೫, ಕ್ರಿ.ಶ.೧೧೫೮) ಸತ್ರಗಳಲ್ಲಿ ಅಡಿಗೆ ಮಾಡುವ ಹೆಂಗಸರ ಜೀವನ ನಿರ್ವಹಣೆಗೆ ಬಟ್ಟೆ ಬರೆಗಳಿಗೆ ಗದ್ಯಾಣಗಳನ್ನು ಬಿಟ್ಟ ವಿಷಯ ತಾಳಗುಂದ ಶಾಸನದಲ್ಲಿದೆ. ಸರ್ವರಿಗೂ ಅತ್ಯಾವಶ್ಯಕವಾದ ಅಗ್ನಿ ಪ್ರಾಚೀನ ಕಾಲದಲ್ಲಿಯೇ ಒಂದು ವಿಶಿಷ್ಠ ಸ್ಥಳದಲ್ಲಿ ಇರಿಸಲ್ಪಟ್ಟಿದ್ದು. ಬೇಕಾದವರು ದಿನಾಲು ಅದನ್ನು ಕೊಂಡೊಯ್ಯುತ್ತಿದ್ದರು. ದೇವಾಲಯ ಮಠ ಅಥವಾ ಧಾರ್ಮಿಕ ವ್ಯಕ್ತಿಗಳು ಅಗ್ನಿಯ ರಕ್ಷಕರಾಗಿದ್ದರು. ಹಿರೇಜಂಬೂರು ಶಾಸನದಲ್ಲಿ ಅಗ್ಗಿಷ್ಠತೆಯ ಧರ್ಮಕ್ಕೆ ಬಿಟ್ಟ ದತ್ತಿಯ ವಿಷಯವಲ್ಲದೆ ಅಗ್ಗಿಷ್ಠಣೆಯಮಂ, ಮಠಮುಮಂ ರಕ್ಷಿಸಿದ ಅನ್ಯ ಪುಣ್ಯ ಬರುತ್ತದೆ. (ಎ.ಕ-೭, ಶಿಕಾರಿ.೭೪, ಕ್ರಿ.ಶ.೧೦೧೦) ಇಷ್ಟೆಲ್ಲಾ ಸಮಾಜದೊಂದಿಗೆ ಸೇರಿಕೊಂಡು ಬಾಳಿದ ಮಹಿಳೆ ರಾಜಕೀಯದಲ್ಲಿ ಆಡಳಿತದ ಚುಕ್ಕಾಣೆ ಹಿಡಿದ ಉಲ್ಲೇಖವಿದೆ. ಹಂಪಾಭಟ್ಟನ ಕುಲವಧುನಾಗಿಯಕ್ಕ ಪೆಣ್ದತಿಗೂಂಟು ದುಷ್ಟರಂ ಕಿಡಿಸುವ ಶಿಷ್ಟರಂ ಪೊರೆವ ಅನುಗ್ರಹ ಎಂಬುದನ್ನು ಲೋಕಕ್ಕೆ ಸಾರಿ ನಾಡ ಪೆರ್ಗಡೆತನ ನಿರ್ವಹಿಸಿದ ಅದ್ವಿತೀಯ ಮಹಿಳೆ (ಎ.ಕ-೭, ಶಿಕಾರಿ.೧೦೯, ಕ್ರಿ.ಶ.೧೦೬೭).

ಧಾರ್ಮಿಕವಾಗಿ ಪ್ರಭಾವಿಯಾಗಿ ಮುನ್ನುಗ್ಗಿದ ಮಹಿಳೆಯರನ್ನು ಬೌದ್ಧ, ಜೈನ, ಶೈವ, ವೈದಿಕ ಧರ್ಮಗಳ ಆಚಾರ ವಿಚಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಬಳ್ಳಿಗಾವಿಯ ಶಾಸನದಲ್ಲಿ ಉಲ್ಲೇಖಿತವಾದ ಪುಲ್ಲೆಯ ಬಯಲ್ ಬೌದ್ಧರಿಗೆ ಪ್ರಿಯವಾದ ಮೃಗದಾವವಿರ ಬೇಕೆಂದು ಶ್ರೀಹಯವದನರಾಯರ ಊಹೆ (ಎ.ಕ-೭, ಶಿಕಾರಿ.೧೨೦, ಕ್ರಿ.ಶ.೧೦೪೮) ಇನ್ನೊಂದು ಶಾಸನಲ್ಲಿದೆ. ಅಹವಮಲ್ಲನ ಸಹವಾಸಿ ಹಂಪಾಭಟ್ಟನ ಕುಲವಧು ಬಾಪ್ಪುರ ನಾಗಿಯಕ್ಕ ಬಳ್ಳಿಗಾವಿಯಲ್ಲಿ ತಾರಾಭಗವತಿ ವಿಗ್ರಹವನ್ನು ನಿರ್ಮಿಸಿ ದೇವತಾರ್ಚನೆಗೆ ಪ್ರಭುದ್ಧ ಭಟ್ಟಾರಕ ಕಾಲನ್ನು ತೊಳೆದು ಅಹವಾಮಲ್ಲನ ಒಪ್ಪಿಗೆಯ ಮೇರೆಗೆ ಭೂದಾನ ಮಾಡಿದಳೆಂದು ಹೇಳಲಾಗಿದೆ. (ಎ.ಕ-೭, ಶಿಕಾರಿ.೧೬೯, ಕ್ರಿ.ಶ.೧೦೬೭) ಹತ್ತಾರು ವಿಶೇಷಗಳಿಂದ ಕೀರ್ತಿವೆತ್ತ ನಾಗಿಯಕ್ಕ ಬೌದ್ಧ ಧರ್ಮದ ಕೇಂದ್ರಬಿಂದುವಿನಂತೆ ಶೋಭಿಸಿದ್ದಾಳೆ. ಈಕೆ ತನ್ನ ಜೀವನದ ಉತ್ತರಾರ್ಧವನ್ನು ಬೌದ್ಧ

ಧರ್ಮದ ಪ್ರಸಾರಕ್ಕೆ ಮೀಸಲಾಗಿಟ್ಟಂತೆ ಬಳ್ಳಿಗಾವಿಯ ಶಾಸನ ಉಲ್ಲೇಖಿಸುತ್ತದೆ. (ಎ.ಕ-೭, ಶಿಕಾರಿ.೧೭೦, ಕ್ರಿ.ಶ.೧೦೬೫) ಬಳ್ಳಿಗಾವಿಯ ಲೋಕೇಶ್ವರ ಮತ್ತು ಜೋಗೇಶ್ವರ ದೇವರ ಆರ್ಚನೆಗೆ ಲೋಕರಸ ಮತ್ತು ಜೋಗರಸರು ದತ್ತಿ ಕೊಡುವಾಗ ಶಾಲೆಯ ಪರ್ಷಿಯ ಬೌದ್ಧಾಲಯದ ಸಾವಸಿ ನಾಗಿಯಕ್ಕನು ಉಲ್ಲೇಖಿತವಾದುದ್ದು ಮಹತ್ತರ ಸಂಗತಿಯಾಗಿದೆ. (ಎ.ಕ-೭, ಶಿಕಾರಿ.೧೦೬, ಕ್ರಿ.ಶ.೧೯೮)ಹೀಗಾಗಿ ನಾಗಿಯಕ್ಕ ನೇರವಾಗಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಉನ್ನತ ವರ್ಗದ ಏಕೈಕ ಬೌದ್ಧ ಮಹಿಳೆಯಾಗಿದ್ದಾಳೆ. ಇವಳಂತೆ ಚುಟುಕುಲದ ಶಿವಸ್ಕಂದ ನಾಗಸಿರಿಯಾಗಲೀ, ಚಾಳುಕ್ಯ ಅಕ್ಕದೇವಿಯಾಗಲೀ, ಲಕ್ಷ್ಮದೇವಿಯಾಗಲೀ, ಶಾಂತದೇವಿಯಾಗಲೀ ಬೌದ್ಧ ಧರ್ಮದ ನೆರವಿಗೆ ನಿಂತ ರಾಜ ಪರಿವಾರದ ಮಹಿಳೆಯರು. (ಎ.ಕ-೭, ಶಿಕಾರಿ.೧೭೦, ಕ್ರಿ.ಶ.೧೦೬೫) ಬೌದ್ಧ ಧರ್ಮದಲ್ಲಿ ಪ್ರಸಿದ್ಧವಾದಂತೆ ಜೈನ ಧರ್ಮದಲ್ಲೂ ಮಹಿಳೆಯ ಪಾತ್ರ ಶ್ಲಾಘನೀಯವಾಗಿದೆ. ಸೋವಲದೇವಿ ಎಂಬುವಳು ಅತ್ತಿಮಬ್ಬೆಯೆಂದು ಪ್ರಸಿದ್ಧಿ ಪಡೆದಿರುವುದು ಶಾಸನಗಳಿಂದ ತಿಳಿದುಬರುತ್ತದೆ. (ಎ.ಕ-೭, ಶಿಕಾರಿ.೨೩೨, ಕ್ರಿ.ಶ.೧೨೦೦)

ಮಯೂರ ವರ್ಮನು ಅಹಿಚ್ಚತ್ರದಿಂದ ಬ್ರಾಹ್ಮಣರನ್ನು ಕರೆತಂದು ತಾಳಗುಂದವನ್ನು ಅಗ್ರಹಾರವನ್ನಾಗಿಸಿದನೆಂದು ತಿಳಿದುಬರುತ್ತದೆ. ಹೀಗಾಗಿ ತಾಳಗುಂದ ಕರ್ನಾಟಕದ ಪ್ರಥಮ ಅಗ್ರಹಾರವೆಂದು ಆ ಮೇಲೆ ಇಲ್ಲಿ ವೈದಿಕ ಧರ್ಮ ಬಹುಮುಖವಾಗಿ ಬೆಳೆದು ಬಂದಿತೆಂದೂ ಹೇಳಬಹುದು. (ಎ.ಕ-೭, ಶಿಕಾರಿ.೧೭೮, ಕ್ರಿ.ಶ.೧೯೨) ರಾಮಾನುಜಾಚಾರ್ಯರ ಆಗಮನದ ತರುವಾಯ ಕರ್ನಾಟಕದಲ್ಲಿ ವಿಷ್ಣುವನ್ನು ಕೇಶವ ಎಂಬ ಹೆಸರಿನಿಂದ ಪೂಜಿಸುವ ಪ್ರವೃತ್ತಿ ವರ್ಧಿಸಿತೊಡಗಿತು. ಈಗ ಉನ್ನತ ವರ್ಗದ ಮಹಿಳೆಯರು ಅದರಲ್ಲೂ ಮಂಡಲೇಶ್ವರ ದಂಡನಾಯಕರ ಮಡದಿಯರು ಕೇಶವ ದೇವಸ್ಥಾನ ನಿರ್ಮಾಣದತ್ತ ತಮ್ಮ ಮನಸ್ಸನ್ನು ವಿಶೇಷವಾಗಿ ಕೇಂದ್ರಿಕರಿಸಿವರು. ಕೇಶವ ದಂಡನಾಯಕನ ಮಡದಿಯಾದ ಲಕ್ಷ್ಮಿದೇವಿ ಸಿರಿದೇವಿಯರೊಂದಿಗೆ ಕೇಶವಪುರದಲ್ಲಿ ವೀರ ಕೇಶವನನ್ನು ಪ್ರತಿಷ್ಠಾಪಿಸಿ ದತ್ತಿ ಕೊಟ್ಟರು (ಎ.ಕ-೭, ಶಿಕಾರಿ.೧೨೩, ಕ್ರಿ.ಶ.೧೧೫೯).

ಶೈವಧರ್ಮ ಕುರಿತಾಗಿ ಹೇಳುವಾಗ ಚಾಲುಕ್ಯರ ಆರನೇಯ ವಿಕ್ರಮಾದಿತ್ಯನ ದಂಡಾಧಿಪತಿ ಸರ್ವದೇವ ತನ್ನ ಸತೀರತ್ನ ಸಲ್ಲಿಕಬ್ಬೆಯೊಂದಿಗೆ ಬಳ್ಳಿಗಾವಿಯ ಸರ್ವೇಶ್ವರಾ ವಾಸಕ್ಕೆ ಇಲ್ಲಿ ವಿಮಾನಂ ನಿನ್ನು ದೆಂಬತಿರಿಬ್ಬ ಮಾಗೊಷ್ಟಗೆ ಕಳಸಂ ರೋಹಣ ಮಾಡಿಸಿರುವರು. (ಎ.ಕ-೭, ಶಿಕಾರಿ.೧೪೪, ಕ್ರಿ.ಶ.೧೯೬) ಮಟ್ಟಿಕೋಟೆಯ ಇನ್ನೊಂದು ಶಾಸನದಲ್ಲಿ ಮಲ್ಲಿಕಾರ್ಜುನ ದೇವರ ದಾಸಿ ಎನಿಸಿದ ಜಕ್ಕಿಸೆಟ್ಟಿ ಮತ್ತು ಆತನ ಹೆಂಡತಿ ಚಚ್ಚಲೆಯರು ಮೂಲಸ್ಥಾನ ರಾಮೇಶ್ವರ ದೇವರ ನೈವೇದ್ಯ ನೈಷ್ಠಿಕ ತಪೋಧನರ ಆಹಾರದಾನಕ್ಕೆ ಭೂಮಿ ಬಿಟ್ಟಿದ್ದರು. (ಎ.ಕ-೭, ಶಿಕಾರಿ.೨೯೬, ಕ್ರಿ.ಶ.೧೦೬೫) ಪೆಂಡಿರವೊಲ್ ಎಂಬುದು ಕುರುಳ ಬೆರಳ ಸಮರ್ಪಣೆ ಸ್ತ್ರೀಯರಲ್ಲಿ ವಿಶೇಷವಾಗಿತ್ತು.

(ಎ.ಕ-೭, ಶಿಕಾರಿ.೨೩೬, ಕ್ರಿ.ಶ.೧೭೪) ಕೌಟಂಬಿಕ ದಾನ ಧರ್ಮಗಳಲ್ಲಿ ಸಿಂಹಪಾಲು ಮಹಿಳೆಯರದ್ದು.ಇದಕ್ಕೆ ಕಾರಣ ನಮ್ಮ ಕುಟುಂಬದ ಪ್ರಧಾನ ಜೀವನ ವ್ಯವಸ್ಥೆಯೇ ಪತಿಯೇ ದೇವರು ಎಂದುಕೊಂಡು ಪತಿಯ ದಾನ ಧರ್ಮ ತನ್ನ ದಾನ ಧರ್ಮವೆಂದು ಬಗೆದು ಸತಿಯು ಅವನ ಕ್ರಿಯೆಯಲ್ಲಿ ಪಾಲುದಾರರಾಗಿರುತ್ತಾಳೆ.

ಮನುಷ್ಯನ ಮನಸ್ಥಿತಿಗಳಲ್ಲಿ ಬೇರೂರಿದ ಭಾವನೆಗಳಲ್ಲಿ ದಾನ ಧರ್ಮವೂ ಒಂದಾಗಿದೆ. ಧರ್ಮದ ರಕ್ಷಣೆಯಲ್ಲಿ ಹಲವಾರು ಮಹಾನ್ ಕಾರ್ಯಗಳನ್ನು ಜನರು ಧರ್ಮದ ಪ್ರತಿನಿಧಿಗಳಾಗಿ ಜನಸೇವೆ ಭಾಗ್ಯವನ್ನು ನಿರ್ವಹಿಸುತ್ತಿದ್ದಾರೆ. "ಧರ್ಮೋ ರಕ್ಷತಿ ರಕ್ಷಿತಃ" ಎಂಬ ಭಾವನೆಯಿಂದ ಧರ್ಮ ಕಾರ್ಯಗಳನ್ನು ಮಾಡುವುದು ಸಾಮಾಜದ ಒಳಿತಿಗಾಗಿ ಅಥವಾ ಪುಣ್ಯ ಸಂಪಾದನೆಗಾಗಿ, ದಾನ ಮಾಡುವುದು, ಧರ್ಮಮಾಡುವುದು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಜೀವನವು ಕ್ಷಣಿಕವಾಗಿದ್ದು ದಿನ ದಿನವೂ ಆಯಸ್ಸು ಕ್ಷೀಣಿಸುತ್ತಾ ಹೋಗುತ್ತದೆ. ಹೀಗಿರುವಾಗ ಮನುಷ್ಯನು ಧರ್ಮವನ್ನು ಅವಲಂಬಿಸಿ ಸದ್ಗತಿಯನ್ನು ಸಂಪಾದಿಸಿಕೊಳ್ಳಬೇಕು. ಪುಣ್ಯಾರ್ಜನೆಗಾಗಿ ರಾಜರು, ಶ್ರೀಮಂತರು, ಉದಾರವಾಗಿ ದತ್ತಿಗಳನ್ನು ಬಿಟ್ಟುಕೊಟ್ಟಿದ್ದಾರೆ. ಕಲಿಯುಗವು ಬಹು ಕೆಟ್ಟದ್ದು ನಿಜವಾದ ಬಂಧುಗಳು ಈ ಕಾಲದಲ್ಲಿ ಸಿಗುವುದು ದುರ್ಲಭ ಆದ್ದರಿಂದ ಧರ್ಮವೊಂದೇ ನಿಜವಾದ ಬಂಧು(ನಾಸ್ತಿ ಧರ್ಮಸ್ಯ ಸರ್ವೋ ಬಂಧುಃ) (ಎ.ಕ-೭, ಶಿಕಾರಿ.೧೩೧, ಕ್ರಿ.ಶ.೧೧೦೪) ಉದಾರಿಗಳು ದಾನವನ್ನು ಮಾಡಿ ಔದಾರ್ಯವನ್ನು ಪ್ರಕಟಿಸುವಾಗ ಕಾಳಂಕೃತಯುಗ ಮುಮಾಯ್ತು ಎಂಬ ಉದ್ಗಾರವನ್ನು ಕೆಲವೆಡೆ ತೆಗೆದುಕೊಂಡಿರುವುದುಂಟು (ಎ.ಕ-೭, ಶಿಕಾರಿ.೧೩೬, ಕ್ರಿ.ಶ.೧೦೬೮).

ಅಗ್ನಿಷ್ಟಿಗೆ :

ಒಂದೊಂದು ಊರಿನಲ್ಲೂ ಮಠ ದೇವಸ್ಥಾನಗಳಂತಹ ಸ್ಥಳಗಳಲ್ಲಿ ಶ್ರದ್ಧಾವಂತ ವೈದಿಕರ ಮನೆಗಳಲ್ಲಿ ಬೆಂಕಿ ಆರದೆ ಸದಾ ಜೀವಂತವಾಗಿರುವಂತೆ ನೋಡಿಕೊಳ್ಳಲು ಜನರು ದತ್ತಿಯನ್ನು ಬಿಟ್ಟುಕೊಡುತ್ತಿದ್ದರು. ಅಂಥಹ ಸ್ಥಳಗಳಿಂದ ಪ್ರತಿದಿನವೂ ಬೆಂಕಿಯು ಮನೆಯಿಂದ ಮನೆಗೆ ಹೋಗುತ್ತಿತ್ತು. ಊರಿನಲ್ಲಿ ಒಂದೆಡೆ ಅಗ್ನಿಯನ್ನು ಆರದಂತೆ ನೋಡಿಕೊಳ್ಳುತ್ತಿದ್ದರೆಂಬುದಕ್ಕೆ ಶಾಸನಾಧಾರಗಳಿವೆ. ಕ್ರಿ.ಶ.೧೦೧೦ರ ಶಾಸನದಲ್ಲಿ ಅಗ್ನಿಷ್ಟಿಗೆಯು ಸಾರ್ವತ್ರಿಕ ಸ್ವತ್ತು ಎಂಬ ಭಾವನೆಯು ಬರುತ್ತದೆ. (ಎ.ಕ-೭, ಶಿಕಾರಿ.೭೪, ಕ್ರಿ.ಶ.೧೦೧೦) ಕೊಟ್ಟ ಗದ್ಯಾಣಕ್ಕೆ ಬರುವ ಬಡ್ಡಿಯಲ್ಲಿ ಅಗ್ನಿಷ್ಟಿಗೆಯನ್ನು ನಡೆಸಬೇಕೆಂದು ಹೇಳಿದೆ. (ಎ.ಕ-೭, ಶಿಕಾರಿ.೧೬೪, ಕ್ರಿ.ಶ.೧೧೪೯) ದೇವಾಲಯದ ಜೊತೆಗಿದ್ದ ಮಠಗಳು ಸಾಮಾಜಿಕವಾಗಿ ಸಲ್ಲಿಸಿರುವ ಮತ್ತೊಂದು ಬಹುಮುಖ್ಯ ಸೇವೆ ಅಗ್ನಿಷ್ಟಗೆಗಳ ರಕ್ಷಣೆ, ಅಗ್ನಿಷ್ಟಿಗೆ ಧರ್ಮವೆಂದು ಪ್ರತ್ಯೇಕವಾಗಿ ದಾನ ನೀಡಿರುವುದಲ್ಲದೇ ಅವುಗಳನ್ನು ರಕ್ಷಿಸಲು ವಿಶೇಷ ವ್ಯವಸ್ಥೆಯನ್ನು ಮಾಡಲಾಗಿತ್ತು ಎಂದು ಹಿರೇಜಂಬೂರ ಶಾಸನವು ತಿಳಿಸುತ್ತದೆ.

ಅಗ್ನಿಷ್ಟಿಗೆಯ ಧರ್ಮಕ್ಕೆನ್ನು ಬಿಟ್ಟು ಕಾಲ್ದಲೆಯ ಕೆಯಿಕಮ್ಮ ಮೂವತ್ತು.......ಅಗ್ನಿಷ್ಟಿಗೆಯಂ ರಕ್ಷಿಸಿ ದಗ್ಗೆರ ಅನನ್ತಪುಣ್ಯ.......ಅಗ್ನಿಯೇ ನಮಃ ಹೀಗೆ ಶಾಸನ ಉಲ್ಲೇಖಿಸಿದೆ. (ಎ.ಕ-೭, ಶಿಕಾರಿ.೭೪, ಕ್ರಿ.ಶ.೧೦೧೦) ಪಂಚವಿಂಶತಿ ನಾರಾಯಣ ದೇವರ ಬ್ರಾಹ್ಮಪುರಿಗಳ ಕಯ್ಯಲಗ್ನಿಷ್ಟಗೆಗೆ ಕೊಟ್ಟ ಗದ್ಯ ೧ರ ವಿಧಿಯಲ್ಪಹಾಜಿನಂಗಳ ಚಂದ್ರಾರ್ಕ್ಕ ನಡೆಸುವುದು ಎಂದು ತಿಳಿಸುವ ಬಳ್ಳಿಗಾವಿಯ ಒಂದು ಶಾಸನವು ಮುಂದು ವರೆದು ಹಲವರು ನೀಡಿದ ಹಣದ ವೃದ್ಧಿಯಲ್ಲಿ ಅಗ್ನಿಷ್ಟಿಗೆಯನ್ನು ನಡೆಸುವ ಉಲ್ಲೇಖವಿದೆ. (ಎ.ಕ-೭, ಶಿಕಾರಿ.೧೬೪, ಕ್ರಿ.ಶ.೧೧೪೯)

ಅರವಟ್ಟಿಗೆ:

ಅಗ್ನಿಷ್ಟಿಗೆಯಂತೆ ಅರವಟ್ಟಿಗೆಗಳು ಸಮಾಜದ ಸೇವೆಗೆಂದೇ ನಿಂತಿದ್ದವು. ಅರವಟ್ಟಿಗೆಯ ಎಂಬಲಿಗ(೦)ನಿವಷಿವಮಾಣಿಗಂ ದಾನಗಳನ್ನು ಕೊಡಲಾಗಿದೆ. ಇಲ್ಲಿ ಅರವಟ್ಟಿಗೆ ಮತ್ತು ಸತ್ರಗಳು ಒಟ್ಟಿಗೆ ಇದ್ದವು ಎಂಬುದನ್ನು ತಿಳಿಸುತ್ತದೆ. ತಾಳಗುಂದ ಒಂದು ಶಾಸನವು ಕೆರೆಯ ನಗಳಿಸಿ ನೀರು ಪಡೆದು ದೇಗುಲವಂ ಮಾಡಿ ಅರವಟ್ಟಿಗೆಯ ಲಂಬಲಿಗಂ ನೀರೆರಿವ ಮಾಣಿಗಂ ಕೆರೆಗೆ ಪಡಿಸಲಸುವದರ್ಕೆ ಭೂಮಿ ದಾನ ಮಾಡಿದ್ದನ್ನು ದಾಖಲಿಸಿದೆ. ಇದರಿಂದ ಅರೆವಟ್ಟಿಗೆಗಳಲ್ಲಿ ನೀರು ಮತ್ತು ಅಂಬಲಿಗಳನ್ನು ನೀಡಲಾಗುತ್ತಿತ್ತು ಎಂದು ತಿಳಿಸುತ್ತದೆ ಹಾಗೂ ಅರವಟ್ಟಿಗೆಗಳಲ್ಲಿ ದಾರಿಕಾರರಿಗೆ ನೀರು ಒದಗಿಸುವ ವ್ಯವಸ್ಥೆ ಕೆಲವಡೆಗಳಲ್ಲಿ ಬಾಲಕರು ನಿರ್ವಹಿಸುತ್ತಿದ್ದಂತೆ ಶಾಸನಗಳಿಂದ ತಿಳಿದುಬರುತ್ತದೆ. (ಎ.ಕ-೭, ಶಿಕಾರಿ.೧೯೨, ಕ್ರಿ.ಶ.೧೧೦೭)

ಸತ್ರಗಳು:

ಪ್ರವಾಸಿಗರಿಗೆ ಅರವಟ್ಟಿಗೆಗಳಲ್ಲಿ ನೀರು ಸಿಕ್ಕರೆ ಸತ್ರಗಳಲ್ಲಿ ಆಹಾರವೂ ವಿಶ್ರಾಂತಿ ತೆಗದುಕೊಳ್ಳಲು ವಸತಿಯೂ ದೊರೆಯುತ್ತಿತ್ತು. ಸತ್ರಗಳಿಲ್ಲದೆ ಊರಿನ ಉದಾರಿಗಳು ಪ್ರವಾಸಿಗರನ್ನೂ ಅಥಿತಿಗಳಂತೆ ಗೌರವಿಸಿ ಆದರಿಸಿದ್ದನ್ನು ಕಾಣಬಹುದು. ಪ್ರವಾಸಿಗರ ಸೌಕರ್ಯಕ್ಕಾಗಿ ಶ್ರೀಮಂತರು ಅನ್ನ ಛತ್ರಗಳನ್ನು ನಡೆಸುತ್ತಿದ್ದರು. ಚಾಳುಕ್ಯ ತ್ರಿಭುವನ ಮಲ್ಲನ ಕಾಲದಲ್ಲಿ ಬೇಗೂರು ಅಗ್ರಹಾರ ಒಂದು ಶಾಸನದಲ್ಲಿ ದೇಸಿಗ ಪ್ರವಾಸಿಗರ ಆಹಾರ ದಾನಕ್ಕೆ ಬಿಟ್ಟ ಸತ್ರಂ ಎಂದು ತಿಳಿಸುತ್ತದೆ. (ಎ.ಕ-೭, ಶಿಕಾರಿ.೧೨, ಕ್ರಿ.ಶ.೧೯೯೩) ಸತ್ರಗಳಲ್ಲಿ ಅಡುಗೆ ಮಾಡುವ ಹೆಂಗಸರ ಜೀವನ ನಿರ್ವಹಣೆಗೆ ಬಟ್ಟೆ ಬರೆಗಳಿಗೆ ಗದ್ಯಾಣಗಳನ್ನು ಬಿಟ್ಟ ವಿಷಯ ತಾಳಗುಂದ ಶಾಸನದಲ್ಲಿದೆ (ಎ.ಕ-೭, ಶಿಕಾರಿ.೧೮೫, ಕ್ರಿ.ಶ.೧೧೫೮) ಸತ್ರಗಳು ದೇವಾಲಯಗಳಿಂದ ಬೇರೆಯಾಗಿ ಅವುಗಳಿಗೆ ಮೀಸಲಾಗಿದ್ದ ಮನೆಗಳಲ್ಲಿಯೂ ಇರುತ್ತಿದ್ದುದುಂಟು (ಎ.ಕ-೭, ಶಿಕಾರಿ.೧೬, ಕ್ರಿ.ಶ.೧೦೮೫) ಕೇಶವ ದಂಡನಾಯಕನು ತಾಣಗುಂದೂರಿನಲ್ಲಿ ದತ್ತಿಯನ್ನು ಬಿಟ್ಟುಕೊಟ್ಟ ಸತ್ರವು ಅಲ್ಲಿಯ ದೇವಸ್ಥಾನದ ಅಂಗವಾಗಿದ್ದಿತು. (ಎ.ಕ-೭, ಶಿಕಾರಿ.೧೮೫, ಕ್ರಿ.ಶ.೧೧೫೮) ಸತ್ರಗಳಲ್ಲಿ

ದೇಸಿಗ ಪ್ರವಾಸಿಗರಿಗೆ ಮಾತ್ರವಲ್ಲದೇ ಕೆಲವೆಡೆ ಅಲ್ಲಿಯ ಮಠಗಳಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳಿಗೂ ಊಟದ ಏರ್ಪಾಡು ಇರುತ್ತಿತ್ತು. (ಎ.ಕ-೭, ಶಿಕಾರಿ.೧೪, ಕ್ರಿ.ಶ.೧೦೮೯) ಮಾಣಿಕಸೆಟ್ಟಿ ಎಂಬಾತನು ಕೊಟ್ಟ ಅರವತ್ತುಗೆಳೆಯ ಗದ್ದೆಯ ಭತ್ತದಿಂದ ಐದು ಹಬ್ಬಗಳನ್ನು ಕೂಡಿ ವರ್ಷದಲ್ಲಿ ಒಟ್ಟು ಸಾವಿರ್ಯನ್ನೂರು ಜನರಿಗೆ ಸತ್ರದಲ್ಲಿ ಊಟದ ಅವಕಾಶವಿದ್ದಿತ್ತು. (ಎ.ಕ-೭, ಶಿಕಾರಿ.೨೯೪, ಕ್ರಿ.ಶ.೧೧೦೮)

ಅಪರಾಧಿಯಿಂದ ಮುದ್ರಾಪಣದ ಮೂಲಕವಾಗಿ ದಂಡವನ್ನು ವಸೂಲು ಮಾಡಲಾಗುತ್ತಿತ್ತು. ಮುದ್ರಾಪಣ ಎಂದರೆ ಮುದ್ರೆಯೊತ್ತಿದ ನಾಣ್ಯ, ಅಚ್ಚೊತ್ತಿದ ನಾಣ್ಯ. ಇಂತಹ ಶಿಕ್ಷೆಗಳಿಗೆ ಇಷ್ಟಿಷ್ಟೆ ದಂಡ ಎಂದು ಗೊತ್ತು ಮಾಡಲಾಗುತ್ತಿತ್ತು ಎಂದು ಭಾವಿಸಿದರೆ ದಂಡದ ಹಣವನ್ನು ಆಯಾ ಮೌಲ್ಯದ ನಾಣ್ಯಗಳ ಮೂಲಕವಾಗಿ ನೀಡಬೇಕಾಗಿತ್ತು. ಅಂಥಹ ನಿರ್ದಿಷ್ಟ ಮೌಲ್ಯದ ಅಚ್ಚೊತ್ತಿದ ನಾಣ್ಯಗಳೇ ಮುದ್ರಾಪಣವನ್ನು ವಸೂಲು ಮಾಡಲೆಂದು ಪ್ರತ್ಯೇಕ ಅಧಿಕಾರಿಗಳಿದ್ದರು. ಅವರೇ ಮುದ್ರಾಪಣವನ್ನು ಪೆರ್ಗಡೆಯೆಂದು ತಿಳಿಸುತ್ತದೆ. (ಎ.ಕ-೭, ಶಿಕಾರಿ.೨೯೩, ಕ್ರಿ.ಶ.೧೦೮೦)

ಆರ್ಥಿಕ ವ್ಯವಸ್ಥೆ:

ಪ್ರಾಚೀನ ಮಾನವ ತನ್ನ ಮೂಲ ಸ್ವರೂಪ ಬದಲಾಯಿಸಿ ಕೃಷಿ ಕೈಗಾರಿಕೆಗಳ ಕಡೆಗೆ ನಡೆಯುವ, ವಿನಿಮಯ, ವ್ಯಾಪಾರ, ಸಂಪರ್ಕ ಎಂಬೆಲ್ಲಾ ಹಂತಗಳನ್ನು ತನ್ನ ಜೀವನದಲ್ಲಿ ರೂಢಿಸಿಕೊಂಡು ಬಂದನು. ಇಂಥಹ ಆರ್ಥಿಕತೆ ನಿತ್ಯಕಥೆಗಳನ್ನು ಅರೆಯಲು ಶಾಸನಗಳು ಅಧ್ಯಯನಕ್ಕೆ ನೆರವಾಗುತ್ತವೆ. ಶಾಸನಗಳನ್ನು ಆರ್ಥಿಕ ದೃಷ್ಟಿಕೋನದಲ್ಲಿ ಅಧ್ಯಯನಕ್ಕೆ ಒಳಪಡಿಸಬೇಕು. ಈ ಅಧ್ಯಯನದಲ್ಲಿ ಆರ್ಥಿಕ ಬದುಕನ್ನು ಚಿತ್ರಿಸುವಲ್ಲಿ ಸ್ಥೂಲ ಚಿತ್ರದಿಂದಲೇ ಶಿಕಾರಿಪುರ ಕ್ಷೇತ್ರಕ್ಕೆ ಮೀಸಲಿಡಲಾಗಿದೆ. ಆರ್ಥಿಕ ಜೀವನ ಚಿತ್ರಿಸುವಾಗ ಅವರ ಕೃಷಿ, ಉತ್ಪಾದನೆ, ವ್ಯಾಪಾರ ಆಯ-ವ್ಯಯ ಇತ್ಯಾದಿ ಅಂಶಗಳ ಕಡೆಗೆ ಗಮನ ಹರಿಸಲಾಗಿದೆ. ಇವತ್ತಿನ ಕಾಲದಲ್ಲಿ ಇದ್ದ ಆರ್ಥಿಕತೆ ಆ ದಿನಗಳಲ್ಲಿ ಕಾಣಲು ಸಾಧ್ಯತೆಗಳು ಹೆಚ್ಚಾಗಿವೆ. ಅಂದರೆ ಕೃಷಿಯಲ್ಲಿ ಉದಾಹರಣೆಗೆ ಭತ್ತಕ್ಕೆ ಹೆಚ್ಚಿನ ಪ್ರಾಶಸ್ತ್ಯ ಇವತ್ತೂ/ಅವತ್ತೂ ನೀಡಿದನ್ನು ಕಾಣಬಹುದು. ಭೂಮಿಯ ಮಕ್ಕಳು ಭೂಮಿಯನ್ನು ಉತ್ತಿ ಬಿತ್ತಿ ಬೆಳೆಯುತ್ತಿದ್ದರು. ನಾಗರಖಂಡ-೭೦ ಮತ್ತು ಜೇಡುಗೂರು-೭೦ ರ ಪ್ರದೇಶಗಳಲ್ಲಿ ದಾನದಲ್ಲಿ ಕೆಡಿಸಿದವನಿಗೆ ಒದಗಬಹುದಾದ ಮಹಾಪಾತಕಗಳಲ್ಲಿ ಅವನ ಭೂಮಿಯು ಬೆಳಯದಿರುವುದು ಒಂದು 'ಇದನ್ ಕೊಳೆ ಈರೆವ್ವತ್ತರಳುಂ' ಒಕ್ಕಲ್ತನಂ ಕೆಯ್ವೊನಾ ವಿತ್ತದಲ್ಲಿ ವೇಳೆಯಾದ ಕೆಡುಗೆ. ಇದನ್ ಕಾದು ಸೊಲ್ವೊನ್ ಪರಮ ಕಲ್ಯಾಣ ತೀರ್ಥಂಗಳ ಅಪ್ಪರ್ ನೆಲನುಂ ವೆಳೆಗೆ ಎಂಬುದಾಗಿ ಹೇಳಿ ರೈತನು ಬೆಳೆದರೆ ಲೋಕವು ಬದುಕುತ್ತದೆ. ಎಂಬ ಮಾತುಗಳು ಮೂಡುತ್ತವೆ. ಸಾಗುವಳಿ ಭೂಮಿಯನ್ನು ದೇವಮಾತೃಕ ಹಾಗೂ ನದಿ ಮಾತೃಕ ಎಂಬೆಲ್ಲಾ ರೀತಿ ಕಾಣುತ್ತಿದ್ದರು.

ಕೃಷಿ:

ಶಾಸನಗಳ ಹಿನ್ನೆಲೆಯಲ್ಲಿ ಕೃಷಿಕರ ಬಗ್ಗೆ ಹುಡುಕುವಾಗ ಬಂದಳಿಕೆ ನಾಗರಖಂಡದ ರಾಜಧಾನಿಯಲ್ಲಿ ಹೊಂಗೆ, ತಾಳೆ, ಮಾವು ಮೊದಲಾದ ಮರಗಳಿಂದ ಕೋಗಿಲೆ, ಗಿಳಿ, ದುಂಬಿಗಳಿಂದ, ಭತ್ತದ ಗದ್ದೆಗಳು ನೀರಾವರಿ ಬಾಳೆ, ತೆಂಗು, ಕಬ್ಬುಗಳನ್ನು ಬೆಳಯುತ್ತಿದ್ದವು. ಒಂದು ನಾಡಿನ ಸಮೃದ್ಧಿ ಅಲ್ಲಿನ ಭೂಮಿ, ನೀರು, ಬೇಸಾಯ ಹಾಗೂ ಶ್ರಮದ ಮೇಲೆ ಅವಲಂಭಿಸಿದೆ. ಶಿಕಾರಿಪುರ ತಾಲ್ಲೂಕಿನ ಈ ಪ್ರದೇಶದ ಭೂಮಿ ಫಲವತ್ತತೆಯಾಗಿದ್ದು ಇಲ್ಲಿ ಅತೀ ಹೆಚ್ಚು ಕೆರೆಗಳು ಇಂದಿಗೂ ಕಾಣ ಸಿಗುತ್ತಿವೆ. ಈ ಕೃಷಿಯ ಬಲದ ಮೇಲೆಯೇ ವ್ಯಾಪಾರ ಹಾಗೂ ರಾಜಕೀಯ ನಿಂತಿದೆ.

ನೀರಾವರಿ– ಕೆರೆಗಳು :

ಕೃಷಿಗೆ ಬೇಕಾದ ನೀರಿಗಾಗಿ ವ್ಯವಸ್ಥೆ ಕೂಡಾ ಸೂಕ್ತವಾಗಿದೆ. ಇದನ್ನು ನೆನೆಯುವಾಗ ವರದಾ ನದಿಯ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ. (ಎ.ಕ–೭, ಶಿಕಾರಿ.೧೧೭, ಕ್ರಿ.ಶ.೧೧೧೮). ಹೀಗಾಗಿ ವರದಾ ನದಿಯು ನೀರಾವರಿಯ ಅನುಕೂಲತೆ ನೀಡಿತ್ತು. ಕೆಲವು ಕೆರೆಗಳೂ ಕೂಡಾ ನೀರಾವರಿ ವ್ಯವಸ್ಥೆಗೆ ಪೂರಕವಾಗಿದ್ದವು. ಕದಂಬರ ಕಾಲದಲ್ಲೇ ರಚಿಸಿದ ಕೆರೆಗಳ ಬಗ್ಗೆ ಉಲ್ಲೇಖವನ್ನು ಕಾಣಬಹುದು. ಅಂದರೆ ಕಾಕುಸ್ಥವರ್ಮನ ಕಾಲದ ತಟಾಕದ ವಿಷಯವು ತಾಳಗುಂದ ಶಾಸನದಲ್ಲಿದೆ. (ಎ.ಕ–೭, ಶಿಕಾರಿ.೧೭೬, ಕ್ರಿ.ಶ.೪೫೦) ಭೂಮಿಯ ಅಳತೆಯ ಮೇಲೆ ತೆರಿಗೆ ಇತ್ತು ಹಾಗಾಗಿ ನಾಗರಖಂಡ –೭೦ರ ಕಚ್ಚವಿ ಎಂಬ ಹಳ್ಳಿಯ ಹೆಸರಿನಿಂದ ಕಚ್ಚವಿಕೋಲು ಎಂದು ಕರೆದಿದೆ. (ಎ.ಕ–೭, ಶಿಕಾರಿ.೧೪೨, ಕ್ರಿ.ಶ.೧೦೭೮) ಇದರ ಹೆಸರು ಬೇಗೂರು ಮತ್ತು ಬಳ್ಳಿಗಾವಿಯ ಶಾಸನದಲ್ಲಿದೆ.

ಕೈಗಾರಿಕೆ:

ಕೃಷಿಕರು ಬೆಳೆವ ಬೆಳೆಗಳನ್ನು ಕೈಗಾರಿಕೆಗಳ ಮೂಲಕ ಒಂದು ರೂಪವನ್ನು ನೀಡುತ್ತಿದ್ದರು. ಇದರ ಜೊತೆಗೆ ಅರಣ್ಯದ ಉತ್ಪಾದನೆಯಲ್ಲಿ ಗುಡಿ ಕೈಗಾರಿಕೆಗೆ ಪ್ರಯೋಗಗಳು ನಡೆದಿದ್ದವೆ. ಕಬ್ಬನ್ನು ಗಾಣಕ್ಕೆ ಕೊಟ್ಟು ಹಿಂಡಿ ಹಾಲನ್ನು ತೆಗೆದು ಸಕ್ಕರೆಯಾಗಿ ಮಾಡುತ್ತಿದ್ದರು. (ಎ.ಕ–೭, ಶಿಕಾರಿ.೧೧೮, ಕ್ರಿ.ಶ.೧೦೫೪) ಅದೇ ರೀತಿ ಬುಟ್ಟಿ, ಮೊರೆ ಮೊದಲಾದವುಗಳನ್ನು ಬೊಂಬುಗಳಲ್ಲಿ ಹೆಣೆಯುವ ಕೈಗಾರಿಕೆಯು ಇದ್ದಿತ್ತು. (ಎ.ಕ–೭, ಶಿಕಾರಿ.೧೧೮, ಕ್ರಿ.ಶ.೧೦೫೪) ಕೈಗಾರಿಕೆಗೆ ಬೇಕಾದ ಗಣಿಗಾರಿಕೆ ಕೂಡ ಶಾಸನಗಳಲ್ಲಿ ಉಲ್ಲೇಖವಿದೆ. ಕುಳಿಯೆಂದರೆ ಬಾವಿಯೆಂದು ಇನ್ನೊಂದು ಶಾಸನದಿಂದ ತಿಳಿದುಬರುತ್ತದೆ. (ಎ.ಕ–೭, ಶಿಕಾರಿ.೨೫೭, ಕ್ರಿ.ಶ.೧೦೧೨).

ವ್ಯಾಪಾರ:

ಕೃಷಿ, ಕೈಗಾರಿಕೆ ಹಾಗೂ ಇತರೆ ಸಿದ್ದ ವಸ್ತುಗಳನ್ನು ವ್ಯಾಪಾರಕ್ಕೆ ಮುಂದಾಗಿಸಿದ್ದನ್ನು ಕಾಣಬಹುದು. ಬಳ್ಳಿಗಾವಿಯ ವರ್ತಕರು ಇಂದ್ರ, ನೀಲ, ಚಂದ್ರಕಾಂತ, ಮುತ್ತು, ಮಾಣಿಕ್ಯ, ವಜ್ರ, ವೈಡೂರ್ಯ, ಪುಷ್ಪರಾಗ, ಪದ್ಮರಾಗ ಮುಂತಾದ ರತ್ನಗಳ ವ್ಯಾಪಾರವನ್ನು ಮಾಡುತ್ತಿದ್ದರೆಂದು ಒಂದು ಶಾಸನವು ಹೇಳುತ್ತದೆ.(ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಸಂತೆ ಅಥವಾ ಜಾತ್ರೆಗಳಲ್ಲಿ ವಸ್ತುಗಳನ್ನು ಖರೀದಿಸಿ, ವ್ಯಾಪಾರ ಮಾಡುತ್ತಿದ್ದರು. ಬಳ್ಳಿಗಾವಿಯ ಕೇತುಸೆಟ್ಟಿಯು ನೌಕರನಾಗಿದ್ದನು. (ಎ.ಕ-೭, ಶಿಕಾರಿ.೨೨೫, ಕ್ರಿ.ಶ.೧೨೦೪) ಗಾತ್ರಿಗ ಎಂಬುದು ಹೆಗಲ ಮೇಲೆ ಅಥವಾ ತಲೆಯ ಮೇಲೆ ವಸ್ತುಗಳನ್ನು ಹೊತ್ತು ಮಾರುವವನನ್ನು ಸೂಚಿಸುತ್ತದೆ. ಬಿರವಣಿಗೆ ಎನ್ನುವುದು ವೀರ ಬರಂಜುವಿನ ಇನ್ನೊಂದು ರೂಪ ವರ್ತಕರು ತಮ್ಮ ಜಾತಿಯನ್ನು ವೀರಬಣಂಜು ಧರ್ಮ ಎಂದು ಕರೆದಿದ್ದಾರೆ.

ಸೆಟ್ಟಿ ಎಂಬುದು ಸಂಸ್ಕೃತ ಶ್ರೇಷ್ಠಿಯ ತದ್ಭವ ರೂಪ. ಸೆಟ್ಟಿಗುತ್ತಿ ಎಂಬಲ್ಲಿನ ಉತ್ತರ ಪದವು ಕುತ್ತ ಎಂಬದಾಗಿರಬಹುದು. ವೇಳಿಕಾರ ಎಂಬುದು ಸಮುದ್ರ ವ್ಯಾಪಾರದೊಡನೆ ಸಂಬಂಧ ಇರಿಸಿಕೊಂಡವನ್ನು ಅಥವಾ ವಿಳೆಯದಲೆ ಮಾರುವವನ ಸೂಚಕನೆಯೇ ಊಹೆಯಾಗಿದೆ. ಇವರದು ವೈಶ್ಯನ್ವಯ ಇವರಲ್ಲಿ ಹಲವಾರು ಜೈನರಾಗಿದ್ದು ನಿಜ(ಎ.ಕ-೭, ಶಿಕಾರಿ.೧೯, ಕ್ರಿ.ಶ.೧೦೬೬) ನಾನಾದೇಸಿ ಇವರು ವಿವಿಧ ರಾಜ್ಯಗಳೊಂದಿಗೆ ವ್ಯಾಪಾರ ನಡೆಸುತ್ತದ್ದ ವರ್ತಕರಾಗಿದ್ದರು ವಿದೇಶಿಗಳಿಗೆ ಸರಕು ಕಳುಹಿಸುತ್ತಿದ್ದೆರೆಂದು ಚಿಕ್ಕಮಾಗಡಿ ಶಾಸನದಲ್ಲಿ ಉಲ್ಲೇಖಗಳು ದೊರೆಯುತ್ತದೆ. (ಎ.ಕ-೭, ಶಿಕಾರಿ.೧೯೭, ಕ್ರಿ.ಶ.೧೧೮೨) ಕಾಳಿಕಾದೇವಿ ಲಬ್ದವರ ಪ್ರಸಾದರು ಎಂದು ವರ್ತಕರನ್ನು ಕರೆಯುತ್ತಿದ್ದಾರೆ. (ಎ.ಕ-೭, ಶಿಕಾರಿ.೧೩೩, ಕ್ರಿ.ಶ.೧೧೩೧)

ಐಹೊಳೆಯ ಐನೂರ್ವರು ಬ್ರಾಹ್ಮಣರಿರಬೇಕೆ ಹೊರತು ಐನೂರ್ವರ ವರ್ತಕ ಸಂಘವಿರಲಾಗದು. ಇದನ್ನು ಒಪ್ಪಿಕೊಂಡರೆ ಅಯ್ಯಾವೊಳೆ ಐನೂರ್ವರ ಹೆಸರನ್ನು ಹೇಳುವ ಅತ್ಯಂತ ಪ್ರಾಚೀನ ಶಾಸನವಿದು ಎಂಬ ಫ್ಲೀಟರ್‌ರವರ ಅಭಿಪ್ರಾಯವನ್ನು ಒಪ್ಪಲಾಗುವುದಿಲ್ಲ. (ಚಿದಾನಂದಮೂರ್ತಿ.ಎಂ.೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು ೪೨೫) ಈ ಐನೂರ್ವರ ಪ್ರಶಸ್ತಿಯನ್ನು ಐನೂರು ಶಾಸನಗಳು ಕೊಂಡಾಡುತ್ತಿದ್ದವು(ಸವಸ್ತ ಭುವನ ವಿಖ್ಯಾತ ಪಂಚಶತ ವೀರ ಶಾಸನ ಲಬ್ದಾನೇಕ ಗುಣಾಳಾಂಕೃತ ಸತ್ಯ ಶೌಚಾಚಾರ ಚಾರು ಚರಿತ್ರ ನಯ ವಿನಯ ವಿಜ್ಞಾನ ವೀರ ಬಣಂಜು ಧರ್ಮಪ್ರತಿಪಾಳ) (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಇವರು ಮೂವತ್ತೆರಡು ವೇಳಾಪುರಗಳಲ್ಲಿ ಹದಿನೆಂಟು ಪಟ್ಟಣಗಳಲ್ಲಿ ಅರವತ್ತನಾಲ್ಕು ಯೋಗ ಪೀಠಗಳಲ್ಲಿ ಅರವತ್ತನಾಲ್ಕು ಘಟಕಾಸ್ಥಾನಗಳಲ್ಲಿ ಇವರ ಪ್ರಭಾವ ವ್ಯಾಪಿಸಿತ್ತು. ಅಂದರೆ

ಇವರು ದೇಶ ವಿದೇಶಗಳಲ್ಲಿ ತಮ್ಮ ಸರಕುಗಳನ್ನು ವಾಹನಗಳಲ್ಲಿ ಹೇರಿಯೂ, ತಲೆಯ ಮೇಲೆ ಹೊತ್ತು ಮಾರುತ್ತಿದ್ದರು. ಇವರು ಇವರು ಭಲ್ಲುಂಕೆ ದಂಡ ಹಸ್ತರಾಗಿದ್ದರು. ಇವರು ತಮ್ಮ ಶಾಸ್ತ್ರವನ್ನು ಗುಡ್ಡಶಾಸ್ತ್ರವೆಂದು ಕರೆದುಕೊಂಡಿದ್ದಾರೆ.(ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪)

ದಾನವನ್ನು ಕೊಡುವ ಮೊದಲು ವರ್ತಕರ ಮೂಲ ಪುರುಷರಿಂದ ಐನೂರ್ವರ ಗೌರವವನ್ನು ಸಲ್ಲಿಸುತ್ತಿದ್ದರೆಂಬುದು ಸೂಚನೆಗಳಿವೆ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಈ ಸಂಘದ ರಚನೆಯ ವಿಷಯದಲ್ಲಿ ಶಾಸನಗಳು ಹೆಚ್ಚು ಬೆಳಕನ್ನು ಬೀರಿಲ್ಲ ಸಂಘದ ಮುಖ್ಯಸ್ಥನನ್ನು ಪಟ್ಟಣಸ್ವಾಮಿ ಎಂಬುದಾಗಿ ಕರೆಯಲಾಗಿದೆ. ಈತನು ಶ್ರೀಮಂತ ಅಥವಾ ಬುದ್ಧಿವಂತನಾಗಿರಬಹುದು. (ಎ.ಕ-೭, ಶಿಕಾರಿ.೯೪, ಕ್ರಿ.ಶ.೧೧೯೪) ಪಟ್ಟಣಸ್ವಾಮಿಯನ್ನು ನಗರಶೇಠ್ ಎಂಬುದಾಗಿ ಕರೆಯುವುದು ರೂಢಿಯಲ್ಲಿ ಆಧುನಿಕ ಕಾಲಕ್ಕೆ ಮೀಸಲಾಗಿರಬೇಕು. ಮುದ್ರಾ ರಾಕ್ಷಸದಲ್ಲಿ ಸರ್ವನಗರ ಶ್ರೇಷ್ಠ ಎಂಬುದು ಇದಕ್ಕೆ ಸಮನಾಗಿರಬಹುದು. ಇವರ ತೀರ್ಮಾನಕ್ಕೆ ಎಲ್ಲರೂ ತಲೆಬಾಗುತ್ತಿದ್ದರೆಂದು ಕಾಣುತ್ತಿದೆ. ಇದನ್ನೇ ಸಮಯ ಧರ್ಮಕ್ಕೆ(೦) ಕೂಡಿದ ಸಂಘಾತಕ್ಕೆಂ ಮಾಡಿದ ಬೈ(ವ್ಯ) ವ್ಯವಸ್ಥೆಗಂ ತಪ್ಪುವರಿಲ್ಲಿದು ಎಂಬುದಾಗಿ ಶಾಸನ ತಿಳಿಸುತ್ತದೆ. (ಎ.ಕ-೭, ಶಿಕಾರಿ.೯೪, ಕ್ರಿ.ಶ.೧೧೯೪) ಸಂಘಗಳು ನ್ಯಾಯ ನೀತಿಯನ್ನು ಪಾಲನೆ ಮಾಡುತ್ತಿದ್ದವು. ಬಳ್ಳಿಗಾವಿಯ ವರ್ತಕರು ತಮ್ಮಲ್ಲಿ ಯಾರಾದರು ಅಪುತ್ರಕರಾಗಿ ಮಾಡಿದರೆ ಅವರ ಆಸ್ತಿ ಆ ಊರಿನ ದೇವಸ್ಥಾನಕ್ಕೆ ಸಲ್ಲಬೇಕೆಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದರು (ಎ.ಕ-೭, ಶಿಕಾರಿ.೯೪, ಕ್ರಿ.ಶ.೧೧೯೪)

ಅರಸರು ವಿದೇಶಗಳೊಂದಿಗೆ ವಿನಿಮಯ ವ್ಯವಸ್ಥೆ ಹೊಂದಿದ್ದರು. ಬಳ್ಳಿಗಾವಿಯ ವರ್ತಕರು, ಚೇರ, ಚೋಳ, ಪಾಂಡ್ಯ, ಮಗದ, ಸೌರಾಷ್ಟ್ರ ಮುಂತಾದ ದೇಶಗಳೊಡನೆ ಸಂಪರ್ಕ ಇಟ್ಟಿಕೊಂಡಿದ್ದರು (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಇದಲ್ಲದೇ ಒಂದು ಶಾಸನದಲ್ಲಿ ಪರಸ (ಪರ್ಷಿಯಾ) ರೊಡನೆ ವ್ಯಾಪಾರ ಸಂಬಂಧವನ್ನು ಸೂಚಿಸುತ್ತದೆ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಇನ್ನೊಂದು ಶಾಸನದಲ್ಲಿ ತುರುಷ್ಕ (ತುರ್ಕಿ) ದೇಶದೊಂದಿಗೆ ವಿನಿಮಯವಿಟ್ಟುಕೊಂಡಿದ್ದನ್ನು ಕಾಣಬಹುದು. (ಎ.ಕ-೭, ಶಿಕಾರಿ.೧೯೭, ಕ್ರಿ.ಶ.೧೧೮೨) ವ್ಯಾಪಾರವು ಮುಖ್ಯವಾಗಿ ಭೂಮಾರ್ಗ ಮತ್ತು ಜಲಮಾರ್ಗಗಳಲ್ಲಿ ನಡೆಯುತ್ತಿದ್ದನ್ನು ಕಾಣಬಹುದು.

ಅಳತೆಗೆ ಸಂಬಂಧಿಸಿದಂತೆ, ಅಳತೆ ಗೋಲುಗಳಿಗೆ ಆಯಾ ಊರಗಳ ಹೆಸರುಗಳನ್ನು ಕೊಡುತ್ತಿದ್ದರು. ಉದಾಹರಣೆ ಕತ್ಯವಿಯಗಳೆ ಹೆಸರಿಸಬಹುದು (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಕೆಲವು ಅಳತೆಗೋಲುಗಳಿಗೆ ಅವುಗಳನ್ನು ಬಹುಶಃ

ಸ್ಥಾಪಿಸದ ದೇವಸ್ಥಾನದ ಹೆಸರುಗಳನ್ನು ಕೊಟ್ಟಿದ್ದರು. ಉದಾಹರಣೆಗೆ ಭೇರುಂಡಗಳೆ ಹೆಸರಿಸಬಹುದು. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ನಾಗರಖಂಡ-೭೦ರ ಕಚ್ಚವಿ ಎಂಬ ಹಳ್ಳಿಯ ಹೆಸರಿನಿಂದ ಕಚ್ಚಲುಕೋಲು ಎಂದು ಕರೆದಿದೆ. ಇದರ ಹೆಸರು ಬೇಗೂರು ಮತ್ತು ಬಳ್ಳಿಗಾವಿಯ ಶಾಸನದಲ್ಲಿದೆ. ಕಚ್ಚವಿಯಗಳೆ ಎಂಬುದು ತಾಳಗುಂದ, ಗೊಗ್ಗ, ಬಳ್ಳಿಗಾವಿಯ ಶಾಸನದಲ್ಲಿದೆ. ಬಂದಳಿಕೆಯ ಬಸದಿ ಶಾಸನದಲ್ಲಿ ಜೀರ್ಣೋದ್ಧಾರಕ್ಕೆ ನೀಡಿದ ದಾನ ಶಾಸನದಲ್ಲಿ ಹಾದವಿದಳ, ಹೇರುವಟಿ ಎಂಬ ಅಳತೆಗಳನ್ನು ಹೇಳಿದೆ.(ಭಗವತಿ.ಎಸ್.ಎಸ್,ಮೇಲಿನಮನಿ. ಹೆಚ್.ಎಸ್,೨೦೦೪, ಕನ್ನಡ ಶಾಸನ ಅಧ್ಯಯನ, ಪು ೮೭).

ತೆರಿಗೆಗಳಿಂದ ಬರುವ ಆದಾಯ ಪ್ರಮಾಣ ಹೆಚ್ಚಾಗಿದ್ದು ತೆರಿಗೆಯಿಂದ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ಬಳ್ಳಿಗಾವಿಯ ವರ್ತಕರು ತಮ್ಮ ಅಪುತ್ರಿಕ ಧನವು ದೇವರಿಗೆ ಸಲ್ಲ ಬೇಕೆಂದು ತೀರ್ಮಾನಿಸಿ ಇವರ ತೀರ್ಮಾನವನ್ನು ಬಹುಶಃ ರಾಜರು ಒಪ್ಪಿಕೊಂಡನೆಂದು ಕಾಣಿಸುತ್ತದೆ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ವೇಶ್ಯೆಯರ ಮೇಲೆ ಹಾಕುತ್ತಿದ್ದ ತೆರಿಗೆಗೆ ಒಂದು ಶಾಸನದಲ್ಲಿ ಉಲ್ಲೇಖವಿದೆ. ಕನ್ನಡಿವಣ(ಸೂಳೆಯರಲ್ಲಿಯ ಕನ್ನಡಿ ವಣಮಂ) (ಎ.ಕ-೭, ಶಿಕಾರಿ.೨೯೫, ಕ್ರಿ.ಶ.೧೦೭೪) ಗಾಣದ ಮೇಲಿನ ತೆರಿಗೆಯನ್ನು ಗಾಣದ ತೆರೆ ಎಂಬುದು ಕಾಣಬಹುದು (ಎ.ಕ-೭, ಶಿಕಾರಿ.೨೭೫, ಕ್ರಿ.ಶ.೧೦೮೬) ವ್ಯಾಪಾರ ಸಾಮಾಗ್ರಿಗಳ ಮೇಲಿನ ಸುಂಕವನ್ನು ತಳವಿ ಸುಂಕ ಎನ್ನುತ್ತಿದ್ದರು (ಎ.ಕ-೭, ಶಿಕಾರಿ.೧೩೭, ಕ್ರಿ.ಶ.೧೧೧೪) ಪಂದರ - ಹಂದರ -ಮದುವೆಯ- ಚಪ್ಪರ ತೆರಿಗೆಯನ್ನು ಪಂದರ ಪಣ ಎಂದು ಉಲ್ಲೇಖವಿದೆ (ಎ.ಕ-೭, ಶಿಕಾರಿ.೨೯೫, ಕ್ರಿ.ಶ.೧೦೭೪) ಸಿದ್ದಯ ಇದು ಮನೆಯ ಮೇಲೆ ಹಾಕುತ್ತಿದ್ದ ತೆರಿಗೆಯನ್ನು ಸೂಚಿಸುತ್ತದೆ.(ಎ.ಕ-೭, ಶಿಕಾರಿ.೧೧೨, ಕ್ರಿ.ಶ.೧೧೩೯)

ತೆರಿಗೆಯ ಅಧಿಕಾರಿಯನ್ನು ಸೂಚಿಸಿದ್ದು ಕಾಣಬಹುದು. ಅಧಿಕಾರಿಗಳ ಸಂಭಾವನೆಯನ್ನು ಸುಂಕದ ಮೇಲೆ ನಿಂತಿದ್ದು ನೋಡಬಹುದು. ಒಂದು ಶಾಸನದಲ್ಲಿ ಒಟ್ಟು ಸುಂಕದಲ್ಲಿ ಎಷ್ಟು ಭಾಗವು ಅವರಿಗೆ ಸೇರುತ್ತಿದ್ದಿತೊ ತಿಳಿಯದು. ಆದರೆ ಅವರು ಬಿಟ್ಟು ಕೊಟ್ಟ ಭಾಗವು ಅವರ ವೇತನದ ಒಂದು ಭಾಗ ಎನ್ನುವುದು ಮಾತ್ರ ಸ್ಪಷ್ಟ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪) ಶಾಸನಗಳಲ್ಲಿ ಬೇರೆ ಬೇರೆ ಪ್ರಮಾಣದ ನೂರಾರು ಅಳತೆ ಗೋಲುಗಳ ಹೆಸರುಗಳು ಕಂಡುಬರುತ್ತವೆ. ಇದರ ಜೊತೆಗೆ ಊರುಗಳ ಹೆಸರಿನಲ್ಲಿ ಅಳತೆಗಳಿವೆ. ಉದಾಹರಣೆಗೆ ಕತ್ಯವಿಯಗಳೆ ಹೆಸರಿಸಬಹುದು ಇದಲ್ಲದೇ ದೇವಸ್ಥಾನದ ಹೆಸರಿನಲ್ಲಿವೆ ಉದಾಹರಣೆಗೆ ಭೇರುಂಡಗಳೆ ಹೆಸರಿಸಬಹುದು.

ಅಪರಾಧಿಯಿಂದ ಮುದ್ರಾಪಣದ ಮೂಲಕವಾಗಿ ದಂಡವನ್ನು ವಸೂಲು ಮಾಡಲಾಗುತ್ತಿತ್ತು. ಮುದ್ರಾಪಣ ಎಂದರೆ ಮುದ್ರೆಯೊತ್ತಿದ ನಾಣ್ಯ, ಅಚ್ಚೊತ್ತಿದ ನಾಣ್ಯ ಇಂತಿಂತಹ ಶಿಕ್ಷೆಗಳಿಗೆ ಇಷ್ಟಿಷ್ಟೆ ದಂಡ ಎಂದು ಗೊತ್ತು ಮಾಡಲಾಗುತ್ತಿತ್ತು ಎಂದು ಭಾವಿಸಿದರೆ ದಂಡದ ಹಣವನ್ನು ಆಯಾ ಮೌಲ್ಯದ ನಾಣ್ಯಗಳ ಮೂಲಕವಾಗಿತ್ತು. ಅಂತಹ ನಿರ್ದಿಷ್ಟ ಮೌಲ್ಯದ ಅಚ್ಚೊತ್ತಿದ ನಾಣ್ಯಗಳೇ ಮುದ್ರಾಪಣಗಳು ಅವುಗಳನ್ನು ಟಂಕಿಸಲು ಅಧಿಕೃತವಾದ ಟಂಕಸಾಲೆಗಳು ಇದ್ದವು. ದಿವ್ಯದ ಸಂದರ್ಭದಲ್ಲಿ ವಿಧಿಸಲಾಗಿದ್ದ ಮುದ್ರಾಪಣವನ್ನು ವಸೂಲು ಮಾಡಲೆಂದು ಪ್ರತ್ಯೇಕ ಅಧಿಕಾರಿಗಳಿದ್ದರು ಅವರೇ ಮುದ್ರಾಪಣದ ಪೆರ್ಗಡೆಯೆಂದು ಶಾಸನ ತಿಳಿಸುತ್ತದೆ. (ಎ.ಕ-೭, ಶಿಕಾರಿ.೨೯೩, ಕ್ರಿ.ಶ.೧೧೮೦)

ಧಾರ್ಮಿಕ ಸ್ಥಿತಿ:

ಕರ್ನಾಟಕ ವಿವಿಧ ಮತಧರ್ಮಗಳ ಆಗರವಾಗಿದೆ. ಧರ್ಮ ನಾಡಿನ ಜನರ ಸಾಮಾಜಿಕ, ಆರ್ಥಿಕ ಜೀವನದ ಕಥನ. ಒಂದು ಸಾಮಾಜಿಕ ಹಿಡಿತ ಸಾಧಿಸುವಲ್ಲಿ ಧರ್ಮವು ಪ್ರಮುಖ ಪಾತ್ರ ವಹಿಸುತ್ತದೆ. ಶಿಕಾರಿಪುರದಲ್ಲಿ ಎಲ್ಲಾ ರೀತಿಯ ಧರ್ಮಗಳು ಇದ್ದು. ತಮ್ಮದೇ ಕಥೆಗಳನ್ನು ಹೆಣೆದಿವೆ. ಆ ನಿಟ್ಟಿನಲ್ಲಿ ಜೈನ, ಶೈವ, ವೈಷ್ಣವ ಧರ್ಮಗಳು ಪ್ರಮುಖ ಕಾರ್ಯ ನಿರ್ವಹಿಸಿವೆ .ಹರಪ್ಪ ನಾಗರೀಕತೆಯಲ್ಲಿ ಸಿಕ್ಕ ಮುದ್ರೆಗಳು ಧಾರ್ಮಿಕ ಇತಿಹಾಸ ನಿರ್ಮಿಸಿವೆ ಹಾಗೆಯೇ ಶಾಸನಗಳಲ್ಲಿ ಉಲ್ಲೇಖಿತ ಧರ್ಮಗಳು ರಾಜ್ಯ ಮನೆತನಗಳ ಧಾರ್ಮಿಕ ಜೀವನವನ್ನು ಚಿತ್ರಿಸುವಲ್ಲಿ ಮುಂದಾಗಿವೆ.

ಹಿಂದಿನ ಶಾಸನಗಳಲ್ಲಿ ಶಾಪಾಶಯದಲ್ಲಿ ರೈತರು ಮತ್ತು ಬ್ರಾಹ್ಮಣರ ಉಲ್ಲೇಖವಿದೆ. ನಂತರದಲ್ಲಿ ಕ್ರಿ.ಶ.೧೧೯೯ರ ನಂತರದ ಶಾಸನಗಳಲ್ಲಿ ಶಾಕ್ತ, ವೈಷ್ಣವ, ಶೈವ, ಬೌದ್ಧ, ಜೈನ, ಕಾಳಮುಖ ಹಾಗೂ ಇತರೆ ದೇವಾಲಯಗಳು ವಿದ್ಯಾ ದಾನದ ಕಾರ್ಯಗಳಲ್ಲಿ ತೊಡಗಿದವು. (ಎ.ಕ-೭, ಶಿಕಾರಿ.೧೨೫, ಕ್ರಿ.ಶ.೧೧೯೯) ಮೂಲಸ್ಥಾನ ನಂದಿಕೇಶ್ವರ ದೇವಾಲಯಕ್ಕೆ ಜೀರ್ಣೋದ್ಧಾರ ಮಾಡಿ ದತ್ತಿ ಬಿಡಲಾಗಿದೆ. ಕಾಪಾಲಿಕರು ಮತ್ತು ಕಾಳಾಮುಖರು ಭಾರತದಲ್ಲಿ ಮಧ್ಯಯುಗದಲ್ಲಿದ್ದ ಎರಡು ಶೈವ ಪಂಥಗಳು. ಭಾರತದ ನೆಲದಲ್ಲಿ ಹುಟ್ಟಿದ ಯಾವುದೇ ಧಾರ್ಮಿಕ ಪಂಥ ಏಕಗಾಮಿಯಾಗಿ ಹರಿಯುವುದಿಲ್ಲ. ತನ್ನ ಕಾಲದಲ್ಲಿ ಪ್ರಬಲವಾಗಿದ್ದ ಅನ್ಯ ಧರ್ಮೀಯ ಪಂಥಗಳ ಜೊತೆಗೆ ವಾಗ್ವಾದಗಳನ್ನು ಸೃಷ್ಟಿಸಿಕೊಂಡು ಆರೋಪ ಪ್ರತ್ಯಾರೋಪಗಳ ಸಮರಮುಖಿ ವಾತಾವರಣದಲ್ಲಿ ಉಸಿರಾಡಿದ್ದೇ ಹೆಚ್ಚು.

ಜೈನಧರ್ಮ:

ಕರ್ನಾಟಕದ ಪ್ರಾಚೀನ ಜೈನ ತೀರ್ಥ ಕ್ಷೇತ್ರಗಳಲ್ಲಿ ಬಂದಳಿಕೆ ತೀರ್ಥ ಕ್ಷೇತ್ರವೂ ಒಂದು. ಇಲ್ಲಿಯ ಶಾಂತಿ ಜಿನೇಶ ಬಸದಿ ಕ್ರಿ.ಶ.೩ನೇ ಶತಮಾನದ ವೇಳೆಗೆ ರಚಿತವಾದುದು. ಜಕ್ಕಿಯಬ್ಬೆ ಮತ್ತು ನಾಗಾರ್ಜುನ ನಾವ್ಗಾವುಂಡರು ನಾಗರ ಖಂಡ-೭೦ನ್ನು ಆಳುತ್ತಿದ್ದರು. ಸತ್ತರ್ ನಾಗಾರ್ಜುನನು ಅತೀತನಾದನು. ಜಕ್ಕಿಯಬ್ಬೆ ಕೆಲವು ಕಾಲ ನಾವ್ಗಾವುಂಡತನ ನಡೆಸಿದಳು. ಕಡೆಗೆ ಪಾರ್ಶ್ವನಾಥ ತೀರ್ಥಂಕರ ಬ್ರಹ್ಮ ಜೀನಾಲಯದಲ್ಲಿ ಬನ್ದಣಿಕೆಯ ತೀರ್ಥಂಕರ ಪ್ರತಿ ಬದ್ಧ ಬಸದಿಗಳಾದವು.(ಹಂಪಾ ನಾಗರಾಜಯ್ಯ ೧೯೯೮, ಶಾಸನಗಳಲ್ಲಿ ಜೈನ ತೀರ್ಥಗಳು, ಪುಟ೪೪) ಮಾಘ್ಣಣಂದಿ ಭಟ್ಟಾರಕರು ಮೂಲ ಸಂಘದೇಸಿ ಗಣದಲಾಳ ಕೋಲಾನ್ವಯಕ್ಕೆ ಸೇರಿದವರು. ಚಾಳುಕ್ಯರ ಸಾಮಂತ ಲಕ್ಷ್ಮಣ ರಾಜನು ಸಾಮಂತನಾಗಿದ್ದಾಗ ಇವರು ಬಳ್ಳಿಗಾವೆಯ ಮಲ್ಲಿಕಾಮೋದ ಶಾಸ್ತಿನಾಥ ಬಸದಿಯಲ್ಲಿದ್ದರು. ಬಳ್ಳಿಗಾವೆಯಲ್ಲಿ ಆಳುತ್ತಿದ್ದ ಲಕ್ಷ್ಮಣ ರಾಜನು ಕವಿ ಶಾಂತಿನಾಥನ ಅಪೇಕ್ಷೆಯಂತೆ ಈ ಬಸದಿಯನ್ನು ಕಲ್ಲಿನಲ್ಲಿ ಕಟ್ಟಿಸಿದನು. (ಎ.ಕ-೭, ಶಿಕಾರಿ.೯೮, ಕ್ರಿ.ಶ.೧೧೦೩) ಸೋವಲದೇವಿ ಎಂಬುವಳು ಅತ್ತಿಮಬ್ಬೆ ಎಂದು ಜೈನರಲ್ಲಿ ಪ್ರಸಿದ್ಧಿ ಪಡೆದಿದ್ದಳು. (ಎ.ಕ-೭, ಶಿಕಾರಿ.೨೩೨, ಕ್ರಿ.ಶ.೧೨೦೦)

ಶಬ್ದಶಾಸ್ತ್ರದಲ್ಲಿ ಪೂಜ್ಯಪಾದರು, ತರ್ಕದಲ್ಲಿ ಅಕಳಂಕರು, ಕವಿತೆಯಲ್ಲಿ ಸಾಮಂತ ಭದ್ರರು ಸಮರ್ಥರಾಗಿದ್ದಾರೆ. ರಾಮಸೇನ ಪಂಡಿತರಿಗೆ ಇಷ್ಟವಿರಲ್ಲೂ ಪರಿಶ್ರಮವಿತ್ತು. (ಎ.ಕ-೭, ಶಿಕಾರಿ.೧೨೪, ಕ್ರಿ.ಶ.೧೦೭೭) ಚಾಳುಕ್ಯ ರಾಜ್ಯ ಸೋಮೇಶ್ವರನು ತುಂಗಭದ್ರೆಯಲ್ಲಿ ಮುಳುಗಿ ಪ್ರಾಣಬಿಟ್ಟ ವಿಷಯವು ಶಾಸನವೊಂದರಲ್ಲಿ ಬಂದಿದೆ. ಬಿಲ್ಹಣನು ತನ್ನ ವಿಕ್ರಮಾಂಕದೇವ ಚರಿತ್ರೆಯಲ್ಲೂ ಈ ಅಂಶವನ್ನು ಪ್ರಸ್ತಾಪಿಸಿದ್ದಾನೆ. ಸೋಮೇಶ್ವರನಿಗೆ ಮಹಾದಾರುಣವಾದ ಜ್ವರವು ಪ್ರಾಪ್ತವಾಯಿತೆಂದೂ ತನ್ನ ಅವಸಾನವನ್ನರಿತ ಅವನು ತುಂಗಾಭದ್ರೆಗೆ ಹೋಗಿ ಸ್ನಾನವನ್ನು ಮಾಡಿ ಬೇಕಾದಷ್ಟು ದಾನಗಳನ್ನು ಕೊಟ್ಟು ನದಿಯಲ್ಲಿ ಮುಳುಗಿ ಪ್ರಾಣವನ್ನು ತ್ಯಜಿಸಿದನೆಂದೂ ಅಲ್ಲಿ ಹೇಳಿದೆ. (ಎ.ಕ-೭, ಶಿಕಾರಿ.೧೩೬, ಕ್ರಿ.ಶ.೧೦೬೮) ಈ ಮರಣ ಜೈನ ಸಂಸ್ಕಾರ ರೀತಿ ಕಾಣಲು ಸಾಧ್ಯವಾಗಿದೆ. ಉರಗ, ಪುಶಾಚ, ಭೂತ, ಪಕ್ಷಿ, ಉಗ್ರ ನವಗ್ರಹಗಳ ಶಕನೀನಿಶಾಚರು ವಿಪರೀತಗಳಾದರೂ ಜೈನ ಮುನಿಗಳ ಮುಂದೆ ನಿಲ್ಲುತ್ತಿರಲಿಲ್ಲ. ಏಕೆಂದರೆ ಅವರು ಬರೆದದು ಯಂತ್ರವಾಗಿತ್ತು ಹೇಳಿದ್ದೆ ತಂತ್ರವಾಗಿತ್ತು. (ಎ.ಕ-೭, ಶಿಕಾರಿ.೧೩೬, ಕ್ರಿ.ಶ.೧೦೬೮)

ಬೌದ್ಧ ಧರ್ಮ:

ಬಳ್ಳಿಗಾವೆಯ ಕ್ರಿ.ಶ.೧೦೬೪ರ ಶಾಸನವು ಜಯಂತಿ ಬೌದ್ದ ವಿಹಾರ ಮಾಡಿಸಿ ದತ್ತಿ ಬಿಟ್ಟಿರುವುದನ್ನು ತಿಳಿಸುತ್ತದೆ. (ಎ.ಕ-೭, ಶಿಕಾರಿ.೭೦, ಕ್ರಿ.ಶ.೧೦೬೪) ತೊಗರ್ಸಿಯ ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ಬಳಿಯ ಕಲ್ಯಾಣಿಯ ದಡದಲ್ಲಿ ಬೌದ್ದ ದೀಪಸ್ತಂಭವನ್ನು ಹಿರಿಯ ಸಂಶೋಧಕರಾದ ಆ ಸುಂದರರವರು ಗುರುತಿಸಿದ್ದಾರೆ.(ಕನ್ನಡ ಭಾರತಿ-೮, ೨, ೧೯೭೫, ಪು.೧೩-೧೪) ಚಾಳುಕ್ಯ ತ್ರಿಭುವನ ಮಲ್ಲನ ಕಾಲದಲ್ಲಿ ದಂಡನಾಯಕ ರೂಪಭಟ್ಟಯ್ಯನು ಬಳ್ಳಿಗಾವೆಯಲ್ಲಿ ಜಯಂತಿ ಪ್ರಭುದ್ಧ ವಿಹಾರವನ್ನು ಸ್ಥಾಪಿಸಿ, ತವಣೆಯ ತಮ್ಮ ಮೂಡಿಸಿದ ತಾರಾಭಗವತಿ ಕೇಶವ ದೇವರಿಗೆ ಭೂದಾನ ನೀಡಿದನು. ಕ್ರಿ.ಶ.೧೦೬೭ರಲ್ಲಿ ಬಳ್ಳಿಗಾವೆಯ ಪುಲ್ಲೆ ಬಯಲಿನಲ್ಲಿ ಒಪ್ಪವರಿ ವಂಶದ ನಾಗಿಯಕ್ಕ ಎಂಬುವಳು ಬೌದ್ಧವಿಹಾರವನ್ನು ಕಟ್ಟಿಸಿ, ತಾರಾಭಗವತಿ ವಿಗ್ರಹವನ್ನು ಪ್ರತಿಷ್ಠಾಪಿಸಿದಳು. (ಎ.ಕ-೭, ಶಿಕಾರಿ.೧೬೬, ಕ್ರಿ.ಶ.೧೦೬೭) ಇದರ ಜೊತೆಗೆ ಅದರ ಪೂಜಾ ನಿಮಿತ್ತಕ್ಕೆ ಪ್ರಬೌದ್ಧ ಬಟಾರರ ಕಾಲನ್ನು ತೊಳೆದು ಚಾಳುಕ್ಯ ಚಕ್ರವರ್ತಿಯ ಒಪ್ಪಿಗೆ ಪಡೆದು ಭೂಮಿಯನ್ನು ದಾನ ಮಾಡಿದ ವಿಷಯ ಬಂದಿದೆ. ಹತ್ತಾರು ವಿಶೇಷಣಗಳಿಂದ ಕೀರ್ತಿವೆತ್ತ ಬಾಪ್ಪುರ ನಾಗಿಯಕ್ಕ ಬೌದ್ಧ ಧರ್ಮದ ಕೇಂದ್ರಬಿಂದುವಿನಂತೆ ಶೋಭಿಸಿದ್ದಾಳೆ. ನಮ್ಮ ನಾಡಿನಲ್ಲಿ ಪ್ರಥಮ ಉಲ್ಲೇಖವಾದ ತಾರಾಭಗವತಿಯನ್ನು ಬಾಪ್ಪುರ ನಾಗಿಯಕ್ಕ ಸ್ಥಾಪಿಸಿದುದೇ ಆಗಿರಬೇಕು. ತಾರಾಭಗವತಿಯು ವಜ್ರಯಾನವೆಂಬ ಬೌದ್ಧ ಪಂಥದ ದೇವತೆ (ಎ.ಕ-೭, ಶಿಕಾರಿ.೧೭೦, ಕ್ರಿ.ಶ.೧೦೬೫)

ಬಳ್ಳಿಗಾವೆಯ ಶಾಸನದಲ್ಲಿ ಉಲ್ಲೇಖಿತವಾದ ಪುಲ್ಲೆಯ ಬಯಲು ಬೌದ್ಧರಿಗೆ ಪ್ರಿಯವಾದ ಮೃಗದಾವವಿರಬೇಕೆಂದು ಶ್ರೀಹಯವದನ ರಾಯರ ಊಹೆ(ಎ.ಕ-೭, ಶಿಕಾರಿ.೧೨೦, ಕ್ರಿ.ಶ.೧೦೪೮) ಬಳ್ಳಿಗಾವೆಯ ಲೋಕೇಶ್ವರ ಮತ್ತು ಜೋಗೇಶ್ವರ ದೇವರ ಅರ್ಚನೆಗೆ ಲೋಕರಸ ಮತ್ತು ಜೋಗರಸರು ದತ್ತಿ ಕೊಡುವಾಗ ಸಮಸ್ತ ನಗರಂಗಳು ಪಿರಿಯ ಮಠದ ಭೇರುಂಡೇಶ್ವರಾಚಾರ್ಯ ಶ್ರೀಮದ್ಗಾಳ ಪಂಡಿತ ಪಂಚಲಿಂಗರಾಚಾರ್ಯ ಶ್ರೀಕಂಠ ಪಂಡಿತ ತ್ರಿಪುರಂತಕ ದೇವರಾಚಾರ್ಯ ಚತುರಾಯನ ಪಂಡಿತರ ಸಾಲಿನಲ್ಲಿ ಈ ಶಾಲೆಯ ಪರ್ಷೆಯ ಬೌದ್ಧಾಲಯದ ಸಾವಾಸಿ ನಾಗಿಯಕ್ಕನೂ ಉಲ್ಲೇಖಿತವಾದದು ಮಹತ್ವದ ಸಂಗತಿ (ಎ.ಕ-೭, ಶಿಕಾರಿ.೧೦೬, ಕ್ರಿ.ಶ.೧೧೯೮) ಹಂಪಭಟ್ಟನ ಕುಲವದು ನಾಗಿಯಕ್ಕ ಶಾಸನೋಲ್ಲೇಖದಂತೆ ನೇರವಾಗಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಉನ್ನತ ವರ್ಗದ ಏಕೈಕ ಬೌದ್ಧ ಮಹಿಳೆ (ಎ.ಕ-೭, ಶಿಕಾರಿ.೧೯೯, ಕ್ರಿ.ಶ.೧೦೬೭) ಜೊತೆಗೆ ಚುಟುಕುಲದ ಶಿವಸ್ಕಂಧ ನಾಗಸಿರಿದ ಚಾಳುಕ್ಯ ಅಕ್ಕದೇವಿ, ಲಕ್ಷ್ಮೀದೇವಿ, ಶಾಂತಲೆ ಬೌದ್ಧ ಧರ್ಮದ ನೆರವಿಗೆ ನಿಂತ ರಾಜಪರಿವಾರದ ಮಹಿಳೆಯರು (ಎ.ಕ-೭, ಶಿಕಾರಿ.೧೭೦, ಕ್ರಿ.ಶ.೧೦೬೫) ಬೌದ್ಧ ವಿಹಾರಗಳಿಗೆ ಒಬ್ಬೊಬ್ಬ ಆಚಾರ್ಯರನ್ನು ನಿಯಮಿಸುತ್ತಿದ್ದಂತೆ ಕಂಡುಬರುತ್ತದೆ. ರೂಪ ಭಟ್ಟಯ್ಯ ಬಳ್ಳಿಗಾವೆಯಲ್ಲಿ

ಕಟ್ಟಿಸಿದ ಜಯಂತಿ ಪ್ರಬೌದ್ಧ ವಿಹಾರದಲ್ಲಿ ತಾರಾಭಗವತಿ, ಕೇಶವದೇವ, ಲೋಕೇಶ್ವರ ಬೌದ್ಧ ದೇವರನ್ನು ಸ್ಥಾಪಿಸಿದಂತೆ ವಿಷಯವಿದೆ.(ತಾಳ್ತಜೆ ವಸಂತಕುಮಾರ್,೧೯೮೮, ಬೌದ್ಧಾಯನ, ಪುಟ.೮೮-೮೯)

ಕ್ರಿ.ಶ.೧೦೬೭ ರಲ್ಲಿ ತಾರಾಭಗವತಿಯನ್ನು ನಿರ್ಮಿಸಿದ ಈ ನಾಗಿಯಕ್ಕ ಕ್ರಿ.ಶ.೧೦೯೮ರ ಕಾಲಕ್ಕೆ ಶೈವ ಆಚಾರ್ಯರ ಸಮಾನ ಸ್ಥಾನದಲ್ಲಿ ನಿಲ್ಲಬೇಕಾದರೆ ಸುಮಾರು ೩೧ ವರ್ಷಗಳ ಅಂತರದಲ್ಲಿ ಅವಳು ಸಂಪೂರ್ಣವಾಗಿ ಆಧ್ಯಾತ್ಮದತ್ತ ಒಲಿದಿರುವ ಸಾಧ್ಯತೆ ಇದೆ. ಬಹುಶಃ ನಾಗಿಯಕ್ಕ ಪತಿಯ ಮರಣಾನಂತರ ಸಾಂಸಾರಿಕ ಜೀವನದಿಂದ ಮುಕ್ತಳಾಗಿ ಶಾಲೆಯ ಪರ್ಷೆಯ ಶಾಲೆಯ ಬೌದ್ಧಾಲಯದ ಆಚಾರ್ಯಿಣಿಯೆನಿಸಿಕೊಂಡು ಧರ್ಮ ಕಾರ್ಯಕ್ಕೆ ತನ್ನನ್ನು ಮುಡುಪಾಗಿಟ್ಟುಕೊಂಡಿರಬೇಕು. (ಎ.ಕ-೭, ಶಿಕಾರಿ.೧೦೬, ಕ್ರಿ.ಶ.೧೦೯೮) ಶಾಸನದಲ್ಲಿ ಚಾಲುಕ್ಯ ಚಕ್ರಿತ್ರೈಲೋಕ್ಯಮಲ್ಲನ ಸಹವಾಸಿ ಎಂಬುದು ವೇಳಿವಾಳಿಯನ್ನು ಸೂಚಿಸುತ್ತದೆ ಎಂದು ಕೆ.ಎ.ನೀಲಕಂಠ ಶಾಸ್ತ್ರಿಯವರ ಅಭಿಪ್ರಾಯ.

ವೈದಿಕ ಧರ್ಮ:

ಕರ್ನಾಟಕದಲ್ಲಿ ಬೌದ್ಧರಾಗಿದ್ದ ಶಾತವಾಹನರ ಆಳ್ವಿಕೆ ಮುಗಿದು ಬ್ರಾಹ್ಮಣರಾಗಿದ್ದ ಕದಂಬರ ಆಳ್ವಿಕೆ ಪ್ರಾರಂಭವಾಗುವಲ್ಲಿ ವೈದಿಕ ಧರ್ಮದ ಪ್ರವೇಶ ಗೋಚರಿಸುತ್ತದೆ. ಈ ಮನೆತನದ ಸಂಸ್ಥಾಪಕ ಮಯೂರ ಶರ್ಮನು ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಅಗ್ರಹಾರವೆಂದೂ, ಆ ಮೇಲೆ ಇಲ್ಲಿ ವೈದಿಕ ಧರ್ಮ ಭದ್ರಮುಖವಾಗಿ ಬೆಳೆದು ಬಂತೆಂದೂ ಹೇಳಬಹುದು. (ಎ.ಕ-೭, ಶಿಕಾರಿ.೧೭೮, ಕ್ರಿ.ಶ.೧೦೯೨) ರಾಮಾನುಜಾಚಾರ್ಯರ ಆಗಮನದ ತರುವಾಯ ಕರ್ನಾಟಕದಲ್ಲಿ ವಿಷ್ಣುವನ್ನು ಕೇಶವ ಎಂಬ ಹೆಸರಿನಿಂದ ಪೂಜಿಸುವ ಪ್ರವೃತ್ತಿ ವರ್ಧಿಸತೊಡಗಿತು. ಈಗ ಉನ್ನತ ವರ್ಗದ ಮಹಿಳೆಯರು, ಅದರಲ್ಲಿ ಮಂಡಲೇಶ್ವರ ದಂಡನಾಯಕರ ಮಡದಿಯರಾದ ಲಕ್ಷ್ಮೀದೇವಿ, ಸಿರಿದೇವಿರೊಂದಿಗೆ ಕೇಶವಪುರದಲ್ಲಿ ವೀರಕೇಶವನನ್ನು ಪ್ರತಿಷ್ಠಿಸಿ ದತ್ತಿ ಕೊಟ್ಟಳು (ಎ.ಕ-೭, ಶಿಕಾರಿ.೧೨೩, ಕ್ರಿ.ಶ.೧೧೫೯) ಶ್ರೀಪತಿ ಚಕ್ರಧಾರಿ ಗರುಡುತನನೆಂಬರು ದಾಕ್ಷನದ್ರಿಜಾ ತಾಪತಿ ಶೂಲಧಾರಿ ವೃಷಭಾಸನನ ಭೃಧಿ ಕೇಕ್ಷಣಂ ವಚ ಶ್ರೀಪತಿ ಪಾಶಧಾರಿ ಕಳಹಂಸಗನಷ್ಟ ಮಿಡಾಕ್ಷನೆಂದಿವರ ತ್ರೈಪುರುಷರ ತ್ರಿಲೋಕ ಜನ ಪೂಜಿತರಿಗೆ ಮಗಿಷ್ಪ ಸಿದ್ಧಿಯಂ //.ಎಂಬ ಶಾಸನ ಪದ್ಯವೊಂದು ತ್ರಿಮೂರ್ತಿಗಳ ಸಮಾನತೆಯನ್ನು ವ್ಯಕ್ತಪಡಿಸಿದೆ. (ಎ.ಕ-೭, ಶಿಕಾರಿ.೧೨೫, ಕ್ರಿ.ಶ.೧೦೦೯)

ಶೈವಧರ್ಮ:

ಭಾರತ ಖಂಡದಲ್ಲಿ ಶೈವಧರ್ಮವು ಅತ್ಯಂತ ಪ್ರಾಚೀನವಾದ ಧರ್ಮಗಳಲ್ಲೊಂದು ಶೈವೋಪಾಸನೆಯ ಇತಿಹಾಸವು ವೇದಗಳಿಗಿಂತಲೂ ಹಿಂದಕ್ಕೆ ಹೋಗುತ್ತದೆ. ಅಂದರೆ ಹರಪ್ಪ-ಮೆಹೆಂಜೋದಾರೋಗಳ ಸಂಸ್ಕೃತಿಯಾಗಿದೆ. ಶೈವದಲ್ಲಿ ವಿವಿಧ ಪಂಥಗಳನ್ನು ಕಾಣಬಹುದು. ಉದಾಹರಣೆ ಲಕುಲೀಶ, ಕಾಳಮುಖ, ಕಾಪಾಲಿಕರು ಇತ್ಯಾದಿಗಳು ಇದರ ಜೊತೆಗೆ ಆಗಮಿಕ ಶೈವ ಧರ್ಮವನ್ನು ಕೂಡ ಗುರುತಿಸಬಹುದು. ಚಾಳುಕ್ಯ ಆರನೇಯ ವಿಕ್ರಮಾದಿತ್ಯನ ದಂಡಾಧಿಪತಿ ಸರ್ವದೇವ ತನ್ನ ಸತೀ ರತ್ನ ಸಾನ್ತಿಕಬ್ಬೆಯೊಂದಿಗೆ ಬಳ್ಳಿಗಾವೆಯ ಸರ್ವೇಶ್ವರಾವಾಸಕ್ಕೆ ಇಲ್ಲಿಯೇ ವಿಮಾನಂ ನಿನ್ದು ದೆಂಬಂತಿರಿಬ್ಬಳ್ ಮಾಗೊಪ್ಪಿಗೆ ಕಳಸಂರೋಹಣ ಮೂಡಿಸಿರುವರು. (ಎ.ಕ-೭, ಶಿಕಾರಿ.೧೧೪, ಕ್ರಿ.ಶ.೧೮೯೪)

ಶಿಷ್ಟರೆಂಬ ಜಾತಕ ಕುಲಕ್ಕೆ ವರ್ಷಾಕಾಳ ಮುಖರೆಂಬ ಕಾಳಾಮುಖ ಗುರುಗಳೊಬ್ಬರನ್ನು ಕನ್ನಡ ಶಾಸನಗಳಲ್ಲಿ ಹೊಗಳಲಾಗಿದೆ. (ಎ.ಕ-೭, ಶಿಕಾರಿ.೯೯, ಕ್ರಿ.ಶ.೧೧೧೩) ಶ್ರೀಮತ್ ತ್ರಿಲೋಚನ ಪಂಡಿತ ದೇವರನ್ನು ಶ್ರೀಮದಿಟ್ಟಿಗೆಯ ಸಂತತಿಯ ಭುಜಂಗಾವಳಿಯ ಶಕ್ತಿ ಪರ್ಷಿಯ ಕಾಳಾಮುಖ ಅಗ್ರಗಣ್ಯ ಎಂದು ಕರೆದಿದೆ. (ಎ.ಕ-೭, ಶಿಕಾರಿ.೨೯೨, ಕ್ರಿ.ಶ.೧೦೭೭) ಪರ್ಷಗಳಲ್ಲಿ ಬಹುಪ್ರಸಿದ್ಧವಾದವು ಎರಡು ಶಕ್ತಿ ಪರ್ಷೆ ಮತ್ತು ಸಿಂಹಪರ್ಷೆಗಳು. ಶಕ್ತಿಪರ್ಷೆಯಲ್ಲಿ ಎರಡು ಆಯ್ನಾಯ ಅಥವಾ ಅವಳಿಗಳು. ಒಂದು ಪರ್ವತಾಯ್ನಯ ಅಥವಾ ಪರ್ವತಾವಳಿ(ಎ.ಕ-೭, ಶಿಕಾರಿ.೩೧೬, ಕ್ರಿ.ಶ.೧೧೧೭) ಒಂದು ದೇವಸ್ಥಾನದ ಅಥವಾ ಮಠದ ಸ್ಥಾನಪತಿಯ ನೇತೃತ್ವದಲ್ಲಿ ಇನ್ನೊಂದೆಡೆ ಅವನ ಮಠದ ಅಂಗವಾಗಿ ಸ್ಥಾಪಿತವಾದ ಮಠ ಸಂತತಿ ತಿಳಿಸುವವಂತೆ ಕಾಣುತ್ತದೆ. ಉದಾಹರಣೆಗೆ ಸಾರಥಿಯ ಮಠದ ಸಂತತಿಯ ಮಠ(ಎ.ಕ-೭, ಶಿಕಾರಿ.೨೪೬, ಕ್ರಿ.ಶ.೧೧೪೩) ಮೂವರ ಕೋಣೆಯ ಸಂತತಿಯವನಾದ ವಾಮಶಕ್ತಿಗೆ ಕೊಟ್ಟ ದಾನ ಶಾಸನದಲ್ಲಿ ಕೋಣೆಯ್ಯ ಆ ಮೂವರು ದೇವರು ಎಂದು ಹೇಳಿ, ಆ ಮೂವರು ದೇವರ ನೈವೇದ್ಯಕ್ಕೆ ದತ್ತಿ ಬಿಟ್ಟ ವಿಷಯವನ್ನು ಶಾಸನವೊಂದು ತಿಳಿಸುತ್ತದೆ. (ಎ.ಕ-೭, ಶಿಕಾರಿ.೧೦೮, ಕ್ರಿ.ಶ.೧೧೬೪)

ಕೆಲವು ಕಾಳಾಮುಖ ಗುರುಗಳಂತೂ ಸರ್ವಜ್ಞತ್ವದಲ್ಲಿ ಸ್ವತಃ ಲಕುಲೀಶರೇ ಆಗಿದ್ದರು (ಎ.ಕ-೭, ಶಿಕಾರಿ.೬೪, ಕ್ರಿ.ಶ.೧೮೯೪) ಒಂದು ಶಾಸನವಂತೂ ಒಂದು ಗುರು ಪರಂಪರೆಯನ್ನು ಪರ್ವತಾವಳಿಯಲ್ಲಿ ಜನಿಸಿದ ಕೇದಾರಶಕ್ತಿ ಪಂಡಿತ ದೇವನಿಂದ ಆರಂಭಿಸುತ್ತದೆ. (ಎ.ಕ-೭, ಶಿಕಾರಿ.೧೦೦, ಕ್ರಿ.ಶ.೧೧೨೯) ಕಾಶ್ಮೀರ ಶೈವ ಪ್ರಭಾವದ ಒಂದು ಹೊನಲು ಇಲ್ಲಿಯ ಶೈವ ಧರ್ಮವನ್ನು ಕ್ರಿ.ಶ.೧೦ನೇ ಅಥವಾ ೧೧ನೇ ಶತಮಾನದಲ್ಲಿ ಕೂಡಿಕೊಂಡಂತೆ ಕಾಣುತ್ತದೆ. ಕಾಶ್ಮೀರ ಪಂಡಿತದೇವ ಎಂಬ

ಗುರುವೊಬ್ಬನ ಹೆಸರು ಕ್ರಿ.ಶ.೧೧ನೇಯ ಶತಮಾನದಲ್ಲಿ ಕೂಡಿಕೊಂಡಂತೆ ಕಾಣುತ್ತದೆ. (ಎ.ಕ–೭, ಶಿಕಾರಿ.೧೯, ಕ್ರಿ.ಶ.೧೧೯೬) ಬಹುಶಃ ಇವರ ಶಿಷ್ಯವರ್ಗವನ್ನೆ ಎಂದು ಕಾಣಿಸುತ್ತದೆ. ಕಾಶ್ಮೀರ ದೇವರ ಸಂತಾನ ಎಂದು ಮುಂದೆ ಕರೆದಿರುವುದು (ಎ.ಕ–೭, ಶಿಕಾರಿ.೧೧೪, ಕ್ರಿ.ಶ.೧೧೯೬) ಮಠವಿದು ನೈಷ್ಠಿಕ ಮಠವಿ ಮಠದೊಡೆಯಂ ಬ್ರಹ್ಮಚರ‍್ಯ ಮಿಲ್ಯ ದೋಡೆದೀ ಮಠದಿಂ ಪೊರಿ ಮಡಿಸುವುದು. (ಎ.ಕ–೭, ಶಿಕಾರಿ.೨೭೬, ಕ್ರಿ.ಶ.೧೧೪೩) ಮಹಾವಿದ್ವಾಂಸರೂ, ಮಹಾತಪಸ್ವಿಗಳೂ ಆಗಿ ದೇವಸ್ಥಾನಕ್ಕೆ ದತ್ತಿಯನ್ನು ಅಂಗೀಕರಿಸುವ ವಿಷಯದಲ್ಲಿ ಸಂಪೂರ್ಣ ಅನಾಸಕ್ತರಾದ ಗುರುಗಳು(ಎ.ಕ–೭, ಶಿಕಾರಿ.೯೯, ಕ್ರಿ.ಶ.೧೧೧೩) ಇವರ ಅಭ್ಯಾಸವು ಸಿದ್ಧಾಂತ ತರ್ಕ ವ್ಯಾಕರಣಗಳನ್ನು ಮಾತ್ರವೇ ಅಲ್ಲ, ಕಾವ್ಯ ನಾಟಕ ನರ್ತನಾದಿಗಳನ್ನು ಒಳಗೊಂಡಿತ್ತು. ಕೆಲವರನ್ನಂತೂ ಸಾಹಿತ್ಯ ವಿದ್ಯಾ ಪ್ರವೀಣರ ಸರ್ವಜ್ಞ ಕಲ್ಪರು ಎಂದು ಗೌರವದಿಂದ ಕರೆದಿದೆ. (ಎ.ಕ–೭, ಶಿಕಾರಿ.೯೪ ಕ್ರಿ.ಶ.೧೧೯೪) ಎಲ್ಲಾ ಷಡ್ದರ್ಶನಗಳನ್ನೂ ಕರತಲಾಮಲಕವಾಗಿ ಮಾಡಿಕೊಂಡು ತರ್ಕ, ನಾಟಕ, ಕಾವ್ಯ, ವ್ಯಾಕರಣ, ಲಾಕುಳ ಸಿದ್ದಾಂತಗಳನ್ನು ಅಭ್ಯಾಸಿಸಿ ದೇವನದಿ ಪ್ರವಾಹದಂತೆ ಹರಿಯುವ ನೀರುಪಮೋಪನ್ಯಾಸವನ್ನು ಮಾಡುತ್ತಾ ತನ್ನಿಂದ ದೀಕ್ಷೆ ಪಡೆದು ಸಾವರ್ಧಿಸಿರುವ ಶಿಷ್ಯರ ಪರಂಪರೆಯನ್ನು ಹೊಂದಿರುವ ಸೋಮೇಶ್ವರ ಪಂಡಿತ ದೇವರಂತಹವರು (ಎ.ಕ–೭, ಶಿಕಾರಿ.೯೮, ಕ್ರಿ.ಶ.೧೧೦೩) ಪ್ರಭಾವಶಾಲಿಗಳಾಗಿದ್ದ ಅನೇಕರು ರಾಜಪೂಜಿತರಾಗಿದ್ದರು. ಚಾಳುಕ್ಯ ಚಕ್ರವರ್ತಿ ಪೆರ್ಮಾಡಿ ರಾಯನಿಗೆ ಇಂದ್ರ ಶಿವ ದೇವಾಚಾರ್ಯರು ರಾಜಗುರುಗಳಾಗಿದ್ದರು. (ಎ.ಕ–೭, ಶಿಕಾರಿ.೧೩೬, ಕ್ರಿ.ಶ.೧೧೬೦) ದಿನದಲ್ಲಿ ಮೂರು ವೇಳೆ ಭಸ್ಮಸ್ನಾನ ಕಾಣಬಹುದು (ಎ.ಕ–೭, ಶಿಕಾರಿ.೧೦೮, ಕ್ರಿ.ಶ.೧೧೬೪) ಕೂಗುವುದು, ಕುಣಿಯುವುದು, ಡುಂಡುಂಕಾರ ಎಂಬ ಶಬ್ದವನ್ನು ಮಾಡುವುದು ಇತ್ಯಾದಿ ಆಚರಣೆಗಳು ಇದ್ದವೆಂಬುದಕ್ಕೆ ಶಾಸನದ ಒಂದು ಆಧಾರವನ್ನು ಕೊಡಬಹುದು. ಶೈವ ಗುರುವೊಬ್ಬನನ್ನು ಹೊಗಳುವಾಗ ಸ್ವಸ್ತಿಯಮನಿಯಮ ಸ್ವಾಧ್ಯಾಯಧ್ಯಾನ ಧಾರಣ ಮೋನಾನುಷ್ಠಾಣ, ಜಪ ಪಡಂಗೋಪಹಾರಾದಿ ಸಂಪನ್ನರೆಂದು ಶಾಸನವೊಂದು ಹೇಳುತ್ತದೆ. (ಎ.ಕ–೭, ಶಿಕಾರಿ.೧೯, ಕ್ರಿ.ಶ.೧೦೬೬).

ಲಕುಳೇಶನು ತ್ರೈಲೋಕ್ಯವಾಧ್ಯನು ಅವನ ಶಾಸನವು ದೃಷ್ಟಿ ಅದೃಷ್ಟಿಗಳೆಂಬ ಫಲಗಳನ್ನು ಕೊಡಲು ಸಮರ್ಥವಾದುದು. ವೇದಗಳೆಂಬ ದಂಡವನ್ನು ಹಿಡಿದು ಧರ್ಮಗಳೆಂಬ ನದಿಯನ್ನು ಆಡಿಸುತ್ತಿರುವ ನಟನೇ ಲಕುಳೇಶ್ವರ. ಅವನ ಪದವಿ ಸ್ತುತಿರೂಪವಾದ ವೇದ ವ್ರತವು ಶಾಸನ ಶಿಲಾತಲದಂತೆ ಬೆಳಗುತ್ತಿದೆ (ಎ.ಕ–೭, ಶಿಕಾರಿ.೯೯, ಕ್ರಿ.ಶ.೧೧೧೩) ಶಿವಪಾದಂಭುಜ ಸೇವೆಯೇ ಸೇವೆ, ಶಿವಧರ್ಮವೇ ಧರ್ಮ, ಶಿವನೇ ಆಪ್ತ ಶಿವ, ಪೂಜೆಯೇ ವ್ಯವಸಾಯ ಮಹಾಪಂಚಾಕ್ಷರಿ ಮಂತ್ರವೇ ಮಂತ್ರ ಎಂಬುದಾಗಿ ಉಲ್ಲೇಖ ಶಾಸನದಲ್ಲಿ ಕಾಣಬಹುದು (ಎ.ಕ–೭, ಶಿಕಾರಿ.೧೮,

ಕ್ರಿ.ಶ.೧೧೫೮) ಸ್ಕಂದನಂತೆ ಶಿವಪದವನ್ನು ಎಂದರೆ ಶಿವನ ಸಾಮೀಪ್ಯವನ್ನು ಪಡೆಯುತ್ತಾನೆ. (ಎ.ಕ-೭, ಶಿಕಾರಿ.೯೨, ಕ್ರಿ.ಶ.೧೧೬೮).

ಲಕುಳೇಶ ಪಾಶುಪತರು ಷಡ್ದರ್ಶನಗಳಲ್ಲಿ ನ್ಯಾಯವನ್ನು ಬಹುಮಟ್ಟಿಗೆ ಒಪ್ಪಿಕೊಂಡಿದ್ದಾರೆ. ಶ್ರೀಮಲ್ಲಕುಳೇಶ್ವರನೆಂಬ ಯತಿಯನ್ನು ನೈಯಾಯಿಕ ಸಂರಕ್ಷಣೈಕದಕ್ಷಂ ಎಂದು ಒಂದೆಡೆ ಕರೆದಿದೆ (ಎ.ಕ-೭, ಶಿಕಾರಿ.೧೨೬, ಕ್ರಿ.ಶ.೧೦೩೬) ವಿದ್ಯಾಭರಣನೆಂಬ ಮತ್ತೊಬ್ಬ ಯತಿಯನ್ನು ಮೀಮಾಂಸಮತ ಕುಂಭಿ ಕುಂಭ ದಳನ ಪ್ರೋದ್ಯನ್ಮೃಗಾಧೀಶನೆಂದು ಕರೆದು ನೈಯಾಯಿಕ ಸಂರಕ್ಷಣೈಕದಕ್ಷಂ ಎಂದು ಒಂದೆಡೆ ಕರೆದಿದೆ. (ಎ.ಕ-೭, ಶಿಕಾರಿ.೧೦೦, ಕ್ರಿ.ಶ.೧೧೪೯) ವೈದಿಕ ಬ್ರಾಹ್ಮಣರಿಗೂ ಶೈವರಿಗೂ ಇದ್ದ ಸ್ನೇಹ ಸಂಬಂಧವನ್ನು ಕಾಣಬಹುದು, ವೇದಗಳೆಂಬ ದಂಡವನ್ನು ಹಿಡಿದು ಧರ್ಮಗಳೆಂಬ ನಟಯನ್ನೆಯನ್ನು ಆಡಿಸುತ್ತಿರುವ ನಟನೇ ಲಕುಳೇಶನೆಂಬ ವರ್ಣನೆಯನ್ನು ಆಗಲೇನೋಡಿದ್ದೇವೆ. ಶ್ರೀ ಮಲ್ಲಕುಳೀಶ್ವರ ಪಂಡಿತನೆಂಬ ಯತಿಯ ಪ್ರಶಸ್ತಿಯಿರುವ ಶಾಸನವೊಂದರ ಅಂತ್ಯದಲ್ಲಿ "ತ್ರಯೀ ಪ್ರೋಕ್ತೋಧರ್ಮ: ಕ್ರಮಘಟಿತ ವರ್ಣಾಶ್ರಮ ವಿಧಿಃ" ಎಂಬ ಮಾತುಗಳು ಬಂದಿವೆ. (ಎ.ಕ-೭, ಶಿಕಾರಿ.೨೬, ಕ್ರಿ.ಶ.೧೦೩೬)

ಲಾಕುಳ ಶೈವರ ಬಹುಮುಖ್ಯವಾದ ಚಟುವಟಿಕೆಗೆ ಅತ್ಯುತ್ತಮ ನಿದರ್ಶನವೆಂದರೆ ಬಳ್ಳಿಗಾವಿಯ ಕೇದಾರ ಮಠ. ಅದು ಕ್ರಿ.ಶ.೧೧ನೇ ಮತ್ತು ೧೨ನೇ ಶತಮಾನದ ಪ್ರಸಿದ್ಧ ಶೈವಕೇಂದ್ರವಾಗಿ ದಕ್ಷಿಣದ ಕೇದಾರವೆಂದು ಪ್ರಸಿದ್ಧವಾಗಿತ್ತು. ನೈಷ್ಠಿಕರಾದ ಬ್ರಹ್ಮಚಾರಿ ಮುನಿಗಳ ವಾಸಸ್ಥಾನವಾಗಿತ್ತು. ಅಲ್ಲಿ ನಾಲ್ಕು ವೇದಗಳ ಕೌಮರ, ಶಾಕಟಾಯನ ಪಾಣಿನಿಯ ಮುಂತಾದ ವ್ಯಾಕರಣ, ನ್ಯಾಯ, ವೈಶೀಷ್ಟೀಕ, ಮೀಮಾಂಸಾ, ಸಾಂಖ್ಯ, ಬೌದ್ಧ ಮುಂತಾದ ದರ್ಶನಗಳ, ಲಾಕುಳ ಸಿದ್ಧಾಂತ ಪತಂಜಲಿಯ ಯೋಗಶಾಸ್ತ್ರ, ಅಷ್ಟಾದಶ ಪುರಾಣ, ಕಾವ್ಯ, ನಾಟಕ ಮುಂತಾದವುಗಳ ಅಧ್ಯಯನ ನಡೆಯುತ್ತಿತ್ತು. ದೇಶದ ಎಲ್ಲೆಡೆಗಳಿಂದ ಅಲ್ಲಿಗೆ ದೀನರು, ಅನಾಥರು, ಕುರುಡರು, ಕುಂಟರು, ಮೂಕರು, ಕಥಕರು, ಗಾಯಕರು, ವಾದಕರು, ನರ್ತಕರು, ವೈತಾಲಿಕರು, ನಗ್ನ ಭಗ್ನಕ್ಷಪಣರು, ಏಕದಂಡಿ, ತ್ರಿದಂಡಿ, ಹಂಸ ಪರಮಹಂಸ ಮುಂತಾದ ಭಿಕ್ಷುಕರು ಸಾಧು ಜನರು ಬಂದು ದಾನವನ್ನು ಸ್ವೀಕರಿಸುತ್ತಿದ್ದರು. ಅಷ್ಟೆ ಅಲ್ಲ ದೇಶದ ಎಲ್ಲೆಡೆಗಳಿಂದ ಅನಾಥ ರೋಗಿ ಜನರು ಬಂದು ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುತ್ತಿದ್ದರು. ಎಲ್ಲ ರೀತಿಯ ಜನರಿಗೂ ಅದು ಒಂದು ಅಭಯ ಸ್ಥಾನವಾಗಿತ್ತು. (ಎ.ಕ-೭, ಶಿಕಾರಿ.೧೦೨, ಕ್ರಿ.ಶ.೧೧೬೨) ಒಂದು ರೀತಿಯಲ್ಲಿ ಬಳ್ಳಿಗಾವಿ ಶೈವರ ಶ್ರವಣಬೆಳಗೊಳವಾಗಿತ್ತು.

ಚಾಳುಕ್ಯರಾಜ ಜಯಸಿಂಹನ ಕಾಲದ ಕ್ರಿ.ಶ.೧೦೩೬ ರ ಶಾಸನದಲ್ಲಿ ದತ್ತಿ ನೀಡಿದ್ದನ್ನು ಉಲ್ಲೇಖಿಸಲಾಗಿದೆ. ಲಕುಳೇಶ್ವರ ಯತಿಯು ಸಮಸ್ತ ತರ್ಕಾದಿ ಶಾಸ್ತ್ರಗಳಲ್ಲಿ ಪರಿಣತಿ ಹೊಂದಿದ್ದವನು ಇತ್ಯಾದಿ ವರ್ಣನೆಗಳಿಂದ ಕೂಡಿದ ಇತ ಜಂಭದ ಪಂಡಿತರಿಗೆ ಯಮಪಾಶದಂತೆಯೂ, ಜೈನವಾದಿಗಳಿಗೆ ಧೂಮಕೇತುವಿನಂತೆಯೂ ಇದ್ದ. ವಾದಿ ರುದ್ರಗಣ ಲಕುಳೀಶ್ವರನ ಚಿತ್ರಣ ಕಾಳಾಮುಖರು ವಿವಿಧ ಪಂಥಕದವರೊಂದಿಗೆ ವಾದದಲ್ಲಿ ಗೆದ್ದು ತಮ್ಮ ನೆಲೆಯನ್ನು ಗಟ್ಟಿಗೊಳ್ಳಿಸಿಕೊಳ್ಳಲು ಅಗತ್ಯವಾಗಿದ್ದ ವಾತಾವರಣವನ್ನು ಧ್ವನಿಸುತ್ತದೆ.(ಎ.ಕ-೭, ಶಿಕಾರಿ.೧೨೬, ಕ್ರಿ.ಶ.೧೦೩೬) ಲಕುಳೀಶ ಯತಿಯು ಸೋಲಿಸಿದ ಕೆಲವು ಎದುರಾಳಿಗಳೆಂದರೆ ತ್ರಿಪುರ, ಆಕಳಂಕ, ವಾದಿಘರಟ್ಟ, ಮಾಧವಭಟ್ಟ, ಜ್ಞಾನಾನಂದ, ವಿಶ್ವಾನಲ, ಅಭಯಚಂದ್ರ, ವಾದೀಭಸಿಂದು ವಾದಿರಾಜ ಹಾಗೂ ಅಯವಾದಿ ಹೀಗೆ ಲಕುಳೀಶನಿಂದ ಗುರುತಿಸಲ್ಪಟ್ಟಿರುವ ಪಂಚಮಠದ ಗುರುಪರಂಪರೆಯಲ್ಲಿ ಶ್ರೀಕಂಠ ಪಂಡಿತ, ಕ್ರೀಯಾಶಕ್ತಿ ಪಂಡಿತ, ಸರ್ವೇಶ್ವರ ಪಂಡಿತ, ರುದ್ರಶಕ್ತಿ ಪಂಡಿತ ಮೊದಲಾದವರು ಪ್ರಮುಖವಾಗಿ ಕಾರ್ಯನಿರ್ವಹಿಸಿದ್ದಾರೆ. ಇದರ ಬಗ್ಗೆ ಕ್ರಿ.ಶ.೧೦೩೬ರಿಂದ೧೧೮೧ರ ಶಾಸನಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ.

ಭಾರತೀಕರ್ಣಾಪೂರ ರುದ್ರಾವತಾರ, ಕಾಳಾಮುಖರ ಗಂಡರಾದ ಕ್ರಿಯಾಶಕ್ತಿ ಪಂಡಿತ ದೇವರ ಕಾಲವನ್ನು ತೊಳೆದು ಬೆನಕನ ಕೊಳದ ಸಿದ್ದೇಶ್ವರ ದೇವರ ದೇಗುಲವನ್ನು ಮಾಡಿಸಿ ಅಲ್ಲಿನ ಗಂಧ ಧೂಪ ನೈವೇದ್ಯಕ್ಕೆ ಹಾಗೂ ತಪೋಧನರಾದ ವಿದ್ಯಾರ್ಥಿಗಳ ಆಹಾರ ಮತ್ತು ವಸ್ತ್ರಕ್ಕಾಗಿ ಬೆಣ್ಣೆಯ ಕೆರೆಯ ಕೆಳಗಿನ ಗದ್ದೆಯನ್ನು ದತ್ತಿ ನೀಡಿರುವ ಉಲ್ಲೇಖವಿದೆ (ಎ.ಕ-೭, ಶಿಕಾರಿ.೧೫೩, ಕ್ರಿ.ಶ.೧೦೩೯). ಕ್ರಿ.ಶ ೧೦೪೭ರ ಶಾಸನದಲ್ಲಿ ಚಾವುಂಡರಾಯನು ಬಳ್ಳಿಗಾವಿಯ ಶ್ರೀಮಜ್ಜಗದೇಕ ಮಲ್ಲೇಶ್ವರ ದೇವರ ಮುಂದೆ ಗಂಡ ಭೇರುಂಡ ಸ್ತಂಭವನ್ನು ನಿಲ್ಲಿಸಿ ಶ್ರೀಮದಾ ನಾತ ಶಿವಾಚಾರ್ಯರ ಕಾಲ್ತೊಳೆದು ದತ್ತಿ ಬಿಡಲಾಗಿದೆ. (ಎ.ಕ-೭, ಶಿಕಾರಿ.೧೮೧, ಕ್ರಿ.ಶ.೧೦೪೭) ಶ್ರೀಮದ್ ನಂದಿ ಪಟ್ಟಣ ರಾಜಧಾನಿ ಬಳ್ಳಿಗಾವಿಯ ಪಟ್ಟಣ ಮಧ್ಯದಲ್ಲಿ ವಡ್ಡವ್ಯವಹಾರಿ ಹಾಲಕಚ್ಚಯ ಸೋವಿಸೆಟ್ಟಿಲಿಂಗ ಪ್ರತಿಷ್ಠಾಪನೆ ಮಾಡಿ ಅದಕ್ಕೆ ಅಭಿನವ ಸೋಮೇಶ್ವರ ದೇವರೆಂದು ಹೆಸರನ್ನಿಟ್ಟು ಪಟ್ಟಣದ ಮೂಲಿಗಜ್ಞಾನ ಶಿವ ದೇವರ ಕಲಾಂ ಕರ್ಚಿ ದತ್ತಿ ನೀಡಿದ್ದನು. ಕಾಲಾಂತರದಲ್ಲಿ ಆ ದೇವಾಲಯ ಜೀರ್ಣವಾದಾಗ ಆ ಸಂದರ್ಭದಲ್ಲಿ ಪಟ್ಟಣ ಸ್ವಾಮಿಗಳಾಗಿದ್ದ ಮೆಚ್ಚಸೆಟ್ಟಿ, ಕೀರ್ತಿಸೆಟ್ಟಿ, ಪಂಚಮಠಂ ಹಿರಿಯಮಠಂ ಮೊದಲಾದ ಸಮಸ್ತರ ಸಮ್ಮುಖದಲ್ಲಿ ನಾನಾ ದೇಶದ ವ್ಯಾಪಾರಿಗಳು ಮೊದಲಾದವರು ಸೇರಿ ಆ ಹಿಂದಿನ ಸೋಮೇಶ್ವರ ದೇವಾಲಯಕ್ಕೆ ಗವಿರೇಶ್ವರ ದೇವರೆಂದು ಹೆಸರನ್ನಿಟ್ಟು ಜೀರ್ಣೋದ್ಧಾರ ಮಾಡಿದ್ದಾರೆ. (ಎ.ಕ-೭, ಶಿಕಾರಿ.೧೧೮, ಕ್ರಿ.ಶ.೧೦೫೪)

ಕ್ರಿ.ಶ.೧೦೯೯ರಿಂದ ೧೯೯೮ರ ವರೆಗೆ ಬಳ್ಳಿಗಾವಿಯ ಶಾಸನಗಳಲ್ಲಿ ದೊರಕುವ ಕಾಳಾಮುಖ ಪಂಡಿತರ ಕಾಲ ಮತ್ತು ಪಟ್ಟಿ ಹಾಗೂ ದೇಗುಲಗಳು ಈ ಕೆಳಗಿನಂತೆ ಇವೆ.

ಮೂಲಿಗ ಶಿವಶಕ್ತಿ(ಕ್ರಿ.ಶ.೧೦೧೯)
ನಂದಿಕೇಶ್ವರ ದೇಗುಲ
|
ವಾದಿರುದ್ರಗಣ ಲಕುಳೀಶ್ವರ ಪಂಡಿತ(ಕ್ರಿ.ಶ.೧೦೩)
ಪಂಚಲಿಂಗ ದೇವರ ದೇಗುಲ
|
ಕ್ರಿಯಾಶಕ್ತಿ ಪಂಡಿತ (ಕ್ರಿ.ಶ.೧೦೩೯)
ಸಿದ್ದೇಶ್ವರ ದೇವರ ದೇಗುಲ
|
ಮೂಲಿಗಜ್ಞಾನ ಶಿವದೇವರು (ಕ್ರಿ.ಶ.೧೦೫೪)
ಸೋಮೇಶ್ವರ ದೇವರ ದೇಗುಲ
|
ಸರ್ವೇಶ್ವರ ಪಂಡಿತ ದೇವರು(ಕ್ರಿ.ಶ.೧೦೫೪)
ಪಂಚಲಿಂಗ ಮಠ
|
ಜ್ಞಾನಶಕ್ತಿ ದೇವರು(ಕ್ರಿ.ಶ.೧೦೫೪)
ತ್ರಿಪುರಾಂತಕ ಮಠ
|
ಕೇದಾರ ಶಕ್ತಿ,ರುದ್ರಭರಣ ವಾಲ್ಮೀಕಿ(ಕ್ರಿ.ಶ.೧೦೭೮)
|
ಕೇದಾರ ಶಕ್ತಿ -ಶ್ರೀಕಂಠ ಪಂಡಿತ-ಸೋಮೇಶ್ವರ ಪಂಡಿತ(ಕ್ರಿ.ಶ.೧೯೯೮)
ನಗರೇಶ್ವರ ದೇಗುಲ
|
ಕಾಶ್ಮೀರ ದೇವರ ಸಂತಾನ -ತ್ರಿಲೋಚನ ಮುನಿವರೇಶ್ವರ ದೇವ(ಕ್ರಿ.ಶ.೧೯೯೮)
ಕೇದಾರಶಕ್ತಿ
|
ಶ್ರೀಕಂಠ ಪಂಡಿತ(ಕ್ರಿ.ಶ.೧೯೯೮)
ಪಂಚಲಿಂಗ ಮಠ

ಬಂದಳಿಕೆಯ ಮಾಚೆಯ ನಾಯಕ ಬರ್ಮಕೂರ ಹಿರಿಯ ಮಠದ ಸ್ವಾಮಿಯವರಿಂದ ಅನುಮತಿ ಪಡೆದು ಕೇವಲ ಹತ್ತು ವರ್ಷಗಳಲ್ಲಿ ಎರಡು ಶಿಲಾ ಶಿವ ದೇವಾಲಯಗಳನ್ನು ನಿರ್ಮಿಸಿದ. ನಾಗರ ಖಂಡದಲ್ಲಿ ಕನ್ನಡ ನಾಡು ಕಂಡ ಜರ್ವ ಮದತಾಳವರ ಎಂಬುದು ಭೋಜರಾಜ ರವರ ಅಭಿಪ್ರಾಯ. ಸೋಮದೇವ ಅರಸರ ಹೆಸರು ಶ್ರೀ ಸೋಮೇಶ್ವರ ದೇವರೆಂದು ಹೆಸರನ್ನಿಟ್ಟು ದೇವರ ಅಂಗಭೋಗಕ್ಕೆ ಆ ದೇವಾಲಯಕ್ಕೆ ದತ್ತಿ ಬಿಟ್ಟಿದ್ದಾನೆ. ಬಂದಳಿಕೆ ಸೋಮೇಶ್ವರ ದೇವಾಲಯವು ಕ್ರಿ.ಶ.೧೧೬೩ ರಿಂದ ಕಾಳಾಮುಖ ಕೇಂದ್ರವಾಗಿ ಬೆಳೆಯಿತು. (ಎ.ಕ-೭, ಶಿಕಾರಿ.೧೪೨, ಕ್ರಿ.ಶ.೧೧೬೩) ಹೆಗ್ಗಡೆ ನಾರಾಣದೇವನು ಮುಚ್ಚುಂಡಿಯ(ಮಾಯತಮ್ಮನ ಮುಚ್ಚಡಿ) ಶ್ರೀ ರಾಮೇಶ್ವರ ದೇವರ ನಂದಾದೀವಿಗೆಗೆಂದು ಸದ್ಯೋಜಾತ ದೇವರ ಶ್ರೀಪಾದ ಆರಾಧಕರಾದ ರುದ್ರಶಕ್ತಿ ದೇವರ ಕೈಯ್ಯಾಲುಧಾರಾಪೂರ್ವತಕಂ ಮಾಡಿ ಒಂದು ಗಾಣದ ತೇರೆಯ ಬಿಟ್ಟದ್ದಾರೆ. (ಎ.ಕ-೭, ಶಿಕಾರಿ.೨೭೬, ಕ್ರಿ.ಶ.೧೦೮೬) ಮತ್ತಿಕೋಟೆಯ ಮಲ್ಲಿಕಾರ್ಜುನ ದೇವರ ಪ್ರತಿಷ್ಠಾಪನೆ ಮಾಡಿ ನೈವೇದ್ಯಕ್ಕೆ ಪೂಜೆ ಮತ್ತು ತಪೋಧನರ ಆಹಾರ ವಸ್ತ್ರಕ್ಕಾಗಿ ದತ್ತಿ ಬಿಡಲಾಗಿದೆ. ಇಲ್ಲಿ ಇಟ್ಟಿಗೆಯ ಸಂತತಿ ಭುಜಂಗಾವಳಿಯ ಶಕ್ತಿ ಪರ್ಷೆಯ(ಪರ್ಷೆ=ಬಹುಶಃ ಪರಿಷತನ ತದ್ಬವ) ಕಾಳಾಮುಖರ ಅಗ್ರಗಣ್ಯರಾದ ಶ್ರೀಮತ್ ತ್ರಿಲೋಚನ ಪಂಡಿತ ದೇವರ ಶಿಷ್ಯರಲ್ಲಿ ಅಗ್ರಗಣ್ಯರಾದ ಶ್ರೀಮದ್ ವೀರೇಶ್ವರ ಪ್ರಸ್ತಾಪವಾಗಿದೆ. (ಎ.ಕ-೭, ಶಿಕಾರಿ.೨೯೨, ಕ್ರಿ.ಶ.೧೦೭೭)

ವೈಷ್ಣವ ಧರ್ಮ:

ಶ್ರೀ ಗೋವಿಂದ ರಾಜನೆಂಬ ವೈಷ್ಣವ ಚೂಡಾಮಣಿಯ ಹೆಸರು ಶಾಸನದಲ್ಲಿ ಶಿವ ಮತ್ತು ವಿಷ್ಣುಗಳ ಸ್ತೋತ್ರದಿಂದ ಆರಂಭವಾಗಿದೆ (ಎ.ಕ-೭, ಶಿಕಾರಿ.೧೩೭, ಕ್ರಿ.ಶ.೧೧೧೪) ಬಳ್ಳಿಗಾವಿಯ ವೀರಕೇಶವ ದೇವರ ದೇವಾಲಯಕ್ಕೆ ಶೈವರೇ ಸ್ಥಾನಿಕರಾಗಿದ್ದರು. (ಎ.ಕ-೭, ಶಿಕಾರಿ.೧೨೩, ಕ್ರಿ.ಶ.೧೧೪೫).

ಶಿಕ್ಷಣ:

ಕರ್ನಾಟಕದ ಪ್ರಥಮ ಅಗ್ರಹಾರ ತಾಳಗುಂದವಾಗಿದ್ದು, ಮಯೂರಶರ್ಮನೇ ಇದರ ಸ್ಥಾಪಕನೆಂದು ತಿಳಿದು ಬರುತ್ತದೆ. ಬ್ರಾಹ್ಮಣ ಕುಟುಂಬಗಳಿಗೆ ದತ್ತಿಯಾಗಿ ನೀಡಿದ ಗ್ರಾಮ ಅಗ್ರಹಾರ. ಈ ಕುಟುಂಬಗಳ ಮುಖ್ಯಸ್ಥರನ್ನು ಶಾಸನಗಳು ಮಹಾಜನರು ಎಂದು ಕರೆದಿವೆ. ತಾಳಗುಂದದ ಒಂದು ಶಾಸನ ಇವರು ವೇದ- ವೇದಾಂತ ಉಪಾರಾಗ ಮೀಮಾಂಸ ಶಾಸ್ತ್ರ ಪಟ್ತರ್ಕ ಸ್ಮೃತಿ ಪುರಾಣ ಕಾವ್ಯ ನಾಟಕ ವ್ಯಾಸಂಗಗಳಾಗಿದ್ದನ್ನು ತಿಳಿಸುತ್ತದೆ. (ಎ.ಕ-೭, ಶಿಕಾರಿ.೧೭೮, ಕ್ರಿ.ಶ.೧೧೯೬) ಅಗ್ರಹಾರ ಊರು ಬ್ರಹ್ಮಪುರಿ ಕೇರಿಗಳು ಬ್ರಾಹ್ಮಣರ ವಸತಿಯಿಂದಾಗಿ ವಿದ್ಯಾ ಸಂಪತ್ತಿನಿಂದ ತುಂಬಿದ್ದರು. ನೇರವಾಗಿ

ಇವರ ವಿದ್ಯೆಯ ಕೇಂದ್ರಗಳಾಗಿದ್ದವು. ಘಟಿಕಾಸ್ಥಾನಗಳು ಬೌದ್ಧ ವಿಹಾರಗಳಂತೆ ಹಿಂದೂ ಘಟಿಕಾಸ್ಥಾನಗಳು ವಿದ್ಯಾ ಪ್ರಸಾರದಲ್ಲಿ ಮಹತ್ವದ ಪಾತ್ರವಹಿಸಿವೆ. ಕದಂಬ ಮಯೂರಶರ್ಮ ಕಂಚಿಯ ಘಟಿಕಾಸ್ಥಾನದಲ್ಲಿ ವಿದ್ಯಾಭ್ಯಾಸ ಮಾಡಿದ್ದು ಇತಿಹಾಸ ಪ್ರಸಿದ್ಧ ಮಾತು . ತಾಳಗುಂದ ಪ್ರಸಿದ್ಧ ಘಟಿಕಾಸ್ಥಾನವಾಗಿತ್ತು.

ಹೀಗೆ ಮಹಾಜನರಿಂದ ಒಂದು ಕಡೆಗೆ ವೈದಿಕ ವಿದ್ಯಾಭ್ಯಾಸದ ಘಟಿಕಾಸ್ಥಾನಗಳು ಬೆಳೆದಂತೆ ಮುಂದೆ ಶೈವ ಲಕುಲೀಶ. ಪಾಶುಪತರಿಂದ ಮಠಗಳು ವಿದ್ಯೆ ಕೇಂದ್ರಗಳಾಗಿ ಅಸ್ತಿತ್ವಕ್ಕೆ ಬಂದವು. ಈ ಮಠಗಳೇ ವ್ಯವಸ್ಥಿತವಾಗಿ ಬೆಳೆದು ಬಂದಿದ್ದು ಕ್ರಿ.ಶ.೯ನೇ ಶತಮಾನದಿಂದ ಈಚೆಗೆ ಪ್ರಾಚೀನ ಕಾಲದ ಗುರುಕುಲ ಪದ್ಧತಿ ಮಠದ ವಿದ್ಯಾಭ್ಯಾಸ ಪದ್ಧತಿಗೆ. ಪ್ರೇರಣೆಯಾಗಿರಬೇಕು. ಮಠದ ಆಡಳಿತ ಸೂತ್ರಧಾರ ಗುರು ಅಥವಾ ಆಚಾರ್ಯ ಬ್ರಹ್ಮಚಾರಿಗಳಾಗಿದ್ದು, ಮಠದ ಪಾವಿತ್ರ್ಯತೆಯನ್ನು ವಿದ್ಯೆಯ ಪ್ರಸಾರವನ್ನು ನೋಡಿಕೊಳ್ಳುತ್ತಿದ್ದರು. ಇಲ್ಲಿಯ ಅಭ್ಯಾಸಗಳಲ್ಲಿ ತಪೋಧನರು ಮತ್ತು ಮಾಣಿಗಳೆಂದು ಎರಡು ವರ್ಗ ವಿದ್ಯಾಭ್ಯಾಸ ಮುಗಿದ ಬಳಿಕ ಈ ವಿದ್ಯಾರ್ಥಿ ತಪೋಧನರು ಬ್ರಹ್ಮಚಾರಿಗಳಾಗಿ ಆಚಾರ್ಯಸ್ಥಾನ ವಹಿಸಿಕೊಳ್ಳುತ್ತಿದ್ದರು. ಮಾಣಿಗಳು ಗೃಹಸ್ಥಾಶ್ರಮ ಕೈಗೊಳ್ಳುತ್ತಿದ್ದರು. ಇಲ್ಲಿ ನಾಲ್ಕು ವೇದಗಳು, ಕೌಮರ, ಶಾಕಟಾಯನ, ಪಾಣಿನಿಯ ಮುಂತಾದ ವ್ಯಾಕರಣಗಳು, ನ್ಯಾಯ, ವೈಶೇಷಿಕ, ಮೀಮಾಂಸೆ, ಸಾಂಖ್ಯ, ಬೌದ್ಧ ಮುಂತಾದ ದರ್ಶನಗಳು ಲಾಕುಳ ಸಿದ್ದಾಂತ ಪಾತಂಜಲಿ, ಯೋಗಶಾಸ್ತ್ರ, ಅಷ್ಟದಶ ಪುರಾಣ, ಕಾವ್ಯ, ನಾಟಿಕ, ನಾಟಕಗಳ ಅಧ್ಯಯನ ನಡೆಯುತ್ತಿತ್ತು. ಈ ಮಠಗಳಲ್ಲಿ ಬಳ್ಳಿಗಾವಿಯ ಕೋಡಿಮಠ, ಪಂಚಮಠ, ಹಿರಿಯಮಠ, ಬೇರುಂಡೇಶ್ವರ ಮಠ, ಪಂಚಲಿಂಗ ಮಠ, ತ್ರಿಪುರಾಂತಕೇಶ್ವರ ಮಠ ಮುಖ್ಯ ಪಾತ್ರವಹಿಸಿದ್ದವು (ಎ.ಕ-೭, ಶಿಕಾರಿ.೧೦೨, ಕ್ರಿ.ಶ.೧೧೬೨)

ಪ್ರಾಚೀನ ಕರ್ನಾಟಕದಲ್ಲಿ ನಡೆಯುತ್ತಿದ್ದ ಪ್ರಾಥಮಿಕ ವಿದ್ಯಾಭ್ಯಾಸದ ಬಗೆ ಹೆಚ್ಚಿನ ಆಧಾರಗಳಲ್ಲಿ ಮಗುವಿನ ಚೂಡಾಕರ್ಮವಾದ ನಂತರ ಅಕ್ಷರಾಭ್ಯಾಸ ಆರಂಭವಾಗಿ ಎಂಟು ವರ್ಷಕ್ಕೆ ಓದು ಬರಹ ಸಾಮಾನ್ಯ ಗಣಿತ, ನಿಘಂಟು, ವ್ಯಾಕರಣ ಮುಂತಾದ ಬಾಲಶಿಕ್ಷೆಗಳು ದೇಶ ಭಾಷೆಯಲ್ಲಿ ಕಲಿಸಲ್ಪಡುತ್ತಿದ್ದವು. ಕೆಲವು ಶಾಸನಗಳಲ್ಲಿ ಬಾಲಶಿಕ್ಷೆ, ಕನ್ನಡಕ್ಷರ ಶಿಕ್ಷೆಯ ಉದಾಹರಣೆಗಳು ಬರುವುದುಂಟು. ಕನ್ನಡಅಕ್ಷರ ಶಿಕ್ಷೆಯ ಉಪಾಧ್ಯಾಯನಿಗೆ ಐದು ಗದ್ಯಾಣ ಸಂಭಾವನೆ ನೀಡಿದೆ. (ಎ.ಕ-೭, ಶಿಕಾರಿ.೧೮೫, ಕ್ರಿ.ಶ.೧೧೫೮) ಚಾಳುಕ್ಯ ವಿಕ್ರಮಾಧಿತ್ಯನ ಮಡದಿ ಲಚ್ಚಲದೇವಿ ಭುವನ ವಿದ್ಯಾಧರಿ, ಸಕಲ ಕಾಳಾಧರಿ, ಸಂಗೀತಕ ಪ್ರಸಂಗ ವಿವೇಕ ಚೂಡಾಮಣಿಯೆಂಬ ಬಿರುದನ್ನು ಗಳಿಸಿಕೊಂಡಳು. ಕ್ರಿ.ಶ.೧೦೭೦ರ ಶಾಸನವೊಂದು ಇವಳ ನೃತ್ಯ ಕಲಾ ಕೌಶಲ್ಯವನ್ನು"ಪೊಚ್ಚ ಪೊಸದೇಸೆ ಮಾರ್ಗದೊಳ್ ಅಚ್ಚರಿ ರಸಭಾವ

ಮಾಜೆಬಹುವಿಧಿಗತಿಯೋ...., ಗದೋಳಾ ಗಚ್ಚಣೆ ನಿಬ್ಬಾರಣ ಪಾತ್ರಮೆನಿಸಿದ ಪಾತ್ರ, ಹೀಗೆ ಹೊಗಳಿಕೆ ವ್ಯಕ್ತಪಡಿಸಿದೆ. (ಎ.ಕ-೭, ಶಿಕಾರಿ.೧೧೯, ಕ್ರಿ.ಶ.೧೦೭೦)

ವಿದ್ಯಾದಾನವನ್ನು ಕುರಿತು ಬಳ್ಳಿಗಾವಿ ಊರುಗಳ ಶಾಸನಗಳ ಪ್ರಸ್ತಾಪಿಸಿದೆ. ವಿದ್ಯಾದಾನದ ಸಲುವಾಗಿ ನೀಡಲ್ಪಟ್ಟ ಭೂಮಿದಾನವನ್ನೆ ವಿಶೇಷವಾಗಿ ಈ ಶಾಸನಗಳು ದಾಖಲಿಸಿವೆ. (ಎ.ಕ-೭, ಶಿಕಾರಿ.೧೩೩, ಕ್ರಿ.ಶ.೧೧೩೧) ವಿದ್ಯಾಕೇಂದ್ರಗಳಲ್ಲಿ ವಿದ್ಯಾದಾನ ಮಾಡುವುದಷ್ಟೆ ಮುಖ್ಯ ವಿದ್ಯೆಯನ್ನು ಬೋಧಿಸುವ ಗುರುಗಳಿಗೆ ಅದರ ಉಸ್ತುವಾರಿಯ ಜವಾಬ್ದಾರಿ. ಆದ್ದರಿಂದ ವಿದ್ಯಾಕೇಂದ್ರದ ಪ್ರಧಾನ ಭಾಗವಾಗಿದ್ದ ದೇವಾಲಯ, ಮಠ ಇವುಗಳ ನಿರ್ವಹಣೆಯ ಜವಾಬ್ದಾರಿಯಿಂದ ಮುಕ್ತರಾಗಲು ಗುರುಗಳು ಯೋಚಿಸುತ್ತಿದ್ದುದಕ್ಕೆ ಬಳ್ಳಿಗಾವಿಯ ಒಂದು ಶಾಸನ ಒಳ್ಳೆಯ ಉದಾಹರಣೆಯಾಗಿದೆ. (ಎ.ಕ-೭, ಶಿಕಾರಿ.೧೦೦, ಕ್ರಿ.ಶ.೧೧೨೯) ವಿದ್ಯಾಭ್ಯಾಸದ ಸಂದರ್ಭದಲ್ಲಿ ಬಹುಮುಖ್ಯವಾಗುವವರು ಗುರು ಮತ್ತು ಶಿಷ್ಯ. ಅವರ ಜೀವನ ನಿರ್ವಹಣೆಗೆ ಅನುಕೂಲಗಳು ಒದಗಿದರೆ ವಿದ್ಯಾಭ್ಯಾಸವು ನಿರಾತಂಕವಾಗಿ ನಡೆಯುತ್ತದೆ. ಊಟ ವಸತಿಗಳಿಗಾಗಿಯೇ ಗುರು-ಶಿಷ್ಯರು ತೊಂದರೆ ಅನುಭವಿಸಿದರೆ ವಿದ್ಯಾಭ್ಯಾಸವು ಸುಗಮವಾಗಿ ನಡೆಯುವುದೆ ಇಲ್ಲ. ಇದರಿಂದಾಗಿ ವಿದ್ಯಾಭ್ಯಾಸವು ನಿರಂತರವಾಗಿ ನಡೆಯಲು ಗುರು-ಶಿಷ್ಯರ ಜೀವನಾವಶ್ಯಕತೆಗಳಿಗೆ ದಾನಿಗಳು ವ್ಯವಸ್ಥೆ ಮಾಡುತ್ತಿದ್ದರು. ತಪೋಧನರ ವಿದ್ಯಾರ್ಥಿಗಳ ಆಶನ, ಅಚ್ಛಾದನ, ಪದ್ಯ ಔಷಧಿಗಳಿಗಾಗಿ ಭೂಮಿದಾನ ಮಾಡಿರುವುದನ್ನು ದೇವೂರಿನ ಎರಡು ಶಾಸನವು ಉಲ್ಲೇಖಿಸಿದೆ. (ಎ.ಕ-೭, ಶಿಕಾರಿ.೧೨೬, ಕ್ರಿ.ಶ.೧೦೩೬)

ಬೇಗೂರಿನ ಒಂದು ಶಾಸನವು ಮಲ್ಲಿಕಾರ್ಜುನ ದೇವರ ಮಠದ ವಿದ್ಯಾರ್ಥಿಗಳ ಆಹಾರ ದಾನದ ಸತ್ರಕ್ಕೆ ದಾನ ನೀಡಿರುವುದನ್ನು ಉಲ್ಲೇಖಿಸಿದೆ. ವಿದ್ಯಾ ದಾನದ ಸತ್ರದಲ್ಲಿ ಗುರು ಶಿಷ್ಯರೆಲ್ಲರ ಆಹಾರ ದಾನಕ್ಕೂ ತಪೋಧನ ಸತ್ರದಲ್ಲಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿತ್ತೆಂದೂ ತಿಳಿಯುತ್ತದೆ. ಬೇಗೂರಿನ ಶಾಸನವು ಮಠವು ದೇವಾಲಯ ಸಂಬಂಧಿಯಾಗಿದ್ದುದನ್ನು ಮಠದಲ್ಲಿ ವಿದ್ಯಾರ್ಥಿಗಳು ಇದ್ದುದನ್ನು ಸ್ಪಷ್ಟವಾಗಿ ತಿಳಿಸಿದೆ. (ಎ.ಕ-೭, ಶಿಕಾರ್ರಿ.೯೪, ಕ್ರಿ.ಶ.೧೧೯೪) ಬಂದಳಿಕೆ ಶಾಸನದಲ್ಲಿ ಬಂದಳಿಕೆಯ ಅಗ್ರಹಾರದ ಜನರನ್ನು -ನಿಖಿಳ ವೇದ ಪುರಾಣ, ನೀತಿಶಾಸ್ತ್ರ, ತರ್ಕಗಮ, ಕಾವ್ಯ, ನಾಟಕ, ಕಥಾಸ್ಮೃತಿ, ಯಜ್ಞ ವಿಧಾನಮಂ ಮನೋರಾಗ ದಿನೋದಿಸುವಶೇಷ ಮಹಾಜನರು ಎಂದು ಪ್ರಶಂಸಿಸಿದೆ.

ಅಗ್ರಹಾರ :

ಹೆಚ್ಚು ಪರಿಚಿತವಾದ ಅಗ್ರಹಾರಗಳು ಕಡೆಗೆ ಗಮನಿಸಿದಾಗ ಶಿವಮೊಗ್ಗ ಜಿಲ್ಲೆಯ ತಾಳಗುಂದ ಅಗ್ರಹಾರವೇ ಪ್ರಾಚೀನವಾದ ಅಗ್ರಹಾರದಲ್ಲಿ ಪ್ರಸಿದ್ಧಿಯಾಗಿದೆ. ಇದನ್ನು

ಮಯೂರಶರ್ಮನ ಪೂರ್ವಕರಾದ ಮುಕ್ಕಣ್ಣ ಕದಂಬರು. ಉತ್ತರದ ಅಹಿಛತ್ರ ಎಂಬ ಅಗ್ರಹಾರದಿಂದ ೩೨ ಬ್ರಾಹ್ಮಣರ ಕುಟುಂಬಗಳನ್ನು ಕರೆದುಕೊಂಡು ಬಂದು ತಾಳಗುಂದದ ಅಗ್ರಹಾರದಲ್ಲಿ ನೆಲೆಸುವಂತೆ ಮಾಡಿದನು. (ಎ.ಕ-೭, ಶಿಕಾರಿ.೧೭೮, ಕ್ರಿ.ಶ.೧೯೯೧) ಚಾಳುಕ್ಯ ತ್ರಿಭುವನ ಮಲ್ಲದೇವನ ಕಾಲದಲ್ಲಿ ಶಿಕಾರಿಪುರ ತಾಲ್ಲೂಕು ಬೇಗೂರು ಅಗ್ರಹಾರದಲ್ಲಿ ಸಾವಿರದ ಮುನ್ನೂರಕ್ಕೂ ಅಧಿಕ ಸಂಖ್ಯೆಯ ವೈದಿಕ ವಿದ್ವಾಂಸರಿದ್ದರೆಂದು ಇಲ್ಲಿಯ ಶಾಸನದಲ್ಲಿದೆ. ಇದೇ ಬೇಗೂರ ಅಗ್ರಹಾರದ ದೇವಸ್ಥಾನವೂ ಸಹ ಒಂದು ಕಲಿಕೆಯ ಮಠವಾಗಿತ್ತು. ಮಹಾ ಮಂಡಳೇಶ್ವರ ಲಕ್ಷರಸನು ಕ್ರಿ.ಶ.೧೦೬೮ರಲ್ಲಿ ಇಲ್ಲಿಯ ವಿದ್ಯಾರ್ಥಿಗಳ ಆಹಾರಕ್ಕಾಗಿ ಭೂದಾನ ನೀಡಿದ್ದನು. (ಎ.ಕ-೭, ಶಿಕಾರಿ.೧೩, ಕ್ರಿ.ಶ.೧೦೬೮) ಸ್ಥಾನ ಕುಂದೂರು ಈ ಶಾಸನದ ಪ್ರಕಾರ ಅನಾದಿ ಅಗ್ರಹಾರ ಇನ್ನೊಂದು ಅಗ್ರಹಾರವಾದ ಕೊಡಗನೂರನ್ನು ದಕ್ಷಿಣದ ಐಹೊಳೆ ಎಂದು ಕರೆದಿದೆ. (ಎ.ಕ-೭, ಶಿಕಾರಿ.೧೭೭, ಕ್ರಿ.ಶ.೧೦೨೯) ಒಂದು ಊರನ್ನು ಅಗ್ರಹಾರವಾಗಿ ಮಾಡಿ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟರೆ ಬಹಳ ಪುಣ್ಯ ಬರುತ್ತದೆಂದು ರಾಜರು ನಂಬಿದ್ದರು. ಅದರಂತೆ ಕದಂಬ ರಾಜ ಶ್ರೀ ವೀರಸೋಮ ಭೂಮಿಪತಿಯ ಮೂರು ಹಳ್ಳಿಗಳೊಡಗೂಡಿದ ಕೆಲ್ಲಿಗೊಂಡ ಎಂಬ ಗ್ರಾಮದ ಸರ್ವಸ್ವಾಮ್ಯವನ್ನು ಎಪ್ಪತ್ತಾರು ಬ್ರಾಹ್ಮಣರಿಗೆ ಬಿಟ್ಟು ಕೊಡುತ್ತಾರೆ. (ಎ.ಕ-೭, ಶಿಕಾರಿ.೧೧೭, ಕ್ರಿ.ಶ.೧೧೧೮) ಶಿಕಾರಿಪುರ ತಾಲ್ಲೂಕಿನ ಬೇಗೂರು, ಜಂಬೂರು, ಹೊಸವೂರು, ಸಾಲೂರು, ಸಂಡ, ಮಟ್ಟಿಕೋಟೆ, ಅಗ್ರಹಾರಮುಚ್ಚುಡಿ, ಚಿಕ್ಕಮಾಗಡಿ, ಬಳ್ಳಿಗಾವಿ, ಬಂದಳಿಕೆಗಳಲ್ಲಿ ವ್ಯಾಪಕವಾದ ಶೈಕ್ಷಣಿಕ ಚಟುವಟಿಕೆಗಳು ಮತ್ತು ಹೆಸರಾಂತ ವಿದ್ವಾಂಸರುಗಳು ಆಗಿ ಹೋಗಿರುವ ದಾಖಲೆಗಳು ಇವೆ.

ಅಗ್ರಹಾರ ತಾಳಗುಂದದ ವಿದ್ವಾಂಸರು ಯಮನಿಯಮ ಗುಣೋಪೇತರಾಗಿದ್ದು. ಅವರು ಇರುವ ಊರಿಗೆ 'ಶ್ರೀಮನ್ಮಹಾವಿಡ್ಡ ಗ್ರಾಮ ತಾಣಗುಂದೂರು' ಎಂದು ಕರೆಯಲಾಗುತ್ತದೆ. (ಎ.ಕ-೭, ಶಿಕಾರಿ.೧೭೮, ಕ್ರಿ.ಶ.೧೯೯೨) ವೇದ ಕಾವ್ಯ ಶಾಸ್ತ್ರಗಳ ವಿಷಯಗಳ ಕಮಲಗಳಿಗೆ ಸೂರ್ಯನಂತೆಯೇ ವಿದ್ವಾಂಸರೆಂಬ ಕುಮುದವನಕ್ಕೆ ಚಂದ್ರನಂತೆಯೂ ನಯವಿನಯಾದಿ ಗುಣಗಳಿಗೆ ಹಿಮಾಲಯದಂತೆಯೂ ಶರಣಾಗತರಿಗೆ ವಜ್ರಪಂಜರರಾಗಿಯೂ ಆ ಮೂವತ್ತಿರ್ಚ್ಛಾಸಿರ ಎಂಬ ಉಲ್ಲೇಖ ನಂತರದಲ್ಲಿ ಕಾಣಸಿಗುತ್ತದೆ.

ಬೇಗೂರು ಅಗ್ರಹಾರ ವೈದಿಕ ಮತ್ತು ಕಾಳಮುಖ ಎರಡು ಮಾದರಿಯ ವಿದ್ಯಾಭ್ಯಾಸ ವಿದ್ವಾಂಸರು ಹಾಗೂ ಮಠಗಳು ಕಾರ್ಯನಿರ್ವಹಿಸಿವೆ. ಇಲ್ಲಿನ ಮಲ್ಲಿಕಾರ್ಜುನ ದೇವಾಲಯ ವಿದ್ವಾಂಸರ ವಿದ್ಯಾ ದಾನದ ಕೇಂದ್ರವಾಗಿತ್ತೆಂದು ಭಾವಿಸಬಹುದು. ಕ್ರಿ.ಶ.೧೦೩೧ ರಲ್ಲಿ ಚಾಳುಕ್ಯ ಜಯಸಿಂಹನ ಕಾಲದಲ್ಲಿ ಬೇಗೂರಿನ

ಮಾರಸಿಂಗ ಗಾವುಂಡನ ತಮ್ಮ ಜೀಕಗಾವುಂಡನು ಒಂದು ಶಿವಾಲಯ ಮಾಡಿಸಿದ್ದಾನೆ. ಅದಕ್ಕಾಗಿ ಮಾರಸಿಂಗ ಗೌಡನ ವಿನಂತಿಯ ಮೇರೆಗೆ ಚಾಳುಕ್ಯ ರಾಜ ಜಹಸಿಂಹ ದತ್ತಿ ಬಿಟ್ಟಿದ್ದಾನೆ. ನಂತರದಲ್ಲಿ ಆ ಶಾಸನದಲ್ಲಿ ಕಾಳಮುಖ ಸಮಯ ಸಮುದ್ಧಾರಣರ ಶಕ್ತಿ ಪರಿ(ಷೇ) ಹಾಗೂ ಕಾಶ್ಮೀರ ಪಂಡಿತದೇವ ಶಿಷ್ಯರ್ ಎಂಬ ಉಲ್ಲೇಖವಿದೆ.(ಎ.ಕ-೭, ಶಿಕಾರಿ.೨೦, ಕ್ರಿ.ಶ.೧೦೪೯) ಎಲ್ಲಾ ಉಲ್ಲೇಖಗಳನ್ನು ಗಮನಿಸಿದರೆ ಬೇಗೂರಿನ ಮಲ್ಲಿಕಾರ್ಜುನ ದೇವರ ದೇವಾಲಯವು ಕಾಳಾಮುಖ ವಿದ್ಯಾಕೇಂದ್ರವಾಗಿತ್ತು. ಬನವಾಸಿ-೧೨೦೦೦ದ ಎಡವಟ್ಟೆಪ್ಪತ್ತರ ಕಂಪಣದ ಬೇಗೂರು, ಮಟ್ಟಿಕೋಟೆ, ಗೊಗ್ಗ ಮೊದಲಾದ ಸ್ಥಳಗಳು ಕಾಳಾಮುಖರ ಉಲ್ಲೇಖಗಳಿರುವ ಶಾಸನಗಳು ಹೊಂದಿವೆ. (ವಸಂತಕುಮಾರ್.ಬಿ.ವಿ., ಶಿಕಾರಿಪುರ ತಾಲ್ಲೂಕಿನ ಸಾಂಸ್ಕೃತಿಕ ಸಂಕಥನ, ೨೦೦೯) ಎಡವಟ್ಟ-೭೦ರ ಮನ್ನಯಂ ಆಗಿದ್ದ ಜೋಗಯ್ಯನು ಕ್ರಿ.ಶ.೧೦೬೬ರಲ್ಲಿ ಮಾರಸಿಂಗನು ಬೇಗೂರಲ್ಲಿ ಸರ್ವಜ್ಞಗಟ್ಟ ಮೊದಲಾದ ಹಲವು ಕೆರೆಗಳನ್ನು ಕಟ್ಟಿಸಿ, ತಾನು ಕಟ್ಟಿಸಿದ ಸರ್ವಜ್ಞಗಟ್ಟಿಗೆ ಹಾಗೂ ಮಲ್ಲಿಕಾರ್ಜುನ ದೇವರ ಮಠದ ವಿದ್ಯಾರ್ಥಿಗಳ ಆಹಾರ ದಾನ ಸತ್ರಕ್ಕಂ ಶ್ರೀಮತ್ಕಶ್ಮೀರ ಪಂಡಿತದೇವ ಶಿಷ್ಯರ ಸ್ವಸ್ತಿಯಮನಿಯಮ ಸ್ವಾಧ್ಯಾಯಧ್ಯಾನ ಧಾರಣ ಜಪ ಸಮಾಧಿ ಷಡಂಗೋಪಹಾರಾಧಿ ಸಂಪನ್ನರಪ್ಪ ಶ್ರೀ ಮತ್ರಿಲೋಚನ ಪಂಡಿತ ದೇವರ ಕಾಲಂ ಕರ್ಚ್ಚಿ ದತ್ತಿಯನ್ನು ಬಿಟ್ಟಿದ್ದಾನೆ. (ಎ.ಕ-೭, ಶಿಕಾರಿ.೧೯, ಕ್ರಿ.ಶ.೧೦೬೬) ಆ ಜೋಗಯ್ಯ ಮನುಜಮಾನ್ಧಾನತಂ ಕೀರ್ತ ವಿಖ್ಯಾತಂ ಗೊತ್ರ ಮಾಣಿಕ್ಯಂ ವಿವೇಕ ಚಾಣಕ್ಯಂ ಪರನಾರಿ ಸಹೋದರಂ ಬೀರವೃಕೋಧರಂ ಕೋದಂಡ ಪಂಥಕಂ ಸೌಜ್ಯನ್ಯ-ತೀರ್ಥಂ ರೂ ಆಗಿದ್ದ ಲಕ್ಷರಸರು ಬನವಾಸಿ-೧೨೦೦೦ವನ್ನು ಆಳುತ್ತಿದ್ದಾಗ ಎಡವಟ್ಟ -೭೦ರ ಕಂಪಣದ ಮನ್ನಯನಾಗಿದ್ದನು. ಇಂತ ವ್ಯಕ್ತಿತ್ವದ ರಾಜರು ಪೋಷಿಸಿದ ವಿದ್ಯಾಕೇಂದ್ರಗಳಲ್ಲಿ ಬೇಗೂರು ಒಂದು. (ಎ.ಕ-೭, ಶಿಕಾರಿ.೨೦, ಕ್ರಿ.ಶ.೧೦೪೬) ಬಹುಶಃ ಅಲ್ಲಿನ ವಿಷ್ಣು ದೇವಾಲಯಯವು ವೈದಿಕ ಪರಂಪರೆಯ ವಿದ್ಯಾಕೇಂದ್ರವಾಗಬೇಕು. ಕ್ರಿ.ಶ.೧೦೪೯ರ ಶಾಸನದಲ್ಲಿ ಶ್ರೀ ಶ್ರೀಮದ್ ಗ್ರಹಾರ ಬೇಗೂರು ಎಂಬ ಉಲ್ಲೇಖವಿದೆ.ಅವರ ಹಿಂದಿನ ಶಾಸನ ಕ್ರಿ.ಶ.೧೦೮೫ರಲ್ಲಿನ ಶಾಸನದಲ್ಲಿ ಮಾಹೇಶ್ವರ ವೈಷ್ಣವೇತ್ಯಾದಿ ಸಮಯ ನಿಯಮಸ್ತರು ಎಂಬ ಅಂಶವನ್ನು ಒದಗಿಸಿದೆ.

ಸರೋಜ ವಿರಾಜಮಾನರು ರುಗ್ವಜಾಸ್ಯಮೂದರ್ಬ್ಬ ವೇದಾಂಗೋಪಾಂಗ ಲಕ್ಷ್ಮಣ ಲಕ್ಷ್ಮತರು ಯಜನಯಜನಾದ್ಯಯ ನಾದ್ಯಪನಪಾರಗರು, ಅಗ್ನಿಷ್ಟೋಮಾದಿ ಸಪ್ತಸೋಮ ಸಂಸ್ಥಾನ ಭೃತರು ರಕ್ತ ಸರಸೀರ(ಸರಸೀರ=ಕೊಳ,ಸರೋವರ) ಹೋದರರದಳ ನಿಭಚತುರ್ವಕ್ತ್ರ ಶಾಸ್ತ್ರ,ಷಡಾಗೌಷ್ಟದಶ ಸ್ಮೃತಿ ಪುರಾಣ ಕಾವ್ಯ ನಾಟಕರ್ತ್ಥ ಗ್ರಂಥ ಪ್ರಯೋಗ ಪದ ವಿನ್ಯಾಸ ಲಲಿತಾಂಗೋಪಾಂಗರ್ ಮಾಹೇಶ್ವರ ವೈಷ್ಣವೇತ್ಯಾದಿ ಸಮಯ ನಿಯಮಸ್ಥರು ನ್ಯಾಯ ವೈಶೇಷಿಕ ಲೋಕಾಯಿಕ ಸಾಂಖ್ಯ ಬೌದ್ಧ ಮೀಮಾಂಸಾದಿ ತರ್ಕ ಶಾಸ್ತ್ರಗಮ ಪರಿಣತರು ಸಪ್ತರಿಷಿ ಸಮಾನಕ ಏಕವಾಕ್ಯರ ಅವಶೇಷದಿಕ್ಪ್ರಕಾಶಿತ ಕೀರ್ತಿ

ಧ್ವಜರು ದ್ವಾಂತ್ರಿಂಶತ್ಯದಸಮಯಾರು ವಿದ್ಯಾದಾನದಲ್ಲಿ ತೊಡಗಿದರು. ಇಲ್ಲಿ ವೇದ ವೇದಾಂತ ಬ್ರಹ್ಮಶಾಸ್ತ್ರ ಷಡಂಗ ಅಷ್ಟಾದಂಶ ಸ್ಮೃತಿ ಪುರಾಣಕರ ನಾಟಕ ಅರ್ಥಗ್ರಂಥ ಶಬ್ದಶಾಸ್ತ್ರ ನ್ಯಾಯ ವೈಶೇಷಿಕ ಲೋಕಾಯತ ಸಾಂಖ್ಯ ಬೌದ್ಧ ಮೀಮಾಂಸಾದಿ ಹೇಳಿಕೊಡಲಾಗುತ್ತಿತ್ತು. ವಿದ್ಯಾಕೇಂದ್ರಕ್ಕೆ ದೇಸಿಗರ ಪ್ರವಾಸಿಗರ ಆಹಾರ ಸತ್ರವಿತ್ತು. ಈ ಸತ್ರಕ್ಕೆ ಐವತ್ತು ಕಮ್ಮಗದ್ದೆ. ಒಂದು ಮನೆಯನ್ನು ದತ್ತಿ ಬಿಡಲಾಗಿ ಶಾಸನದಲ್ಲಿ ಹೇಳಿದೆ. ಅದೇ ರೀತಿ ಕ್ರಿ.ಶ.೧೧೮೯ರ ಶಾಸನದಲ್ಲಿಯೂ ಚಟ್ಟಗೋಸಿಯ ದೇಸಿಗರ ಮತ್ತು ಪ್ರವಾಸಿಗರ ಆಹಾರ ದಾನಕ್ಕೆ ಗದ್ದೆ, ನಿವೇಶನ ಬಿಟ್ಟಿದ್ದನ್ನು ತಿಳಿಸುತ್ತದೆ. ಅಲ್ಲಿದ್ದ ವಿದ್ವಾಂಸರು ಅರವತ್ನಾಲ್ಕು ವಿದ್ಯಾಕೇಂದ್ರಗಳನ್ನು ನಾಲ್ಕು ಭಾಷೆಗಳಲ್ಲಿ ಪಾರಂಗತರಾಗಿದ್ದರು ಎಂದು ಕ್ರಿ.ಶ.೧೧೦೦ರ ಶಾಸನ ತಿಳಿಸುತ್ತದೆ. (ವಸಂತಕುಮಾರ್.ಬಿ.ವಿ., ಶಿಕಾರಿಪುರ ತಾಲ್ಲೂಕಿನ ಸಾಂಸ್ಕೃತಿಕ ಸಂಕಥನ, ೨೦೦೯)

ಹಿರೇಜಂಬೂರಿನಲ್ಲಿ ದೊರಕುವ ಕ್ರಿ.ಶ.೧೦೦೮ನೇ ಸಾಲಿನ ಶಾಸನದಲ್ಲಿ ವಿದ್ಯಾಕೇಂದ್ರವೊಂದಕ್ಕೆ ನೀಡುತ್ತಿದ್ದ ದತ್ತಿಯ ವಿಭಜನೆ ಹಾಗೂ ಬಳಕೆಯ ಕ್ರಮವನ್ನು ಸವಿವರವಾಗಿ ತಿಳಿಸುತ್ತದೆ. ಶಾಸನದಲ್ಲಿ ಸ್ವಸ್ತಿಯ ಮುನಿಯಮ ಸ್ವಾದ್ಯಾಯದ್ಯಾನ ಧರಣ ಮೋನಾನುಷ್ಟಾಣ ಜಪಸಮಾಧಿ ಶೀಲ ಸಂಪನ್ನರ್ ವಿದಿತವೇದ ವೇದಾಂತ ಆಗಮ ಷಟ್ತರ್ಕ ಪಂಚವ್ಯಾಕರಣಾಧಿ ಸಮಸ್ತ ನಿನ್ತರಕ್ತ ಚರ್ರಿತರ ಅಗ್ನಿಷ್ಟೋಮಾತ್ಯಗ್ನಷ್ಟೋಮ ಉಕ್ಥ್ಸಷೋಡಾಶಿ ವಾಜಪೇಯಾತಿ,ವಿದ್ಯೆ ಮತ್ತು ಯುಗಾದಿ ಆಚರಣೆಗಳಲ್ಲಿ ಪರಿಣಿತರಾಗಿದ್ದು, ಸಾವಿರ ಜನ ಮಹಾ ಜನರಿಂದ್ದುದಾಗಿ ತಿಳಿಸುತ್ತದೆ.(ಎ.ಕ-೭, ಶಿಕಾರಿ.೭೪, ಕ್ರಿ.ಶ.೧೦೦೮) ಮಠದಲ್ಲಿ ಓದುವ ವಿದ್ಯಾರ್ಥಿಗಳ ಎಲ್ಲ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ದತ್ತಿಗಳನ್ನು ಬಿಟ್ಟುಕೊಟ್ಟಿರುವಂತಿದೆ. ಅಗ್ರಹಾರ ಜಂಬೂರಿನ ಮಠದ ಉಪಾದ್ಯಾಯರು ಕೇಶವೋಜರು ಅಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ಬಹುಶಃ ಹದಿನಾರು ಆ ದಾನದ ವಿವರಗಳು ಈ ರೀತಿ ಇದೆ. ಉಪ್ಪು ಎಣ್ಣೆಗಳಿಗೆ ಹದಿನಾರು ಗದ್ಯಾಣ, ಹದಿನಾರು ಬಟ್ಟೆಗಳಿಗೆ ಹನ್ನೆರಡು ಗದ್ಯಾಣ ಉಪ್ಪಿನಕಾಯಿಗೆ ಎರಡು ಗದ್ಯಾಣ. (ವಸಂತಕುಮಾರ್.ಬಿ.ವಿ,ಶಿಕಾರಿಪುರ ತಾಲ್ಲೂಕಿನ ಸಾಂಸ್ಕೃತಿಕ ಸಂಕಥನ,೨೦೦೯).

ಸಾಲೂರಿನ ಅಗ್ರಹಾರ ವಿಷಯವಾಗಿ ಹೇಳುವಾಗ ಸುಮಾರು ಕ್ರಿ.ಶ.೮೩೦ರ ಇಲ್ಲಿನ ಶಾಸನದಲ್ಲಿ ಅಮೋಘವರ್ಷ ನೃಪತುಂಗದೇವನು ಪೃಥ್ವಿಯನ್ನು ಆಳುತ್ತಿದ್ದಾಗ ಗುರು-ಶಿಷ್ಯರ ಪರಂಪರೆ ಪ್ರಾರಂಭವಾಗಿರಬೇಕೆಂದು ಊಹೆಗೆ ಪ್ರೇರೇಪಿಸುತ್ತದೆ. (ಎಕ೭,ಶಿಕಾರಿ೨೮೩-ಕ್ರಿ.ಶ.೮೩೦).ಅಗ್ರಹಾರ ಸಾಲಿಯೂರ ಮಹಾಜನಕ್ಕಲ್ಲಿಯ ಕಟ್ಟಂ ಕಟ್ಟಿಸಲು ಕಣ್ಣಸೋಗೆಯನ್ನು ದತ್ತಿಯಾಗಿ ಬಿಟ್ಟಿರುವ ಉಲ್ಲೇಖವಿದೆ.(ಎಕ೭,ಶಿಕಾರಿ೨೮೫-ಕ್ರಿ.ಶ.೧೦೧೭).ತುಂಬರ ಹೊಸೂರು ಅಗ್ರಹಾರಕ್ಕೆ ಸಂಬಂಧಿಸಿದಂತೆ ಹೇಳುವಾಗ ಸ್ವಸ್ತಿಯಮನಿಯಮ ಸ್ವಾದ್ಯಾಯದ್ಯಾನ ಧಾರಣ ಮೋನಾನುಷ್ಟಾನ ಜಪ ಸಮಾಧಿ

ಶೀಲಸಂಪನ್ನರಪ್ಪ ಶ್ರೀಮದಾ ಅಗ್ರಹಾರದ ಭಟ್ಟರ ಪೊಸವೂರ ಊರೊಡೆಯ ಪ್ರಮುಖ ಮಹಾಜನಂ ಸಾಸಿರ್ವರ ಕಯ್ಯೋಳ್ ಸ್ವಸ್ತಿಯಮನಿಯಮ ಸ್ವಾದ್ಯಾಯದ್ಯಾನ ಧಾರಣ ಮೋನಾನುಷ್ಠಾನ ಜಪ ಷಟ್ತಕ್ಕತ ಸಕಲ ಶಾಸ್ತ್ರ ಪಾರವಾರ ಪಾರಾಯಣಪ್ಪ ಶ್ರೀಮದಾಗ್ರಹಾರ ಈಸವೂರ ಪೆರ್ವ್ವಾರುವಾ ಭಾರದ್ವಾಜ ಗೋತ್ರದ ಮಾಡದ ನಾಣಿಮಯ್ಯನ ಪುತ್ರಂ ದಿವಾಕರ ಸರ್ವ್ವತಿದ್ಯರು ಹೊಸವೂರ ಭೂಮಿಯ ಕ್ರಯದಾನಂ ಗೊಂಡು ಧಾರ ಪೂರ್ವ್ವಕಂ ಮಾಡಿ ಸತ್ರಕ್ಕೆ ದತ್ತಿಯ ಬಿಟ್ಟ ವಿವರವಿದೆ. (ಎಕ೭ಶಿಕಾರಿ೨೯೩- ಕ್ರಿ.ಶ.೨೯೩). ಇಲ್ಲಿ ಈಸೂರಿನ ವಿದ್ವಾಂಸರು ನಾಲ್ಕು ವೇದ, ವೇದಾಂತ, ಸಿದ್ಧಾಂತ, ಸಂಖ್ಯಾದಿ, ಆರು ದರ್ಶನಗಳು ಮತ್ತು ಸಕಲ ಶಾಸ್ತ್ರಗಳ ಅಧ್ಯಯನ ಶೀಲರಾಗಿದ್ದರು.

ದಿವಾಕರ ಸರ್ವ್ವತಿದ್ಯರು ಮಾಡಿದ ನಾಡಿಮಯ್ಯನ ಮಗ ಹೊಸೂರಿನ ಅಗ್ರಹಾರಕ್ಕೆ ಭೂಮಿಯನ್ನು ದತ್ತಿಯನ್ನಾಗಿ ನೀಡಿದ್ದಾನೆ. ಅದೇ ಸ್ಥಳದ ಕ್ರಿ.ಶ.೧೧೧೦ಲನೇಯ ಇಸವಿ ಶಾಸನವು ಹೊಸೂರಿನ ಅಗ್ರಹಾರದ ಮಹಾ ಜನರದೂ ಸಾರ್ವಸಂಖ್ಯೆ ಎಂದೂ ಅವರು ಚತುರ್ವೇದ ವೇದಾಂತ ಸಿದ್ಧಾಂತ ಸಕಲಶಾಸ್ತ್ರ ಪ್ರವೀಣ ಷಟುತಕ್ಕ ಕರ್ತೃಶರೂ ಆಗಿದ್ದರೆಂದು ಚಿತ್ರಿಸುತ್ತದೆ. ಅವರಿಗೆ ವೈಶ್ಯಕುಲ ತಿಲಕನಾಗಿದ್ದ ರಾಜವಲ್ಲಭ ಸೆಟ್ಟಿಯ ಮಗ ಮಾಣಿಕಸೆಟ್ಟಿ ದತ್ತಿ ನೀಡಿದ್ದಾನೆ.(ಎಕ.೭, ಶಿಕಾರಿ೨೯೪- ಕ್ರಿ.ಶ.೧೧೧೦ಲ) ಅಗ್ರಹಾರ ಭಟ್ಟರ ಹೊಸೂರಿನ ಮೂಲಸ್ಥಾನ ಶ್ರೀ ರಾಮೇಶ್ವರ ದೇವರ ದೇವಾಲಯವಾಗಿದ್ದು,ಅಲ್ಲಿನ ನೈವೇದ್ಯಕ್ಕೆ ಎಪ್ಪತ್ತು ಒಕ್ಕಲಿನ ಮದುವೆ ಹಂದರದ ಪಣವನ್ನು ಸೂಳೆಯರ ಕನ್ನಡಿ ಪಣವನ್ನು ದಾನವಾಗಿ ಬಿಡಲಾಗಿದೆ. (ಎಕ.೭, ಶಿಕಾರಿ೨೯೫-ಕ್ರಿ.ಶ.೧೦೭೪).ನಾಗಯ್ಯ ಮತ್ತು ಜೋಗಬ್ಬೆಗೆ ಹುಟ್ಟಿದ ದಾಸಿಜಕ್ಕಸೆಟ್ಟಿ ಮತ್ತು ಆತನ ಪತ್ನಿ ಚಟ್ಟವೆಯ ಮೂಲಸ್ಥಾನ ರಾಮೇಶ್ವರ ದೇವರ ನೈವೇದ್ಯಕ್ಕೆಂದು ದಾನ ನೀಡಿದ ವಿವರಗಳಿವೆ.(ಎಕ೭, ಶಿಕಾರಿ೨೯೬-ಕ್ರಿ.ಶ.೧೦೬೫) ಅಗ್ರಹಾರ ಭಟ್ಟರ ಹೊಸೂರು ವಿದ್ಯಾಕೇಂದ್ರದಲ್ಲಿ ಕ್ರಿ.ಶ.೧೦ಲ೦ರಲ್ಲಿದ್ದ ಬಲದೇವನೆಂಬ ದಂಡನಾಥನ ವ್ಯಕ್ತಿತ್ವ ಒಂದು ವಿದ್ಯಾಪರಿಸರಕ್ಕೆ ಪೂರಕವಾದ ಪ್ರೇರಕವಾದ ಫಲಿತವಾದ ಚಿತ್ರಣ ನೀಡುತ್ತದೆ. ಜೈನಧರ್ಮಿಯನಾದ ಬಲದೇವನ ದಾನ ಧರ್ಮ ಪರಹಿತದಲ್ಲಿ ಸಮಾನರಾದವರೂ ಇರಲಿಲ್ಲ. (ಎಕ೭.ಶಿಕಾರಿ೨೯೭- ಕ್ರಿ.ಶ.೧೦ಲ೦).ಶ್ರೀಮಹಾಸದಿಗ್ರಹಾರ ಸಂಡದ ಮೂವತ್ತಿರ್ಚ್ಛಾಸಿರ ಎನ್ನುತ್ತಾರೆ. ಸಂಡದ ಶಾಸನ ಈ ಅಗ್ರಹಾರಕ್ಕೆ ಕ್ರಿ.ಶ.೧೧ಲ೯ರಲ್ಲಿ ಈಶ್ವರ ಜೀಯನ ಮನೆಗೆ ದತ್ತಿಯನ್ನು ನೀಡಿದ್ದಾನೆ.(ಎಕ೭,ಶಿಕಾರಿ ೩೦೪,ಕ್ರಿ.ಶ ೩೦೯- ೧೧ಲ೯).

ದೇವಾಸ್ಥಾನಗಳು:

ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಗ್ರಹಾರಗಳು ಹೇಗೆ ಪ್ರಯೋಜನತ್ವ ಬಳಕೆಯಾಗಿದ್ದೆಯೋ ಹಾಗೆಯೇ ದೇವಸ್ಥಾನಗಳು ವಿದ್ಯಾದಾನಕ್ಕೆ ಇನ್ನೊಂದು ಹೆಸರುಗಳಾಗಿವೆ. ತಾಳಗುಂದದ ಪ್ರಣವೇಶ್ವರ ದೇವಾಲಯಕ್ಕೆ ಸೇರಿದ ವಿದ್ಯಾಕೇಂದ್ರ ಮತ್ತೊಂದು ಉಚ್ಚ ಶಿಕ್ಷಣ ಸಂಸ್ಥೆ. ಅಲ್ಲಿನ ಶಾಸನವೊಂದರ ಪ್ರಕಾರ ಆ ಕೇಂದ್ರದಲ್ಲಿ ಆರು ಜನ ಪಂಡಿತರಿದ್ದರು. ಅವರು ಋಗ್ವೇದ, ಯಜುರ್ವೇದ, ಸಾಮವೇದ, ಕಲ್ಪವ್ಯಾಕರಣ, ರೂಪವತಾರ, ನ್ಯಾಸಪ್ರಭಾಕರ ಮತ್ತು ವೇದಾಂತಗಳನ್ನು ಹೇಳಿಕೊಡುತ್ತಿದ್ದರು ಅಕ್ಷರಗಳನ್ನು ಮತ್ತು ಕನ್ನಡವನ್ನು ಅನುಕ್ರಮವಾಗಿ ಹೇಳಿಕೊಡುತ್ತಿದ್ದ ಬೋಧಕರು ಅಲ್ಲಿದ್ದರು. ದೇವಸ್ಥಾನ ಆದಾಯದಲ್ಲಿ ಒಂದು ಭಾಗವು ಅಲ್ಲಿದ್ದ ನಲ್ವತ್ತೆಂಟು ವಿದ್ಯಾರ್ಥಿಗಳ ಊಟ ಮತ್ತು ಬಟ್ಟೆಗಳಿಗಾಗಿ ಖರ್ಚಾಗುತ್ತಿತ್ತು. ಮೇಲೆ ತಿಳಿಸಿದ ಆರು ಪಂಡಿತರಿಗೆ ಏಳು–ಎಂಟು ವಿದ್ಯಾರ್ಥಿಗಳನ್ನು ವಹಿಸಲಾಗಿತ್ತು. (ಗೋಪಾಲರಾವ್.ಹೆಚ್.ಎಸ್.೧೯೯೩,ಶಾಸನಗಳ ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು–ಒಂದು ಸಾಂಸ್ಕೃತಿಕ ಅಧ್ಯಯನ, ಪುಟ ೧೫೮–೧೬೧) ಬಳ್ಳಿಗಾವಿಯ ಕೇದಾರೇಶ್ವರ ದೇಗುಲದ ಕೋಡಿಮಠ ನಾಗಯಿಯ ಮಧುಸೂದನ ದೇಗುಲ ಮತ್ತು ರಾಮೇಶ್ವರ ದೇಗುಲಗಳಿಗೆ ಸೇರಿದ ಮಠಗಳನ್ನು ಪ್ರೌಢ ವಿದ್ಯಾಕೇಂದ್ರಗಳಾಗಿದ್ದವು. ಖರ್ಚಿಗಾಗಿ ಎಂಭತ್ತು ಮತ್ತರು ಭೂಮಿಯನ್ನು ನೀಡಲಾಗಿತ್ತು. (ರಘನಾಥ.ಭಟ್.ಹೆಚ್.ಎಸ್.೧೯೭೭, ಕರ್ನಾಟಕ ಶಾಸನ ಕಲೆ, ಪುಟ ೧೫೪)

ಇನ್ನೊಂದು ಶಾಸನದ ಪ್ರಕಾರ ಅಗ್ರಹಾರವೊಂದರಲ್ಲಿ ತಪೋದೀನರಿಗೆ ಪಾಠ ಹೇಳುವ ಭಟ್ಟರಿಗೆ ಮೂವತ್ತು ಮತ್ತರು ಭೂಮಿ, ಆಹಾರಕ್ಕೆ ಮುನ್ನೂರು ಮತ್ತರು, ದೇವಸ್ಥಾನದ ಜೀರ್ಣೋದ್ಧಾರ ಮತ್ತು ದೇವರ ಸೇವೆಗೆ ೨೧೫೦ ಮತ್ತರು ಭೂಮಿಯನ್ನು ದತ್ತಿ ಬಿಡಲಾಗಿತ್ತು. ತಾಳಗುಂದದ ಕನ್ನಡ ಪಂಡಿತರಿಗೆ ಐದು ಗದ್ಯಾಣಗಳ ಸಂಭಾವನೆ ಇತ್ತು. ದೇಗಾಂವೆ ಅಗ್ರಹಾರದ ಉತ್ಪತ್ತಿಯಲ್ಲಿ ಒಂದು ಪಾಲನ್ನು ಅಧ್ಯಾಪಕರಿಗೆಂದೇ ಮೀಸಲಿರಿಸಿ, ಅದರಲ್ಲಿ ೭೫% ಭಾಗ ಉಚ್ಚ ಶಿಕ್ಷಣದ ಅಧ್ಯಾಪಕರಿಗೂ, ಉಳಿದ೨೫% ಭಾಗ ಇತರೆ ಉಪಾಧ್ಯಾಯರಿಗೂ ಹೋಗುತ್ತಿತ್ತು. ತಾಳಗುಂದದ ಪ್ರಣವೇಶ್ವರ ದೇವಾಲಯದ ಆದಾಯದ ಒಂದು ಭಾಗದಲ್ಲಿ ಆರು ಜನ ಅಧ್ಯಾಪಕರಿಗೆ ವೇತನ ಕೊಟ್ಟು ಪ್ರತಿಯೊಬ್ಬರು ಎಂಟೆಂಟು ವಿದ್ಯಾರ್ಥಿಗಳನ್ನು ಸಾಕಿ ಪಾಠ ಹೇಳುವ ಅವಕಾಶ ಮಾಡಿಕೊಡಲಾಗಿತ್ತು. (ಮೈ.ನ.ನಾಗರಾಜ–೧೯೮೩, ಕನಾಟಕ ಪುರಾತನ ವಿದ್ಯಾಕೇಂದ್ರಗಳು, ಪುಟ ೧೫)ಅಪಾರ ಪಕ್ಷದ ಭೋಜನಕ್ಕೆ ಎರಡು ಗದ್ಯಾಣ, ತಟ್ಟೆಗಳಿಗೆ ಎರಡು ಗದ್ಯಾಣ, ಉಪ್ಪಿನಕಾಯಿಗೆ ಎರಡು ಗದ್ಯಾಣ ಎಂಬ ಉಲ್ಲೇಖವಿದೆ(ಎಕ ೭ ಶಿಕಾರಿ ೭೪–ಕ್ರಿ.ಶ.೧೦೧೦). ಪಂಚಮಠ, ಹಿರಿಯಮಠ, ಭೇರುಂಡೇಶ್ವರ ಮಠ, ಪಂಚಲಿಂಗಮಠ, ತ್ರಿಪುರಂತಕ ಮಠಗಳೆಂಬಲ್ಲಿ ವಿದ್ಯಾದಾನ ನಡೆಯುತ್ತಿತ್ತು ಎಂಬುದು

ತಿಳಿಯಬಹುದು.(ಎಕ ೭ ಶಿಕಾರಿ ೧೧೮- ಕ್ರಿ.ಶ.೧೦೫೪)ಕೇದಾರೇಶ್ವರ ಮಠದ ಹೆಸರಿಲ್ಲದಿರುವುದು ಗಮನಾರ್ಹ. ಮುಂದಿನ ಶಾಸನಗಳಲ್ಲಿ ಆ ಮಠಗಳ ಸಾಲಲ್ಲಿ ಕೋಡಿಯ ಮಠವನ್ನು ಹೇಳುವುದರಿಂದ ಕ್ರಿ.ಶ.೧೦೫೪ರ ಹೊತ್ತಿಗೆ ಕೇದಾರೇಶ್ವರ ಮಠವು ಪ್ರಾರಂಭವಾಗಿರಲ್ಲಿಲ್ಲ. (ಎಕ ೭ ಶಿಕಾರಿ ೧೨೩- ಕ್ರಿ.ಶ.೧೧೫೮). ಕೇದಾರೇಶ್ವರ ದೇವಸ್ಥಾನದ ಹೆಸರಿಸುವ ಅತ್ಯಂತ ಪ್ರಾಚೀನ ಶಾಸನವು ನಮಗೆ ತಿಳಿದ ಮಟ್ಟಿಗೆ ಕ್ರಿ.ಶ.೧೧೯೪ರ ಶಾಸನ. ಆದ್ದರಿಂದ ಆ ಮಠವು ಕ್ರಿ.ಶ ೧೧೯೪ಕ್ಕಿಂತ ಹಿಂದಿನದು ಕ್ರಿ.ಶ.೧೦೫೪ಕ್ಕಿಂತ ಈಚಿನದು ಎಂದು ಗುರುತಿಸಲಾಗಿದೆ. ಇಂತಹ ಮಠದಲ್ಲೇ ವಿದ್ಯೆಯೇ ದಾನ ಕಾರ್ಯಗಳು ಈ ಸಂದರ್ಭದಲ್ಲಿ ನಡೆದಿವೆ ಎಂಬುದು ಖಚಿತವಾಗಿದೆ(ಎಕ ೭, ಶಿಕಾರಿ.೯೪-ಕ್ರಿ.ಶ ೧೧೯೪)

ಎ.ವೆಂಕಟಸುಬ್ಬಯ್ಯನವರು ಸುಮಾರು ಕ್ರಿ.ಶ.೧೦೭೩ ರಲ್ಲಿ ಕೇದಾರೇಶ್ವರ ಮಠವು ಆರಂಭವಾಗಿರಬೇಕು ಎಂದು ಭಾವಿಸಿದ್ದಾರೆ. ಕ್ರಿ.ಶ.೧೧೯೪ರ ಶಾಸನದಲ್ಲಿ ದಾನವನ್ನು ಸ್ವೀಕರಿಸುವ ಸೋಮೇಶ್ವರ ಪಂಡಿತದೇವನ ಗುರು ಪರಂಪರೆ ಈ ರೀತಿ ಇದೆ.

ಕೇದಾರಶಕ್ತಿ ಮುನಿಪತಿ

।

ಶ್ರೀಕಂಠ ಪತಿ

।

ಸೋಮೇಶ್ವರ ಪಂಡಿತ

ಕೇದಾರಶಕ್ತಿ ಮುನಿಪತಿಯು ಸೋಮೇಶ್ವರ ಪಂಡಿತನಿಗಿಂತ ಮೂವತ್ತು ಅಥವಾ ಮೂವತ್ತೈದು ವರ್ಷ ಹಿಂದಿನವನೆಂದುಕೊಂಡರೆ, ಸುಮಾರು ಕ್ರಿ,ಶ ೧೦೬೬ರಲ್ಲಿ ಕೇದಾರೇಶ್ವರ ಮಠವು ಸ್ಥಾಪಿಸಿದೆ. ಈ ಮಠವನ್ನು ಕೋಡಿಯ ಮಠವೆಂದು ಮೊದಲು ಕರೆದ ಶಾಸನ ಬಹುಶಃ ಕ್ರಿ,ಶ ೧೧೫೮ರ ಶಾಸನವಾಗಿದೆ.(ಎಕ ೭ ಶಿಕಾರಿ ೧೧೨- ಕ್ರಿ,ಶ,೧೧೫೮). ಆ ಮಠದ ಮೂಲಸ್ಥಾಪಕನಾದ ಕೇದಾರೇಶ್ವರನು ಬಹುಶಃ ಶ್ರೀಶೈಲದಿಂದ ಬಂದು ಬಳ್ಳಿಗಾವಿಯಲ್ಲಿ ನೆಲೆಸಿರಬೇಕು. ಅವನು ಪರ್ವತಾವಳಿಯೊಳ್ಳುವರ ಕೋಣೆಯ ಸಂತತಿಗಾಭರಣಂ ಎಂದು ಕರೆಯಬಹುದು. ಅವನ ಶಿಷ್ಯ ಶ್ರೀಕಂಠ ಪಂಡಿತನು ಲಕುಲೀಶನಂತೆ ಸರ್ವಜ್ಞಕಲ್ಪನಾಗಿದ್ದನು (ಎಕ ೭ ಶಿಕಾರಿ ೯೪-ಕ್ರಿ,ಶ,೧೧೯೪).ಅವನ ಶಿಷ್ಯ ಸೋಮೇಶ್ವರನು ಕೇದಾರೇಶ್ವರ ದೇವಸ್ಥಾನದ ಯಶಸ್ವಿಗೆ ಬಹು ಕಾರಣನಾದನು. ಆ ಮಠದ ಆರಂಭದ ಶಾಸನಗಳೆಲ್ಲವೂ ಈ ಸೋಮೇಶ್ವರನು ಸ್ವೀಕರಿಸಿದ ದತ್ತಿಗಳೇ ಆಗಿವೆ. ಇವನನ್ನು ವಿದ್ಯಾ ಅಂದರೆ ವಿದ್ಯಾಸಾಗರ ಎಂದು ಶಾಸನವೊಂದು ಕರೆಯುತ್ತದೆ. ಇವನ ವಿದ್ವತ್ತಿನ ಜೊತೆಗೆ ದೇವನದಿಯ ಪ್ರವಾಹ ಹೋಲುವ ಉಪನ್ಯಾಸದ ವಾಗ್ವೈಖರಿಯನ್ನು

ಶಾಸನವೊಂದು ಎತ್ತಿ ಆಡುತ್ತದೆ. ಅವನ ಮಂತ್ರ ಪ್ರಾಭಾವದಿಂದ ಕೇದಾರೇಶ್ವರನ ಶಿಷ್ಯ ಸಮೂಹವು ವರ್ಧಿಸುತ್ತದೆ ಎಂದು ಶಾಸನವು ಹೇಳುತ್ತದೆ.(ಎಕ ೭, ಶಿಕಾರಿ. ೯೮-ಕ್ರಿ.ಶ.೧೧೦೩)

ಕೇದಾರ ಸ್ಥಾನ ಲಕ್ಷ್ಮಿ ಎಂಬ ಕಲ್ಪವಲ್ಲಿಯನ್ನು ಹುಟ್ಟುಹಾಕಿದವನೇ ಸೋಮೇಶ್ವರ ಎಂದು ಶಾಸನ ತಿಳಿಸುತ್ತದೆ. ಸೋಮೇಶ್ವರನ ಬಳಿಕ ಅವನ ತಮ್ಮ ವಿದ್ಯಾಭರಣನು ಸ್ವಲ್ಪಕಾಲ ಸ್ಥಾನಪತಿಯಾದನು. ವಿದ್ಯಾಭರಣ ಎಂಬುದು ಅವನಿಗೆ ಅನ್ವರ್ಥನಾಮವಾಗಿ ಪರಿಣಮಿಸಿತು. ವಿದ್ಯಾವ್ಯಾಸಂಗದಲ್ಲಿ ಆಸಕ್ತನಾದ ಅವನಿಗೆ ಮಠದ ವ್ಯಾಸಂಗವು ಹಿಡಿಸದಿದ್ದುದರಿಂದ ತನ್ನ ಹಿರಿಯ ಶಿಷ್ಯ ಮೊದಲನೆಯ ವಾಮಶಕ್ತಿಯ ಮೇಲೆ ಮಠದ ಆಡಳಿತವನ್ನು ಹೊರಿಸಿ ನಿಶ್ಚಿಂತನಾಗುತ್ತಾನೆ.(ಎಕ ೭ ಶಿಕಾರಿ ೧೦೦-ಕ್ರಿ.ಶ ೧೧೨೯) ವೆಂಕಟಸುಬ್ಬಯ್ಯನವರ ಪ್ರಕಾರ ವಿದ್ಯಾಭರಣನು ಗೌತಮ ಮುನಿಗೆ ಆಡಳಿತವನ್ನು ವಹಿಸಿಕೊಟ್ಟಿರಬೇಕು. ಕೇದಾರ ದೇವರ ಪಾದಾರಾಧಕನಾದ ವಾಮಶಕ್ತಿ ದೇವನನ್ನು ಸೆರೆಹಿಡಿದಾಗ ಬಾಬೆಯ ನಾಕನೆಂಬಾತನು ಕಾದಿ ಸ್ವರ್ಗಸ್ಥನಾದಂತೆ ಶಾಸನವೊಂದು ತಿಳಿಸುತ್ತದೆ. ಏಕೆ ಸೆರೆಹಿಡಿದರು ಎಂಬ ಪ್ರಶ್ನೆಗಳಿಗೆ ಉತ್ತರ ಸಿಕ್ಕುವುದಿಲ್ಲ. ಬಹುಶಃ ಯಾವುದೇ ಅಪ್ರಿಯ ವ್ಯವಹಾರಕ್ಕೆ ವಾಮಶಕ್ತಿಮುನಿ ಕೈಹಾಕಿರಬೇಕು. ವಾಮಶಕ್ತಿ ಬಹುಶಃ ಮೊದಲನೆಯ ವಾಮಶಕ್ತಿ.ಅವನನ್ನು ಸೆರೆಹಿಡಿದು ಹೊರಹಾಕಿದರು. ಅವನು ಬಳ್ಳಿಗಾವಿಯನ್ನು ಬಿಟ್ಟು ಹೊದನೋ ಎಂದು ತಿಳಿಯದು. ಅವನ ಹೆಸರನ್ನು ಎತ್ತುವುದು ಅವಮಾನವೆಂದು ಮುಂದಿನ ಕೆಲವು ಶಾಸನಗಳು ಭಾವಿಸುವಂತೆ ಕಾಣುತ್ತವೆ.(ಎಕ ೭ ಶಿಕಾರಿ ೧೩೯-ಕ್ರಿ.ಶ.೧೩೯) ವಾಮಶಕ್ತಿ ಬಹುಶಃ ೨ನೇ ವಾಮಶಕ್ತಿ ಎಂದು ಬಿಜ್ಜಳ ಕಸಪಯ್ಯರನ್ನು ಕೆಳಗಿಳಿಸಲು ಪ್ರಯತ್ನಿಸಿದ. ಬಿಜ್ಜಳ ವಿರೋಧಿಗಳು(ವೀರಶೈವರು) ಅವನನ್ನು ಬಂಧಿಸಲು ಪ್ರಯತ್ನಿಸಿರಬಹುದೆಂದು ಒಂದು ಊಹೆ.

ಕೇದಾರೇಶ್ವರ ಲಕ್ಷ್ಮಿ ಎಂಬ ಕಲ್ಪವಲ್ಲಿಯನ್ನು ಹುಟ್ಟಿಹಾಕಿದವನು ಸೋಮೇಶ್ವರ. ಅದು ಶಾಖೆಗಳಾಗಿ ಒಡೆದು ಚಿಗುರು ಹೂಗಳನ್ನು ಬಿಟ್ಟಿದ್ದು ವಾಮಶಕ್ತಿಯ ಕಾಲದಲ್ಲಿ ಹಣ್ಣುಗಳನ್ನು ಬಿಟ್ಟಿದ್ದು ಗೌತಮನ ಕಾಲದಲ್ಲಿ ಎಂದು ಶಾಸನ ಹೇಳುತ್ತದೆ. ಮತ್ತು ಗೌತಮರಿಬ್ಬರು ವಿದ್ಯಾಭರಣನ ಶಿಷ್ಯರಾಗಿದ್ದಂತೆ ಊಹಿಸಿಬಹುದು. ವಾಮಶಕ್ತಿಯ ತರುವಾಯ ಗೌತಮನೇ ವಿದ್ಯಾಭರಣನ ಅಗ್ರಶಿಷ್ಯನೆಂದು ಕರೆಯಿಸಿಕೊಂಡನೆಂದು ಕಾಣುತ್ತದೆ.(ಎಕ ೭ ಶಿಕಾರಿ ೧೦೦-ಕ್ರಿ.ಶ.೧೧೨೯) ಗೌತಮನ ಶಿಷ್ಯ ೨ನೇಯ ವಾಮಶಕ್ತಿ ಇವನೇ ಗುರು ಪರಂಪರೆಯಲ್ಲಿ ಅತ್ಯಂತ ಪ್ರಸಿದ್ದನಾದವನು. ಒಂದು ಶಾಸನದಲ್ಲಿ ಗುರು ಪರಂಪರೆಯಲ್ಲಿ ಹೇಳುವಾಗ ೧ನೇ ವಾಮಶಕ್ತಿಯ ಹೆಸರು ಹೇಳದೇ ಇರುವುದರಿಂದ ಅವನು ಬಹಳ ಕಾಲ ಸ್ಥಾನಪತಿಯಾಗಿರಲಿಲ್ಲವೆಂದು ಕಾಣುತ್ತದೆ.(ಎಕ ೭ ಶಿಕಾರಿ ೧೦೦ -ಕ್ರಿ.ಶ೧೧೫೬). ಕೇದಾರೇಶ್ವರ ಮಠದ ಮುನಿಗಳಿಗೆ ಸಮಾನರಾದರು ಅದು ದಕ್ಷಿಣ ಕೇದಾರವಾಯಿತ್ತು.(ಎಕ ೭ ಶಿಕಾರಿ೧೦೦-ಕ್ರಿ.ಶ.೧೧೨೯)ಕೇದಾರೇಶ್ವರ ಮಠದ ಮೂಲ

ಪ್ರವರ್ತಕನಾದ ಕೇದಾರಶಕ್ತಿಯಿಂದ ಆರಂಭವಾದ ಮತ್ತೊಂದು ಗುರು ಪರಂಪರೆಯೂ ಇದ್ದಂತೆ ಶಾಸನಗಳಿಂದ ತಿಳಿದು ಬರುತ್ತದೆ. ಕೇದಾರಶಕ್ತಿ ರುದ್ರಾಭರಣ ವಾಲ್ಮೀಕಿ ಮುನಿ ಇವರದೇ ಪ್ರತ್ಯೇಕ ಸ್ಥಾನವಿತ್ತೆ ಅಥವಾ ಇವರು ಕೇದಾರೇಶ್ವರ ದೇವಸ್ಥಾನದಲ್ಲೇ ಇದ್ದರೋ ಎಂಬುದು ಸ್ಪಷ್ಟವಾಗುವುದಿಲ್ಲ. ಕೇದಾರೇಶ್ವರದಲ್ಲಿ ಇದ್ದರೂ ರುದ್ರಾಭರಣನಾಗಲೀ ವಾಲ್ಮೀಕಿ ಮುನಿಯಾಗಲೀ ಅದರ ಸ್ಥಾನಪತಿಯಾಗಲಿಲ್ಲ(ಎಕ ೭ ಶಿಕಾರಿ ೧೦೭-ಕ್ರಿ.ಶ.೧೦೭೮).

ಬ್ರಹ್ಮಪುರಿಗಳು:

ಬ್ರಹ್ಮಪುರಿಗಳು ಅಗ್ರಾಹಾರಗಳಿಗೂ ಇದ್ದ ವ್ಯಾತ್ಯಾಸವೆಂದರೆ ಅಗ್ರಹಾರಗಳು ತಾವೇ ಸ್ವತಃ ಒಂದು ಗ್ರಾಮವಾಗಿದ್ದರೆ. ಬ್ರಹ್ಮಪುರಿಗಳು ಒಂದು ಪಟ್ಟಣದ ಅಥವಾ ನಗರದ ಭಾಗವಾಗಿದ್ದವು. ಮಿಕ್ಕ ವಿಚಾರಗಳಲ್ಲೆಲ್ಲಾ ಬ್ರಹ್ಮಪುರಿಗಳು ಅಗ್ರಹಾರಗಳನ್ನು ಹೋಲುತ್ತಿದ್ದುದಲ್ಲದೇ ಅದರಂತೆಯೇ ಉಚ್ಚ ಶಿಕ್ಷಣ ಕೇಂದ್ರಗಳಾಗಿದ್ದವು. ಅಂದಿನ ಕಾಲದಲ್ಲಿ ನಗರಗಳು ಕಡಿಮೆ ಇದ್ದುದ್ದರಿಂದ ಬ್ರಹ್ಮಪುರಿಗಳು ಕೂಡ ವಿರಳವಾಗಿದ್ದವು. ಬಳ್ಳಿಗಾವಿಯ ಬಳಿ ಸಿಕ್ಕ ಶಾಸನವು ಬ್ರಹ್ಮಪುರಿಗಳು ಹೇಗೆ ಅಸ್ತಿತ್ವಕ್ಕೆ ಬಂದವು ಎಂಬುದನ್ನು ವಿವರಿಸುತ್ತವೆ. ಇದನ್ನು ಬಳ್ಳಿಗಾವಿಯಲ್ಲಿ ತನ್ನ ನಿವಾಸ ಸ್ಥಾನವನ್ನು ಹೊಂದಿದ್ದ ಬನವಾಸಿಯ ಪ್ರಾಂತ್ಯಾಧಿಕಾರಿಯಾದ ಕೇಶವದೇವನು ಸ್ಥಾಪಿಸಿದನು. ಆ ಬ್ರಹ್ಮಪುರಿಯು ಸಕಲ ಗುಣಸಂಪನ್ನರಾದ ಮೂವತ್ತೆಂಟು ಮಂದಿ ಬ್ರಾಹ್ಮಣರಿಂದ ಕೂಡಿತ್ತು. ಅವರುಗಳು ಅನೇಕ ಪುರಾಣಗಳು, ಸ್ಮೃತಿಗಳು, ಕಾವ್ಯಗಳು, ನಾಟಕಗಳು, ಭಾಷ್ಯಗಳು ಮತ್ತು ಮಂಜರಿಗಳಲ್ಲಿ ಪರಿಣಿತರಾಗಿದ್ದರು. ಅಲ್ಲದೇ ಚತುರ ವಾಗ್ಮಿಗಳೂ, ಭಾಷಾ ಸಂಪನ್ನರೂ ಆಗಿದ್ದರು. ಅನೇಕ ಕವಿಗಳು ಭಾಷಾ ಪ್ರವೀಣರೂ, ವಾಗ್ಮಿಗಳೂ ಮತ್ತು ಪಂಡಿತರುಗಳಿಗೆ ಐವರು ಆಧಾರವಾಗಿದ್ದರು. ಅವರಿಗೆ ಶಿಲಾಶಾಸನಗಳನ್ನು ಓದಿ ಗ್ರಹಿಸುವ ಶಕ್ತಿ ಇತ್ತು.(ಎಕ ೭ ಶಿಕಾರಿ ೧೨೩ –ಕ್ರಿ.ಶ ೧೧೫೮)

ಕೇಶವ ದೇವನು ಪಂಡಿತರಾಗಿ ಬಲಿಪುರದ ದಕ್ಷಿಣಭಾಗದ ಫಲವತ್ತಾದ ಭೂಮಿಯನ್ನು ವಸತಿಗಾಗಿ ಪಡೆದನು. ಆ ಭಾಗದಲ್ಲಿ ಎಲ್ಲಾ ರೀತಿಯ ಹಣ್ಣುಗಳನ್ನು ಬೆಳೆಯುತ್ತಿದ್ದುದಲ್ಲದೇ ಅದು ವಿಶಾಲ ಕನ್ನಡಿಯಂತೆ ಸಮಮಟ್ಟವಾದ ಭೂಮಿಯಾಗಿತ್ತು. ಅಲ್ಲಿ ಆ ಮನೋಹರವಾದ ಪ್ರದೇಶದಲ್ಲಿ ಅವನು ಒಂದು ಸುಂದರವಾದ ಕೇಶವನ ದೇವಾಲಯವನ್ನು ಕಟ್ಟಿಸಿದನು. ಆ ದೇವಾಲಯದ ಮುಂದಿನ ವಿಶಾಲವಾದ ಭೂಮಿಯಲ್ಲಿ ತನ್ನ ಹೆಸರಿನಲ್ಲಿ ವೀರಕೇಶವಪುರ ಎಂಬ ಪಟ್ಟಣವನ್ನು ನಿರ್ಮಾಣ ಮಾಡಿದನು. ಅವನು ಆ ಪಟ್ಟಣವನ್ನು ವಿಶಾಲವಾದ ಮನೆಗಳಿಂದ ತುಂಬಿ ಪ್ರತಿಯೊಂದು ಕೊಠಡಿಯಲ್ಲೂ ಮೃದುವಾದ ಮತ್ತು ಎತ್ತರವಾದ ಪೀಠವನ್ನು ಇರಿಸಿ, ಪಾತ್ರೆಗಳಿಂದ ಕೂಡಿದ ಆ ಮನೆಗಳನ್ನು ಮೇಲೆ ಹೇಳಿದ ಬ್ರಾಹ್ಮಣರಿಗೆ ದಾನ ಮಾಡಿದನು. ಇದೇ

ರೀತಿಯ ಬ್ರಹ್ಮಪುರಿಗಳು ಸೂಡಿ,ಅರಿಸಿಬೀಡಿ ಅಥವಾ ವಿಕ್ರಮಪುರ, ತಲಕಾಡು ಮುಂತಾದ ಕಡೆಗಳಲ್ಲಿ ಇದ್ದವು.(ಕರ್ನಾಟಕದ ಪರಂಪರೆ, ಸಂಪುಟ.೧, ೧೯೬೨, ಪುಟ ೪೧೬).

ಘಟಿಕಾಸ್ಥಾನ:

ಅಗ್ರಹಾರ, ಬ್ರಹ್ಮಪುರಿ, ದೇವಸ್ಥಾನಗಳಿಗಿಂತ ಘಟಿಕಾಸ್ಥಾನಗಳು ಉನ್ನತ ವಿದ್ಯಾಕೇಂದ್ರಗಳಾಗಿದ್ದವು. ಕರ್ನಾಟಕದ ಕುಂತಲ ದೇಶದಲ್ಲಿ ಧರ್ಮಕ್ಕೆ ನೆರ್ಮಧಾಂ ಭೋಗಕ್ಕಾಗಮುಮಾದ ಘಟಿಕಾಸ್ಥಾನಗಳಿದ್ದಂತೆ ಶಾಸನವೊಂದು ತಿಳಿಸುತ್ತದೆ.(ಚಿದಾನಂದ ಮೂರ್ತಿ.ಎಂ.೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೨೪೬) ಗುರು ವೀರಶರ್ಮನೊಡಗುಡಿ ಕದಂಬರ ಮಯೂರವರ್ಮನು ಪ್ರವಚನದಲ್ಲಿ ಪಾರಂಗತನಾಗಬೇಕೆಂದು ಕಂಚಿಗೆ ಹೋಗಿ ಅಲ್ಲಿಯ ಎಲ್ಲಾ ಘಟಿಕಾಸ್ಥಾನಗಳನ್ನು ಪ್ರವೇಶಿಸಿ ಆಶು ತಾರ್ಕಿಕನಾದನೆಂದು ತಾಳಗುಂದ ಶಾಸನವು ತಿಳಿಸುತ್ತದೆ.(ಎಕ ೭ ಶಿಕಾರಿ ೧೭೬ – ಕ್ರಿ.ಶ.೪೫೦) ವಿದ್ವಾಂಸರು ಶಾಸ್ತ್ರಾರ್ಥಕ್ಕೆ ಕರೆದಾಗ ಆ ಶಾಸ್ತ್ರಾರ್ಥಗಳು ಘಟಿಕಾಸ್ಥಾನಗಳಲ್ಲಿ ನಡೆಯುತ್ತಿರಬೇಕು. (ಎಕ ೭ ಶಿಕಾರಿ ೨೩೫– ಕ್ರಿ.ಶ.೧೨೦೭) ಘಟಿಕಾಸಾಹಸಿ, ಘಳಿಸಾಸ, ಘೈಸಾಸ, ಘೆಸ ಆಗಿರಬೇಕು. (ಚಿದಾನಂದಮೂರ್ತಿ .ಎಂ, ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ –೨೪೮) ವಾಸುದೇವ ಘೈಸಾಸ ಎಂಬ ವಿದ್ವಾಂಸರು ಕುಕ್ಕನೂರು ಎಂಬ ಅಗ್ರಹಾರದಲ್ಲಿದ್ದಂತೆ ಶಾಸನವೊಂದು ತಿಳಿಸುತ್ತದೆ.(ಎಕ ೭ ಶಿಕಾರಿ ೧೬೨–ಕ್ರಿ.ಶ.೧೯೯೩).

ಜೈನವಿದ್ಯಾಕೇಂದ್ರಗಳು :

ಆದಿಸೇನ ಪಂಡಿತರ ಧರ್ಮರಾಜ್ಯ ಆಳೆ, ಧರ್ಮರಾಜ್ಯಂ ದೇವೇಂದ್ರಸೇನ ಪಂಡಿತರ ಆಳೆ ಇದು ಜೈನ ಪರಂಪರೆ ಹೆಸರುಗಳಂತೆ ಕಾಣುತ್ತದೆ.(ಭೋಜರಾಜ ಪಾಟೀಲ್.೧೯೯೫, ನಾಗರ ಖಂಡ–೭೦: ಒಂದು ಅಧ್ಯಯನ, ಪು೨೪೬). ಈಸೂರಿನಲ್ಲಿ ಸುರನೇಮಿ ದೇವರ ಗುಡ್ಡದೇವಿಸೆಟ್ಟಿ ಕ್ರಿ.ಶ.೧೦೮೦ರಲ್ಲಿ ಜಿನ ಬಸದಿಗೆ ಆಹಾರದಾನ ಮೊದಲಾದ ಸಂಗತಿಗಳಿಗೆ ಭೂದಾನದ ದಾಖಲೆ ನೀಡುತ್ತದೆ.(ಎಕ ೭ ಶಿಕಾರಿ ೭–ಕ್ರಿ.ಶ.೧೦೮೦) ಕ್ರಿ.ಶ೧೦೭೭ರಲ್ಲಿ ಗುಣಭದ್ರದೇವ ಮುನಿ ಮಹಾಸೇನ ಭೃತಿ ಮತ್ತು ರಾಮಸೇನ ಪಂಡಿತರೆಂಬ ಜೈನ ಗುರುಗಳ ಉಲ್ಲೇಖವಿದೆ(ಎಕ ೭ ಶಿಕಾರಿ ೧೨೪–ಕ್ರಿ.ಶ.೧೦೭೭).ಶ್ರೀ ಶಾಂತಿನಾಥ ಸಮ್ಮಂಧಿಯಪ್ಪ ಬಳಗಾರ ಗಣಪ ಮೇಘನಾದಿ ಭಟ್ಟಾರಕರ ಶಿಷ್ಯರಪ್ಪ ಕೇಶವನಂದಿ ಅಷ್ಟೋಪವಾಸಿ ಭಟರಕ ಬಸದಿಗೆ ದತ್ತಿ ನೀಡಿದ್ದಾಗಿದೆ.(ಎಕ ೭ ಶಿಕಾರಿ ೧೨೦–ಕ್ರಿ.ಶ.೧೦೪೮). ಚಿಕ್ಕಮಾಗಡಿ ಶಾಸನದಲ್ಲಿ ಶಾಂತಿನಾಥ ಬಸದಿ ಈ ಕಂಪಣದಲ್ಲೆಲ್ಲಾ ಜಿನಧರ್ಮ ಪ್ರಸಾರಗೊಳ್ಳಲು ಚಿಕ್ಕಮಾಗಡಿ ಜಿನಾಲಯ ಉತ್ತಮ ನಿದರ್ಶನ. ಇಂಥ ಅಭಿಷೇಕಾದಿ ಅಂಗಭೋಗಕ್ಕಂ, ಋಷಿಯ ಆಹಾರದಾನಕ್ಕಂ

ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ದತ್ತಿ ಬಿಟ್ಟಿದ್ದಾನೆ.(ಎಕ ೭ ಶಿಕಾರಿ ೧೯೭ –ಕ್ರಿ.ಶ೧೧೮೨). ಶಿವಳ್ಳಿ ತಾಮ್ರ ಶಾಸನದಲ್ಲಿ ಶಾಂತ ತಟಾಕದ ಉಲ್ಲೇಖವಿದೆ. ಇದನ್ನು ಶಾಂತಿನಾಥ ತೀರ್ಥಂಕರನಿಂದ ಈ ಹೆಸರು ಬಂದಿದೆ. ಕೆರೆಯ ಏರಿಯ ಮೇಲೆ ಶಾಂತಿನಾಥ ಬಸದಿ ಇದೆ. ಈ ಬಸದಿಗೆ ಕ್ರಿ.ಶ.೯೨೧ ರಲ್ಲಿ ನಾಗರ್ಜುನನ ಪತ್ನಿ ಜಕ್ಕಿಯಬ್ಬೆ ದತ್ತಿ ನೀಡಿದಾಳೆ. ಬಂದಳಿಕೆ ಶಾಸನ ಕ್ರಿ.ಶ.೧೦೭೫ರಲ್ಲಿ ಶ್ರೀಮೂಲಸಂಘಾನ್ವಯ ಕ್ರಾಣೂರ್ಗ್ಗಣ......ಚ್ಚದ ಶ್ರೀ ಮದು ಭಯಸಿದ್ದಾನ್ತ ವಾರ್ದ್ಧಿಚೂ.....ಪ್ಪರಾಮ ನಂದಿ ಸಿದ್ದಂತ ದೇವರ ಶಿಷ್ಯರು ಕುಳ.....ದೇವರ ಕಾಲಂಕರ್ಚಿ ದತ್ತಿ ಬಿಡಲಾಗಿದೆ.(ಎಕ ೭ ಶಿಕಾರಿ ೨೨೧–ಕ್ರಿ.ಶ೧೦೭೫). ಗೊಗ್ಗದಲ್ಲಿನ ವೀರಭದ್ರ ದೇಗುಲ ಮುಂಬಾಗಿಲಲ್ಲಿ ಜೈನಬಸದಿಗೆ ಸಂಬಂಧಿಸಿದ ಶಾಸನಗಳಿವೆ. ಇದು ಬಹುಶಃ ಪೂರ್ವದಲ್ಲಿ ಜೈನಬಸದಿಯಾಗಿರಬೇಕು.

ಬೌದ್ಧವಿದ್ಯಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಬಳ್ಳಿಗಾವಿಯ ಕ್ರಿ.ಶ.೧೦೬೪ರ ಶಾಸನವು ಜಯಂತಿ ಪ್ರಬೌದ್ಧ ವಿಹಾರ ಮಾಡಿಸಿ ದತ್ತಿ ಬಿಟ್ಟಿರುವುದನ್ನು ತಿಳಿಸುತ್ತದೆ.(ಎ.ಕ ೭ ಶಿಕಾರಿ ೧೭೦–ಕ್ರಿ.ಶ.೧೦೬೪). ತೊಗರ್ಸಿಯ ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ಬಳಿಯ ಕಲ್ಯಾಣಿಯ ದಡದಲ್ಲಿ ಬೌದ್ಧ ದೀಪಸ್ತಂಭವನ್ನು ಹಿರಿಯ ಸಂಶೋಧಕರಾದ ಆ ಸುಂದರ ರವರು ಗುರುತಿಸಿದ್ದಾರೆ.(ಕನ್ನಡ ಭಾರತಿ ೭ –೨ ೧೦೭೫,ಪು.೧೩.೧೪).

ಕಾಳಾಮುಖ ವಿದ್ಯಾಕೇಂದ್ರಗಳು:

ಕ್ರಿ.ಶ.೧೦೩೬ರ ಶಾಸನದಲ್ಲಿ ಲಕುಳೀಶ್ವರ ಪಂಡಿತರ ವರ್ಣನೆ ಹಾಗೂ ಬಳ್ಳಿಗಾವಿಯ ಕಾಳಾಮುಖ ಬ್ರಹ್ಮಚಾರಿ ಸ್ಥಾನಂ ಎಂದು ಕಾಳಾಮುಖರ ವಿದ್ಯಾಕೇಂದ್ರದ ಉಲ್ಲೇಖ ದೊರೆಯುತ್ತದೆ.(ಎಕ ೭ ಶಿಕಾರಿ ೧೨೬–ಕ್ರಿ.ಶ.೧೦೩೬). ಕಾಳಾಮುಖರ ಗಂಡ ಕ್ರಿಯಾಶಕ್ತಿ ಪಂಡಿತರನ್ನು ವರ್ಣಿಸುತ್ತದೆ.(ಎಕ ೭ ಶಿಕಾರಿ ೧೦೫೯– ಕ್ರಿ.ಶ.೧೦೫೯) ಶ್ರೀಮಜ್ಜಗದೇಗ ಮಲ್ಲದೇವರ ಮುನ್ತೆ ಗಂಡ ಭೇರುಂಡವನ್ನು ನಿಲ್ಲಿಸಿ ಶ್ರೀಮದ ನಂತ ಶಿವಾಚಾರ್ಯರ ಕಾಲಂ ಕರ್ಚಿ ದತ್ತಿ ಬಿಡಲಾಗಿದೆ.(ಎಕ ೭ ಶಿಕಾರಿ ೧೫೧– ಕ್ರಿ.ಶ.೧೨೪೭).ಬೌದ್ಧಂ ತಾರಾಭಗವತಿ ಹಾಗೂ ಜಯಂತಿ ಬೌದ್ದ ವಿಹಾರ ಹಾಗೂ ಜೋಗೇಶ್ವರ, ಲೋಕೇಶ್ವರ ದೇವಾಲಯಗಳ ನಿರ್ಮಾಣದ ಬಗ್ಗೆ ಆಧಾರಗಳು ಒದಗಿಸುತ್ತವೆ. (ಎಕ ೭ ಶಿಕಾರಿ–೧೨೦.೧೭೦.೧೯೯,೧೦೬). ಜೈನ ಗೋಳಪಯ್ಯ ಬಸದಿಯ ಉಲ್ಲೇಖವಿದೆ. (ಎಕ ೭ ಶಿಕಾರಿ ೧೩೪, ಕ್ರಿ.ಶ.೧೦೬೮) ಸಿಂಗನೆಂಬ ಜೈನನಿಷ್ಠ ಮತ್ತು ರಾಮಸೇನ ಪಂಡಿತರ ದಾಖಲೆಗಳಿವೆ. ಲಕ್ಷ್ಮಣ ಮತ್ತು ಶಾಂತಿನಾಥನೆಂಬ ಜೈನಕವಿಗಳ ಉಲ್ಲೇಖವಿದೆ(ಎಕ ೭ ಶಿಕಾರಿ ೧೨೪–ಕ್ರಿ.ಶ ೧೦೭೭).ಬಳ್ಳಿಗಾವಿಯ ಪಂಚಮಠವಿದ್ದು ಅದರಲ್ಲಿ ಕೋಡಿಮಠವು ಒಂದು ಅದರ ಬಗ್ಗೆ ಮುಂದೆ ಚರ್ಚಿಸಲಾಗಿದೆ.

ನಾಗರಖಂಡ –೭೦ರ ರಾಜಧಾನಿ ಬಂದಳಿಕೆಯಲ್ಲಿ ಕ್ರಿ.ಶ.೧೧೬೨ರಲ್ಲಿ ಬೊಪ್ಪೇಶ್ವರರಾಯನು ನಿರ್ಮಿಸಿ ಕಲ್ಯಾಣ ಶಕ್ತಿಗಳ ಪಂಡಿತರ ಕಾಲಂ ಕರ್ಚಿ ದತ್ತಿ ನೀಡಿದ್ದಾನೆ. ಈತ ದೇವಶಕ್ತಿಯ ಶಿಷ್ಯನಾದ ಮಾಚಯನಾಯಕ ಇಲ್ಲಿಯವನು. ಈ ಮಾಚಯನಾಯಕನ ಬಗ್ಗೆ ಹೇಳುವಾಗ ಈತನು ಮಿಂಚಿನಂತೆ ಧಾರ್ಮಿಕ ರಂಗದಲ್ಲಿಯೂ ಶೋಭಿಸಿದ್ದನು. ಬರ್ಮಕೂರ ಹಿರಿಯ ಮಠದ ಸ್ವಾಮಿಯವರಿಂದ ಅನುಗ್ರಹ ಪಡೆದು ಕೇವಲ ಹತ್ತು ವರ್ಷಗಳಲ್ಲಿ ಎರಡು ಶಿಲಾ ಶಿವದೇವಾಲಯಗಳನ್ನು ನಿರ್ಮಿಸಿದನು. ನಾಗರಖಂಡದಲ್ಲಿ ಕನ್ನಡ ನಾಡು ಕಂಡ ಓರ್ವ ಮಹಾ ತಳವಾರ ಮಾಚಯನಾಯಕ ಎಂಬುದು ಭೋಜರಾಜ ಪಾಟೀಲ್ ರವರ ಅಭಿಪ್ರಾಯ. ಮಾಯತಮ್ಮನ ಮುಚುಡಿ ಮತ್ತು ಮತ್ತಿಕೋಟೆಗಳಲ್ಲಿ ಗುರು–ಶಿಷ್ಯರ ಪರಂಪರೆಯಾಗಿ ಶಾಸನದ ಉಲ್ಲೇಖಗಳು ದೊರೆಯುತ್ತವೆ. ಇಟ್ಟಿಗೆಯ ಸಂತತಿ ಭುಜಂಗಾವಳಿಯ ಶಕ್ತಿ ಪರ್ಷೆಯ ಕಾಳಾಮುಖರ ಅಗ್ರಗಣ್ಯರಾದ ಶ್ರೀಮತ್ ತ್ರಿಲೋಚನ ಪಂಡಿತ ದೇವರ ಶಿಷ್ಯರಲ್ಲಿ ಅಗ್ರಗಣ್ಯರಾದ ಶ್ರೀಮದ ವರೇಶ್ವರರ ಪ್ರಸ್ತಾಪವಿದೆ(ಎಕ ೭ ಶಿಕಾರಿ ೨೯೨ – ಕ್ರಿ.ಶ.೧೦೭೭)

ಕೋಡಿಮಠ ಪಂಚಲಿಂಗ ಮಠಗಳಲ್ಲದೆ ಅಗ್ನೀಶ್ವರ ಮಠ, ಉಭಯದ್ವಾದಶ ನಾರಾಯಣ ಮಠ, ಕಲ್ಲೇಶ್ವರ ಮಠ, ಜಗದೇಕ ಮಲ್ಲೇಶ್ವರಮಠ, ತ್ರಿಪುರಾಂತಕ ಮಠ, ನರಸಿಂಹ ದೇವರ ಮಠ, ಭೇರುಂಡೇಶ್ವರ ಮಠ, ಬೌದ್ಧಮಠ, ಮೂಲಸ್ಥಾನದ ನಂದಿಕೇಶ್ವರ ಮಠ ಮುಂತಾದವುಗಳು ಬಳ್ಳಿಗಾವಿಯಲ್ಲಿದ್ದವೆಂದು ತಿಳಿದು ಬರುತ್ತದೆ.(ರಘನಾಥ ಭಟ್ ಹೆಚ್.ಆರ್.೧೯೭೭, ಕರ್ನಾಟಕ ಶಾಸನ ಕಲೆ, ಪುಟ ೧೫೪) ಇದರ ಹಿಡಿತದಲ್ಲಿ ಅಬ್ಬಲೂರಿನ ಬ್ರಹ್ಮೇಶ್ವರ ದೇಗುಲ, ಹಳೇ ನೀಡನೇಗಿಲದ ಮಲ್ಲಿಕಾರ್ಜುನ ದೇಗುಲ, ಗದುಗಿನ ತ್ರಿಕೂಟೇಶ್ವರ, ಸೂಡಿಯ ನಗರೇಶ್ವರ ದೇಗುಲ, ಕಪ್ಪಟೂರ ಹತ್ತಿರ ದೇಗುಲ, ಹಕಲಿನ ಕೋಟೇಶ್ವರ ದೇಗುಲ ಬಳ್ಳಿಗಾವಿಯ ತ್ರಿಪುರಂತಕ ದೇವಸ್ಥಾನ, ಕೇದಾರೇಶ್ವರ ದೇವಸ್ಥಾನ ಹಾಗೂ ಮೂಲಸ್ಥಾನ ನಂದೀಶ್ವರ ದೇವರ ದೇವಾಲಯವು ಕಾಳಾಮುಖರ ಶಕ್ತಿ ಪರಿಷತ್ತಿನ ಪ್ರಮುಖ ಕೇಂದ್ರವಾಗಿತ್ತು. ಶಿವಶಕ್ತಿಯು ಕಾಳಾಮುಖರಲ್ಲೆಲ್ಲಾ ಅಗ್ರಮಾನ್ಯ ಯೋಗ ಸಾಮರ್ಥ್ಯನನ್ನು ಅವನಿಗೆ ನೀಡಲಾಗಿದೆ.(ವಿರೂಪಾಕ್ಷ ಕುಲಕರ್ಣಿ ೨೦೦೫, ಕಾಪಾಲಿಕರು ಮತ್ತು ಕಾಳಾಮುಖರು, ಪುಟ ೧೩೫) ಮೂಲಿಗ ಶಿವಶಕ್ತಿಯ ಕಾಲನ್ನು ತೊಳೆದು ಇರಿವಬೆಡಂಗನ ಮಗ ಕುಂದಮರಸನು ಮೂಲಸ್ಥಾನ ನಂದೀಶ್ವರ ದೇವರ ದೇವಾಲ್ಯಕ್ಯಂ ಜೀರ್ಣೋಧ್ಧಾರಕಂ ಮಾಡಿಯ ದೇವರ ನೈವೇದ್ಯಕ್ಯಂ ಕಂಡ ಸ್ಪುಟಿತ ಜೀರ್ಣೋದ್ಧಾರಕಂ ದತ್ತಿ ಬಿಡಲಾಗಿದೆ ಹಾಗಾಗಿ ನಂದೀಶ್ವರ ದೇವಾಲಯವು ಕಾಳಾಮುಖರ ಮೂಲಸ್ಥಾನವಾಗಿರಬೇಕು. ಕ್ರಿ.ಶ.೧೦೩೬ರ ಶಾಸನವು ಐದು ಜನ ಪಾಂಡವರು ಬಳ್ಳಿಗಾವಿಗೆ ಬಂದ ಐವರೂ ಐದು ಲಿಂಗವನ್ನು ಸ್ಥಾಪನೆ ಮಾಡಿದ್ದಾಗಿ ಬಣ್ಣಿಸುತ್ತದೆ.(ಎಕ ೭ ಶಿಕಾರಿ ೧೨೬,ಕ್ರಿ.ಶ ೧೦೩೬)

ಚಾಳುಕ್ಯರಾಜ ಜಯಸಿಂಹನ ಕಾಲದ ಕ್ರಿ.ಶ.೧೦೩೬ರ ಶಾಸನದಲ್ಲಿ ದತ್ತಿ ನೀಡಿದ್ದಾಗಿ ಉಲ್ಲೇಖಿಸಲಾಗಿದೆ. ಲಕುಳೀಶ್ವರ ಯತಿಯ ಸಮಸ್ತ ತರ್ಕಾದಿ ಶಾಸ್ತ್ರಗಳಲ್ಲಿ ಪರಿಣತಿ ಹೊಂದಿದವನ್ನು ಇತ್ಯಾದಿ ವರ್ಣನೆಗಳಿಂದ ಕೂಡಿದ ಈತ ಜಂಭದ ಪಂಡಿತರಿಗೆ ಯಮಪಾಶದಂತೆಯೂ, ಜೈನವಾದಿಗಳಿಗೆ ಧೂಮಕೇತುವಿನಂತೆಯೂ ಇದ್ದ, ವಾದಿರುದ್ರಗಣ ಲಕುಳೀಶ್ವರನ ಚಿತ್ರಣ ಕಾಳಾಮುಖರು ವಿವಿಧ ಪಂಥದವರೊಂದಿಗೆ ವಾದದಲ್ಲಿ ಗೆದ್ದು ತಮ್ಮ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳಲು ಅಗತ್ಯವಾಗಿದ್ದ ವಾತಾವರಣವನ್ನು ಧ್ವನಿಸುತ್ತದೆ. (ಎಕ ೭ ಶಿಕಾರಿ ೧೨೬-ಕ್ರಿ.ಶ.೧೦೩೬).

ಭಾರತೀಕರ್ಣಪೂರ ರುದ್ರಾವತಾರ ಕಾಳಾಮುಖರ ಗಂಡರಾದ ಕ್ರಿಯಾಶಕ್ತಿ ಪಂಡಿತ ದೇವರ ಕಾಲನ್ನು ತೊಳೆದು ಬೆನಕನ ಕೊಳದ ಸಿದ್ದೇಶ್ವರ ದೇವರ ದೇಗುಲವನ್ನು ಮಾಡಿಸಿ, ಅಲ್ಲಿನ ಗಂಧ, ಧೂಪ, ನೈವೇದ್ಯಕ್ಕೆ ಹಾಗೂ ತಪೋಧನರಾದ ವಿದ್ಯಾರ್ಥಿಗಳ ಆಹಾರ ಮತ್ತು ವಸ್ತ್ರಕ್ಕಾಗಿ ಬೆಣ್ಣೆಯ ಕೆರೆಯ ಕೆಳಗಿನ ಗದ್ದೆಯನ್ನು ದತ್ತಿ ನೀಡಿರುವ ಉಲ್ಲೇಖವಿದೆ. (ಎಕ ೭ ಶಿಕಾರಿ ೧೫೩-ಕ್ರಿ.ಶ.೧೦೪೯).ಚಾವುಂಡರಾಯನು ಬಳ್ಳಿಗಾವಿಯ ಶ್ರೀಮಜ್ಜಗದೇಕ ಮಲ್ಲೇಶ್ವರ ದೇವರ ಮುಂದೆ ಗಂಡಭೇರುಂಡ ಸ್ತಂಭವನ್ನು ನಿಲ್ಲಿಸಿ ಶ್ರೀಮದಾ ನಂತ ಶಿವಾಚಾರ್ಯರ ಕಾಲ್ತೊಳೆದು ದತ್ತಿ ಬಿಡಲಾಗಿದೆ(ಎಕ ೭ ಶಿಕಾರಿ ೧೮೧-ಕ್ರಿ.ಶ.೧೦೪೭)ಶ್ರೀಮದ್ ನಂದಿ ಪಟ್ಟಣ ರಾಜಧಾನಿ ಬಳ್ಳಿಗಾವಿಯ ಪಟ್ಟಣ ಮಧ್ಯದಲ್ಲಿ ವಡ್ಡವ್ಯವಾಹಾರಿ ಹಾಲಿಕಚ್ಚಯ ಸೋವಿ ಸೆಟ್ಟಿ ಲಿಂಗ ಪ್ರತಿಷ್ಠಾಪನೆ ಮಾಡಿ ಅದಕ್ಕೆ ಅಭಿನವ ಸೋಮೇಶ್ವರ ದೇವರೆಂದು ಹೆಸರನ್ನಿಟ್ಟು ಪಟ್ಟಣದ ಮೂಲಿಗ ಜ್ಞಾನ ಶಿವದೇವರ ಕಾಲಂ ಕರ್ಚಿ ದತ್ತಿ ನೀಡಿದ್ದನು. ಕಾಲಂತರದಲ್ಲಿ ಆ ದೇವಾಲಯ ಜೀರ್ಣವಾದಾಗ ಆ ಸಂದರ್ಭದಲ್ಲಿ ಪಟ್ಟಣ ಸ್ವಾಮಿಗಳಾಗಿದ್ದೆ ಮೆಚಿಸೆಟ್ಟಿ ಕೀರ್ತಿಸೆಟ್ಟಿ,ಪಂಚಮಠಂ,ಹಿರಿಯಮಠಂ,ಮೊದಲಾದ ಸಮಸ್ತರ ಸಮ್ಮುಖದಲ್ಲಿ ನಾನಾ ದೇಶದ ವ್ಯಾಪಾರಿಗಳು ಮೊದಲಾದವರು ಸೇರಿ ಆ ಹಿಂದಿನ ಸೋಮೇಶ್ವರ ದೇವಾಲಯಕ್ಕೆ ಗವಿಗರೇಶ್ವರ ದೇವರೆಂದು ಪೆಸರನ್ನಿಟ್ಟು ಜೀರ್ಣೋದ್ದಾರ ಮಾಡಿದ್ದಾರೆ(ಎಕ ೭ ಶಿಕಾರಿ ೧೧೮-ಕ್ರಿ.ಶ.೧೦೫೪) ಬಳ್ಳಿಗಾವಿ ಪಟ್ಟಣದವರು, ಪಟ್ಟಣದ ದಕ್ಷಿಣ ಭಾಗದಲ್ಲಿರುವ ತಾವರೆಗೆರೆಯ ನಖರೇಶ್ವರ ದೇವರ ಆಚಾರ್ಯನಾದ ಸೋಮೇಶ್ವರ ಪಂಡಿತ ದೇವರಿಗೆ ದೇವರ ಸೇವೆ ಮತ್ತು ಅಲಂಕರಣ, ದೇವಾಲಯದ ಸುಸ್ಥಿತಿ ಅಲ್ಲಿ ವಾಸಿಸುವ ವಿದ್ಯಾರ್ಥಿ ಹಾಗೂ ಯತಿಗಳ ಆಹಾರಗಳಿಗಾಗಿ ನೀಡಲಾದ ದತ್ತಿಯಾಗಿದೆ.(ವಿರೂಪಾಕ್ಷ ಕುಲಕರ್ಣಿ ೨೦೦೫, ಕಾಪಾಲಿಕರು ಮತ್ತು ಕಾಳಾಮುಖರು, ಪುಟ ೧೩೬).

ಕ್ರಿ.ಶ.೧೦೧೯ ರಿಂದ ೧೧೯೮ರ ನಡುವಿನ ಬಳ್ಳಿಗಾವೆ ಶಾಸನಗಳಲ್ಲಿ ದೂರಕುವ ಕಾಳಾಮುಖ ಪಂಡಿತರ ಕಾಲ ಮತ್ತು ಪಟ್ಟಿ ಹಾಗೂ ದೇಗುಲಗಳು ಈ ಕೆಳಗಿನಂತೆ ಇವೆ.

ಮೂಲಿಗ ಶಿವಶಕ್ತಿ(ಕ್ರಿ.ಶ.೧೦೧೯)
ನಂದಿಕೇಶ್ವವರ ದೇಗುಲ
।
ವಾದಿರುದ್ರಗಣ ಲಕುಳೀಶ್ವರ ಪಂಡಿತ(ಕ್ರಿ.ಶ.೧೦೩೬)
ಪಂಚಲಿಂಗ ದೇವರ ದೇಗುಲ
।
ಕ್ರಿಯಾಶಕ್ತಿ ಪಂಡಿತ(ಕ್ರಿ.ಶ.೧೦೩೯)
ಸಿದ್ದೇಶ್ವರ ದೇವರ ದೇಗುಲ
।
ಮೂಲಿಗ ಜ್ಞಾನ ಶಿವ ದೇವರು (ಕ್ರಿ.ಶ.೧೦೫೪)
ಸೋಮೇಶ್ವರ ದೇವರ ದೇಗುಲ
।
ಸರ್ವೇಶ್ವರ ಪಂಡಿತ ದೇವರು (ಕ್ರಿ.ಶ.೧೦೫೪)
ಪಂಡಿತ ಲಿಂಗ ಮಠ
।
ಜ್ಞಾನಶಕ್ತಿ ದೇವರು(ಕ್ರಿ.ಶ.೧೦೫೪)
ತ್ರಿಪುರಾಂತಕ ಮಠ
।
ಕೇದಾರಶಕ್ತಿ ರುದ್ರಾಭರಣ ವಾಲ್ಮೀಕಿ (ಕ್ರಿ.ಶ.೧೦೭೮)
।
ಕೇದಾರಶಕ್ತಿ – ಶ್ರೀಕಂಠ ಪಂಡಿತ – ಸೋಮೇಶ್ವರ ಪಂಡಿತ(ಕ್ರಿ.ಶ.೧೧೯೮)
ನಗರೇಶ್ವರ ದೇಗುಲ
।
ಕಾಶ್ಮೀರ ದೇವರ ಸಂತಾನ, ತ್ರಿಲೋಚನ ಮುನಿ
ವೀರೇಶ್ವರ ದೇವ(ಕ್ರಿ,ಶ,೧೧೯೬)
।
ಕೇದಾರಶಕ್ತಿ – ಶ್ರೀಕಂಠ ಪಂಡಿತ(ಕ್ರಿ.ಶ.೧೧೯೮)
ಪಂಚಲಿಂಗ ಮಠ

ಹಿರಿಯ ಮಠದ ಮೂಲಸ್ಥಾನದ ಗುರು ಪರಂಪರೆ ಕೆಳಗಿನಂತೆ ಇದೆ.

ಮೂಲಿಗ ಶಿವ ಶಕ್ತಿ ಪಂಡಿತ(ಕ್ರಿ.ಶ.೧೦೯೯)

|

ಪಟ್ಟಣದ ಮೂಲಿಗ ಜ್ಞಾನ ಶಿವದೇವ(ಕ್ರಿ.ಶ.೧೦೫೪)

|

ಮೂಲಿಗ ಮಧುಕೇಶ್ವರ ಪಂಡಿತ ದೇವರ ಮಗ
ಧರ್ಮಶಿವ ದೇವ(ಕ್ರಿ,ಶ,೧೦೫೪)

|

ಮೂಲಿಗ ಹೊಂನೆಯ ಜೀಯ(ಕ್ರಿ.ಶ.೧೦೯೮)

|

।ಮೂಲಿಗ ಪೊನ್ನೆಯ ಜೀಯ(ಕ್ರಿ.ಶ.೧೧೧೩)

|

ಆಚಾರ್ಯ ಶಾಸ್ತ ಶಿವ ಪಂಡಿತ(ಕ್ರಿ.ಶ.೧೧೧೩)

|

ಮೂಲಿಕ ಮಧುಕೇಶ್ವರ ಪಂಡಿತ(ಕ್ರಿ.ಶ.೧೧೫೯)

|

ಮೂಲಿಗ ಧರ್ಮ ಶಿವದೇವರು'(ಕ್ರಿ.ಶ.೧೧೮೧)

ಭೇರುಂಡೇಶ್ವರ ಗುರು ಪರಂಪರೆ ಈ ಕೆಳಗಿನಂತೆ ಇದೆ.

ಅನನ್ತ ಶಿವಾಚಾರ್ಯ(ಕ್ರಿ.ಶ.೧೦೪೭)

|

ಮಧುಕೇಶ್ವರ ಪಂಡಿತ(ಕ್ರಿ.ಶ.೧೦೫೪)

|

ಗೌಳ ಪಂಡಿತ(ಕ್ರಿ.ಶ.೧೦೯೮)

|

ಮೂಲಿಗ ಪಾದ ಶಿವದೇವ (ಕ್ರಿ.ಶ.೧೧೮೭)

ಪಂಚಲಿಂಗ ಮಠದ ಗುರು ಪರಂಪರೆ ಈ ಕಳಗಿನಂತೆ ಇದೆ.

ಸರ್ವೇಶ್ವರ(ಕ್ರಿ.ಶ.೧೦೫೪)

।

ಕಮಳಾಸನ ಪಂಡಿತ(ಕ್ರಿ.ಶ.೧೦೭೮)

।

ಶ್ರೀಕಂಠ ಪಂಡಿತ(ಕ್ರಿ.ಶ.೧೦೯೮)

।

ಕ್ರಿಯಾಶಕ್ತಿ ಪಂಡಿತ(ಕ್ರಿ.ಶ.೧೧೧೩)

।

ಸರ್ವೇಶ್ವರ ಪಂಡಿತ(ಕ್ರಿ.ಶ.೧೧೪೯)

।

ರುದ್ರಶಕ್ತಿ(ಕ್ರಿ.ಶ.೧೧೮೧)

ತ್ರಿಪುರಾಂತಕ ದೇವರ ಮಠದ ಗುರುಪರಂಪರೆಯು ಕಳಗಿನಂತೆ ಇದೆ.

ಜ್ಞಾನಶಕ್ತಿ(ಕ್ರಿ.ಶ.೧೦೫೪)

।

ಚತುರಾನನ ಪಂಡಿತ(ಕ್ರಿ.ಶ.೧೦೯೮)

।

ಕ್ರಿಯಾಶಕ್ತಿ ಪಂಡಿತ(ಕ್ರಿ.ಶ.೧೧೧೩)

।

ಜ್ಞಾನಶಕ್ತಿ ಪಂಡಿತ(ಕ್ರಿ.ಶ.೧೧೪೯)

ಸರ್ವೇಶ್ವರ ದೇವರ ಮಠದ ಗುರುಪರಂಪರೆ ಹೀಗೆದೆ.

ಕಾಶ್ಮೀರ ದೇವ

।

ತ್ರಿಲೋಚನ

।

ವರೇಶ್ವರ ಪಂಡಿತ (ಕ್ರಿ.ಶ.೧೦೯೬)

ಶಿಕಾರಿಪುರ ತಾಲ್ಲೂಕಿನ ಪ್ರಮುಖ ಶಾಸನಗಳು

ಯಾವುದೇ ಒಂದು ಆಳ್ವಿಕೆಯ ಅವಧಿಯ ಘಟನೆಗಳನ್ನು ಕಾಲಾನುಕ್ರಮಸಾರವಾಗಿ ನಿರೂಪಿಸುವ ಪದ್ಧತಿಯೂ ಶಾಸನಗಳಲ್ಲಿ ಕಂಡು ಬರುತ್ತದೆ. ಶಾಸನಗಳನ್ನು ಹಾಕಿಸಲು ಹಲಾವಾರು ಉದ್ದೇಶಗಳು ಕಾಣಬಹುದು. ಅಂದರೆ ದಾನವನ್ನು ಕೊಡುವ ವ್ಯಕ್ತಿಯ ಉದಾರ ದೃಷ್ಟಿ, ಹೆಸರು ಶಾಶ್ವತವಾಗಿ ನಿಲ್ಲಬೇಕೆಂಬ ಅಂಶ, ರಾಜಾಜ್ಞೆಗಳನ್ನು ಪ್ರಸಾರ ಮಾಡುವ ಸಾಧಕವಾಗಿದೆ. ಈ ಅಂಶಗಳು ರಾಜನೋ, ಖಾಸಗಿಯವರೋ, ಊರಿನವರೋ, ಕುಟುಂಬದವರೋ ಹಾಕಿಸಿದ್ದಾಗಿದೆ.

ಶಾಸನದ ಮೂಲ ಅರ್ಥ ರಾಜಾಜ್ಞೆ ಎಂಬುದು ಮೊದಲ ಹಂತದಲ್ಲಿ ನಂತರದಲ್ಲಿ ಇದು ಬೇರೆ ಬೇರೆ ಸ್ಥಿತಿಯನ್ನು ಕಂಡುಕೊಂಡಿದೆ. ಹಾಗಾಗಿ ಶಾಸನ ವೈವಿಧ್ಯತೆಯ ಅಧ್ಯಯನವನ್ನು ಶಿಕಾರಿಪುರಕ್ಕೆ ಸೀಮಿತಮಾಡಿಕೊಂಡು ಅಧಿಕಾರ ನಿರ್ವಹಿಸಿದ ಅರಸರ ಕಾಲದ ಶಾಸನಗಳ ಮೂಲಕ ಮಾಡಲಾಗಿದೆ. ಶಿಕಾರಿಪುರ ತಾಲ್ಲೂಕಿನಲ್ಲಿ ಕಾಣಬಹುದಾದ ಶಾಸನಗಳು ಹೆಚ್ಚಾಗಿ ದಾನ ನೀಡಿದ್ದನ್ನು ಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲಿ ಅಧ್ಯಯನವನ್ನು ಕೈಗೊಳ್ಳುವಾಗ ತನ್ನದೇ ತನವನ್ನು ಬಿಚ್ಚಿ ತೋರ್ಪಡಿಸುತ್ತವೆ.

ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿ ರಚನೆಗೆ ಮಹತ್ವದ ಆಕರ ಸಾಮಾಗ್ರಿಯೆನಿಸಿದ ಶಾಸನಗಳನ್ನು ಹೊರಗಡೆ ತರುವ ಪ್ರಯತ್ನ ಒಂದನೆ ಶಾತಮಾನದಿಂದಲೂ ನಡೆಯುತ್ತಿದೆ. ಶಾಸನಗಳ ಲಿಪಿಗಳನ್ನು ಅಧ್ಯಯನ ಮಾಡಿ ಅವುಗಳ ಬೆಳವಣಿಗೆಯ ವಿವಿಧ ಹಂತ ಮತ್ತು ಲಕ್ಷಣಗಳನ್ನು ತಿಳಿಸಲಾಗಿದೆ. ಹೊಲವನ್ನು, ಹಣವನ್ನು, ಮನೆಯನ್ನು, ಆದಾಯದ ಒಂದು ಭಾಗವನ್ನು ಬಿಟ್ಟುಕೊಟ್ಟ ವಿಷಯವನ್ನು ಹೇಳುವ ಶಾಸನಗಳು ಹೀಗೆ ದಾನ ಶಾಸನಗಳನ್ನು ತುಲನಾತ್ಮಕವಾಗಿ ನೋಡಿದರೆ ಸಂಖ್ಯೆಯಲ್ಲಿ ವೀರ ಶಾಸನಗಳಿಗಿಂತ ದಾನ ಶಾಸನಗಳೇ ಹೆಚ್ಚು. ವೀರನ ಸಾವಿನ ವರ್ಣನೆಯನ್ನು ಕುಟುಂಬಗಳಿಗಾಗಿ ರಾಜನೇ ಊರಿನವರೊ, ಸಂಬಂಧಿಕರೊ, ದಾನದತ್ತಿಯನ್ನು ನೀಡಿ ಶಾಸನ ನಡಿಸಿದ್ದನು ಕಾಣಬಹುದು. ಇವು ವೀರ ಶಾಸನಗಳೆಂದು ಕರೆಯಿಸಿಕೊಳ್ಳುತ್ತದೆ. ದಾನಗಳನ್ನು ಉಲ್ಲೇಖಿಸುವ ತಾಮ್ರ ಶಾಸನಗಳು ಕೂಡ ದಾನಗಳನ್ನು ಪ್ರತಿಬಿಂಬಿಸುತ್ತದೆ. ದಾನ ಶಾಸನಗಳಲ್ಲಿ ಜೈನ ದಾನಶಾಸನಶಿಲ್ಪ, ಶೈವ ದಾನಶಾಸನ ಶಿಲ್ಪ, ಶಿವಲಿಂಗ ಚಿತ್ರ, ಆಕಳು, ನಂದಿಯ ಶಿಲ್ಪ, ಮಂಟಪ ಭಕ್ತ, ವೈಷ್ಣವ ದಾನ ಶಾಸನ ಶಿಲ್ಪ, ಶಂಖ, ಚಕ್ರ, ವೈಷ್ಣವ ದೇವತೆ ಶಿಲ್ಪ, ವಾಮನನ ಶಿಲ್ಪ ಇರುತ್ತವೆ. ಹೀಗೆ ಶಾಸನಗಳ ಒಳನೋಟದಲ್ಲಿ ಅವುಗಳ ಬೇರೆ ಬೇರೆ ರೂಪಗಳಿದ್ದರೂ ಅವುಗಳನ್ನೇ ದಾನ, ದತ್ತಿ, ತಾಮ್ರ, ಸ್ಮಾರಕ ಶಾಸನಗಳು ಎಂಬುದಾಗಿ ಗುರುತಿಸಬಹುದು.

ದೇವಾಲಯ, ಬಸದಿಗಳನ್ನು ಉಲ್ಲೇಖಿಸುವ ಸಾವಿರಾರು ಕನ್ನಡ ಶಾಸನಗಳು ನಮ್ಮ ಮುಂದೆ ಇವೆ. ಎಲ್ಲ ಅರಸು ಮನೆತನಗಳ ಆಳ್ವಿಕೆಯ ಅವಧಿಯಲ್ಲಿ ದೇವಾಲಯ ಬಸದಿಗಳ ನಿರ್ಮಾಣ ನಿರಂತರವಾಗಿ ನಡೆದುಕೊಂಡು ಬಂದಿದೆ. ಆ ಕಾರಣವಾಗಿಯೇ ಸಾವಿರಾರು ದೇವಾಲಯಗಳು ಕರ್ನಾಟಕದ ತುಂಬಾ ಒಂದಕ್ಕಿಂತ ಒಂದು ಭಿನ್ನವಾಗಿ, ವಿಶೇಷವಾಗಿ ವಿವಿಧ ರೀತಿಯ ವಾಸ್ತುಶಿಲ್ಪ, ಕಲೆಗಳಿಂದ ಕರ್ನಾಟಕದ ಸಾಂಸ್ಕೃತಿಕ ವೈಭವಕ್ಕೆ ಸಾಕ್ಷಿಯಾಗಿ ನಿಂತಿವೆ. ಒಂದೊಂದು ದೇವಾಲಯವೂ ಒಂದೊಂದು ವಿಶೇಷ ಅಧ್ಯಯನವೇ ಆಗುವಷ್ಟು, ಮಹತ್ವಪೂರ್ಣವಾದವು. ಅವುಗಳ ಹಿಂದೆ ಇರುವ ಕಥನಗಳೂ ಅಷ್ಟೇ ಮುಖ್ಯ ಎನ್ನುವುದನ್ನು ಮರೆಯುವಂತಿಲ್ಲ. ೧೯೬೫ ರಲ್ಲಿಯೇ ಎಸ್.ಶ್ರೀಕಂಠಶಾಸ್ತ್ರಿಗಳು ಈ ಕುರಿತು ಒಂದು ಪುಸ್ತಕ ರಚಿಸಿದ್ದಾರೆ. ಹಾಗೆಯೇ 'ಕಲ್ಯಾಣ ಚಾಳುಕ್ಯರ ದೇವಾಲಯಗಳು' ಎನ್ನುವ ಹೆಚ್.ಎಸ್. ಗೋಪಾಲರಾವ್ ಅವರ ಕೃತಿ ಮತ್ತು ದೇವರ ಕೊಂಡಾರೆಡ್ಡಿಯವರ 'ತಲಕಾಡಿನ ಗಂಗರ ದೇವಾಲಯಗಳು' ಎನ್ನುವ ಕೃತಿಯನ್ನು ಹೊರತುಪಡಿಸಿದರೆ ಪ್ರತ್ಯೇಕವಾದ ಅಧ್ಯಯನಗಳು ನಡೆಯುತ್ತಿರುವುದು ವಿರಳವೆಂದೆ ಹೇಳಬಹುದು.

ಗ್ರಾಮಾಡಳಿತ ವ್ಯವಸ್ಥೆಯಲ್ಲಿ ಸ್ಥಳೀಯವಾಗಿ ಆಡಳಿತ ಕೇಂದ್ರಗಳು, ನ್ಯಾಯ ತಿರ್ಮಾನ ಕೇಂದ್ರಗಳೂ ಆಗಿದ್ದ ಈ ದೇವಾಲಯಗಳ ನಿರ್ಮಾಣಕ್ಕೆ ಅನೇಕ ಕಾರಣಗಳಿವೆ. ರಾಜನೋ ಮಂತ್ರಿಯೋ ಯುದ್ಧದಲ್ಲಿ ಗೆದ್ದ ನೆನಪಿಗೆ, ರಾಜನಿಗೆ ಮಕ್ಕಳಾಗದೇ ಇರುವುದಕ್ಕಾಗಿ, ಮಕ್ಕಳು ಆದ ನೆನಪಿಗೆ, ಸತ್ತ ತಂದೆ- ತಾಯಿಯರ ನೆನಪಿಗೆ, ಮಡದಿ ಮಕ್ಕಳ ಹೆಸರಿನಲ್ಲಿ ಅವುಗಳ ಬಗ್ಗೆ ಇದ್ದ ಶ್ರದ್ಧೆ, ನಿಷ್ಠೆ, ಗೌರವ, ಅದಕ್ಕಾಗಿ ಅವರು ಬಿಡುತ್ತಿದ್ದ ದಾನ, ದತ್ತಿ, ಧಾನ್ಯ ಇತ್ಯಾದಿಗಳನ್ನು ಇನ್ನಷ್ಟು ಸಮಗ್ರವಾಗಿ ಶೋಧಿಸಬೇಕಾಗಿದೆ. ದೇವಾಲಯದ ಆಡಳಿತ ವರ್ಗ, ದೇವದಾಸಿಯರು. ಅವರ ಬದುಕು, ಸಮಾಜದೊಂದಿಗಿನ ಅವರ ಸಂಬಂಧ, ಪೂಜಾರಿಗಳ ಕರ್ತವ್ಯ, ಪೂಜೆ ಪುರಸ್ಕಾರಗಳು, ನೈವೇದ್ಯ, ದಾಸೋಹ ಇತ್ಯಾದಿ ವಿವರಗಳನ್ನು ಸಾವಿರಾರು ಶಾಸನಗಳು ತಮ್ಮ ಗರ್ಭದಲ್ಲಿ ಹುದುಗಿಸಿಕೊಂಡಿವೆ ಅವುಗಳ ಸೂಕ್ಷ್ಮವಾದ ಅಧ್ಯಯನಕ್ಕೆ ವಿಪುಲ ಅವಕಾಶವಿದೆ.

ಈ ಅಧ್ಯಯನದಲ್ಲಿ ಕಾಲ, ರಾಜವಂಶ, ಅವುಗಳ ವಾಸ್ತು, ಶಿಲ್ಪಕಲೆ, ಅಲ್ಲಿನ ಆಚರಣೆ, ಸಂಪ್ರದಾಯ, ಅದಕ್ಕಿರುವ ದಾನ ದತ್ತಿಗಳು, ಅದರ ಅಂಗಭೋಗ, ರಂಗಭೊಗ, ದೀಪಾರಾಧನೆ, ದೇವಾಲಯಗಳ ಜೀರ್ಣೋದ್ದಾರ, ರಚನಾ ವಿನ್ಯಾಸ, ಧಾರ್ಮಿಕ ಹಿನ್ನೆಲೆ, ರಥೋತ್ಸವಗಳು, ಜನ ಜಾತ್ರೆಗಳು ಇಂಥವೇ ಹತ್ತಾರು ವಿಧದಲ್ಲಿ ಆಕರಗಳನ್ನು ಶೋಧಿಸಿದರೆ ಬಹುಮುಖ್ಯ ಸಂಗತಿಗಳು ಲಭ್ಯವಾಗುತ್ತವೆ. ಶಿಲ್ಪಕಲೆ ಅಧ್ಯಯನದಲ್ಲಿ ರಾಜಮನೆತನ, ಪ್ರಾದೇಶಿಕತೆ ವಿವಿಧ ಕಾಲ ಘಟ್ಟದಲ್ಲಿನ ಅದರ

ಮಾರ್ಪಾಡು, ಅದಕ್ಕೆ ಕಾರಣಗಳು, ಇತ್ಯಾದಿಗಳ ಶೋಧವೂ ನಡೆದಾಗ ಬಹುಶಃ ಸಮಗ್ರತೆ ಬರುತ್ತದೆ ಎಂದು ಭಾವಿಸಬಹುದು. ಅದಕ್ಕೂ ಬಹಳಷ್ಟು ಅವಕಾಶಗಳು ಇಲ್ಲಿವೆ.

ಅಸಂಖ್ಯಾತ ಶಾಸನೋಕ್ತ ದೇವಾಲಯಗಳ ಅಧ್ಯಯನವನ್ನು ಬೇರೆ ಬೇರೆ ಸ್ವರೂಪಗಳಲ್ಲಿ ಸಂಶೋಧನೆಗೆ ಆಳವಡಿಸಬಹುದು. ವೇಸರ ಶೈಲಿಯ ದೇವಾಲಯಗಳು, ನಾಗರ ಶೈಲಿಯ ದೇವಾಲಯಗಳು, ದ್ರಾವಿಡ ಶೈಲಿಯ ದೇವಾಲಯಗಳು, ಕರ್ನಾಟಕದ ಬಸದಿಗಳು ಎನ್ನುವ ನೆಲೆಯಲ್ಲಿಯೂ ಸಂಶೋಧನೆ ಮಾಡಲು ಸಾಧ್ಯತೆಗಳಿವೆ ಹಾಗೆಯೇ ಚೋಳರ ದೇವಾಲಯಗಳು ರಾಷ್ಟ್ರಕೂಟರ ದೇವಾಲಯಗಳು, ವಿಜಯನಗರ ಕಾಲದ ದೇವಾಲಯಗಳು, ಪಾಳೆಗಾರರ ಕಾಲದ ದೇವಾಲಯಗಳು, ಬಸದಿಗಳು ಎಂದು ಅವರ ಅವಧಿಯನ್ನು ಆಧಾರವಾಗಿಟ್ಟುಕೊಂಡು ಸಂಶೋಧನೆ ನಡೆಸಬಹುದು. ಇದಕ್ಕಾಗಿ ಪುರಾತತ್ವ ಇಲಾಖೆಯ ವರದಿಗಳನ್ನೂ ಸಹ ಅಕರವಾಗಿ ಬಳಸಿಕೊಳ್ಳಬಹುದು. ಇಷ್ಟೆಲ್ಲಾ ಸಾಧ್ಯತೆಗಳನ್ನು ಒಳಗೊಂಡ ಈ ಸಂಶೋಧನೆ ಅಸಕ್ತರನ್ನು ಕೈಬೀಸಿ ಕರೆಯುತ್ತಿದೆ. ಹಾಗೆಯೇ ತಾಲ್ಲೂಕು, ಜಿಲ್ಲಾವಾರು ದೇವಾಲಯಗಳ ಸೂಚಿಯನ್ನು ಸಿದ್ಧಮಾಡಬೇಕಿದೆ.

ಕರ್ನಾಟಕದಲ್ಲಿ ಸಿಕ್ಕಿರುವ ಅಸಂಖ್ಯಾತ ಶಾಸನಗಳ ಅಧ್ಯಯನ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದದ್ದು ಅವುಗಳ 'ಶಿಲ್ಪ'ದ ಅಧ್ಯಯನ. ಶಾಸನ ಪಾಠಕ್ಕೆ ಇರುವಷ್ಟು ಮಹತ್ವ ಅದರ ಶಿಲ್ಪಕ್ಕೂ ಇದೆ. ಅದು ಶಾಸನವನ್ನು ಅರ್ಥೈಸಲು ಇರುವ ಇನ್ನೊಂದು ಮುಖ ಎಂಬುದನ್ನು ಡಾ.ಡಿ.ವಿ. ಪರಮಶಿವಮೂರ್ತಿಯರು 'ಕನ್ನಡ ಶಾಸನ ಶಿಲ್ಪ' ಎನ್ನುವ ಕೃತಿಯಲ್ಲಿ ತೋರಿಸಿ ಕೊಟ್ಟಿದ್ದಾರೆ. ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ರಚನೆಗೆ ಪೂರಕ ಆಕರವಾಗಿ ಅಷ್ಟೇ ಸಂಖ್ಯೆ ಶಿಲ್ಪಗಳು ನಮ್ಮ ಮುಂದೆ ಸಾಲಾಗಿ ನಿಂತಿವೆ ಹಾಗಾಗಿ ಇದರ ಅಧ್ಯಯನವೂ ಬಹಳ ಮಹತ್ವದ್ದು, ಶಾಸನ ಶಿಲ್ಪಗಳ ಸ್ವರೂಪ ಅವುಗಳ ಹಿನ್ನೆಲೆ, ಉದ್ದೇಶ, ದಾನಶಾಸನ ಶಿಲ್ಪ, ವೀರಶಾಸನ ಶಿಲ್ಪ, ಬಲಿದಾನದ ಶಿಲ್ಪಗಳು, ಮಹಾಸತಿ ಶಿಲ್ಪಗಳು. ತುರುಕಾಳಗ ಶಿಲ್ಪಗಳು,. ಸಿಡಿ ಆಚರಣೆ ಶಿಲ್ಪಗಳು. ಪೆಣ್ಬುಯಲ್ ಶಿಲ್ಪಗಳು ಉಬ್ಬುಶಿಲ್ಪ ಅವುಗಳ ವಸ್ತು, ಬಂಡೆ, ಲೋಹ, ಮಣ್ಣು ಇತ್ಯಾದಿಯಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲು ಇನ್ನೂ ಹೆಚ್ಚು ಹೆಚ್ಚು ಅವಕಾಶಗಳಿವೆ.

ಹೀಗೆಯೇ ಶಿಕಾರಿಪುರ ತಾಲ್ಲೂಕಿನಲ್ಲಿ ಶಾಸನಗಳ ಶೋಧ ಕಾರ್ಯವನ್ನು ಮಾಡುವಾಗ ಸುಮಾರು ಶಾಸನಗಳು ದೊರೆಯುತ್ತವೆ. ಶಾಸನಾಧಾರಿತ ದೇವಾಲಯಗಳನ್ನು ಕಂಡುಕೊಳ್ಳುವಾಗ ಪ್ರಮುಖ ಶಾಸನಗಳನ್ನು ಅವುಗಳು ದೊರೆತ ಸ್ಥಳ, ಶಾಸನ ಉಲ್ಲೇಖಿತ ದೇವಾಲಯ, ಅವುಗಳ ಕಾಲಮಾನ, ಶಾಸನದ ಸಂಖ್ಯೆಗಳನ್ನು ಕ್ರಮಾನುಗತವಾಗಿ ನೀಡಲಾಗಿದೆ.

ಕ್ರ.ಸ	ಗ್ರಾಮ	ದೇವಾಲಯ	ಕಾಲ	ರಾಜ/ವಂಶ	ಶಾಸನ ಸಂಖ್ಯೆ
೧	ಈಸೂರು	ಆಂಜನೇಯ	೧೦೬೧	ಕ.ಚಾಳುಕ್ಯರು	೦೫
೨	ಈಸೂರು	ಜಿನಾಲಯ	೧೦೮೦	ಕ.ಚಾಳುಕ್ಯರು	೦೮
೩	ಬೇಗೂರು	ವಿಷ್ಣು ದೇವರು	೧೦೯೮	ಕ.ಚಾಳುಕ್ಯರು	೧೩
೪	ಬೇಗೂರು	ಮಲ್ಲಿಕಾರ್ಜುನ	೧೦೮೫	ಕಳಚೂರ್ಯರು	೧೬
೫	ಬೇಗೂರು	ಮಲ್ಲಿಕಾರ್ಜುನ	೧೧೬೦	ಕಳಚೂರ್ಯರು	೧೮
೬	ಬೇಗೂರು	ಮಲ್ಲಿಕಾರ್ಜುನ	೧೦೬೬	ಕ.ಚಾಳುಕ್ಯರು	೧೯
೭	ಬೇಗೂರು	ಶಿವಾಲಯ ಮಲ್ಲಿಕಾರ್ಜುನ	೧೦೪೯	ಕ.ಚಾಳುಕ್ಯರು	೨೦
೮	ತರಲಘಟ್ಟ	ರಾಮಚಂದ್ರ	೧೫೧೦	ಕೆಳದಿ ಅರಸರು	೨೮
೯	ತರಲಘಟ್ಟ	ಪಿಂಗಳೇಶ್ವರ	೧೦೩೧	ಕ.ಚಾಳುಕ್ಯರು	೩೦
೧೦	ತರಲಘಟ್ಟ	ಸಿದ್ದಯ್ಯ	೧೫೩೧	ಮಾಧರಸ ನಾಯಕ	೩೧
೧೧	ತರಲಘಟ್ಟ	ಸಿದ್ದೇಶ್ವರ	೧೫೫೨	ಚೆನ್ನವೀರಣ್ಣ ವಡೆಯರು	೩೨
೧೨	ತರಲಘಟ್ಟ	ಬೆಟ್ಟದ ನರಸಿಂಹ	೧೩೭೮	ಮಾದರಸ ಒಡೆಯರು	೩೭
೧೩	ಬರೂರು	ಸಿದ್ದೇಶ್ವರ	೧೦೭೭	ಕ.ಚಾಳುಕ್ಯರು	೪೪
೧೪	ಬಿಳಕಿ	ವೀರಭದ್ರ	೧೪೯೬	ಕೆಳದಿ ಅರಸರು	೮೨
೧೫	ಬಳ್ಳಿಗಾವಿ	ಬಲೇಶ್ವರ	೧೧೩೧	ಕ.ಚಾಳುಕ್ಯರು	೮೭
೧೬	ಬಳ್ಳಿಗಾವಿ	ಕೇದಾರೇಶ್ವರ	೧೮೮೫	ಮೈಸೂರು ಒಡೆಯರು	೯೧
೧೭	ಬಳ್ಳಿಗಾವಿ	ಕೇದಾರೇಶ್ವರ	೧೧೬೮	ಕಳಚೂರ್ಯರು	೯೨
೧೮	ಬಳ್ಳಿಗಾವಿ	ಸಿದ್ದೇಶ್ವರ ಪಂಚೇಶ್ವರ	೧೪೨೨	ವೀರಪ್ರತಾಪ ದೇವಾರಾಯ	೯೩
೧೯	ಬಳ್ಳಿಗಾವಿ	ನಖರೇಶ್ವರ	೧೦೯೪	ಕ.ಚಾಳುಕ್ಯರು	೯೪
೨೦	ಬಳ್ಳಿಗಾವಿ	ಕೇದಾರೇಶ್ವರ	೧೨೧೫	ಯಾದವರು	೯೫
೨೧	ಬಳ್ಳಿಗಾವಿ	ಕೇದಾರೇಶ್ವರ	೧೧೭೯	ಕಳಚೂರ್ಯರು	೯೬
೨೨	ಬಳ್ಳಿಗಾವಿ	ಕೇದಾರೇಶ್ವರ	೧೧೦೩	ಕ.ಚಾಳುಕ್ಯರು	೯೮
೨೩	ಬಳ್ಳಿಗಾವಿ	ಕೇದಾರೇಶ್ವರ ಸೋಮನಾಥ ಅಬ್ಬಲೂರು ಬ್ರಹ್ಮೇಶ್ವರ	೧೧೬೨	ಕಳಚೂರ್ಯರು	೧೦೨
೨೪	ಬಳ್ಳಿಗಾವಿ	ಕೇದಾರೇಶ್ವರ	೧೧೧೩	ಕ.ಚಾಳುಕ್ಯರು	೯೯
೨೫	ಬಳ್ಳಿಗಾವಿ	ಕೇದಾರೇಶ್ವರ	೧೧೬೨	ಕಳಚೂರ್ಯರು	೧೦೦

೨೬	ಬಳ್ಳಿಗಾವಿ	ಕೇದಾರೇಶ್ವರ	೧೧೪೯	ಕ.ಚಾಳುಕ್ಯರು	೧೦೩
೨೭	ಬಳ್ಳಿಗಾವಿ	ಕೇದಾರೇಶ್ವರ	೧೧೯೩	ಹೊಯ್ಸಳರು	೧೦೫
೨೮	ಬಳ್ಳಿಗಾವಿ	ಲೋಕೇಶ್ವರ ಜೋಗೇಶ್ವರ	೧೧೯೮	ಕ.ಚಾಳುಕ್ಯರು	೧೦೬
೨೯	ಬಳ್ಳಿಗಾವಿ	ಸರ್ವೇಶ್ವರ	೧೦೮೦	ಕ.ಚಾಳುಕ್ಯರು	೧೧೧
೩೦	ಬಳ್ಳಿಗಾವಿ	ಕುಸುಮೇಶ್ವರ ಕೇದಾರೇಶ್ವರ	೧೧೩೯	ಕ.ಚಾಳುಕ್ಯರು	೧೧೨
೩೧	ಬಳ್ಳಿಗಾವಿ	ಸರ್ವೇಶ್ವರ ಸೋಮೇಶ್ವರ	೧೧೯೬	ಕ.ಚಾಳುಕ್ಯರು	೧೧೪
೩೨	ಬಳ್ಳಿಗಾವಿ	ಗವರೇಶ್ವರ ಪಂಚಲಿಂಗ ಸೋಮೇಶ್ವರ	೧೦೫೪	ಕ.ಚಾಳುಕ್ಯರು	೧೧೮
೩೩	ಬಳ್ಳಿಗಾವಿ	ಗವರೇಶ್ವರ	೧೧೮೧	ಕಳಚೂರ್ಯರು	೧೧೯
೩೪	ಬಳ್ಳಿಗಾವಿ	ಕೇದಾರೇಶ್ವರ ಸೋಮನಾಥ	೧೧೫೯	ಕ.ಚಾಳುಕ್ಯರು	೧೨೩
೩೫	ಬಳ್ಳಿಗಾವಿ	ನಂದಿಕೇಶ್ವರ	೧೦೧೯	ಕ.ಚಾಳುಕ್ಯರು	೧೨೫
೩೬	ಬಳ್ಳಿಗಾವಿ	ಪಂಚಲಿಂಗ	೧೦೩೬	ಕ.ಚಾಳುಕ್ಯರು	೧೨೬
೩೭	ಬಳ್ಳಿಗಾವಿ	ಮಹೇಶ್ವರ	೧೧೧೮	ಕ.ಚಾಳುಕ್ಯರು	೧೨೭
೩೮	ಬಳ್ಳಿಗಾವಿ	ಹರಿಹರಾದಿತ್ಯ	೧೦೭೧	ಕ.ಚಾಳುಕ್ಯರು	೧೨೯
೩೯	ಬಳ್ಳಿಗಾವಿ	ನರಸಿಂಹ	೧೦೭೫	ಕ.ಚಾಳುಕ್ಯರು	೧೩೦
೪೦	ಬಳ್ಳಿಗಾವಿ	ನರಸಿಂಹ	೧೧೦೪	ಕ.ಚಾಳುಕ್ಯರು	೧೩೧
೪೧	ಬಳ್ಳಿಗಾವಿ	ಮಲ್ಲಿಕಾರ್ಜುನ	೧೦೭೮	ಕ.ಚಾಳುಕ್ಯರು	೧೩೫
೪೨	ಬಳ್ಳಿಗಾವಿ	ರಾಮೇಶ್ವರ	೧೧೯೪	ವೀರ ಬಲ್ಲಾಳ	೧೩೮
೪೩	ಕಿಟ್ಟದ ಹಳ್ಳಿ	ಸಿದ್ದೇಶ್ವರ	೧೨೦೨	ವೀರಬಲ್ಲಾಳ	೧೫೬
೪೪	ಶೀರೆಹಳ್ಳಿ	ಸೋಮನಾಥ	೧೧೭೦	ಕಳಚೂರ್ಯರು	೧೭೧
೪೫	ತಾಳಗುಂದ	ಪ್ರಣಮೇಶ್ವರ	೧೦೨೯ –?	ಕ.ಚಾಳುಕ್ಯರು	೧೭೭
೪೬	ತಾಳಗುಂದ	ಯಮೇಶ್ವರ ಚಂದೇಶ್ವರ ಬಳ್ಳಯವೇಶ್ವರ	೧೧೯೨	ಕ.ಚಾಳುಕ್ಯರು	೧೭೮
೪೭	ತಾಳಗುಂದ	ಪ್ರಣವೇಶ್ವರ	೧೦೭೯	ಕ.ಚಾಳುಕ್ಯರು	೧೮೫
೪೮	ತಾಳಗುಂದ	ಪ್ರಣವೇಶ್ವರ	೧೨೦೦ –?	ಹೊಯ್ಸಳರು	೧೮೬
೪೯	ತಾಳಗುಂದ	ಪ್ರಣವೇಶ್ವರ	---	ಕ.ಚಾಳುಕ್ಯರು	೧೮೮
೫೦	ತಾಳಗುಂದ	ಪ್ರಣವೇಶ್ವರ	೧೧೦೭	ಕ.ಚಾಳುಕ್ಯರು	೧೯೨

೫೧	ಚಿಕ್ಕ ಮಾಗಡಿ	ಜೈನ ಬಸದಿ	೧೨೧೨ –?	ವೀರಬಲ್ಲಾಳ	೧೯೬
೫೨	ಬಂದಳಿಕೆ	ಶಾಂತಿನಾಥ ಬಸದಿ	೧೨೦೪	ಕ.ಚಾಳುಕ್ಯರು, ಕಳಚೂರ್ಯ	೨೨೫
೫೩	ಬಂದಳಿಕೆ	ಬೋಪ್ಪೇಶ್ವರ	೧೧೭೪	ಕಳಚೂರ್ಯರು	೨೩೬
೫೪	ತೊಗರ್ಸಿ	ಸೋಮೇಶ್ವರ	೧೧೬೩	ಕಳಚೂರ್ಯರು	೨೪೨
೫೫	ತೊಗರ್ಸಿ	ಮಲ್ಲಿಕಾರ್ಜುನ	---	ಮಲ್ಲನಗೌಡ	೨೫೩
೫೬	ತೊಗರ್ಸಿ	ಮಲ್ಲಿಕಾರ್ಜುನ	---	ಮಲ್ಲನಗೌಡ	೨೫೪
೫೭	ತೊಗರ್ಸಿ	ಮಲ್ಲಿಕಾರ್ಜುನ	೧೫೪೪	ಕೆಳದಿ ಅರಸರು	೨೫೫
೫೮	ತೊಗರ್ಸಿ	ಮಲ್ಲಿಕಾರ್ಜುನ	---	ಬಸದಿಗೌಡ	೨೫೮
೫೯	ತೊಗರ್ಸಿ	ರಾಮೇಶ್ವರ	೧೧೪೭	ಕ.ಚಾಳುಕ್ಯರು	೨೬೭
೬೦	ಮಯತ್ತಮನ ಮುಚ್ಚಡಿ	ರಾಮೇಶ್ವರ	೧೦೮೬	ತ್ರಿಭುವನಮಲ್ಲ	೨೭೫
೬೧	ತೊಗರ್ಸಿ	ಮಲ್ಲಿಕಾರ್ಜುನ ರಾಮೇಶ್ವರ	೧೧೪೩	ಸೋವಿದೇವ	೨೭೬
೬೨	ತೊಗರ್ಸಿ	ಮಲ್ಲೇಶ್ವರ	೧೧೬೫	ಕಳಚೂರ್ಯರು	೨೭೭
೬೩	ಮುಗಳಗೆರೆ	ರಾಮೇಶ್ವರ	೧೧೨೦	ಪ್ರಭುಕೇತುಗೌಂಡ	೨೭೯
೬೪	ಮಟ್ಟಿಕೋಟೆ	ಹನುಮಂತ ಶಂಕರ	೧೪೨೦	ವೀರ ಪ್ರತಾಪರಾಯ	೨೮೮
೬೫	ತುಂಬರೆ ಹೂಸೂರು	ಮಲ್ಲಿಕಾರ್ಜುನ	೧೦೭೭	ಕ.ಚಾಳುಕ್ಯರು	೨೯೨
೬೬	ತುಂಬರೆ ಹೂಸೂರು	ರಾಮೇಶ್ವರ	೧೦೭೪	ಕ.ಚಾಳುಕ್ಯರು	೨೯೫
೬೭	ಅಮಟೆ ಕೊಪ್ಪ	ರಾಮೇಶ್ವರ ಮಲ್ಲಿಕಾರ್ಜುನ	೧೦೬೫	ಕ.ಚಾಳುಕ್ಯರು	೨೯೬
೬೮	ಗೊದ್ದನ ಕೊಪ್ಪ	ಮಲ್ಲಿಕಾರ್ಜುನ	---	ಅಣ್ಣಮ್ಮ ನಾಯಕ	೩೧೦
೬೯	ಗೊದ್ದನ ಕೊಪ್ಪ	ಮೈಲಾರ ದೇವರು	೧೩೯೦	ಬುಕ್ಕರಾಯ	೩೧೩
೭೦	ಗೊಗ್ಗ	ಈಶ್ವರೇಶ್ವರ	೧೧೯೮	ವೀರಬಲ್ಲಾಳ	೩೧೫
೭೧	ಗೊಗ್ಗ	ಜಿನಾಲಯ	೧೨೦೫	ಸೋವಲ ದೇವಿ	೩೧೭
೭೨	ತಾಳಗುಂದ	ಬಸದಿ	೧೨೦೭	ವೀರಬಲ್ಲಾಳ	೩೨೦
೭೩	ಬಳ್ಳಿಗಾವಿ	ರಾಮೇಶ್ವರ	೧೦೬೪	ಕ.ಚಾಳುಕ್ಯರು	೩೨೩
೭೪	ಬಳ್ಳಿಗಾವಿ	ತೆಲ್ಲೇಗೇಶ್ವರ	---	ಕ.ಚಾಳುಕ್ಯರು	೩೩೪
೭೫	ಬಳ್ಳಿಗಾವಿ	ಮುಂಜೇಶ್ವರ	---	ಕ.ಚಾಳುಕ್ಯರು	೩೩೫

೭೬	ಬಳ್ಳಿಗಾವಿ	ಭೇರುಂಡೇಶ್ವರ	---	ಯಾದವರು	೩೫೪
೭೭	ಬಂದಳಿಕೆ	ಅನಂತೇಶ್ವರ	---	-----	೩೬೦
೭೮	ಬಂದಳಿಕೆ	ಸೋಮನಾಥ	---	ಯಾದವರು	೩೭೦

ಅಧ್ಯಾಯ–೫

ಶಿಕಾರಿಪುರ ತಾಲ್ಲೂಕಿನ ದೇವಾಲಯ ಉಗಮ, ವಿಕಾಸ ಮತ್ತು ನಿರ್ವಾಹಣೆ

ಅಧ್ಯಯ-೫

ಶಿಕಾರಿಪುರ ತಾಲ್ಲೂಕಿನ ದೇವಾಲಯಗಳ ಉಗಮ, ಬೆಳವಣಿಗೆ ಮತ್ತು ನಿರ್ವಹಣೆ

ಮನುಷ್ಯ ತನ್ನ ರಕ್ಷಣೆಗೆ ಕಟ್ಟಿಕೊಂಡ ಗೃಹವಾಸ್ತು ಶಿಲ್ಪವಾದರೆ, ದೇವರು ಮತ್ತು ಇತರೆ ಶಕ್ತಿಗಳಿಗೆಂದು ನಿರ್ಮಿಸಿದ ಕಟ್ಟಡಗಳು ದೇವಾಲಯ ವಾಸ್ತು ಶಿಲ್ಪಗಳಾಗಿವೆ. ಕರ್ನಾಟಕ ವಾಸ್ತುಶಿಲ್ಪ ಶೈಲಿಯಲ್ಲಿ ಕದಂಬರ ಕಾಲಕ್ಕೆ ಶಿಲಾವಾಸ್ತುವಿನ ಪ್ರಮುಖ ಸಾಕ್ಷಿಗಳು ದೊರೆಯುತ್ತವೆ. ಇದಕ್ಕೂ ಮುನ್ನ ಆಳ್ವಿಕೆ ನಡೆಸಿದ ಶಾತವಾಹನರು ಇಟ್ಟಿಗೆಯ ಕಟ್ಟಡಗಳನ್ನು ನಿರ್ಮಿಸಿರುವುದು ಬ್ರಹ್ಮಗಿರಿ, ಚಂದ್ರವಳ್ಳಿ, ಪಟ್ಟದಕಲ್ಲು, ಸನ್ನತಿ ಮೊದಲಾದ ಕಡೆಗಳಲ್ಲಿ ಕಾಣಬಹುದು. ಆದರೆ ಧಾರ್ಮಿಕ ಕಟ್ಟಡಗಳ ಅಪೂರ್ಣ ವಿವರ ತಳವಿನ್ಯಾಸ ಮಾತ್ರ ತಿಳಿಯಬಹುದು. ಅಲ್ಲದೆ ಇವು ಇಟ್ಟಿಗೆಯಾಗಿದರಿಂದ ಬಹುದಿನಗಳವರೆಗೆ ಉಳಿದಿಲ್ಲ. ಕದಂಬರ ಕಾಲದಿಂದ ವಿಜಯನಗರ ಮತ್ತು ನಂತರ ದಿನಗಳಲ್ಲಿ ರಚನೆಗೊಂಡ ವಾಸ್ತುಶಿಲ್ಪ ಉಳಿದಿವೆ. ಉದಾಹರಣೆಗೆ ಕದಂಬರ ಕಾಲದ ವಾಸ್ತುಶಿಲ್ಪವನ್ನು ತಾಳಗುಂದದ ಪ್ರಣವೇಶ್ವರ ಬನವಾಸಿಯ ದೇವಾಲಯಗಳಲ್ಲಿ ಕಾಣಬಹುದು. ಆದರೆ ಈ ದೇವಾಲಯವು ಇವರಿಗಿಂತ ಹಿಂದೆ ಕಟ್ಟಲಾಗಿದೆ.

ದೇವಾಲಯದ ಕಟ್ಟಡವೊಂದನ್ನು 'ವಾಸ್ತುಪುರುಷ' ದೇವತೆಗೆ ಹೋಲಿಸಿ ಮಾನವ ದೇಹವೊಂದು ನೆಲದ ಮೇಲೆ ಮೇಲುಮುಖವಾಗಿ ಮಲಗಿರುವಂತೆ ದೇಗುಲ ವಿನ್ಯಾಸವನ್ನು ನೀಡಿ, ಮಾನವನ ದೇಹದ ವಿವಿಧ ಹೆಸರುಗಳನ್ನೇ ಅವುಗಳಿಗೆ ನೀಡಲಾಗಿದೆ.

ಶಿಖರಂ ಶಿರ ಇತ್ಯಾಹುಃಗರ್ಭಗೇಯಂ ಗಳಂ।
ಮಂಡಪಂ ಕುಕ್ಷಿಮಿತ್ಯಾಹುಃ ಪ್ರಾಕಾರಂ ಜಾನುಜಂಘಕೌ॥
ಗೋಪುರಂ ಪಾದಮಿತ್ಯಾಹುಃ ಧ್ವಜಂ ಜೀವನಮುಚ್ಯತೇ।
ವಿಮಾನಂ ಗೋಪುರಂ ಚೈವ ಪ್ರತಮಾ ಪೀಠಮೇವ ತು।
ಶರೀರಮೇವ ದೇವಸ್ಯ ಸ್ಮೃತಮೇತತ್ ಚತುಷ್ಟಯಮ್॥

(ರಾಮಚಂದ್ರರಾವ್.ಎಸ್.ಕೆ, ೧೯೭೫, ಮೂರ್ತಿಶಿಲ್ಪನೆಲೆ-ಹಿನ್ನೆಲೆ, ಪುಟ೨೩೩).

ವಾಸ್ತು ಪುರುಷನ ಮುಖವೆಂಬುದು ದೇಗುಲದ ಗರ್ಭಗುಡಿ ರೂಪದಲ್ಲಿಯೂ, ಸುಕನಾಸವೆಂಬುದು ಕಂಠ(ಗಳ)ವೆಂತಲೂ, ಮಂಟಪವು ಹೃದಯ ಭಾಗವೆಂತಲೂ, ಧ್ವಜಸ್ತಂಭವು ಜೀವನವೆಂತಲೂ, ಪ್ರವೇಶ ದ್ವಾರ ಗೋಪುರವು ಪಾದವೆಂತಲೂ ವಾಸ್ತುಶಾಸ್ತ್ರಜ್ಞರು ತಿಳಿಸಿದ್ದಾರೆ.

ಕರ್ನಾಟಕ ದೇವಾಲಯಗಳು ಹಲವು ನೆಲೆಗಳಿಂದ ಸಾಂಸ್ಕೃತಿಕ ಅಧ್ಯಯನಕ್ಕೆ ಅನುವು ಮಾಡಿಕೊಡುವ ಅಮೂಲ್ಯವಾದ ಪ್ರತೀಕಗಳಾಗಿವೆ. ಮೂರ್ತಿಶಿಲ್ಪ, ವಾಸ್ತುಶಿಲ್ಪ, ಧರ್ಮ, ಆರಾಧನೆ ಜಾನಪದೀಯ ಅಂಶಗಳು ಮತ್ತು ಆರ್ಥಿಕತೆ ಹೀಗೆ ಭಿನ್ನ ನೆಲೆಗಳಿಂದ ದೇವಾಲಯಗಲನ್ನು ಗುರುತಿಸಬಹುದಾಗಿದೆ. ಶಿಲ್ಪ ಮತ್ತು ವಾಸ್ತುಶಿಲ್ಪಗಳ ಪ್ರಾಮುಖ್ಯತೆ, ಆರಾಧನೆಗಳ ಸಂಪ್ರದಾಯ ಹಾಗೂ ಅವುಗಳಿಗೆ ಪೂರಕವಾದ ಜನರ ಬಲವನ್ನು ಆಧರಿಸಿಕೊಂಡು ಕೆಲವು ದೇವಾಲಯಗಳನ್ನು ವೈಭವೀಕರಿಸುತ್ತಾ ಅಧ್ಯಯನ ಮಾಡಲಾಗಿದೆ.

ಕದಂಬರ ಆಳ್ವಿಕೆಯ ಕಾಲದಲ್ಲಿ ಪ್ರಾರಂಭವಾದ ದೇಗುಲಗಳ ವಾಸ್ತುಶೈಲಿ ಬಾದಾಮಿ ಚಾಲುಕ್ಯರ ಕಾಲಕ್ಕೆ ದೇವಾಲಯ ವಾಸ್ತುಶೈಲಿಯ ಪ್ರಯೋಗ ಶಾಲೆಗಳು ಕಾಣಬಹುದು. ಉದಾಹರಣೆಗೆ ಐಹೊಳೆ, ಪಟ್ಟದಕಲ್ಲು, ಬಾದಾಮಿ, ದೇವಾಲಯಗಳು ಬೌದ್ಧ ಚೈತ್ಯ ಮಾದರಿ, ನಾಗರ ಶೈಲಿ, ಗುಹಾವಾಸ್ತುವಿನ ಸಮ್ಮಿಲನವಾಗಿದೆ. ರಾಷ್ಟ್ರಕೂಟರ ಎಲ್ಲೋರಾ-ಎಲಿಫಾಂಟಾಗಳಲ್ಲಿ ಇವರ ವಾಸ್ತು ಕಾಣಬಹುದು. ಕರ್ನಾಟಕದಲ್ಲಿ ಉಳಿದು ಬಂದಿರುವ ದೇಗುಲಗಳಲ್ಲೆಲ್ಲ ಪ್ರಣವೇಶ್ವರಾಲಯವು ಪ್ರಾಚೀನತಮವಾದದ್ದು. ಶಾಸನೀಯವಾಗಿ ತಿಳಿದು ಬರುವಂತೆ ಸಾತಕರ್ಣಿಗಳೇ ಪುರಾತನ ಆರಾಧಕರು. (ರಘುನಾಥ ಭಟ್.ಎಚ್.ಆರ್, ೧೯೭೭, ಕರ್ನಾಟಕ ಶಾಸನ ಕಲೆ, ಪುಟ.೧೦೮) ಗರ್ಭಗೃಹ ಅಂಕಣವಿದ್ದು, ಕಾಲಕ್ರಮದಲ್ಲಿ ಮುಖಭದ್ರವನ್ನು ಜೋಡಿಸಿದಂತೆ ತೋರುತ್ತದೆ. ಲಿಂಗದ ಪ್ರಮಾಣಕ್ಕೆ ಹೋಲಿಸಿದರೆ ಹೊರ ಮತ್ತು ಒಳಭಿತ್ತಿಯು ಚಿಕ್ಕದಾಗಿದೆ. ಗರ್ಭಗೃಹ ಮೂಲೆಯಲ್ಲಿ ನಾಲ್ಕು ಕಡೆ ಪ್ರತ್ಯೇಕ ಸ್ತಂಭಗಳಿದ್ದು, ಅವುಗಳಲ್ಲಿ ಎರಡು ಮಾತ್ರ ಬಾಗಿಲುವಾಡದ ಹತ್ತಿರ ಕಂಡುಬರುತ್ತವೆ. ಗರ್ಭಗೃಹದ ಮೇಲ್ಚಾವಣಿಯನ್ನು ಎರಡು ಚೌಕಗಳನ್ನು ಒಂದರ ಮೇಲೊಂದಿಟ್ಟು ಮಾಡಿ, ಅದರ ಮೇಲೆ ಪದ್ಮ ವಿನ್ಯಾಸವುಳ್ಳ ದೊಡ್ಡ ಶಿಲಾಫಲಕವನ್ನು ಹಾಕಿದಂತೆ ಕಂಡುಬರುತ್ತದೆ. ಕ್ರಮೇಣ ವಿವಿಧ ರಾಜರ ಆಳ್ವಿಕೆಯಲ್ಲಿ ದೇವಾಲಯ ಸ್ವಲ್ಪ ಮಟ್ಟಿಗೆ ಬದಲಾವಣೆಯನ್ನು ಕಂಡುಕೊಳ್ಳುತಾ ಬಂದಿದೆ.

ಕಲ್ಯಾಣ ಚಾಳುಕ್ಯರು ಕರ್ನಾಟಕದ ವಾಸ್ತುಶಿಲ್ಪಕ್ಕೆ ತನ್ನದೆಯಾದ ಹೊಸತನ ತುಂಬಿದ್ದಾರೆ. ಇವರು ಬಾದಾಮಿ ಚಾಲುಕ್ಯ ಶೈಲಿ ಬಳಸಿ ವಿನೂತನ ರೂಪವನ್ನು ನೀಡಿದ್ದಾರೆ. ದೇವಾಲಯಗಳಲ್ಲಿ ದ್ರಾವಿಡ ನಾಗರ ಶೈಲಿಯ ಕೊಡುಗೆ ಕಾಣಬಹುದು. ಹಸಿರು ಮಿಶ್ರಿತ ಶಿಲೆಯ ಜೊತೆ ಕಣಶಿಲೆಗಳನ್ನು ದೇವಾಲಯಕ್ಕೆ ಪ್ರಾದೇಶಿಕ ಶಿಲೆಗೆ

ಪ್ರಾಮುಖ್ಯತೆ ನೀಡಿ ನಿರ್ಮಿಸಿದ್ದಾರೆ. ಸಾಮಾನ್ಯವಾಗಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳು ಮತ್ತು ಅವರ ಶೈಲಿಯನ್ನು ಅನುಸರಿಸಿದ ದೇವಾಲಯಗಳು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ ಮತ್ತು ಸಭಾಮಂಟಪ ಭಾಗಗಳನ್ನು ಹೊಂದಿದೆ. ಸಭಾಮಂಟಪ ಮತ್ತು ಮುಖಮಂಟಪ ಕೆಲವು ದೇವಾಲಯಗಳಲ್ಲಿ ಮಾತ್ರ ಕಂಡುಬಂದಿವೆ. ಇನ್ನುಳಿದ ದೇವಾಲಯಗಳಲ್ಲಿ ಕಂಡುಬರುವುದಿಲ್ಲ. ತಳವಿನ್ಯಾಸದಲ್ಲಿ ಮೇಲೆ ಉಲ್ಲೇಖಿಸಿದ ವಾಸ್ತು ಭಾಗಗಳು ಇರುವುದನ್ನು ಗಮನಿಸಬಹುದು. ಗರ್ಭಗೃಹವು ಬಹುಪಾಲು ಚೌಕಾಕಾರವಾಗಿದ್ದರೆ ನವರಂಗ ಭಾಗವೂ ಚೌಕ ಇಲ್ಲವೆ ಆಯತಾಕಾರವಾಗಿವೆ.

ಗರ್ಭಗೃಹದಲ್ಲಿ ಪ್ರಧಾನ ದೇವತೆಯನ್ನು ಪ್ರತಿಷ್ಠಾಪಿಸಿ ಪೂಜಿಸಲಾಗಿತ್ತು. ಪ್ರಸ್ತುತ ಸರ್ವೇಕ್ಷಣೆಯ ಕಾರ್ಯದಲ್ಲಿ ಕೆಲವು ದೇವಾಲಯಗಳಲ್ಲಿ ಶಿಲ್ಪವಿಲ್ಲದ ಖಾಲಿ ಗರ್ಭಗೃಹವಿರುವುದು ಕಂಡುಬರುತ್ತವೆ. ಗರ್ಭಗೃಹದ ಮುಂದಿನ ಭಾಗದಲ್ಲಿ ನವರಂಗ ಅಥವಾ ಮಂಟಪವಿದ್ದು, ಇವೆರಡನ್ನೂ ಬೆಸೆಯುವ ಕಾರ್ಯವನ್ನು ನಡುವಿನ ಅಂತರಾಳ ಭಾಗವು ನಿರ್ವಹಿಸುತ್ತದೆ. ಈ ಭಾಗದಲ್ಲಿ ನಂದಿಯ ಅಥವಾ ಇನ್ನಿತರ ಮೂರ್ತಿಶಿಲ್ಪಗಳನ್ನು ಇರಿಸಲಾಗಿದೆ. ತಾಲ್ಲೂಕಿನಲ್ಲಿ ಏಕಕೂಟ, ದ್ವಿಕೂಟ, ಮತ್ತು ತ್ರಿಕೂಟ ಸಾಮಾನ್ಯವಾಗಿವೆ. ತ್ರಿಕೂಟ ದೇಗುಲದಲ್ಲಿ ಪ್ರತ್ಯೇಕ ಅಂತರಾಳಗಳ್ಳ ಕೆಲವು ದೇವಾಲಯಗಳಿವೆ. ಇನ್ನೂ ಕೆಲವು ದೇವಾಲಯಗಳಲ್ಲಿ ಪ್ರತ್ಯೇಕ ಅಂತರಾಳಗಳ್ಳ ಕೆಲವು ದೇವಾಲಯಗಳಿವೆ. ಇನ್ನೂ ಕೆಲವು ದೇವಾಲಯಗಳಲ್ಲಿ ಒಂದೇ ಗರ್ಭಗೃಹವಿದೆ. ಗರ್ಭಗೃಹದ ಬಾಗಿಲುವಾಡವು ಸರಳ ಅಥವಾ ಶಾಖೆಗಳ ಅಲಂಕರಣೆಗಳನ್ನು ಹೊಂದಿದೆ. ಕೆಲವು ದೇವಾಲಯದಲ್ಲಿ ಗಜಲಕ್ಷ್ಮಿ, ಗಣಪತಿ, ನಂದಿ, ಜಿನ ತೀರ್ಥಂಕರ ಶಿಲ್ಪಗಳನ್ನು ಕಾಣಬಹುದು. ನವರಂಗ ಮತ್ತು ಕಕ್ಷಾಸನದಲ್ಲಿರುವ ಕಂಬಗಳಲ್ಲಿಯೂ ವೈವಿಧ್ಯತೆಯನ್ನು ಕಾಣಬಹುದು. ಚೌಕಾಕಾರ, ಘನಾಕೃತಿ, ದುಂಡನೆ ಮತ್ತು ತಿರುಗಣೆ ಯಂತ್ರದಿಂದ ಮಾಡಿದ ಕಂಬಗಳು ಕಂಡುಬರುತ್ತವೆ. ಕಂಬಗಳಲ್ಲಿ ದೇವ-ದೇವತೆ ಲೌಕಿಕ ಶಿಲ್ಪ, ಅಲಂಕಾರಿಕ ಶಿಲ್ಪ, ಹೂವು, ಬಳ್ಳಿ, ಚಿತ್ರಗಳು ಕಾಣಬಹುದು.

ಹೊಯ್ಸಳರು ವಾಸ್ತುಗೆ ವೈವಿಧ್ಯತೆಯ ರೂಪವನ್ನು ನೀಡಿದ್ದಾರೆ. ದೇವಾಲಯಗಳ ಅಡಿಯಿಂದ ಮುಡಿಯವರೆಗೆ ಅಲಂಕಾರವನ್ನು ಒಳಗೊಂಡಿದ್ದು, ಕಂಬಗಳ ಕೆತ್ತನೆಯಲ್ಲಿ ಹೊಸತನ ಕಾಣಬಹುದು. ತಿರುಗಣೆ ಯಂತ್ರ ಬಳಸಿ ಅವುಗಳಲ್ಲಿ ಕನ್ನಡಿಯ ರೂಪಕ್ಕೆ ಬದಲಾಯಿಸಿದಂತೆ ಇವೆ. ವಿಜಯನಗರ ಕಾಲದಲ್ಲಿ ರಾಜಕೀಯ ಪರಿಸ್ಥಿತಿ ಮತ್ತು ಧರ್ಮ ರಕ್ಷಣೆ ಕಾರ್ಯದಲ್ಲಿ ನಿರಂತರ ಚಟುವಟಿಕೆಯಿಂದ ವಾಸ್ತು ಶೈಲಿಗಳು ತನ್ನದೆ ಸ್ವರೂಪವನ್ನು ಪಡೆದಿವೆ. ಅತ್ಯಂತ ಒರಟಾದ ಕಣಶಿಲೆ ಬಳಸಿದ್ದಾರೆ. ದೇವಾಲಯವಲ್ಲದೆ, ಗೋಪುರ, ಪ್ರಕಾರ, ಮಂಟಪ, ಉಪದೇವಾಲಯ, ರಾಯ ಗೋಪುರ ಇತ್ಯಾದಿಗಳು ದೇವಾಲಯ ವಾಸ್ತು ಶೈಲಿಗಳಿಗೆ ಸೇರಿವೆ. ಹೊಯ್ಸಳ ಕಾಲದ ವಾಸ್ತುಶಿಲ್ಪ

ವಿಶೇಷತೆಗಳನ್ನು ಅನೇಕ ವಿದ್ವಾಂಸರು ನಿರೂಪಿಸಿದ್ದಾರೆ. ದೇಗುಲದ ಭಿತ್ತಿ ಪಟ್ಟಿಕೆಗಳಲ್ಲಿ ಮೂಡಿಬಂದ ಪುರಾಣ ಫಲಕಗಳನ್ನು ಹೊಯ್ಸಳರ ನಕ್ಷತ್ರಾಕಾರವು ಭಿತ್ತಿಗಳಿಗೆ ಮಾತ್ರ ಸೀಮಿತವಾಗದೆ, ವಿಮಾನದಿಂದಲೂ ಮೇಲಕ್ಕೆ ಮುಂದುವರೆದು, ಕಳಶದಲ್ಲಿ ಮುಕ್ತಾಯಗೊಂಡು ಏರುಗೀರುಗಳನ್ನು ನಿರ್ಮಿಸಿ, ದೇಗುಲ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ. ಶಿವದೇವಾಲಯಗಳಲ್ಲಿ ಬಹುಕೂಟ ದೇಗುಲಗಳು ಬೆಳವಣಿಗೆ ದೇವಕೋಷ್ಠಗಳ ಸಂಖ್ಯೆಗಳನ್ನು ಕಾಣಬಹುದು. ಹೊಯ್ಸಳರ ಕಾಲಕ್ಕೆ ಕೋಷ್ಠಗಳು ಒಂದು, ಎರಡು, ಮೂರು, ನಾಲ್ಕು ಮತ್ತು ಐದು ಗರ್ಭಗೃಹಗಳು ರಚನೆಯಾಗಿವೆ.

ವಿಜಯನಗರ ಪತನ ನಂತರ ಕರ್ನಾಟಕದ ವಾಸ್ತುಶೈಲಿಯಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಉತ್ತರ ಭಾಗದಲ್ಲಿ ಬಹುಮನಿ ಮತ್ತು ಆದಿಲ್ ಶಾಹಿಗಳ ಪ್ರಭಾವದಿಂದ ಹಿಂದೂ-ಮುಸ್ಲಿಂ ಶೈಲಿಯನ್ನು ಬೀದರ್, ಬಿಜಾಪುರ, ಭಾಗಗಳಲ್ಲಿ ಕಾಣಬಹುದು. ಉಳಿದಂತೆಯೆ ಕೆಲವು ಭಾಗದಲ್ಲಿ ಪಾಳೆಗಾರರು ಆಳ್ವಿಕೆ ಅತಂತ್ರತೆಯಲ್ಲಿ ದೇವಾಲಯ ವಾಸ್ತುಶೈಲಿಯಲ್ಲಿ ಸ್ವಲ್ಪ ಮಟ್ಟಿಗೆ ಸರಳತೆ ಎದ್ದು ಕಾಣುತ್ತದೆ. ಹೀಗೆ ಕರ್ನಾಟಕದ ದೇವಾಲಯ ಬೆಳವಣಿಗೆಯಲ್ಲಿ ವಾಸ್ತುಶಿಲ್ಪ ಶೈಲಿಯ ವೈವಿಧ್ಯತೆ ರೂಪ ಕಂಡು ಕೊಳ್ಳಬಹುದು. ಗರ್ಭಗೃಹ ಅಂತರಾಳ, ಸುಖನಾಸಿ, ನವರಂಗ, ರಂಗಮಂಟಪ, ಮುಖಮಂಟಪ, ತೆರೆದ ಮುಖಮಂಟಪ, ಸಭಾಮಂಟಪ, ಬಾಗಿಲುವಾಡ, ಲಲಾಟಬಿಂಬ, ಗೋಪುರ, ಅಧಿಷ್ಠಾನ, ಭಿತ್ತಿ, ದೇವಕೋಷ್ಠಕ, ಕಂಬಗಳು, ಅರೆಕಂಬಗಳ ಪ್ರಕಾರ, ಜಾಲಂಧ್ರ, ಕಕ್ಷಾಸನ, ಭುವನೇಶ್ವರದಲ್ಲಿ ಅರಳಿದ ತಾವರೆ, ಪದ್ಮ ಹೀಗೆ ವಿವಿಧ ರೂಪಗಳನ್ನು ಒಳಗೊಂಡ ದೇವಾಲಯಗಳು ವೈಷ್ಣವ, ಶೈವ, ಜೈನ ಬಸದಿಗಳು ಕಾಣಬಹುದು.

ದೇವರು ನೆಲೆನಿಂತು ನಾಲ್ಕಾರು ಜನರಿಗೆ ಬಾಳಿ ಬದುಕಲು ಆಶೀರ್ವಾದ ನೀಡಿ, ಅವರ ಜೀವನವನ್ನು ಕಷ್ಟ ಸುಖಗಳಲ್ಲಿ ಬೇಯಿಸಿ ನೈಜತೆಯ ಬದುಕನ್ನು ನೀಡುವುದೇ ದೈವರ ಕಾರ್ಯವಾಗಿದೆ. ಇಂತಹ ದೈವ, ದೇವರು ಪದಕ್ಕೆ ಶ್ರೀಸಾಮಾನ್ಯರು ಭಯದಿಂದ ಆಚಾರ-ವಿಚಾರಗಳನ್ನು ಶ್ರದ್ಧೆಯಿಂದ ನಡೆದು ಕೊಂಡು ಬಂದಿರುತ್ತಾರೆ. ಈ ಭಯ ಪ್ರಕೃತಿಯ ಮಡಿಲಿನಲ್ಲಿ ಕಟ್ಟಿಕೊಂಡ ಮಾನವ ದಿನ ದಿನಕ್ಕೆ, ಕಾಲ ಕಾಲದಂತೆ ದೇವರು ಎಂಬ ಪದವನ್ನು ಮೂರ್ತಿ ಸ್ವರೂಪದಲ್ಲಿ ಕಟ್ಟಿಕೊಂಡ. ಈ ಮೂರ್ತಿ ಸ್ವರೂಪವನ್ನು ಗೌರವಿಸಿ ಅದನ್ನು ಕಾಪಾಡಲು ತನಗೆ ಒಳ್ಳೆಯದು ಎಂಬ ನಂಬಿಕೆಗಳಲ್ಲಿ ಬೆಳೆದು ಬಂದ. ಹೀಗೆ ದೇವರು ಇವರ ನೆಲೆ, ದೇವಾಲಯ ಅದಕ್ಕೆ ಶ್ರೇಷ್ಠ ಸ್ಥಾನ ಎಂದು ಅದನ್ನು ಪೂಜಾ-ವಿಧಾನಗಳ ಮೂಲಕ ಜನರಲ್ಲಿ ನಂಬಿಕೆಗಳನ್ನು ಇನ್ನೂ ಗಾಢವಾಗಿ ನೆಲೆಯೂರುವಂತೆ ಮಾನವ ನಿರ್ಮಾಣ ಮಾಡಿಕೊಂಡನು.

ದೇವಾಲಯವೆಂದರೆ ದೇವರಿಗಾಗಿ ಕಟ್ಟಲ್ಪಟ್ಟ ಮಂದಿರ ಎಂದರ್ಥ. ಮಾನವನು ದೇವಾಲಯದ ರಚನೆ, ನಿರ್ಮಾಣ, ಆಡಳಿತ ವ್ಯವಸ್ಥೆಗಳನ್ನು ಸಾಮಾಜಿಕ, ಧಾರ್ಮಿಕ,

ಆರ್ಥಿಕ ಕಾರ್ಯಗಳಲ್ಲಿ ಸೆಲೆಹಾಕಿ ಅದರ ಅಭಿವೃದ್ಧಿ ಮಾಡಿಕೊಂಡನು. ಇಂತಹ ಕಾರ್ಯಗಳು ಸಾಮಾಜಿಕ ಸಾಂಸ್ಕೃತಿಕ ನೆಲೆಯಲ್ಲಿ ಬೆಳೆದು ಬಂದು ದೇವರು ಮಾನವನ ರಕ್ಷಣೆಯನ್ನು ಮಾಡುತ್ತಾ ಬಂದವು.

ದೇವಾಲಯಗಳು ಸಾಮಾಜಿಕ ಮತ್ತು ಆರ್ಥಿಕ ಕಾರ್ಯಗಳನ್ನು ಮಾಡುವಲ್ಲಿ ಮುಂದಾಗಿ ಆಯಾ ರಾಜ್ಯದ ರಾಜ ಮತ್ತು ಪ್ರಜೆಗಳ ಹಿತವನ್ನು ಕಾಯುವ ದೈವ ಸಂಭೂತಗಳಾಗಿ ಬೆಳೆದವು. ಈ ದೈವಗಳನ್ನು ಉನ್ನತ ಸ್ಥಿತಿಗೆ ಇಟ್ಟು ನೋಡುತ್ತಾ ಅದರ ಆಜ್ಞೆಗೆ ಕಾಯುತ್ತ ತನ್ನ ದಿನನಿತ್ಯದ ಕಾರ್ಯ ಚಟುವಟಿಕೆಗಳಲ್ಲಿ ಮನುಷ್ಯ ಬೆಳೆದು ಬಂದ. ಈ ಹಿನ್ನಲೆಯಲ್ಲಿ ದೈವ ರೂಪವಾದ ದೇವರುಗಳನ್ನು ಕಾಪಾಡಲು, ರಕ್ಷಿಸಲು, ಬೆಳಸಲು ಅದರ ಕಾರ್ಯಗಳಿಗೆ ಹೊಲ ಭೂಮಿ ಇತ್ಯಾದಿಗಳನ್ನು ದಾನ, ದತ್ತಿ ಬಿಟ್ಟಿರುವ ವಿಚಾರಗಳು ಶಾಸನಗಳಿಂದ ತಿಳಿಯಬಹುದು. ಈ ರೀತಿಯಾಗಿ ಬೆಳೆದ ದೇವಾಲಯಗಳು ಸಾಮಾಜಿಕ ಸಂಸ್ಥೆಗಳಾಗಿ ಸಮಾಜದ ಜನರ ಹಿತಕಾಯುವಲ್ಲಿ ಮುಂದಾಗಿ ಕಾರ್ಯವನ್ನು ನಿರ್ವಹಿಸಿವೆ.

ದೇವಾಲಯಗಳು ಮಾನವನ ರಕ್ಷಣೆಯೊಂದೆ ಅಲ್ಲದೆ, ಸಾಮಾಜಿಕ ಕ್ರಿಯೆಗಳಲ್ಲಿ ಒಂದಾದ ವಿದ್ಯಾಭ್ಯಾಸವನ್ನು ನೀಡುವಲ್ಲಿ ಸಹಕಾರಿಯಾಗಿವೆ. ಶಿಕಾರಿಪುರದ ಬಳ್ಳಿಗಾವಿಯ ಕೋಡಿಮಠವು ವಿದ್ಯಾ ಕೇಂದ್ರವಾಗಿದ್ದುಕೊಂಡೆ ದೇವಾಲಯ ಚಟುವಟಿಕೆಗಳನ್ನು ನೆರವೇರಿಸುತ್ತದೆ. ಇಂತಹ ನೆಲೆಗಳಲ್ಲಿ ಮಠಗಳು, ಅಗ್ರಹಾರಗಳು, ಬ್ರಹ್ಮಪುರಿಗಳು, ಘಟಿಕಾ ಸ್ಥಾನಗಳು ಎಂಬ ವಿದ್ಯಾ ಕೇಂದ್ರಗಳನ್ನು ಗುರುತಿಸಬಹುದು. ಇದಲ್ಲದೆ ಕೃಷಿಗೂ ದೇವಾಲಯಕ್ಕೂ ಸಂಬಂಧವಿದೆ. ಭೂದಾನ ಬಿಟ್ಟು ಜಮೀನುಗಳಲ್ಲಿ ಉಳುಮೆ ಮಾಡಿಸುವ ವ್ಯವಸ್ಥೆಯಾಯಿತು. ದೇವಾಲಯಗಳು ಬಹುಮುಖ್ಯ ಪ್ರತಿಭೆಗಳಾಗಿ ಸಮಾಜದ ಸಾಮೂಹಿಕ ಪೂಜಾ ಕೇಂದ್ರಗಳಾಗಿ ಬೆಳೆದು ಬಂದವು ಅವುಗಳ ವಿಭಿನ್ನ ಶೈಲಿಯಲ್ಲಿ ರೂಪಗೊಳ್ಳುತ್ತಾ ದೇವರಿಗೆ ಪೂಜೆ ಪುನಸ್ಕಾರ ವಿಧಿ- ವಿಧಾನಗಳು ಹೀಗೆ ಬೆಳೆಯುತ್ತಾ ಬಂದಿವೆ. ಇಂತಹ ಕಾರ್ಯಗಳಿಗೆ ಪ್ರತ್ಯೇಕವಾದ ಒಂದು ವರ್ಗ ಪ್ರಾಚೀನ ಕಾಲದಿಂದಲೂ ಬೆಳೆದು ಬಂದು ಇಂದಿಗೂ ಇದರ ಪೂರಕತೆ ಕಂಡು ಬರುತ್ತದೆ.

ಶಿಕಾರಿಪುರ ತಾಲ್ಲೂಕಿನಲ್ಲಿ ಮೂಲತಃ ಪ್ರಾಚೀನ ದೇವಾಲಯಗಳನ್ನು ಗುರುತಿಸುವಾಗ ತಾಳಗುಂದ ಪ್ರಣವೇಶ್ವರ ದೇವಾಲಯವು ಶಾತವಾಹನರ ಕಾಲದಿಂದಲೇ ರಾಜರ ಪೋಷಣೆಯಲ್ಲಿ ಗೌರವಿಸಿಕೊಂಡಿತ್ತು. (ಎಕ ೭ ಶಿಕಾರಿ ೧೭೬-ಕ್ರಿ.ಶ.೪೫೦) ಈ ಕಾಲಕ್ಕೆ ಅಂದರೆ ಶಾತವಾಹನ ರಾಜನೊಬ್ಬನು ಮಳವಳ್ಳಿ ದೇವರಿಗೆ ದತ್ತಿ ಬಿಟ್ಟಿರುವ ಪ್ರಸ್ತಾಪಿಸಿದೆ. (ಎಕ ೭ ಶಿಕಾರಿ ೨೬೩ - ಕ್ರಿ.ಶ.೧೫೦) ದೇವಾಲಯ ನಿರ್ಮಾಣ ಹಾಗೂ ಶಾಸನಗಳ ನಿರ್ಮಾಣಗಳಲ್ಲಿ ಕವಿಗಳನ್ನು ಕಾಣಬಹುದು. ಅದೇ ರೀತಿ ಸಿಂಗಲೋಕೋಜ ಎಂಬ ಖಂಡರಣಿಕಾರನು ಇದ್ದ ಬಗ್ಗೆ ಶಾಸನ ಉಲ್ಲೇಖವಿದೆ. ಈತ ದೇವಾಲಯ ನಿರ್ಮಾಣದಲ್ಲಿ ಸಹಕಾರಿಯಾಗಿದ್ದಾನೆ (ಎಕ ೭ ಶಿಕಾರಿ ೨೬-ಕ್ರಿ.ಶ.೧೦೫೬) ಹಾಗಾಗಿ

ತಾಳಗುಂದ ಪ್ರಣವೇಶ್ವರನ ದೇವಾಲಯದ ರಚನೆ ಬಗ್ಗೆ ಮೂಲ ಆಕರಗಳು ದೊರೆಯುತ್ತವೆ.

ರಚನೆ ಮತ್ತು ನಿರ್ಮಾಣ :

ಶಿಕಾರಿಪುರದಲ್ಲಿ ಅಳಿದುಳಿದ ಆಕರಗಳಲ್ಲಿ ದೇವಾಲಯಗಳೂ ಒಂದು. ದೇವಾಲಯಗಳ ನೆಲೆಯಲ್ಲಿ ಪ್ರಾಚೀನ ದೇವಾಲಯದ ಪ್ರಶ್ನೆ ಕಾಣುತ್ತದೆ. ಪಳೆಯುಳಿಕೆಗಳಲ್ಲಿ ತಾಳಗುಂದದ ಪ್ರಣವೇಶ್ವರ ದೇವಾಲಯಗಳು ಶಾತಕರ್ಣಿಗಳ ಕಾಲದಿಂದ ಆರಂಭವಾಗಿತ್ತು ಎಂದು ಹೇಳಬಹುದು. (ಎಕ ೭ ಶಿಕಾರಿ ೧೭೬-ಕ್ರಿ.ಶ ೪೫೦) ಇದರ ತರುವಾಯ ಕದಂಬರ ನೆಲೆಯಾಗಿ ಬನವಾಸಿ ಕೇಂದ್ರವಾಗಿ ಆಳಿದ ಮಯೂರಶರ್ಮನ ಹಿಡಿತದಲ್ಲಿ ಬೆಳೆದು ಬಂದಿದೆ ಎಂಬುದನ್ನು ಪರೋಕ್ಷವಾಗಿ ಅಲ್ಲಿಯ ಶಾಸನಗಳಿಂದಲೇ ತಿಳಿಯಬಹುದು. ಬಳ್ಳಿಗಾವಿಯಲ್ಲಿ ಪಂಚಲಿಂಗಗಳನ್ನು ಪಾಂಡವರು ಸ್ಥಾಪಿಸಿದರು ಎಂಬುದನ್ನು ಶಾಸನದಲ್ಲಿ ಉಲ್ಲೇಖಗಳು ದೊರೆಯುತ್ತವೆ (ಎಕ ೭ ಶಿಕಾರಿ ೧೨೬ – ಕ್ರಿ.ಶ.೧೦೩೬) ಈ ದೇವಾಲಯಗಳ ರಚನೆ ನಿರ್ಮಾಣಗಳಲ್ಲಿ ಧಾರ್ಮಿಕ ಅಂಶಗಳ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಶೈವ ಧರ್ಮವು ಶಿವ ದೇವಾಲಯವನ್ನು, ವೈಷ್ಣವ ಧರ್ಮವು ವಿಷ್ಣುದೇವಾಲಯವನ್ನು, ಜೈನ ಧರ್ಮವು ಜೈನ ಬಸದಿಗಳನ್ನು ನಿರ್ಮಾಣ ಮಾಡಿಕೊಂಡಿದೆ. ಹಾಗಾಗಿ ಯಾವುದೇ ಕಾರ್ಯಗಳು ಜರುಗಲು ಅಲ್ಲಿಯ ಧಾರ್ಮಿಕ ಕಥಾ ಪ್ರಸಂಗಗಳು ಬಳಕೆಯಾಗಿರುತ್ತವೆ. ದೇವಾಲಯಗಳು ಬೆಳೆಯುತ್ತಾ ಮಠದ ಜೊತೆಗೆ ಸೇರಿ ವಿದ್ಯಾದಾನಕ್ಕೆ ಆದ್ಯತೆ ನೀಡಿರುವುದು ಅವುಗಳ ಸಾಂಸ್ಕೃತಿಕ ಬೆಳವಣಿಗೆಯ ಒಂದು ಮುಖ್ಯ ಘಟ್ಟ. ವೈದಿಕ ಕಾಲದ ಗುರುಕುಲಗಳು ಬೌದ್ಧರ ವಿಹಾರಗಳು ಮಠ ಮತ್ತು ಶಾಲೆಗಳಾಗಿ ಬಂದಿವೆ. ಅದೇ ವಿದ್ಯೆಯನ್ನು ಪೂರೈಸುವಲ್ಲಿ ಈ ದೇವಾಲಯವನ್ನೆ ಆಧರಿಸಿರುವುದು ಎಲ್ಲಾ ಭಾಗಗಳಲ್ಲೂ ಕಾಣಬಹುದು.

ಕಾಳಾಮುಖ ಶೈವರ ಕಾಲದಲ್ಲಿ ದೇವಾಲಯಗಳು ಮಠಗಳ ಆಡಳಿತ ವ್ಯಾಪ್ತಿಗೆ ಸೇರಿಸಿರುವ ಸಂಭವಗಳು ಹೆಚ್ಚು. ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಜನಸಮಾನ್ಯರು ನಿರ್ಮಿಸಿದ ಶಿವ, ವಿಷ್ಣುದೇವಾಲಯಗಳೇ ಹೆಚ್ಚಾಗಿವೆ. ಹಾಗಾಗಿ ಬಸದಿ ಜನರ ನೀತಿಯನ್ನು ಬದಲಾಯಿಸುವಲ್ಲಿ ಅದರ ಪಾಲು ಕಡಿಮೆ ಇದ್ದು, ದೇವಾಲಯಗಳ ಕಾರ್ಯಗಳೇ ಹೆಚ್ಚಾಗಿದೆ. ದೇವಾಲಯಗಳನ್ನು ಹಲವಾರು ಪಂಗಡಗಳ ನೇತೃತ್ವದಲ್ಲಿ ನಿರ್ಮಾಣವಾದರೆ, ಇನ್ನೂ ಕೆಲವು ಧಾರ್ಮಿಕ ಪ್ರಭುಗಳ, ವ್ಯಾಪಾರ ವರ್ಗಗಳ ನೆಲೆಯಲ್ಲಿ ನಿರ್ಮಾಣವಾಗಿವೆ.

ಮೇಚಿಸೆಟ್ಟಿ, ಅವನ ಹೆಂಡತಿ ದೇವಿಕಬ್ಬೆ ಮತ್ತು ದಾಸಿಸೆಟ್ಟಿಯರು ಧರ್ಮ ಕಥಾ ಕಥನ ಕೇಳಿ ಧರ್ಮ ಚಿತ್ತ ಹುಟ್ಟಿ, ಮರಿಯಸೆಯಲ್ಲಿ ತಾವು ಪ್ರತಿಷ್ಠೆ ಮಾಡಿದ ಮಲ್ಲಿಕಾರ್ಜುನ ದೇವರ ನೈವೇದ್ಯ ಮತ್ತಿತರ ಸೇವೆಗಳಿಗೆ ದಾನ ನೀಡಿದ್ದಾರೆ. (ಗೋಪಾಲರಾವ್.ಹೆಚ್.ಎಸ್, ೧೯೯೩, ಶಾಸನಗಳ ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು-ಒಂದು ಸಾಂಸ್ಕೃತಿಕ ಅಧ್ಯಯನ, ಪುಟ ೫೨) ಬಳ್ಳಿಗಾವಿಯ ಶಾಸನದಲ್ಲಿ ದೇವಾಲಯದ ನಿರ್ಮಾಣದ ದಾಖಲೆಗಳಲ್ಲದೆ ದೇವಾಲಯಗಳಿಗೆ ನೀಡಿದ

ದಾನಗಳನ್ನು ಉಲ್ಲೇಖಿಸಿದ್ದರೂ, ಧರ್ಮ ಕಥಾಪ್ರಸಂಗದ ಬಗ್ಗೆ ವಿಶೇಷ ಮಾಹಿತಿ ನೀಡಿವೆ. ಜಗದೇವರಸನು ತನ್ನ ಮಗ ಬಮ್ಮರಸನ ಜೊತೆಗೆ ಚತುರ ಬುಧಜನ ಪರಿವಾರರಂಬೇರಸು ಧರ್ಮ ಪ್ರಸಂಗಮುವನ್ನು ಮಾಡುತ್ತಾ ದಕ್ಷಿಣ ಕೇದಾರ ಮತ್ತು ಆಸ್ಥಾನದ ಆಚಾರ್ಯ ಗೌತಮಾರ್ಯನ ಗುಣಗಳನ್ನು ಕೇಳಿ ದೇವರಿಗೆ ಹಲವು ದಾನಗಳನ್ನು ನೀಡಿದ್ದಾನೆ (ಎಕ ೭ ಶಿಕಾರಿ ೧೦೩ – ಕ್ರಿ.ಶ.೧೧೪೯) ಅದೇ ರೀತಿ ಮಾಯದೇವರಸನು ಬಳ್ಳಿಗಾವಿಯ ಧರ್ಮ ಪ್ರಸಂಗದಲ್ಲಿ ದಕ್ಷಿಣ ಕೇದಾರ ಮತ್ತು ಆಚಾರ್ಯ ವಾಮಶಕ್ತಿ ಪಂಡಿತ ದೇವರ ಗುಣ ಕೇಳಿ ಅಲ್ಲಿಗೆ ದಾನ ನೀಡುತ್ತಾನೆ. (ಎಕ ೭ ಶಿಕಾರಿ ೧೦೪ – ೧೧೫೬) ಕೇಶವ ದೇವನು ಧರ್ಮ ಪ್ರಂಸಗದಲ್ಲಿ ತನ್ನ ಹೆಸರಿನಲ್ಲಿ ಕೇಶವಾಪುರ– ವೀರಕೇಶವ ದೇವಾಲಯವನ್ನು ನಿರ್ಮಿಸಿ ಅದರಿಂದ ಪುಣ್ಯ ಬರುತ್ತದೆ ಎಂದು ತಿಳಿದಿದ್ದನು.(ಎಕ ೭ ಶಿಕಾರಿ ೧೨೩– ಕ್ರಿ.ಶ.೧೧೫೯) ದೇವಾಲಯವನ್ನು ನಿರ್ಮಾಣಕ್ಕೆ ಧರ್ಮ ಪ್ರಸಂಗಗಳು ಒಂದೆಡೆಯಾದರೆ, ಧರ್ಮಗುರುಗಳು ಕೂಡ ಕಾರಣರಾಗಿದ್ದಾರೆ. ಕ್ರಿ.ಶ.೧೦೭೧ರ ಶಾಸನದಲ್ಲಿ ಸತ್ಯ ಜ್ಞಾನಾನಂದ ಅದ್ವೈತ ಜ್ಯೋತಿ ಸ್ವರೂಪ ಪ್ರಣವನಾದನಂದ ಇತ್ಯಾದಿ ಬಿರುದುಗಳನ್ನು ಪಡೆದಿದ್ದ ಗುಣವುಳ್ಳ ಯೋಗಿಗಳು ಕೆಂಡಳಿ ನಾಡ, ತುಂಬಿಗೆರೆಯ ಪೂರ್ವ ಸೀಮೆ ಮತ್ತು ಮೊಸಳೆ ಮಡುವಿನ ಪಶ್ಚಿಮ ಸೀಮೆಗಳ ನಡುವೆ ನಾಗೇಶ್ವರವನ್ನು ಸ್ವಯಂಭೂನಿಳಯವನ್ನು ಬಲಿಪುರದಲ್ಲಿ ಯೋಗೇಶ್ವರ ಹರಿಹರಾದಿತ್ಯ ಮತ್ತು ಮತ್ತೊಂದು ದೇವಾಲಯವನ್ನು ಮಾಡಿದ್ದಾರೆ. (ಗೋಪಾಲರಾವ್.ಹೆಚ್.ಎಸ್.೧೯೯೩, ಶಾಸನಗಳ ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು–ಒಂದು ಸಾಂಸ್ಕೃತಿಕ ಅಧ್ಯಯನ, ಪುಟ ೫೮).

ಅಧಿಕಾರಿಗಳು ಕೂಡ ಈ ದೇಗುಲ ನಿರ್ಮಾಣದಲ್ಲಿ ಕಾರಣ ಪುರುಷರಾಗಿದ್ದಾರೆ. ದಂಡನಾಯಕ ಸರ್ವದೇವರಸನು ಏಕೇಶ್ವರ ದೇವರ ಪ್ರೇರಣೆಯಿಂದ ಬಳ್ಳಿಗಾವಿಯಲ್ಲಿ ಸರ್ವೇಶ್ವರಾಂಬ ದೇವಾಲಯ ಮಾಡಿಸಿದ್ದಾನೆ. (ಎಕ ೭ ಶಿಕಾರಿ ೧೧೪–ಕ್ರಿ.ಶ ೧೯೯೬) ನಾಯಕ ಮಾಚೆಯ ಬಂದಳಿಕೆಯಲ್ಲಿ ಜನಾಶ್ರಯ ವಿಳಾಸ ಗೇಹವನೆ ಶಿವ ಗೇಹವನು ಮಾಡಿಸಲು ತನ್ನ ನಾಯಕ ಬೊಪ್ಪನೇ ಕಾರಣ ಎಂದಿದ್ದಾನೆ. ಬೊಪ್ಪನಿಗಾಗಿ ಬೊಪ್ಪೇಶ್ವರಾಲಯವನ್ನು ಮಾಡಿಸಿ ಅದರ ನಿರ್ಮಾಣದ ಧರ್ಮವನ್ನು ತನ್ನ ರಾಜನಾದ ಸೋಮಭೂಮಿಪತಿಗೆ ನೀಡಿದ್ದಾನೆ. (ಎಕ ೭ ಶಿಕಾರಿ ೨೩೬ –ಕ್ರಿ.ಶ.೧೧೭೪). ಇದಲ್ಲದೇ ಬಳ್ಳಿಗಾವಿಯ ಪೂಜಾರಿ ಸಿಂಗಣ ಮಾಡಿಸಿದ ಮಲ್ಲಿಕಾರ್ಜುನ ದೇವರ ಬಗ್ಗೆ ಉಲ್ಲೇಖವಿದೆ. (ಎಕ ೭ ಶಿಕಾರಿ ೧೩೫ –ಕ್ರಿ.ಶ ೧೦೭೮) ಮಳವಳ್ಳಿ ಪ್ರಭುಗಾವುಂಡನು ಶ್ರೀಕಲಿದೇವರ ದೇವಾಲಯಗಳನ್ನು ಮಾಡಿಸಿ ಕಳಶರೋಹಣ ಮಾಡಿಸಿದ್ದಾನೆ. ಇದರ ಜೊತೆಗೆ ಈತನ ಅಣ್ಣ ಎರಿಹಗಾವುಂಡ ಭಗವತೀ ದೇವಿಯನ್ನು, ಇನ್ನೊಬ್ಬ ಅಣ್ಣನ ಅಂಕಾರದ ಮುದ್ದಗಾವುಂಡ ಸಪ್ತ ಮಾತೃಕೆಯನ್ನು ಈತನ ತಮ್ಮ ಕೇತಗಾವುಂಡ ಶ್ರೀವೃಷಭೇಶ್ವರನನ್ನು ಪ್ರತಿಷ್ಠಾಪಿಸಿದ್ದಾರೆ.(ಎಕ ೭ ಶಿಕಾರಿ ೨೬೭ – ಕ್ರಿ.ಶ.೧೧೪೭)

ಇದರ ಜೊತೆಗೆ ದೇವಾಲಯಗಳ ನಿರ್ಮಾಣಗಳಲ್ಲಿ ವ್ಯಾಪಾರಿ ವರ್ಗದ ಸಹಕಾರವೂ ಇದೆ. ಶಾಂತಿನಾಥನೆಂಬ ಕವಿ ಮತ್ತು ದಂಡನಾಥನು, ಲಕ್ಷ್ಮಿನೃಪನಿಗೆ ಜಿನಧರ್ಮ ಪ್ರಭಾವವನ್ನು ಹೇಳಿದಾಗ ಅವನು ಜಿನನಾಥ ವಾಸವನ್ನು

ವಾಸವಕೃತವೆನಮುನ್ನಂ ಶಿಲಾಕರ್ಮಧಿಂ ಶಾಸನ ಮಪ್ಪಂತಾಗಿರಲ್ಮಾಡಿಸಿ, ಬಳಿಕ ಆ ಜಿನ ಗೇಹದ ದ್ವಾರದಲ್ಲಿ ಶಿಲಾಸ್ಥಂಭವನ್ನು ನಿರ್ಮಿಸಿ, ಅದರಲ್ಲಿ ಶಾಸನವನ್ನು ಬರೆಸಿದನೆಂದು ಬಳ್ಳಿಗಾವಿಯ ಶಾಸನ ತಿಳಿಸುತ್ತದೆ. (ಎಕ ೭ ಶಿಕಾರಿ ೧೩೬- ಕ್ರಿ.ಶ.೧೦೬೮) ಪ್ರತಿಕಂಠ ಸಿಂಗಯ್ಯನು ಧರ್ಮ ಕಥಾಕಥನ ಪ್ರಸಂಗವನ್ನು ಹುಟ್ಟಿಸಿ ದಂಡನಾಯಕ ಭರ್ಮದೇವನಿಗೆ ಪೆರ್ಮಾಡಿಯ ಬಸದಿಗೆ ಒಂದು ಖಂಡವನ್ನು ಬಲ್ಲರಸದಲ್ಲಿ ಪಡೆದುಕೊಂಡು ಭಿನ್ನವಿಸುತ್ತದೆ. ಇದನ್ನು ಭರ್ಮದೇವನ ತ್ರಿಭುವನ ಮಲ್ಲದೇವರಿಗೆ ತಿಳಿಸಲು, ದೇವರ ಹಲವು ಸೇವೆಗಳಿಗೆ ದಾನ ಮಾಡುತ್ತಾನೆ.(ಎಕ ೭ ಶಿಕಾರಿ ೧೨೪- ಕ್ರಿ.ಶ.೧೦೭೭) ಏಚರಸನು ಬೆಳಗವತ್ತಿಯ ನಾಡಿನ ಎಲ್ಲಾ ಊರುಗಳಲ್ಲಿಯೂ ಜಿನಾಲಯವು ಇರಲೇ ಬೇಕೆಂದು ಪ್ರತಿಯೊಂದು ಊರಿನಲ್ಲಿಯೂ ಬಸದಿಯನ್ನು ಮಾಡಿ ಬೆಳಗವತ್ತಿಯ ನಾಡನ್ನು ಕೋಪಣಕ್ಕೆ ಸಮನಾಗಿ ಮಾಡಿದನೆಂದು ಗೊಗ್ಗದ ಒಂದು ಶಾಸನದಲ್ಲಿ ಉಲ್ಲೇಖಿಸಿದೆ. (ಎಕ ೭ ಶಿಕಾರಿ ೩೧೭-ಕ್ರಿ,ಶ,೧೨೦೫) ಬೌದ್ಧ ಧರ್ಮಕ್ಕೆ ಸೇರಿದಂತೆ ಸಹವಾಸಿ ಹಂಪ ಭಟ್ಟನ ಕುಲವಧು ನಾಗಿಯಕ್ಕನು ತಾರಾಭಗವತಿಯನ್ನು ಮಾಡಿಸಿ ಹಲವು ದಾನಗಳನ್ನು ಮಾಡಿದ್ದಾನೆ.

ಆಡಳಿತ ಮತ್ತು ನಿರ್ವಹಣೆ :

ದೇವಾಲಯಗಳನ್ನು ವ್ಯಾಪಾರಿಗಳು, ಅಧಿಕಾರಿಗಳು, ಶ್ರೀಸಾಮಾನ್ಯರು, ಇತ್ಯಾದಿಯವರಿಂದ ರಚನೆಯಾಗಿ ಅದರ ಬೆಳವಣಿಗೆಯ ಹಂತಗಳಲ್ಲಿ ನಿರ್ವಹಣೆ ಮತ್ತು ಆಡಳಿತದ ನೆಲೆಯಲ್ಲಿ ಬೆಳಸಿರುವುದು ಎಲ್ಲಾ ದೇವಾಲಯಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಒಂದು ಪದವಿಯನ್ನು ಸೃಷ್ಟಿಸಿ ಅವರಿಗೆ ಇದರ ಮುಖ್ಯ ಉಸ್ತುವಾರಿಯನ್ನು ನೀಡಲಾಗಿದೆ. ದೇವಾಲಯದ ನಿರ್ವಹಣೆಯನ್ನು ಒಬ್ಬ ಗುರುಗಳೂ ಕೂಡ ಜವಾಬ್ದಾರಿಯನ್ನು ವಹಿಸಿಕೊಳ್ಳಬಹುದು. ಇವರನ್ನು ಸ್ಥಾನಪತಿ, ಸ್ಥಾಣಒಡೆಯ, ಸ್ಥಾನಿಕ ಇತ್ಯಾದಿ ಪದಗಳ ಮೂಲಕ ಕರೆಯುತ್ತಿದ್ದರು.

ಹಲವು ಶಾಸನಗಳಲ್ಲಿ ಪಂಚಮಠಸ್ಥಾನ ಮತ್ತು ಪಂಚಮಠಸ್ಥಾನಪತಿಗಳನ್ನು ಉಲ್ಲೇಖಿಸಿದೆ. ಬಳ್ಳಿಗಾವಿಯಲ್ಲಿ ಹರಿಹರ ಕಮಳಾಸನ, ವೀತರಾಗ, ಬೌದ್ಧಾಲಯ ಹೀಗೆ ಮಠಗಳಿದ್ದವು (ಎಕ ೭ ಶಿಕಾರಿ ೧೦೦ –ಕ್ರಿ.ಶ.೧೧೨೯) ಅದೇ ರೀತಿ ಹಿರಿಯರ ಬಗ್ಗೆ ತಿಳಿಸುವಾಗ ಮಠದಾಚಾರ್ಯರ ಉಲ್ಲೇಖ ದೊರೆಯುತ್ತದೆ. (ಎಕ ೭ ಶಿಕಾರಿ ೯೯ – ೧೧೩೩) ಇವರು ನೈಷ್ಟಿಕರಾಗಿದ್ದು ದೇವಸ್ಥಾನ ಜೊತೆಗೆ ಮಠಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಮಾಯತಮ್ಮನ ಮುಚಡಿಯ ಶಾಸನದಲ್ಲಿ ಇದರ ಬಗ್ಗೆ ಉಲ್ಲೇಖ ದೊರೆಯುತ್ತದೆ. ದೇವಾಲಯಗಳು ಮಠಗಳಾಗಿ ಸತ್ರಗಳಾಗಿ ಬೇರೆ ಬೇರೆ ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುತ್ತವೆ. ಇಲ್ಲಿ ವಿದ್ಯಾರ್ಥಿಗಳ ಯೋಗಕ್ಷೇಮ ಮತ್ತು ದೇವರ ಸೇವೆ ಎರಡು ರೀತಿಯ ದೃಷ್ಟಿಕೋನದಲ್ಲಿ ಕಾಣಲು ಸಾಧ್ಯವಿದೆ. ಎಡವೆಟ್ಟೆರ್ಪ್ಪತ್ತರ ಮಾನ್ನೆಯ ಜೋಗಯ್ಯನು ಅನೇಕ ಕೆರೆಗಳನ್ನು ಕಟ್ಟಿಸಿ, ತಾನು ಕಟ್ಟಿಸಿದ ಸರ್ವಜ್ಞ ಗದ್ದುಗೆ ಮತ್ತು ಅಲ್ಲಿಯ ಮಲ್ಲಿಕಾರ್ಜುನ ದೇವಾಲಯ ಮಠದ ವಿದ್ಯಾರ್ಥಿಗಳ ಆಹಾರ ದಾನ ಸತ್ರಕ್ಕಾಗಿ ತ್ರಿಲೋಚನ ಪಂಡಿತ ದೇವರಿಗೆ ಭೂಮಿಯನ್ನು ದಾನ ಮಾಡಿದ್ದಾನೆ. (ಎಕ ೭ ಶಿಕಾರಿ ೧೯- ಕ್ರಿ.ಶ.೧೦೬೬) ದೇವಾಲಯದ ಜೊತೆಗಿಲ್ಲದ ಸತ್ರಗಳು ಖಾಸಗಿ ಸ್ವರೂಪ ಪಡೆದಿದ್ದವು ಎಂದು ತಿಳಿಯಬಹುದು. ಅದೇ ರೀತಿ ಬೇಗೂರು ಅಗ್ರಹಾರದಲ್ಲಿ ಬೇಗೂರ

ಮಹಾಜನ ಮೂನೂರ್ವರು ಚಟ್ಟಗೋಸಿಯನ್ನು ಒಪ್ಪಿಸಿ ದೇಸಿಗ ಪ್ರವಾಸಿಗರ ಆಹಾರ ದಾನಕ್ಕೆ ಒಂದು ಸತ್ರವನ್ನು ಮಾಡಿ ಅದಕ್ಕೆ ೨೫ಕಮ್ಮ ಭೂಮಿಯನ್ನು, ಒಂದು ಮನೆಯನ್ನು ನೀಡಿದ್ದಾರೆ.(ಎಕ ೭ ಶಿಕಾರಿ ೧೪- ಕ್ರಿ.ಶ.೧೦೮೯).

ಗವೇಶ್ವರ ದೇವರಿಗೆ ದಂಡನಾಯಕ ಕಾಮರಸನು ಕೋಡವೀಸದಲ್ಲಿ ಹತ್ತು ಎತ್ತುಗಳನ್ನು ಬಿಟ್ಟಿದ್ದು, ಮಾರಾಟದ ಸಂಘದ ಮತ್ತು ವೃತ್ತಿಕಾರರು ದೇವಾಲಯಕ್ಕೆ ಸೇವೆ ಸಲ್ಲಿಸಿದ ವ್ಯವಸ್ಥೆಯನ್ನು ಇಲ್ಲಿ ತಿಳಿಯಬಹುದು. (ಎಕ ೭ ಶಿಕಾರಿ ೧೮-ಕ್ರಿ.ಶ.೧೦೫೪). ಚಕ್ರವರ್ತಿಯಲ್ಲಿ ಕಾರುಣ್ಯವಾ ಪಡೆದು ನೀಡಿದ ದತ್ತಿಯೇ ಪರಮೇಶ್ವರದಲ್ಲಿ ಆಳುವ ಚಕ್ರವರ್ತಿ ಅಥವಾ ಮಾಂಡಲೀಕನಿಂದ ಅನುಮತಿ ಪಡೆದು ನೀಡಲಾಗುತ್ತಿದ್ದ ದತ್ತಿಯೇ ಪರಮೇಶ್ವರ ದತ್ತಿ. ಅದರ ತೆರಿಗೆ ಇತ್ಯಾದಿಗಳನ್ನು ರದ್ದು ಮಾಡಿ ಬಾಧೆಗಳನ್ನು ಪರಿಹರಿಸಿ ಕೊಟ್ಟರೆ ಆಗ ಅದು ಸರ್ವನಮಸ್ಯ ಪರಮೇಶ್ವರದತ್ತಿ ಆಗುತ್ತದೆ. (ಗೋಪಾಲರಾವ್.ಹೆಚ್.ಎಸ್, ೧೯೯೩, ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು-ಒಂದು ಸಾಂಸ್ಕೃತಿಕ ಅಧ್ಯಯನ, ಪುಟ ೧೧೭) ಕಟ್ಟುಕಥೆಯಂತೆ ನಿಗದಿತ ಕಾಲಕ್ಕೆ ಸರಿಯಾಗಿ ದೇವಾಲಯಗಳಿಗೆ ಸುಂಕ ಇಲ್ಲವೆ ಕಾಣಿಕೆ ಇತ್ಯಾದಿಗಳನ್ನು ಕೊಡುವ ಕ್ರಮವು ಆಚರಣೆಯಲ್ಲಿದ್ದು, ಬಳ್ಳಿಗಾವಿಯ ನರಸಿಂಹ ದೇವರಿಗೆ ವನವಾಸಿಯ ೧೨೦೦೦ ಅಧಿಕಾರಿಗಳ ಸಂಧಿವಿಗ್ರಹಿಗಳು ಪ್ರತಿವರ್ಷ ಒಂದು ಗದ್ಯಾಣ, ಭಟ್ಟಗುತ್ತರು ಒಂದು ಪಣ, ಅರಸಾಳ್ಗಳು ೧೦ ವಿಸ ಕೊಡುವ ಬಗ್ಗೆ ಉಲ್ಲೇಖದಲ್ಲಿ ಕಾಣಬಹುದು. (ಎಕ ೭ ಶಿಕಾರಿ ೧೩೧-ಕ್ರಿ.ಶ.೧೧೦೪) ಆಡಳಿತ ಮತ್ತು ನಿರ್ವಹಣೆಗೆ ಅಧಿಕಾರಿಗಳಿಂದ ಹಿಡಿದು ಕೆಳಗಿನವರೆಗೆ ಎಲ್ಲರೂ ಕೂಡ ಸಹಕಾರಿಯಾಗಿದ್ದು ದೇವಾಲಯದ ಅಭಿವೃದ್ಧಿಗೆ ಒಳ್ಳೆಯದನ್ನು ಬಯಸಿದ್ದಾರೆ.

ಪೂಜಾ ವಿಧಿ-ವಿಧಾನಗಳು :

ದೇವಾಲಯಕ್ಕೆ ಗರ್ಭದ ಭಾಗದಲ್ಲಿ ಇರುವ ಮೂರ್ತಿ ಸ್ವರೂಪ ದೇವರಿಗೆ ದಿನನಿತ್ಯದ ಪೂಜಾ ಪುನಸ್ಕಾರಗಳು ನಡೆಯಲೇ ಬೇಕು. ಈ ರೀತಿ ಪೂಜೆಗಳ ಪ್ರತಿಯಾಗಿ ದಾನ-ದತ್ತಿಗಳನ್ನು ಬಿಟ್ಟಿರುವುದು ಕಾಣಬಹುದು. ನಿತ್ಯ ನೈವೇದ್ಯಕ್ಕಂ ಪೂಜಾ ಪುನಸ್ಕಾರಕ್ಕಂ ಎಂಬ ಉಲ್ಲೇಖ ಶಾಸನದಲ್ಲಿದೆ. (ಎಕ ೭ ಶಿಕಾರಿ ೧೩೩-ಕ್ರಿ.ಶ.೧೧೩೧) ದೇವಗ್ಗರಚ್ಚನೆ ಪೂಜಾ ನಾಭಿಷೇಕಕ್ಕಂ ಭೋಗಕ್ಕಂ, ರಿಷಿಯರಾಹಾರದಾನಕ್ಕಂ ಎಂಬುದಾಗಿ ದೇವರಿಗೆ ಪೂಜೆ ನಿಮಿತ್ತ ಉಲ್ಲೇಖಿಸಿದೆ (ಎಕ ೭ ಶಿಕಾರಿ ೧೨೪-ಕ್ರಿ.ಶ೧೦೭೭) ಹಲವಾರು ಕಲ್ಯಾಣ ಚಾಳುಕ್ಯರ ಕಾಲದ ಶಾಸನಗಳು ದೇವರ ಕಾರ್ಯಕ್ಕೆ ದೊರೆತ ದಾನಗಳನ್ನು ಉಲ್ಲೇಖಿಸಿದೆ. ಶ್ರೀ ಕಾರ್ಯಕ್ಕೆ ದೊರೆತ ದಾನಗಳನ್ನು ಉಲ್ಲೇಖಿಸಿದೆ. ಶ್ರೀ ಕಾರ್ಯವು ದೇವರ ಪೂಜೆಯಷ್ಟೆ ಅಲ್ಲದೆ ದೇವಸ್ಥಾದಲ್ಲಿ ನಡೆಯುವ ಎಲ್ಲಾ ಸತ್ಕಾರ್ಯಗಳನ್ನು ಒಳಗೊಂಡಿತ್ತು. ಕೇದಾರೇಶ್ವರ ದೇವರ ಮಾಟಕೂಟ ಪ್ರಸಾದ ರತ್ನ ಪೂಜೆ, ಸುವರ್ಣ ಕಳಶ ವಿದ್ಯಾದಾನ್ನದಾನಾಧ್ಯನೇಕ ಶ್ರೀ ಕಾರ್ಯ್ಯ ಎಂದೇ ಬಳ್ಳಿಗಾವಿಯ ಒಂದು ಶಾಸನ ಉಲ್ಲೇಖಿಸುತ್ತದೆ. (ಎಕ ೭ ಶಿಕಾರಿ ೯೨-ಕ್ರಿ.ಶ.೧೧೬೮) ಅದೇ ರೀತಿ ನಂದಾ ದೀವಿಗೆ ಚೈತ್ರ ಪವಿತ್ರ ಮಾಟಕೂಟ ನಮಕರ್ಮಾಳಕ್ಕ ಎಂದು ಉಲ್ಲೇಖಿಸಿದೆ. (ಎಕ ೭ ಶಿಕಾರಿ ೧೨೩-ಕ್ರಿ.ಶ.೧೧೫೪).

ದೇವರಂಗ ಭೋಗಕರ ಚೈತ್ರ ಪವಿತ್ರಕ್ಕಂ ನೈವೇದ್ಯಕ್ಕಂ ದೇವರಿಗೆ ಸಲ್ಲುವ ವಿಶೇಷ ಸೇವೆಯ ಬಗ್ಗೆ ತಿಳಿಸುತ್ತದೆ. (ಎಕ ೭ ಶಿಕಾರಿ ೧೦೬-ಕ್ರಿ.ಶ.೧೯೮) ಸಮಸ್ತ ನಗರಂ ಪವಿತ್ರಕ್ಕೆ ಕೊಟ್ಟಿರುವ ಪಣ ಎರಡು ಅಂಗಡಿಯಲು ಪರ್ವನಿವೇದ್ಯಕ್ಕೆ ಅಕ್ಕಿ ಬಣ ಎಂಬ ಉಲ್ಲೇಖ ಸಿಗುತ್ತದೆ.(ಎಕ ೭ ಶಿಕಾರಿ ೧೧೧-ಕ್ರಿ.ಶ.೧೦೮೦) ಇನ್ನಿತರೆ ಪೂಜೆಗಳಲ್ಲಿ ಹೇಳುವಾಗ ಚೈತ್ರ ಪವಿತ್ರಾದಿ ಪರ್ವ (ಎಕ ೭ ಶಿಕಾರಿ ೨೩೬-ಕ್ರಿ.ಶ.೧೧೭೪) ಗ್ರಹಣ ಸಂಕ್ರಮಣಾದಿ ನೈಮಿತ್ತಿಕಕ್ಕಂ (ಎಕ ೭ ಶಿಕಾರಿ ೨೩೫-ಕ್ರಿ.ಶ.೧೨೦೭) ಚೈತ್ರ ಪವಿತ್ರಾದ್ಯಾನೇಕ ಭೋಗಕ್ಕಂ (ಎಕ ೭ ಶಿಕಾರಿ ೧೦೫-ಕ್ರಿ.ಶ೧೧೯೩) ಚೈತ್ರ ಪವಿತ್ರಗಳಿಗೆ ದೊರತಷ್ಟೆ ಮಹತ್ವವು ಸಂಕ್ರಾತಿ ಪರ್ವಕ್ಕೆ ಲಭಿಸಿದೆ. ಕೆಲವೊಮ್ಮೆ ದಾನಗಳು ನೀಡುವ ದಿನವನ್ನು ನೋಡಿದಾಗ ಉತ್ತರಾಯಣ ಸಂಕ್ರಾತಿಯ ದಿನವನ್ನು ತಿಳಿಸುತ್ತದೆ. ಹಾಗಾಗಿ ಈ ದಿನವನ್ನೇ ಪರ್ವದಿನ ಎಂದು ಹೇಳಬಹುದು. ಇದಲ್ಲದೆ ಜೈನ ಬಸದಿಗಳಲ್ಲಿ ನೈವೇದ್ಯವನ್ನು ಚರು ಚರುಗು ಎಂದು ಕರೆಯುತ್ತಾರೆ. ಬೌದ್ಧ ವಿಹಾರಗಳಲ್ಲಿ ಪರ್ವ ಉತ್ಸವ ಎಂದು ಕರೆಯುತ್ತಾರೆ. ಒಟ್ಟಾರೆಯಾಗಿ ದೇವರ ಪೂಜಾ ವಿಧಾನಗಳು ಆಯಾ ಧರ್ಮಕ್ಕೆ ತಕ್ಕಂತೆ ಬೇರೆ ಬೇರೆ ವಿಧಾನಗಳಲ್ಲಿ ನಡೆದರೂ ಕೂಡ ಅದು ದೇವರ ಮತ್ತು ಪರಿವಾರ ದೇವರುಗಳ ಅರ್ಚನಾ ಪೂಜೆಗೆ ಎಂದು ತಿಳಿಯುವುದು ಸೂಕ್ತವಾಗಿದೆ.

ಅಂಗಭೋಗ ಮತ್ತು ರಂಗಭೋಗಗಳು :

ದೇವಾಲಯಗಳು ಪೂಜೆ ಪುನಸ್ಕಾರಗಳ ನಿಮಿತ್ತವಾಗಿ ಜನರಲ್ಲಿ ದೈವ ಭಕ್ತಿ ಮೂಡಿಸಲಿ ಎಂಬ ಸಂಪ್ರದಾಯಗಳಷ್ಟೆ ಅಲ್ಲದೆ ಇತರೆ ರೀತಿಯಲ್ಲೂ ಕೂಡ ಗ್ರಹಿಸಬಹುದು. ಉದಾಹರಣೆಗೆ ಪಂಚತಂತ್ರ, ರಾಮಾಯಣ, ಮಹಾಭಾರತ ಚಿತ್ರಣ ಇತ್ಯಾದಿಗಳಿಂದ ಜನರಲ್ಲಿ ಕಥೆಗಳ ಮೂಲಕ ನೀತಿಯನ್ನು ಸಾರುವಲ್ಲಿ ಮುಂದಾಗಿವೆ. ಇದೇ ನಿಟ್ಟಿನಲ್ಲಿ ದೇವರ ನೈವೇದ್ಯಕ್ಕೆ ಹಲವಾರು ದಾನ ನೀಡಿದ್ದನ್ನು ನೆನೆಯುತ್ತಾ ದೇವರ ಕಾರ್ಯಗಳಿಗಾಗಿ ಉದ್ಯೋಗಗಳು ಹಲವರಿಗೆ ದೊರೆಯುತ್ತದೆ. ಅಂದರೆ ಸ್ಥಾನಪತಿ, ಅರ್ಚಕ, ಸೇವಾಕಾರ್ಯಗಳಿಗೆ ರಂಗ ಭೋಗದವರು ಕೂಡ ಕಂಡುಬರುತ್ತಾರೆ. ಈ ರೀತಿಯ ಉದ್ಯೋಗಗಳಿಗೆ ಹಣದ ರೂಪ ಅಥವಾ ಭೂಮಿಯ ರೂಪದಲ್ಲಿ ಸಂಬಳವನ್ನು ನೀಡಲಾಗುತ್ತಿತ್ತು. ದೇವರಿಗೆ ಸಲ್ಲುವ ಪೂಜೆಯೇ ದೇವ ಭೋಗವೆಂದು ಕರೆಯುತ್ತಾರೆ. ಅದೇರೀತಿ ಅಂಗಭೋಗ ಸಂಧ್ಯಾ ಪೂಜೆಗೆ ನಂದಾ ದೀವಿಗೆ ನೈವೇದ್ಯ ಮಾಡಿದ್ದನ್ನು ತಿಳಿಸುತ್ತದೆ.(ಎಕ ೭ ಶಿಕಾರಿ ೧೨೬-ಕ್ರಿ.ಶ.೧೦೩೬) ದೇವರ ಸೇವೆಗೆಂದೇ ಪಾತ್ರಗಳನ್ನು ಕಾಣಬಹುದು. ಅವುಗಳಲ್ಲಿ ಕಲ್ಯಾಣ ಚಾಳುಕ್ಯ ದೊರೆ ಒಂದನೇ ಸೋಮೇಶ್ವರನ ಪತ್ನಿ ಲಚ್ಚಲಾದೇವಿಯನ್ನು ಸಂಗೀತ ಪ್ರಸಂಗವಿವೇಕ ಚೂಡಾಮಣಿ ಪಾತ್ರವೆನಿಸಿದ ಪಾತ್ರ.....ದ ಗತಿ ಇತ್ಯಾದಿಯಾಗಿ ಶಾಸನಗಳು ಉಲ್ಲೇಖಿಸಿದೆ.

ಗರ್ಭಗುಡಿಯಲ್ಲಿ ಪ್ರತಿಷ್ಠಾಪಿತ ಮೂರ್ತಿಯ ಮುಂದೆ ನಡೆಯುವಂತಹ ಸೇವೆಗೆ ನವರಂಗದಲ್ಲಿ ಸಾಕಷ್ಟು ಸ್ಥಳಾವಕಾಶ ಇರುತ್ತಿತ್ತು. ಸ್ವಲ್ಪವೇ ಎತ್ತರಿಸಿದ ವೇದಿಕೆ ಬಂದ ಜನರು ಕುಳಿತು ನೋಡಲು ಕಕ್ಷಾಸನ ವ್ಯವಸ್ಥೆ ಇದಕ್ಕೆ ಉದಾಹರಣೆಯೆಂದರೆ ಬಳ್ಳಿಗಾವಿಯ ಕೇದಾರೇಶ್ವರ ಮತ್ತು ತ್ರಿಪುರಾಂತಕೇಶ್ವರ ದೇವಾಲಯಗಳು ಈ ಹಿನ್ನಲೆಯಲ್ಲಿ ಶಿಕಾರಿಪುರದಲ್ಲಿ ಅಂಗಭೋಗ ವ್ಯವಸ್ಥೆಯಿದ್ದು, ಇವು ದೇವರ ಸೇವಾಕಾರ್ಯಗಳಲ್ಲಿ ಒಂದಾಗಿದೆ. ಇಂಥಹ ಕಾರ್ಯಗಳು ಪ್ರರ್ವ ಕಾಲಗಳ

ಉತ್ಸವಗಳಲ್ಲಿ ಪೂಜಾ ಕಾರ್ಯನಿಮಿತ್ತ ನಡೆಯುತ್ತಿದ್ದವು ಎಂದು ತಿಳಿಯಬಹುದು. ಸಾಮಾಜಿಕ ಸಂಸ್ಥೆಯಾಗಿ ದೇವಾಲಯಗಳು ಕಾರ್ಯವನ್ನು ಮಾಡುತ್ತವೆ. ಅಂದರೆ ವಿದ್ಯಾದಾನ, ಅಗ್ನಿಷ್ಟಿಗೆ, ಸತ್ರಗಳು ಅಗ್ರಹಾರಗಳು ಇತ್ಯಾದಿ ರೂಪಗಳಲ್ಲಿ ಕಾಣಬಹುದು. ಈ ಹಿಂದೆ ಸಾಮಾಜಿಕ ವ್ಯವಸ್ಥೆ ಮತ್ತು ವಿದ್ಯಾಭ್ಯಾಸದ ವ್ಯವಸ್ಥೆಯಲ್ಲಿ ಇವುಗಳನ್ನು ಚರ್ಚಿಸಲಾಗಿದೆ. ದೇವಸ್ಥಾನಗಳು ಜನರ ನಂಬಿಕೆಗಳ ಜೊತೆಗೆ ಬೆಳೆದು ಬಂದ ಅಂಗವಾಗಿದೆ. ಇದು ಕೂಡ ಸಾಮಾಜಿಕ ವ್ಯವಸ್ಥೆಯಲ್ಲಿ ಇವುಗಳನ್ನು ಚರ್ಚಿಸಲಾಗಿದೆ. ಇದು ಕೂಡ ಸಾಮಾಜಿಕ ವ್ಯವಸ್ಥೆಯಲ್ಲಿ ಒಂದು ರೀತಿಯ ಅಧಿಕಾರವನ್ನು ಹಿಡಿದುಕೊಂಡಿದೆ. ದೇವರ ಮತ್ತು ದೇವಸ್ಥಾನದ ಅಭಿವೃದ್ಧಿಯಲ್ಲಿ ರಾಜಮನೆತನದವರ ಪಾತ್ರ ಗಮನಿಸಿದಾಗ ಇವರ ಕೊಡುಗೆಗಳ ಮೂಲಕವೇ ದೇವಾಲಯಗಳು ಬೆಳದಿವೆ. ಇದಕ್ಕಾಗಿ ದಾನ ನೀಡಿದವರ ಉಲ್ಲೇಖಗಳಲ್ಲಿ ಈ ರೀತಿ ನೋಡಬಹುದು. ಬಳ್ಳಿಗಾವಿಯ ವಡ್ಡ ವ್ಯವಹಾರಿ ಸೋವಿಸೆಟ್ಟಿ ಎಂಬಾತನು ಸೋಮೇಶ್ವರ ದೇವರನ್ನು ಪ್ರತಿಷ್ಠಿಸಿ ಅದಕ್ಕೆ ಬೇಕಾದಷ್ಟು ಭೂಮಿ, ತೋಟ, ಅಂಗಡಿಗಳನ್ನು ಬಿಡುತ್ತಾನೆ. ಅದು ಕಾಲಕ್ರಮೇಣ ಜೀರ್ಣವಾಗುತ್ತದೆ. ಹೀಗೆ ಜೀರ್ಣದ ಸಂಬಂಧವಾಗಿ ಈ ನಗರವೇ ಜೀರ್ಣೋದ್ಧಾರಕ್ಕೆ ಆಸಕ್ತಿ ವಹಿಸುತ್ತದೆ. ಇದರ ಜೊತೆಗೆ ಊರಿನ ಪಂಚಮಠ, ಹಿರಿಯಮಠ, ಭೇರುಂಡೇಶ್ವರ, ಮಧುಕೇಶ್ವರ ಪಂಡಿತದೇವರು ಮುಂತಾದ ಮಠಾಧಿಪತಿಗಳ ಮುಂದೆ ಜೀರ್ಣೋದ್ಧಾರದ ಕಾರ್ಯವನ್ನು ತಮ್ಮ ಧರ್ಮವಾಗಿಸಿಕೊಂಡು ಆಸಕ್ತಿವಹಿಸಿದ್ದಾರೆ. ಹೀಗೆ ದೇವಾಲಯದ ನಿರ್ಮಾಣ ಅದರ ಜೊತೆಗೆ ಎಲ್ಲರ ಗಮನ ಹರಿಸಿಕೊಂಡು ಅಭಿವೃದ್ಧಿಯಾಗಿದ್ದನ್ನು ತಿಳಿಯಬಹುದು.

ನಂತರದಲ್ಲಿ ಇಂತಹ ದೇವಾಲಯಗಳಿಗೆ ಬೇರೆ ಬೇರೆ ವ್ಯಕ್ತಿಗಳು, ಶ್ರೇಣಿಗಳು, ಅಧಿಕಾರಿಗಳು ದಾನ ಬಿಟ್ಟಿದ್ದನ್ನು ಇದರ ಮೂಲಕ ಆದಾಯ ಬಂದು ಅದೇ ಮುಂದೆ ವ್ಯವಹಾರಿಕವಾಗಿ ಬೆಳೆಯುತ್ತದೆ. ಇಂತಹ ಬೆಳವಣಿಗೆಗಳು ಬೇರೆ ಬೇರೆ ಅಭಿವೃದ್ಧಿಗೆ ಅನುಕೂಲತೆ ಮಾಡಿವೆ. ಅಂದರೆ ಇದರ ಪರಿಣಾಮವಾಗಿ ಜಿಡ್ಡುಳಿಗೆ-೭೦ ಮನ್ನೆಯ ಲಕ್ಕಲರಸ, ನಾಡಪ್ರಭು ಚಿಟ್ಟಿ ಮಾರಕಾಳಾಗಾವುಂಡ, ಸಿಗ್ಗದ ಚಾವಗಾವುಂಡ, ಸಂಗವೆಡ್ಡೆಯ ಚಾವಗಾವುಂಡ, ಅವಲಿಯ ಚಿಕ್ಕಗಾವುಂಡ, ಹಂಪಗಾವುಂಡ, ಹೊಸವಳ್ಳಿಯುರೊಡೆಯ ಸೋವಿಯಮ್ಮ, ಶಂಕರಚೆಟ್ಟರು, ಕೂಡಲಿಯ ಶಾಂತಗಾವುಂಡ ಇತ್ಯಾದಿ ಸಮಸ್ತ ಪ್ರಭುಗಾವುಂಡರು ತಮ್ಮ ತಮ್ಮ ಊರಲ್ಲಿ ವರ್ಷಂಪ್ರತಿ ಹಣವನ್ನು ಕೊಡಲು ತೀರ್ಮಾನಿಸಿದ್ದಾರೆ. (ಎಕ ೭ ಶಿಕಾರಿ ೧೧೮-ಕ್ರಿ.ಶ.೧೦೫೪) ಅದೇ ರೀತಿಯಲ್ಲಿ ನಾಗರಖಂಡ-೭೦ರ ಮಾನ್ನೆಯ ಸೋವಿದೇವ, ಕೋಣವೆತ್ತಿಯ ಪೃಥ್ವಿಸೆಟ್ಟಿ, ಬೇಗೂರ ಕೇತಗಾವುಂಡ, ಮಾಗುಂಡಿಯ ಸಂಕಗಾವುಡ, ಮಳವಳ್ಳಿಯ ಕೇತಗಾವುಂಡ, ಎಲ್ಲಂಬಳ್ಳಿಯ ಕೇತಗಾವುಂಡ, ಮದಲೂರ ಕಾಳಗಾವುಂಡ ಮುಂತಾದ ಪ್ರಭುಗಾವುಂಡರು ತಮ್ಮ ಊರಲ್ಲಿ ಪ್ರತೀ ವರ್ಷ ಐದು ಪಣಗಳನ್ನು ಕೊಡಲು ತೀರ್ಮಾನಿಸಿದರು. ಹಾಗೆಯೇ ಅಕ್ಕಸಾಲಿಗಳು ತಮ್ಮ ತಮ್ಮ ಕಮ್ಮಟಗಳಲ್ಲಿ ವರ್ಷವೊಂದಕ್ಕೆ ಒಂದು ಪಣವನ್ನು ಅರಸರಲ್ಲಿ, ಬೇಡರಲ್ಲಿ ಒಬ್ಬೊಬ್ಬರು ಹತ್ತು ವಿಸವನ್ನು ಕೊಡಲು ಒಪ್ಪುತ್ತಾರೆ. ಹೀಗೆ ದಾನಗಳು ಪ್ರಭುಗಳಿಂದ ಹಿಡಿದು ಶ್ರೀಸಾಮಾನ್ಯರ ವರೆಗೆ ನೀಡಿ ದೇವಾಲಯಗಳ ಅಭಿವೃದ್ಧಿಗೆ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆ.

ಅಧ್ಯಾಯ-೬
ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು

ಅಧ್ಯಾಯ-೬

ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು

ದೇವರಿಗಾಗಿ ನಿರ್ಮಿಸಿದ ಆಲಯವನ್ನು 'ದೇವಾಲಯ' ಎಂದು ಸಾಮಾನ್ಯವಾಗಿ ಹೇಳಬಹುದು. ಮಾನವ ತನ್ನ ವಾಸಕ್ಕಾಗಿ ಹೇಗೆ ಮನೆಗಳನ್ನು ನಿರ್ಮಿಸಿದನೋ, ಹಾಗೆಯೇ ದೇವರಿಗೂ ಸಹ ಆಲಯವನ್ನು ನಿರ್ಮಿಸಲು ಪ್ರಾರಂಭಿಸಿರಬೇಕು. ಮಾನವ-ದೈವ, ಇಹ-ಪರ, ವಾಸ್ತವಿಕ-ಆದರ್ಶ ಇವುಗಳ ಸಮ್ಮಿಲನದ ಸಂಕೇತವೆ ದೇವಾಲಯಗಳು. ದೇವಾಲಯಗಳ ಉಗಮದ ಬಗ್ಗೆ ಖಚಿತವಾದ ಅಂಶಗಳು ಹೇಳಲು ಕಷ್ಟ ಸಾಧ್ಯವಿದೆ. ದೇವಾಲಯ ಮತ್ತು ಜನರ ಬದುಕು ಬದಲಾವಣೆಯನ್ನು ಕಾಣುತ್ತಾ ಬೆಳೆದು ಬಂದಿವೆ. ಗುಪ್ತರ ಕಾಲದಲ್ಲಿ ಕಲ್ಲಿನ ದೇವಾಲಯಗಳು ವಿಸ್ತಾರರೂಪ ಪಡೆದುಕೊಂಡವು ಇದಕ್ಕೂ ಮೊದಲು ಕಲ್ಲಿನ ಅವಶೇಷಗಳು ವಿರಳ ಮತ್ತು ಅವುಗಳ ಬಗ್ಗೆ ಧಾರ್ಮಿಕ ಸಂಸ್ಕೃತಿಗಳಲ್ಲಿ ಒಲವು ಕಡಿಮೆ, ಆದರೆ ಕಲ್ಲನ್ನು ಹೊರತುಪಡಿಸಿ ಇತರೆ ಸಾಮಾಗ್ರಿಯನ್ನು ಬಳಕೆ ಮಾಡಿರಬಹುದು. ಅವುಗಳು ಯಾವುದೇ ಸರಿಯಾದ ಮಾಹಿತಿಯನ್ನು ನೀಡುವಲ್ಲಿ ವಿಫಲವಾಗಿವೆ, ಕಾರಣವೆಂದರೆ ಪ್ರಕೃತಿಯ ವಿಕೋಪಕ್ಕೋ, ಸಂಸ್ಕೃತಿ- ಸಂಸ್ಕೃತಿಗಳ ಮಧ್ಯದ ದಾಳಿಗೋ ತಿಳಿದಿಲ್ಲ. ಆದರೆ ಅಳಿದುಳಿದ ಅಂಶಗಳ ಆಧಾರ ಮೇಲೆ ದೇವಾಲಯಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಗುಪ್ತರ ಕಾಲದಲ್ಲೇ ಹೆಚ್ಚಿನ ಸಂಖ್ಯೆಯ ದೇವಾನು ದೇವತೆಗಳ ಮೂರ್ತಿ ರೂಪವನ್ನು ಪಡೆದುದನ್ನು ಮತ್ತು ದೇವಾಲಯಗಳು ರಚನೆಯಾದದನ್ನು ನೋಡಬಹುದು. ದೇವಾಲಯಗಳು ಶಾಶ್ವತವಾಗಿ ಇರಬೇಕೆಂದು ಸಾಮಾನ್ಯವಾಗಿ ಕಲ್ಲುಗಳನ್ನು ಬಳಸಿ ದೇಗುಲಗಳನ್ನು ನಿರ್ಮಿಸಿದ್ದಾರೆ. ಈ ಮೂಲಕ ದೇವಾಲಯಗಳು ತಮ್ಮ ಅಸ್ತಿತ್ವವನ್ನು ಭೂಮಿಯ ಮೇಲೆ ಕಂಡುಕೊಂಡವು. ಅಲ್ಲಿಂದ ದೇವಾಲಯಗಳಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ತೆರೆದ ಮುಖ ಮಂಟಪ, ರಂಗಮಂಟಪ, ರಾಯ ಗೋಪುರ, ಕಂಬಗಳು, ಅಧಿಷ್ಠಾನ, ಭಿತ್ತಿ, ಪ್ರದಕ್ಷಿಣ ಪಥ, ಬಾಗಿಲುವಾಡ, ಸುಖನಾಸಿ, ದೇವಕೋಷ್ಠಕ, ಕಕ್ಷಾಸನ, ಕಳಸ ಮತ್ತು ಶಿಲ್ಪಗಳು ಬೆಳೆದು ದೇವಾಲಯದ ಕಲಾತ್ಮಕ ರೂಪವನ್ನು ಪಡೆದುಕೊಂಡಿದೆ.

ಪ್ರಸ್ತುತ ಸಂಶೋಧನಾ ಪ್ರದೇಶವಾದ ಶಿಕಾರಿಪುರದಲ್ಲಿ ಸುಮಾರು ದೇವಾಲಯಗಳು ಕಂಡು ಬಂದಿದ್ದು, ಇವುಗಳು ಶಾಸನೋಕ್ತ ಎಂಬುದನ್ನು ಖಚಿತ ಪಡಿಸಿಕೊಂಡು ಅಧ್ಯಯನ ಮಾಡುವಾಗ ಕೇವಲ ಅವಶೇಷಗಳು ಮಾತ್ರ ಲಭ್ಯವಾಗುತ್ತವೆ. ಆದರೆ ಇಲ್ಲಿರುವ ಅವಶೇಷಗಳನ್ನೇ ಆಧಾರ ಮಾಡಿಕೊಂಡು ದೇವಾಲಯದ ಹುಡುಕಾಟದಲ್ಲಿ ಕೆಲವು ಅಂಶಗಳ ನೆಲೆಯಲ್ಲಿ ಅಧ್ಯಯನ ನಡೆಸಿ, ದೇವಾಲಯಗಳ

ವಾಸ್ತವಿಕತೆಯ ಪಠ್ಯವನ್ನು ಕಟ್ಟಿಕೊಡಲಾಗಿದೆ. ಹೀಗೆ ಅಧ್ಯಯನ ರೂಪಿಸುವಾಗ ದೇವಾಲಯಗಳನ್ನು ಅವುಗಳ ಸಂಪ್ರದಾಯ, ಸಂಸ್ಕೃತಿ, ಆಚರಣೆ, ಪೂಜಾ-ವಿಧಿ-ವಿಧಾನಗಳ ಜೊತೆಗೆ ಶಾಸನಗಳ ಮಾಹಿತಿಯನ್ನು ಖಚಿತಪಡಿಸಿಕೊಂಡು ದೇವಾಲಯಗಳನ್ನು ವಿಂಗಡಿಸಿಕೊಳ್ಳಲಾಗಿದೆ. ಪ್ರಮುಖವಾಗಿ ದೇವಾಲಯಗಳಲ್ಲಿ ಶಿವ, ಗಣೇಶ, ಲಿಂಗ, ವೀರಭದ್ರ, ಭೈರವ, ಷಣ್ಮುಖ ರೂಪದಲ್ಲಿದ್ದರೆ ಶೈವ ದೇವಾಲಯ ಎಂತಲೂ, ಸೂರ್ಯ, ನಾರಾಯಣ, ವಿಷ್ಣು, ರಂಗನಾಥ, ಪದ್ಮನಾಭ ರೂಪವಿದ್ದರೆ ವೈಷ್ಣವ ದೇವಾಲಯವೆಂತಲೂ, ಜೈನ ಸಂಸ್ಕೃತಿಯ ಪರಂಪರೆಯ ತೀರ್ಥಂಕರ, ಜಿನ ಮೂರ್ತಿ ಇದ್ದರೆ ಜೈನ ಬಸದಿ ಎಂತಲೂ, ಬೌದ್ಧ ಮೂರ್ತಿಗಳಿದ್ದರೆ ಬೌದ್ಧಾಲಯವೆಂತಲೂ, ಶಕ್ತಿ ಸ್ವರೂಪಿ ಕಾಳಿ, ಬನಶಂಕರಿ, ಭೈರವಿ ಇತ್ಯಾದಿ ರೂಪಗಳಿದ್ದರೆ ಶಾಕ್ತ ಪಂಥದ ದೇವಾಲಯಗಳು ಎಂಬುದಾಗಿ ಅಧ್ಯಯನ ಮಾಡಲಾಗಿದೆ.

ಶೈವ ದೇವಾಲಯಗಳು

ಕರ್ನಾಟಕದ ಕೆಲಭಾಗದಲ್ಲಿ ಶಿವಲಿಂಗವನ್ನು ಒಳಗೊಂಡ ಶಾತವಾಹನ ಕಾಲದ ದೇವಾಲಯಗಳ ತಳಪಾಯಗಳು ಉತ್ಖನನ ಮೂಲಕ ದೊರೆತಿವೆ. ಆದಿ ಕದಂಬರ ಕಾಲದಲ್ಲಿ ಶಾಂತಿವರ್ಮನ ತಾಳಗುಂದ ಶಾಸನದಲ್ಲಿ ಮಹಾದೇವನ ಭವ್ಯ ದೇವಾಲಯವನ್ನು ಚುಟುಕುಲದ ಶಾತಕರ್ಣಿ ಪೂಜಿಸುತ್ತಿದ ಉಲ್ಲೇಖಗಳು ದೊರೆಯುತ್ತವೆ. ಪ್ರಸ್ತುತ ಪ್ರಣವೇಶ್ವರ ದೇವಾಲಯವೇ ಶಾಸನೋಕ್ತ ಮೂಲ ದೇವಾಲಯವಾಗಿದೆ. ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಹೆಚ್ಚಿನ ದೇವಾಲಯಗಳು ನಿರ್ಮಾಣಗೊಂಡಿವೆ.

ಶಿಕಾರಿಪುರ ಭಾಗದಲ್ಲಿ ಕದಂಬ ಪೂರ್ವ ಕಾಲದಿಂದ ವಿಜಯ ನಗರೋತ್ತರ ಕಾಲದವರೆಗೆ ಶೈವ ದೇವಾಲಯಗಳು ಕಂಡು ಬರುತ್ತವೆ. ಆದರೆ ಕಲ್ಯಾಣ ಚಾಳುಕ್ಯರ ಕಾಲವನ್ನು ಹೊರತು ಪಡಿಸಿದರೆ, ಉಳಿದವರ ಕೊಡುಗೆ ವಿರಳವಾಗಿವೆ. ಹಾಗಾಗಿ ಶೈವ ಪರಂಪರೆಯ ಶಿವಲಿಂಗ ಸ್ವರೂಪಿ ದೇವರುಗಳು ವಿವಿಧ ಹೆಸರುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಕಲ್ಯಾಣ ಚಾಳುಕ್ಯರಿಗೆ ಸಂಬಂಧಿಸಿದ ದೇವಾಲಯಗಳೇ ಈ ಭಾಗದಲ್ಲಿ ಬಹುವಾಗಿ ದೊರೆಯುತ್ತವೆ. ಹಾಗಾಗಿ ಹೆಚ್ಚಾಗಿ ಶೈವ ದೇವಾಲಯಗಳು ಸಿಕ್ಕಿರುವುದು ಇವರ ಕಾಲದಲ್ಲೆ.

ಶಿಕಾರಿಪುರ ತಾಲ್ಲೂಕಿನಲ್ಲಿ ಪ್ರಮುಖವಾಗಿ ಬಳ್ಳಿಗಾವಿಯ ಕೇದಾರೇಶ್ವರ, ತ್ರಿಪುರಾಂತಕೇಶ್ವರ, ಪಚ್ಚೆಲಿಂಗೇಶ್ವರ, ಸೋಮೇಶ್ವರ, ತೋಟದ ವೀರಭದ್ರ, ನೀಲಕಂಠೇಶ್ವರ, ಬಂದಳಿಕೆಯ ಸೋಮೇಶ್ವರ, ತ್ರಿಪುರುಷ, ಬೇಗೂರು ಮಲ್ಲಿಕಾರ್ಜುನ, ಮುಗಳಿಗೆರೆಯ ಸೋಮೇಶ್ವರ, ಮಲ್ಲೇಶ್ವರ, ಮಯತ್ತಮನ ಮುಚ್ಚಡಿಯ ರಾಮೇಶ್ವರ, ತಾಳಗುಂದದ ಪ್ರಾಣವೇಶ್ವರ ಹೀಗೆ ದೇವಾಲಯಗಳ ಪಟ್ಟಿಯೇ ಬೆಳೆಯುತ್ತದೆ. ಇಂತಹ ಶೈವ ಸಂಸ್ಕೃತಿಯ ದೇವಾಲಯಗಳನ್ನು ಅಧ್ಯಾಯದಲ್ಲಿ ಕಟ್ಟಿಕೊಂಡಲಾಗಿದೆ.

ಸಂಖ್ಯೆ: ೦೧ ಊರು: ಅಗ್ರಹಾರ ಮುಚ್ಚಡಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಗ್ರಾಮದ ಮಧ್ಯೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಕಲ್ಲೇಶ್ವರ ದೇವಾಲಯ

ಸ್ಥಿತಿ: ಮಧ್ಯಮ(ಹೊಸದು) ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಬಿಳಕಿಯಿಂದ ಹೀರೆಕೆರೂರು ಹೋಗುವ ಮಾರ್ಗದಲ್ಲಿ ಅಗ್ರಹಾರ ಮುಚ್ಚಡಿ ಗ್ರಾಮವಿದೆ. ದೇವಾಲಯವು ಹೊಸ ರೂಪವನ್ನು ಪಡೆದುಕೊಂಡಿದೆ. ಇತ್ತಿಚಿನ ದಿನಗಳಲ್ಲಿ ಹಳೆಯ ದೇವಾಲಯದ ಮುಂದೆ ಗಾರೆಯನ್ನು ಬಳಸಿ ದೇವಾಲಯ ಕಟ್ಟಲಾಗಿದೆ. ಆದರೆ ಗರ್ಭಗೃಹವನ್ನು ಮಾತ್ರ ಉಳಿಸಿಕೊಂಡಿದ್ದಾರೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮೇಲ್ಛಾವಣಿಯು ನಕ್ಷತ್ರಾಕಾರದ ಭುವನೇಶ್ವರವನ್ನು ಹೊಂದಿದೆ. ಮುಂದೆ ಹೊಸ ಕಟ್ಟಡದಲ್ಲಿ ನಂದಿಯ ಮೂರ್ತಿಯಿದ್ದು, ಇದು ಹೊಸ ರೂಪದಲ್ಲಿದೆ. ದೇವಾಲಯದ ಗರ್ಭಗೃಹದ ಮೇಲೆ ಏಳು ಅಂತಸ್ತಿನ ಗಾರೆಯ ಗೋಪುರವಿದೆ. ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ಭಿತ್ತಿಯಿದ್ದು, ಮೀನನ್ನು ಪಳಗಿಸುವ ಶಿಲ್ಪ, ಹಾವನ್ನು ಪಳಗಿಸುವ ಶಿಲ್ಪ, ಆಂಜನೇಯ, ಯತಿ, ನರ್ತನ ಶಿಲ್ಪ, ನಾಗಕನ್ಯೆ ಶಿಲ್ಪಗಳಿವೆ. ಮುಂದೆ ಕಲ್ಯಾಣ ಚಾಲುಕ್ಯರ ಶಾಸನ, ನಂದಿ, ಗಂಟೆಯಾಕಾರದ ನವರಂಗದ ಒಂದು ಕಂಬವಿದೆ.

ಸಂಖ್ಯೆ: ೦೨ ಊರು: ಅಗ್ರಹಾರ ಮುಚ್ಚಡಿ ಪಕ್ಕ

ರಾಜ/ವಂಶ:ಪ್ರಾಚೀನ ಸ್ಥಳ: ಮಲ್ಲಯ್ಯನ ಬೆಟ್ಟ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಮಲ್ಲೇಶ್ವರ ದೇವಾಲಯ

ಸ್ಥಿತಿ: ಮಧ್ಯಮ(ಅವನತಿ) ಕಾಲ: ---

ಅಗ್ರಹಾರದಿಂದ ಶಿರಾಳಕೊಪ್ಪಗೆ ಹೋಗುವ ಮಾರ್ಗದಲ್ಲಿ ಮಧ್ಯೆದ ಬಲ ಭಾಗದ ಮಲ್ಲಯ್ಯನ ಬೆಟ್ಟದ ಮೇಲೆ ಇರುವ ಅವನತಿ ಅಂಚಿಗೆ ಬಂದಿರುವ ದೇವಾಲಯವೇ ಮಲ್ಲೇಶ್ವರ. ಬೆಟ್ಟದ ಮೇಲೆ ದೇವಾಲಯದ ಮೇಲೆ ಕಲ್ಲು, ಮಣ್ಣಿನಿಂದ ಆವೃತ್ತವಾಗಿರುವ ದೇವಾಲಯ. ಒಳಭಾಗವು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಆದರೆ ದೇಗುಲ ಒಳಭಾಗ ಭಯವನ್ನು ಹುಟ್ಟಿಸುತ್ತದೆ. ಗರ್ಭಗೃಹದಲ್ಲಿ ಒಂದು ಅಡಿಯ ಶಿವಲಿಂಗವಿದೆ. ಅಂತರಾಳ, ನವರಂಗಗಳು ಯಾವುದೇ ಅಲಂಕಾರವನ್ನು ಹೊಂದಿಲ್ಲ. ಆದರೂ ಎರಡು ನಂದಿಯನ್ನು ಲಿಂಗದಿಂದ ದೂರದಲ್ಲಿಡಲಾಗಿದೆ. ದೇವಾಲಯದ

ಹೊರ ಭಾಗವು ಪೂರ್ಣ ಮಣ್ಣು ಮತ್ತು ಕಲ್ಲನ್ನು ಬಳಸಿ ಕೋಟೆ ಮಾದರಿಯಲ್ಲಿ ೫ ಅಡಿ ಎತ್ತರವಾಗಿ ಕಟ್ಟಲಾಗಿದೆ

ಸಂಖ್ಯೆ: ೦೩ ಊರು: ಅಡಗಂಟಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಆಂಜನೇಯ ದೇವಾಲಯದ ಪಕ್ಕ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಮಲ್ಲಿಕಾರ್ಜುನ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಸುಣ್ಣದ ಕೊಪ್ಪದಿಂದ ಮಲ್ಲೇನಹಳ್ಳಿಗೆ ಹೋಗುವ ಮಾರ್ಗದ ಮಧ್ಯೆ ಅಡಗಂಟಿ ಗ್ರಾಮ ಇದೆ. ಚಿಕ್ಕ ದಿಬ್ಬದ ಮೇಲೆ ಮಲ್ಲಿಕಾರ್ಜುನ ದೇವಾಲಯವಿದೆ. ದೇವಾಲಯ ಮೂಲ ಸ್ಥಿತಿಯನ್ನು ಕಾದುಕೊಂಡಿದೆ. ದ್ವಿಕೂಟ ಮಾದರಿಯಲ್ಲಿರುವ ದೇವಾಲಯ ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ದೇವಾಲಯಕ್ಕೆ ಅಧಿಷ್ಠಾನವಿದ್ದು ಮಣ್ಣಿನಿಂದ ಮುಳುಗಿದೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಶಿವಲಿಂಗವಿದೆ. ಮೇಲ್ಭಾವಣಿಯು ನಕ್ಷತ್ರಾಕಾರವಿದ್ದು, ಪದ್ಮದಿಂದ ಕೂಡಿದ ಭುವನೇಶ್ವರಿ ಕೆತ್ತನೆ ಇದೆ. ಸಾಧಾರಣ ಬಾಗಿಲುವಾಡವಿದ್ದು, ಗಜಲಕ್ಷ್ಮಿಯು ಮೇಲ್ಭಾಗದಲ್ಲಿದೆ. ಅಂತರಾಳವು ಸಾಧಾರಣ ಗೋಡೆಯಿಂದ ಕೂಡಿದೆ.

ಇನ್ನೊಂದು ಗರ್ಭಗೃಹದಲ್ಲಿ ಅಣಜಿಗೆಮ್ಮ ಎಂಬುದಾಗಿ ಕರೆಸಿಕೊಳ್ಳುವ ಸ್ತ್ರೀ ಮೂರ್ತಿ ಇದೆ. ಇದು ೩ ಅಡಿ ಎತ್ತರವಿದೆ. ಹಿಂದೆ ಪ್ರಭಾವಳಿ ವಿವಿಧ ಅಲಂಕಾರಗಳಿವೆ. ಮೇಲ್ಭಾವಣಿಯು ಪದ್ಮಗಳಿಂದ ಕೂಡಿದ ಭುವನೇಶ್ವರಿ ಇದೆ. ನವರಂಗವು ೮ ಗೋಡೆ ಕಂಬಗಳನ್ನು ಒಳಗೊಂಡಂತೆ ಮಧ್ಯೆ ೪ ಕಂಬಗಳಿವೆ. ಅಲ್ಲೇ ಎರಡು ನಂದಿಯ ಶಿಲ್ಪಗಳಿವೆ. ನವರಂಗದ ಎಡ ಭಾಗದ ದೇವಕೋಷ್ಠಕದಲ್ಲಿ ಶಂಖ, ಗದೆ ಹಿಡಿದ ವಿಷ್ಣುವಿನ ಮೂರ್ತಿ ಇದೆ. ಉಳಿದಂತೆ ಗಣೇಶ, ವೀರಭದ್ರ, ಮಹಿಷ ಮರ್ಧಿನಿ, ನಾಗಶಿಲ್ಪಗಳಿವೆ. ನವರಂಗ ಬಲಕ್ಕೆ ಸಪ್ತಮಾತೃಕೆ ಶಿಲ್ಪಗಳಿವೆ. ದೇವಾಲಯದ ಹೊರ ಭಾಗದ ಬಾಗಿಲುವಾಡದಲ್ಲಿ ಗಜಲಕ್ಷ್ಮಿಯ ಕೆತ್ತನೆಯಿದೆ. ದೇವಾಲಯದ ಆವರಣದಲ್ಲಿ ವೀರಗಲ್ಲು, ಗಣೇಶ, ಮಾಸ್ತಿಕಲ್ಲುಗಳಿವೆ. ಪಕ್ಕದಲ್ಲೆ ಕಲ್ಯಾಣ ಚಾಳುಕ್ಯರ ಶಾಸನವಿದೆ.

ಸಂಖ್ಯೆ: ೦೪ ಊರು: ಉಜ್ಜೈನಿಪುರ

ರಾಜ/ವಂಶ: ಕಲ್ಯಾಣ ಚಾಳುಕ್ಯ ಸ್ಥಳ: ಊರಿನ ಹೊಲದಲ್ಲಿ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಉಜ್ಜೈನೇಶ್ವರ ದೇವಾಲಯ

ಸ್ಥಿತಿ: ಉತ್ತಮ(ಹೊಸ ರೂಪವಿದೆ) ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಚಿಕ್ಕಜಂಬೂರಿನಿಂದ ನಾಗಿ-ಭೋಗಿ ಹೋಗುವ ಮಾರ್ಗದ ಎಡಭಾಗದಲ್ಲಿ ಹಳೆ ಕಾಲದಲ್ಲಿ ಉಜ್ಜೈನಿಪುರವಿದ್ದು, ಪ್ರಸ್ತುತ ಊರು ಖಾಲಿಯಾದ ಪ್ರದೇಶದ ಹೊಲದಲ್ಲಿ ದೇವಾಲಯವಿದೆ. ದೇವಾಲಯವು ಗರ್ಭಗೃಹ ಮಾತ್ರವಿದೆ. ಮುಂದಿನ ಭಾಗವನ್ನು ತೆಗೆದು ಪಕ್ಕದಲ್ಲೆ ಗುಡ್ಡೆ ಹಾಕಲಾಗಿದೆ. ಗರ್ಭಗೃಹದಲ್ಲಿ ಸುಮಾರು ೨ ಅಡಿಯ ಪೀಠ, ಅದರ ಮೇಲೆ ಅರ್ಧ ಅಡಿಯ ಶಿವಲಿಂಗವಿದೆ. ಮೇಲ್ಛಾವಣಿಯಲ್ಲಿ ಅರಳಿದ ಭುವನೇಶ್ವರಿಯ ಪದ್ಮವಿದೆ. ಸುತ್ತಲೂ ಬಣ್ಣದಿಂದ ಕೂಡಿದ ಕಲ್ಲಿನ ಭಿತ್ತಿಯನ್ನು ಒಳಗೊಂಡಿದೆ. ಬಾಗಿಲುವಾಡದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಕೆಳಭಾಗದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ.

ದೇವಾಲಯವು ಅಧಿಷ್ಠಾನದ ಮೇಲೆ ಕಟ್ಟಲ್ಪಟ್ಟಿದ್ದು, ಭಿತ್ತಿಯಲ್ಲಿ ಆನೆ, ಹಂಸ, ಚೌರಿ ಹಿಡಿದ ಶಿಲ್ಪ, ಇತ್ಯಾದಿ ಕೆತ್ತನೆಗಳನ್ನು ಕಾಣಬಹುದು. ಗರ್ಭಗೃಹದ ಶಿಖರವು ೫ ಅಂತಸ್ತಿನಿಂದ ಕೂಡಿದ್ದು, ಗಾರೆಯನ್ನು ಬಳಸಿದ್ದಾರೆ. ದೇವಾಲಯದ ಮುಂದೆ ಎರಡು ನಂದಿಯ ಶಿಲ್ಪವಿದ್ದು, ಹಾಳಾಗಿವೆ. ಜೊತೆಗೆ ಗೋಸಾಸವಿದೆ. ಆವರಣದಲ್ಲಿ ಈ ದೇವಾಲಯಕ್ಕೆ ಸೇರಿದ ಕಲ್ಲುಗಳು ಅವನತಿಯ ಅಂಚಿನಲ್ಲಿವೆ.

ಸಂಖ್ಯೆ: ೦೫ ಹೆಸರು-ಈರಣ್ಣ ದೇವಾಲಯ

ಸ್ಥಳ- ಬನಶಂಕರಿ ಬೀದಿ ಗ್ರಾಮ- ಈಸೂರು

ದಿಕ್ಕು - ಪೂರ್ವಾಭಿಮುಖ ರಾಜ।ವಂಶ- ಕಲ್ಯಾಣ ಚಾಲುಕ್ಯರು

ಕಾಲ - ೧೦-೧೧ನೇ ಶತಮಾನ ಸ್ಥಿತಿ - ಆಧುನಿಕ

ಈ ದೇಗುಲವು ಗ್ರಾಮಸ್ಥರು ಜೀರ್ಣೋದ್ಧಾರ ಹೆಸರಿನಲ್ಲಿ ಮುಂಭಾಗದಲ್ಲಿ ಹೊಸ ಕಟ್ಟಡವು ನಿರ್ಮಾಣವಾಗುತ್ತಿದ್ದು, ಹೊಸ ಕಟ್ಟಡದ ಹಿಂಭಾಗದಲ್ಲಿ ಈರಣ್ಣ ಮತ್ತು ವೀರಭದ್ರ ಸ್ವಾಮಿಯ ಮೂರ್ತಿ ಗರ್ಭಗುಡಿಯಲ್ಲಿ ಇವೆ. ಇದಕ್ಕೆ ಹೊಂದಿಕೊಂಡ ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಇವುಗಳಲ್ಲಿ ಸುಂದರವಾದ ಕುಸುರಿ ಕೆತ್ತನೆ ಇದೆ. ಇದರ ಮೇಲ್ಛಾವಣಿಯ ಭಾಗದಲ್ಲಿ ಅಷ್ಟದಿಕ್ಪಾಲಕರು ತಮ್ಮ ವಾಹನದೊಂದಿಗೆ

ಇರುವಂತೆ ಚಿತ್ರಿಸಲಾಗಿದೆ. ಹಾಗೆ ಮಧ್ಯದಲ್ಲಿ ಶಿವನನ್ನು ನಟರಾಜ ರೂಪದಲ್ಲಿ ಕೆತ್ತವಾಗಿದೆ. ದೇಗುಲ ಮೂಲೆಯಲ್ಲಿ ಬ್ರಹ್ಮನ ಸ್ಥಂಭವಿದ್ದು, ಇದಕ್ಕೆ ನಾಲ್ಕು ತಲೆ ಕಂಡುಬರುತ್ತದೆ. ದೇವಾಲಯದ ಒಳಭಾಗದಲ್ಲಿ ಶಾಸನವಿದ್ದು, ಬಣ್ಣದ ಲೇಪನ ಮಾಡಲಾಗಿದೆ.

ಸಂಖ್ಯೆ: ೦೬ ಊರು: ಕಡೇ ನಂದಿಹಳ್ಳಿ

ರಾಜ/ವಂಶ:--- ಸ್ಥಳ: ಊರಿನ ಗಡಿ ಭಾಗ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಹಂಪೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಶಿಕಾರಿಪುರದಿಂದ ಶಿರಾಳಕೊಪ್ಪ ಮಾರ್ಗವಾಗಿ ಹೀರೆಕೆರೂರು ಹೋಗುವ ಮಧ್ಯೆ ಕಡೇ ನಂದಿಹಳ್ಳಿ ಗ್ರಾಮ ಸಿಗುತ್ತದೆ. ಪ್ರಾಚೀನವಾದ ಈ ದೇವಾಲಯ ಊರಿನವರ ನಂಬಿಕೆಯಲ್ಲಿ ಪವಾಡ ಮಾಡುವ ದೇವರಾಗಿ ಕಂಡುಕೊಂಡಿದ್ದಾರೆ. ಈ ದೇಗುಲಕ್ಕೆ ಹೊರ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಹಾಗಾಗಿ ದೇವಾಲಯಕ್ಕೆ ಹೊಸ ರೂಪವನ್ನು ನೀಡಿ, ದೇವಾಲಯದ ಕಟ್ಟಡವನ್ನು ಕಲ್ಲಿನಲ್ಲೇ ಹೂಸ ಮಾದರಿಯಲ್ಲಿ ನಿರ್ಮಿಸಿಕೊಂಡು ಶೈವ ಸಂಸ್ಕೃತಿಯನ್ನು ಆರಾಧಿಸುತ್ತಾರೆ. ಇಲ್ಲಿರುವ ನವರಂಗದ ಕಂಬಗಳಲ್ಲಿ ಕಂಡುಬರುವ ಶಿಲ್ಪಗಳ ಮೇಲೆ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಇವುಗಳನ್ನು ಮಲ್ಲಯ್ಯ, ಹಂಪಯ್ಯ ಎಂಬುದಾಗಿ ಕರೆದುಕೊಳ್ಳುತ್ತಾರೆ.

ದೇವಾಲಯವು ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಲಿಂಗವಿದ್ದು ಇದನ್ನು ಮೂಲ ದೇವರಾಗಿ ಕಂಡುಕೊಂಡಿದ್ದಾರೆ. ಲಿಂಗಕ್ಕೆ ಶಿವನ ಲೋಹ ಮೂರ್ತಿಯನ್ನು ಅಲಂಕರಿಸಿದ್ದಾರೆ. ಅಂತರಾಳವು ಸಾಧಾರಣವಾಗಿದ್ದು, ಅಲ್ಲಿಯೇ ಈ ಎರಡು ಕಂಬಗಳು ಹಂಪಯ್ಯ, ಮಲ್ಲಯ್ಯ ಎಂದು ಕರೆಸಿಕೊಳ್ಳುತ್ತವೆ. ಇದರ ಬಾಗಿಲುವಾಡವು ಗಜಲಕ್ಷ್ಮಿಯ ಅಲಂಕಾರವಿದೆ. ನವರಂಗವು ಹೊಸ ಮಾದರಿಯಲ್ಲಿದ್ದು, ೧೬ ಕಲ್ಲಿನ ಕಂಬಗಳನ್ನು ಹೊಂದಿದೆ. ದೇವಾಲಯದ ಆವರಣದಲ್ಲಿ ವೀರಗಲ್ಲು, ತುರುಗೊಳ್ ಶಾಸನ, ವಿವಿಧ ಶಿಲ್ಪಗಳು ಪೂಜೆಗೆ ಭಾಗಿಯಾಗಿವೆ. ದೇವಾಲಯದ ಪಕ್ಕದಲ್ಲಿ ೧೫ ಅಡಿ ಎತ್ತರದ ಕಲ್ಲು ಮಣ್ಣಿನಿಂದ ಕೂಡಿದ ಕೋಟೆಯಿದೆ. ದೇವಾಲಯದ ಮುಂದೆ ಕಂಬವಿದೆ.

ಸಂಖ್ಯೆ: ೦೭ ಊರು: ಕರ್ನಲಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಗ್ರಾಮದ ಮಧ್ಯೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಸಿದ್ದರಾಮೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಕರ್ನಲಿ ಗ್ರಾಮದ ಮಧ್ಯ ಭಾಗದಲ್ಲಿ ಸಿದ್ಧರಾಮೇಶ್ವರ ದೇವಾಲಯ ಇದೆ. ದೇವಾಲಯದ ಮುಂದೆ ಪೂರ್ಣವಾಗಿ ಹೊಸ ಮಾದರಿಯಲ್ಲಿ ಜನರು ನಿರ್ಮಿಸಿಕೊಂಡಿದ್ದಾರೆ. ಆದರೆ ಮೂಲ ದೇವಾಲಯವು ನಾಶದ ಅಂಚಿನಲ್ಲಿದೆ. ಗರ್ಭಗೃಹದಲ್ಲಿರುವ ಲಿಂಗವು ಇಲ್ಲ. ಉಳಿದಂತೆ ಗರ್ಭಗೃಹ ಮತ್ತು ಅಂತರಾಳವನ್ನು ಒಳಗೊಂಡಿದ್ದು, ದೇವಾಲಯದ ಹೊರ ಭಾಗದಲ್ಲಿ ಶಿಲ್ಪಗಳು ಬಿದ್ದಿವೆ. ಹಳೇ ದೇವಾಲಯದ ಗರ್ಭಗೃಹದ ಶಿವಲಿಂಗವನ್ನು ಭಗ್ನಗೊಳ್ಳಿಸಿದ್ದಾರೆ. ಅದರ ಬಾಗಿಲುವಾಡವು ಗಜಲಕ್ಷ್ಮಿಯಿಂದ ಕೂಡಿದೆ. ಕಂಬವು ಶಿವಲಿಂಗವನ್ನು ಹೊಂದಿದ್ದು, ಬಳ್ಳಿಯ ಅಲಂಕಾರವನ್ನು ಹೊಂದಿದೆ.

ಅಂತರಾಳವು ಸಾಧಾರಣವಾಗಿದ್ದು, ಬಾಗಿಲುವಾಡದಲ್ಲಿ ಗಜಲಕ್ಷ್ಮಿಯ ಕೆತ್ತನೆಯಿದೆ. ಅಂತರಾಳದ ಮುಂದೆ ಎರಡು ಬದಿಗಳಲ್ಲಿ ಚೌಕವಾದ ಜಾಲಂದ್ರವಿದೆ. ಅದರ ಪಕ್ಕದ ದೇವ ಕೋಷ್ಠಕದಲ್ಲಿ ಗಣೇಶ, ಮಹಿಷಮರ್ಧಿನಿ ಶಿಲ್ಪಗಳಿವೆ. ದೇವಾಲಯವು ೭ ಅಂತಸ್ತಿನ ಶಿಖರವನ್ನು ಗಾರೆಯಿಂದ ಕೂಡಿದೆ. ದೇವಾಲಯದ ಎಡ ಭಾಗದ ಗೋಡೆಗೆ ದೇಗುಲಕ್ಕೆ ಸಂಬಂಧಿಸಿದ ಶಿಲ್ಪಗಳಿವೆ. ಸಪ್ತಮಾತೃಕೆ, ಶೈವ ಶಿಲ್ಪ, ಭೈರವ ಶಿಲ್ಪ, ನಾರಾಯಣ ಮತ್ತು ನಾಗದೇವತೆಯ ಶಿಲ್ಪಗಳು ಬಿದ್ದಿವೆ. ದೇವಾಲಯಕ್ಕೆ ಸೇರಿದ ಅವಶೇಷಗಳು ಅದೇ ಭಾಗದಲ್ಲಿ ತುಂಡರಿಸಿ ಬಿದ್ದೆವೆ. ಪಕ್ಕದಲ್ಲೇ ಹೊಂಡವು ಇದ್ದು ದೇವಾಲಯದ ಮುಂದೆ ಹೊಸ ರೂಪದಲ್ಲಿ ಗುರು ಸಿದ್ದರಾಮೇಶ್ವರನೆಂಬುದಾಗಿ ಕರೆಸಿಕೊಂಡಿದೆ.

ಸಂಖ್ಯೆ: ೦೮ ಹೆಸರು – ಕೋಟಿ ರಾಮೇಶ್ವರ ದೇಗುಲ

ರಾಜ। ವಂಶ– ತ್ರೈಲೋಕ್ಯಮಲ್ಲ ಸ್ಥಳ – ಮಾರಿಕಾಂಬ ದೇವಸ್ಥಾನ ಹಿಂಭಾಗ

ಗ್ರಾಮ – ಈಸೂರು ದಿಕ್ಕು – ಪೂರ್ವಾಭಿಮುಖ

ಕಾಲ – ೧೦–೧೧ ನೇ ಶತಮಾನ ಸ್ಥಿತಿ – ಆಧುನಿಕ

ಈಸೂರಿನಲ್ಲಿ ಕೋಟಿ ರಾಮೇಶ್ವರ ಜೀರ್ಣೋದ್ಧಾರವಾಗಿದ್ದು. ಅದರ ಮುಂದೆ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ದೇವಾಲಯವಿತ್ತು. ಅದರ ಶೈಲಿಯಲ್ಲಿ ಅಳಿದುಳಿದ ಶಿಲೆಗಳು ಮಣ್ಣಿನಲ್ಲಿ ಮುಚ್ಚಿ ಹೋಗಿವೆ. ಆದರೆ ದೇವಾಲಯದ ಎಡಭಾಗಕ್ಕೆ ವಿಷ್ಣು ವೀರಭದ್ರ, ಗಣಪತಿ ಶಿಲ್ಪಗಳಿವೆ.ಅದರ ಪಾಯದಲ್ಲಿ ಕೆತ್ತಿರುವ ರಾಮಾಯಣ ಮಹಾಭಾರತ ಸುಂದರ ಚಿತ್ರಗಳು ಮಣ್ಣು ಧೂಳಿನಿಂದ ಮುಸುಕಿವೆ.

ಸಂಖ್ಯೆ: ೦೯ ಊರು: ಚಿಕ್ಕಾಪುರ

ರಾಜ/ವಂಶ:ಕೆಳದಿ ಅರಸರು ಸ್ಥಳ: ಗ್ರಾಮದ ಕೊನೆಗೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಹೋರಿ ಹೊಳೆ ಬಸವೇಶ್ವರ ದೇವಾಲಯ

ಸ್ಥಿತಿ: ಮಧ್ಯಮ(ಹೊಸದು) ಕಾಲ: ಕ್ರಿ.ಶ.ಸು. ೧೭-೧೫ನೆಯ ಶತಮಾನ

ಶಿಕಾರಿಪುರದಿಂದ ಆನಂತಪುರಂಗೆ ಹೋಗುವ ಮಾರ್ಗದ ಬಲ ಭಾಗಕ್ಕೆ ಸುಮಾರು ಒಂದು ಕಿ.ಮಿ ತಲುಪಿದರೆ ಚಿಕ್ಕಾಪುರ ಗ್ರಾಮ. ಗ್ರಾಮದ ಬೆಟ್ಟದ ಮೇಲೆ ದೇವಾಲಯವಿದ್ದು, ಇದರ ಮೂಲ ದೇವಾಲಯದ ಕೆಳಗೆ ಹಳ್ಳದಲ್ಲಿ ಇರುವ ಹೊಳೆ, ಅಲ್ಲಿ ಹೋರಿಗಳ ಶಿಲ್ಪಗಳು ಇದ್ದು, ನಂತರ ದಿನಗಳಲ್ಲಿ ಬೆಟ್ಟದ ಮೇಲೆ ಹೊಸದಾಗಿ ಅದೇ ಹೆಸರಿನಿಂದ ಪ್ರತಿಷ್ಠಾಪನೆ ಮಾಡಿ, ಇದನ್ನು ಹೋರಿ ಹೊಳೆ ಬಸವೇಶ್ವರ ಎಂಬುದಾಗಿ ಕರೆದರು. ದೇವಾಲಯ ೧೭ನೆ ಶತಮಾನದಲ್ಲಿ ಕೌವಲೇದುರ್ಗದ ಆಳ್ವಿಕೆ ಕಾಲದಲ್ಲಿ ಈ ದೇಗುಲ ನಿರ್ಮಾಣದ ಬಗ್ಗೆ ಐತಿಹಗಳಿವೆ. ಅಲ್ಲಿಯ ನಾಯಕ ಬಸಪ್ಪ ಎಂಬುವರ ಕಾಲದಲ್ಲಿ ನಿರ್ಮಾಣವಾಗಿದೆ ಎಂಬುದಾಗಿ ತಿಳಿಸುತ್ತಾರೆ.

ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ತೆರೆದ ಮುಖ ಮಂಟಪವಿದೆ. ಗರ್ಭಗೃಹದ ಮತ್ತು ಅಂತರಾಳದ ಬಾಗಿಲುವಾಡದಲ್ಲಿ ಗಣೇಶನ ಶಿಲ್ಪವಿದ್ದು, ಕೆಲಭಾಗದಲ್ಲಿ ದ್ವಾರಪಾಲಕ, ಸಿಂಹವ್ಯಾಳಿಯ ಶಿಲ್ಪಗಳಿವೆ. ಮೇಲ್ಛಾವಣಿಯು ಪದ್ಮದಿಂದ ಕೂಡಿದ ಭುವನೇಶ್ವರಿ ಇದ್ದು, ಗರ್ಭಗೃಹದಲ್ಲಿ ಹೋರಿ ಹೊಳೆ ಬಸವೇಶ್ವರನ ಮೂರ್ತಿ ಇದೆ. ಅಂತರಾಳವು ಅಗಲವಾಗಿದ್ದು ಅವುಗಳ ಕೆಳಗೋಡೆಗಳಲ್ಲಿ ಶಿವ-ಪಾರ್ವತಿ, ವೀರಭದ್ರ, ಗಣೇಶ ಶಿಲ್ಪದ ಕೆತ್ತನೆ ಇದೆ.

ನವರಂಗದಲ್ಲಿ ೮ ಕಂಬಗಳು ಗೋಡೆಯೊಳಗೆ ಸೇರಿದ್ದು ಚೌಕ, ಅಷ್ಟಕೋನಾಕಾರವಿದೆ. ಪೀಠ, ಪಾದ, ದಿಂಡು, ಭೋದಿಗೆಯಿಂದ ಕೂಡಿದೆ ಕಂಬವಾಗಿದೆ.

ತೆರೆದ ಮುಖ ಮಂಟಪದಲ್ಲಿ ಕಂಬಗಳ ಸಾಲುಗಳಿಂದು ಮೇಲೆ ಪದ್ಮದ ಭುವನೇಶ್ವರಿ ಇದೆ ಬಾಗಿಲಲ್ಲಿ ಕಲ್ಲಿನ ನೀರಿನ ಬಾನಿ, ಮುಂದೆ ದೀಪಸ್ಥಂಭವಿದೆ.

ಸಂಖ್ಯೆ: ೧೦ ಊರು: ತಾಳಗುಂದ

ರಾಜ/ವಂಶ: ಶಾತವಾಹನ, ಕದಂಬರು ಸ್ಥಳ: ತಾಳಗುಂದ ಊರ ಹೊರಗೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಶ್ರೀ ಪ್ರಣವೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು.೨-೫ನೆಯ ಶತಮಾನ

ಶಿಕಾರಿಪುರದಿಂದ ಚಿಕ್ಕೆರೂರಿಗೆ ಹೋಗುವ ಮಾರ್ಗದ ಮಧ್ಯದಲ್ಲಿ, ಶಿರಾಳಕೊಪ್ಪದಿಂದ ಸುಮಾರು ೦೬ ಕಿ.ಮೀ ದೂರದಲ್ಲಿ ತಾಳಗುಂದ ಗ್ರಾಮವಿದೆ. ಇಲ್ಲಿ ಕದಂಬರ ಅಧಿದೇವರಾದ ಶ್ರೀ ಪ್ರಣವೇಶ್ವರ ದೇವಾಲಯವಿದೆ. ಹಿಂದೆ ಈ ಗ್ರಾಮವನ್ನು ಸ್ಥಾನಗುಂದ, ಸ್ಥಾನಕುಂದೂರು ಎಂಬುದಾಗಿ ಕರೆಯಲ್ಪಟ್ಟಿದೆ. ಕರ್ನಾಟಕದ ಮೊಟ್ಟ ಮೊದಲ ವಿದ್ಯಾಕೇಂದ್ರ ಘಟಿಕಾಸ್ಥಾನ, ಮೊದಲ ತಟಾಕವಿದ್ದ ಪ್ರದೇಶವಾಗಿದೆ. ಕ್ರಿ.ಶ.ಸು. ೨ನೇ ಶತಮಾನದಲ್ಲಿ ಶಾತವಾಹನರು ಪೂಜಿಸಿದರೆಂದು ಶಾಸನದಿಂದ ತಿಳಿದುಬರುತ್ತದೆ. ಆದ್ದರಿಂದ ಇದು ಪುರಾತನ ದೇವಾಲಯವೆಂದು ಕರೆಯಬಹುದು. ದೇವಾಲಯದ ಎದುರಿಗೆ ನೆಟ್ಟಿರುವ ಶಾಸನವು ಕದಂಬರ ದೊರೆಯಾದ ಮಯೂರಶರ್ಮನು, ಕದಂಬರ ಕುಲದ ಮೂಲ, ವಂಶಾವಳಿ ಮಾಹಿತಿಯನ್ನು ನೀಡುತ್ತದೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ ಹೊಂದಿರುವ ಸರಳ ಸ್ಮಾರಕವಾಗಿದೆ.ಆದರೂ ಇದು ಪುರಾತನ ಕಾಲಕ್ಕೆ ಕರೆದೊಯ್ಯುತ್ತದೆ. ಗರ್ಭಗೃಹದಲ್ಲಿರುವ ಶಿವಲಿಂಗದ ಸುತ್ತಳತೆ ೫ ಅಡಿ ಇದು, ಸುಮಾರು ಒಂಭತ್ತು ಅಡಿ (೪ ಅಡಿ ಪೀಠ ಸೇರಿದಂತೆ) ಎತ್ತರವನ್ನು ಹೊಂದಿದೆ. ಇತ್ತಿಚಿನ ದಿನಗಳಲ್ಲಿ ಮದ್ಯಮ ಸ್ಥಿತಿಯಲ್ಲಿ ಲಿಂಗವಿದೆ. ಮೇಲೆ ಸಾಧಾರಣ ಮೇಲ್ಛಾವಣಿಯಿದೆ. ಗರ್ಭಗೃಹದ ಬಾಗಿಲುವಾಡದಲ್ಲಿ ಗಣೇಶನ ಶಿಲ್ಪವಿದ್ದು, ಹೂವಿನ ಅಲಂಕಾರವಿದೆ. ನವರಂಗವು ೪ ಮೂಲೆಗೆ ಸೇರಿದಂತೆ ಗೋಡೆಗಂಬಗಳಿವೆ. ಮೇಲ್ಛಾವಣಿಯು ಪದ್ಮದ ಭುವನೇಶ್ವರಿ ಕೆತ್ತನೆಯನ್ನು ಕಾಣಬಹುದು. ಮುಖ್ಯದ್ವಾರದ ಮೇಲೆ ಗಜಲಕ್ಷ್ಮಿ, ದ್ವಾರಪಾಲಕರು, ಕುಂಭದ ಅಲಂಕಾರ, ಹೂವಿನ ಸುರಳಿಯ ಅಲಂಕಾರ, ಸಿಂಹದ ಕೆತ್ತನೆ ನೋಡಬಹುದು. ದೇವಾಲಯದ ಮುಂದೆ ಕದಂಬ ವಂಶಕ್ಕೆ ಸೇರಿದ, ಅವರ ವಂಶಾವಳಿ ತಿಳಿಸುವ ಸ್ತಂಭ ಶಾಸನವಿದೆ. ಇದು ಸಂಸ್ಕೃತದ ಪ್ರಥಮ ಶಾಸನಗಳ ಪಟ್ಟಿಗೆ ಸೇರುತ್ತದೆ.

ಕದಂಬರ ಕಾಲದಲ್ಲಿ ತಾಳಗುಂದವು ಪ್ರಸಿದ್ಧ ಅಗ್ರಹಾರವಾಗಿದ್ದು, ಇದನ್ನು ಮಯೂರನ ಪೂರ್ವಜರು ಸ್ಥಾಪಿಸಿದ್ದರು. ಆದರೆ ಇತ್ತಿಚಿನ ದಿನಗಳಲ್ಲಿ ಸಾಕಷ್ಟು

ಉತ್ಖನನಗಳು ನಡೆಸುತ್ತಿದ್ದು, ಈ ಪ್ರದೇಶದ ಸಂಸ್ಕೃತಿ ಶಾತವಾಹನರ ಕಾಲಕ್ಕೆ ಹೋಗುತ್ತದೆ. ಹಾಗಾಗಿ ಈ ದೇಗುಲ ಕ್ರಿ.ಶ. ೧-೨ನೇಯ ಶಾತಮಾನದಲ್ಲೇ ನಿರ್ಮಾಣವಾಗಿರುವ ಸಾಧ್ಯತೆಗಳು ಇದೆ. ದೇವಾಲಯದ ಕೆಲವು ಜೀರ್ಣೋದ್ಧಾರ ಕಾರ್ಯಗಳು ಹಾಗೂ ಉತ್ಖನನದಿಂದಾಗಿ ಹೊಸ ಮಾಹಿತಿಗಳು ಹೊರಬಿಳಲಿವೆ.

ಸಂಖ್ಯೆ: ೧೧ ಊರು: ತೊಗರ್ಸಿ

ರಾಜ/ವಂಶ: ಕಲ್ಯಾಣ ಚಾಳುಕ್ಯ, ಕೆಳದಿ ನಾಯಕ ಸ್ಥಳ: ತೊಗರ್ಸಿ ಗುಡ್ಡದ ಮೇಲೆ

ಅಭಿಮುಖ :ಪೂರ್ವಾಭಿಮುಖ ಸ್ಮಾರಕ:ಶ್ರೀ ಮಲ್ಲಿಕಾರ್ಜುನ ದೇವಾಲಯ

ಸ್ಥಿತಿ: ಉತ್ತಮ(ಹೊಸ ಮಾದರಿ) ಕಾಲ: ಕ್ರಿ.ಶ.ಸು. ೧೦-೧೫ನೆಯ ಶತಮಾನ

ಶಿಕಾರಿಪುರದಿಂದ ಆನವಟ್ಟಿಗೆ ಹೋಗುವ ಮಾರ್ಗದ ಮಧ್ಯದಲ್ಲಿ ಶಿರಾಳಕೊಪ್ಪದಿಂದ ಸುಮಾರು ೧೦ ಕಿ.ಮೀ ದೂರದಲ್ಲಿ ತೊಗರ್ಸಿ ಗ್ರಾಮವಿದೆ. ಈ ಗ್ರಾಮದ ಬೆಟ್ಟದ ಮೇಲೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ದೇವಾಲಯವಿದ್ದು, ಕ್ರಿ.ಶ.ಸು.೧೦-೧೧ನೆಯ ಶತಮಾನಕ್ಕೆ ನಿರ್ಮಾಣವಾಗಿರಬಹುದು. ಮೂಲ ದೇಗುಲ ಕಲ್ಲಿನ ಮಂಟಪವಿದ್ದು, ಅದರ ಮುಂದೆ ಕೆಳದಿ ನಾಯಕರ ಕಾಲಕ್ಕೆ ನಿರ್ಮಾಣಕೊಂಡ ಮರದ ಕಲಾತ್ಮಕ ಕೆತ್ತನೆಯ ಮಂಟಪವಿದೆ. ಆದರೆ ಇತ್ತಿಚಿನ ದಿನಗಳಲ್ಲಿ ಈ ಮಂಟಪ ಹಾಳಾಗಿದರ ಹಿನ್ನೆಲೆಯಲ್ಲಿ ಹೊಸ ಮಾದರಿಯ ಕಟ್ಟಡ ನಿರ್ಮಾಣದ ಹಾದಿಯಲ್ಲಿದೆ. ಕೆಲವು ಹೇಳಿಕೆ ಪ್ರಕಾರ ಈ ದೇಗುಲ ಗಂಗರ ಕಾಲಕ್ಕೆ ನಿರ್ಮಾಣವಾಗಿರುವ ಅಂಶಗಳನ್ನು ತಿಳಿಸುತ್ತವೆ. ಮಲ್ಲಿಕಾರ್ಜುನ ದೇವಾಲಯವು ಎಪಿಗ್ರಾಫಿಯಾ ಕರ್ನಾಟಿಕ್ ಸಂಪುಟ ೭ರಲ್ಲಿ ಶಾಸನ ಸಂಖ್ಯೆ ೨೫೮, ೨೫೩, ೨೫೪, ೨೫೫, ೨೬೨ ರಲ್ಲಿ ದೇವಾಲಯಕ್ಕೆ ನೀಡಿದ ದಾನ ಕುರಿತು ತಿಳಿಸುತ್ತದೆ. ಈ ಶಾಸನಗಳಲ್ಲಿ ೧೪೩೮ರಲ್ಲಿ ಹುಲಿಯಗೌಡನ ಮಗ ಬನದಿಗೌಡನ್ನು ಬೆಟ್ಟದ ಮಲ್ಲಿಕಾರ್ಜುನ ದೇವರಿಗೆ ನಾಲ್ಕು ಖಂಡುಗದ ಭೂಮಿಯನ್ನು ದತ್ತಿ ಬಿಟ್ಟಿದ್ದನು ಉಲ್ಲೇಖಿಸುತ್ತದೆ. ಉಳಿದ ಶಾಸನಗಳಲ್ಲಿ ದೇಗುಲಕ್ಕೆ ನಂದಾದೀವಿಗೆ ಭೂದಾನ ನೀಡಿದ್ದನ್ನು ತಿಳಿಸುತ್ತದೆ. ಹಾಗೆ ಕೆಳದಿ ಸದಾಶಿವನಾಯಕರ ಕಾಲದ ಶಾಸನದಲ್ಲಿ ಭೂದಾನ ಬಿಟ್ಟು ಕೊಟ್ಟದನ್ನು ಪ್ರಸ್ತಪಿಸುತ್ತದೆ.

ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ರಾಯ ಗೋಪುರ, ಪುಷ್ಕರಣಿಯನ್ನು ಒಳಗೊಂಡಿದೆ. ನಾಲ್ಕು ಅಡಿಯ ಅಧಿಷ್ಠಾನದ ಮೇಲೆ ದೇಗುಲ ನಿರ್ಮಾಣವಾಗಿದೆ. ಈ ದೇವಾಲಯಕ್ಕೆ ಮೂರು ದ್ವಾರಗಳಿದ್ದು ಮೆಟ್ಟಿಲುಗಳಿಂದ ಕೂಡಿದೆ. ಗರ್ಭಗುಡಿಯಲ್ಲಿ ೩ ಅಡಿಯ ಶಿವಲಿಂಗವಿದ್ದು, ಮೇಲ್ಚಾವಣಿ ಪದ್ಮವು ಅರಳುವ ಮಾದರಿಯ ಕೆತ್ತನೆ ಕಂಡುಬರುತ್ತದೆ. ಇದರ ಬಾಗಿಲುವಾಡದ ಮೇಲೆ ಗಜಲಕ್ಷ್ಮಿಯ

ಶಿಲ್ಪವಿದ್ದು, ಚೌಕಕಾರ, ಗಂಟೆಯಾಕಾರದ ಲಲಾಟಬಿಂಬವಿದೆ. ಅಂತರಾಳದ ಮೇಲ್ಛಾವಣಿಯು ಸಾಧಾರಣವಾಗಿದೆ. ಇದರ ಬಾಗಿಲುವಾಡದ ಮೇಲೆ ಗಜಲಕ್ಷ್ಮಿ ಇದ್ದು, ಅದರ ಮೇಲ್ಪಟ್ಟಿಕೆಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ಗಣೇಶ, ಮಹಿಷಾಸುರ ಮರ್ಧಿನಿ, ಷಣ್ಮುಖ ಹಾಗೂ ಇತರೆ ಪರಿವಾರ ದೇವತೆಗಳ ಕೆತ್ತನೆಗಳಿವೆ. ನವರಂಗದಲ್ಲಿ ಗೋಡೆಗೆ ಸೇರಿದಂತೆ ೧೬ ಕಂಬಗಳಿವೆ.

ನವರಂಗದ ಭಿತ್ತಿಯ ಭಾಗಗಳಲ್ಲಿ ಸುಮಾರು ೮ ದೇವಕೋಷ್ಠಕವಿದ್ದು, ಶಿವಪಾರ್ವತಿ, ವಿನಾಯಕ, ಮಹಿಷಮರ್ದಿನಿ, ಸಪ್ತಮಾತೃಕೆ, ನಾಗ–ನಾಗಿಣಿಯರು ಇತ್ಯಾದಿ ಮೂರ್ತಿಗಳು ಕಂಡು ಬರುತ್ತವೆ. ಮದ್ಯದ ನಾಲ್ಕು ಕಂಬಗಳು ಗಂಟೆಯಾಕಾರದಲ್ಲಿದ್ದು ಎಲೆ, ಬಳ್ಳಿಯ ಅಲಂಕಾರವನ್ನು ಹೊಂದಿವೆ. ಮೇಲೆ ಸುಮಾರು ೯ ಮೇಲ್ಛಾವಣಿಯಲ್ಲಿ ಪದ್ಮ ಅರಳುವ ಭುವನೇಶ್ವರಿ ಇದೆ. ನವರಂಗದ ಮುಂದಿನ ಬಾಗಿಲುವಾಡದಲ್ಲಿ ಗಜಲಕ್ಷ್ಮಿ ಶಿಲ್ಪ, ಕಂಬ, ಎಲೆಯ ಅಲಂಕಾರದ ಲಲಾಟಬಿಂಬವಿದೆ. ಜೊತೆಗೆ ಹೊಸದಾಗಿ ಗಾರೆಯನ್ನು ಬಳಸಿ ಜೀರ್ಣೋದ್ಧಾರ ಕಾರ್ಯವನ್ನು ಮಾಡಲಾಗಿದೆ. ಅದರ ಮರದ ಬಾಗಿಲ ಮೇಲೆ ವಿನಾಯಕ, ಲಕ್ಷ್ಮಿ, ಸರಸ್ವತಿ, ನಂದಿ, ನಟರಾಜ, ವೀರಭದ್ರ, ಶೈವ ಯತಿಯ ಶಿಲ್ಪ, ಹೂಬಳ್ಳಿ ಕೆತ್ತನೆ ಕೆಲಸ ಮಾಡಲಾಗಿದೆ. ನವರಂಗದ ಬಲಭಾಗದ ಬಾಗಿಲುವಾಡದಲ್ಲಿ ಗಜಲಕ್ಷ್ಮಿ, ಸಾಧಾರಣ ಕಂಬಗಳಿಂದ ಕೂಡಿದ ಎಲೆಯ ಅಲಂಕಾರವಿದೆ. ಹಾಗೆ ಎಡಭಾಗದ ಬಾಗಿಲುವಾಡದಲ್ಲೂ ಗಜಲಕ್ಷ್ಮಿ ಶಿಲ್ಪ, ಸಾಧಾರಣ ಕಂಬಗಳಿಂದ ಕೂಡಿದ ಎಲೆಯ ಅಲಂಕಾರವಿದೆ. ಅದರ ಎಡಭಾಗದಲ್ಲಿ ಸುಮಾರು ೬೦ ಅಡಿ ಉದ್ದದ, ೨೦ ಅಡಿ ಅಗಲದ ಪುಷ್ಕರಣಿ ಇದೆ. ದೇವಾಲಯದ ಮುಂದೆ ರಾಯಗೋಪುರ ಮಾದರಿಯಲ್ಲಿ ಗಾರೆಯಿಂದ ರಚಿಸಿದ ೩ ಅಂತಸ್ತುನ್ನು ಒಳಗೊಂಡಿದೆ. ದೇಗುಲದ ಎಡಬಲಗಳಲ್ಲಿ ವೀರಶೈವ ಮಠಗಳಿವೆ. ಆದರೆ ನವರಂಗದ ಮುಂದೆ ಕೆಳದಿ ನಾಯಕರ ಕಾಲದಲ್ಲಿ ಮರವನ್ನು ಬಳಸಿ ಮಾಡಿದ ಮುಖಮಂಟಪವಿತ್ತು, ಇದರಲ್ಲಿ ಸುಂದರ ಅಲಂಕಾರ, ಕುಸುರಿ ಕೆಲಸವುಳ್ಳ ಕಾಷ್ಠಶಿಲ್ಪದಲ್ಲಿ ಅಷ್ಟದಿಕ್ಪಾಲಕರು, ವಿವಿಧ ದೇನುದೇವತೆಯರು ಮತ್ತು ಮಿಥುನ ಶಿಲ್ಪಗಳ ಚಿತ್ರಣಗಳಿದವು. ಅವುಗಳು ಹಾಳಾದ ಹಿನ್ನಲೆಯಲ್ಲಿ ಮಂಟಪವನ್ನು ಕೆಡವಿ, ಅದೇ ಮಾದರಿಯ ಹೊಸ ರೂಪ ನೀಡುವ ಕಾರ್ಯಕ್ಕೆ ಪ್ರಯತ್ನ ನಡೆಯುತ್ತಿದೆ.

ಸಂಖ್ಯೆ: ೧೨ ಊರು: ನೆಲವಾಗಿಲು

ರಾಜ/ವಂಶ: ---- ಸ್ಥಳ: ಮಾಸೂರು ರಸ್ತೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಬಸವೇಶ್ವರ ದೇವಾಲಯ

ಕಾಲ: ಕ್ರಿ.ಶ.ಸು. ೧೦–೧೧ನೆ ಶ ನಂತರ

ಸ್ಥಿತಿ: ಕನಿಷ್ಠ

ಶಿಕಾರಿಪುರದಿಂದ ಮಾಸೂರು ಹೋಗುವ ಮಾರ್ಗದ ಮಧ್ಯೆ ನೆಲವಾಗಿಲಿಗೆ ಸಮೀಪದಲ್ಲಿ ಬಸವೇಶ್ವರ ದೇವಾಲಯವಿದೆ. ಇದು ಏಕಕೂಟ ಮಾದರಿಯಲ್ಲಿದ್ದು, ಬಸವನನ್ನು ಮೂರ್ತಿಯಾಗಿ ಪೂಜಿಸಿಕೊಳ್ಳುತ್ತಿದೆ. ದೇವಾಲಯವು ಗರ್ಭಗೃಹದ ಅರ್ಧತೆರೆದ ಮಂಟಪವಿದೆ ಗರ್ಭಗೃಹದಲ್ಲಿ ಬಸವೇಶ್ವರ ಲಿಂಗವಿದ್ದು, ಮುಂದೆ ನಂದಿಯ ಶಿಲ್ಪವಿದೆ. ಮೇಲ್ಛಾವಣಿ ಸಾಧಾರಣವಾಗಿದೆ. ಅರ್ಧಮಂಟಪದಲ್ಲಿ ೮ ಕಂಬಗಳಲ್ಲಿ ೪ ಕಂಬಗಳು ಗೋಡೆಗೆ ಸೇರಿವೆ. ಮೇಲ್ಛಾವಣಿ ಕಲ್ಲಿನ ಇಳಿಜಾರು ಸೂರು ಇದೆ. ಮುಂದೆ ಬಾವಿ ಇದ್ದು ಇದನ್ನು ಬಸವನಹೊಂಡವೆಂದು ಕರೆಯುತ್ತಾರೆ. ಕಲ್ಲಿನಿಂದ ಆಯತಾಕಾರದ ಕಟ್ಟಡವಾಗಿದೆ.

ಸಂಖ್ಯೆ: ೧೩	ಊರು: ನೇರಲಗಿ
ರಾಜ/ವಂಶ:ಪ್ರಾಚೀನ	ಸ್ಥಳ: ವೀರಭದ್ರ ದೇವಾಲಯದ ಮುಂದೆ
ಅಭಿಮುಖ : ಪೂರ್ವಾಭಿಮುಖ	ಸ್ಮಾರಕ: ಬಸವೇಶ್ವರ ದೇವಾಲಯ
ಸ್ಥಿತಿ: ಮಧ್ಯಮ	ಕಾಲ: ---

ಶಿರಾಳಕೊಪ್ಪದಿಂದ ಹೀರೆಕೆರೂರು ಮಾರ್ಗದ ಮಧ್ಯೆ ಬಲಭಾಗದಲ್ಲಿ ಬಸವೇಶ್ವರ ದೇವಾಲಯವು ಇದೆ. ಪ್ರಾಚೀನ ಕಾಲದ ಶೈಲಿಯಲ್ಲಿ ಕಲ್ಲಿನಿಂದ ಕಟ್ಟಲಾಗಿದೆ. ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಮೂರು ಅಡಿಯ ಶಿವಲಿಂಗವಿದ್ದು, ವಿವಿಧ ಅಲಂಕಾರಕ್ಕೆ ಒಳಗಾಗಿದೆ. ಬಾಗಿಲುವಾಡ ಸಾಧಾರಣವಿದ್ದು ಯಾವುದೇ ಶಿಲ್ಪಗಳು ಇಲ್ಲ. ಅಂತರಾಳದ ಬಾಗಿಲುವಾಡದಲ್ಲಿ ಗಣೇಶನ ಶಿಲ್ಪವಿದೆ. ಕೆಳಗೆ ದ್ವಾರಪಾಲಕರ ಶಿಲ್ಪಗಳಿವೆ.

ನವರಂಗವು ನಾಲ್ಕು ಪ್ರಮುಖ ಕಂಬಗಳಿಂದ ಕೂಡಿದ್ದು, ಗೋಡೆ ಸೇರಿದಂತೆ ೧೨ ಕಂಬಗಳಿವೆ. ಮಧ್ಯೆದ ಕಂಬಗಳು ಅಷ್ಟಕೋನ ಆಕಾರದಲ್ಲಿವೆ. ಕಂಬಗಳಲ್ಲಿ ಹಂಸ, ಆನೆ, ವಿವಿಧ ಶಿಲ್ಪಗಳಿವೆ. ಅಧಿಷ್ಠಾನದ ಮೇಲಿರುವ ದೇವಾಲಯ ಭಿತ್ತಿಯ ಭಾಗದಲ್ಲಿ ವಿವಿಧ ಭಂಗಿಯ ಮಿಥುನ ಶಿಲ್ಪಗಳನ್ನು ಹೊಂದಿದೆ.

ಸಂಖ್ಯೆ: ೧೪	ಊರು: ನಂದಿ ಬಸವನಳ್ಳಿ
ರಾಜ/ವಂಶ:ಪ್ರಾಚೀನ	ಸ್ಥಳ: ಮುಗಳಿಕೊಪ್ಪ ರಸ್ತೆ ಪಕ್ಕ
ಅಭಿಮುಖ : ಪೂರ್ವಾಭಿಮುಖ	ಸ್ಮಾರಕ: ಶಿವಾಲಯ

ಸ್ಥಿತಿ: ಕನಿಷ್ಠ ಕಾಲ: ಕ್ರಿ.ಶ.ಸು. ೧೧-೧೧ನೆಯ ಶತಮಾನ

ಮುಗಳಿಕೊಪ್ಪಕ್ಕೆ ಹೋಗುವ ಮಾರ್ಗದ ಮಧ್ಯೆ ಈ ಶಿವಾಲಯವಿದೆ. ಅವನತಿಯ ಅಂಚಿಗೆ ದೇವಾಲಯ ತಲುಪಿದ್ದು, ಅಲ್ಪ ಸ್ವಲ್ಪ ದೇವಾಲಯ ರೂಪದಲ್ಲಿ ಕಾಣಬಹುದು. ದೇವಾಲಯವು ಗರ್ಭಗೃಹ ಅಂತರಾಳವನ್ನು ಹೊಂದಿದೆ. ಒಂದು ಅಡಿ ಅಧಿಷ್ಠಾನದ ಮೇಲೆ ದೇವಾಲಯವಿದ್ದು, ಗರ್ಭಗೃಹದಲ್ಲಿ ಶಿವಲಿಂಗವನ್ನು ಒಳಗೊಂಡಿದೆ. ಅಲ್ಲೇ ನಂದಿಯ ಮೂರ್ತಿಯೂ ಇದೆ. ಬಾಗಿಲುವಾಡವು ಖಾಲಿಯಾಗಿದ್ದು, ಅಂತರಾಳವು ಕೂಡ ಖಾಲಿಯಾಗಿದೆ. ಗೋಪುರ ಕಲ್ಲಿನಿಂದ ಕೂಡಿದ್ದು ಅವನತಿಯ ಅಂಚಿಗೆ ತಲುಪಿದೆ. ದೇವಾಲಯದ ಎಡಕ್ಕೆ ಆಂಜನೇಯ ಮೂರ್ತಿಯಿರುವ ಮಂಟಪವಿದೆ. ಸುತ್ತಲೂ ಕಲ್ಲಿನ ೪ ಅಡಿ ಎತ್ತರದ ಗೋಡೆಯನ್ನು ನಿರ್ಮಿಸಲಾಗಿದೆ. ಮುಂದೆ ಕಲ್ಲಿನ ಕಂಬವಿದೆ.

ಸಂಖ್ಯೆ: ೧೫ ಊರು: ಬಸವ ನಂದಿಹಳ್ಳಿ

ರಾಜ/ವಂಶ:ಪ್ರಾಚೀನ ಸ್ಥಳ: ಹೊಂಡದ ಮೇಲೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಚನ್ನ ಬಸವೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೨ನೇ ಶತಮಾನ

ಬಿಸಲಹಳ್ಳಿಯಿಂದ ಮುಗಳಿಗೆರೆಗೆ ಹೋಗುವ ಮಾರ್ಗದ ಮಧ್ಯೆ ಕೆರೆಯ ಏರಿಯ ಮೇಲೆ ಕಾಣುವ ದೇವಾಲಯವೇ ಚನ್ನ ಬಸವೇಶ್ವರ. ಪ್ರಾಚೀನ ಕಾಲದ ಅವಶೇಷಗಳಾದ ಸಪ್ತಮಾತೃಕೆಯ ಶಿಲ್ಪದ ಮೂಲಕ ಇದನ್ನು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಬರುವಂತೆ ಅಧ್ಯಯನ ಮಾಡಬಹುದು. ದೇವಾಲಯವು ಸುತ್ತಲಿನ ಹಳ್ಳಿಗಳಿಗೆ ಭಕ್ತಿ ಪೂರಕ ದೇವರಾಗಿದೆ. ಹಳೆಯ ಕಾಲದ ದೇವಾಲಯವಾದರೂ ಅದಕ್ಕೆ ಬಣ್ಣದಿಂದ ಮೂಲ ಶೈಲಿಯನ್ನು ಗುರಿತ್ತಸುವುದು ಸ್ವಲ್ಪ ಕಷ್ಟಕರವಾಗಿದೆ. ಅದರೂ ದೇವಾಲಯದ ಕಲಾತ್ಮಕ ರೂಪ ಇತಿಹಾಸಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತದೆ.

ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಬೆಳೆಯುವ ನಂದಿಯ ರೂಪವಿದೆ. ಇದು ದಿನೇ-ದಿನೇ ಬೆಳೆಯುತ್ತಿದ್ದು, ನಂತರದಲ್ಲಿ ಬೆಳೆಯುವುದು ನಿಂತಿದೆ ಎಂಬ ನಂಬಿಕೆಯನ್ನು ಜನರು ಮೂಡಿಸಿಕೊಂಡಿದ್ದಾರೆ. ಹೆಚ್ಚಿನ ಅಲಂಕಾರಕ್ಕೆ ಒಳಗಾಗದೆ ನಂದಿಯ ಮೂರ್ತಿಯನ್ನು ನೋಡಬಹುದು. ಗರ್ಭಗೃಹದ ಮೇಲ್ಛಾವಣಿಯ ನಕ್ಷತ್ರಾಕಾರದ ಭುವನೇಶ್ವರಿ ಇದ್ದು, ಬಾಗಿಲುವಾಡದಲ್ಲಿ ಗಜಲಕ್ಷ್ಮಿಯ ಶಿಲ್ಪ, ಯತಿಗಳ ಶಿಲ್ಪಗಳಿವೆ. ಅಂತರಾಳವು ಸಾದಾರಣವಾಗಿದ್ದು, ಬಾಗಿಲುವಾಡವು ಕೂಡ ಅಲಂಕಾರದಿಂದ ಮುಕ್ತವಾಗಿದೆ.

ನವರಂಗವು ನಾಲ್ಕು ಕಂಭಗಳಿಂದ ಕೂಡಿದ್ದು ಚೌಕಕಾರದಲ್ಲಿದೆ. ಮೇಲ್ಛಾವಣಿಯು ಪದ್ಮದಿಂದ ರಚಿಸಿದ ಭುವನೇಶ್ವರಿ ಇದೆ. ಕಂಬಗಳಲ್ಲಿ ವಿವಿಧ ಕೆತ್ತನೆಯಾದ ಹೂ, ಬಳ್ಳಿ, ಯತಿಗಳು, ನಾಗ, ಇತ್ಯಾದಿಗಳಿವೆ. ಒಳಭಾಗದ ಭಿತ್ತಿಯಲ್ಲೂ ಆನೆ, ಯತಿ, ಕುಂಭ, ಅಲಂಕಾರಿಕ ಕೆತ್ತನೆಯಿದೆ. ದೇವಾಲಯದ ಮುಖ್ಯ ದ್ವಾರದ ಬಾಗಿಲು ವಾಡದಲ್ಲಿ ನಂದಿ ಶಿಲ್ಪ, ದ್ವಾರಪಾಲಕರು, ಅದರ ಅಕ್ಕ ಪಕ್ಕದಲ್ಲಿ ಚೌರಿ ಹಿಡಿದ ಯುವತಿಯರ ಶಿಲ್ಪಗಳಿವೆ. ಹಾಗೇ ಮುಂದೆ ನಾಲ್ಕು ಚೌಕಕಾರದ ಕಂಬಗಳಿವೆ.

ಹೊರ ಭಾಗದ ಭಿತ್ತಿಯಲ್ಲಿ ಗರುಡ, ನರ್ತನ ಶಿಲ್ಪ, ಮಾರುತಿ, ಆನೆ, ಶರಣರು, ವಿವಿಧ ಭಂಗಿಯ ಮಿಥುನ ಶಿಲ್ಪಗಳು, ಅಲಂಕಾರಿಕ ಶಿಲ್ಪಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಮೇಲೆ ಏಳು ಅಂತಸ್ತಿನ ಗೋಪುರವಿದೆ. ದೇವಾಲಯದ ಮುಂದೆ ಕಲ್ಲಿನ ಕಂಭ, ಸಪ್ತಮಾತೃಕೆಯರ ಶಿಲ್ಪಗಳಿವೆ. ಅಲ್ಲೇ ಚೌಡಮ್ಮ ದೇವಿಯ ಗುಡಿ, ರಾಮಲಿಂಗಪ್ಪ, ಬಯಲು ಬಸಪ್ಪ ದೇವ ಮಂದಿರಗಳಿವೆ

ಸಂಖ್ಯೆ: ೧೬	ಊರು: ಬಳ್ಳಿಗಾವಿ
ರಾಜ/ವಂಶ: ಕಲ್ಯಾಣ ಚಾಳುಕ್ಯ,ಹೊಯ್ಸಳ	ಸ್ಥಳ: ಆನವಟ್ಟಿ ರಸ್ತೆ
ಅಭಿಮುಖ : ಪೂರ್ವಾಭಿಮುಖ	ಸ್ಮಾರಕ: ಕೇದಾರೇಶ್ವರ ದೇವಾಲಯ
ಸ್ಥಿತಿ: ಉತ್ತಮ	ಕಾಲ: ಕ್ರಿ.ಶ.ಸು.೯–೧೦ನೆಯ ಶತಮಾನ

ಶಿಕಾರಿಪುರದಿಂದ ಶಿರಾಳಕೊಪ್ಪ ಮಾರ್ಗವಾಗಿ ಆನವಟ್ಟಿ ಹೋಗುವ ರಸ್ತೆಯ ಎಡ ಭಾಗದಲ್ಲಿ ಕೇದಾರೇಶ್ವರ ದೇವಾಲಯವಿದೆ. ದೇವಾಲಯವು ತ್ರಿಕೂಟ ಮಾದರಿಯಲ್ಲಿದ್ದು, ಶಿಕಾರಿಪುರದ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದೆ. ಕಲ್ಯಾಣ ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯ ಹೊಯ್ಸಳರ ಕಾಲದಲ್ಲಿ ಅಭಿವೃದ್ಧಿಯನ್ನು ಪಡೆದಿದೆ. ಹಾಗಾಗಿಯೇ ದೇವಾಲಯದ ಸುಖನಾಸಿಯ ಭಾಗದಲ್ಲಿ ಹೊಯ್ಸಳರ ಲಾಂಛನ ಹುಲಿಯನ್ನು ಕೊಲ್ಲುತ್ತಿರುವ ಸಳನ ಶಿಲ್ಪವನ್ನು ಕಂಡರಿಸಿದೆ.

ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ನಂದಿ ಮಂಟಪ ಮತ್ತು ರಾಯ ಮಂಟಪವನ್ನು ಹೊಲುವ ಮಂಟಪವಿದೆ. ದೇಗುಲದ ಮುಖ್ಯ ಗರ್ಭಗೃಹದಲ್ಲಿ ಪೀಠ ಸೇರಿ ಮೂರು ಅಡಿಯ ಶಿವಲಿಂಗವಿದೆ. ಲಿಂಗದ ಮೇಲೆ ಇತ್ತಿಚಿನ ಕಾಲದ ಲೋಹದ ಹೆಡೆ ತೆರೆದ ನಾಗರ ಮೂರ್ತಿಯನ್ನು ಇಡಲಾಗಿದೆ. ಮೇಲ್ಛಾವಣಿಯಲ್ಲಿ ನಕ್ಷತ್ರಾಕಾರ, ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಗರ್ಭಗೃಹದ ಎಡ ಬಲ ಭಾಗಗಳಲ್ಲಿ ದೇವ ಕೋಷ್ಟಕ ರೀತಿ ಇದ್ದು, ಲಿಂಗವನ್ನು ಇಟ್ಟಲಾಗಿದೆ. ಇದರ ಬಾಗಿಲುವಾಡದಲ್ಲಿ ಪಂಚಶಾಖೆಯಿದ್ದು, ರತ್ನ, ಲತಾ, ಸ್ತಂಭ, ವಲ್ಲಿ, ಪದ್ಮ ಕಾಣಬಹುದು.

ಗಜಲಕ್ಷ್ಮಿಯ ಕೆತ್ತನೆ, ಹೂ-ಬಳ್ಳಿಯ ಅಲಂಕಾರ, ಕೆಳಗೆ ಬಾಗಿಲು ಪಟ್ಟಿಕೆಯಲ್ಲಿ ಶೈವ ಶಿಲ್ಪಗಳು ಇದೆ. ಜೊತೆಗೆ ಮಕರ ತೋರಣದ ಅಲಂಕಾರವಿದೆ.

ಅಂತರಾಳವು ಸಾಧಾರಣ ಮೇಲ್ಛಾವಣಿಯಲ್ಲಿ ಪದ್ಮವಿರುವ ಭುವನೇಶ್ವರಿಯಿದೆ. ಬಾಗಿಲುವಾಡವು ಕುಸುರಿ ಕೆತ್ತನೆ, ಗಜಲಕ್ಷ್ಮಿಯ ಶಿಲ್ಪವಿದೆ. ಪಂಚಶಾಖೆಯನ್ನು ಹೊಂದಿದೆ. ಲಲಾಟದ ಮೇಲೆ ಬ್ರಹ್ಮ, ವಿಷ್ಣು, ಮಹೇಶ್ವರ, ಗಣೇಶ, ಷಣ್ಮುಖ, ಮತ್ತು ಪರಿವಾರ ದೇವತೆಗಳಿವೆ. ಅಕ್ಕಪಕ್ಕದಲ್ಲಿ ಪದ್ಮಗಳನ್ನು ಒಳಗೊಂಡ ಜಾಲಂದ್ರವಿದೆ. ಅದರ ಪಕ್ಕದಲೇ ದೇವಕೋಷ್ಠಕಗಳಿದ್ದು, ಒಂದರಲ್ಲಿ ಪೀಠ ಮತ್ತು ಮೂರು ಅಡಿ ಎತ್ತರದ ಲಿಂಗವಿದೆ, ಇನ್ನೊಂದರಲ್ಲಿ ಪೀಠ ಮಾತ್ರವಿದೆ. ಅದರ ಪಕ್ಕದಲ್ಲಿ ಮತ್ತೆರೆಡು ದೇವಕೋಷ್ಠಕದಲ್ಲಿ ನಾಗ-ನಾಗಿಣಿ, ಸಪ್ತಮಾತೃಕೆ, ಉಳಿದವು ಖಾಲಿಯ ಪೀಠವಿದೆ.

ಮುಖ್ಯ ಗರ್ಭಗೃಹದ ಎಡ ಭಾಗದ ಗರ್ಭಗೃಹದಲ್ಲಿ ವಿಷ್ಣುವಿನ ಶಿಲ್ಪವಿದ್ದು, ಪೀಠ ಸೇರಿ ಐದು ಅಡಿಯನ್ನು ಹೊಂದಿದೆ. ಮೇಲೆ ನಕ್ಷತ್ರಾಕಾರದ ಮೇಲ್ಛಾವಣಿ ಅದರಲ್ಲಿ ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಬಾಗಿಲುವಾಡವು ಪಂಚಶಾಖೆಯನ್ನು ಹೊಂದಿದ್ದು, ಲತಾ, ರತ್ನ, ಸ್ಥಂಭ, ವಲ್ಲಿ, ಪದ್ಮಗಳಿವೆ. ಮೇಲೆ ಗಜಲಕ್ಷ್ಮಿಗೆ ಶಿಖರವನ್ನು ಕಂಡರಿಸಲಾಗಿದೆ. ಕಂಭದ ಕೆಳಗೆ ಶೈವ ಶಿಲ್ಪಗಳಿವೆ. ಬಲಭಾಗದ ಗರ್ಭಗೃಹದಲ್ಲಿ ಎರಡು ಎತ್ತರದ ಲಿಂಗವಿದ್ದು ಇದನ್ನು ಬ್ರಹ್ಮವೆಂಬುದಾಗಿ ಹೇಳುತ್ತಾರೆ. ಮೇಲ್ಛಾವಣಿಯು ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಬಾಗಿಲು ವಾಡವು ಗಜಲಕ್ಷ್ಮಿ, ಕಂಬದಲ್ಲಿ ಕುಂಭ, ಪಂಚಶಾಖೆಯನ್ನು ಹೊಂದಿದೆ ಮತ್ತು ಕುಸರಿ ಕೆತ್ತನೆಯಿದೆ.

ನವರಂಗವು ನಾಲ್ಕು ಕಂಭಗಳ ಮಧ್ಯೆ ವೇದಿಕೆ ಇದ್ದು, ಮೇಲ್ಛಾವಣಿಯಲ್ಲಿ ೯ ಪದ್ಮಗಳಿರುವ ಪಟ್ಟಿಕೆ ಇದೆ. ಅದರಲ್ಲೇ ಹಂಸ, ಪದ್ಮ, ಮಕರಗಳ ಅಲಂಕಾರಗಳಿವೆ. ಕಂಬಗಳ ಗಂಟೆಯಾಕಾರದಲ್ಲಿದ್ದು, ಎಲೆ, ಬಳ್ಳಿ, ಮಣಿ ಒಳಗೊಂಡ ಅಲಂಕಾರವಿದೆ. ಪೀಠ, ಪಾದ, ಬಹು, ದಿಂಡು, ಮುಖ, ಕಳಸ, ಫಲಕ, ಬೊದಿಗೆಗಳನ್ನು ಒಳಗೊಂಡಿವೆ.

ರಂಗಮಂಟಪದಲ್ಲಿ ೧೮ ಗಂಟೆಯಾಕಾರದ ಕಂಬಗಳು, ೨ ಚೌಕ ಕಂಬಗಳು, ೨೨ ಅಷ್ಟಮುಖಗಳನ್ನು ಹೊಂದಿದ ಕಂಬಗಳು ನಂದಿಯ ಮಂಟಪವು ಸೇರಿದಂತೆ ಇದೆ. ಮಧ್ಯದ ೧೮ ಕಂಬಗಳ ಮೇಲ್ಛಾವಣಿಯಲ್ಲಿ ೨೬ ಪದ್ಮಗಳಿರುವ ಭುವನೇಶ್ವರಿಯಿದೆ. ಹಾಗೇ ಈ ಕಂಬಗಳು ಪೀಠ, ಪಾದ, ಬಹು, ಮುಖ, ದಿಂಡು, ಚೌಕ, ಕಳಸ, ಬೋದಿಗೆಯನ್ನು ಹೊಂದಿದೆ. ಜೊತೆಗೆ ಮಣಿ, ಎಲೆ, ಬಳ್ಳಿಯ ಅಲಂಕಾರಗಳಿವೆ. ೨ ಕಂಬಗಳು ಸಾಧಾರಣವಾಗಿ ಚೌಕಕಾರವಿದೆ. ೨೨ ಕಂಬಗಳು ಕಕ್ಷಾಸನದ ಮೇಲೆ ಇದ್ದು, ನಂದಿ ಮಂಟಪವನ್ನು ಒಳಗೊಂಡಿದೆ. ಮಧ್ಯದ ಮೇಲ್ಛಾವಣಿಯಲ್ಲಿ ೯ ಪಟ್ಟಿಕೆಯಲ್ಲಿ ಅಷ್ಟದಿಕ್ಪಾಲಕರು, ಅವರ ವಾಹನ ಮತ್ತು ಪರಿವಾರ ದೇವತೆಗಳಿವೆ. ಮಧ್ಯದ ಪಟ್ಟಿಯಲ್ಲಿ ನಟರಾಜ, ಕೈಲಾಸ ಪರ್ವತ, ಪಾರ್ವತಿ, ಗಣೇಶ, ಷಣ್ಮುಖ ಶಿಲ್ಪಗಳಿವೆ.

ನಂದಿ ಮಂಟಪದಲ್ಲಿ ೯ ಅಡಿ ಉದ್ದ, ೪ ಅಡಿ ಅಗಲ, ೬ ಅಡಿ ಎತ್ತರದ ನಂದಿ ಮೂರ್ತಿಯಿದೆ. ಕಿವಿ ಭಗ್ನಗೊಂಡಿದೆ, ಉಳಿದಂತೆ ಸುಂದರ ಕೆತ್ತನೆಯಿದೆ. ಮಣಿಹಾರ, ಕಾಲ್ಗಡಗ, ಗಂಟೆಯ ಹಾರ, ಮುಕುಟ, ಕೀರಿಟ ಅಲಂಕಾರವಿದೆ. ಮೇಲೆ ಪದ್ಮದ ಭುವನೇಶ್ವರಿಯ ಚಾವಣಿಯಿದೆ. ದೇವಾಲಯವು ಮೂರು ದ್ವಾರವನ್ನು ಹೊಂದಿದೆ. ಶಾಲಾ-ಕೂಟ ಮಾದರಿನ್ನು ಹೊಲುತ್ತದೆ. ಕಕ್ಷಾಸನದ ಹಿಂದೆ ೧೯೬ ಶಿಲ್ಪಗಳ ಕೆತ್ತನೆಯಲ್ಲಿ ವಾದ್ಯ ಮೇಳ, ಶಿಲಾಬಾಲಿಕೆ, ನರ್ತನ ಶಿಲ್ಪಗಳು, ವಿವಿಧ ನೃತ್ಯದ ಭಂಗಿಗಳು ಇರುವ ಶಿಲ್ಪಗಳು ಕಾಣಬಹುದು. ದೇವಾಲಯದ ಶಿಖರದ ಮೇಲಿನ ಛಾವಣಿಯಲ್ಲಿ ನಾರಾಯಣ, ನಟರಾಜ, ವರಹಾವತಾರ, ಸೂರ್ಯ, ಇತ್ಯಾದಿ ಶಿಲ್ಪಗಳ ಕೆತ್ತನೆ ಇದೆ.

ಬಲಭಾಗದ ಗರ್ಭಗೃಹದ ಶಿಖರವು ಐದು ಅಂತಸ್ತು, ಶಾಲಾ, ಕೂಟ, ಶಿವನ ಶಿಲ್ಪಗಳು, ಭೈರವ, ಕೈಲಾಸನಾಥ, ಕಾಳಮುಖ ಯತಿ, ನಟರಾಜ, ಶಿವ-ಪಾರ್ವತಿಯರ ಶಿಲ್ಪಗಳಿವೆ. ಅದರ ಮುಂದೆ ಸುಖಾನಾಸಿಯಲ್ಲಿ ಹೊಯ್ಸಳ ಲಾಂಛನವಿದೆ. ಎಡಭಾಗದ ಗರ್ಭಗೃಹದ ಶಿಖರವು ಐದು ಅಂತಸ್ತಿನಿಂದ ಕೂಡಿದ್ದು, ಶಾಲಾ, ಕೂಟ, ಉಗ್ರನರಸಿಂಹ, ನಾರಾಯಣ, ನಟರಾಜ, ವರಹಾವತಾರ ಶಿಲ್ಪಗಳಿವೆ. ಮಧ್ಯದ ಗರ್ಭಗೃಹ ಶಿಖರವು ಏಳು ಅಂತಸ್ತನ್ನು ಹೊಂದಿದ್ದು, ವಿಮಾನ ಮಾದರಿಯಲ್ಲಿದೆ. ಕಳಸ, ಸ್ತೂಪಿಯನ್ನು ಒಳಗೊಂಡಂತೆ ಶಾಲಾ, ಕೂಟವಿದೆ. ಕೆಳಗೆ ದೇವಕೋಷ್ಠಕಗಳಿವೆ. ಸುಖನಾಸಿಯಲ್ಲಿ ಹೊಯ್ಸಳರ ಲಾಂಛನವಿದೆ. ದೇವಾಲಯವು ೨ ಅಡಿ ಅಧಿಷ್ಠಾನದ ಮೇಲೆ ಇದ್ದು ನಕ್ಷತ್ರಾಕಾರದ ತಳವಿನ್ಯಾಸವಿದೆ. ದೇವಾಲಯದ ಮುಂದೆ ೨೬ ಕಂಬಗಳನ್ನು ಒಳಗೊಂಡ ರಾಯ ಮಂಟಪವನ್ನು ಹೊಲುತ್ತದೆ.

ಸಂಖ್ಯೆ: ೧೭ ಊರು: ಬಳ್ಳಿಗಾವಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಆಂಜನೇಯ ದೇವಾಲಯದ ಹಿಂಭಾಗ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ತ್ರಿಪುರಾಂತಕ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಶಿರಾಳಕೊಪ್ಪದಿಂದ ಚಿಕ್ಕೇರೂರು ಹೋಗುವ ಮಾರ್ಗದ ಮದ್ಯೆ ಬಳ್ಳಿಗಾವಿಯಲ್ಲಿ ಶ್ರೀ ಆಂಜನೇಯ ಸ್ವಾಮಿ ದೇವಾಲಯವಿದ್ದು, ಅದರ ಹಿಂಭಾಗದಲ್ಲಿ ತ್ರಿಪುರಾಂತಕ ದೇವಾಲಯವಿದೆ. ಇದು ಕ್ರಿ.ಶ.೧೦೭೦ರಲ್ಲಿ ನಿರ್ಮಾಣವಾಗಿದೆ. ಈ ದೇಗುಲವು ಪ್ರಸ್ತುತ ಎರಡು ಗರ್ಭಗುಡಿಯನ್ನು ಹೊಂದಿದೆ. ಒಳಗೆ ಇರುವ ದೇವಾಲಯದ ಎಡಗಡೆಯ ಗರ್ಭಗೃಹದ ಎಡಗಡೆ ಇನ್ನೊಂದು ಗರ್ಭಗೃಹವಿದ್ದು ಅಧಿಷ್ಠಾನ ಮಾತ್ರ ಉಳಿದಿದೆ. ಅವಶೇಷದ ಗರ್ಭಗೃಹದ ಮುಂದೆ ಕುಳಿತಿರುವ ನಂದಿಯ ಮೂರ್ತಿ ಇದೆ. ಮುಖ್ಯ

ಗರ್ಭಗೃಹವು ಅದರ ಮುಂದೆ ಅಂತರಾಳವಿದ್ದು, ಒಳಗೆ ನಕ್ಷತ್ರಾಕಾರದ ಮೇಲ್ಛಾವಣಿ ಇದೆ. ಬಾಗಿಲುವಾಡದ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಕೆಳಗೆ ಕುಬ್ಜ ಮೂರ್ತಿಗಳು ಸುರಳಿಯಲ್ಲಿ ಕಾಣಬಹುದು. ಜೊತೆಗೆ ಸಿಂಹ, ಆನೆ, ಕುದುರೆ, ತಲೆಯನ್ನು ಹೊಂದಿದ ಶಿಲ್ಪಗಳಿವೆ. ಕೆಳಗೆ ದ್ವಾರಪಾಲಕರ, ನರ್ತಕಿಯರ, ಕುಂಭ ಮೇಲೆ ಕಂಬ, ಆಭರಣದ ಅಲಂಕಾರವಿದೆ. ಅಂತರಾಳದ ಬಾಗಿಲುವಾಡದ ಅಕ್ಕಪಕ್ಕದಲ್ಲಿ ಜಾಲಂದ್ರಗಳಲ್ಲಿ ನಾಗ-ನಾಗಿಣಿಯರ ಸುರಳಿಯ ಶಿಲ್ಪವಿದೆ. ಬಾಗಿಲುವಾಡದ ಮೇಲೆ ಬ್ರಹ್ಮ, ವಿಷ್ಣು ಶಿವ ಹಾಗೂ ಪರಿವಾರ ದೇವತೆಯರ ಮೂರ್ತಿಗಳಿವೆ. ಬಾಗಿಲು ತೋಳಿನಲ್ಲಿ ಕುಂಭದ ಮೇಲೆ ಕಂಬವಿದೆ ಮತ್ತು ನರ್ತಕಿಯರ ಶಿಲ್ಪ, ಮಕರತೋರಣ ಶಿಲ್ಪ, ನಂದಿಯ ಶಿಲ್ಪಗಳಿವೆ. ಬಾಗಿಲುವಾಡದ ಅಕ್ಕಪಕ್ಕಗಳಲ್ಲಿ ವಿಷ್ಣುವರ್ಧನ ಮಡದಿ ಶಾಂತಲೆಯನ್ನು ಹೊಲುವ ಸೌಂದರ್ಯವತಿಯ ನರ್ತನ ಶಿಲ್ಪಗಳಿವೆ. ಹಾಗೆ ಅಕ್ಕಪಕ್ಕಗಳಲ್ಲಿ ದೇವಕೊಷ್ಠಕಗಳಲ್ಲಿ ವಿಷ್ಣುವಿನ ಮೂರ್ತಿ ಇನ್ನೊಂದರಲ್ಲಿ ಖಾಲಿ ಪೀಠವಿದೆ.

ನವರಂಗದಲ್ಲಿ ನಾಲ್ಕು ಕಂಬಗಳಿಂದ ಕೂಡಿದ ಮೆಲ್ಛಾವಣಿಯ ಕಟ್ಟಡವಿದೆ. ಗಂಟೆಯಾಕಾರದ ಕಂಬವಿದ್ದು, ಎಲೆ, ಬಳ್ಳಿ, ಅಲಂಕಾರವಿದೆ. ಕಂಬಗಳ ಕೆಳಭಾಗಗಳಲ್ಲಿ ನಟರಾಜ, ವಿಷ್ಣು, ಕಾಳಾಮುಖ ಮುನಿ, ಸರ್ಪದ ಮೇಲೆ ಕುಳಿತ ಜಪದಾರಿ, ಷಣ್ಮುಖ, ನಾರಾಯಣ, ಲಕ್ಷ್ಮಿ, ನಂದಿಶ್ವರ, ನಟನೆಯ ಭಂಗಿ, ವಾದ್ಯದಾರಿ, ಕುಬ್ಜ ಶಿಲ್ಪಗಳಿವೆ. ಮೇಲ್ಛಾವಣಿ ನಕ್ಷತ್ರಾಕಾರವಿದೆ. ನವರಂಗದ ಪಕ್ಕದಲ್ಲಿ ಕುಳಿತ ನಂದಿಯ ಶಿಲ್ಪವಿದ್ದು, ಸುಮಾರು ೬ ಅಡಿ ಎತ್ತರ ಹೊಂದಿದೆ. ನವರಂಗದಿಂದ ಬಲಕ್ಕೆ ಹೊರಗಿನ ಬಾಗಿಲುವಾಡದಲ್ಲಿ ಕುಬ್ಜ ಮೂರ್ತಿ, ನಾಗ-ನಾಗಿಣಿಯರ ಸುರಳಿ, ಸಿಂಹ ಆಕೃತಿ ವಿವಿಧ ಶಿಲ್ಪಗಳು, ಕುಬ್ಜ ವಾದ್ಯ ಶಿಲ್ಪಗಳು ಕಂಡು ಬರುತ್ತವೆ. ಮೇಲೆ ಗಜಲಕ್ಷ್ಮಿಯ ಮೂರ್ತಿ, ಕೆಳಗೆ ದ್ವಾರಪಾಲಕರು, ವಾದ್ಯಗಾರರು, ನರ್ತಕಿಯರು, ಶಿಲಾಬಾಲಿಕೆಯರ ಮೂರ್ತಿಗಳಿವೆ. ಹಾಗೆ ಅಕ್ಕಪಕ್ಕದಲ್ಲಿ ನಾಲ್ಕರಂತೆ ಪಟ್ಟಿಯಲ್ಲಿ ಒಟ್ಟು ೧೬ ಚಿತ್ರಗಳಲ್ಲಿ ವಾದ್ಯ, ನರ್ತಕಿಯರ ಶಿಲ್ಪಗಳು ಕಾಣಬಹುದು.

ಬಲಗಡೆಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮೇಲೆ ನಕ್ಷತ್ರಾಕಾರ ಛಾವಣಿ ಇದೆ. ಬಾಗಿಲುವಾಡ ಮೇಲೆ ಗಜಲಕ್ಷ್ಮಿ ಕೆಳಗೆ ನರ್ತಕಿಯರ, ಕುಬ್ಜ ಶಿಲ್ಪ, ಸಿಂಹ ಆಕೃತಿ, ನಾಗ-ನಾಗಿಣಿ ಶಿಲ್ಪಗಳು, ವಾದ್ಯಗಾರ ಶಿಲ್ಪಗಳಿವೆ. ಮುಂದೆ ತೆರೆದ ಮುಖ ಮಂಟಪವಿದ್ದು, ೨೮ ಗೋಡೆಗೆ ಸೇರಿಕೊಂಡ ಕಂಬಗಳು, ೨ ದುಂಡನೆಯ ಕಂಬಗಳು, ೮ ನಕ್ಷತ್ರಾಕಾರ ಮತ್ತು ಕೆಳಗೆ ಚೌಕಕಾರದ ಕಂಬಗಳು, ೬ ಗಂಟೆಯಾಕಾರ, ಎಲೆ, ಬಳ್ಳಿ ಅಲಂಕಾರದ ಕಂಬಗಳು, ೪ ನಕ್ಷತ್ರಾಕಾರ, ಚೌಕ, ಗಂಟೆಯಾಕಾರದ ಕಂಬಗಳು, ೪ ಮದ್ಯೆದಲ್ಲಿ ಸುಂದರ ಗಂಟೆಯಾಕಾರದ ಕಂಬಗಳು ಇದೆ. ಮದ್ಯದ ಕಂಬಗಳ ಮೇಲೆ ಕುಬ್ಜ ಮೂರ್ತಿಗಳು ಇವೆ. ಜೊತೆಗೆ ಎಲೆ ಬಳ್ಳಿಯ ಅಲಂಕಾರಗಳಿವೆ. ಛಾವಣಿಯೂ ನಕ್ಷತ್ರಾಕಾರವಿದ್ದು, ಪದ್ಮವು ಅರಳುವ ಅಲಂಕಾರವನ್ನು ಕಾಣಬಹುದು. ಅಷ್ಟದಿಕ್ಪಾಲಕರು,

ಪರಿವಾರ ದೇವತೆಯರು, ಅವರ ವಾಹನ, ದ್ವಜ ಹಿಡಿದ ವ್ಯಕ್ತಿ ಕೂಡ ಶಿಲ್ಪಗಳಲ್ಲಿವೆ. ರಾಮಾಯಣ, ಮಹಾಭಾರತದ ದೃಶ್ಯವಳಿಗಳು ಕಂಡುಬರುತ್ತವೆ. ಕುಬ್ಜ ದೇವತೆಯ ಪಟ್ಟಿಕೆಗಳು ಮೂಲೆಗಳಲ್ಲಿವೆ. ದೇವಾಲಯಕ್ಕೆ ಮೂರು ಕಡೆಯಿಂದ ದ್ವಾರದ ಮೆಟ್ಟಿಲುಗಳಿವೆ. ಈ ದೇಗುಲ ೪ ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲ್ಪಟ್ಟಿದೆ. ಬಿತ್ತಿಯ ಕೆಳಭಾಗ ಹಾಗೂ ಆಸನದ ಹಿಂಭಾಗದಲ್ಲಿ ಕೆಲವು ಚಿತ್ರಗಳ ಪಟ್ಟಿಕೆ ಇದೆ. ವಾಲಿ–ಸುಗ್ರಿವ ಕಥೆ, ಸಮುದ್ರ ಮಂಥನ ಕಥೆ, ವಿವಿಧ ಮದನಿಕೆರ ಶಿಲ್ಪಗಳು, ವ್ಯಕ್ತಿ–ವ್ಯಕ್ತಿ, ವ್ಯಕ್ತಿ–ಪ್ರಾಣಿಗಳ ಜೊತೆಗಿನ ಮಿಥುನ ಶಿಲ್ಪಗಳು, ಮೊಸಳೆ–ಮಂಗ, ಟಗರು–ನರಿ, ಬಕ ಮತ್ತು ಏಡಿ, ಟಗರುಗಳ ಹೋರಾಟ, ಆಮೆ–ಹಂಸ, ಇತ್ಯಾದಿ ಪಂಚತಂತ್ರ ಕಥೆಗಳ ದೃಶ್ಯಾವಳಿಗಳು, ಕುಬ್ಜ ಶಿಲ್ಪಗಳು, ವಾದ್ಯಗಾರರು ಮತ್ತು ನರ್ತಕಿಯರ ಶಿಲ್ಪಗಳು ಕಾಣಬಹುದು.

ತ್ರಿಪುರಾಂತಕ ದೇವಾಲಯದ ಆವರಣದಲ್ಲಿ ಒಂದು ಮಂಟಪವಿದೆ. ೪ ಅಡಿ ಅಧಿಷ್ಠಾನದ ಮೇಲೆ ಈ ಸ್ಮಾರಕವಿದ್ದು, ಮುಂಭಾಗದಲ್ಲಿ ೬ ಕಂಬಗಳಿಂದ ಕೂಡಿದೆ. ಬಾಗಿಲುವಾಡದಲ್ಲಿ ಲಕ್ಷ್ಮಿಯ ಸಾಧಾರಣ ಅಲಂಕಾರವಿದೆ. ಗರ್ಭಗೃಹ, ಪ್ರದಕ್ಷಣ ಪಥ, ಅದರ ಮುಂದೆ ೩೬ ಕಂಬಗಳ ಮಂಟಪ ನವರಂಗ ಸೇರಿದಂತೆ ಇದೆ. ಮಧ್ಯದ ೬ ಕಂಬಗಳು ನಕ್ಷತ್ರಾಕಾರವಿದ್ದು, ಉಳಿದ ಕಂಬಗಳು ಚೌಕಾಕೃತಿ, ಗೋಡೆಗಂಬಗಳು ಇವೆ.

ಸಂಖ್ಯೆ: ೧೮ ಊರು: ಬಳ್ಳಿಗಾವಿ

ರಾಜ/ವಂಶ: ಕಲ್ಯಾಣ ಚಾಳುಕ್ಯ ಸ್ಥಳ: ವೀರಭದ್ರ ದೇವಾಲಯದ ಪಕ್ಕ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಸೋಮೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦–೧೧ನೆಯ ಶತಮಾನ

ಶ್ರೀ ವೀರಭದ್ರ ದೇವಾಲಯದ ಎಡಭಾಗಕ್ಕೆ ಸೋಮೇಶ್ವರ ದೇವಾಲಯವಿದೆ. ಇದು ಕ್ರಿ.ಶ ೧೦೫೦ ರಲ್ಲಿ ತ್ರೈಲೋಕ್ಯಮಲ್ಲ, ಆಹವಮಲ್ಲನ ಕಾಲದಲ್ಲಿ ಬಳ್ಳಿಗಾವಿಯ ಒಬ್ಬ ಶ್ರೇಷ್ಠ ವ್ಯವಹಾರಿ ಸೋವಿಸೆಟ್ಟಿ ನಿರ್ಮಾಣ ಮಾಡಿ ಅಭಿನವ ಸೋಮೇಶ್ವರನ ಹೆಸರಿನಲ್ಲಿ ಲಿಂಗವನ್ನು ಕೆತ್ತಿಸಿದ್ದಾನೆ. ದೇವಾಲಯ ಮುಂದೆ ಕ್ರಿ.ಶ ೧೧೫೦ ರಲ್ಲಿ ಪಂಚಮಠದಾಚಾರ್ಯರ ಸಮ್ಮುಖದಲ್ಲಿ ಧರ್ಮ ನಿಯಮದಂತೆ ಮಾಯಸೆಟ್ಟಿಯ ಆಸ್ತಿಯನ್ನು ದೇವಾಲಯಕ್ಕೆ ಸೇರಿಸಿ ಗೌರೇಶ್ವರ ದೇವಾಲಯ ಎಂದು ಪುನರ್ ನಾಮಕರಣ ಮಾಡಲಾಗಿದೆ. ದೇವಾಲಯವು ಗರ್ಭಗೃಹ, ಅಂತರಾಳ, ನವರಂಗದಿಂದ ಕೂಡಿದೆ. ೪ ಅಡಿಯ ಅಧಿಷ್ಠಾನದ ಮೇಲೆ ದೇಗುಲವಿದ್ದು, ಭಿತ್ತಿಯ ಭಾಗದಲ್ಲಿ ಹೂವಿನ ಪಟ್ಟಿಕೆಗಳು ಸರ್ವೇಸಮಾನ್ಯವಾಗಿವೆ. ಗರ್ಭಗೃಹದಲ್ಲಿ ಸುಮಾರು ೪ ಅಡಿಯ ಲಿಂಗವಿದ್ದು,

ಮೇಲ್ಛಾವಣಿ ನಕ್ಷತ್ರಾಕಾರವಿದೆ. ಮುಂದೆ ಅಂತರಾಳವಿದ್ದು ಅದರ ಬಾಗಿಲುವಾಡದಲ್ಲಿ ಗಜಲಕ್ಷ್ಮಿ, ನಂದಿ ಮೂರ್ತಿಗಳಿವೆ. ಪಕ್ಕದಲ್ಲಿ ಜಾಲಂದ್ರದಲ್ಲಿ ಹೂವಿನ ಅಲಂಕಾರವಿರುವ ಪಟ್ಟಿಕೆಗಳಿವೆ. ಬಾಗಿಲುವಾಡದ ಅಕ್ಕ ಪಕ್ಕದಲ್ಲಿ ದೇವಕೊಷ್ಠಕವಿದ್ದು, ಗಣೇಶನ ಮೂರ್ತಿ ಇದೆ. ನವರಂಗವು ಗೋಡೆ ಕಂಬಗಳು ಸೇರಿದಂತೆ ೨೦ ಕಂಬಗಳಿದ್ದು, ಮಧ್ಯದ ೪ ಕಂಬಗಳು ಗಂಟೆಯಾಲಂಕಾರ, ಎಲೆ, ಬಳ್ಳಿ ಮತ್ತು ಶಾಸನವನ್ನು ಹೊಂದಿದೆ. ಮೇಲ್ಛಾವಣಿಯೂ ನಕ್ಷತ್ರಾಕಾರದಲ್ಲಿದ್ದು, ಪದ್ಮ ಅರಳುವ ಅಲಂಕಾರವನ್ನು ಹೊಂದಿದೆ. ದೇಗುಲಕ್ಕೆ ಆನೆಯ ಶಿಲ್ಪದಿಂದ ಕೂಡಿದ ಮೆಟ್ಟಿಲುಗಳಿವೆ. ಹೊರಭಾಗದಲ್ಲಿ ಜಾಲಂದ್ರವು ಸಾಧಾರಣ ಪಟ್ಟಿಕೆಗಳಲ್ಲಿ ಕಂಡುಬರುತ್ತವೆ.

ಸಂಖ್ಯೆ: ೧೯ ಊರು: ಬಳ್ಳಿಗಾವಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಗಂಡಬೇರುಂಡ ಸ್ಥಂಭದ ಎಡಕ್ಕೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ:ತೋಟದ ವೀರಭದ್ರ ದೇವಾಲಯ

ಸ್ಥಿತಿ: ಮಧ್ಯಮ(ಹೊಸದು) ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ದೇವಾಲಯವು ಬಳ್ಳಿಗಾವಿಯಲ್ಲಿ ಆನವಟ್ಟಿ ರಸ್ತೆಯ ಬಲಭಾಗದಲ್ಲಿ ಒಳಗೆ ಹೊಂದರೆ ತೋಟದ ವೀರಭದ್ರೇಶ್ವರ ದೇವಾಲಯವಿದೆ. ಗರ್ಭಗೃಹದ, ಅಂತರಾಳ ಹೊರಭಾಗ ಸಿಮೆಂಟಿನ ಕಟ್ಟಡವಿದೆ. ಗರ್ಭಗೃಹದಲ್ಲಿ ಪೀಠದ ಮೇಲೆ ವೀರಭದ್ರಮೂರ್ತಿ ಇದೆ. ಆದರೆ ಇಲ್ಲಿ ಶಿವಲಿಂಗದ ಪೀಠದ ಮೇಲೆ ಈ ಮೂರ್ತಿ ಹೊಸದಾಗಿದೆ. ಮೇಲ್ಛಾವಣಿ ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಬಾಗಿಲುವಾಡ ಗಜಲಕ್ಷ್ಮಿ ಪಂಚಶಾಖೆಗಳನ್ನು ಹೊಂದಿದೆ. ಅಂತರಾಳ ನಾಲ್ಕು ಕಂಬಗಳಿದ್ದು, ಎರಡು ಕಂಬಗೋಡೆಗೆ ಸೇರಿವೆ. ಮೆಲೆ ಪದ್ಮದ ಭುವನೇಶ್ವರಿ ಇದೆ. ದೇವಾಲಯವು ೩ ಅಡಿ ಅಧಿಷ್ಠಾನದ ಮೇಲಿದ್ದು ಗರ್ಭಗೃಹದ ಭಿತ್ತಯ ಭಾಗದಲ್ಲಿ ಮಕರಕುಂಭಗಳ ಅಲಂಕಾರವಿದೆ. ಅದರ ಆವರಣದಲ್ಲಿ ಶಿವಲಿಂಗ, ಗಣೇಶ, ನಂದಿಯ ಶಿಲ್ಪಗಳಿವೆ.

ಸಂಖ್ಯೆ: ೨೦ ಊರು: ಬಳ್ಳಿಗಾವಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಗ್ರಾಮದ ಹೊರಗೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಕಲ್ಲೇಶ್ವರ ದೇವಾಲಯ

ಸ್ಥಿತಿ: ಮಧ್ಯಮ(ಹೊಸದು) ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ದೇವಾಲಯವು ಗರ್ಭಗೃಹ, ಅಂತರಾಳ, ನವರಂಗದಿಂದ ಕೂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮೇಲೆ ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಅದರ ಬಾಗಿಲುವಾಡದಲ್ಲಿ ಗಜಲಕ್ಷ್ಮಿ, ಪಂಚ ಶಾಖೆ, ರತ್ನ, ಲತಾ, ಸ್ಥಂಭದಲ್ಲಿ ಪದ್ಮಗಳಿವೆ. ಕೆಳಗೆ ದ್ವಾರ ಪಾಲಕರು ಪಕ್ಕದಲ್ಲಿ ಜಾಲಂದ್ರ, ದೇವ ಕೊಷ್ಠಕಗಳಿವೆ. ನವರಂಗದಲ್ಲಿ ಮಧ್ಯ ನಾಲ್ಕು ಗಂಟೆಯಾಕಾರದ ಕಂಬಗಳು, ಮೇಲೆ ಛಾವಣಿಯು ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಅಂತರಾಳದಲ್ಲಿ ನಂದಿ ಮೂರ್ತಿ ಇದೆ. ದೇವಾಲಯವು ಮೂರು ಅಡಿ ಅಧಿಷ್ಠಾನದ ಮೆಲೆ ಇದ್ದು, ಅದರ ಚಿತ್ರದಲ್ಲಿ ಪದ್ಮದ ಅಲಂಕಾರಿಕ ಪಟ್ಟಿಕೆ ಮತ್ತು ಮಧ್ಯೆ ಶಿಲಾಬಾಲಕಿಯ ಶಿಲ್ಪಗಳಿವೆ. ದೇವಾಲಯದ ಬಲಭಾಗಕ್ಕೆ ಭಗ್ನಗೊಂಡ ನಂದಿ ನಾಗ- ನಾಗಿಣಿಯರ ಶಿಲ್ಪಗಳಿವೆ.

ಸಂಖ್ಯೆ: ೨೧ ಊರು: ಬಳ್ಳಿಗಾವಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಕೇದಾರೇಶ್ವರ ದೇವಾಲಯ ಪಕ್ಕ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಕಲ್ಲೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಬಳ್ಳಿಗಾವಿಯ ಕೇದಾರೇಶ್ವರ ದೇವಾಲಯದ ಎಡಭಾಗ ಪ್ರಭುದೇವರ ಮಂಟಪವು ದೇವಾಲಯ ರೂಪದಲ್ಲಿದೆ. ಇದು ೧೨ನೇ ಶತಮಾನದ ಶಿಕಾರಿಪುರ ಭಾಗದ ವಚನಾಗಾರ ಅಲ್ಲಮ ಪ್ರಭುವಿನ ಹೆಸರಿನಲ್ಲಿ ಕಟ್ಟಿಸಿದ ದೇವಾಲಯವಾಗಿದ್ದು ತ್ರಿಕೂಟ ದೇವಾಲಯವಾಗಿದೆ. ದೇವಾಲಯಕ್ಕೆ ಮೂರು ಕಡೆ ದ್ವಾರಬಾಗಿಲು ಇದ್ದು ಮೇಲೆ ಗಾರೆಯಿಂದ ಕೂಡಿದೆ. ಮೂರು ಗರ್ಭಗೃಹಗಳಿದ್ದು, ಗರ್ಭಗೃಹಗಳಿಗೆ ಅಂತರಾಳಗಳು ಪ್ರತ್ಯೇಕವಾಗಿದ್ದು, ನವರಂಗ ಒಂದೇ ಇದೆ. ಮುಂದೆ ತೆರೆದ ಮುಖ ಮಂಟಪವಿದೆ.

ಮಧ್ಯದ ಗರ್ಭಗೃಹದಲ್ಲಿ ಪ್ರಭುವಿನ ಹೆಸರಿನ ಪ್ರಭುಲಿಂಗೇಶ್ವರ ಇದೆ. ಮೂರು ಅಡಿ ಪೀಠ ಸೇರಿದಂತೆ ಲಿಂಗ ಇದೆ. ಮೇಲ್ಛಾವಣಿ ನಕ್ಷತ್ರಾಕಾರದ ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಬಾಗಿಲುವಾಡದಲ್ಲಿ ಶಾಖೆ ಇದ್ದು, ಗಜಲಕ್ಷ್ಮಿಯ ಶಿಲ್ಪವಿದೆ. ಎಡಭಾಗದ ಗರ್ಭಗೃಹದ ಪೀಠದಲ್ಲಿ ನಾಲ್ಕು ಅಡಿ ಎತ್ತರದ ವಿಷ್ಣುವಿನ ಮೂರ್ತಿ, ಮೇಲೆ ಪದ್ಮದಿಂದ ಕೂಡಿದ ಭುವನೇಶ್ವರ, ಬಾಗಿಲುವಾಡದಲ್ಲಿ ಶಾಖೆ ಮತ್ತು ಗಜಲಕ್ಷ್ಮಿ ಶಿಲ್ಪವಿದೆ. ಬಲಭಾಗದ ಗರ್ಭಗೃಹದ ಪೀಠದಲ್ಲಿ ಶಿವಲಿಂಗವಿದ್ದು, ಇದನ್ನು ಬ್ರಹ್ಮ ಎಂದು ಕರೆಯುತ್ತಾರೆ. ಆದರೆ ಇದು ಶಿವಲಿಂಗದ ಮಾದರಿಯಾಗಿದ್ದು, ಪೀಠದಲ್ಲಿ ಪದ್ಮದ ದಳಗಳಿಲ್ಲ. ಇದು ಮೂರು ಅಡಿ ಶಿವಲಿಂಗ ಪೀಠ ಸೇರಿ ಇದೆ. ಪೀಠ ಬಲ ಹರಿವಿದೆ.

ಹಾಗಾಗಿ ಇದನ್ನು ಬ್ರಹ್ಮದೇವರು ಎಂದು ಕರೆಯುತ್ತಾರೆ. ಮೇಲೆ ಪದ್ಮದ ಭುವನೇಶ್ವರಿ ಇದೆ. ಬಾಗಿಲುವಾಡದಲ್ಲಿ ಶಾಖೆ, ಗಜಲಕ್ಷ್ಮಿಯ ಶಿಲ್ಪವಿದೆ. ಮೂರು ಗರ್ಭಗೃಹಕ್ಕೂ ಪ್ರತೇಕ ಅಂತರಾಳವಿದ್ದು, ಸಾಧರಣವಾಗಿದೆ.

ನವರಂಗ ಬಾಗಿಲುವಾಡದಲ್ಲಿ ಗಜಲಕ್ಷ್ಮಿ, ಅದರ ಮೇಲೆ ದೇವಲೋಕವಿದ್ದು, ಬ್ರಹ್ಮ ವಿಷ್ಣು, ಮಹೇಶ್ವರ, ಗಣೇಶ, ಷಣ್ಮುಖ ನಂದಿ, ಮತ್ತು ಪರಿವಾರ ದೇವತೆಗಳ ಶಿಲ್ಪಗಳಿವೆ. ಪಂಚಶಾಖೆಯ ಬಾಗಿಲುವಾಡ, ಕೆಳಗೆ ದ್ವಾರಪಾಲಕರು, ಅಕ್ಕಪಕ್ಕದಲ್ಲಿ ಪದ್ಮದಳದ ಚೌಕ ಜಾಲಂದ್ರ ಹಾಗೂ ಖಾಲಿ ಇರುವ ದೇವಕೋಷ್ಠಕದ ಪೀಠ ಮಾತ್ರವಿದೆ. ಅದರ ಮೇಲೆ ಶಿಖರವಿದೆ. ಮುಖಮಂಟಪವು ಮಧ್ಯದ ೪ ಕಂಬ, ಕಕ್ಷಾಸನ ಮೇಲೆ ಇರುವ ೧೪ ಕಂಬಗಳಿಂದ ಕೂಡಿದೆ. ಕಂಬಗಳು ಗಂಟೆಯಾಕಾರ, ಚೌಕ ಅಕಾರದಲ್ಲಿದೆ. ಪೀಠ, ಪಾದ, ದಿಂಡು, ಚೌಕ, ಕಳಸ ಬೋದಿಗೆ ಭಾಗಗಳನ್ನು ಹೊಂದಿದೆ. ಮಣಿಹಾರ, ಎಲೆ, ಬಳ್ಳಿ ಅಲಂಕಾರವಿದೆ. ಕಕ್ಷಾಸನ ಹಿಂದೆ ಪದ್ಮ ದಳದ ಪಟ್ಟಿಯ ಕೆತ್ತನೆ ಇದೆ.

ಸಂಖ್ಯೆ: ೨೨ ಊರು: ಬಳ್ಳಿಗಾವಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ವೀರಭದ್ರ ದೇವಾಲಯ ಪಕ್ಕ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಸೋಮೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ವೀರಭದ್ರ ದೇವಾಲಯದ ಎಡಭಾಗಕ್ಕೆ ಸೋಮೇಶ್ವರ ದೇವಾಲಯವಿದೆ. ಇದು ಕ್ರಿ.ಶ.೧೦೫೦ರಲ್ಲಿ ತ್ರೈಲೋಕ್ಯಮಲ್ಲ ಆಹವಮಲ್ಲನ ಕಾಲದಲ್ಲಿ ಬಳ್ಳಿಗಾವಿಯ ಒಬ್ಬ ಶ್ರೇಷ್ಠ ವ್ಯವಹಾರಿ ಸೋವಿಸೆಟ್ಟಿ ನಿರ್ಮಾಣ ಮಾಡಿ ಅಭಿನವ ಸೋಮೇಶ್ವರನ ಹೆಸರಿನಲ್ಲಿ ಲಿಂಗವನ್ನು ಕೆತ್ತಿಸಿದ್ದಾನೆ.(ಆನಂತರಂಗಾಚಾರ್ ೧೯೬೮,ಪುಟ.೨೦) ಈ ದೇವಾಲಯ ಗರ್ಭಗೃಹ, ನವರಂಗ ಒಳಗೊಂಡಿದೆ. ದೇವಾಲಯ ಮುಂದೆ ಕ್ರಿ.ಶ.೧೦೫೦ರಲ್ಲಿ ಪಂಚಮಠದಾಚಾರ್ಯರ ಸಮ್ಮುಖದಲ್ಲಿ ಧರ್ಮ ನಿಯಮದಂತೆ ಮಾಯಸೆಟ್ಟಿಯ ಆಸ್ತಿಯನ್ನು ದೇವಾಲಯಕ್ಕೆ ಸೇರಿಸಿ ಗೌರೇಶ್ವರ ದೇವಾಲಯ ಎಂದು ಪುನರ್ ನಾಮಕರಣ ಮಾಡಲಾಗಿದೆ.

ದೇವಾಲಯವು ನಾಲ್ಕು ಅಡಿಯ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ೪ ಅಡಿಯ ಎತ್ತರದ ಶಿವಲಿಂಗವಿದ್ದು, ಸಾಧಾರಣವಾಗಿ ನಕ್ಷತ್ರಾಕಾರದ ಮೇಲ್ಛಾವಣಿ, ಬಾಗಿಲುವಾಡವು ಗಜಲಕ್ಷ್ಮಿಯನ್ನು ಹೊಂದಿದೆ. ಅದರ ಪಕ್ಕದಲ್ಲಿ ಜಾಲಂದ್ರದಲ್ಲಿ ಪಟ್ಟಿಕೆಯ ಪದ್ಮವಿದೆ. ದೇವಕೋಷ್ಠಕದಲ್ಲಿ ಗಣೇಶ ಮೂರ್ತಿ ಇದೆ. ನವರಂಗವು ನಾಲ್ಕು ಮಧ್ಯದ ಕಂಬಗಳು

ಸೇರಿದಂತೆ ಮೇಲೆ ನಕ್ಷತ್ರಾಕಾರದ ಛಾವಣಿಯಿದೆ. ಕಂಬವು ಗಂಟೆಯಾಕಾರ, ಎಲೆ ಬಳ್ಳಿ ಅಲಂಕಾರವಿದೆ. ೧೨ ಗೋಡೆ ಕಂಬಗಳಿವೆ. ಕಂಬದಲ್ಲಿ ಶಾಸನವಿದೆ. ಹೊರಭಾಗದ ಬಾಗಿಲುವಾಡದಲ್ಲಿ ಗಜಲಕ್ಷ್ಮಿ, ಪಕ್ಕದಲ್ಲಿ ಜಾಲಂಧ್ರ, ಮೆಟ್ಟಿಲುಗಳಿವೆ.

ಸಂಖ್ಯೆ: ೨೩ ಊರು: ಬಳ್ಳಿಗಾವಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಅರ್ದ್ರೆ ಮಠ ಹಿಂಭಾಗ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ನಂದಿಕೇಶ್ವರ ದೇವಸ್ಥಾನ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಅಮೃತ ಸರೋವರದ ಪಕ್ಕದಲ್ಲಿ ಬಸವಣ್ಣನ ದೇವಸ್ಥಾನ ಅವಶೇಷವಿದೆ. ಹಿಂದೆ ಇದು ದೇವಾಲಯವಾಗಿದ್ದಕ್ಕೆ ಆಧಾರಗಳು ಸಿಗುತ್ತವೆ. ಇದನ್ನು ಮೂಲಸ್ಥಾನದ ನಂದಿಕೇಶ್ವರನ ದೇವಾಲಯವೆಂದು ಶಾಸನಗಳಲ್ಲಿ ಉಲ್ಲೇಖವಿದೆ. ಇದನ್ನು ಕ್ರಿ.ಶ. ೧೦೧೯ ರಲ್ಲಿ ಚಾಲುಕ್ಯರ ಜಯಸಿಂಹನ ಕಾಲದಲ್ಲಿ ಬನವಾಸೆಯ ಮಹಾ ಮಾಂಡಲೇಶ್ವರ ಕುಂದರಾಮರಸನು ಕಟ್ಟಿಸಿದ್ದಾನೆ. ಇದು ಗರ್ಭಗುಡಿಯಿದ್ದು, ಲಿಂಗವಿದೆ. ಅದರ ಮುಂದೆ ನವರಂಗ ಹಾಳಾದ ಮುಖಮಂಟಪದಲ್ಲಿ ನಂದಿಯ ವಿಗ್ರಹವಿದೆ. ಇದು ಗಂಟೆಯಾಲಾಂಕೃತ ಮೂರ್ತಿಯಾಗಿದೆ. ಕುಳಿತ ಆಸನದಲ್ಲಿದ್ದು, ಎಡಗಾಲನ್ನು ಮುಂದೆ ಚಾಚಿದೆ. ಕಂಬಗಳು ಗಂಟೆಯಾಕಾರದಲ್ಲಿದೆ.

ಸಂಖ್ಯೆ: ೨೪ ಊರು: ಬಳ್ಳಿಗಾವಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಜಿಡ್ಡಿಕೆರೆ ಪಕ್ಕ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ನೀಲಕಂಠೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಜಿಡ್ಡಿಕೆರೆ ಬಲಭಾಗದಲ್ಲಿ ಹಾಳಾದ ಗರ್ಭಗುಡಿ ಮಾತ್ರ ಉಳಿದಿರುವ ಸುಂದರವಾದ ಬಾಗಿಲುವಾಡದಿಂದ ಕೂಡಿದ ದೇಗುಲ ಇದ್ದು, ಇದರಲ್ಲಿ ನೀಲಕಂಠೇಶ್ವರ ಲಿಂಗವಿತ್ತು. ಇದನ್ನು ಕ್ರಿ.ಶ.೧೦೩೬ ರಲ್ಲಿ ಜಯಸಿಂಹ ಕಟ್ಟಿಸಿದ್ದಾನೆ. ಇದರ ಲಿಂಗವು ಹಸಿರು ಬಣ್ಣದಿಂದ ಕೂಡಿದ್ದು. ಸುವರ್ಣ ರೇಖೆಗಳನ್ನು ಹೊಂದಿದೆ. ದೇಗುಲದ ಮುಂದೆ ಕೆರೆಯಿದ್ದು, ಅದರ ಮೇಲೆ ಸೂರ್ಯನ ಕಿರಣ ಬಿದ್ದಾಗ ದಿನಕ್ಕೆ ಮೂರು ರೀತಿ ಬಣ್ಣವನ್ನು ಪಡೆದುಕೊಳ್ಳುತ್ತಿದ್ದು, ಕಳ್ಳರು ಅದನ್ನು ಕದಿಯಲು ಪ್ರಯತ್ನಿಸಿದರಿಂದ ಈಗ ಅದನ್ನು ಪುರದ ವೀರಭದ್ರ ದೇವಾಲಯದಲ್ಲಿ ಸುರಕ್ಷಿತವಾಗಿ ಇಡಲಾಗಿದೆ. ದೇಗುಲ ಇಂದು ಹೊಸ ರೂಪ ಪಡೆದಿದೆ, ಗರ್ಭಗೃಹ ಮಾತ್ರ ಹೊಂದಿದೆ.

ಸಂಖ್ಯೆ: ೨೫ ಊರು: ಬಳ್ಳಿಗಾವಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಜಿಡ್ಡಿಕೆರೆ ಪಕ್ಕ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ದೇವಾಲಯ ಯೋಗೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಕ್ರಿ.ಶ.೧೦೭೦ ರಲ್ಲಿ ಚಾಳುಕ್ಯ ಚಕ್ರವರ್ತಿ ಪ್ರಭುವನ ಮಲ್ಲದೇವ, ೨ನೇ ಸೋಮೇಶ್ವರನು ಕಲ್ಯಾಣ ರಾಜ್ಯವನ್ನು ಆಳುತ್ತಿದ್ದಾಗ, ಅವನ ಸಂಧಿವಿಗ್ರಹಿಯ ಮಹಾ ಪ್ರಧಾನಿ ಉದಯಾಧಿತ್ಯನು ಈ ದೇವಾಲಯಕ್ಕೆ ದತ್ತಿ ನೀಡಿದ್ದಾನೆ. ಈ ದೇವಾಲಯದಲ್ಲಿ ನಾಲ್ಕು ಕಂಬಗಳು, ಶಿವಲಿಂಗ ಹಾಗೂ ನಂದಿ ವಿಗ್ರಹವಿದೆ. ನಂದಿಯು ಬಲಗಾಲು ಮುಂದಿಟ್ಟ ಮೂರ್ತಿಯಾಗಿದೆ. ಶ್ರೀಗುಣಗಳುಳ್ಳ ಯೋಗಿಗಳು ನಿರ್ಮಿಸಿದ ಯೋಗೇಶ್ವರ ದೇವಾಲಯ ಇಂದು ಅವಸಾನದ ಅಂಚಿನಲ್ಲಿದ್ದು, ನಂದಿಯ ವಿಗ್ರಹವು ಗಂಟೆ ಅಲಂಕಾರದಿಂದ ಕೂಡಿದ್ದು, ಬಿರುಕು ಬಿಟ್ಟ ವಿಗ್ರಹವಾಗಿ ಕಾಣಿಸುತ್ತದೆ.

ಸಂಖ್ಯೆ: ೨೬ ಊರು: ಬೇಗೂರು

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಗ್ರಾಮದ ಮಧ್ಯೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಮಲ್ಲಿಕಾರ್ಜುನ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಶಿಕಾರಿಪುರದಿಂದ ಹೊನ್ನಾಳಿ ಮಾರ್ಗದ ರಸ್ತೆಯ ಬಲಭಾಗಕ್ಕೆ ಸುಮೂರು ಮೂರು ಕಿ.ಮೀ. ಒಳಭಾಗಕ್ಕೆ ಹೋದರೆ ಸಿಗುವ ಗ್ರಾಮ ಬೇಗೂರು. ಹಳೇ ಕಾಲದ ದೇವಾಲಯಗಳ ಸಾಲಿಗೆ ಸೇರುವ ಮಲ್ಲಿಕಾರ್ಜುನ ದೇವಾಲಯವು ಕಲ್ಯಾಣ ಚಾಳುಕ್ಯರ ಕಾಲವನ್ನು ನೆನಪಿಸುತ್ತದೆ. ದೇವಾಲಯದ ಶಿಖರದ ಮೇಲ್ಭಾಗ ಹೊಸ ರೂಪವನ್ನು ಪಡೆದಿದೆ. ಒಳಭಾಗದ ದೇವಾಲಯ ಕಲ್ಲಿನಿಂದ ಗ್ರಾಮಸ್ಥರೇ ಹೇಳುವಂತೆ ಜಕಣಚಾರಿ ಕಾಲದಲ್ಲಿ ನಿರ್ಮಾವಾದ ಕಲ್ಲಿನ ದೇವಸ್ಥಾನ. ಇದು ಗ್ರಾಮದ ಪ್ರಮುಖ ದೇವಾಲಯದಲ್ಲಿ ಒಂದು. ಕ್ರಿ.ಶ.೧೦೩೨ರಲ್ಲಿ ದೇಕಗಾವುಂಡ ಎಂಬುವನು ಈ ದೇವಾಲಯ ನಿರ್ಮಿಸಿದನು. ದೇವಾಲಯದ ಇಳಿಜಾರು ಸೂರಿನಲ್ಲಿ ಹಲ್ಲಿ (ಪಲ್ಲಿ)ಯ ಕೆತ್ತನೆ ಇದ್ದು, ಗ್ರಾಮವನ್ನು ಸ್ವರ್ಣಪಲ್ಲಿಪುರ ಎಂದು ಕರೆಯುತ್ತಾರೆ.

ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ತೆರೆದ ಮುಖ ಮಂಟಪವನ್ನು ಒಳಗೊಂಡಿದ್ದು, ತ್ರಿಕೂಟ ದೇವಾಲಯವಾಗಿದೆ. ದೇವಾಲಯ ಮುಖ್ಯ

ಗರ್ಭಗೃಹದಲ್ಲಿ ಮಲ್ಲಿಕಾರ್ಜುನ, ಎಡಭಾಗದ ಗರ್ಭಗೃಹದಲ್ಲಿ ವೀರಭದ್ರ, ಬಲಭಾಗದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಭಾಗಶಃ ಬ್ರಹ್ಮ ಮತ್ತು ವಿಷ್ಣುವಿನ ಮೂರ್ತಿಗಳು ಇದ್ದಿರಬಹುದು. ಆದರೆ ಇಂದಿನ ಗರ್ಭಗೃಹಗಳಲ್ಲಿ ಪೀಠ ಮತ್ತೆ ಮೂರ್ತಿ ಬೇರೆ ಬೇರೆಯಾಗಿರಬಹುದು. ಧಾರ್ಮಿಕ ಕಾರಣಗಳಿಂದ ಈ ರೂಪವನ್ನು ಪಡೆದಿರಬಹುದು. ಇದಕ್ಕೆ ಪೂರಕವಾಗಿ ಶಾಸನಗಳಲ್ಲಿ ಅಗ್ರಹಾರವಾಗಿದ್ದು, ವೈಷ್ಣವರು ಈ ಭಾಗದಲ್ಲಿ ನೆಲೆಸಿದಕ್ಕೆ ಸಾಕ್ಷಿಗಳಾಗಿವೆ.

ಮುಖ್ಯ ಗರ್ಭಗೃಹದಲ್ಲಿ ಎಡ ಹರಿವು ಪೀಠದ ಮೇಲೆ ಸುಮಾರು ೨ ಅಡಿಯ ಶಿವಲಿಂಗವಿದೆ. ಮೇಲೆ ಸಾಧಾರಣ ಭಾವಣಿಇದ್ದು, ಬಾಗಿಲು ವಾಡದಲ್ಲಿ ಗಜಲಕ್ಷ್ಮಿ, ತ್ರಿಶಾಖೆಯನ್ನು ಹೊಂದಿದೆ. ಕೆಲಗೆ ದ್ವಾರಪಾಲಕರು, ಚೌರಿ ಹಿಡಿದ ಶಿಲ್ಪಗಳು ಕಾಣಬಹುದು. ಅಂತರಾಳವು ತೆರೆದಿದ್ದು. ಎಡ ಮತ್ತು ಬಲ ಭಾಗದ ಗರ್ಭಗೃಹದಲ್ಲಿ ವೀರಭದ್ರ ಮತ್ತು ಶಿವಲಿಂಗವಿದೆ, ಮೇಲೆ ಸಾಧಾರಣ ಭುವನೇಶ್ವರಿಯನ್ನು ಹೊಂದಿದೆ.

ನವರಂಗ ೧೨ ಗೋಡೆ ಕಂಬಗಳು ಸೇರಿದಂತೆ ಮಧ್ಯದಲ್ಲಿ ನಾಲ್ಕು ಮುಖ್ಯ ಕಂಬಗಳಿವೆ. ಮೇಲ್ಭಾವಣಿಯು ಸಾಧಾರಣವಾಗಿದ್ದು, ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಮಧ್ಯದ ನಾಲ್ಕು ಕಂಬಗಳು ಗಂಟೆಯಾಕಾರದಲ್ಲಿದ್ದು, ಪೀಠ, ಪಾದ, ದಿಂಡು, ಚೌಕ, ಕಳಸ, ಫಲಕ, ಭೋದಿಗೆ ಹಾಗೂ ವಿಶೇಷವಾಗಿ ಕೆಳಭಾಗದ ಪೀಠದಲ್ಲಿ ದೇವ ಕೋಷ್ಠಕ ರೀತಿ ದೇವರುಗಳ ಶಿಲ್ಪಗಳಿವೆ. ಶಿವ. ನಾರಾಯಣ, ವಿಷ್ಣು, ಸೂರ್ಯ, ಷಣ್ಮುಖ, ಗಣೇಶ, ನರಸಿಂಹ, ನಟರಾಜ, ಅನಂತ ಪದ್ಮನಾಭ, ನಂದೀಶ್ವರ, ಕಾಳಾಮುಖ ಮುನಿ, ಶಿವ- ಪಾರ್ವತಿ, ನಾಗ- ನಾಗಿಣಿ ಇತ್ಯಾದಿ ಶಿಲ್ಪದ ಕೆತ್ತನೆಗಳಿವೆ. ಕಂಬದ ಮೇಲೆ ಮಣಿಹಾರ, ಎಲೆ, ಬಳ್ಳಿ ಮತ್ತು ಸೂಕ್ಷ್ಮ ಕೆತ್ತೆನೆಯ ಕುಸುರಿ ಕಾರ್ಯವನ್ನು ಮಾಡಲಾಗಿದೆ.

ನವರಂಗದ ದೇವ ಕೊಷ್ಟಕ ಮಾದರಿಯಲ್ಲಿ ಮಂಟಪವಿದ್ದು, ಸಪ್ತಮಾತೃಕೆ ಶಿಲ್ಪ ನಾಗ- ನಾಗಿಣಿ ಶಿಲ್ಪ, ಮಹಿಷಾಸುರ ಮರ್ಧನಿ, ಪಾರ್ವತಿ ಶಿಲ್ಪಗಳಿವೆ, ಮಧ್ಯೆ ಭಾಗದಲ್ಲಿ ನಂದಿಯ ಶಿಲ್ಪವಿದೆ. ತೆರೆದ ಮುಖ ಮಂಟಪ ೨೪ ಕಂಬಗಳಿಂದ ಕೂಡಿದ್ದು, ಚೌಕ , ಗಂಟೆಯಾಕಾರ, ಅಷ್ಟಕೋನ, ಅಯಾತಕಾರ ಕಂಬಗಳಿಂದ ಕೂಡಿವೆ. ಕಕ್ಷಾಸನ ಮೇಲೆ ಕಂಬಗಳು ಉಳಿದಂತೆ ಒಳ ಭಾಗದಲ್ಲಿ ಬೇರೆ ಬೇರೆ ಕಂಬಗಳಿವೆ.

ನವರಂಗದ ಬಾಗಿಲುವಾಡದಲ್ಲಿ ಗಜಲಕ್ಷ್ಮಿ, ಸಾಮಾನ್ಯ ಶಾಖೆಗಳಿವೆ,. ಅಕ್ಕಪಕ್ಕದಲ್ಲಿ ದೇವಕೊಷ್ಠಕಗಳಿದ್ದು, ಖಾಲಿ ಪೀಠ ಅದರ ಮೇಲೆ ವೀರಭದ್ರ, ಶಿವಪಾರ್ವತಿ ಶಿಲ್ಪಗಳಿವೆ. ಮುಖಮಂಟಪದ ಮೇಲೆ ಇಳಿಜಾರು ಭಾವಣಿಯಿದೆ. ಒಳಭಾಗದ ಮೇಲ್ಭಾವಣಿಯು ಮುಖ್ಯ ನಾಲ್ಕು ಕಂಬಗಳ ಮೇಲೆ ೯ ಪಟ್ಟಿಯ ಭುವನೇಶ್ವರಿ, ಮಧ್ಯೆ ನಟರಾಜ ಸುತ್ತಲು ಅಷ್ಟದಿಕ್ಪಾಲಕರಾದ ಕುಬೇರ, ವರುಣ, ಯಮ, ಇಂದ್ರ ಇತ್ಯಾದಿ ಶಿಲ್ಪಗಳು ಅವರ ವಾಹನಗಳ ಸಮೇತವಿದೆ.

ದೇವಾಲಯದ ಗರ್ಭಗೃಹದ ಶಿಖರವು ಗಾರೆಯಿಂದ ಕೂಡಿದ್ದು, ಭಿತ್ತಿಯ ಭಾಗ ಸಾಧಾರಣವಾಗಿದೆ. ಕೆಳಗೆ ಅಧಿಷ್ಠಾನದ ಮೇಲೆ ದೇವಾಲಯವಿದೆ. ದೇವಾಲಯದ ಮುಂದೆ ತುಂಬುವ ಹೊಂಡವಿದೆ ಹಾಗೂ ಮುಖ ಮಂಟಪದ ಮುಂದೆ ಪಾದಗಳ ಪೀಠ, ಎರಡು ಮನುಷ್ಯ ಶಿಲ್ಪವು ತಲೆ ಇಲ್ಲದೆ ಇರುವ ಕೆತ್ತನೆ ಇದೆ, ಕುರಿಯ ತಲೆ ಮತ್ತು ಅದರ ಮುಂಡದ ಭಾಗವಿದೆ. ದೇವಾಲಯದ ಬಲಭಾಗದಲ್ಲಿ ೮ ಶಿಲಾ ಶಾಸನಗಳಿವೆ.

ಸಂಖ್ಯೆ: ೨೭ ಊರು: ಬಂದಳಿಕೆ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಗ್ರಾಮದ ಅಂಚಿನ ಭಾಗ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಸೋಮೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಶಿಕಾರಿಪುರದಿಂದ ಶಿರಾಳಕೊಪ್ಪ ಮಾರ್ಗವಾಗಿ ಚಿಕ್ಕೆರೂರು ಹೋಗುವ ರಸ್ತೆಯ ಎಡಭಾಗಕ್ಕೆ ಬಂದಳಿಕೆಯಲ್ಲಿ ಸೋಮೇಶ್ವರ ದೇವಾಲಯವಿದೆ. ಬಂದಳಿಕೆ ದೇವಾಲಯಗಳ ಸಮೂಹದಲ್ಲಿ ಕೊನೆಯಲ್ಲಿ ಈ ದೇವಾಲಯವು ಕಂಡುಬರುತ್ತದೆ. ಇದನ್ನು ಆನೇಕಲ್ಲು ಸೋಮೇಶ್ವರವೆಂತಲೂ, ಬೊಪ್ಪೇಶ್ವರವೆಂತಲೂ ಕರೆಯುತ್ತಾರೆ. ಇದು ಕ್ರಿ.ಶ.೧೧೭೪ರಲ್ಲಿ ಬೊಪ್ಪಸೆಟ್ಟಿಯಿಂದ ನಿರ್ಮಾಣಗೊಂಡಿದೆ. ಪೂರ್ವಕ್ಕೆ ಮುಖವಾಗಿರುವ ದೇವಾಲಯವು ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ರಾಮಾಯಾಣ ಮಹಾಭಾರತದ ಕಥೆಗಳಿಗೆ ಸಾಕ್ಷಿಯಾಗಿರುವ ದೇವಾಲಯ ಸುಂದರವಾಗಿದೆ. ದೇವಾಲಯ ಒಳಗೆ ಹೋಗಲು ಮೆಟ್ಟಿಲುಗಳಿವೆ. ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಒಳಗೊಂಡಿದ್ದು, ಶೈವ ಸಂಸ್ಕೃತಿಯ ಪ್ರತೀಕವಾಗಿದೆ.

ಗರ್ಭಗೃಹದಲ್ಲಿ ಸುಮಾರು ಮೂರುವರೆ ಅಡಿ ಎತ್ತರದ ಶಿವಲಿಂಗವಿದೆ. ನಕ್ಷತ್ರಾಕಾರದ ಮೇಲ್ಛಾವಣಿಯಿದ್ದು, ಪದ್ಮದಿಂದ ಕೂಡಿದ ಭುವನೇಶ್ವರಿಯ ಅಲಂಕಾರಿಕವಿದೆ. ಬಾಗಿಲುವಾಡವು ಸಾಧಾರಣವಾಗಿದ್ದು, ಮೇಲೆ ಗಜಲಕ್ಷ್ಮೀಯ ಶಿಲ್ಪವಿದೆ. ಅಂತರಾಳವು ನಾಲ್ಕು ಗೋಡೆ ಕಂಬಗಳನ್ನು ಒಳಗೊಂಡ ನಕ್ಷತ್ರಾಕಾರದ ಹೂವಿನ ಕೆತ್ತನೆಯ ಮೇಲ್ಛಾವಣಿ ಇದೆ. ಬಾಗಿಲುವಾಡದ ಮೇಲೆ ಶಿವ ಮತ್ತು ಪರಿವಾರ ದೇವತೆಗಳು, ಗಣೇಶ, ಮಹಿಷಾಮರ್ಧಿನಿ, ಷಣ್ಮುಖ ಶಿಲ್ಪಗಳು ಕಾಣಬಹುದು. ಲಲಾಟಬಿಂಬವು ಚೌಕಕಾರವಿದ್ದು, ಹೂಬಳ್ಳಿಯ ಅಲಂಕಾರಿಕೆ, ದ್ವಾರಪಾಲಕರು, ಪಕ್ಕದಲ್ಲಿ ಚೌಕಕಾರದ ಹೂವಿನ ಕೆತ್ತನೆಯಿರುವ ಜಾಲಂದರವಿದೆ. ನವರಂಗದ ಎಡಬಲಗಳಲ್ಲಿ

ಗರ್ಭಗೃಹಗಳಿದ್ದು, ಪೀಠವನ್ನು ಹೊಂದಿದು ಖಾಲಿಯಾಗಿದೆ. ಇಲ್ಲಿ ಯಾವುದೇ ಮೂರ್ತಿಗಳು ಕಂಡುಬರುವುದಿಲ್ಲ ಬಹುಶಃ ಧಾರ್ಮಿಕ ಕದನಗಳಿಗೆ ಬಲಿಯಾಗಿರಬಹುದು. ಈ ಬಾಗಿಲುವಾಡದಲ್ಲಿ ಗಜಲಕ್ಷ್ಮೀ ಮೇಲ್ಭಾಗದಲ್ಲಿದ್ದು, ಕುಂಭಗಳು, ದಾರ್ವಪಾಲಕರ ಅಲಂಕಾರಗಳಿವೆ.

ನವರಂಗವು ೧೨ ಗೋಡೆಗಂಬಗಳು ಸೇರಿದಂತೆ, ಮಧ್ಯೆದಲ್ಲಿ ೪ ಪ್ರಮುಖ ಕಂಬಗಳಿವೆ. ಸುತ್ತಲೂ ೬ ದೇವಕೊಷ್ಠಕಗಳು ಶಿಖರವನ್ನು ಹೊಂದಿವೆ. ಇವುಗಳು ಕೂಡ ಪೀಠದ ಭಾಗವನ್ನು ಹೊಂದಿದ್ದು, ಪೀಠದ ಮೇಲಿರಬೇಕಾದ ಶಿಲ್ಪಗಳು ಕಾಣೆಯಾಗಿವೆ. ಮೆಲ್ಛಾವಣಿಯ ಸುತ್ತಲೂ ಹೂಬಳ್ಳಿಯ ಅಲಂಕಾರವಿದೆ. ಮಧ್ಯದ ಕಂಬಗಳು ಗಂಟೆಯಾಕಾರದಲ್ಲಿದ್ದು, ಮಣಿ, ಎಲೆ, ಬಳ್ಳಿ, ಹೂವಿನ ಅಲಂಕಾರವನ್ನು ಹೊಂದಿವೆ. ಒಂದು ಕಂಬದ ಕೆಳಭಾಗದಲ್ಲಿ ಶಾಸನದ ಪಟ್ಟಿಕೆ ಇದೆ. ಮೇಲಿನ ಛಾವಣಿಯು ೯ ಭಾಗಗಳಾಗಿ ವಿಭಾಗಿಸಿ ಅವುಗಳಲ್ಲಿ ಪದ್ಮದ ಭುವನೇಶ್ವರಿ ಅಲಂಕಾರ ಹಾಗೂ ಸುತ್ತಲೂ ಎಲೆ ಬಳ್ಳಿಯನ್ನು ಕೆತ್ತಲಾಗಿದೆ.

ದೇವಾಲಯದ ಹೊರ ಭಾಗದ ಬಾಗಿಲುವಾಡ ಮೇಲೆ ಗಜಲಕ್ಷ್ಮೀ ಶಿಲ್ಪವಿದ್ದು, ಲಲಾಟಬಿಂಬ ಚಕ್ರ, ಚೌಕಕಾರ, ಎಲೆ ಬಳ್ಳಿಗಳ ಅಲಂಕಾರವಿದೆ. ದ್ವಾರಪಾಲಕರ ಶಿಲ್ಪ, ಶಿವ, ವಿಷ್ಣುವಿನ ಶಿಲ್ಪಗಳು ಕಂಬಗಳಲ್ಲಿ ಕಂಡರಿಸಿದೆ. ಮುಖ್ಯದ್ವಾರಗಳ ಎಡಬಲ ಭಾಗಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ದೃಶ್ಯಾವಳಿಗಳಿರುವ ಜಾಲಂದ್ರಗಳ ಪಟ್ಟಿಕೆಗಳಿವೆ. ಬಲಕ್ಕೆ ಏಳು ಪಟ್ಟಿಕೆಯಲ್ಲಿ ಮಹಾಭಾರತ ಹಾಗೂ ಎಡಕ್ಕೆ ಏಳು ಪಟ್ಟಿಕೆಯಲ್ಲಿ ರಾಮಾಯಾಣದ ದೃಶ್ಯಗಳು, ಸುತ್ತಲೂ ಬಳ್ಳಿಯ ಅಲಂಕಾರವು ನೋಡುಗರ ಮನಸೂರೆಗೊಳಿಸುತ್ತವೆ. ದೇವಾಲಯ ಸಾಧಾರಣ ಬಿತ್ತಿಯನ್ನು ಹೊಂದಿದ್ದು, ಮಧ್ಯದ ಪಟ್ಟಿಕೆಯಲ್ಲಿ ಹೂವಿನ ಚಿತ್ರದ ಕೆತ್ತನೆಗಳಿವೆ. ದೇವಾಲಯವು ನಕ್ಷತ್ರಾಕಾರದ ತಳಪಾಯವನ್ನು ಹೊಂದಿದೆ. ದೇವಾಲಯದ ಬಲಕ್ಕೆ ಶಾಸನಗಳು, ವೈಷ್ಣವ ಶಿಲ್ಪ, ತುರುಗೋಳ್ ಶಿಲ್ಪ, ವೀರಗಲ್ಲು, ಸಿಡಿತಲೆಗಲ್ಲು, ತ್ರುಟಿತವಾದ ಆನೆಯ ಶಿಲ್ಪ ಮತ್ತು ಜಾಲಂದ್ರಗಳು ಸಾಲಾಗಿ ಕಾಣಬಹುದು.

ಸಂಖ್ಯೆ: ೨೮ | ಊರು: ಬಂದಳಿಕೆ

ರಾಜ/ವಂಶ:ಕಲ್ಯಾಣ ಚಾಳುಕ್ಯ | ಸ್ಥಳ: ಗ್ರಾಮದ ಅಂಚಿನ ಭಾಗ

ಅಭಿಮುಖ : ಪೂರ್ವಾಭಿಮುಖ | ಸ್ಮಾರಕ: ತ್ರಿಪುರುಷ ದೇವಾಲಯ

ಸ್ಥಿತಿ: ಮಧ್ಯಮ | ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಇದು ಕೂಡ ಬಂದಳಿಕೆ ಪ್ರಾರಂಭದಲ್ಲೆ ಕಾಣುವಂತಹ ದೇವಾಲಯವಾಗಿದೆ. ಇದರಲ್ಲಿ ಶಿವ, ಬ್ರಹ್ಮ, ವಿಷ್ಣುವಿನ ಶಿಲ್ಪಗಳಿರುವುದರಿಂದ ಇದನ್ನ ತ್ರಿಮೂರ್ತಿ ದೇವಾಲಯವೆಂತಲೂ ಕರೆಯುತ್ತಾರೆ. ನಕ್ಷತ್ರಾಕಾರದ ತಳಪಾಯದ ಮೇಲೆ ದೇವಾಲಯ ನಿರ್ಮಾಣವಾಗಿದ್ದು, ಅಧಿಷ್ಠಾನವನ್ನು ಹೊಂದಿದೆ. ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗವಿದ್ದು, ತ್ರಿಕೂಟ ಮಾದರಿಯಾಗಿದೆ. ಭಿತ್ತಿಯ ಭಾಗದಲ್ಲಿ ವಿವಿಧ ಮಾದರಿಯ ಅಲಂಕಾರವಿದೆ. ಶಿಖರ, ಶಾಲಾ, ಕೂಟ, ಕುಂಭ, ಸುಖನಾಸಿಗಳಿಂದ ಕೂಡಿದ್ದು, ಶಿಖರವು ವಿಮಾನ ಮಾದರಿಯಲಿದ್ದು, ನಾರಾಯಣ, ಶಿವ-ಪಾರ್ವತಿ, ನರಸಿಂಹ, ನಟರಾಜ, ಕಾಳಮುಖ ಶಿಲ್ಪ, ಕುಬ್ಜ ಶಿಲ್ಪಗಳಿಂದ ಅಲಂಕಾರಗಳನ್ನು ಒಳಗೊಂಡಿದೆ.

ಪ್ರಮುಖ ಗರ್ಭಗೃಹದಲ್ಲಿ ಪೀಠದ ಮೇಲೆ ಸುಮಾರು ಮೂರುವರೆ ಅಡಿ ಎತ್ತರದ ತುಂಡಾನೆಯಾಕಾರದ ಶಿವಲಿಂಗವಿದೆ. ಮೆಲ್ಛಾವಣಿಯು ಪದ್ಮದ ಭುವನೇಶ್ವರಿ, ಬಾಗಿಲುವಾಡದ ಮೇಲೆ ಗಜಲಕ್ಷ್ಮೀಯ ಶಿಲ್ಪ, ಸಾಧಾರಣ ಲಲಾಟಬಿಂಬ ಪಕ್ಕದಲ್ಲಿ ನಕ್ಷತ್ರಾಕಾರದ ಕಂಬಗಳಿವೆ. ಇದರ ಮುಂದೆ ಅಂತರಾಳದಲ್ಲಿ ನಂದಿಯ ಮೂರ್ತಿ ಇದೆ. ನಾಲ್ಕು ಮೂಲೆಗೆ ಗೋಡೆಗಂಬಗಳು ಅದರ ಮೇಲೆ ಹೂಬಳ್ಳಿ, ಮಕರ ಶಿಲ್ಪ, ವಿವಿಧ ಅಲಂಕಾರಗಳು ಇವೆ. ಬಾಗಿಲುವಾಡದ ಮೇಲೆ ಗಜಲಕ್ಷ್ಮೀ ಶಿಲ್ಪ, ಬ್ರಹ್ಮ, ವಿಷ್ಣು, ಮಹೇಶ್ವರ, ಗಣೇಶ, ಮಹಿಷಾಮರ್ಧಿನಿ ಮತ್ತು ಪರಿವಾರ ದೇವತೆಯರ ಪಟ್ಟಿಕೆ ಇವೆ. ಲಲಾಟಬಿಂಬವು ಚೌಕಕಾರ ಕಂಬದ ಮಾದರಿಯಲ್ಲಿದ್ದು, ಹೂವಿನ ಅಲಂಕಾರದ ಪಕ್ಕದಲ್ಲೆ ಜಾಲಂದ್ರವಿದೆ.

ಬಲಭಾಗದ ಗರ್ಭಗೃಹದಲ್ಲಿ ಮೂರು ಅಡಿಯ ಪೀಠದ ಮೇಲೆ ಒಂದುವರೆ ಅಡಿಯ ಬ್ರಹ್ಮನ ಶಿಲ್ಪವಿದ್ದು, ಪೀಠಗಳಲ್ಲಿ ಕಮಲದ ದಳಗಳಿವೆ. ಮೇಲೆ ಪದ್ಮದ ಭುವನೇಶ್ವರವಿದ್ದು, ಬಾಗಿಲುವಾಡದ ಮೇಲೆ ಗಜಲಕ್ಷ್ಮೀ ಶಿಲ್ಪದ ಜೊತೆಗೆ ಶಿಖರವಿದೆ. ಅಂತರಾಳದಲ್ಲಿ ಚೌಕಕಾರದ ಗೋಡೆ ಕಂಬಗಳು, ತ್ರುಟಿತವಾದ ಸಪ್ತಮಾತೃಕೆಯರ ಶಿಲ್ಪವಿದೆ. ಬಾಗಿಲುವಾಡದಲ್ಲಿ ಗಜಲಕ್ಷ್ಮೀ ಅದರ ಮೇಲೆ ವಿಷ್ಣುವಿನ ಶಿಲ್ಪ, ಗಣೇಶನ ಶಿಲ್ಪ, ಮಹಿಷಾಮರ್ಧಿನಿ ಶಿಲ್ಪಗಳಿವೆ. ಚೌಕಕಾರದ ಹೂವಿನ ಅಲಂಕಾರವಿರುವ ಜಾಲಂದ್ರವಿದೆ. ಎಡಭಾಗದ ಗರ್ಭಗೃಹದಲ್ಲಿ ಎರಡು ಅಡಿ ಪೀಠದ ಮೇಲೆ ಐದು ಅಡಿಯ ನಿಂತಿರುವ ಶೈಲಿಯ ವಿಷ್ಣುವಿನ ಶಿಲ್ಪವಿದೆ. ವಿಷ್ಣುವಿನ ಬಲಕ್ಕೆ ಚೌರಿ ಹಿಡಿದಿರುವ ಮದನಿಕೆಯರ ಶಿಲ್ಪಗಳಿವೆ. ವಿಷ್ಣುವು ನಾಲ್ಕು ಕೈಗಳನ್ನು ಹೊಂದಿದ್ದು, ತ್ರುಟಿತವಾಗಿವೆ. ಕೀರಿಟ, ಮಣಿಯ ಮಾಲೆಯ ಅಲಂಕಾರವಿದ್ದು, ಹಿಂದೆ ವಿಷ್ಣುವಿನ ಹತ್ತು ಅವತಾರಗಳ ಪ್ರಭಾವಳಿ ಕಾಣಬಹುದು.

ನವರಂಗವು ಮೂರು ಗರ್ಭಗೃಹಗಳಿಗೆ ಸೇರಿಕೊಂಡಂತೆ ಇದೆ. ೧೨ ಗೋಡೆ ಕಂಬಗಳು ಸೇರಿದಂತೆ ಮಧ್ಯದ ೪ ಕಂಬಗಳು ಅಲಂಕಾರಗೊಂಡಿವೆ. ಗೋಡೆ ಕಂಬಗಳು

ಗಂಟೆಯಾಕಾರದಿಂದ ಕೂಡಿದ್ದು, ಚೌಕಕಾರ, ನಕ್ಷತ್ರಾಕಾರ, ಎಲೆ, ಬಳ್ಳಿಯ ಅಲಂಕಾರವಿದೆ. ಮಧ್ಯದ ಕಂಬಗಳು ಕೂಡ ಗಂಟೆಯಾಕಾರದಲ್ಲಿದ್ದು, ಒಂದು ಕಂಬದ ಕೆಳಗೆ ಶಾಸನವಿದೆ. ಉಳಿದಂತೆ ಕಂಬಗಳು ಎಲೆ, ಬಳ್ಳಿ, ಮಣಿಯ ಅಲಂಕಾರವಿದೆ. ಮೇಲ್ಚಾವಣಿ ೬ ಕಡೆಗಳಲ್ಲೂ ಪದ್ಮದ ಪಟ್ಟಿಕೆಗಳು, ಸುತ್ತಲೂ ಮಕರ ತೋರಣ, ಹಂಸಗಳ ಶಿಲ್ಪಗಳಿವೆ. ಹಾಗೇ ನವರಂಗದಲ್ಲಿ ಎಂಟು ದೇವಕೊಷ್ಠಕಗಳಿದ್ದು ಅವುಗಳ ಪೀಠಗಳಲ್ಲಿ ನಾರಾಯಣ, ಸಪ್ತಮಾತೃಕೆ, ಷಣ್ಮುಖ, ಕಾಳಿಯ ಶಿಲ್ಪಗಳಿವೆ. ಆದರೆ ಕೆಲವು ಶಿಲ್ಪಗಳು ಸ್ಥಳಂತರಿಸಿವೆ. ಬಾಗಿಲುವಾಡದಲ್ಲಿ ಗಜಲಕ್ಷ್ಮಿ, ಸಾಧಾರಣ ಲಲಾಟಬಿಂಬವಿದೆ. ದೇವಾಲಯದ ಬಲಭಾಗದಲ್ಲಿ ಸಾಲಾಗಿ ಇಕೈಮಾಸ್ತಿ, ಕಾಳಗದಲ್ಲಿ ಹೋರಾಡುತ್ತಿರುವ ವೀರಗಲ್ಲು, ತುರುಗೋಳ್ ಶಿಲ್ಪ, ಮಾಸ್ತಿಕಲ್ಲು, ಕಾಳಾಮುಖ ಶಿಲ್ಪಗಳು ಕಾಣಬಹುದು.

ಸಂಖ್ಯೆ: ೨೯ ಊರು: ಬಂದಳಿಕೆ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ತ್ರಿಪುರುಷ ದೇವಾಲಯದ ಮುಂದೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಪಾಳು ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ತ್ರಿಪುರುಷ ದೇವಾಲಯದ ಮುಂದೆ ಎರಡು ವಿನಾಶದ ಅಂಚಿಗೆ ತಲುಪುತ್ತಿರುವ ದೇವಾಲಯಗಳಿದ್ದು, ಶೈವ ಸಂಸ್ಕೃತಿಯ ಪ್ರತೀಕವಾಗಿವೆ. ಇವು ತ್ರಿಕೂಟ ಮಾದರಿಯಲ್ಲಿದ್ದು, ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿವೆ. ನವರಂಗದಲ್ಲಿ ನಂದಿಯ ಮೂರ್ತಿಯಿದೆ. ಕಂಬಗಳ ಸಾಮಾನ್ಯವಾಗಿ ಗಂಟೆಯಾಕಾರ, ಚೌಕಕಾರದಲ್ಲಿವೆ. ಮೇಲ್ಚಾವಣಿಯಲ್ಲಿ ನಕ್ಷತ್ರಾಕಾರದಲ್ಲಿ ಭುವನೇಶ್ವರಿಯ ಅಲಂಕಾರವಿದೆ. ಒಂದು ದೇವಾಲಯದಲ್ಲಿ ಮೂರು ಅಡಿ ಎತ್ತರದ ಶಿವಲಿಂಗವಿದ್ದು, ಇನ್ನೊಂದರಲ್ಲಿ ಯಾವುದೇ ಮೂರ್ತಿಯಿಲ್ಲ. ದೇವಾಲಯದ ಬಾಗಿಲುವಾಡದ ಮೇಲೆ ಗಜಲಕ್ಷ್ಮೀಯ ಶಿಲ್ಪವಿದೆ. ಒಂದು ದೇವಾಲಯಕ್ಕೆ ಸ್ವಲ್ಪ ಭಿತ್ತಿಯ ಭಾಗವನ್ನು ಮಾತ್ರ ಹೊಂದಿದೆ.

ಸಂಖ್ಯೆ: ೩೦ ಊರು: ಭಕ್ತನ ಕೊಪ್ಪ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಪಾಳುಬಿದ್ದ ಗ್ರಾಮದ ಬೆಟ್ಟದಲ್ಲಿ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಕಂಭಳೇಶ್ವರ ದೇವಾಲಯ

ಸ್ಥಿತಿ: ಮಧ್ಯಮ(ಹೊಸ ರೂಪ) ಕಾಲ: ಕ್ರಿ.ಶ.ಸು.೧೦-೧೧ನೇಯ ಶತಮಾನ

ದೇವಾಲಯವು ಅಡಗಂಟಿ ಗ್ರಾಮದಿಂದ ಮೇಲಭಾಗಕ್ಕೆ ಊರಿಲ್ಲದ ಪ್ರದೇಶದಲ್ಲಿ ಗುಡ್ಡದ ಮೇಲೆ ಕಂಬಳಿಮಠ ಎಂದು ಕರೆಸಿಕೊಳ್ಳತ್ತಾ ಅದರ ಪಕ್ಕದಲ್ಲೇ ದೇವಾಲಯ ರೂಪದಲ್ಲಿ ಪೂಜಿಸಿಕೊಳ್ಳುತ್ತಿದೆ. ಮೂಲತ ದೇಗುಲ ಕಲ್ಯಾಣ ಚಾಳುಕ್ಯರ ಕಾಲಕ್ಕೆ ಸೇರಿದ್ದು, ಇಂದಿನ ಜನರಿಗೆ ಹೊಸ ರೂಪವನ್ನು ಪಡೆದು, ಗಾರೆಯಿಂದ ಮೂಲ ರೂಪ ಬದಲಾಗಿದೆ. ದೇವಾಲಯ ತ್ರಿಕೂಟ ಮಾದರಿಯಲ್ಲಿದ್ದು, ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ಗರ್ಭಗೃಹಗಳಲ್ಲಿ ಕ್ರಮವಾಗಿ ಕಂಭಳೇಶ್ವರ, ಈಶ್ವರ, ಈರಣ್ಣನ ರೂಪದಲ್ಲಿ ಮೂರ್ತಿಗಳು ಪೋಷಿಸಿಕೊಳ್ಳುತ್ತಿವೆ. ಮುಖ್ಯ ಗರ್ಭಗೃಹದ ಮೇಲೆ ಸಾಧಾರಣ ಛಾವಣಿ ಇದೆ. ಇದರ ಬಾಗಿಲುವಾಡವು ಗಜಲಕ್ಷ್ಮಿಯಲ್ಲಿದ್ದು, ಗಾರೆಯಿಂದ ಸಾಧಾರಣ ಸ್ವರೂಪ ಪಡೆದಿದೆ. ಅಂತರಾಳವು ಗಾರೆಯಿಂದ ಕೂಡಿದೆ. ನವರಂಗದಲ್ಲಿ ನಾಲ್ಕು ಕಂಬಗಳನ್ನು ಹೊಂದಿದ್ದು, ಗಂಟೆಯಾಕಾರ, ಎಲೆ, ಬಳ್ಳಿಯ ಅಲಂಕಾರಗಳಿವೆ. ಸುತ್ತಲೂ ೧೨ ಗೋಡೆಕಂಬಗಳಿವೆ. ಮುಂದೆ ಬಾಗಿಲುವಾಡದಲ್ಲಿ ಸಾಧಾರಣವಾಗಿದ್ದು ಕಂಬಗಳನ್ನು ಒಳಗೊಂಡಂತೆ ಎಲೆ ಬಳ್ಳಿಯ ಅಲಂಕಾರಗಳಿವೆ.

ದೇವಾಲಯದ ಎಡಭಾಗದಲ್ಲಿ ಕಂಬಳಿ ಸ್ವಾಮಿಯು ದೇವಾಲಯವನ್ನು ಪೋಷಿಸಿದ ಕಾರಣ ಅವರ ಗದ್ದುಗೆಯನ್ನು ನಿರ್ಮಿಸಿ ಅದಕ್ಕೂ ಪೂಜೆಯನ್ನು ಸಲ್ಲಿಸುತ್ತಿದ್ದಾರೆ. ಆವರಣದಲ್ಲಿ ದೇವಾಲಯಗಳಿಗೆ ಸೇರಿದ ಶಿಲೆಗಳನ್ನು ಗುಂಪಾಗಿ ಹಾಕಿದ್ದಾರೆ. ಗ್ರಾಮ ಬೇರೆಡೆಗೆ ವಲಸೆ ಹೋಗಿದ್ದರು, ಕೂಡ ದೇವಾಲಯದ ಪೂಜಾಕಾರ್ಯಗಳು ಸಾಂಗವಾಗಿ ನೆರವೇರುತ್ತಿವೆ

ಸಂಖ್ಯೆ: ೩೧	ಊರು: ಮಳವಳ್ಳಿ
ರಾಜ/ವಂಶ:ಕಲ್ಯಾಣ ಚಾಳುಕ್ಯ	ಸ್ಥಳ: ಗ್ರಾಮದ ಹೊರ ಭಾಗ
ಅಭಿಮುಖ : ಪೂರ್ವಾಭಿಮುಖ	ಸ್ಮಾರಕ: ರಾಮೇಶ್ವರ ದೇವಾಲಯ
ಸ್ಥಿತಿ: ಮಧ್ಯಮ(ಹೊಸದು)	ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಮಳವಳ್ಳಿ ಗ್ರಾಮದ ಶಾತವಾಹನ ಕಾಲಕ್ಕೆ ಸೇರಿದ ಶಾಸನವು ಕಲ್ಲೇಶ್ವರ ದೇವಾಲಯದ ಪಕ್ಕದಲ್ಲಿದೆ. ಅಲ್ಲಿಂದ ಮುಂದೆ ಸಾಗಿದರೆ ಊರಿನ ಹೊರ ಭಾಗದಲ್ಲಿ ಕಾಣಬಹುದಾದ ದೇವಾಲಯವೆ ರಾಮೇಶ್ವರ. ಗ್ರಾಮದಿಂದ ಹೊರಗೆ ಇದ್ದರು ಸುಂದರವಾಗಿ ಹಳೆಯ ವಾಸ್ತುಶಿಲ್ಪದ ಜೊತೆಗೆ ಹೊಸ ರೂಪವನ್ನು ನೀಡಿದ್ದಾರೆ. ದೇವಾಲಯವು ಗರ್ಭಗೃಹ ಮತ್ತು ಮಂಟಪವಿದೆ. ಗರ್ಭಗೃಹದಲ್ಲಿ ೨ ಅಡಿ ಎತ್ತರದ ಶಿವಲಿಂಗವಿದ್ದು, ಮೇಲೆ ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಮಂಟಪದಲ್ಲಿ ಹಳೆಯ ಮಾದರಿಯಲ್ಲಿಯೇ ದೇವ ಕೋಷ್ಠಕಗಳನ್ನು ಗಾರೆಯಲ್ಲಿ ನಿರ್ಮಿಸಿ ಅವುಗಳನ್ನು

ಪ್ರತಿಷ್ಠಾಪಿಸಲಾಗಿದೆ. ಗಣೇಶ, ಮಹಿಷ ಮರ್ಧಿನಿ, ಭೈರವ, ಸಪ್ತಮಾತೃಕೆಯರು, ಶೈವ ಶಿಲ್ಪಗಳನ್ನು ಇಡಲಾಗಿದೆ. ಲಿಂಗದ ಮುಂದೆ ನಂದಿಯ ಮೂರ್ತಿಯಿದೆ. ಬಾಗಿಲುವಾಡದಲ್ಲಿ ದ್ವಾರಪಾಲಕರು, ಗಜಲಕ್ಷ್ಮಿಯ ಶಿಲ್ಪಗಳು ಮತ್ತು ಹೂಬಳ್ಳಿಯ ಅಲಂಕಾರಗಳಿವೆ.

ನವರಂಗವು ಹೊಸ ಮಾದರಿಯಲ್ಲಿದ್ದರೂ ಅದರ ಬಾಗಿಲುವಾಡದ ಮೇಲೆ ಗಣೇಶನ ಕೆತ್ತನೆ ಮಾಡಲಾಗಿದೆ, ದೇವಾಲಯದ ಹೊರ ಭಾಗವು ಗಾರೆಯಿಂದ ಮುಚ್ಚಿ ಹೋಗಿದೆ. ದೇವಾಲಯದ ಬಲ ಭಾಗದಲ್ಲಿ ಕಲ್ಯಾಣಿ ಚಾಳುಕ್ಯರ ಶಾಸನವಿದೆ. ಜೊತೆಗೆ ತುರುಗೊಳ್ ಮತ್ತು ಪೆಣ್ಬುಯಲ್ ಒಂದರಲ್ಲೆ ಇರುವ ಶಾಸನವಿದೆ. ಮೂರು ವೀರಗಲ್ಲುಗಳು ಹಾಳಾಗಿವೆ. ಬಾಗಿಲು ವಾಡದ ಪಟ್ಟಿ ಇದ್ದು, ಗಜಲಕ್ಷ್ಮಿಯ ಶಿಲ್ಪವಿದೆ. ಎಡ ಭಾಗದಲ್ಲಿ ಸಪ್ತಮಾತೃಕೆ ಶಿಲ್ಪ, ಶೈವ ಶಿಲ್ಪಗಲು, ನಾಗ ದೇವತೆಯ ಶಿಲ್ಪಗಳು ಮತ್ತು ವೀರಗಲ್ಲುಗಳಿವೆ. ಮೇಲ್ಛಾವಣಿಯ ಎರಡು ಚಪ್ಪಟೆಗಳು ಬಿದ್ದಿವೆ.

ಸಂಖ್ಯೆ: ೩೨	ಊರು: ಮಾಳಗೊಂಡನ ಕೊಪ್ಪ
ರಾಜ/ವಂಶ: ----	ಸ್ಥಳ: ಗ್ರಾಮದ ಅಂಚಿಗೆ
ಅಭಿಮುಖ: ಪೂರ್ವಾಭಿಮುಖ	ಸ್ಮಾರಕ: ಅನಿಮಿಷಾರಣ್ಯ ದೇವಾಲಯ
ಸ್ಥಿತಿ: ಕನಿಷ್ಠ	ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಬಳ್ಳಿಗಾವಿಯಿಂದ ೨ ಕಿ.ಮೀ ದೂರದಲ್ಲಿ ಮಾಳಗೊಂಡನಕೊಪ್ಪವೆಂಬ ಗ್ರಾಮವಿದೆ. ಇದನ್ನ ಅನಿಮಿಷಾರಣ್ಯ ಎಂದೂ ಕರೆಯುತ್ತಾರೆ. ಪಟ್ಟದಕಲ್ಲಿನ ರಾಜನಾದ ತ್ರೈಲೋಕ್ಯ ಚೂಡಮಣಿ ಮತ್ತು ಅವನ ಪತ್ನಿ ಮಹರ್ಲೇಖಾಳಿಗೆ ಜನಿಸಿದ ಮಹಾಶಿವಭಕ್ತನಿಗೆ ಬಳ್ಳಿಗಾವಿಯಲ್ಲಿ ಆಕಸ್ಮಿಕವಾಗಿ ನಂದಿಯು ತನ್ನ ನಾಲಿಗೆಯಿಂದ ಶಿವಲಿಂಗ ದರ್ಶನ ಮಾಡಿಸಿತ್ತು, ಅಲ್ಲೇ ಧ್ಯಾನಾಸಕ್ತನಾಗಿ ಗುಹೆಯಲ್ಲಿ ಲಿಂಗವನ್ನು ನೋಡುತ್ತಾ ಕುಳಿತ ಹಾಗಾಗಿ ಈತನಿಗೆ ಅನಿಮಿಷ ಎಂದು ಕರೆದರು. ನಂತರದ ದಿನಗಳಲ್ಲಿ ಅಲ್ಲಮಪ್ರಭು ಈತನ ಭಕ್ತಿ ಮೆಚ್ಚಿಕೊಂಡರು. ಅವರ ಶರೀರದೊಳಗೆ ಸೇರ್ಪಡೆಯಾದ, ಅಂದಿನಿಂದ ಅಲ್ಲಮಪ್ರಭುದೇವರು ತಮ್ಮ ಕಾವ್ಯನಾಮ "ಗುಹೇಶ್ವರ" ಎಂದು ಇಟ್ಟುಕೊಂಡರು ಎಂಬ ಪ್ರತೀತಿ ಇದೆ. ಈಗ ಇಲ್ಲಿಯ ಅರಣ್ಯ ಭಾಗವು ರಮ್ಯವಾದ ಬಿಲ್ವಪತ್ರೆಯ ವನವಿದೆ.

ದೇವಾಲಯವು ಗರ್ಭಗೃಹ, ಪ್ರದರ್ಶನ ಪಥ, ಅಂತರಾಳ, ಮುಖಮಂಟಪ ಹಾಗೂ ಬಲಕ್ಕೆ ಮುಖ್ಯ ದ್ವಾರವಿದೆ. ಕಟ್ಟಡವು ಕಲ್ಲಿನಿಂದ ಕಟ್ಟಿದ್ದು, ಅದರ ಮುಂದೆ ಗಾರೆ ಬಳಸಿ ಹೊಸ ರೂಪವನ್ನು ಪಡೆದಿದೆ. ಗರ್ಭಗೃಹದಲ್ಲಿ ಶಿವಲಿಂಗ, ಮೇಲ್ಛಾವಣಿ

ಸಾಧಾರಣ ಕಲ್ಲಿನ ನಕ್ಷತ್ರಾಕಾರವಿದೆ. ಬಾಗಿಲುವಾಡದಲ್ಲಿ ವಿನಾಯಕನ ಮೂರ್ತಿ, ದ್ವಾರಪಾಲಕರ ಶಿಲ್ಪವಿದೆ. ಅಂತರಾಳದಲ್ಲಿ ನಂದಿಯ ಮೂರ್ತಿ, ಮೇಲೆ ಕಲ್ಲಿನ ಛಾವಣಿ ಇದೆ. ಮುಖಮಂಟಪವು ಗೋಡೆ ಕಂಬ ಸೇರಿದಂತೆ ಮಧ್ಯದಲ್ಲಿ ೬ ಸರಳ ಶೈಲಿಯಲ್ಲಿವೆ. ಮೇಲೆ ಕಲ್ಲಿನ ಛಾವಣಿಯಲ್ಲಿ ನಾಗರ ಸುರಳಿಯ ಚಿತ್ರವಿದೆ. ಕಂಬಗಳಲ್ಲಿ ಶಿವಲಿಂಗ, ನಂದಿಯ ಶಿಲ್ಪಗಳಿವೆ. ದೇವಾಲಯದ ಮುಖ್ಯ ದ್ವಾರವು ಗಾರೆಯನ್ನು ಸೇರಿದಂತೆ ಬಾಗಿಲುವಾಡದಲ್ಲಿ ಗಜಲಕ್ಷ್ಮಿ, ಎಲೆ, ಬಳ್ಳಿಯ ಅಲಂಕಾರವಿದೆ. ದೇಗುಲದ ಹೊರಭಾಗದಲ್ಲಿ ಕೆಲವು ಹಾಳಾದ ಶಿಲ್ಪವಿದ್ದು, ಬಾಗಶಃ ಶಿವ ಮತ್ತು ವಿಷ್ಣುವಿನದಾಗಿರಬಹುದು.

ಸಂಖ್ಯೆ: ೩೩ ಊರು: ಮಾಯತ್ತಮ್ಮನ ಮುಚ್ಚುಡಿ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಹೊಂಡದ ಪಕ್ಕ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ರಾಮೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಸುಣ್ಣದ ಕೊಪ್ಪದಿಂದ ಮಲ್ಲೇನಹಳ್ಳಿಗೆ ಹೋಗುವ ಮಾರ್ಗದಲ್ಲಿ ಮಾಯತ್ತಮ್ಮನ ಮುಚ್ಚಡಿ ಗ್ರಾಮದ ಹೊರ ಭಾಗದಲ್ಲಿ ರಾಮೇಶ್ವರ ದೇವಾಲಯವಿದೆ. ದೇವಾಲಯವು ಗರ್ಭಗೃಹ, ಅಂತರಾಳ ಚಿಕ್ಕದಾದ ನವರಂಗವಿದೆ. ಇತ್ತಿಚಿನ ದಿನಗಳಲ್ಲಿ ಇದರ ಬಗ್ಗೆ ಕಾಳಜಿ ವಹಿಸಿ ರಕ್ಷಣೆಗೆ ಗ್ರಾಮಸ್ತರು ನಿಂತಿದ್ದಾರೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಶಿವಲಿಂಗವಿದೆ. ಅದರ ಸುತ್ತಲೂ ಮಹಿಷಮರ್ಧಿನಿ, ನಾರಾಯಣ, ವೈಷ್ಣವ ಮೂರ್ತಿ, ನೃತ್ಯದ ಶಿಲ್ಪ, ಷಣ್ಮುಖ ಶಿಲ್ಪಗಳಿವೆ. ಮೇಲೆ ಸಾಧಾರಣ ಛಾವಣಿಯಿದೆ. ನವರಂಗದಲ್ಲಿ ೪ ಕಂಬಗಳಿದ್ದು, ಗ್ರಾಮಸ್ತರು ಗಾರೆಯನ್ನು ಬಳಸಿ ಗೋಡೆಯನ್ನು ರೂಪಿಸಿದ್ದಾರೆ. ಮೇಲೆ ಭುವನೇಶ್ವರಿಯು ಪದ್ಮದಿಂದ ಕೂಡಿದೆ. ದೇವಾಲಯದ ಮುಂದೆ ತುರುಗೊಳ್ ಶಾಸನ, ವೀರಗಲ್ಲುಗಳಿವೆ.

ಸಂಖ್ಯೆ: ೩೪ ಊರು: ಮಾಯತ್ತಮ್ಮನ ಮುಚ್ಚುಡಿ

ರಾಜ/ವಂಶ:--- ಸ್ಥಳ: ಹೊಂಡದ ಪಕ್ಕ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಕಲ್ಲೇಶ್ವರ ದೇವಾಲಯ

ಸ್ಥಿತಿ: ಹೊಸದು ಕಾಲ:---

ರಾಮೇಶ್ವರ ದೇವಾಲಯದ ಮುಂದೆ ಕಲ್ಲೇಶ್ವರ ದೇವಾಲಯವಿದೆ. ಗರ್ಭಗೃಹ, ಅಂತರಾಳ, ನವರಂಗ ಮತ್ತು ಹೊಸ ಮಾದರಿಯಲ್ಲಿ ಮರವನ್ನು ಬಳಸಿದ ರಂಗಮಂಟಪವಿದೆ. ಗರ್ಭಗೃಹದಲ್ಲಿ ಶಿವಲಿಂಗ ಮೇಲೆ ಪದ್ಮವಿರುವ ಭುವನೇಶ್ವರಿ ಇದೆ. ಬಾಗಿಲುವಾಡದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ನವರಂಗದಲ್ಲಿ ಚೌಕಕಾರದ ಕಂಬಗಳಿದ್ದು, ಸಾಧಾರಣವಾಗಿವೆ. ಮೇಲ್ಛಾವಣಿಯು ಪದ್ಮದಿಂದ ಕೂಡಿದ ಭುವನೇಶ್ವರಿ ಕೆತ್ತನೆಯಿದೆ. ರಂಗ ಮಂಟಪವು ೨೦ ಮರದ ಕಂಭಗಳಿಂದ ಕೂಡಿದೆ. ಮೇಲ್ಛಾವಣಿಯಲ್ಲಿ ವಿವಿಧ ಅಲಂಕಾರಗಳನ್ನು ಕೆತ್ತಲಾಗಿದೆ. ದೇವಾಲಯದ ಮುಂದೆ ನಂದಿ, ಕಲ್ಲಿನ ಎತ್ತರದ ಕಂಬವಿದೆ.

ಸಂಖ್ಯೆ: ೩೫ ಊರು: ಮುಗಳೆಗೆರೆ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ:ಕುಮದ್ವತಿ ನದಿಯ ಪಕ್ಕ

ಅಭಿಮುಖ :ದಕ್ಷಿಣಾಭಿಮುಖ ಸ್ಮಾರಕ: ಸೋಮೇಶ್ವರ ದೇವಾಲಯ

ಸ್ಥಿತಿ: ಕನಿಷ್ಠ (ಮಣ್ಣಿನಿಂದ ಮುಚ್ಚಿದೆ) ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಕುಮದ್ವತಿ ನದಿಯ ಎಡದಂಡೆಯ ಮೇಲೆ ಮಣ್ಣಿನಿಂದ ಮುಚ್ಚಿದ ದೇವಾಲಯವೊಂದು ಅವಸಾನದ ಅಂಚಿನಲ್ಲಿದೆ. ಒಳಭಾಗಕ್ಕೆ ಹೊಕ್ಕರೆ ಅದ್ಭುತವಿದೆ, ಅದೇ ಕಲ್ಯಾಣ ಚಾಳುಕ್ಯರ ಕಾಲಕ್ಕೆ ಸೇರಿದ ದೇಗುಲವೇ ಶ್ರೀ ಸೋಮೇಶ್ವರ ದೇವರು ನೆಲೆಸಿದ ಗುಡಿ. ಮೇಲೆ ಮಣ್ಣು ಮುಚ್ಚಿದರು ಒಳಗೆ ದ್ವಿಕೂಟದಿಂದ ಕೂಡಿದ ದೇವಾಲಯ. ಪ್ರಸ್ತುತ ಒಂದೇ ಗರ್ಭಗೃಹವಿದೆ. ಗ್ರಾಮದಿಂದ ಸುಮಾರು ದೂರದಲ್ಲಿರುವ ಈ ಪ್ರದೇಶ ಬೇಸಾಯಕ್ಕೆ ಈಡಾಗಿದ್ದು, ದೇವಾಲಯ ನಾಶವಾಗುವ ಸ್ಥಿತಿಯಲ್ಲಿದೆ. ಹಾಗೇ ಇಟ್ಟಿಗೆ, ಹಂಚುಗಳ ಅವಶೇಷವಿದೆ.

ಸೋಮೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗದಿಂದ ಕೂಡಿದೆ. ಅದು ಎರಡು ಗರ್ಭಗೃಹವಿದ್ದು ಕಾಲಾಂತರದಲ್ಲಿ ಒಂದು ಭಾಗ ಮಣ್ಣಿನ ಗುಡ್ಡೆಯಲ್ಲಿ ಸೇರಿಕೊಂಡಿದೆ. ಹಾಗಾಗಿ ಪ್ರಸ್ತುತ ಒಂದು ಗರ್ಭಗೃಹ ಮಾತ್ರ ಉಳಿದಿದೆ. ಗರ್ಭಗೃಹದಲ್ಲಿ ಮೂರು ಅಡಿಯ ಶಿವಲಿಂಗವಿದ್ದು, ಮೇಲ್ಛಾವಣಿ ಪದ್ಮವು ಅರಳುವ ಶೈಲಿಯಲ್ಲಿದೆ. ಇದರ ಬಾಗಿಲುವಾಡದಲ್ಲಿ ಗಜಲಕ್ಷ್ಮಿ, ಲಲಾಟಬಿಂಬದಲ್ಲಿ ಕುಬ್ಜ ಶಿಲ್ಪವು ವಾದ್ಯವನ್ನು ಹಿಡಿದುಕೊಂಡಿವೆ. ದ್ವಾರಪಾಲಕರು, ಚೌರಿಹಿಡಿದ ಶಿಲ್ಪಗಳು, ಸಿಂಹ, ಕುದುರೆ, ಎಲೆ, ಬಳ್ಳಿಯ ಅಲಂಕಾರವಿದೆ. ಅಂತರಾಳದಲ್ಲಿ ಗೋಡೆಕಂಬಗಳಿದ್ದು, ಮೇಲ್ಛಾವಣಿ ನಕ್ಷತ್ರಾಕಾರ, ಬಾಗಿಲುವಾಡ ಸರಳವಾಗಿದೆ. ನವರಂಗದಲ್ಲಿ ೧೨ ಗೋಡೆಗಂಬಗಳು, ಹಾಗೂ ಮಧ್ಯದಲ್ಲಿ ೪ ಮುಖ್ಯ ಕಂಬವಿದ್ದು, ಚೌಕಕಾರ, ನಕ್ಷತ್ರಾಕಾರ, ಸಿಲಿಂಡರಾಕಾರ,

ಗಂಟೆಯಾಕಾರ ಮತ್ತು ಅಲಂಕಾರಕ್ಕೆ ಎಲೆ, ಬಳ್ಳಿ, ಹೂವಿನ ಕೆತ್ತನೆ ಇವೆ. ಮಧ್ಯದ ಕಂಬದ ಕೆಳಗೆ ನಾರಾಯಣ, ಕಾಳಾಮುಖ ಮುನಿ, ನಟರಾಜ, ನಿಂತ, ಕುಳಿತ ತಪಸ್ವಿ ಮೂರ್ತಿಗಳಿವೆ. ಹಾಗೂ ಕುಬ್ಜ ಮೂರ್ತಿ, ಎಲೆ, ಬಳ್ಳಿ, ಮಣಿಗಳ ಅಲಂಕಾರಗಳಿವೆ.

ನವರಂಗದ ಮೇಲ್ಭಾವಣಿ ಪದ್ಮದಿಂದ ಕೂಡಿದ ಭುವನೇಶ್ವರಿ ಕೆತ್ತನೆ ಇದ್ದು, ನಂದಿಯ ಮೂರ್ತಿ ಶಿವಲಿಂಗದ ಎದುರು ಇದೆ. ನವರಂಗದ ಎರಡು ಬದಿಗಳಲ್ಲಿ ದೇವಕೋಷ್ಠಕವಿದ್ದು, ಯಾವುದೇ ಮೂರ್ತಿಗಳಿಲ್ಲ. ಆದರೆ ಅವುಗಳ ಪಕ್ಕದಲ್ಲೇ ಡಮರುಗ ಹಿಡಿದ, ತ್ರಿಶೂಲದಲ್ಲಿ ತಲೆಯನ್ನು ಸಿಕ್ಕಿಸಿಕೊಂಡಿರುವ ಶಿವನ ರೂಪಿಯ ಭೈರವ ಮೂರ್ತಿಗಳಿವೆ. ಹಾಗೂ ಮಹಿಷಮರ್ದಿನಿ, ಸರಸ್ವತಿ, ಗಣೇಶ ಸೇರಿದಂತೆ ಸಪ್ತಮಾತೃಕೆಯ ಶಿಲ್ಪಗಳಿವೆ. ದೇವಾಲಯದ ಮುಖ್ಯ ದ್ವಾರದ ಬಾಗಿಲುವಾಡವು ಸಾಧಾರಣ ಅಲಂಕಾರವಿದೆ. ದೇಗುಲದ ಮುಂದೆ ನಾಲ್ಕು ನೆಲದೊಳಗೆ ಹುದುಗಿದ ಕಲ್ಯಾಣಿ ಚಾಳುಕ್ಯರ ಕಾಲಕ್ಕೆ ಸೇರಿದ ಶಾಸನಗಳಿವೆ. ಇವುಗಳ ಬಗ್ಗೆ ಅಧ್ಯಯನ ಆಗಬೇಕಿದೆ.

ಸಂಖ್ಯೆ: ೩೬ ಊರು: ಮುಗಳಿಗೆರೆ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಗ್ರಾಮದ ಕೊನೆಗೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಮಲ್ಲೇಶ್ವರ ದೇವಾಲಯ

ಸ್ಥಿತಿ: ಮಧ್ಯಮ(ಹೊಸದು) ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಶಿಕಾರಿಪುರದಿಂದ ಮಾಸೂರು ಹೋಗುವ ಮಾರ್ಗದ ಮಧ್ಯ ನೆಲವಾಗಿಲು, ಇದನ್ನು ಬಳಸಿಕೊಂಡು ಒಳಗೆ ಹೋದರೆ ಮುಗಳಗೆರೆ ಗ್ರಾಮ ಸಿಗುತ್ತದೆ. ಅಲ್ಲಿ ಆಂಜನೇಯನ ದೇವಾಲಯದ ಮುಂಭಾಗದಲ್ಲಿ ಹೊಂಡದ ಮೇಲೆ ಮಲ್ಲೇಶ್ವರ ದೇವಾಲಯವಿದೆ. ಇದನ್ನು ಮಲ್ಲಪ್ಪನ ಗುಡಿ ಎಂದು ಕರೆಯುತ್ತಾರೆ. ಮೂಲದಲ್ಲಿ ಇದು ಮಣ್ಣಿನಿಂದ ಮುಳಗಿ ಹೋಗಿತ್ತು, ಇತ್ತಿಚಿನ ದಿನಗಳಲ್ಲಿ ಪೂರ್ಣ ಹಳೇ ಮಾದರಿಯಲ್ಲಿ ಕಲ್ಲಿನಿಂದ ಪುನರ್ ನಿರ್ಮಾಣ ಮಾಡಲಾಗಿದೆ.

ದೇವಾಲಯವು ಗರ್ಭ ಗೃಹದ ಅಂತರಾಳ, ನವರಂಗವನ್ನು ಹೊಂದಿದ್ದು, ತ್ರಿಕೂಟ ದೇವಾಲಯವಾಗಿದೆ. ಗರ್ಭಗೃಹದಲ್ಲಿ ೩ ಅಡಿ ಎತ್ತರದ ಶಿವಲಿಂಗವಿದೆ. ಮೇಲೆ ನಕ್ಷತ್ರಕಾರದ ಛಾವಣಿ ಇದೆ. ಇದರ ಮಧ್ಯ ಭುವನೇಶ್ವರಿ ಇದ್ದು, ಇದರ ಬಾಗಿಲುವಾಡವು ಗಜಲಕ್ಷ್ಮಿಯನ್ನು ಹೊಂದಿದೆ.

ಅಂತರಾಳವು ನಾಲ್ಕು ಗೋಡೆಕಂಬಗಳಿಂದ ಕೂಡಿದ್ದು, ಮೇಲ್ಭಾವಣಿ ಪದ್ಮದ ಭುವನೇಶ್ವರಿ ಇದೆ. ಬಾಗಿಲುವಾಡ ಗಜಲಕ್ಷ್ಮಿ ಶಿಲ್ಪ, ಪಂಚಶಾಖೆಯನ್ನು ಪದ್ಮ, ಲತಾ, ಬಳ್ಳಿಗಳನ್ನು ಒಳಗೊಂಡಿದೆ, ಪಕ್ಕದಲ್ಲಿ ನಕ್ಷತ್ರಾಕಾರದ ಜಾಲಂಧ್ರವಿದೆ. ಎಡಭಾಗದ ಗರ್ಭ ಗೃಹದಲ್ಲಿ ಶಿವಲಿಂಗವು ಎರಡು ಅಡಿಯ ಪೀಠದ ಮೇಲೆ ಅರ್ಧ ಅಡಿ ಇದೆ. ಮೆಲ್ಭಾವಣಿ ನಕ್ಷತ್ರಕಾರ, ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಬಾಗಿಲುವಾಡದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳ ತೆರೆದಿದ್ದು ಎಡಕ್ಕೆ ದೇವ ಕೋಷ್ಠಕವಿದೆ. ವಿನಾಯಕ ಮೂರ್ತಿ ಇದೆ.

ಬಲಭಾಗದ ಗರ್ಭಗೃಹವು ಕೂಡ ಎಡ ಭಾಗದ ಗರ್ಭಗೃಹದ ರೀತಿ ಇದ್ದು, ದೇವಕೋಷ್ಠಕದಲ್ಲಿ ಸ್ವಾಮಿಗಳ ಪಾದುಕೆಗಳಿದ್ದು, ನವರಂಗವು ೧೨ ಗೋಡೆ ಕಂಬಗಳು ಸೇರಿದಂತೆ, ಮಧ್ಯೆದಲ್ಲಿ ನಾಲ್ಕ ಕಂಬಗಳು ಗಂಟೆಯಾಕಾರದಲ್ಲಿದೆ. ಸುತ್ತಲಿನ ಕಂಬಗಳು ಚೌಕಕಾರದಲ್ಲಿದ್ದು, ಮಧ್ಯದ ಕಂಬಗಳು ಪೀಠ, ಪಾದ, ಫಲಕ, ದಿಂಡು, ಭೋದಿಗೆಯನ್ನು ಹೊಂದಿದ ಗಂಟೆಯಾಕಾರ, ಎಲೆ, ಬಳ್ಳಿ, ಮಣಿಹಾರಗಳ ಅಲಂಕಾರವಿದೆ. ಮೇಲೆ ಪದ್ಯದಿಂದ ಕೂಡಿದ ಭುವನೇಶ್ವರಿ, ಬಾಗಿಲುವಾಡ ಗಜಲಕ್ಷ್ಮಿ ಕೆತ್ತನೆ ಇದೆ. ಎರಡು ಬದಿಗಳಲ್ಲಿ ತುಂಡನೆಯ ಜಾಲಂದ್ರವಿದೆ.

ದೇವಾಲಯ ಎರಡು ಅಡಿ ಎತ್ತರದ ಅಧಿಷ್ಠಾನದ ಮೇಲೆ ಇದ್ದು, ಭಿತ್ತಿಯಲ್ಲಿ ಹೂವಿನ ಅಲಂಕಾರವಿದೆ. ದೇವಾಲಯ ಮುಂದೆ ನಂದಿಕಂಬ, ಭಗ್ನಗೊಂಡ ವಿಷ್ಣುವಿನ ಶಿಲ್ಪ, ಪಕ್ಕದಲ್ಲಿ ಶಾಸನ, ವೀರಗಲ್ಲುಗಳು, ಹುಲಿ ಬೇಟೆಯ ವೀರಗಲ್ಲು, ಸಪ್ತ ಮಾತೃಕೆ ಶಿಲ್ಪಗಳಿವೆ.

ವೈಷ್ಣವ ದೇವಾಲಯಗಳು

ಪ್ರಾಚೀನ ಧರ್ಮಗಳಲ್ಲಿ ವೈಷ್ಣವ ಧರ್ಮವು ಒಂದು. ವಿಷ್ಣುವಿನ ಅವತಾರಗಳನ್ನು ಕುರಿತು ವೈದಿಕ ಸಾಹಿತ್ಯದ ಇತ್ತಿಚಿನ ಕೃತಿಗಳಲ್ಲಿ ಗುರುತಿಸಲಾಗುತ್ತದೆ. ಮಧ್ಯಕಾಲೀನ ವೈಷ್ಣವ ಸಂಸ್ಕೃತಿಯು ಬಹುತೇಕ ಮತ್ಸ್ಯ, ಕೂರ್ಮ, ವರಹ, ನರಸಿಂಹ, ವಾಮನ, ರಾಮ, ಪರಶುರಾಮ, ಕೃಷ್ಣ, ಬುದ್ಧ, ಮತ್ತು ಕಲ್ಕಿಯನ್ನ ದಶಾವತಾರಗಳಲ್ಲಿ ಒಪ್ಪಿಕೊಂಡಿದ್ದಾರೆ. ಶಿಕಾರಿಪುರ ಭಾಗಗಳಲ್ಲಿ ವೈಷ್ಣವ ಮೂರ್ತಿಗಳ ಆಧಾರದ ಮೇಲೆ ದೇವಾಲಯಗಳ ಬಗ್ಗೆ ಮಾಹಿತಿ ಸಂಗ್ರಹಿಸಬಹುದು. ಆದರೆ ದೇವಾಲಯಗಳು ಅತೀ ಕಡಿಮೆ ಪ್ರಮಾಣದಲ್ಲಿ ಲಭ್ಯವಿದೆ. ಬಹುಶಃ ಧಾರ್ಮಿಕ ಸಂಘರ್ಷಗಳಿಗೆ ಬಲಿಯಾಗಿರಬಹುದು. ಹೆಚ್ಚಾಗಿ ಮೂರ್ತಿಗಳು ಕಂಡುಬರುತ್ತವೆ ಹೊರತ್ತು ದೇವಾಲಯಗಳು ವಿರಳ.

ಕರ್ನಾಟಕದಲ್ಲಿ ಬೌದ್ಧರಾಗಿದ್ದ ಶಾತವಾಹನರ ಆಳ್ವಿಕೆ ಮುಗಿದು ಬ್ರಾಹ್ಮಣರಾಗಿದ್ದ ಕದಂಬರ ಆಳ್ವಿಕೆ ಪ್ರಾರಂಭವಾಗುವಲ್ಲಿ ವೈದಿಕ ಧರ್ಮದ ಪ್ರವೇಶ ಗೋಚರಿಸುತ್ತದೆ. ಈ ಮನೆತನದ ಸಂಸ್ಥಾಪಕ ಮಯೂರ ಶರ್ಮನು ಅಹಿಚ್ಛತ್ರದಿಂದ ಬ್ರಾಹ್ಮಣರನ್ನು

ಅಗ್ರಹಾರವೆಂದೂ, ಆ ಮೇಲೆ ಇಲ್ಲಿ ವೈಧಿಕ ಧರ್ಮ ಭದ್ರಮುಖವಾಗಿ ಬೆಳೆದು ಬಂತೆಂದೂ ಹೇಳಬಹುದು. ರಾಮಾನುಜಾಚಾರ್ಯರ ಆಗಮನದ ತರುವಾಯ ಕರ್ನಾಟಕದಲ್ಲಿ ವಿಷ್ಣುವನ್ನು ಕೇಶವ ಎಂಬ ಹೆಸರಿನಿಂದ ಪೂಜಿಸುವ ಪ್ರವೃತ್ತಿ ವರ್ಧಿಸತೊಡಗಿತು. ಈಗ ಉನ್ನತ ವರ್ಗದ ಮಹಿಳೆಯರು, ಅದರಲ್ಲಿ ಮಂಡಲೇಶ್ವರ ದಂಡನಾಯಕರ ಮಡದಿಯರಾದ ಲಕ್ಷ್ಮೀದೇವಿ, ಸಿರಿದೇವಿರೊಂದಿಗೆ ಕೇಶವಪುರದಲ್ಲಿ ವೀರಕೇಶವನನ್ನು ಪ್ರತಿಷ್ಠಾಪಿಸಿ ದತ್ತಿ ಕೊಟ್ಟಿದ್ದನ್ನು ತಿಳಿಸುತ್ತದೆ.

ಪ್ರಸ್ತುತ ಸಂಶೋಧನಾ ಕ್ಷೇತ್ರಕಾರ್ಯದಲ್ಲಿ ಶೈವ ದೇವಾಲಯಗಳಲ್ಲೇ ಅಂದರೆ ಬಳ್ಳಿಗಾವಿಯ ಕೇದಾರೇಶ್ವರ, ತ್ರಿಪುರಾಂತೇಶ್ವರ, ಪ್ರಭುಲಿಂಗೇಶ್ವರ, ಬೇಗೂರಿನ ಮಲ್ಲಿಕಾರ್ಜುನ, ಮುಗಳಿಗೆರೆಯ ಮಲ್ಲೇಶ್ವರ ದೇವಾಲಯಗಳ ಎಡಭಾಗದಲ್ಲಿ ವೈಷ್ಣವ ಮೂರ್ತಿಗಳು ಪೂಜಿಸುಕೊಳ್ಳುತ್ತದೆ. ಆದರೆ ಶಿಕಾರಿಪುರದ ಕೆಲವು ಭಾಗದಲ್ಲಿ ವೈಷ್ಣವ ಸಂಸ್ಕೃತಿಗೆ ಸಂಬಂಧಿಸಿದ ಮೂರ್ತಿಗಳ ಭಗ್ನ ಅವಶೇಷವಾಗಿ ಲಭಿಸುತ್ತವೆ.

ಸಂಖ್ಯೆ: ೦೧	ಊರು: ದಾಸನಹಳ್ಳಿ
ರಾಜ/ವಂಶ:ಪ್ರಾಚೀನ	ಸ್ಥಳ: ಹೀರೆಜಂಬೂರು ರಸ್ತೆ
ಅಭಿಮುಖ : ಪೂರ್ವಾಭಿಮುಖ	ಸ್ಮಾರಕ: ರಂಗನಾಥ ದೇವಾಲಯ
ಸ್ಥಿತಿ: ಕನಿಷ್ಠ	ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಶಿಕಾರಿಪುರದಿಂದ ಹೀರೆಜಂಬೂರು ಮಾರ್ಗವಾಗಿ ಹೋಗುವಾಗ ಎಡ ಭಾಗದಲ್ಲಿ ಪಾಳುಬಿದ್ದ ದೇವಾಲಯವಿದೆ. ಇದನ್ನು ರಂಗನಾಥ ಎಂತಲೂ, ಭೂತಪ್ಪ ಎಂತಲೂ ಕರೆಯುತ್ತಾರೆ. ದೇವಾಲಯ ಪ್ರಾಚೀನ ಕಾಲಕ್ಕೆ ಸೇರಿದ್ದು, ದೇವಾಲಯ ಮರದ ಬೇರುಗಳಿಂದ ನಾಶವಾಗುತ್ತಿದೆ. ದೇವಾಲಯದ ಗರ್ಭಗೃಹದಲ್ಲಿನ ಮೂರ್ತಿ ವೀರಭದ್ರನ ರೂಪದಲ್ಲಿದ್ದು, ಕೆಳಗೆ ಶಿವ ಲಿಂಗದ ಪೀಠವಿದೆ. ಹಿಂದೆ ಪ್ರಭಾವಳಿ, ಕೆಳ ಭಾಗದಲ್ಲಿ ಚೌರಿ ಹಿಡಿದ ಶಿಲ್ಪಗಳಿವೆ. ಪಕ್ಕದಲ್ಲೆ ಪಾರ್ವತಿಯನ್ನು ಹೋಲುವ ಶಿಲ್ಪವಿದ್ದು, ತಲೆಯ ಭಾಗ ಒಡೆದು ಹೋಗಿದೆ. ಹಾಗೆ ಗರ್ಭಗೃಹದಲ್ಲಿ ಸುಮಾರು ಏಳು ಅಡಿ ಉದ್ದ, ಎರಡು ಅಡಿ ಎತ್ತರದ ಶಿಲೆ ಮೇಲಕ್ಕೆ ಬರುತ್ತಿದೆ. ಇದನ್ನು ಇಲ್ಲಿಯ ಜನರು ಭೂತಪ್ಪ ಎಂಬುದಾಗಿ ಕರೆಯುತ್ತಿದ್ದಾರೆ.

ಬಾಗಿಲುವಾಡದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಚೌಕಕಾರದ ಕಂಬ, ಕೆಳಗೆ ದ್ವಾರಪಾಲಕ ಪಟ್ಟಿಕೆ, ಚೌರಿ ಹಿಡಿದ ಶಿಲ್ಪವಿದೆ. ಬಾಗಿಲುವಾಡದ ಮೇಲಿನ ಎರಡು

ಮೂಲೆಯಲ್ಲಿ ದೇವ ಕೋಷ್ಠ ರೀತಿ ಇದ್ದು, ಸ್ತ್ರೀ, ಪುರುಷ ಶಿಲ್ಪಗಳಿವೆ. ಕುಳಿತ ಭಂಗಿ, ಎರಡು ಕೈಗಳನ್ನು ನಾಭಿಯ ಬಳ್ಳಿ ಸೇರಿಸಿ ಧ್ಯಾನಕ್ಕೆ ಕುಳಿತಿವೆ. ದೇವಾಲಯದ ಮೇಲೆ ಏಳು ಅಂತಸ್ತಿನ ಗಾರೆಯ ಶಿಖರವಿದ್ದು, ಮಧ್ಯೆ ಮಧ್ಯೆದಲ್ಲಿ ದೇವಕೋಷ್ಠಕಗಳಿವೆ. ದೇವಾಲಯದ ಮುಂದೆ ಅಂತರಾಳ ಮತ್ತು ನವರಂಗದ ತಳವಿನ್ಯಾಸ ಮಾತ್ರ ಕಾಣಸಿಗುತ್ತದೆ. ಇನ್ನೂ ಮುಂದೆ ಕಲ್ಲಿನ ಕಂಬವಿದೆ. ಎಡಭಾಗದಲ್ಲಿ ಆಂಜನೇಯನ ಮೂರ್ತಿಯಿರುವ ಮಂಟಪವಿದೆ.

ಜೈನ ಬಸದಿಗಳು

ಕರ್ನಾಟಕದ ಪ್ರಾಚೀನ ಜೈನ ತೀರ್ಥ ಕ್ಷೇತ್ರಗಳಲ್ಲಿ ಬಂದಳಿಕೆ ತೀರ್ಥ ಕ್ಷೇತ್ರವೂ ಒಂದು. ಇಲ್ಲಿಯ ಶಾಂತಿ ಜಿನೇಶ ಬಸದಿ ಕ್ರಿ.ಶ.೩ನೇ ಶತಮಾನದ ವೇಳೆಗೆ ರಚಿತವಾದುದು. ಜಕ್ಕಿಯಬ್ಬೆ ಮತ್ತು ನಾಗಾರ್ಜುನ ನಾಪ್ಗಾವುಂಡರು ನಾಗರ ಖಂಡ-೭೦ನ್ನು ಆಳುತ್ತಿದ್ದರು. ಸತ್ತರ್ ನಾಗಾರ್ಜುನನು ಅತೀತನಾದನು. ಜಕ್ಕಿಯಬ್ಬೆ ಕೆಲವು ಕಾಲ ನಾಪ್ಗಾವುಂಡತನ ನಡೆಸಿದಳು. ಕಡೆಗೆ ಪಾರ್ಶ್ವನಾಥ ತೀರ್ಥಂಕರ ಬ್ರಹ್ಮ ಜೀನಾಲಯದಲ್ಲಿ ಬನ್ದಣಿಕೆಯ ತೀರ್ಥಂಕರ ಪ್ರತಿ ಬದ್ಧ ಬಸದಿಗಳಾದವು.(ಹಂಪಾ ನಾಗರಾಜಯ್ಯ ೧೯೮ ಪುಟ೪೪) ಮಾಘ್ಗಣಂದಿ ಭಟ್ಟಾರಕರು ಮೂಲ ಸಂಘದೇಸಿ ಗಣದಲಾಳ ಕೋಲಾನ್ವಯಕ್ಕೆ ಸೇರಿದವರು. ಚಾಳುಕ್ಯರ ಸಾಮಂತ ಲಕ್ಷ್ಮಣ ರಾಜನು ಸಾಮಂತನಾಗಿದ್ದಾಗ ಇವರು ಬಳ್ಳಿಗಾವಿಯ ಮಲ್ಲಿಕಾಮೋದ ಶಾಸ್ತ್ರಿನಾಥ ಬಸದಿಯಲ್ಲಿದ್ದರು. ಬಳ್ಳಿಗಾವಿಯಲ್ಲಿ ಆಳುತ್ತಿದ್ದ ಲಕ್ಷ್ಮಣ ರಾಜನು ಕವಿ ಶಾಂತಿನಾಥನ ಅಪೇಕ್ಷೆಯಂತೆ ಈ ಬಸದಿಯನ್ನು ಕಲ್ಲಿನಲ್ಲಿ ಕಟ್ಟಿಸಿದನು ಸೋವಲದೇವಿ ಎಂಬುವಳು ಅತ್ತಿಮಬ್ಬೆ ಎಂದು ಜೈನರಲ್ಲಿ ಪ್ರಸಿದ್ಧಿ ಪಡೆದಿದ್ದಳು.

ಸಂಖ್ಯೆ: ೦೧ ಹೆಸರು- ಜಿನಾಲಯ

ಸ್ಥಳ ಅಮಟೆಕೊಪ್ಪ ಸ್ಥಿತಿ – ಕುರುಹು ಮಾತ್ರ

ರಾಜ। ವಂಶ – ತ್ರಿಭುವನಮಲ್ಲ ಕಾಲ – ೧೦-೧೧ ನೇ ಶತಮಾನ

ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲನ ಕಾಲದಲ್ಲಿ ಕ್ರಿ.ಶ.೧೧೦೦ರ ವೇಳೆಗೆ ಗೋವಿಂದರಸನು ಬನವಾಸಿಯ ಮಂಡಲಾಧಿಪತಿಯಾಗಿದ್ದಾಗ ಸೋಮರಸ ಮತ್ತು ಸೋಮಲಾಂಬಿಕೆಯ ಸುಪುತ್ರಿಯಾದ ವಿಜಯಾಂಬಿಕೆ ಮತ್ತು ಉದಯಾಂಬಿಕೆಯರು ಒಂದು ಜಿನಾಲಯವನ್ನು ಕಟ್ಟಿಸಿದ್ದು, ಇದರ ಕುರುಹುಗಳು ಮಾತ್ರ ಇಲ್ಲಿ ದೊರೆಯುತ್ತವೆ.

ಸಂಖ್ಯೆ: ೦೨ ಊರು: ಗೊಗ್ಗ

ರಾಜ/ವಂಶ:ಪ್ರಾಚೀನ ಸ್ಥಳ: ಊರಿನ ಭಾಗ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಬಸದಿ/ವೀರಭದ್ರ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ವೀರಭದ್ರ ದೇವಾಲಯವಾಗಿ ಬಸದಿಯು ಮಾರ್ಪಡಾಗಿದೆ. ಯೇಚರಸನ ಉಲ್ಲೇಖವಿರುವ ಶಾಸನವು ಇದನ್ನು ಜೈನ ಬಸದಿ ಎಂದು ಸಾರಿ ಹೇಳುತ್ತದೆ. ಎಪಿಗ್ರಾಫಿ ಹಳೇಯ ಸಂಪುಟ ಏಳರಲ್ಲಿ ಶಿಕಾರಿಪುರ ಶಾಸನ ಸಂಖ್ಯೆ ೩೧೭ರಲ್ಲಿ ಗೊಗ್ಗದಲ್ಲಿ ಯೇಚಣ ನಿರ್ಮಾಣ ಮಾಡಿದ ಬಸದಿಯ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಆದರೆ ಧಾರ್ಮಿಕ ಒತ್ತಡದಲ್ಲಿ ಇಂದು ವೀರಭದ್ರ ದೇವಾಲಯವಾಗಿದೆ.

ಸಂಖ್ಯೆ: ೦೩ ಊರು: ಚಿಕ್ಕಮಾಗಡಿ

ರಾಜ/ವಂಶ:ಕಲ್ಯಾಣ ಚಾಲುಕ್ಯ ಸ್ಥಳ: ಊರಿನ ಒಳಭಾಗ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಶಾಂತಿನಾಥ ಬಸದಿ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಶಾಂತಿನಾಥ ಬಸದಿಯು ಕ್ರಿ.ಶ. ೧೧೮೨ ಶಾಸನದಲ್ಲಿ ನಾಗರಖಂಡ-೭೦ರ ಅಳ್ವಿಕೆಯ ಪ್ರದೇಶವಾಗಿತ್ತು. ಸಾಮಂತ ಶಂಕರನ ಕಾಲಕ್ಕೆ ಕಾಣಬಹುದು. ಬಸದಿಯು ಗರ್ಭಗೃಹ ಅಂತರಾಳ, ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಾಂತಿನಾಥ ಜೈನ ಮುನಿಯ ಶಿಲ್ಪವಿದೆ. ಬಾಗಿಲುವಾಡವು ಸಾಧಾರಣ ಪಟ್ಟಿಕೆಗಳಿದ್ದು, ಜೈನ ಮುನಿ ಕುಳಿತ ಭಂಗಿಯಲ್ಲಿ ಕಾಣಬಹುದು. ಲಲಾಟಬಿಂಬದಲ್ಲಿ ಹೂಬಳ್ಳಿಯ ಅಲಂಕಾರವಿದೆ. ಅಂತರಾಳದ ಮೇಲ್ಚಾವಣಿಯು ಹೂವಿನ ಅಲಂಕಾರವಿದ್ದು, ಬಾಗಿಲುವಾಡದಲ್ಲಿ ಜೈನ ಸಂಪ್ರದಾಯ ಮುನಿಗಳ ಶಿಲ್ಪ, ಕೆಳಭಾಗದಲ್ಲಿ ದ್ವಾರಪಾಲಕರು, ಕುಂಭದ ಕೆತ್ತನೆ, ಮದನಿಕೆಯರ ಶಿಲ್ಪಗಳಿವೆ.

ಬಸದಿಯು ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಪ್ರವೇಶ ದ್ವಾರ ಒಂದೇ ಕಡೇ ಮಾತ್ರವಿದೆ. ಭಿತ್ತಿಯ ಭಾಗವು ಪದ್ಮಗಳ ಸಾಲಿನ ಪಟ್ಟಿಕೆಯನ್ನು ಹೊಂದಿದೆ. ನವರಂಗದಲ್ಲಿ ಗೋಡೆಕಂಬಗಳು ಸೇರಿದಂತೆ ಮಧ್ಯೆದಲ್ಲಿ ಗಂಟೆಯಾಕಾರದ ಕಂಬಗಳಿವೆ. ಬಾಗಿಲುವಾಡದಲ್ಲಿ ಜೈನ ಮುನಿ ಮತ್ತು ಪರಿವಾರ ಶಿಲ್ಪಗಳಿವೆ. ಮೇಲೆ

ಹಂಸಗಳ ಸಾಲುಗಳ ಪಟ್ಟಿಕೆಯ ಕೆತ್ತನೆಯಿದೆ. ಮಕರ ಶಿಲ್ಪಗಳಿಂದ ಕೂಡಿದ ಲಲಾಟಬಿಂಬ ಜೊತೆಗೆ ಎಲೆ ಬಳ್ಳಿಗಳ ಮಧ್ಯೆದಲ್ಲಿ ಕುಬ್ಜ, ಮದನಿಕೆ ಶಿಲ್ಪಗಳಿವೆ. ಅದರ ಪಕ್ಕದಲ್ಲಿ ಕುಂಬಗಳ ಮೇಲೆ ಕಂಬವಿದ್ದು, ಕೆಳಗೆ ಕುಬ್ಜ, ಶಿಲಾ ಬಾಲಕಿ, ಚೌರಿ ಹಿಡಿದ ಶಿಲ್ಪಗಳಿವೆ. ಹಾಗೆ ಹೂಬಳ್ಳಿಯ ಅಲಂಕಾರವಿದೆ.

ಸಂಖ್ಯೆ: ೦೪ ಊರು: ಬಂದಳಿಕೆ

ರಾಜ/ವಂಶ:ಕಲ್ಯಾಣ ಚಾಳುಕ್ಯ ಸ್ಥಳ: ಹೊಂಡದ ಪಕ್ಕ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಶಾಂತಿನಾಥ ಬಸದಿ

ಸ್ಥಿತಿ: ಮಧ್ಯಮ ಕಾಲ: ಕ್ರಿ.ಶ.ಸು. ೧೦-೧೧ನೆಯ ಶತಮಾನ

ಬಂದಳಿಕೆಗೆ ಹೋಗುವ ಮಾರ್ಗದ ಬಲಭಾಗದಲ್ಲಿ ಕೆರೆಯ ಏರಿಗೆ ಹೊಂದಿಕೊಂಡಿರುವ ಸ್ಮಾರಕವೇ ಜೈನ ಬಸದಿಯ ಶಾಂತಿನಾಥನದು. ಕ್ರಿ.ಶ.೫೨೮ರ ಶಿವಳ್ಳಿ ತಾಮ್ರ ಶಾಸನದಲ್ಲಿ ಬಂದಳಿಕೆಯ ಶಾಂತತಟಾಕದ ಉಲ್ಲೇಖವಿದೆ. ಇದು ಜೈನ ಶಾಂತನಾಥ ತಿರ್ಥಂಕರನಿಂದ ಈ ಕೆರೆಗೆ ಶಾಂತತಟಾಕ ಎಂದು ಹೆಸರು ಬಂದಿದೆ. ಕ್ರಿ.ಶ.೯೦೨ರಲ್ಲಿ ನಾಗಾರ್ಜುನ ಕಾಲದಲ್ಲಿ ಶಾಂತಿನಾಥ ಬಸದಿಯನ್ನು ನಿರ್ಮಾಣಗೊಂಡಿದೆ. ಇದು ರಾಷ್ಟಕೂಟರ ಕೃಷ್ಣ (ಕನ್ನರದೇವ)ನ ಕಾಲಕ್ಕೆ ದೇಣಿಗೆಯನ್ನು ಪಡೆದಿದ್ದು, ಕ್ರಿ.ಶ.೯೧೨ರಲ್ಲಿ ನಾಗಾರ್ಜುನನ ಪತ್ನಿ ಜಕ್ಕಿಯಬ್ಬೆ ಕೂಡ ದೇಣಿಗೆ ನೀಡಿದ್ದಾಳೆ. ಬೊಪ್ಪಸೆಟ್ಟಿ ಇದನ್ನು ಪುನಃ ನವೀಕರಿಸಿದ್ದಾನೆ. ಬಸದಿಯು ಗರ್ಭಗೃಹ, ಅಂತರಾಳ, ನವರಂಗ, ತೆರೆದ ಮುಖ ಮಂಟಪ ಹಾಗೂ ಮೂರು ಕಡೆಗಳಲ್ಲಿ ಪ್ರವೇಶದ್ವಾರವಿದೆ. ಬಸದಿಯು ನಾಲ್ಕೂವರೆ ಅಡಿ ಎತ್ತರದ ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ.

ಗರ್ಭಗೃಹದಲ್ಲಿ ಪೀಠ ಭಾಗವಿದ್ದು, ತ್ರುಟಿತಗೊಂಡಿರುವ ಜೈನ ಮೂರ್ತಿಗಳು ಸಂಪ್ರದಾಯಕವಾಗಿವೆ. ಗರ್ಭಗೃಹವು ಪಂಚರಥದ ವಿನ್ಯಾಸವಿದೆ. ಇದರ ಬಾಗಿಲುವಾಡ ಸಾಧಾರಣ ಪಟ್ಟಿಕೆಗಳಿದ್ದು, ಜೈನ ಮುನಿ ಕುಳಿತ ಭಂಗಿಯಲ್ಲಿ ಕಾಣಬಹುದು. ಲಲಾಟಬಿಂಬದಲ್ಲಿ ಹೂಬಳ್ಳಿಯ ಅಲಂಕಾರವಿದೆ. ಅಂತರಾಳದ ಮೇಲ್ಛಾವಣಿಯು ಹೂವಿನ ಅಲಂಕಾರವಿದ್ದು, ಬಾಗಿಲುವಾಡದಲ್ಲಿ ಜೈನ ಸಂಪ್ರದಾಯ ಮುನಿಗಳ ಶಿಲ್ಪ, ಕೆಳಭಾಗದಲ್ಲಿ ದ್ವಾರಪಾಲಕರು, ಕುಂಭದ ಕೆತ್ತನೆ, ಮದನಿಕೆಯರ ಶಿಲ್ಪಗಳಿವೆ.

ನವರಂಗವು ೧೨ ಗೋಡೆಕಂಬಗಳು ಸೇರಿದಂತೆ ಮಧ್ಯೆ ೪ ಕಂಬಗಳನ್ನು ಒಳಗೊಂಡಿದೆ. ದೇವಕೊಷ್ಟಕವನ್ನು ಹೊಂದಿದ್ದು ಪದ್ಮಾವತಿ, ಜೈನನ ಹೋಲಿಕೆಯಿರುವ ಶಿಲ್ಪವಿದೆ. ಪದ್ಮಾವತಿ ಶಿಲ್ಪವು ಮೂರು ಅಡಿ ಎತ್ತರವಿದ್ದು, ಕುಳಿತ ಭಂಗಿಯಲ್ಲಿದೆ. ಜೈನನ

ಹೊಲಿಕೆಯ ಶಿಲ್ಪವು ೪ ಅಡಿ ಎತ್ತರವಿದ್ದು, ತಲೆಯ ಮೇಲೆ ಹೆಡೆಯ ಕೆತ್ತನೆಯಿದೆ. ಮಣಿಯ ಅಲಂಕಾರ, ಗುಂಗುರು ಕೂದಲು, ಕೀರಿಟವಿದೆ. ಕಂಬಗಳು ದುಂಡಾನೆ, ಚೌಕಕಾರ, ನಕ್ಷತ್ರಾಕಾರ, ಗಂಟೆಯಾಕಾರದಲ್ಲಿದ್ದು, ಹೂಬಳ್ಳಿ, ಮಣಿಯ ಅಲಂಕಾರವಿದೆ. ಬಾಗಿಲುವಾಡದಲ್ಲಿ ಜೈನ ಮುನಿ ಮತ್ತು ಪರಿವಾರ ಶಿಲ್ಪಗಳಿವೆ. ಮೇಲೆ ಹಂಸಗಳ ಸಾಲುಗಳ ಪಟ್ಟಿಕೆಯ ಕೆತ್ತನೆಯಿದೆ. ಮಕರ ಶಿಲ್ಪಗಳಿಂದ ಕೂಡಿದ ಲಲಾಟಬಿಂಬ ಜೊತೆಗೆ ಎಲೆ ಬಳ್ಳಿಗಳ ಮಧ್ಯೆದಲ್ಲಿ ಕುಬ್ಜ, ಮದನಿಕೆ ಶಿಲ್ಪಗಳಿವೆ. ಅದರ ಪಕ್ಕದಲ್ಲಿ ಕುಂಭಗಳ ಮೇಲೆ ಕಂಬವಿದ್ದು, ಕೆಳಗೆ ಕುಬ್ಜ, ಶಿಲಾ ಬಾಲಕಿ, ಚೌರಿ ಹಿಡಿದ ಶಿಲ್ಪಗಳಿವೆ. ಹಾಗೆ ಹೂಬಳ್ಳಿಯ ಅಲಂಕಾರವಿದೆ.

ತೆರೆದ ಮುಖ ಮಂಟಪವು ಸುಮಾರು ೩೬ ಕಂಬಗಳನ್ನು ಹೊಂದಿದ್ದು, ೭ ಕಂಬಗಳ ನಾಶವಾಗಿವೆ. ಉಳಿದಂತೆ ಸುತ್ತಲು ಕಕ್ಷಾಸನದ ಮೇಲೆ ನಕ್ಷತ್ರಕಾರದಲ್ಲಿವೆ. ಚೌಕಕಾರ, ಅಷ್ಟಮುಖದ ಆಕಾರ, ನಕ್ಷತ್ರಾಕಾರದ ಕಂಬಗಳು ಕಾಣಬಹುದು. ಮಧ್ಯೆದ ನಾಲ್ಕು ಕಂಬಗಳು ಚೌಕಕಾರ ಮತ್ತು ಚಕ್ರಬಂಧವಿದ್ದು, ಕೆಳ ಭಾಗದಲ್ಲಿ ಶಾಸನವಿದೆ. ಭಾವಣಿಯ ಸುತ್ತಲೂ ಹೂವಿನ ಕೆತ್ತನೆಯಿದೆ. ಸುತ್ತಲೂ ಕಕ್ಷಾಸನದ ಹಿಂಭಾಗದಲ್ಲಿ ಹೂಬಳ್ಳಿ, ಮಿಥುನ ಶಿಲ್ಪಗಳು, ಲಜ್ಜೆಗೌರಿ, ನರ್ತಕಿಯರು, ವಾದ್ಯದವರ ಶಿಲ್ಪಗಳಿವೆ. ದ್ವಾರದಲ್ಲಿ ದ್ವಾರಪಾಲಕರ ಶಿಲ್ಪ, ಶಾಸನ ಶಿಲ್ಪಗಳಿವೆ. ಬಸದಿಯ ಆವರಣದಲ್ಲಿ ಸಾಕಷ್ಟು ಶಿಲ್ಪಗಳು ತ್ರುಟಿತವಾಗಿ ಬಿದ್ದಿವೆ.

ಬೌದ್ಧ ದೇವಾಲಯಗಳು

ಬಳ್ಳಿಗಾವೆಯ ಕ್ರಿ.ಶ.೧೦೬೪ರ ಶಾಸನವು ಜಯಂತಿ ಬೌದ್ಧ ವಿಹಾರ ಮಾಡಿಸಿ ದತ್ತಿ ಬಿಟ್ಟಿರುವುದನ್ನು ತಿಳಿಸುತ್ತದೆ.(ಎ.ಕ.೭, ಶಿಕಾರಿ.೭೦, ಕ್ರಿ.ಶ.೧೦೬೪) ತೊಗರ್ಸಿಯ ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ಬಳಿಯ ಕಲ್ಯಾಣಿಯ ದಡದಲ್ಲಿ ಬೌದ್ಧ ದೀಪಸ್ತಂಭವನ್ನು ಹಿರಿಯ ಸಂಶೋಧಕರಾದ ಅ.ಸುಂದರರವರು ಗುರುತಿಸಿದ್ದಾರೆ. (ಕನ್ನಡ ಭಾರತಿ.೮-೨, ೧೯೭೫, ಪುಟ.೧೩-೧೪) ಚಾಳುಕ್ಯ ತ್ರಿಭುವನ ಮಲ್ಲನ ಕಾಲದಲ್ಲಿ ದಂಡನಾಯಕ ರೂಪಭಟ್ಟಯ್ಯನು ಬಳ್ಳಿಗಾವೆಯಲ್ಲಿ ಜಯಂತಿ ಪ್ರಭುದ್ಧ ವಿಹಾರವನ್ನು ಸ್ಥಾಪಿಸಿ, ತವಣೆಯ ತಮ್ಮ ಮೂಡಿಸಿದ ತಾರಾಭಗವತಿ ಕೇಶವ ದೇವರಿಗೆ ಭೂದಾನ ನೀಡಿದನು. ಕ್ರಿ.ಶ.೧೦೬೭ರಲ್ಲಿ ಬಳ್ಳಿಗಾವಿಯ ಪುಲ್ಲೆ ಬಯಲಿನಲ್ಲಿ ಒಪ್ಪವರಿ ವಂಶದ ನಾಗಿಯಕ್ಕೆ ಎಂಬುವಳು ಬೌದ್ಧವಿಹಾರವನ್ನು ಕಟ್ಟಿಸಿ, ತಾರಾಭಗವತಿ ವಿಗ್ರಹವನ್ನು ಪ್ರತಿಷ್ಠಾಪಿಸಿದಳು (ಎ.ಕ.೭,ಶಿಕಾರಿ.೧೬೬, ಕ್ರಿ.ಶ.೧೦೬೭) ಇದರ ಜೊತೆಗೆ ಅದರ ಪೂಜಾ ನಿಮಿತ್ತಕ್ಕೆ ಪ್ರಬೌದ್ಧ ಬಟಾರ ಕಾಲವನ್ನು ತೊಳೆದು ಚಾಳುಕ್ಯ ಚಕ್ರವರ್ತಿಯ ಒಪ್ಪಿಗೆ ಪಡೆದು ಭೂಮಿಯನ್ನು ದಾನ ಮಾಡಿದ ವಿಷಯ ಬಂದಿದೆ. ಹತ್ತಾರು ವಿಶೇಷಣಗಳಿಂದ ಕೀರ್ತಿವೆತ್ತ ಬಾಪ್ಪುರ ನಾಗಿಯಕ್ಕ ಬೌದ್ಧ ಧರ್ಮದ ಕೇಂದ್ರಬಿಂದುವಿನಂತೆ ಶೋಭಿಸಿದ್ದಾಳೆ. ನಮ್ಮ ನಾಡಿನಲ್ಲಿ ಪ್ರಥಮ ಉಲ್ಲೇಖವಾದ ತಾರಾಭಗವತಿಯನ್ನು ಬಾಪ್ಪುರ ನಾಗಿಯಕ್ಕ

ಸ್ಥಾಪಿಸಿದುದೇ ಆಗಿರಬೇಕು. ತಾರಾಭಗವತಿಯು ವಜ್ರಯಾನವೆಂಬ ಬೌದ್ಧ ಪಂಥದ ದೇವತೆ(ಎ.ಕ.೭, ಶಿಕಾರಿ.೧೭೦, ಕ್ರಿ.ಶ.೧೦೬೫) ಬಳ್ಳಿಗಾವಿಯ ಶಾಸನದಲ್ಲಿ ಉಲ್ಲೇಖಿತವಾದ ಪುಲ್ಲೆಯ ಬಯಲು ಬೌದ್ಧರಿಗೆ ಪ್ರಿಯವಾದ ಮೃಗದಾವವಿರಬೇಕೆಂದು ಶ್ರೀಹಯವದನ ರಾಯರ ಊಹೆ (ಎ.ಕ.೭ಶಿಕಾರಿ.೧೨೦, ಕ್ರಿ.ಶ.೧೦೪೮)

ಚುಟುಕುಲದ ಶಿವಸ್ಕಂಧ ನಾಗಸಿರಿದ ಚಾಳುಕ್ಯ ಅಕ್ಕದೇವಿ, ಲಕ್ಷ್ಮಿದೇವಿ, ಶಾಂತಲೆ ಬೌದ್ಧ ಧರ್ಮದ ನೆರವಿಗೆ ನಿಂತ ರಾಜಪರಿವಾರದ ಮಹಿಳೆಯರು (ಎ.ಕ.೭,ಶಿಕಶರಿ.೧೭೦, ಕ್ರಿ.ಶ.೧೬೫) ಬೌದ್ಧ ವಿಹಾರಗಳಿಗೆ ಒಬ್ಬೊಬ್ಬ ಆಚಾರ್ಯರನ್ನು ನಿಯಮಿಸುತ್ತಿದ್ದಂತೆ ಕಂಡುಬರುತ್ತದೆ. ರೂಪ ಭಟ್ಟಯ್ಯ ಬಳ್ಳಿಗಾವಿಯಲ್ಲಿ ಕಟ್ಟಿಸಿದ ಜಯಂತಿ ಪ್ರಬೌದ್ದ ವಿಹಾರದಲ್ಲಿ ತಾರಾಭಗವತಿ, ಕೇಶವದೇವ, ಲೋಕೇಶ್ವರ ಬೌದ್ಧ ದೇವರನ್ನು ಸ್ಥಾಪಿಸಿದಂತೆ ವಿಷಯವಿದೆ.(ತಾಳ್ತಜೆ ವಸಂತಕುಮಾರ್,೧೯೮೮ ಪುಟ-೮೮-೮೯). ಕ್ರಿ.ಶ.೧೦೬೭ ರಲ್ಲಿ ತಾರಾಭಗವತಿಯನ್ನು ನಿರ್ಮಿಸಿದ ಈ ನಾಗಿಯಕ್ಕ ಕ್ರಿ.ಶ.೧೧೯೮ರ ಕಾಲಕ್ಕೆ ಶೈವ ಆಚಾರ್ಯರ ಸಮಾನ ಸ್ಥಾನದಲ್ಲಿ ನಿಲ್ಲಬೇಕಾದರೆ ಸುಮಾರು ೩೧ ವರ್ಷಗಳ ಅಂತರದಲ್ಲಿ ಅವಳು ಸಂಪೂರ್ಣವಾಗಿ ಆಧ್ಯಾತ್ಮದತ್ತ ಒಲಿದಿರುವ ಸಾಧ್ಯತೆ ಇದೆ. ಬಹುಶಃ ನಾಗಿಯಕ್ಕ ಪತಿಯ ಮರಣಾನಂತರ ಸಾಂಸಾರಿಕ ಜೀವನದಿಂದ ಮುಕ್ತಳಾಗಿ ಶಾಲೆಯ ಪರ್ಷೆಯ ಶಾಲೆಯ ಬೌದ್ಧಾಲಯದ ಆಚಾರ್ಯಿಣಿಯೆನಿಸಿಕೊಂಡು ಧರ್ಮ ಕಾರ್ಯಕ್ಕೆ ತನ್ನನ್ನು ಮುಡುಪಾಗಿಟ್ಟುಕೊಂಡಿರಬೇಕು.

ಹೀಗೆ ಶಿಕಾರಿಪುರದ ಭಾಗಗಳಲ್ಲಿ ಬೌದ್ಧ ದೇವಾಲಯಗಳು ನಿರ್ಮಾಣವಾಗಿದ್ದು, ಅವರ ಅವಶೇಷಗಳು ಲಭಿಸುತ್ತವೆ. ಬಳ್ಳಿಗಾವಿಯ ವಸ್ತು ಸಂಗ್ರಾಹಾಲಯದಲ್ಲಿ ತಾರಾಭಗವತಿ ಶಿಲ್ಪವು ಮಾತ್ರ ಇದೆ. ಹಾಗಾಗಿ ಅವರ ದೇವಾಲಯಗಳನ್ನು ನಿರ್ಮಿಸಿದ ವಿಷಯ ಶಾಸನಗಳಲ್ಲಿ ಲಭ್ಯವಿದ್ದು, ದೇವಾಲಯಗಳು ಕಂಡುಬರುತ್ತಿಲ್ಲ.

ಶಾಕ್ತ ದೇವಾಲಯಗಳು

ಪ್ರಾಚೀನ ಮಾನವನು ಶಕ್ತಿಯ ಆರಾಧಕನಾಗಿದ್ದು, ವಿವಿಧ ಶಕ್ತಿಗಳನ್ನು ಪೂಜಿಸುತ್ತಿದ್ದನು. ಕ್ರಮೇಣ ಈ ಶಕ್ತಿ ದೇವತೆಗಳೇ ಮುಂದೆ ಗ್ರಾಮೀಣ ದೇವತೆಯಾಗಿವೆ. ದ್ರಾವಿಡರ ಮಾತೃ ಪ್ರಧಾನ ಸಮಾಜದ ಸೃಷ್ಟಿಯ ಹಿನ್ನೆಲೆಯಲ್ಲಿ ಶಾಕ್ತ ಮೂರ್ತಿಗಳು ಉಗಮವಾಗಿ ನಂತರದ ಕಾಲಗಳಲ್ಲಿ ಶಕ್ತಿಯ ಪ್ರತಿರೂಪವಾಗಿ ಶಕ್ತ ದೇವತೆಗಳಾಗಿ ಬೆಳೆದು ಬಂದಿದೆ. ಹಾಗಾಗಿ ಶಾಕ್ತ ದೇವತೆಗಳ ಆರಾಧನೆ ತುಂಬಾ ಪ್ರಾಚೀನವಾದುದು.

ಅದರಲ್ಲೂ ಶಿಷ್ಟರನ್ನು ರಕ್ಷಿಸುವ ದುಷ್ಟರನ್ನು ಶಿಕ್ಷಿಸುವ ಶಕ್ತಿಯನ್ನು ಹೊಂದಿರುವ ದೇವತೆಯನ್ನು ಗ್ರಾಮದೇವತೆಗಳಾಗಿ ಆದಿದೇವತೆಳಾಗಿ ಪೂಜಿಸುವುದು ಕಾಣಬಹುದು.

ಸಂಖ್ಯೆ: ೦೧ ಊರು: ಬಳ್ಳಿಗಾವಿ

ರಾಜ/ವಂಶ:ಪ್ರಾಚೀನ ಸ್ಥಳ: ಕೆರೆಯ ಏರಿಯ ಮೇಲೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಕಾಳಿಕಾ ದೇವಿ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ---

ದೇವಾಲಯವು ಗರ್ಭಗೃಹ, ಮುಖಮಂಟಪವನ್ನು ಹೊಂದಿದ್ದು, ಕ್ರಿ.ಶ. ೧೧೩೧ ರಲ್ಲಿ ಗುಣವರ್ಮ ಶೆಟ್ಟಿಯ ಹೆಸರು ಉಲ್ಲೇಖಿಸುತ್ತದೆ. ಗರ್ಭಗೃಹದಲ್ಲಿ ಕಾಳಿ ದೇವಿಯು ಕುಳಿತ ಭಂಗಿಯಲ್ಲಿದೆ. ಮೂರ್ತಿಯ ಪಕ್ಕ ಚೌರಿಯನ್ನು ಹಿಡಿದ ಶಿಲ್ಪಗಳಿವೆ. ಬಾಗಿಲುವಾಡದ ಶಿಲ್ಪವು ಕಾಳಿ ಸ್ವರೂಪಿನ್ನು ಹೊಲುತ್ತದೆ. ಮುಖ ಮಂಟಪದಲ್ಲಿ ನಾಲ್ಕು ಗೊಡೆಕಂಬಗಳಿವೆ. ನಂದಿ, ದ್ವಾಪಾಲಕರ ಶಿಲ್ಪಗಳಿವೆ. ದೇವಾಲಯದ ಮುಂದೆ ಕೆರೆಯ ಅಂಗಳದ ಮಂಟಪದಲ್ಲಿ ಅಮೃತಲಿಂಗವಿದೆ.

ಸಂಖ್ಯೆ: ೦೨ ಊರು: ಬಂದಳಿಕೆ

ರಾಜ/ವಂಶ:ಪ್ರಾಚೀನ ಸ್ಥಳ: ಊರ ಹೊರಗೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ: ಬನಶಂಕರಿ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ---

ಕ್ರಿ.ಶ.೬ನೇಯ ಶತಮಾನದ ಆರಂಭದಲ್ಲಿ ಬಂದಳಿಕೆಯ ಮಾಹೇಶ್ವರಿಯ ಕ್ಷೇತ್ರ ಎಂದು ಕರೆಸಿಕೊಂಡಿದೆ. ಬನಶಂಕರಿ ದೇಗುಲದ ಬಗ್ಗೆ ಭೋಜರಾಜ.ಬ.ಪಾಟೀಲ್‌ರವರು ಕ್ರಿ.ಶ ೧೩೬೮ರ ಶಾಸನ ರಾಜಧಾನಿ ಬಂದಳಿಕೆಯ ಬನದೇವಿ ದೇವಾಲಯ ಉಲ್ಲೇಖ ಆ ಕಾಲವಲ್ಲದೆ ಹಿಂದಿನ ಪರಂಪರೆಯನ್ನು ತೋರಿಸುತ್ತದೆ ಎಂದು ಹೇಳಿದ್ದಾರೆ. ಶಿವಳ್ಳಿಯ ತಾಮ್ರಶಾಸನ ಬಂದಳಿಕೆಯ ಮಾಹೇಶ್ವರಿ ಕ್ಷೇತ್ರದ ಉಲ್ಲೇಖ ಈಗಿರುವ ಬನದೇವಿಯ ರೂಪ ಲಜ್ಜೆಗೌರಿ ವಿಗ್ರಹವಿರಬಹುದು ಎಂದು ಊಹಿಸಲಾಗಿದೆ.

ಪೀಠದ ಮೇಲೆ ವಿರಾಜಮಾನಳಾಗಿರುವ ಚತುರ್ಭುಜಾಕೃತಿಯ ಬನಶಂಕರಿ ವಿಗ್ರಹ ಕಪ್ಪು ಶಿಲೆಯಿಂದ ನಿರ್ಮಾಣಗೊಂಡಿದೆ. ಈ ವಿಗ್ರಹದ ಎಡಬಲದಲ್ಲಿ

ಚೌರಿಬೀಸುವ ಸೇವಕಿಯರ ವಿಗ್ರಹಗಳಿವೆ. ದೇವಿಯ ತಳಭಾಗದಲ್ಲಿ ಯೋನಿಯ ಎದುರು ಹೆಡೆತೆರೆದ ನಾಗವನ್ನು ಕಂಡರಿಸಲಾಗಿದೆ. ದೇವಿಯ ಹಿಂದಿನ ಹಸ್ತಗಳ ಒಂದರಲ್ಲಿ ತ್ರಿಶೂಲ, ಇನ್ನೊಂದರಲ್ಲಿ ಚಪಗೊಡಲಿ ಇದೆ. ಬಲಭಾಗದ ತೊಡೆಯ ಮೇಲೆ ಅಭಯ ಹಸ್ತವಿದೆ. ಎಡಗೈ ಎಡ ತೊಡೆಯ ಮೇಲೂರಿದೆ. ಎಡಗೈ ತೋಳಿನಲ್ಲಿ ರುದ್ರಾಕ್ಷಿಸರ, ಕಾಲುಗಳಲ್ಲಿ ಕಾಲಂದುಗೆಗಳಿವೆ. ಹಣೆಯ ಮೇಲೆ ವಿಭೂತಿ ಪಟ್ಟಿಗಳು ಹಾಗೂ ಮೂರನೆಯ ಕಣ್ಣು ಕಂಡುಬರುತ್ತದೆ. ದೇವಿ ನಾಲಿಗೆ ಚಾಚಿಕೊಂಡಿರುವುದನ್ನು ಕೌಶಲ್ಯದಿಂದ ಬಿಡಿಸಲಾಗಿದೆ. ದೇವಿಯ ಹಿಂದೆ ಪ್ರಭಾವಳಿಯಿದೆ. ದೇವಾಲಯವು ಹೊಸ ಮಾದರಿಯಲ್ಲಿ ಬದಲಾಗಿದೆ.

ಸಂಖ್ಯೆ: ೦೩ ಊರು: ಸುರಗಿಹಳ್ಳಿ

ರಾಜ/ವಂಶ:ಕಲ್ಯಾಣ ಚಾಳುಕ್ಯರು ಸ್ಥಳ: ಊರ ಹೊರಗೆ

ಅಭಿಮುಖ : ಪೂರ್ವಾಭಿಮುಖ ಸ್ಮಾರಕ:ಪಾರ್ವತಿ/ ಸೋಮೇಶ್ವರ ದೇವಾಲಯ

ಸ್ಥಿತಿ: ಮಧ್ಯಮ ಕಾಲ: ೧೦ನೇ ಶತಮಾನ

ಶಿಕಾರಿಪುರದಿಂದ ಶಿರಾಳಕೊಪ್ಪ ಮಾರ್ಗದ ಬಲಭಾಗ ಅಂಬಾರಗೊಪ್ಪ ಮೂಲಕ ಸುಮಾರು ೧೨ ಕಿ.ಮಿ. ದೂರದಲ್ಲಿರುವ ಗ್ರಾಮ ಸುರಗೀಹಳ್ಳಿ. ಈ ಗ್ರಾಮದಿಂದ ಕೆಳಗದ್ದೆ ಬದಿಯಲ್ಲಿ, ತೋಟದ ಬಳಭಾಗದಲ್ಲಿ ಇರುವ ದೇವಾಲಯವೆ ಪಾರ್ವತಮ್ಮ ದೇವಿಯ ಮಂದಿರ. ಆದರೆ ಇದು ಮೂಲ ಸೋಮೇಶ್ವರ ದೇವಾಲಯವಾಗಿದ್ದು ಇಲ್ಲಿಯ ಸ್ಥಳೀಕರು ಇದರಲ್ಲಿ ಇರುವ ಮಹಿಷಾಸುರಮರ್ಧಿನಿಯ ಶಿಲ್ಪವನ್ನು ಪಾರ್ವತಮ್ಮ ಎಂಬುದಾಗಿ ಪೂಜಿಸುತ್ತಾರೆ. ಅದರ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಿದ್ದಾರೆ. ಹಾಗಾಗಿ ಗರ್ಭಗೃಹದಲ್ಲಿರುವ ಶಿವ ರೂಪಿ ಸೋಮೇಶ್ವರನಿಗಿಂತ ದೇವಕೋಷ್ಠಕದಲ್ಲಿರುವ ಮಹಿಷಾಸುರಮರ್ಧಿನಿಗೆ ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ.

ದೇವಾಲಯವು ಗರ್ಭಗೃಹದ, ಅಂತರಾಳ, ನವರಂಗಗಳನ್ನು ಒಳಗೊಂಡಿದೆ. ಗರ್ಭಗೃಹದ ಪೀಠದ ಮೇಲೆ ಎರಡು ಅಡಿ ಶಿವಲಿಂಗವಿದೆ. ಮೇಲೆ ನಕ್ಷತ್ರಕಾರದಲ್ಲಿ ಪದ್ಮದಿಂದ ಕೂಡಿದ ಭುವನೇಶ್ವರಿ ಇದೆ. ಇದರ ಬಾಗಿಲುವಾಡದಲ್ಲಿ ಗಜಲಕ್ಷ್ಮಿ ಇದ್ದು, ತ್ರಿಶಾಖೆಯನ್ನು ಕೆಳಗೆ ದ್ವಾರಪಾಲಕ ಶಿಲ್ಪವಿದೆ. ಇವು ಬಳ್ಳಿ, ಲತಾ, ಪದ್ಮಗಳಿಂದ ಕೂಡಿದೆ, ಅಂತರಾಳ ತೆರೆದಿದ್ದು, ನಂದಿಯ ಮೂರ್ತಿ ಇದು ನವರಂಗ ೧೨ ಗೋಡೆ ಕಂಬಗಳು ಸೇರಿದಂತೆ ನಾಲ್ಕು ಮಧ್ಯದ ಕಂಬಗಳಿವೆ. ಗೋಡೆಕಂಬಗಳು ಚೌಕಕಾರ, ಮಧ್ಯದ ಕಂಬ ಗಂಟೆಯಾಕಾರದಲ್ಲಿದೆ. ಎಲೆ, ಬಳ್ಳಿ ಮಣಿಹಾರದ ಅಲಂಕಾರವಿದೆ. ಕಂಬದ ಪೀಠ

ಪಾದಗಳಲ್ಲಿ ಕುಬ್ಜ ಶಿಲ್ಪಗಳಿವೆ. ಮೆಲ್ಛಾವಣಿಯು ನಕ್ಷತ್ರಕಾರದ ಪಟ್ಟಿಯ ಭುವನೇಶ್ವರಿಯಲ್ಲಿ ಅಷ್ಟ ದಿಕ್ಪಾಲಕರು, ಮಧ್ಯದಲ್ಲಿ ಶಿವನ ಮೂರ್ತಿ ಇದೆ, ಕುಬ್ಜ ಶಿಲ್ಪಗಳಿವೆ

ನವರಂಗದ ದೇವ ಕೊಷ್ಠಕದಲ್ಲಿ ಷಣ್ಮುಖನ ಮೂರ್ತಿ, ಮಹಿಷಾಸುರಮರ್ಧಿನಿ ಹಾಗೂ ಕೆಲವು ಖಾಲಿ ಪೀಠಗಳಿವೆ. ಅಲ್ಲೇ ಸಪ್ತಮಾತೃಕೆ ಶಿಲ್ಪವಿದೆ. ದೇವಾಲಯ ಬಲ ಭಾಗದಲ್ಲಿ ಮಹಾಸತಿ ಕಲ್ಲು ಮತ್ತು ವೀರಗಲ್ಲುಗಳಿವೆ. ಇದರ ಮುಂದೆ ತುಂಬು ಹೊಂಡವಿದೆ.

ಅಧ್ಯಾಯ–೭

ಶಿಲ್ಪಗಳು

೭.೧ ಶೈವ ಶಿಲ್ಪಗಳು

೭.೨ ವೈಷ್ಣವ ಶಿಲ್ಪಗಳು

೭.೩ ಜೈನ ಶಿಲ್ಪಗಳು

೭.೪ ಬೌದ್ಧ ಶಿಲ್ಪಗಳು

೭.೫ ಶಾಕ್ತ ಶಿಲ್ಪಗಳು

೭.೬ ಪಂಚತಂತ್ರ ಶಿಲ್ಪಗಳು ಮತ್ತು ಶಿಲ್ಪಿಗಳು

ಅಧ್ಯಾಯ–೭

ಶಿಲ್ಪಗಳು

ಶಿಲ್ಪ ಶಾಸ್ತ್ರ ಗ್ರಂಥದ ಪ್ರಕಾರ ಶಿಲ್ಪವೆಂದರೆ ಲಲಿತ ಅಥವಾ ಯಂತ್ರ ಕಲೆಯಾಗಿದೆ. ಇಂತಹ ಸುಮಾರು ೬೪ ಕಲೆಗಳು ಪ್ರಾಚೀನ ಕಾಲದಿಂದಲೇ ವಿಶ್ವದ ವಿವಿಧ ಭಾಗಗಳಲ್ಲಿ ಅಲ್ಲಿಯ ಪ್ರಾದೇಶಿಕ ನೆಲೆಗೆ ತಕ್ಕಂತೆ ಅಭಿವೃದ್ಧಿಯಾಗಿದೆ. ಭಾರತೀಯರ ಪಾಲಿಗೆ ಇದು ಪ್ರಾಚೀನದಲ್ಲಿ ಮೂಡಿ ಬಂದ ಶಾಸ್ತ್ರವಾಗಿವೆ. ಮಾನವ ಮೂಲದಲ್ಲಿ ಪ್ರಕೃತಿಯ ಬದಲಾವಣೆಗೆ ಯಾವುದೊ ಒಂದು ಶಕ್ತಿ ಇದೆ ಎಂದು ನಂಬಿಕೊಂಡು ಅದರ ರೂಪವನ್ನು ನೀಡಲು ಪ್ರಯತ್ನಿಸಿದ. ಈ ಹಿನ್ನೆಲೆಯಲ್ಲಿ ಮಾನವ ಆದಿವಾಸಿಗಳಾಗಿರುವಾಗಲೇ ಮರ, ಕಲ್ಲು, ಮಣ್ಣುಗಳಲ್ಲಿ ದೇವತಾರಧನೆಯನ್ನು ರೂಢಿಸಿಕೊಂಡ. ಹರಪ್ಪ ಸಂಸ್ಕೃತಿಯ ಉತ್ಖನನಗಳು ನಡೆದಾಗ ಅಲ್ಲಿ ಹೆಚ್ಚಾಗಿ ದೈವ ರೂಪದ ಪಿತೃ ದೇವತೆಗಳ ಶಿಲ್ಪ, ಮಾತೃ ದೇವತೆಯ ಶಿಲ್ಪ, ಗೂಳಿ, ನರ್ತನ ಶಿಲ್ಪ, ಪಶುಪತಿ ಹೀಗೆ ವಿವಿಧ ಶಿಲ್ಪಗಳು ಶಿಲ್ಪ ಶಾಸ್ತ್ರದ ಅಧ್ಯಯನಕ್ಕೆ ಪೂರಕ ವಸ್ತುವಿಷಯಗಳಾಗಿವೆ.

ರಾಮಚಂದ್ರರಾವ್‌ರವರು ಮೂರ್ತಿ ಶಿಲ್ಪ ನೆಲೆ ಹಿನ್ನಲೆಯಲ್ಲಿ ಶಿಲ್ಪ ಶಾಸ್ತ್ರದ ಮೂಲ ಬೇರುಗಳನ್ನು ತಿಳಿಸುತ್ತಾರೆ. ಅವರ ಪ್ರಕಾರ ವೈದಿಕ ಸಂಸ್ಕೃತಿಯ ಕಾಲದಲ್ಲೆ ಶಿಲ್ಪಗಳಿಗೆ ಮಹತ್ವವನ್ನು ನೀಡಾಗಿದೆ ಎಂದು ಹೇಳುತ್ತಾರೆ. ಪ್ರಕೃತಿ ಶಕ್ತಿಗಳನ್ನೇ ಉಪಾಸಿಸುತ್ತಿದ್ದಂತೆ ಕಾಣುತ್ತದೆ. ಇಂದ್ರ, ರುದ್ರ, ವರುಣ ಇತ್ಯಾದಿ ದೇವರುಗಳ ಉಲ್ಲೇಖವಿದ್ದು, ಅವರ ರೂಪಗಳ ಬಗ್ಗೆ ಮಾಹಿತಿ ಇಲ್ಲ.(ರಾಮಚಂದ್ರ ರಾವ್.ಎಸ್.ಕೆ,೧೯೭೫, ಮೂರ್ತಿ ಶಿಲ್ಪ ನೆಲೆ ಹಿನ್ನೆಲೆ) ನಂತರದ ಕಾಲಕ್ಕೂ ಇಂತಹ ಆರಾಧನೆಯನ್ನು ರೂಢಿಸಿಕೊಂಡ ಭಾರತೀಯರ ಇತಿಹಾಸವನ್ನು ಕಾಣಬಹುದು. ಒಟ್ಟಿನಲ್ಲಿ ಭಾರತದಲ್ಲಿ ಸಿಂಧೂ ಬಯಲಿನ ನಾಗರಿಕತೆ, ವೈದಿಕ ಸಂಸ್ಕೃತಿಗಳು ಪರಿಚಯ ಮಾಡಿದ ದೈವ ಸಂಸ್ಕೃತಿಯ ರೂಪವೇ ನಂತರದ ಕಾಲಕ್ಕೆ ಮೂರ್ತಿ ರೂಪವನ್ನು ಪಡೆದು ಶಿಲ್ಪ ಶಾಸ್ತ್ರ ಉಗಮಕ್ಕೆ ಕಾರಣವಾಗಿದೆ.

ಶಿವಲಿಂಗದ ಶಿಲ್ಪಕ್ಕೆ ಹರಪ್ಪ ಸಂಸ್ಕೃತಿಯಿಂದ ಹಿಡಿದು ಹೊಯ್ಸಳರ ಕಾಲದವರೆಗೆ ವಿವಿಧ ಹಂತಗಳಲ್ಲಿ ಶಿವಲಿಂಗವು ತನ್ನ ರೂಪಗಳನ್ನು ಬದಲಾಯಿಸಿಕೊಳ್ಳುತ್ತಾ, ಭಕ್ತರ ಭಕ್ತಿಗೆ ಬೇರೆ ಬೇರೆ ಹೆಸರುಗಳಲ್ಲಿ ತನ್ನನ್ನು ಬದಲಾಯಿಸಿಕೊಂಡು ಜಗತ್ತಿನಲ್ಲಿ ಶಿವ ಪರಂಪರೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಇದಕ್ಕೆ ಉದಾಹರಣೆ ಕದಂಬರ ಕಾಲದ ಶಿವ ಮೂರ್ತಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ತಾಳಗುಂದ ಪ್ರಣವೇಶ್ವರ. ಆದರೆ ಅದಕ್ಕೂ ಪೂರ್ವದಲ್ಲಿ ಅದೇ ತಾಲ್ಲೂಕಿನ ಮಳವಳ್ಳಿ ಗ್ರಾಮದಲ್ಲಿ ದೊರೆತ ಶಾಸನವು ಶಾತವಾಹನ ಕಾಲವನ್ನು ಸ್ಪಷ್ಟಿಕರಿಸಿದೆ. ಅದಲ್ಲದೆ ತಾಳಗುಂದ ಶಾಸನ ಕೂಡ

ಕದಂಬರ ಪೂರ್ವದಲ್ಲಿ ಪ್ರಣವೇಶ್ವರ ದೇಗುಲವಿದ್ದು, ಅದರಲ್ಲಿರುವ ಶಿವ ಲಿಂಗ ಶಾತವಾಹನ ಕಾಲಮಾನ ನಿರೂಪಿಸುತ್ತದೆ. ಹಾಗಾಗಿ ಕರ್ನಾಟಕದಲ್ಲಿ ಕದಂಬರು, ಗಂಗರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಶಿವ ಲಿಂಗವು ಶೈವ ಸಂಸ್ಕೃತಿಯ ಪ್ರತೀಕವಾಗಿ ಬೆಳೆದು ಬಂದಿದೆ.

ಮೌರ್ಯರ ಕಾಲದಲ್ಲಿ ದೊರೆಯುವ ಸಿಂಹ, ಗೂಳಿ, ಆನೆ, ಕುದುರೆ ಶಿಲ್ಪಗಳು ಪ್ರಾಚೀನ ಕಾಲದ ಶಿಲ್ಪದ ಶೈಲಿಯ ಸನ್ನಿವೇಶವನ್ನು ಕಟ್ಟಿಕೊಡುತ್ತವೆ. ನಂತರದ ಕಾಲದಲ್ಲಿ ಶೃಂಗರು, ಕಣ್ವರು, ಕುಶಾನರು ಶಿಲ್ಪ ಕಲೆಗೆ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಅದರಲ್ಲೂ ಕುಶಾನರು ಭಾರತದ ಇತಿಹಾಸದಲ್ಲಿ ಶಿಲ್ಪ ಕಲೆಗೆ, ದೇವತಾ ಮೂರ್ತಿರೂಪವನ್ನು ಕೊಟ್ಟು ಶಿಲ್ಪಶಾಸ್ತ್ರ ಕೊಡುಗೆಗೆ ಬಾಜನರಾಗಿದ್ದಾರೆ. ನಂತರ ಕಾಲದ ಅರಸರಲ್ಲಿ ಗುಪ್ತರು ಶಿಲ್ಪಕ್ಕೆ ಸ್ಪಷ್ಟ ರೂಪ ನೀಡಿದ್ದಾರೆ. ಹೀಗೆ ಬೆಳೆದು ಬಂದ ಶಿಲ್ಪ ಕಲೆ ವಿವಿಧ ಆಳ್ವಿಕೆಯಲ್ಲಿ ತಂತ್ರಗಾರಿಕೆಯ ರೂಪದಲ್ಲಿ ವಿಶಿಷ್ಠ ಬದಲಾವಣೆಯನ್ನು ಪಡೆದಿತ್ತು. ಮುಖ್ಯವಾಗಿ ಶಿಲ್ಪಿಗಳ ಕೈಚಳಕದಲ್ಲಿ ವಿವಿಧ ಶೈಲಿಯ ಕಲಾತ್ಮಕತೆ ಭಾರತೀಯ ಸಮುದಾಯಕ್ಕೆ ಕೊಡುಗೆಯಾಗಿ ಲಭಿಸಿದೆ.

ದೇವರ ಕಲ್ಪನೆಯನ್ನು ಅಮೂರ್ತದಿಂದ ಮೂರ್ತಿರೂಪಕ್ಕೆ ತಂದಾಗ ಮೂರ್ತಿ ಶಿಲ್ಪಗಳ ರಚನೆಯಾಯಿತು. ಇಂತಹ ಮೂರ್ತಿಶಿಲ್ಪಗಳ ವೈಜ್ಞಾನಿಕ ಕ್ರಮಬದ್ಧ ಅಧ್ಯಯನವನ್ನು ಶಿಲ್ಪ ಶಾಸ್ತ್ರದಲ್ಲಿ ಕಾಣುತ್ತೇವೆ. ದೇವಾಲಯದಲ್ಲಿ ಇರಿಸಬೇಕಾದ ಮೂರ್ತಿಯ ವಿವರವನ್ನು ಕುರಿತದ್ದು ಶಿಲ್ಪಶಾಸ್ತ್ರ. ವರಹಾಮೀರನ ಬೃಹತ್‌ಸಂಹಿತೆ ಶುಕ್ರನೀತಿ, ಮತ್ಸ, ಅಗ್ನಿ, ಹಾಗೂ ವಿಷ್ಣುಧರ್ಮೋತ್ತರ, ಪುರಾಣಗಳು, ಮಾರ್ಕಾಂಡೆಯ ಮತ್ತು ವಾಸ್ತು ಶಾಸ್ತ್ರ, ಮಾಯವಾಸ್ತು, ಪ್ರತೀಮಲಕ್ಷಣ, ತಂತ್ರಗ್ರಂಥಗಳು ಮುಂತಾದವು ಭಾರತೀಯ ಶಿಲ್ಪಶಾಸ್ತ್ರಕ್ಕೆ ಸಂಭಂದಿಸಿದ ಕೆಲವು ಕೃತಿಗಳು.

ಕರ್ನಾಟಕದ ಇತಿಹಾಸದಲ್ಲಿ ವಾಸ್ತು, ವಾಸ್ತುಶಿಲ್ಪ ಮತ್ತು ಮೂರ್ತಿಗಳಿಗೆ ಬಹು ಮುಖ್ಯ ಪಾತ್ರವಿದೆ. ಒಂದು ಸಂಸ್ಕೃತಿಯ ಇತಿಹಾಸದ ಅಧ್ಯಯನ ಮಾಡುವಾಗ ತನ್ನದೇ ಆದ ಪ್ರಾದೇಶಿಕ ಕಲಾತ್ಮಾಕ ಬದುಕನ್ನು ಬಿಚ್ಚುಕೊಡುತ್ತದೆ. ಅವುಗಳಲ್ಲಿ ಮೂರ್ತಿ ಶಿಲ್ಪವು ಒಂದು. ಭಾರತೀಯ ಶಿಲ್ಪದ ಹುಟ್ಟು ಮತ್ತು ವಿಕಾಸದಲ್ಲಿ ಧಾರ್ಮಿಕ ನೆಲೆಯಲ್ಲಿ ನೀಡಿದ ಕಾಣಿಕೆಯನ್ನು ಕಾಣಬಹುದು. ಕಲೆ ಎಂಬ ಮಹಾವೃಕ್ಷಕ್ಕೆ ನೀರೆರೆದು ಬೆಳೆಸಿದ ಅಮೃತ ಧರ್ಮವಾಗಿದೆ. ಭಾರತೀಯ ಸಂಸ್ಕೃತಿಯ ಶಿಲ್ಪದಲ್ಲಿ ಧಾರ್ಮಿಕ ಸಿದ್ಧಾಂತವು ಅಡಕವಾಗಿದ್ದು, ಅದರಲ್ಲಿ ಶಿಲ್ಪಿಯ ಸ್ವಂತಿಕೆ ಮತ್ತು ಸಮತೋಲನದಲ್ಲಿ ಕಲಾತ್ಮಾಕ ಸ್ವಾತಂತ್ರ್ಯವಿದೆ.

ಕರ್ನಾಟಕದ ಪ್ರಾದೇಶಿಕ ನೆಲೆಗಳಿಗೆ ಅನುಗುಣವಾಗಿ ಪೂರ್ವ ಕಾಲದಿಂದಲೂ ಮೂರ್ತಿ ಶಿಲ್ಪಕ್ಕೆ ಪ್ರಮುಖ ಸ್ಥಾನವಿದೆ. ಪ್ರಾಚೀನ ಕಾಲದ ಮಾನವ ತಾನು ನೆಲೆಸಿದ

ಪ್ರದೇಶಗಳಲ್ಲಿ ಅದರಲ್ಲೂ ಗುಹೆಗಳಲ್ಲಿ, ಹೆಬ್ಬಂಡೆಗಳಲ್ಲಿ ತಾನು ಕಂಡುಕೊಂಡ ತನ್ನ ಪರಿಸರದ ಇತರೆ ಪ್ರಾಣಿ, ಪಕ್ಷಿಗಳ ಚಿತ್ರವನ್ನು ಬಿಡಿಸಿದ್ದು ಕಂಡುಬರುತ್ತದೆ. ಕದಂಬರು, ಚಾಳುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಕಳಚೂರ್ಯರು, ವಿವಿಧ ಆಡಳಿತಕ್ಕೆ ಒಳಪಟ್ಟಾಗ ಶಿಲ್ಪಗಳ ಕೆತ್ತನೆ, ಅಲಂಕಾರ, ಕುಸರಿ ಕಾರ್ಯಗಳು ಬೆಳೆಯುತ್ತಾ ಬಂದವು.

ಶಿಲ್ಪಶಾಸ್ತ್ರದಲ್ಲಿ ಪ್ರತಿಮೆಯಂತೆಯೆ ಧ್ಯಾನ. ಶ್ಲೋಕವು. ಪ್ರಮುಖವಾಗಿದೆ ಯಾವುದಾದರೊಂದು ದೇವತೆಯನ್ನು ಕುರಿತು ಸಿದ್ಧವಾದ ಈ ಶ್ಲೋಕದಲ್ಲಿ ದೇವತೆಯ ರೂಪದ ನಿದರ್ಶನವಿರುತ್ತದೆ. ಭಂಗಿಯ ಆಯುಧಗಳ ವಿವರವು ಇರುತ್ತದೆ. ಈ ಧ್ಯಾನ ಶ್ಲೋಕ ಶಿಲ್ಪಕ್ಕೂ ಮುಖ್ಯ, ಭಕ್ತನಿಗೂ ಮುಖ್ಯ, ಶಿಲ್ಪಿಯಾದವನು ಪಡೆಯುವ ಶಿಕ್ಷಣದಲ್ಲಿ ಪ್ರತಿಮೆ ಲಕ್ಷಣವನ್ನು ಅಗತ್ಯವೆಂದು ಪರಿಗಣಿಸುತ್ತಾರೆ.

ಗಣಪತಿಗೆ ಸಾಮಾನ್ಯವಾಗಿ ಇರಬೇಕಾದ ವಿವರಗಳೆಲ್ಲವು ಇಲ್ಲಿವೆ. ಶಿಲ್ಪಿಯು ಈ ವಿವರಗಳನ್ನು ತನ್ನಲ್ಲಿ ಮನದಟ್ಟು ಮಾಡಿ ಕೊಂಡು ಗಣಪತಿಯನ್ನು ಮಾಡ ತೊಡಗಿದಾಗ ಒಂದೊಂದು ಅಂಶವು ಮೂರ್ತಿಯಲ್ಲಿ ವೈಯಕ್ತಿಕ ಎನಿಸಬಹುದಾದ ವೈಶಿಷ್ಟ ಮೂಡತೊಡಗುತ್ತದೆ.

'ದೇವಾಲಯ' ಎಂದರೆ ಇದು ದೇವರ ಆಲಯ. ಇಲ್ಲಿ ಮೂರ್ತಿ ಶಿಲ್ಪ ಇರಲೇಬೇಕು. ದೇವಾಲಯಕ್ಕೆ ಮೂರ್ತಿ ಸ್ವರೂಪದ ದೇವರು ಮತ್ತು ದೇವರ ಪರಿವಾರವನ್ನು ಇಟ್ಟು ಪೂಜಾ ವಿಧಿ ವಿಧಾನಗಳ ಮೂಲಕ ಬೆಳಕಾಗಿ ಪ್ರಜ್ವಲಿಸುತ್ತದೆ. ಈ ಹಿನ್ನಲೆಯಲ್ಲಿ ಮೂರ್ತಿ ಶಿಲ್ಪಗಳು ಬೆಳೆದು ದೇಗುಲದ ಬೆಳಕಾಗಿ ಪ್ರಜ್ವಲಿಸುತ್ತದೆ. ಈ ಮೂರ್ತಿ ಸ್ವರೂಪದ ಲಕ್ಷಣಗಳು ಆಯಾ ಪಂಥ ಮತಗಳಿಗೆ ಅನುಗುಣವಾಗಿ ಬೆಳೆಯಿತು. ಹಾಗಾಗಿ ಖಾಲಿ ದೇಗುಲಕ್ಕೆ ಮೂರ್ತಿ ಶಿಲ್ಪಗಳೇ ಶೋಭೆಯೆಂಬ ದೃಷ್ಠಿಯಲ್ಲಿ ದೇವಾಲಯಗಳು, ದೇವರ ಹಿನ್ನಲೆಯಲ್ಲಿ ಗೌರವವನ್ನು ಕಟ್ಟಿಕೊಂಡವು. ಮೊದಲು ದೇವರ ಕಲ್ಪನೆ ಬಂದ ನಂತರ ಅದರ ರಕ್ಷಣೆಗೆ ದೇವಾಲಯ ರಚನೆ ಆಗಿದೆ ಎಂಬುದು ನಾಡಿನ ಸತ್ಯ ಕಥೆಗಲ್ಲಿ ಒಂದಾಗಿದೆ.

ದೇವರ ರಕ್ಷಣೆಗೆ ನಿಂತ ದೇಗುಲ ಕೊನೆಗೆ ಅದರ ಪರಿವಾರ ದೇವರು ಮತ್ತು ಇನ್ನಿತರೆ ಕಥೆ ಪುರಾಣ ನೀತಿ ನಿಯಮಗಳ ಹೆಸರಿನಲ್ಲಿ ದೇವಾಲಯ ಹೊರ ಮತ್ತು ಒಳ ಭಾಗಗಳಲ್ಲಿ ಮೂರ್ತಿ ಶಿಲ್ಪವು ಬೆಳದು ಬಂದಿದೆ. ಉದಾಹರಣೆಗೆ ಬಂದಳಿಕೆಯ ದೇಗುಲವೊಂದರಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನು ಜನರಿಗೆ ಮೂರ್ತಿ ಸ್ವರೂಪದಲ್ಲಿ ವಿವರಿಸುತ್ತವೆ. ಹಾಗಾಗಿ ದೇವಾಲಯಕ್ಕೆ ವಾಸ್ತು ವಿನ್ಯಾಸಕ್ಕಿಂತಲೂ ಮೂರ್ತಿಶಿಲ್ಪವು ಅತ್ಯಂತ ಆಕರ್ಷಣಿಯ ಲಕ್ಷಣವಾಗಿದೆ. ಈ ಲಕ್ಷಣವು ದೇವಾಲಯದ ಗೌರವಕ್ಕೆ ನಾಂದಿಯಾಗಿದೆ.

ಮೂರ್ತಿಶಿಲ್ಪಗಳನ್ನು ಹೆಸರಿನಲ್ಲಿ ಶಿಕಾರಿಪುರದ ನೆಲೆಯಲ್ಲಿ ಹುಡುಕುವಾಗ ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ವಿಷ್ಣು, ನಾರಾಯಣ ಮೂರ್ತಿ, ರಾಮ ಲಕ್ಷ್ಮಣ ಸೀತೆ, ಉಗ್ರ ನರಸಿಂಹ ಇತ್ಯಾದಿಗಳನ್ನೂ, ಶೈವ ಧರ್ಮಕ್ಕೆ ಸಂಬಂಧಿಸಿದಂತೆ ಈಶ್ವರ ಲಿಂಗ, ವೀರಭದ್ರ, ನಂದಿ, ಷಣ್ಮುಖಗಳನ್ನು ಶಕ್ತಿದೇವತೆಗಳಿಗೆ ಸಂಬಂಧಿಸಿದಂತೆ ಕಾಳಿಕಾದೇವಿ. ಮಹಿಷಾಸುರ ಮರ್ಧಿನಿ, ಬನಶಂಕರಿ ಇತ್ಯಾದಿಗಳನ್ನು, ಗಣಪತ್ಯದಲ್ಲಿ ಗಣಪತಿಯ ಮೂರ್ತಿಗಳನ್ನು, ಜೈನರಿಗೆ ಸಂಬಂಧಿಸಿದಂತೆ ಜೈನ ಮೂರ್ತಿಗಳನ್ನು ಮತ್ತು ಬೌದ್ಧ ಧರ್ಮಕ್ಕೆ ಸಂಬಂಧಿಸಿಂತೆ ತಾರಾಭಗವತಿ ಮೂರ್ತಿಗಳನ್ನು ಚಿತ್ರಿಸಲಾಗಿದೆ.

ಹಾಗೆಯೇ ಈ 'ಶಿಲ್ಪ'ಗಳ ಅಧ್ಯಯನದಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿ ಎಂದರೆ ವೇಷ ಭೂಷಣಗಳು. ಇವು ಬೇರೆ ಬೇರೆ ವರ್ಗದವರಿಗೆ ಬೇರೆಯೇ ಆಗಿರುತ್ತಿದ್ದವು. ವೀರರ ಉಡುಪು, ಸ್ತ್ರೀಯರ ಉಡುಪು, ರಾಜರ ಉಡುಪು, ಸಾಮಾನ್ಯರ ಉಡುಪು, ಅವರು ಧರಿಸುತ್ತಿದ್ದ ವಿವಿಧ ರೀತಿಯ ಆಭರಣಗಳು ಬಳಸುತ್ತಿದ್ದ. ಆಯುಧಗಳ ಶಿಲ್ಪಗಳು ಯುದ್ಧದ ಉಡುಪುಗಳನ್ನು ಅದಕ್ಕೆ ಬಳಸುತ್ತಿದ್ದರು ಕುದುರೆ. ಆನೆ, ರಥ, ವಾದ್ಯಗಳು ಇತ್ಯಾದಿ ಶಿಲ್ಪಗಳು ಅಸಂಖ್ಯಾತವಾಗಿ ಕಂಡುಬರುತ್ತವೆ. ಗಿಡಮರಗಳು, ಪ್ರಾಣಿ–ಪಕ್ಷಿಗಳು, ಬೇಟೆ ಚಿತ್ರಣಗಳು, ದೇವರು, ದೇವತೆಗಳು, ಯಕ್ಷ– ಯಕ್ಷಿಣಿ. ಹೋರಾಟ ಶಿಲ್ಪಗಳು, ಕೀಟ, ಹಾವು,ಮೊಸಳೆ, ಚೇಳು, ಜಿಂಕೆ, ನಾಯಿ, ಹಂದಿ, ಸಿಂಹ, ಮುದ್ರೆಗಳು ಲಾಂಛನಗಳು, ಧ್ವಜಗಳು ಹೀಗೆ ಒಂದು ದೊಡ್ಡ ಪಟ್ಟಿ ಬೆಳೆಯುತ್ತಾ ಹೊಗುತ್ತದೆ. ಇಂತ ವೈವಿಧ್ಯಮಯವಾದ ಶಾಸನ ಶಿಲ್ಪಗಳನ್ನು ಅಧ್ಯಯನ, ಸಂಶೋಧನೆ ಮಾಡುವುದಕ್ಕೆ ಹತ್ತಾರು ಅವಕಾಶಗಳು ಸಂಶೋಧಕರಿಗೆ, ವಿದ್ವಾಂಸರಿಗೆ ಕಾದಿವೆ ಎಂದರೆ ತಪ್ಪಾಗಲಾರದು.

ಶೈವ ಶಿಲ್ಪಗಳು

ಶಿಕಾರಿಪುರ ತಾಲ್ಲೂಕಿನ ಕ್ಷೇತ್ರ ಕಾರ್ಯ ಮಾಡುವಾಗ ಹೆಚ್ಚಿನ ಸಂಖ್ಯೆಯಲ್ಲಿ ಶೈವ ಸಂಸ್ಕೃತಿಯನ್ನು ಬಿಂಬಿಸುವ ಶಿಲ್ಪಗಳು ಸಿಗುತ್ತವೆ. ಕೆಲವು ಶಿಲ್ಪಗಳು ದೇವಾಲಯದಲ್ಲಿ ಪೂಜಿಸಲ್ಪಡುತ್ತಿದ್ದು, ಇನ್ನುಳಿದ ಶಿಲ್ಪಗಳು ಪೂಜೆಯಿಂದ ದೂರವಾಗಿವೆ. ಅಂದರೆ ದೇವಾಲಯದ ಹೊರಗಡೆ, ಪಾಳು ದೇವಾಲಯಗಳಲ್ಲಿ, ಗದ್ದೆಗಳಲ್ಲಿ, ಅನಾಥವಾಗಿ ಬಿದ್ದಿವೆ. ಪ್ರಮುಖವಾಗಿ ಶೈವ ಶಿಲ್ಪಗಳಲ್ಲಿ ಶಿವಲಿಂಗ, ಭೈರವ, ವೀರಭದ್ರ, ಗಣೇಶ, ಕಾರ್ತಿಕೇಯ, ದಕ್ಷ ಬ್ರಹ್ಮ ಇತ್ಯಾದಿಗಳಿವೆ.

ಶಿವಲಿಂಗಗಳು:

ಶಿವಲಿಂಗಕ್ಕೆ ಶೈವ ಸಂಸ್ಕೃತಿಯಲ್ಲಿ ಪ್ರಾಮುಖ್ಯತೆ ಇದೆ. ಲಿಂಗಗಳಲ್ಲಿ ವಿವಿಧ ರೂಪಗಳನ್ನು ಕಾಣಬಹುದು. ಪೂಜಾ ಸ್ಥಳಗಳಲ್ಲಿ ಶಿಲೆಯಿಂದ ಮಾಡಿದ ಲಿಂಗವನ್ನು ಕಾಣಬಹುದು. ಶಿವನು ಸಾಮಾನ್ಯವಾಗಿ ಲಿಂಗದ ಆಕೃತಿಯಲ್ಲಿ ಆರಾಧಿಸಿಕೊಳ್ಳುತ್ತಾನೆ. ಕೆಲವು ಕಡೆ ಮಾನವನ ಆಕಾರದಲ್ಲಿ ಆರಾಧಿಸುತ್ತಾರೆ. ಆರಂಭದ ದಿನಗಳಲ್ಲಿ ಶಿವಲಿಂಗಗಳು ಕಂಬದ ರೂಪದಲ್ಲಿದ್ದು, ಪೀಠ, ಪಾಣಿವಟ್ಟಲುಗಳಲ್ಲಿ ಕಂಡು ಬರುವುದಿಲ್ಲ. ನಂತರದ ಕಾಲದಲ್ಲಿ ಪೀಠಗಳನ್ನು ಬಳಸಿ ಅದರ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸುತ್ತಿದ್ದರು. ಲಿಂಗಗಳ ಮೇಲಿನ ನಾಳಗಳಿಗೆ ಬ್ರಹ್ಮ ಸೂತ್ರವನ್ನು ತೋರಿಸಲಾಗಿರುತ್ತದೆ. ಇದು ವಿವಿಧ ಕಾಲಗಳಲ್ಲಿನ ಬೆಳೆವಣಿಗೆಯ ಹಂತದಲ್ಲಿ ವಿವಿಧ ರೂಪ ಪಡೆದಿರುವುದನ್ನು ಕಾಣುತ್ತೇವೆ.

ಲಿಂಗಗಳು ಕಂಬಗಳಂತೆ ಇದ್ದು, ಬ್ರಹ್ಮ, ವಿಷ್ಣು ಮತ್ತು ಶಿವ ಭಾಗಗಳಿವೆ. ಬ್ರಹ್ಮನ ಭಾಗವು ಕಡಿಮೆಯಿದ್ದು, ವಿಷ್ಣು, ಶಿವನ ಭಾಗವು ಸಮಪ್ರಮಾಣದಲ್ಲಿರುತ್ತವೆ. ಬ್ರಹ್ಮ ಭಾಗವು ನಾಲ್ಕು ಮುಖ, ವಿಷ್ಣು ಭಾಗವು ಎಂಟು ಭಾಗವು, ಶಿವ ವೃತ್ತಾಕಾರದಲ್ಲಿ ಇರುತ್ತದೆ. ಶಿವ ಭಾಗವೆ ಪೂಜಾ ಭಾಗವಾಗಿದೆ. ಇಲ್ಲಿ ಬ್ರಹ ಸೂತ್ರವನ್ನು ಅಳವಡಿಸಲಾಗುತ್ತದೆ.

ನಂದಿ ಶಿಲ್ಪಗಳು :

ಶೈವ ಧರ್ಮದಲ್ಲಿ ಶಿವನಿಗಿಂತ ನಂದಿಯನ್ನು ಹೆಚ್ಚಾಗಿ ಪೂಜೆಯನ್ನು ಸಲ್ಲಿಸುತ್ತಾರೆ. ಎಲ್ಲಾ ದೇವಾಲಯಗಳಲ್ಲಿ ನಂದಿಯನ್ನು ಕಾಣಬಹುದು. ಶಿವನ ಲಿಂಗಕ್ಕೆ ಎದುರಾಗಿ ನಂದಿಯನ್ನು ನವರಂಗದಲ್ಲಿ ಕಾಣಬಹುದು. ಸಾಮಾನ್ಯವಾಗಿ ನಂದಿಶಿಲ್ಪಗಳನ್ನು ಪೀಠದ ಮೇಲೆ ಆಸಿನಭಂಗಿಯಲ್ಲಿ ಕಂಡರಿಸಿರುತ್ತಾರೆ. ನಂದಿಯ ಮುಂದಿನ ಬಲಗಾಲನ್ನು ಮುಂದಕ್ಕೆ ಮಡಚಿ, ಎಡಗಾಲನ್ನು ಹೊಟ್ಟೆಯ ಭಾಗದ ಕಡೆಗೆ ಎಳೆದು ಕೊಂಡಿರುತ್ತದೆ. ತಲೆಯನ್ನು ನೇರವಾಗಿಸಿದೆ. ಮೈಮೇಲೆ ವಿವಿಧ ಆಭರಣಗಳನ್ನು ಅಲಂಕಾರಕ್ಕೆ ಬಳಸಿರುತ್ತಾರೆ. ಘಂಟೆಯ ಸರ, ಗಗ್ಗರ, ಕೊರಳ ಸರ, ಹಣೆಪಟ್ಟಿ, ಕೀರಿಟ ರೂಪ, ಕಾಲ್ಗಡಗ, ಗೆಜ್ಜೆ ಹೀಗೆ ಅಲಂಕಾರವನ್ನು ಕೆತ್ತನೆ ಒಳಪಟ್ಟಿರುತ್ತವೆ.

ಭೈರವ :

ಭೈರವ ಎಂದರೆ ಭೂತಗಳನ್ನು ಉಚ್ಚಾಟನೆಗೆ ಕಂಡುಕೊಂಡ ಭಯಾನಕ ದೈವಶಕ್ತಿ, ಕೈಗಳಲ್ಲಿ ಕಪಾಲವನ್ನು, ತ್ರಿಶೂಲವನ್ನು, ಹಿಡಿದುಕೊಂಡಿರುವ ಶಕ್ತಿಸ್ವರೂಪಿಯೇ ಭೈರವ. ಹಾವನ್ನು ಜನಿವಾರವಾಗಿ ಧರಿಸಿದ ಭೈರವ ಶೈವ ದೇವಾಲಯಗಳಲ್ಲಿ ಸರ್ವೇಸಾಮಾನ್ಯ. ಸ್ವರ್ಣ ಭೈರವ ವಟುಕ ಭೈರವ ಎಂಬ ಪ್ರಕಾರಗಳಿವೆ. ವಟುಕ ಭೈರವ

ಮೂರ್ತಿಯು ಅಷ್ಟಭುಜವನ್ನು ಹೊಂದಿದ್ದು, ಕೈಗಳಲ್ಲಿ ಆಯುಧವಾಗಿ ಖಟ್ವಾಂಗ, ಪಾಶ, ಶೂಲ, ಡಮರುಗ, ಕಪಾಲ ಮತ್ತು ಹಾವುಗಳು ಸಾಮಾನ್ಯವಾದವು. ಒಂದು ಕೈ ಅಭಯವನ್ನೂ, ಇನ್ನೊಂದು ಕೈ ಮಾಂಸವಿರುವ ಕಪಾಲವನ್ನು ಹಿಡಿದಿರುತ್ತದೆ. ಕೆಳಗೆ ನಾಯಿಯೊಂದು ಕಪಾಲದಿಂದ ಬೀಳುವ ರಕ್ತವನ್ನು ನೆಕ್ಕುತ್ತಿರುವಂತೆ ಕಂಡರಿಸಲಾಗಿದೆ. ಭೈರವನ ಕಾಲ ಬಳಿ ಈತನ ಲಾಂಛನವಾದ ಚೇಳು ಇರುತ್ತದೆ. ಹಾಗೆ ಸ್ವರ್ಣಕರ್ಷ ಭೈರವನಾದರೆ ಚತುರ್ಭುಜವನ್ನು ಕೈಯಲ್ಲಿ ಬಂಗಾರದ ಪಾತ್ರೆವನ್ನು, ಚಾಮರ, ಉದ್ದನೆಯ ತ್ರಿಶೂಲವನ್ನು ಹಿಡಿದಿರುವುದು ಕಾಣಬಹುದು.

ವೀರಭದ್ರ :

ಶೈವ ಪಂಥದಲ್ಲಿ ಶಿವನ ರೂಪವನ್ನು ಬಿಟ್ಟರೆ ನಂತರದ್ದು ವೀರಭದ್ರ ರೂಪ. ವೀರಭದ್ರನ ಆಗಮನಕ್ಕೆ ಒಂದು ಕತೆ ಇದೆ. ಒಮ್ಮೆ ದಕ್ಷನ್ನು ಯಜ್ಞವನ್ನು ಮಾಡುವಾಗ ತನ್ನ ಮಗಳು ದಾಕ್ಷಾಯಿಣಿ ಮತ್ತು ಅಳಿಯ ಶಿವನನ್ನು ಹೊರತುಪಡಿಸಿ ಎಲ್ಲರನ್ನು ಆಹ್ವಾನ ನೀಡಿದ. ಹೊಗದಂತೆ ಶಿವನು ದಾಕ್ಷಾಯಿಣಿಗೆ ಸೂಚಿಸಿದ. ಆದರೆ ಶಿವನ ಮಾತನ್ನು ಮೀರಿ ಯಜ್ಞಕ್ಕೆ ಹೊದ ದಾಕ್ಷಾಯಿಣಿಗೆ ಅವಮಾನ ಮಾಡಿದರು. ಈಕೆ ಅದೇ ಸ್ಥಳದಲ್ಲಿ ಯಜ್ಞಕುಂಡಕ್ಕೆ ಹಾರಿ ತನ್ನ ಪ್ರಾಣವನ್ನು ಬಿಡುತ್ತಾಳೆ. ಇದರಿಂದ ಕುಪಿತಗೊಂಡ ಶಿವನು ತನ್ನ ಜಡೆಯನ್ನು ನೆಲಕ್ಕೆ ಬಡಿದಾಗ ವೀರಭದ್ರ ಜನ್ಮ ತಾಳಿದನು. ತನ್ನ ತಾಯಿಯ ಸಾವಿಗೆ ಕಾರಣನಾದ ದಕ್ಷನ ತಲೆಯನ್ನು ಕಡಿದು ಶಿವನಿಗಾದ ಅವಮಾನವನ್ನು ಹೋಗಲಾಡಿಸಿದ.

ಗಣೇಶ :

ಶೈವ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗಣೇಶನನ್ನು ಪ್ರತಿಷ್ಠಾಪಿಸಲಾಗಿರುತ್ತದೆ. ಗಣೇಶ, ವಿನಾಯಕ, ಗಣಪತಿ ಹೀಗೆ ವಿವಿಧ ಹೆಸರುಗಳಿಂದ ಕರೆಸಿಕೊಳ್ಳುತ್ತಾ ಪೂಜಿಸಿಕೊಳ್ಳುತ್ತಿದೆ. ಚತುರ್ಭುಜಧಾರಿಯಾಗಿರುವ ಗಣೇಶ ತನ್ನ ಕೈಗಳಲ್ಲಿ ದಂತ, ಪಾಶ, ಅಂಕುಶಗಳನ್ನು ಹಿಡಿದಿರುವನು. ಕಂಠೀಹಾರ, ಉದರಬಂಧ, ಕಂಕಣ, ಕಿಂಕಿಣಿ ಇತ್ಯಾದಿ ಆಭರಣಗಳಿಂದ ಅಲಂಕಾರಗೊಂಡಿದೆ. ಪೀಠದಲ್ಲಿ ವಾಹನವಾಗಿ ಮೂಷಿಕವನ್ನು ಕಂಡರಿಸಲಾಗಿದೆ.

ಸಕಲ ವಿಘ್ನಗಳ ನಾಶ ಮೌಶಿಕ ಪ್ರಭು ಗಜಮುಖ, ಗಣಗಳಿಗೆ ಅಧಿಪತಿಯಾದ ಗಣೇಶನು ಶಿವಪಾರ್ವತಿಯ ಮಗನಾಗಿ ವಿದ್ಯೆಯನ್ನು ಧಾರೆ ಎರೆವ ಶಕ್ತಿಯ ರೂಪವಾಗಿ ಪೂಜೆಯನ್ನು ಪಡೆಯುತ್ತಾನೆ. ಗಣೇಶ ಗಜ ಮುಖವನ್ನು ಮನುಷ್ಯನ ದೇಹವನ್ನು ತನ್ನ ತಂದೆ ತಾಯಿಯರ ಮಾತುಗಳ ಕಾರ್ಯಚಟುವಟಿಕೆಯಲ್ಲಿ ಪಡೆದುಕೊಂಡ ಹೊಸರೂಪದ ದೈವ ಸಂಭೂತ ಮೂರ್ತಿಯಾಗಿದೆ. ವಿಘ್ನಗಳ ನಾಶಕಾರಿಯಾದ ಗಣೇಶನನ್ನು ನೆನೆಯದವರಿಲ್ಲ. ಗಣೇಶನು ಸಪ್ತಮಾತೃಕೆಯ ಶಿಲ್ಪಗಳಲ್ಲಿ, ದೇವಾಲಯದ

ಪಂಚಾತನ ಮೂರ್ತಿಗಳಲ್ಲಿ, ಶಿವ-ಪಾರ್ವತಿ ದೇವಾಲಯಗಳಲ್ಲಿ ಕೆಲವೊಮ್ಮೆ ಪ್ರತ್ಯೇಕವಾಗಿ ಕಾಣಬಹುದು ೨ ಕೈಗಳಿಂದ ಹಿಡಿದು ೮ ಕೈಗಳವರೆಗೆ ವಿಭಿನ್ನ ರೂಪಗಳಲ್ಲಿ ಗಣಪತಿಯನ್ನು ಪೂಜಿಸುತ್ತಾರೆ.

ಭಾರತದ ಭೂಮಿಯಲ್ಲಿ ಶೈವ ಪಂಥವು ಪ್ರಾಚೀನ ಕಾಲದಿಂದ ಬೆಳದು ಬಂದ ಒಂದು ಧರ್ಮವಾಗಿದೆ. ಶೈವರು ಶಿವನ ನಾಮದಿಂದಲೂ ಶಿವ ಸ್ತುತಿಯಿಂದಲೂ ಶಿವ ಪ್ರಸಾದದಿಂದ ಧನ್ಯರಾಗಿ ಜೀವನ ಕಳೆಯುತ್ತಿದ್ದಾರೆ. ಹಾಗಾಗಿ ಮುಕ್ಕೋಟಿ ದೇವತೆಗಳಿಗೂ ಅಧಿಪತಿಯಾದ, ತ್ರಿಮೂರ್ತಿಗಳಲ್ಲಿ ಒಬ್ಬನಾಗಿದ್ದಾನೆ. ಶಿವನ ಮೂರ್ತಿ ರೂಪಕ್ಕಿಂತ ಹೆಚ್ಚಾಗಿ ಅಮೂರ್ತಿ ರೂಪದಲ್ಲೇ ಕಾಣಬಹುದು. ಅಂದರೆ ಲಿಂಗರೂಪದಲ್ಲಿ ಆತನ ದರ್ಶನವನ್ನು ಶೈವರು ಪಡೆಯುತ್ತಾರೆ. ಕೆಲವೊಮ್ಮೆ ಮೂರ್ತ ರೂಪವಿದ್ದರೂ ಪಾರ್ವತಿಯ ಜೊತೆಗೆ ಇವನ ಚಿತ್ರಣ ಮೂರ್ತಿ ಸ್ವರೂಪದಲ್ಲಿ ಗುರುತಿಸಬಹುದು. ಸಾಮಾನ್ಯವಾಗಿ ಮೂರ್ತಿ ರೂಪದಲ್ಲಿ ಲಿಂಗವನ್ನು ನೀಳವಾದ ಏಕಶಿಲಾ ಸ್ಥಂಭದಲ್ಲಿ ಕಾಣಬಹುದು. ಶಿವನ ರೂಪವನ್ನು ಕಾಣುವ ಭಕ್ತರು ಹೇಳುವಾಗ ಶಿವಪಾಂದಂಭುಜ ಸೇವೆಯೇ ಸೇವೆ, ಶಿವಧರ್ಮವೇ ಧರ್ಮ ಶಿವನೇ ಆಪ್ತಶಿವ, ಪೂಜೆಯೇ ವ್ಯವಸಾಯ ಮಹಾಪಂಚಾಕ್ಷರಿ ಮಂತ್ರವೇ ಮಂತ್ರ ಎಂಬುದಾಗಿ ಇಂತಹ ಉಲ್ಲೇಖ ಶಾಸನಗಳಲ್ಲಿ ಕಾಣಬಹುದು(ಎಕ-೭,ಶಿಕಾರಿ-೧೮, ಕ್ರಿ.ಶ ೧೧೫೮).

ಹೆಸರು – ಉಮಾ-ಮಹೇಶ್ವರ

ಸ್ಥಳ – ಮ್ಯೂಸಿಯಂ

ಗ್ರಾಮ – ಬಳ್ಳಿಗಾವಿ

ಕಾಲ – ೧೦-೧೧ ನೇ ಶತಮಾನ

ಶಿಲೆ – ಕಪ್ಪು ಶಿಲೆ

ಶಿವ-ಪಾರ್ವತಿ ಶಿಲ್ಪವು ನಾಲ್ಕು ಅಡಿ ಎತ್ತರವನ್ನು ಮೇಲೆ ಪ್ರಭಾವಳಿಯನ್ನು ಹೊಂದಿದೆ. ಎಡತೊಡೆಯ ಮೇಲೆ ಪಾರ್ವತಿಯನ್ನು ಕುಳಿಸಿಕೊಂಡು ತಾನೂ ಕುಳಿತ ಭಂಗಿಯ ಶಿಲ್ಪವಾಗಿದೆ. ಶಿವನು ಶೂಲ, ಡಮರುಗ, ಅಭಯ ಹಸ್ತವನ್ನು ಇನ್ನೊಂದು ಕೈಯನ್ನು ಪಾರ್ವತಿಯ ಭುಜದ ಮೇಲು ಇಟ್ಟಿದಾನೆ. ಕೀರಿಟದಾರಿ, ಮಣಿಹಾರ, ಕೈಕಡಗ, ಕಾಲ್ಗಡಗ, ಹಾವನ್ನು ಅಲಂಕಾರಿಕೆಯಲ್ಲಿ ಕಾಣಬಹುದು. ಕೆಳಗೆ ಗಣೇಶ, ಷಣ್ಮುಖ, ನಂದಿ, ಮಸೂಳೆ, ಅಸ್ತಿ ಪಂಜರದ ಕೆತ್ತನೆಗಳಿವೆ.

ಹೆಸರು- ಕಲ್ಲೇಶ್ವರ

ಸ್ಥಳ- ಕಲ್ಲೇಶ್ವರ ದೇವಾಲಯ

ಗ್ರಾಮ- ಮಳವಳ್ಳಿ

ದಿಕ್ಕು - ಪೂರ್ವಾಭಿಮುಖ

ರಾಜವಂಶ- ಕಲ್ಯಾಣ ಚಾಳುಕ್ಯರು

ಕಾಲ - ೧೦-೧೨ನೇ ಶತಮಾನ

ಶಿಲೆ – ಕಪ್ಪುಶಿಲೆ

ಕ್ರಿ.ಶ.೧೧೪೨ ರಲ್ಲಿ ಗಾಡ ಗಾವುಂಡ ಕಲಿದೇವರ ದೇವಾಲಯ ಮಾಡಿಸಿದನು ಎಂದು ಶಾಸನದಲ್ಲಿ ಉಲ್ಲೇಖಿಸಿದೆ. ಈ ಶಿವಲಿಂಗ ಎತ್ತರದ ಪೀಠದ ಮೇಲೆ ಪೂರ್ವಾಭಿಮುಖವಾಗಿ ಶಿಲ್ಪವನ್ನು ಕಾಣಬಹುದು.

ಹೆಸರು-ಕಲ್ಲಪ್ಪ

ಸ್ಥಳ – ಸತ್ಯಕ್ಕ ದೇವಾಲಯ

ಗ್ರಾಮ- ಹೀರೆ ಜಂಬೂರು

ಶಿಲೆ – ಕಪ್ಪು ಶಿಲೆ

ಮೂರು ಅಡಿ ಎತ್ತರವನ್ನು ಹೊಂದಿದ ಶಿಲ್ಪವನ್ನು ಜನರು ಕಲ್ಲಪ್ಪ ಎಂಬುದಾಗಿ ಕರೆದುಕೊಳ್ಳುತ್ತಿದ್ದಾರೆ. ಕುಳಿತ ಭಂಗಿಯಲ್ಲಿರುವ ಶಿಲ್ಪವು ಭಗ್ನಗೊಂಡಿದೆ. ಕೀರಿಟ, ಮಣಿ ಮಾಲೆ, ಕೈಬಂಧಿ, ತೊಳಬಂಧಿ, ಕಾಲ್ಗಡಗವನ್ನು ಧರಿಸಿದೆ. ಅಭಯ ಹಸ್ತವಿದೆ, ಒಂದು ಕೈ ಭಗ್ನವಾಗಿದೆ. ಬಲಕ್ಕೆ ಶಿವ-ಪಾರ್ವತಿಯರ ಶಿಲ್ಪದ ಮಾದರಿಯಲ್ಲಿದೆ.

ಹೆಸರು-ಕಾರ್ತಿಕೇಯ

ಸ್ಥಳ – ಬಳ್ಳಿಗಾವಿ ಮ್ಯೂಸಿಯಂ

ಗ್ರಾಮ- ಬಳ್ಳಿಗಾವಿ

ಶಿಲೆ – ಕಪ್ಪು ಶಿಲೆ

ರಾಜವಂಶ- ಕಲ್ಯಾಣ ಚಾಳುಕ್ಯರು

ಕಾಲ – ೧೦-೧೧ನೇ ಶತಮಾನ

ಶಿಲ್ಪವು ವಾಹನ ನವಿಲಿನ ಮೇಲೆ ಇದೆ. ಸುಮಾರು ನಾಲ್ಕು ಅಡಿ ಎತ್ತರವನ್ನು ಹೊಂದಿದೆ. ಎಂಟು ಕೈಗಳನ್ನು ಆಯುಧವನ್ನು ಹೊಂದಿದ್ದು, ಕಿರೀಟಧಾರಿ, ಪ್ರಭಾವಳಿಯನ್ನು ಒಳಗೊಂಡಿದೆ. ಮೇಲೆ ಮಕರ ತೋರಣಗಳಿಂದ ಅಲಂಕಾರವನ್ನು ಹೊಂದಿದೆ.

ಹೆಸರು-ಕಾಲ ಭೈರವ

ಸ್ಥಳ- ಜಂಬೂರಿನ ಸರ್ಕಲ್ ಬಳಿ

ಗ್ರಾಮ- ಹಿರೇಜಂಬೂರು

ಶಿಲೆ – ಕಪ್ಪು ಶಿಲೆ

ಪೀಠದ ಮೇಲೆ ಸುಮಾರು ಏರು ಅಡಿ ಎತ್ತರದ ಶಿಲ್ಪ. ಭೈರವ ಮೂರ್ತಿಯು ಅಷ್ಟಭುಜವನ್ನು ಹೊಂದಿದ್ದು, ಕೈಗಳಲ್ಲಿ ಆಯುಧವಾಗಿ ಖಟ್ವಾಂಗ, ಪಾಶ, ಶೂಲ, ಡಮರುಗ, ಕಪಾಲ ಮತ್ತು ಹಾವುಗಳು ಸಾಮಾನ್ಯವಾದವು. ಒಂದು ಕೈ ಅಭಯವನ್ನೂ, ಇನ್ನೊಂದು ಕೈ ಮಾಂಸವಿರುವ ಕಪಾಲವನ್ನು ಹಿಡಿದಿರುತ್ತದೆ. ಕೆಳಗೆ ನಾಯಿಯೊಂದು ಕಪಾಲದಿಂದ ಬೀಳುವ ರಕ್ತವನ್ನು ನೆಕ್ಕುತ್ತಿರುವಂತೆ ಕಂಡರಿಸಲಾಗಿದೆ. ಮನುಷ್ಯರು, ಕಪಿಗಳು, ಪ್ರಾಣಿಗಳು ಅಸ್ತಿ ಪಂಜರದಲ್ಲಿವೆ. ಕೆಳಗೆ ಚೇಳು ಇದೆ.

ಹೆಸರು-ಕೇದಾರೇಶ್ವರ

ಸ್ಥಳ- ಕೇದಾರೇಶ್ವರ ದೇವಾಲಯ

ಗ್ರಾಮ- ಬಳ್ಳಿಗಾವಿ

ರಾಜವಂಶ- ಕಲ್ಯಾಣ ಚಾಳುಕ್ಯರು

ಕಾಲ – ೧೦-೧೧ನೇ ಶತಮಾನ

ಶಿಲೆ – ಕಪ್ಪು ಶಿಲೆ

ಶ್ರೀ ಕೇದಾರೇಶ್ವರ ಗರ್ಭಗುಡಿಯ ಪೂರ್ವಾಭಿಮುಖವಾಗಿ ನಿರ್ಮಿಸಲ್ಪಟ್ಟಿದೆ. ಮಧ್ಯೆ ಗರ್ಭಗುಡಿಯಲ್ಲಿ ಕೇದಾರಲಿಂಗವಿದೆ. ಇದು ಸುವರ್ಣರೇಖೆ ಕೃಷ್ಣಶಿಲೆಯ ಮನೋಹರವಾಗಿದೆ. ಇದರ ಜೊತೆಗೆ ವೀರಭದ್ರ ಶಿವಲಿಂಗ ನಂದಿ ಶಿಲ್ಪಗಳು ಹಲವಾರು ಭಾಗಗಳಲ್ಲಿ ದೊರೆಯುತ್ತವೆ.

ಹೆಸರು–ಗಣಪತಿ

ಸ್ಥಳ – ಕೋಟಿ ರಾಮಪ್ಪ ದೇವಾಲಯ

ಗ್ರಾಮ– ಈಸೂರು

ಶಿಲೆ – ಕಪ್ಪು ಶಿಲೆ

ರಾಜವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಈ ದೇವಾಲಯದಲ್ಲಿ ಗಣಪತಿಯು ವಿಶೇಶವಾಗಿದ್ದು ಕುಳಿತ ಭಂಗಿಯಲ್ಲಿ ಗುರುತಿಸಬಹುದು ಅಭಯ ಮುದ್ರೆಯಲ್ಲಿದೆ. ೪ ಕೈಗಳಿವೆ. ಸೊಂಡಿಲು ಎಡಮುಖವಾಗಿದೆ. ದೇವಾಲಯದ ಬಲ ಭಾಗದಲ್ಲಿ ಗಣಪತಿಯ ಶಿಲ್ಪವಿದ್ದು ಇದು ಕುಳಿತ ಭಂಗಿಯಲ್ಲಿ ೪ ಕೈಗಳನ್ನು ಹೊಂದಿದ್ದು ಶಂಖ ಅಭಯಹಸ್ತ ಇತ್ಯಾದಿಗಳನ್ನು ಕಾಣಬಹುದು. ಕಿರೀಟ ಆಭರಣಧಾರಿಯಾದ ಮೂರ್ತಿಯಾಗಿದ್ದು ಸುಖಾಸನದಲ್ಲಿದೆ. ಎಡಗಾಲನ್ನು ಮಡಚಿದ್ದು ಬಲಗಾಲನ್ನು ಮುಂಚಾಚಿದೆ.

ಹೆಸರು–ಗಣಪತಿ

ಸ್ಥಳ – ಆಂಜನೇಯ ದೇವಾಲಯ

ಗ್ರಾಮ– ಭಕ್ತನಕೊಪ್ಪ

ಶಿಲೆ – ಕಪ್ಪು ಶಿಲೆ

ಸುಮಾರು ನಾಲ್ಕು ಅಡಿಯ ಶಿಲ್ಪವು ಎಡಮುರಾರಿಯಾಗಿದೆ. ೪ ಕೈಗಳನ್ನು ಹೊಂದಿರುವ ಗಣೇಶ ಕುಳಿತ ಭಂಗಿಯಲ್ಲಿದೆ. ಪಕ್ಕದಲೇ ವೀರಗಲ್ಲು, ಮೂರು ಜನ ಮಹಿಳೆಯರು ಇರುವ ಮಾಸ್ತಿ ಕಲ್ಲು ಇದೆ.

ಹೆಸರು – ಚತುರ್ಮುಖ ಶಿವಲಿಂಗ

ಸ್ಥಳ – ಮ್ಯೂಸಿಯಂ

ಗ್ರಾಮ – ಬಳ್ಳಿಗಾವಿ

ಕಾಲ – ೧೦–೧೧ ನೇ ಶತಮಾನ

ಶಿಲೆ – ಕಪ್ಪು ಶಿಲೆ

ಶಿಲ್ಪವು ನಾಲ್ಕು ಅಡಿ ಎತ್ತರವನ್ನು ಹೊಂದಿದ್ದು, ನಾಲ್ಕು ಮುಖಗಳನ್ನು ಒಳಗೊಂಡಿದೆ. ಮೇಲೆ ಲಿಂಗದ ಆಕೃತಿ ಕೆಳಗೆ ಮುಖವನ್ನು ಕಂಡರಿಸಿದೆ. ಅದಕ್ಕೆ ಕೀರಿಟವನ್ನು, ಮಣಿಯನ್ನು, ಓಲೆಯನ್ನು ಅಲಂಕಾರಿಕವಾಗಿ ಬಳಸಿದೆ.

ಹೆಸರು–ನಂದಿ ಸ್ಥಂಭ

ಸ್ಥಳ– ಸೂರ್ಯನಾರಾಯಣ ದೇವಾಲಯ ಹಿಂಬದಿಯ ಕೆರೆಯ ಏರಿ

ಗ್ರಾಮ– ಸಂಡ

ರಾಜವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಶಿಲೆ – ಕಪ್ಪು

ಈ ಶಿಲ್ಪವು ಎತ್ತರದಲ್ಲಿ ಸ್ಥಂಭವನ್ನು ರಚಿಸಿ ಅದರ ಕೆಳಭಾಗದಲ್ಲಿ ಶಾಸನವನ್ನು ಕೆತ್ತಿದೆ. ನಂದಿಯ ಮೂರ್ತಿಯು ಕುಳಿತು ಬಲಗಾಲು ಮುಂದೆ ಚಾಚಿದ ಘಂಟೆ ಅಲಂಕಾರವನ್ನು ಹೊಂದಿದ ಶಿಲ್ಪವಾಗಿದೆ.

ಹೆಸರು–ತ್ರಿಮೂರ್ತಿ

ಸ್ಥಳ – ಬಳ್ಳಿಗಾವಿ ಮ್ಯೂಸಿಯಂ

ಗ್ರಾಮ– ಬಳ್ಳಿಗಾವಿ

ಶಿಲೆ – ಕಪ್ಪು ಶಿಲೆ

ರಾಜವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಒಂದು ಅಡಿಯ ಪೀಠದ ಮೇಲೆ ಶಿಲ್ಪವಿದೆ. ಪ್ರಭಾವಳಿ ಸೇರಿ ಆರು ಅಡಿಯನ್ನು ಹೊಂದಿದೆ. ಕುಳಿತ ಭಂಗಿಯಲ್ಲಿ ಮೂರು ತಲೆಯನ್ನು ಒಳಗೊಂಡಿದೆ. ನಾಲ್ಕು ಕೈಗಳಲ್ಲಿ ಒಂದು ಕೈ ಭಗ್ನಗೊಂಡಿದೆ. ಕೀರಿಟ, ಮಣಿಹಾರ, ತೋಳಬಂಧಿ, ಭುಜದ ಅಲಂಕಾರ, ಕಾಲ್ಗಡಗ, ಕಿವಿ ಓಲೆಯ ಅಲಂಕಾರವನ್ನು ಹೊಂದಿದೆ.

ಹೆಸರು–ಪಚ್ಚೆಲಿಂಗ

ಸ್ಥಳ– ಪುರದ ವೀರಭದ್ರ ದೇವಾಲಯ

ಗ್ರಾಮ – ಬಳ್ಳಿಗಾವಿ

ರಾಜವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಶಿಲೆ – ಹಸಿರು ಶಿಲೆ

ಪುರದ ವೀರಭದ್ರ ದೇವಾಲಯದಲ್ಲಿ ಗರ್ಭಗೃಹದ ಎಡಭಾಗಕ್ಕೆ ಈ ಲಿಂಗವಿದ್ದು ಇದು ಮೂಲತಃ ಜಿಡ್ಡಿಕೆರೆಯ ಏರಿಯ ದೇಗುಲದಲ್ಲಿ ಇತ್ತು. ಕಳ್ಳರ ಉಪಟಳದಿಂದ ಇದನ್ನು ಇಲ್ಲಿಗೆ ರವಾನಿಸಲಾಗಿದೆ. ಇದು ದಿನಕ್ಕೆ ಮೂರು ಬಣ್ಣವನ್ನು ನೀಡುತ್ತದೆ ಎಂಬ ಪ್ರತೀತಿ ಇದೆ. ಇದಕ್ಕೆ ಕಾರಣ ಸೂರ್ಯನ ಚಲನೆಯಿಂದ ಕಿರಣವು ಜಿಡ್ಡಿಕೆರೆ ನೀರಿನ ಮೇಲೆ ಬಿದ್ದು ಅದರ ಪ್ರತಿಬಿಂಬವಾಗಿ ಲಿಂಗ ವಿವಿಧ ಬಣ್ಣವನ್ನು ಹೊಂದುತ್ತದೆ. ಈ ಲಿಂಗವು ಹಸಿರು ಬಣ್ಣದಲ್ಲಿದ್ದು ಸುವರ್ಣರೇಖೆಗಳಿಂದ ಕೂಡಿದೆ.

ಹೆಸರು–ಭೈರವ

ಸ್ಥಳ – ಕಲ್ಲೇಶ್ವರ ದೇವಾಲಯ

ಗ್ರಾಮ– ಮಳವಳ್ಳಿ

ಶಿಲೆ – ಕಪ್ಪು ಶಿಲೆ

ರಾಜವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಶಿಲ್ಪವು ೪ ಅಡಿ ಎತ್ತರ, ನಿಂತಿರುವ ಭಂಗಿಯಲ್ಲಿದೆ. ಭೈರವ ಮೂರ್ತಿಯು ಅಷ್ಟಭುಜವನ್ನು ಹೊಂದಿದ್ದು, ಕೈಗಳಲ್ಲಿ ಆಯುಧವಾಗಿ ಖಟ್ವಾಂಗ, ಪಾಶ, ಶೂಲ, ಡಮರುಗ, ಕಪಾಲ ಮತ್ತು ಹಾವುಗಳು ಸಾಮಾನ್ಯವಾದವು. ಒಂದು ಕೈ ಅಭಯವನ್ನೂ, ಇನ್ನೊಂದು ಕೈ ಮಾಂಸವಿರುವ ಕಪಾಲವನ್ನು ಹಿಡಿದಿರುತ್ತದೆ. ಕೆಳಗೆ ನಾಯಿಯೊಂದು ಕಪಾಲದಿಂದ ಬೀಳುವ ರಕ್ತವನ್ನು ನೆಕ್ಕುತ್ತಿರುವಂತೆ ಕಂಡರಿಸಲಾಗಿದೆ. ಲಾಂಛನ ಚೇಳು ಪಾದದ ಬಳಿ ಇದೆ. ಮನುಷ್ಯ, ಹಾವು, ಕಂಪಿಗಳು ಅಸ್ತಿಪಂಜರಗಳಾಗಿವೆ.

ಹೆಸರು–ಭೈರವ

ಸ್ಥಳ– ಮಲ್ಲಿಕಾರ್ಜುನ ದೇವಾಲಯ

ಗ್ರಾಮ– ಬೇಗೂರು

ರಾಜವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಶಿಲೆ – ಕಪ್ಪುಶಿಲೆ

ನಿಂತಭಂಗಿಯಲ್ಲಿ ಶಿಲ್ಪವಿದ್ದು, ಎಂಟು ಕೈಗಳನ್ನು ಹೊಂದಿದೆ. ಕೊರಳಲಿ ರುಂಡ ಮಾಲೆ, ಗದೆ, ಕತ್ತಿ, ಶೂಲ, ಬಾಣ, ಹಾವು, ಡಮರುಗ, ಬಿಲ್ಲು, ರುದ್ರಾಕ್ಷಿ ಮಾಲೆಯ ಕೆತ್ತನೆಗೆ ಒಳಗಾಗಿದೆ.

ಹೆಸರು–ಮಲ್ಲಿಕಾರ್ಜುನ

ಸ್ಥಳ– ಮಲ್ಲಿಕಾರ್ಜುನ ದೇವಾಲಯ

ಗ್ರಾಮ– ಬೇಗೂರು

ರಾಜವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಶಿಲೆ – ಕಪ್ಪುಶಿಲೆ

ಮಲ್ಲಿಕಾರ್ಜುನ ದೇವಾಲಯದಲ್ಲಿ ಕಪ್ಪುಶಿಲೆಯಿಂದ ಕೂಡಿದ ಪೂರ್ವಾಭಿಮುಖವಾಗಿರುವ ಮಧ್ಯದ ಗರ್ಭಗುಡಿಯಲ್ಲಿ ಶಿವಲಿಂಗವನ್ನು ಕಾಣಬಹುದು. ಇದನ್ನು ಮಲ್ಲಿಕಾರ್ಜುನ ಎಂಬುವುದಾಗಿ ಕೂಡಾ ಗುರುತಿಸಬಹುದು. ಶಿವಲಿಂಗವು ಸೌಮ್ಯ ರೂಪದಲ್ಲಿದ್ದು ಇದರ ಮುಂಭಾಗದಲ್ಲೇ ನಂದಿಯ ಶಿಲ್ಪವನ್ನು ಕಾಣಬಹುದು. ಎಡಗಾಲು ಮುಂದೆ ಚಾಚಿ ತನ್ನ ಕೊರಳಲ್ಲಿ ಘಂಟೆ ಅಲಂಕಾರದಿಂದ ಕೂಡಿದೆ.

ಹೆಸರು– ವೀರಭದ್ರ

ಸ್ಥಳ– ಸರ್ಕಲ್ ಪಕ್ಕದ ರಸ್ತೆ

ಗ್ರಾಮ– ಹಿರೇಜಂಬೂರು

ಶಿಲೆ – ಕಪ್ಪುಶಿಲೆ

ಈ ಶಿಲ್ಪವು ಶಿವನ ಇನ್ನೊಂದು ರೂಪವಾದ ವೀರಭದ್ರನ ರೂಪದಲ್ಲಿ ಗುರುತಿಸಬಹುದು. ಈ ಶಿಲ್ಪದ ಸುತ್ತಲು ತೋರಣವಿದ್ದು ತೋರಣಗಳ ಭಾಗದಲ್ಲಿ ಹಲವಾರು ಪ್ರಾಣಿಗಳ ಮತ್ತು ಮನುಷ್ಯರುಗಳ ಅಸ್ತಿಪಂಜರದ ರೂಪದಲ್ಲಿದ್ದು ಆತನಿಗೆ ಶರಣಾಗತರಾಗಿ ಬೇಡುತ್ತಿದ್ದ ದೃಶ್ಯ ಮನಮೋಹಕವಾಗಿದೆ. ವೀರಭದ್ರ ನಿಂತಿರುವ ಭಂಗಿಯಲ್ಲಿದ್ದು, ೪ ಕೈಗಳನ್ನು ಹೊಂದಿದ್ದು, ಎತ್ತರದ ಪಾದರಕ್ಷೆಗಳ ಮೇಲೆ ನಿಂತಿರುವ ಭಂಗಿಯಲ್ಲಿದೆ. ಕೊರಳಲ್ಲಿ ರುಂಡಗಳಿಂದ ಮಾಡಿದ ಹಾರವನ್ನು ಧರಿಸಿದೆ.

ಹೆಸರು – ಶಿವ ಪಾರ್ವತಿ

ಸ್ಥಳ – ಮಲ್ಲಿಕಾರ್ಜುನ ದೇವಾಲಯ

ಗ್ರಾಮ – ಬೇಗೂರು

ರಾಜ । ವಂಶ – ಕಲ್ಯಾಣ ಚಾಳುಕ್ಯರು

ಕಾಲ – ೧೦–೧೧ ನೇ ಶತಮಾನ

ಶಿಲೆ – ಕಪ್ಪು ಶಿಲೆ

ಮಲ್ಲಿಕಾರ್ಜುನ ದೇವಾಲಯದ ಮುಖಮಂಟಪದ ಬಾಗಿಲುವಾಡದ ಎಡಕ್ಕೆ ಭಗ್ನಗೊಂಡ ಮೂರ್ತಿ ಇದೆ. ಇವುಗಳಲ್ಲಿ ತಲೆಯ ಭಾಗ ಭಗ್ನವಾಗಿದ್ದು ಇದನ್ನು ಶಿವಪಾರ್ವತಿ ಶಿಲ್ಪಗಳೆಂದು ಗುರುತಿಸಬಹುದು. ಈ ಶಿಲ್ಪಗಳು ಒಂದೇ ಪೀಠದಲ್ಲಿ ಕುಳಿತ ಭಂಗಿಯಲ್ಲಿ ಗುರುತಿಸಬಹುದು. ಕೈಗಳನ್ನು ಅಭಯ ಹಸ್ತದಲ್ಲಿ ಕಾಣಬಹುದು.

ಹೆಸರು – ಷಣ್ಮುಖ

ಸ್ಥಳ– ಮಲ್ಲಯ್ಯನಗುಡಿ

ಗ್ರಾಮ– ಮುಗಳಗೆರೆ

ರಾಜ।ವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಶಿಲೆ – ಕಪ್ಪುಶಿಲೆ

ಮಲ್ಲಯ್ಯನಗುಡಿಯು ಮಣ್ಣಿನ ಗುಡ್ಡೆಯಿಂದ ಮುಳುಗಿ ಹೋಗಿದ್ದು, ಇತ್ತೀಚಿನ ದಿನಗಳಲ್ಲಿ ದೇವಾಲಯವನ್ನು ಹೊಸ ಮಾದರಿಯ ರೂಪವಿದೆ. ಒಳಭಾಗದಲ್ಲಿ ಮಲ್ಲಯ್ಯನ ಮೂರ್ತಿ ಇರುವ ಗರ್ಭಗುಡಿ ಹೊಂದಿದೆ. ಇದರ ಮುಂಭಾಗ ನವರಂಗದಲ್ಲಿ ಷಣ್ಮುಖ ಶಿಲ್ಪವನ್ನು ಕಾಣಬಹುದು. ಇದು ಆರು ಮುಖಗಳಿಂದ ಕೂಡಿದ್ದು ನವಿಲಿನ ಮೇಲೆಕುಳಿತ ಶಿಲ್ಪವಾಗಿದೆ. ಇದು ೪ ಕೈಗಳಿಂದ ಕೂಡಿದ್ದು, ಆಯುಧ ಶಂಖ ಅಭಯ ಹಸ್ತ ಹೊಂದಿದೆ.

ವೈಷ್ಣವ ಶಿಲ್ಪಗಳು

ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣು ವೈಷ್ಣವ ಸಂಸ್ಕೃತಿಯ ಪ್ರತೀಕವಾಗಿದ್ದಾನೆ. ಪ್ರಕೃತಿಯಲ್ಲಿನ ಆಗುವ ಅನಾಹುತಗಳಿಗೆ, ಸಂರಕ್ಷಣೆಗೆ ಅವತಾರವೆತ್ತಿದ ವಿಷ್ಣು ದಶವಾತಾರಗಳನ್ನು ಎತ್ತಿದ್ದಾನೆ. ಸಾಮಾನ್ಯವಾಗಿ ವಿಷ್ಣುವಿನ ದಶವತಾರಗಳಾದ ಕೂರ್ಮ, ವರಾಹ, ವಾಮನ, ನರಸಿಂಹ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿಗಳನ್ನು ಕಾಣಬಹುದು. ವೈಷ್ಣವ ಮೂರ್ತಿಗಳು ಕಿರೀಟ, ಮುಕುಟ, ವೈಜಯಂತಿ ಮಾಲ, ಹಾರ, ಸರ, ಉದರಬಂಧ, ಕೇಯೂರ, ಕಂಕಣ, ಕಿಂಕಿಣಿ, ಪಾದರಸ ಇತ್ಯಾದಿಗಳನ್ನು ಹೊಂದಿರುತ್ತವೆ. ಶಿಲ್ಪಗಳ ಇಕ್ಕೆಲದಲ್ಲಿ ಶ್ರೀದೇವಿ ಭೂದೇವಿಯರನ್ನು ಹಾಗೂ ಕೆಳ ಭಾಗದಲ್ಲಿ ವಾಹನವಾದ ಗರುಡನನ್ನು ತೋರಿಸಲಾಗುತ್ತದೆ.

ವೈಷ್ಣವ ಶಿಲ್ಪಗಳು ಸಾಮಾನ್ಯವಾಗಿ ಸಮ ಭಂಗಿಯಲ್ಲಿರುತ್ತವೆ. ಚತುರ್ಭುಜಗಳನ್ನು ಹೊಂದಿ ಕೈಗಳಲ್ಲಿ ಶಂಖ, ಚಕ್ರ, ಪದ್ಮ, ಗದೆಗಳನ್ನು ತೋರಿಸಲಾಗಿರುತ್ತದೆ. ನಾಲ್ಕು ಆಯುಧಗಳು ಸ್ಥಾನ ಪಲ್ಲಟವಾದಂತೆ ವಿಷ್ಣುವಿನ ೨೪ ಮೂರ್ತಿಗಳನ್ನು ಹೆಸರಿಸಲಾಗುತ್ತದೆ. ಅವುಗಳೆಂದರೆ, ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂಧನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶಿ, ಪದ್ಮನಾಭ, ದಾಮೋದರ, ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ನರಸಿಂಹ, ಅಚ್ಯುತ, ಜನಾರ್ಧನ, ಉಪೇಂದ್ರ, ಹರಿ, ಶ್ರೀನಿಧಿ ಮತ್ತು ಕೃಷ್ಣ.

ವಿಶ್ವದಲ್ಲಿ ರಾಮ ವಿಷ್ಣು ನರಸಿಂಹ ನಾರಾಯಣ ವಾಮನ ಕೃಷ್ಣ ಇತ್ಯಾದಿ ಹತ್ತು ಅವತಾರಗಳಲ್ಲಿ ವೈಷ್ಣವ ಮೂರ್ತಿಗಳನ್ನು ಗುರುತಿಸಬಹುದು. ಈ ದೇವತೆಗಳನ್ನು ವೈಷ್ಣವ ಪಂಥದವರು ಪೂಜೆ ಮಾಡುತ್ತಾ ಅವುಗಳನ್ನೇ ಆರಾಧಿಸಿದ್ದಾರೆ. ವರ್ಣಾಶ್ರಮಕ್ಕೆ ಪ್ರಾಧಾನ್ಯತೆ ನೀಡಿ ರಕ್ಷಕನಾದ ಕೃಷ್ಣನನ್ನು ವಿಷ್ಣುವನ್ನು ಆರಾಧಿಸುತ್ತಾ ಬಂದಿದೆ. ವೈಷ್ಣವ ಶಾಸನ ಶ್ರೀ ಓಂ ನಮೋ ನಾರಾಯಣಾಯ ಎಂಬ ಸ್ತುತಿಯಿಂದ ಪ್ರಾರಂಭವಾಗಿದೆ.(ಎಕ-2, ಶಿಕಾರಿ ೧೨೩,ಕ್ರಿ ಶ ೧೧೮೫) ಇದೆಲ್ಲದೆ ಬಳ್ಳಿಗಾವಿಯ ವೀರಕೇಶವ ದೇವರ ದೇವಾಲಯಕ್ಕೆ ಶೈವರೇ ಸ್ಥಾನಿಕರಾಗಿದ್ದನ್ನು ತಿಳಿಸುತ್ತದೆ. ಅದೇ ರೀತಿ

ಶ್ರೀ ಗೋವಿಂದರಾಜನೆಂಬ ವೈಷ್ಣವ ಚೂಡಾಮಣಿಯ ಹೆಸರಿನಲಿ ಶಿವ ಮತ್ತು ವಿಷ್ಣುವಿನ ಸ್ತೋತ್ರದಿಂದ ಪ್ರಾರಂಭವಾಗಿದೆ.(ಎಕ-೭, ಶಿಕಾರಿ ೧೩೭, ಕ್ರಿ.ಶ ೧೧೧೪)

ಹೆಸರು – ಅನಂತ ಪದ್ಮನಾಭ

ಸ್ಥಳ – ಮ್ಯೂಸಿಯಂ

ಗ್ರಾಮ – ಬಳ್ಳಿಗಾವಿ

ಕಾಲ – ೧೦-೧೧ ನೇ ಶತಮಾನ

ಶಿಲೆ – ಕಪ್ಪು ಶಿಲೆ

ಶಿಲ್ಪವು ಮಲಗಿದ ಭಂಗಿಯಲ್ಲಿದ್ದು, ೫ ಅಡಿ ಅಗಲ, ೩ ಅಡಿ ಎತ್ತರವನ್ನು ಹೊಂದಿದೆ. ನಾಲ್ಕು ಕೈಗಳನ್ನು ಹೊಂದಿದ್ದು, ಶಂಖವನ್ನು ಎಡಗೈಯಲಿ, ಮತ್ತೊಂದು ಎಡಗೈನ್ನು ತೋಡೆಯ ಮೇಲೆ, ಬಲಗೈಯೊಂದು ತಲೆಗೆ ಆಸರೆಯಾಗಿ, ಇನ್ನೊಂದು ಎದೆಯ ಮೇಲಿದೆ. ಪಕ್ಕದಲ್ಲೇ ಚಕ್ರವಿದೆ. ಹೊಕ್ಕಳಿನಿಂದ ಕಮಲವು ಬೆಳೆದು ಮೇಲೆ ಅರಳಿದೆ. ಲಕ್ಷ್ಮಿಯ ಶಿಲ್ಪವು ಇದೆ. ತಲೆ ಮೇಲೆ ಪ್ರಭಾವಳಿ ರೀತಿ ಏಳುಹೆಡೆಯ ನಾಗರವಿದೆ.

ಹೆಸರು – ಗಂಡಭೇರುಂಡ

ಸ್ಥಳ – ಜಿಡ್ಡಿಕೆರೆಗೆ ಹೋಗುವ ದಾರಿಯಲ್ಲಿ

ಗ್ರಾಮ – ಬಳ್ಳಿಗಾವಿ

ಕಾಲ – ೧೦-೧೧ ನೇ ಶತಮಾನ

ರಾಜ \ ವಂಶ – ಜಗದೇಕಮಲ್ಲ

ಶಿಲೆ – ಬಿಳಿಶಿಲೆ

ಕ್ರಿ.ಶ.೧೦೪೭ ರಲ್ಲಿ ಜಗದೇಕಮಲ್ಲನೆಂಬ ಬಿರುದನ್ನು ಚಾವುಂಡರಾಯನು ದಕ್ಷಿಣ ದಿಶಾ ಭಾಗವನ್ನು ಗೆದ್ದು ರಾಜ್ಯವಿಸ್ತರಿಸಿದಾಗ ಸ್ಮಾರಕವಾಗಿ ಜಗದೇಕಮಲ್ಲೇಶ್ವರ ದೇವಾಲಯದ ಮುಂಭಾಗದಲ್ಲಿ ಸುಮಾರು ೪೦ ಅಡಿ ಎತ್ತರದ ವಿಜಯ ಸ್ಥಂಭವನ್ನು ನೆಟ್ಟು ಅದರ ಮೇಲೆ ಭೇರುಂಡೇಶ್ವರ ಮೂರ್ತಿಯನ್ನು ಕೆತ್ತಿಸಿದ್ದಾನೆ. ಮೂರ್ತಿ ೨ ತಲೆಯ ಗರುಡ ರೂಪದಲ್ಲಿದ್ದು ಮನುಷ್ಯನಾಕೃತಿಯ ದೇಹವನ್ನು ಹೊಂದಿದೆ.

ಹೆಸರು – ನಾರಾಯಣ

ಸ್ಥಳ – ಮ್ಯೂಸಿಯಂ

ಗ್ರಾಮ – ಬಳ್ಳಿಗಾವಿ

ಕಾಲ – ೧೦-೧೧ ನೇ ಶತಮಾನ

ಶಿಲೆ – ಕಪ್ಪು ಶಿಲೆ

ಶಿಲ್ಪವು ನಿಂತಿರುವ ಭಂಗಿಯಲ್ಲಿದ್ದು ಮೂರು ಅಡಿಯನ್ನು ಹೊಂದಿದೆ. ಮೇಲೆ ಪ್ರಭಾವಳಿ, ನಾಲ್ಕು ಕೈಗಳನ್ನು ಹೊಂದಿದೆ. ಮೂರ್ತಿಗಳು ಕಿರೀಟ, ಮುಕುಟ, ವೈಜಯಂತಿ ಮಾಲ, ಹಾರ, ಸರ, ಉದರಬಂಧ, ಕೇಯೂರ, ಕಂಕಣ, ಕಿಂಕಿಣಿ, ಪಾದರಸ ಇತ್ಯಾದಿಗಳನ್ನು ಹೊಂದಿರುತ್ತವೆ. ಶಿಲ್ಪಗಳ ಇಕ್ಕೆಲದಲ್ಲಿ ಶ್ರೀದೇವಿ ಭೂದೇವಿಯರು ಇದ್ದಾರೆ.

ಹೆಸರು – ನಾರಾಯಣ ಮೂರ್ತಿ

ಸ್ಥಳ – ಹೈಸೂಲ್ ಶಾಲೆಮುಂಭಾಗ

ಗ್ರಾಮ – ಅಂಬಾರಗೊಪ್ಪ

ಕಾಲ – ೧೦-೧೧ ನೇ ಶತಮಾನ

ಶಿಲೆ – ಕಪ್ಪು ಶಿಲೆ

ನಾರಾಯಣಮೂರ್ತಿ ಊರಿನ ಹೊರಭಾಗದಲ್ಲಿದ್ದು, ಭಗ್ನವಾದ ಮೂರ್ತಿಯಾಗಿದೆ.ಇದರ ಕಿರೀಟ ಭಾಗ ಹಾಗೂ ಮುಂಡದ ಭಾಗವನ್ನು ಮಾತ್ರ ಹೊಂದಿದ್ದು, ಕೈಗಳು ಮುರಿದಿವೆ.

ಹೆಸರು –ರಂಗನಾಥ

ಸ್ಥಳ – ಮ್ಯೂಸಿಯಂ

ಗ್ರಾಮ – ಬಳ್ಳಿಗಾವಿ

ಕಾಲ – ೧೦-೧೧ ನೇ ಶತಮಾನ

ಶಿಲೆ – ಕಪ್ಪು ಶಿಲೆ

ಶಿಲ್ಪವು ಮಲಗಿದ ಭಂಗಿಯಲ್ಲಿದ್ದು, ೪ ಅಡಿ ಅಗಲ, ೩ ಅಡಿ ಎತ್ತರವನ್ನು ಹೊಂದಿದೆ. ಇದನ್ನು ರಂಗನಾಥ ಎಂಬುದಾಗಿ ಕರೆಯುತ್ತಾರೆ. ನಾಲ್ಕು ಕೈಗಳನ್ನು ಹೊಂದಿದ್ದು, ಶಂಖವನ್ನು ಎಡಗೈಯಲಿ, ಮತ್ತೊಂದು ಎಡಗೈನ್ನು ತೊಡೆಯ ಮೇಲೆ, ಬಲಗೈಯೊಂದು ತಲೆಗೆ ಆಸರೆಯಾಗಿ, ಇನ್ನೊಂದು ಎದೆಯ ಮೇಲಿದೆ. ಪಕ್ಕದಲ್ಲೇ ಚಕ್ರವಿದೆ. ಹೊಕ್ಕಳಿನಿಂದ ಕಮಲವು ಬೆಳೆದು ಮೇಲೆ ಅರಳಿದೆ. ಲಕ್ಷ್ಮಿಯ ಶಿಲ್ಪವು ಇದೆ. ತಲೆ ಮೇಲೆ ಪ್ರಭಾವಳಿ ರೀತಿ ಏಳುಹೆಡೆಯ ನಾಗರವಿದೆ.

ಹೆಸರು– ವಾಮನ ಮೂರ್ತಿ

ಸ್ಥಳ –ತ್ರಿಮೂರ್ತಿ ದೇವಾಲಯದ ಬಲಕ್ಕೆ

ಗ್ರಾಮ – ಬಂದಳಿಕೆ

ಕಾಲ – ೧೦–೧೧ನೇ ಶತಮಾನ

ರಾಜ । ವಂಶ – ಕಲ್ಯಾಣ ಚಾಳುಕ್ಯರು

ಶಿಲೆ – ಕಪ್ಪು ಶಿಲೆ

ತ್ರಿಮೂರ್ತಿ ದೇವಾಲಯದ ಬಲಕ್ಕೆ ಶಿಲ್ಪಗಳ ಸಮೂಹವಿದ್ದು ಮಾಸ್ತಿಗಲ್ಲುಗಳ ವೀರಗಲ್ಲುಗಳ ಸಾಲಿನಲ್ಲಿ ಈ ವಾಮನ ಮೂರ್ತಿಯ ರೇಖಾಚಿತ್ರವನ್ನು ಹೊಂದಿದ ಶಿಲ್ಪವನ್ನು ಗುರುತಿಸಬಹುದು. ಇದರಲ್ಲಿ ತನ್ನ ಕೈಗಳಲ್ಲಿ ಛತ್ರಿಯನ್ನು ಹಿಡಿದು ಬಲಕ್ಕೆ ತಿರುಗಿ ಹೊರಟಂತೆ ಕಾಣುತ್ತದೆ.

ಹೆಸರು– ವಿಷ್ಣು

ಸ್ಥಳ – ಕೋಟಿ ರಾಮಪ್ಪ ದೇವಸ್ಥಾನ

ಗ್ರಾಮ – ಈಸೂರು

ಕಾಲ – ೧೦–೧೧ನೇ ಶತಮಾನ

ರಾಜ । ವಂಶ – ಕಲ್ಯಾಣಚಾಳುಕ್ಯರು

ಶಿಲೆ – ಕಪ್ಪು ಶಿಲೆ

ಈಸೂರಿನ ಕೋಟಿ ರಾಮಪ್ಪ ದೇವಸ್ಥಾನದಲ್ಲಿ ವಿಷ್ಣುವಿನ ಮೂರ್ತಿಯಿದ್ದು, ಇದು ನಿಂತಿರುವ ಭಂಗಿಯಲ್ಲಿದೆ. ಇದರ ಮೇಲ್ಭಾಗದಲ್ಲಿ ಪ್ರಭಾವಳಿ ಇದ್ದು, ಕಿರೀಟ ಆಭರಣಗಳಿಂದ ಅಲಂಕಾರಿತವಾಗಿದೆ. ಈ ಮೂರ್ತಿಯ ಕೆಳಭಾಗದ ಎಡಬಲಕ್ಕೆ ಸೇವಕಿಯರು ಇದ್ದಾರೆ. ಒಂದು ಕೈಯಲ್ಲಿ ಶಂಖ ಇನ್ನೊಂದು ಕೈಯಲ್ಲಿ ಆಭಯ ಮುದ್ರೆಯಲ್ಲಿದೆ.

ಹೆಸರು – ವಿಷ್ಣು

ಸ್ಥಳ – ಸೂರ್ಯನಾರಾಯಣ ದೇವಾಲಯ

ಗ್ರಾಮ – ಸಂಡ

ಕಾಲ – ೧೦–೧೧ ನೇ ಶತಮಾನ

ರಾಜ। ವಂಶ –ಕಲ್ಯಾಣಚಾಳುಕ್ಯರು

ಶಿಲೆ – ಕಪ್ಪು ಶಿಲೆ

ದೇವಾಲಯದ ಹಿಂಭಾಗದಲ್ಲಿ ವಿಷ್ಣುಮೂರ್ತಿಯಿದ್ದು ನಿಂತಿರುವ ಭಂಗಿಯಲ್ಲಿ ಕಾಣಬಹುದು. ಹಾಗೂ ಪ್ರಭಾವಳಿವನ್ನು ಮೇಲ್ಭಾಗದಲ್ಲಿ ಗುರುತಿಸಬಹುದು. ಒಂದು ಕೈಯಲ್ಲಿ ಶಂಖ ಇನ್ನೊಂದು ಕೈಯಲ್ಲಿ ಆಭಯ ಮುದ್ರೆಯಲ್ಲಿದೆ.

ಹೆಸರು–ಸೂರ್ಯನಾರಾಯಣ

ಸ್ಥಳ – ಸೂರ್ಯನಾರಾಯಣ ದೇವಾಲಯ

ಗ್ರಾಮ – ಸಂಡ

ಕಾಲ – ೧೦–೧೧ನೇ ಶತಮಾನ

ರಾಜ । ವಂಶ – ಕಲ್ಯಾಣ ಚಾಳುಕ್ಯರು

ಶಿಲೆ – ಕಪ್ಪು ಶಿಲೆ

ಸೂರ್ಯನಾರಾಯಣ ದೇಗುಲದಲ್ಲಿ ಈ ಮೂರ್ತಿಯಿತ್ತು ಆದರೆ ಇಂದು ಈ ದೇವಾಲಯವೂ ಜೀರ್ಣೋದ್ದಾರವಾಗುತ್ತಿದೆ. ಈ ಮೂರ್ತಿಯು ನಿಂತಿರುವ ಭಂಗಿಯಲ್ಲಿದ್ದು ಕಿರೀಟ, ಕುತ್ತಿಗೆಗೆ ಹಾರ ಕೈಕಡಗ ಕಾಲ್ಗಡಗ ಧರಿಸಿದೆ.

ಹೆಸರು – ಸೂರ್ಯ

ಸ್ಥಳ – ಮ್ಯೂಸಿಯಂ

ಗ್ರಾಮ – ಬಳ್ಳಿಗಾವಿ

ಕಾಲ – ೧೦-೧೧ ನೇ ಶತಮಾನ

ಶಿಲೆ – ಕಪ್ಪು ಶಿಲೆ

ನಾಲ್ಕು ಅಡಿ ಎತ್ತರದ ಶಿಲ್ಪವು ಕೀರಿಟ, ಶಂಖ, ಗದೆ, ಮಣಿಹಾರವಿದೆ. ಕೆಳಗೆ ಚೌರಿ ಹಿಡಿದ ಶಿಲ್ಪಗಳು, ಮೇಲೆ ಪ್ರಭಾವಳಿ, ಪಕ್ಕದಲ್ಲಿ ಮಂಟಪ ಮಕರತೋರಣ ಅಲಂಕಾರವಿದೆ. ಇದೆ ರೀತಿಯ ೬ ಶಿಲ್ಪಗಳು ಇವೆ. ಆದರೆ ಅವುಗಳ ಆಭರಣ, ಭಂಗಿಯಲ್ಲಿ ಬದಲಾವಣೆ ಇದೆ.

ಜೈನ ಶಿಲ್ಪಗಳು

ಕರ್ನಾಟಕದ ಜೈನ ತೀರ್ಥಕ್ಷೇತ್ರಗಳಲ್ಲಿ ಬಂದಳಿಕೆಯೂ ಒಂದು. ಇಂತಹ ಬಂದಳಿಕೆಯಲ್ಲಿ ಕ್ರಿ.ಶ. ೩ನೇ ಶತಮಾನದಿಂದಲೇ ಜೈನ ಬಸದಿಗೆ ಅಡಿಪಾಯ ಹಾಕಿದರು. ಪಾರ್ಶ್ವನಾಥ ತೀರ್ಥಂಕರರ ಬ್ರಹ್ಮಜಿನಾಲಯದಲ್ಲಿ ಬನ್ದಳಿಕೆ ತೀರ್ಥವೂ ಒಂದಾಗಿದೆ. ಇದಲ್ಲದೆ ಬಳ್ಳಿಗಾವಿಯಲ್ಲಿಯೂ ಬಸದಿಯ ಜೀರ್ಣೋದ್ಧಾರವಾಗಿದೆ. ಹೀಗಾಗಿ ಜೈನ ಧರ್ಮಕ್ಕೆ ಸಮೀಪವಾದ ಜೈನ ಮುನಿಗಳ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಕ್ರಿ.ಶ.೧೦೫೪ ರಲ್ಲಿ ಬಳ್ಳಿಗಾವಿಯ ಸೋಮೇಶ್ವರ ವಿಗ್ರಹವನ್ನು ವರ್ತಕ ಸೋವಿಸೆಟ್ಟಿಯು ಪ್ರತಿಸ್ಥಾಪಿಸಿದ್ದು ಕ್ರಿ.ಶ. ೧೦೭೭ ರಲ್ಲಿ ಬಂದಳಿಕೆ ನಾಗಿಯಕ್ಕನ ಸಹೋದರ ಚಾವುಂಡ ಅಧಿಪತಿ ಪ್ರತಿಮ ಯೋಗದ ಜಿನ ಪ್ರತಿಮೆಯನ್ನು ನಿರ್ಮಿಸಿದ್ದನ್ನು ಕಾಣಬಹುದು. ಬಳ್ಳಿಗಾವಿಯಲ್ಲಿ ಜಿನಮೂರ್ತಿಗಳು ಹಾಳಾಗಿದ್ದರ ಪರಿಣಾಮವಾಗಿ ಒಂದೂ ಬಸದಿಗಳು ಉಳಿದು ಬಂದಿಲ್ಲ ಆದರೆ ಶಾಸನಗಳಲ್ಲಿ ಅಷ್ಟೋಪವಾಸಿ ಭಟರ ಬಸದಿ, ಕಮಲಸೇನಾ ಬಸದಿ, ಗೋಳವಯ್ಯನ ಬಸದಿ ಇತ್ಯಾದಿ ೧೨ ಬಸದಿಗಳಿದ್ದ ಉಲ್ಲೇಖಗಳು ದೊರೆಯುತ್ತದೆ.

ಹೆಸರು– ಶಾಂತಿನಾಥ

ಸ್ಥಳ – ಶಾಂತಿನಾಥ ಬಸದಿ

ಗ್ರಾಮ – ಬಂದಳಿಕೆ

ಕಾಲ – ೧೦-೧೧ನೇ ಶತಮಾನ

ರಾಜ । ವಂಶ – ಕಲವಿಟ್ಟರಸ

ಶಿಲೆ – ಕಪ್ಪು ಶಿಲೆ

ನಿಂತಭಂಗಿಯಲ್ಲಿರುವ ತನ್ನ ತೊಡೆಯ ಕೆಳಭಾಗ ಭಗ್ನಗೊಂಡಿರುವ ಶಿಲ್ಪವಿದೆ. ಶಾಂತಿನಾಥ ಜೈನ ಮೂರ್ತಿಯು ಶಾಂತಿನಾಥ ಬಸದಿಯ ಗರ್ಭಗೃಹದಲ್ಲಿ ಪೂರ್ವಾಭಿಮುಖವಾಗಿ ಇದೆ. ನೀಳವಾದ ದೇಹವಿದ್ದು ಗುಂಗುರು ಕೂದಲಿನಿಂದ ತಲೆಭಾಗ ಕೂಡಿದೆ.

ಹೆಸರು– ಜೈನ ಮೂರ್ತಿ

ಸ್ಥಳ –ಸೂರ್ಯ ನಾರಾಯಣ ದೇವಾಲಯದ ಹಿಂದೆ

ಗ್ರಾಮ – ಸಂಡ

ಕಾಲ – ೧೦–೧೧ನೇ ಶತಮಾನ

ರಾಜ । ವಂಶ – ಕಲ್ಯಾಣ ಚಾಳುಕ್ಯರು

ಶಿಲೆ – ಕಪ್ಪು ಶಿಲೆ

ದೇವಾಲಯ ಪೂರ್ಣವಾಗಿ ಹೊಸ ಮಾದರಿಯಲ್ಲಿ ನಿರ್ಮಾಣವಾಗಿದೆ. ಹಾಗಾಗಿ ಜೈನ ಮೂರ್ತಿಯನ್ನು ಹಿಂಬದಿಯಲ್ಲಿ ಪೂಜೆಯಿಲ್ಲದೆ ಇಟ್ಟಿದಾರೆ. ಇಂದು ಭಗ್ನಗೊಂಡಿದ್ದು ನಿಂತಿರುವ ಶೈಲಿಯಲ್ಲಿ ಇದೆ. ಪಾರ್ಶ್ವನಾಥ ರೂಪದಲ್ಲಿದ್ದುದಲ್ಲಿದ್ದು, ಪ್ರಭಾವಳಿಯಲ್ಲಿ ಹಾವಿನ ಹೆಡೆಯಿದೆ. ಅದೇ ಊರಿನಲ್ಲಿ ಮತ್ತೊಂದು ಜಿನನ ಮೂರ್ತಿಯಿದ್ದು ಇದು ಕುಳಿತಿರುವ ಭಂಗಿಯಲ್ಲಿದೆ.ಅದರ ಎರಡು ಕೈಗಳು ಭಗ್ನಗೊಂಡಿವೆ.

ಬೌದ್ಧ ಶಿಲ್ಪಗಳು

ಮೂಲತಃ ಬುದ್ಧನ ಶಕ್ತಿ ಕಲ್ಪನಾತೀತವಾದದ್ದು. ಈ ಮೂರ್ತಸ್ವರೂಪದಲ್ಲಿ ಬುದ್ಧನ ಚಿತ್ರಣಗಳನ್ನು ಸೌಮ್ಯ, ಮೌನ, ಶಾಂತ ಚಿತ್ತ ರೂಪದಲ್ಲಿ ಚಿತ್ರಿಸಿ ಆಚಾರ ವಿಚಾರಗಳನ್ನು ಕೈಗೊಂಡರು ಈ ನಿಟ್ಟಿನಲ್ಲಿ ಬೌದ್ಧರ ಅನುಯಾಯಿಗಳು, ಹಲವಾರು ಭಕ್ತರು ಬೌದ್ಧ ಧರ್ಮವನ್ನು ಸ್ವೀಕರಿಸಿ ಬೌದ್ಧ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರು. ಚಾಳುಕ್ಯ ತ್ರಿಭುವನ ಮಲ್ಲನ ಕಾಲದಲ್ಲಿ ದಂಡನಾಯಕ ರೂಪಾಭಟ್ಟಯ್ಯನು ಬಳ್ಳಿಗಾವಿಯಲ್ಲಿ ಜಯಂತಿ ಪ್ರಬುದ್ಧ ವಿಹಾರ ಸ್ಥಾಪಿಸಿ ತಾರಾ ಭಗವತಿ ಕೇಶವ ದೇವರ ಸ್ಥಾಪಿಸಿ ಭೂದಾನ ಬಿಟ್ಟಿದ್ದನ್ನು ಶಾಸನವು ಉಲ್ಲೇಖಿಸುತ್ತದೆ. ಇದು ಮೂಲತಃ ಜಿಡ್ಡಿಕೆರೆಯಲ್ಲಿ ಇದ್ದು ನಂತರ ಇಲ್ಲಿಗೆ ವರ್ಗಾಯಿಸಿರಬಹುದು. ಜೊತೆಗೆ ಇದಕ್ಕೆ ಬಾಪುರ ನಾಗಿಯಕ್ಕ ಕೂಡ ಸ್ಥಾಪಿಸಿದ ಉಲ್ಲೇಖವಿದೆ.(ಎಕ–೭, ಶಿಕಾರಿ ೧೨೦– ಕ್ರಿ.ಶ ೧೦೬೫)

ಬಳ್ಳಿಗಾವಿಯ ತಾರಾಭಗವತಿ ವಸ್ತುಸಂಗ್ರಹಾಲಯದಲ್ಲಿ ಬುದ್ಧನ ವಿಗ್ರಹ ಕೇಶವದೇವ ಲೋಕೇಶ್ವರ ಮೂರ್ತಿಗಳನ್ನು ಗುರುತಿಸಬಹುದು.

ಹೆಸರು – ತಾರಾಭಗವತಿ

ಸ್ಥಳ – ಮ್ಯೂಸಿಯಂ

ಗ್ರಾಮ – ಬಳ್ಳಿಗಾವಿ

ಶಿಲೆ – ಕಪ್ಪು ಶಿಲೆ

ರಾಜವಂಶ– ಕಲ್ಯಾಣಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಕ್ರಿ.ಶ.೧೦೬೭ರಲ್ಲಿ ಬಾಪುರ ವಂಶದ ನಾಗಿಯಕ್ಕ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದ್ದನ್ನು ಶಾಸನ ಉಲ್ಲೇಖಿಸುತ್ತದೆ. ಶಿಲ್ಪವು ನಾಲ್ಕು ಅಡಿ ಎತ್ತರವಿದೆ. ಕಮಲ ಪುಷ್ಪ ಪೀಠದ ಮೇಲೆ ಕುಳಿತು ಬಲಗಾಲನ್ನು ಕೆಳಕ್ಕೆ ಬಿಟ್ಟು ಎಡಗಾಲನ್ನು ಮಡಚಿಕೊಂಡಿದ್ದಾಗಿದೆ. ಬುದ್ಧನಂತೆ ಪ್ರಸನ್ನವದನೆಯಾಗಿ ಕುಳಿತಿರುವ ದೃಶ್ಯ ರಮಣೀಯವಾಗಿದೆ.

ಹೆಸರು – ಬೌದ್ಧ ಫಲಕ

ಸ್ಥಳ – ಮ್ಯೂಸಿಯಂ

ಗ್ರಾಮ – ಬಳ್ಳಿಗಾವಿ

ಶಿಲೆ – ಕಪ್ಪು ಶಿಲೆ

ಎರಡು ಅಡಿ ಎತ್ತರದ ಶಿಲ್ಪಗಳ ಪಟ್ಟಿಯೂ ಮಧ್ಯೆ ಬುದ್ಧನ ಕೆತ್ತನೆ, ಪಕ್ಕದಲ್ಲಿ ಸ್ತ್ರೀ–ಪುರುಷ ಮೂರ್ತಿಗಳಿವೆ. ಕಮಲ ದಳದ ಮೇಲೆ ಕುಳಿತ ಭಂಗಿಯಲ್ಲಿವೆ.

ಶಾಕ್ತ ಶಿಲ್ಪಗಳು

ಶಾಕ್ತಪಂಥ ಎಂದರೆ ಮಾತೃದೇವತೆಯ ರೂಪದಲ್ಲಿರುವ ಶಕ್ತಿದೇವತೆಯ ಆರಾಧಿಸುವ ಪಂಥ. ಭಾರತದಲ್ಲಿ ಸಿಂಧೂ ಸಂಸ್ಕೃತಿಯಲ್ಲಿಯೇ ಶಾಕ್ತಪಂಥವು ಇದ್ದು, ಇಂದಿನ ಕಾಲದಲ್ಲಿಯವರೆಗೆ ಅಭಿವೃದ್ಧಿಯಲ್ಲಿ ಸಾಗಿದೆ. ಹರಪ್ಪ ನಾಗರೀಕತೆಯಲ್ಲಿ ಹರಪ್ಪ, ಕಾಲಿಬಂಗನ್, ಲೋಥಲ್, ಬನಾವಳಿ, ಮಹೆಂಜೋದಾರೋಗಳಲ್ಲಿ ಮಾತೃ ರೂಪದ

ದೇವತೆಯೇ ಶಾಕ್ತ ಶಿಲ್ಪಗಳಾಗಿವೆ. ವೈದಿಕ ಸಂಸ್ಕೃತಿಯಲ್ಲಿ ಶಕ್ತಿ ದೇವತೆಯಾಗಿ ಬೆಳೆದು ವಿವಿಧ ರೂಪಗಳಲ್ಲಿ ಅವತಾರಗಳಲ್ಲಿ ಕಾಣಿಸಿಕೊಂಡಿದೆ. ಲಕ್ಷ್ಮಿ, ಸರಸ್ವತಿ, ಪಾರ್ವತಿ, ಬನಶಂಕರಿ, ಸಪ್ತ ಮಾತೃಕೆಯರುಗಳಾಗಿ ಶಕ್ತಿದೇವತೆ ಎನ್ನಿಸಿಕೊಂಡಿವೆ.

ಸಪ್ತಮಾತೃಕೆಯರು :

ಶಾಕ್ತ ಶಿಲ್ಪಗಳಲ್ಲಿ ಸಪ್ತಮಾತೃಕೆಯ ಶಿಲ್ಪಗಳು ಪ್ರಮುಖವಾಗಿವೆ. ಒಂದೇ ಶಿಲೆಯ ಪಟ್ಟಿಯಲ್ಲಿ ಒಂಭತ್ತು ದೇವರುಗಳನ್ನು ತೋರಿಸಲಾಗಿರುತ್ತದೆ. ಸಪ್ತಮಾತೃಕೆಯ ಎಡ ಭಾಗದಲ್ಲಿ ಸರಸ್ವತಿ, ಬಲ ಭಾಗದಲ್ಲಿ ಗಣೇಶ ಶಿಲ್ಪಗಳು ಸರ್ವೇಸಾಮಾನ್ಯವಾಗಿರುತ್ತವೆ. ಸಪ್ತಮಾತೃಕೆಯರ ಶಿಲ್ಪಗಳ ಜೊತೆಗೆ ಅವರ ವಾಹನಗಳನ್ನು ಪೀಠದಲ್ಲಿ ಕೆತ್ತಲಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ಸಪ್ತಮಾತೃಕೆಯರ ಶಿಲ್ಪಗಳು ಸಾಮಾನ್ಯ. ದೇವಾಲಯದ ನವರಂಗದ ದೇವಾಕೋಷ್ಠಕದಲ್ಲಿ ಸಪ್ತಮಾತೃಕೆಯರ ಶಿಲ್ಪಗಳನ್ನು ಇರಿಸಲಾಗಿದೆ. ಕಾಳಮುಖ ಪರಂಪರೆಯ ದೇವಾಲಯದಲ್ಲಿ ಕಾಣಬಹುದು.

ಬ್ರಾಹ್ಮಿ- ಬ್ರಹ್ಮನ ಹೆಂಡತಿ- ಹಂಸ

ಮಹೇಶ್ವರಿ-ಶಿವನ ಹೆಂಡತಿ-ನಂದಿ

ಕೌಮಾರಿ-ಕಾರ್ತಿಕೇಯನ ಹೆಂಡಲಿ-ನವಿಲು

ವೈಷ್ಣವಿ-ವಿಷ್ಣುವಿನ ಹೆಂಡತಿ- ಗರುಡ

ವರಾಹಿ-ವರಹನ ಹೆಂಡತಿ- ನಂದಿ

ಇಂದ್ರಾಣಿ-ಇಂದ್ರನ ಹೆಂಡತಿ-ಆನೆ

ಚಾಮುಂಡಿ-ಶಕ್ತಿ ದೇವತೆ-ಹುಲಿ, ಸಿಂಹ

ಮಹಿಷಾಸುರ ಮರ್ದಿನಿ :

ಶಿಲ್ಪವು ಕೋಣದ ರೂಪದಲ್ಲಿರುವ ಮಹಿಷಾಸುರನ ಮೇಲೆ ತನ್ನ ಕಾಲನ್ನು ಇಟ್ಟು, ಬಲಗೈಯಲ್ಲಿ ತ್ರಿಶೂಲದಿಂದ ಅವನನ್ನು ಸಂಹರಿಸುವ, ಎಡಗೈಯನ್ನು ಅದರ

ಬಾಯಯನ್ನು ಹಿಡಿದಿರುವುದೇ ಮಹಿಷಾಸುರ ಮರ್ದಿನಿ. ಇಂತಹ ಶಿಲ್ಪಗಳು ನವರಂಗದ ದೇವಾಕೋಷ್ಠಕದಲ್ಲಿ ಇಡಲಾಗಿದ್ದು, ಅವುಗಳನ್ನು ಪಾರ್ವತಿ ಎಂಬುದಾಗಿ ಜನರ ನಂಬಿಕೆಯನ್ನು ಕಾಣಬಹುದು. ಈ ಶಿಲ್ಪದ ಕೈಗಳಲ್ಲಿ ಖಡ್ಗ, ಅಂಕುಶ, ಆಯುಧಗಳು ಕಂಡುಬರುತ್ತವೆ. ಮೂಗುತಿ, ರುಂಡಮಾಲೆ, ಕಂಠಿಹಾರ, ಕರ್ಣಕುಂಡಲ, ಕೈಗಡಗ, ಕಾಲ್ಗಡಗಗಳನ್ನು ಶಿಲ್ಪದ ಮೇಲೆ ಕಂಡರಿಸಲಾಗಿದೆ.

ಶಿಲ್ಪವನ್ನು ನೋಡಿದರೆ ಭಾರತೀಯರ ಪಾಲಿಗೆ ಅವರ ಸಂಸ್ಕೃತಿಗೆ ವಿಶೇಷವಾಗಿ ಬಂದ ಶಕ್ತಿ ದೇವತೆ, ಶಿಷ್ಠ ದೇವತೆ, ಜನಪದ ದೇವತೆ, ಮಾತೃ ದೇವತೆಯಾಗಿ ಪೂಜೆಗೆ, ಆಚರಣೆಗಳಿಗೆ ಜನ್ಮವೆತ್ತಿದ್ದಾಳೆ ಎನ್ನಿಸುತ್ತದೆ. ಭಾರತೀಯರ ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರತೀಕವಾದ ಈ ದೇವತೆ ಆರಾಧನೆಯಲ್ಲಿ ಶಕ್ತಿಯ ಒಂದು ರೂಪವಾಗಿದ್ದಾಳೆ.

ತ್ರಿಮೂರ್ತಿಗಳನ್ನು ಪೂಜೆಗೆ ಏರಿಸುವಾಗ ಬ್ರಹ್ಮನ ಪೂಜೆ ಕಡಿಮೆ. ಆದರೆ ಕೆಲವೊಮ್ಮೆ ಪ್ರಕೃತಿಯ ಬದಲಾವಣೆಗೆ ಪಣತೊಟ್ಟು ನಿಂತ ದುಷ್ಟರ ಸಂಹಾರಕ್ಕೆ ಹೊಸರೂಪದ ದೇವತೆಗಳು ಕಾಣಬಹುದು. ಉದಾಹರಣೆಗೆ ಮಹಿಷಾಸುರ ಮರ್ದಿನಿ, ಕಾಳಿ, ದುರ್ಗೆ ಇತ್ಯಾದಿ. ಹೀಗೆ ದುಷ್ಟ ನಿಗ್ರಹವನ್ನು ಮಾಡಿದಾಗ ಈ ದುಷ್ಟ ನಿಗ್ರಹಿಯ ರೂಪವನ್ನೇ ಮೂರ್ತಿಸ್ವರೂಪದಲ್ಲಿ ಚಿತ್ರಿಸಿ ಪೂಜೆಯನ್ನು ಮಾಡಲಾಗುತ್ತದೆ. ಈ ದೇವತೆಗಳಿಗೆ ಬಲಿ ಪ್ರಾಮುಖ್ಯತೆ ಪಡೆದುಕೊಂಡಿದೆ. ಇದಕ್ಕೆ ಕಾರಣ ದುಷ್ಟರ ರಕ್ತದ ಓಕುಳಿಯಾಡಿದ ದೇವಿಗೆ ಬಲಿಯೇ ಶ್ರೇಷ್ಟ. ಈ ಕಾರಣಕ್ಕೆ ಈಕೆಯನ್ನು ಶಕ್ತಿದೇವತೆಯ ಮೂರ್ತಿಸ್ವರೂಪದಲ್ಲಿ ಕಾಣಬಹುದು. ಶಕ್ತಿ ರೂಪವನ್ನು ಪ್ರದರ್ಶನಗೈಯುತ್ತಾಳೆ. ಆ ನಿಟ್ಟಿನಲ್ಲಿ ಶಕ್ತಿಯೂ ಸೃಷ್ಟಿಯ ಕರ್ತೃವಾಗಿ, ರಾಕ್ಷಸರ, ಅಸುರರ ಬಲಿಗಾಗಿ ಭಕ್ತರ ನೆರವಿಗೆ ನಿಂತ ದೇವಿಯಾಗಿದ್ದಾಳೆ.

ಸಪ್ತಮಾತೃಕೆಯರ ಶಿಲ್ಪಗಳು ಮಲ್ಲಯ್ಯನಗುಡಿ ಸೋಮೇಶ್ವರ ದೇವಾಲಯ ಮುಗಳಗೆರೆ, ಕೇದಾರೇಶ್ವರ ದೇವಾಲಯ, ಪುರದ ವೀರಭದ್ರ ದೇವಾಲಯ ಬಳ್ಳಿಗಾವಿಗಳಲ್ಲಿ ಒಂದೇ ರೂಪದಲ್ಲಿದ್ದು ಈ ದೇವತೆಗಳ ವಾಹನಗಳಲ್ಲಿ ನವಿಲು ಗೂಳಿ ಗರುಡ ಇತ್ಯಾದಿಗಳನ್ನು ಒಳಗೊಂಡಿದ್ದು, ೭ ಜನ ಮಾತೃಕೆಯರು ಎಡಕ್ಕೆ ಗಣೇಶ ಮೂರ್ತಿ ಬಲಕ್ಕೆ ಸರಸ್ವತಿಯ ಮೂರ್ತಿಗಳನ್ನು ಸೇರಿಕೊಂಡಂತೆ ಒಟ್ಟು ೯ ಶಿಲ್ಪಗಳಿವೆ

ಹೆಸರು– ಬನಶಂಕರಿ

ಸ್ಥಳ– ಬನಶಂಕರಿಯಮ್ಮನವರ ದೇಗುಲ

ಗ್ರಾಮ– ಬಂದಳಿಕೆ

ರಾಜುವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦-೧೧ನೇ ಶತಮಾನ

ಶಿಲೆ – ಕಪ್ಪು ಶಿಲೆ

ಪೀಠದ ಮೇಲೆ ವಿರಾಜಮಾನಳಾಗಿರುವ ಚತುರ್ಮುಖ ಬನಶಂಕರಿ ವಿಗ್ರಹವು ಕಪ್ಪು ಶಿಲೆಯಿಂದ ಕೂಡಿದ್ದು ಚೌರಿ ಬೀಸುವ ಸೇವಕಿಯರಿದ್ದಾರೆ. ದೇವಿಯ ತಳಭಾಗದ ಎದಿರು ಹೆಡೆತೆರೆದ ನಾಗನನ್ನು ಚಿತ್ರಿಸಲಾಗಿದೆ. ಹಸ್ತದಲ್ಲಿ ತ್ರಿಶೂಲ ಪರಶುಕೊಡಲಿ ಇದೆ. ಉಳಿದ ಎರಡು ಹಸ್ತಗಳನ್ನು ತೊಡೆಯ ಮೇಲೆ ಊರಿದೆ. ಈ ದೇವಿಯು ಸಂತಾನ ಭಾಗ್ಯ ಕರುಣಿಸುವ ಶಕ್ತಿಯಾಗಿದೆ.

ಹೆಸರು–ಭೈರವಿ

ಸ್ಥಳ– ಮಲ್ಲಿಕಾರ್ಜುನ ದೇವಾಲಯ

ಗ್ರಾಮ–ಬೇಗೂರು

ರಾಜವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦-೧೧ನೇ ಶತಮಾನ

ಶಿಲೆ – ಕಪ್ಪು ಶಿಲೆ

ಭೈರವಿ ಶಿಲ್ಪ ನಿಂತ ಭಂಗಿಯಲ್ಲಿದ್ದು ಕೊರಳಲ್ಲಿ ರುಂಡಗಳನ್ನು ಮಾಲೆಯಾಗಿ ಧರಿಸಿದೆ. ಎಂಟು ಕೈಗಳಿಂದ ಕೂಡಿದ್ದು ಆಯುಧಗಳನ್ನು ಹಿಡಿದುಕೊಂಡಿದೆ. ಈ ಆಯುಧಗಳಲ್ಲಿ ತ್ರಿಶೂಲ ಕತ್ತಿ ಗದೆ ಪರಶುಗೊಡಲಿ ಹಾಗೆ ಇನ್ನುಳಿದ ಕೈಗಳಲ್ಲಿ ಡಮರು ನಾಗರಹಾವು ಹಿಡಿದುಕೊಂಡಿದೆ.

ಹೆಸರು– ಮಹಿಷಾಸುರ ಮರ್ದಿನಿ

ಸ್ಥಳ– ಮಲ್ಲಿಕಾರ್ಜುನ ದೇವಾಲಯ

ಗ್ರಾಮ– ಬೇಗೂರು

ಶಿಲೆ – ಕಪ್ಪು ಶಿಲೆ

ರಾಜವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦-೧೧ನೇ ಶತಮಾನ

ಈ ಶಿಲ್ಪ ನಿಂತಿರುವ ಭಂಗಿಯಲ್ಲಿದ್ದು ಮಹಿಷನನ್ನು ಸಂಹರಿಸುವ ದೃಶ್ಯದಲ್ಲಿದೆ. ತನ್ನ ತ್ರಿಶೂಲದಿಂದ ಮಹಿಷನನ್ನು ತಿವಿಯುತ್ತಿದ್ದು, ಒಂದು ಕಾಲಲ್ಲಿ ಮಹಿಷನನ್ನು ಮೆಟ್ಟಿ ನಿಂತಿರುವ ಶಿಲ್ಪವಾಗಿವೆ. ಇದು ನಾಲ್ಕು ಕೈಯಿಂದ ಕೂಡಿದ ಕಿರೀಟ ಆಭರಣಗಳಿಂದ ಅಲಂಕಾರಿತವಾಗಿವೆ.

ಹೆಸರು–ಮಹಿಷಾಸುರ ಮರ್ದಿನಿ

ಸ್ಥಳ – ಮ್ಯೂಸಿಯಂ

ಗ್ರಾಮ – ಬಳ್ಳಿಗಾವಿ

ಶಿಲೆ – ಕಪ್ಪು ಶಿಲೆ

ರಾಜವಂಶ– ಕಲ್ಯಾಣಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಈ ಶಿಲ್ಪ ನಿಂತಿರುವ ಭಂಗಿಯಲ್ಲಿದ್ದು ಮಹಿಷನನ್ನು ಸಂಹರಿಸುವ ದೃಶ್ಯದಲ್ಲಿದೆ. ತನ್ನ ತ್ರಿಶೂಲದಿಂದ ಮಹಿಷನನ್ನು ತಿವಿಯುತ್ತಿದ್ದು, ಒಂದು ಕಾಲಲ್ಲಿ ಮಹಿಷನನ್ನು ಮೆಟ್ಟಿ ನಿಂತಿರುವ ಶಿಲ್ಪವಾಗಿದೆ. ಇದು ನಾಲ್ಕು ಕೈಯಿಂದ ಕೂಡಿದ ಕಿರೀಟ ಆಭರಣಗಳಿಂದ ಅಲಂಕಾರಿತವಾಗಿವೆ. ಈ ಶಿಲ್ಪ ಕೈಗಳಲ್ಲಿ ಖಡ್ಗ, ಅಂಕುಶ, ಆಯುಧಗಳು ಕಂಡುಬರುತ್ತವೆ. ಮೂಗುತಿ, ರುಂಡಮಾಲೆ, ಕಂಠಿಹಾರ, ಕರ್ಣಕುಂಡಲ, ಕೈಗಡಗ, ಕಾಲ್ಗಡಗಗಳನ್ನು ಶಿಲ್ಪದ ಮೇಲೆ ಕಂಡರಿಸಲಾಗಿದೆ.

ಹೆಸರು– ಮಹಿಷಾಸುರ ಮರ್ದಿನಿ

ಸ್ಥಳ– ಸೋಮೇಶ್ವರ ದೇವಾಲಯ

ಗ್ರಾಮ– ಮುಗಳಗೆರೆ

ರಾಜವಂಶ– ಕಲ್ಯಾಣ ಚಾಳುಕ್ಯರು

ಕಾಲ – ೧೦–೧೧ನೇ ಶತಮಾನ

ಶಿಲೆ – ಕಪ್ಪು ಶಿಲೆ

ಮಹಿಷಾಸುರನನ್ನು ಸಂಹರಿಸುವ ದೇವತೆಯ ಶಿಲ್ಪವಿದಾಗಿದ್ದು ೪ ಕೈಗನ್ನು ಹೊಂದಿದ್ದು ತ್ರಿಶೂಲ ಅಭಯಹಸ್ತ ಕತ್ತಿ ಹಿಡಿದ ದೃಶ್ಯಗಳನ್ನು ಕಾಣಬಹುದು. ಎಡ

ಪಾದವನ್ನು ಮಹಿಷನ ಮೇಲೆ ಮೆಟ್ಟಿರುವುದು ಹಾಗೂ ತ್ರಿಶೂಲದಿಂದ ತಿವಿದಿರುವುದು ಈ ಶಿಲ್ಪದ ವೈಶಿಷ್ಟತೆಯಾಗಿದೆ.

ಹೆಸರು- ನಾಗ- ನಾಗಿಣಿ

ಸ್ಥಳ- ಕೇದಾರೇಶ್ವರ ದೇವಾಲಯ

ಗ್ರಾಮ- ಬಳ್ಳಿಗಾವಿ

ಶಿಲೆ – ಕಪ್ಪು ಶಿಲೆ

ರಾಜವಂಶ- ಕಲ್ಯಾಣ ಚಾಳುಕ್ಯರು

ಕಾಲ – ೧೦-೧೧ನೇ ಶತಮಾನ

ಕೇದಾರೇಶ್ವರ ದೇವಾಲಯದ ಮಧ್ಯ ಗರ್ಭಗುಡಿಯ ಎಡಭಾಗದಲ್ಲಿರುವ ಗರ್ಭಗುಡಿಯ ಎಡಭಾಗಕ್ಕೆ ನಾಗ ನಾಗಿಣಿಯ ಶಿಲ್ಪವಿದ್ದು ೭ ಹಾಗೂ ೫ ಹೆಡೆಗಳಲ್ಲಿ ಕಂಡುಬರುತ್ತದೆ. ಮಾನವ ಆಕೃತಿಯ ಕುಳಿತ ಶಿಲ್ಪವಿದಾಗಿದೆ.

ಹೆಸರು – ನಾಗರಾಜ

ಗ್ರಾಮ – ಬೇಗೂರು

ಸ್ಥಳ – ಮಲ್ಲಿಕಾರ್ಜುನ ದೇವಾಲಯ

ಶಿಲೆ – ಕಪ್ಪು ಶಿಲೆ

ಮಲ್ಲಿಕಾರ್ಜುನ ದೇವಾಲಯದ ಮುಂಭಾಗದಲ್ಲಿ ೭ ಹೆಡೆಗಳಿಂದ ಕೂಡಿದ ನಾಗರ ಶಿಲ್ಪವಿದೆ.

ಪಂಚತಂತ್ರ ಶಿಲ್ಪಗಳು :

ಮೂರ್ತಿಶಿಲ್ಪಗಳಲ್ಲಿ ದೇವರು ಮತ್ತು ದೇವರ ಪರಿವಾರ ಮಾತ್ರ ಕಂಡುಬಂದರೂ ಇವುಗಳ ಜೊತೆಗೆ ದೇಗುಲ ನೋಡುಗರಿಗೆ ದಂತ ಕಥೆಗಳನ್ನು ಸಹ ಹೇಳಲಾಗಿದೆ. ಉದಾಹರಣೆಗೆ ಪಂಚತಂತ್ರ ಕಥೆಗಳು ಮಹಾಕಾವ್ಯ ಕಥೆಗಳು ಇತ್ಯಾದಿ. ಇವುಗಳ ಮೂಲಕ ನೀತಿ ನಿಯಮವಿದ್ದ ಹಾಗೂ ನೈತಿಕತೆಯ ಚಿತ್ರಣ ನೀಡಲಾಗಿದೆ. ಸಾಹಿತ್ಯ ಆಧಾರಗಳಲ್ಲಿ ಮಹಾಕಾವ್ಯಗಳನ್ನು ಗುರುತಿಸಬಹುದು. ಆದರೆ ಅದರ ಪ್ರಾಕ್ತನಶಾಸ್ತ್ರ ಆಧಾರವಾಗಿ ಹೇಳುವಾಗ ದೇವಾಲಯಗಳ ಜಾಲಂದ್ರ ಭಾಗದ ಮೇಲೆ ಇರುವ ಚಿತ್ರಿಕೆಗಳಿವೆ. ಉದಾಹರಣೆಗೆ ಬಂದಳಿಕೆಯ ಸೋಮೇಶ್ವರ ದೇವಾಲಯದಲ್ಲಿ

ರಾಮಾಯಣ ಮತ್ತು ಮಹಾಭಾರತದ ಪಟ್ಟಿಕೆಗಳು ಹಂತ ಹಂತವಾಗಿ ಕಥೆಯನ್ನು ಹೆಣೆಯುತ್ತವೆ. ಅದೇ ರೀತಿ ಪಂಚತಂತ್ರ ಕಥೆಗಳಿಗೆ ಸಂಬಂಧಿಸಿದಂತೆ ಬಳ್ಳಿಗಾವಿಯ ತ್ರಿಪುರಾಂತೇಶ್ವರ ದೇವಾಲಯದ ಮುಖಮಂಟಪದ ಕಕ್ಷಾಸನದ ಹಿಂದೆ, ಅಧಿಷ್ಠಾನದ ಮೇಲಿನ ಭಾಗದಲ್ಲಿ ಪಂಚತಂತ್ರ ಕಥೆಗಳ ಸಾಲುಗಳು ಶಿಲ್ಪದಲ್ಲಿ ಕೆತ್ತನೆಯಾಗಿವೆ.

ಮೊಸಳೆ ಮತ್ತು ಕಪಿ
ಟಗರುಗಳ ಕದನ
ಅತಿಲೋಭಿಯಾದ ನರಿ
ಬ್ರಾಹ್ಮಣ ಕಳ್ಳ ಮತ್ತು ಬ್ರಹ್ಮ ರಾಕ್ಷಸ
ಬ್ರಾಹ್ಮಣ ಏಡಿ ಮತ್ತು ಕಾಗೆ
ಕಿಲನುಚ್ಚಿದ ಕಪಿ
ಹಂಸಗಳು ಮತ್ತು ಆಮೆ
ಮೊಲ ಮತ್ತು ಆಮೆ
ಬ್ರಾಹ್ಮಣಿಯು ಮುಂಗಸಿಯನ್ನು ಕೊಂದಿದ್ದು.

(ಕೃಪೆ: ಚನ್ನಬಸಯ್ಯ.ಎಸ್.ಪಾಟೀಲ್, ಪಂಚತಂತ್ರ ಕಥೆಗಳು)

ಶಿಲ್ಪಿಗಳು

ದೇವಾಲಯ ಮತ್ತು ಮೂರ್ತಿಶಿಲ್ಪಗಳನ್ನು ಕೆತ್ತುವುದೇ ಮೂಲ ವೃತ್ತಿಯಾಗಿಸಿಕೊಂಡು ಒಂದೆಡೆಯಿಂದ ಇನ್ನೊಂದೆಡೆಗೆ ಕೆಲವು ಕುಟುಂಬಗಳು ವಲಸೆಹೋಗಿ ಅಲ್ಲಿಯ ವಾತಾವರಣವನ್ನು ಧಾರ್ಮಿಕ ನೆಲೆಯಲ್ಲಿ ಚಿತ್ರಿಸಿ ಜನರಲ್ಲಿ ದೈವಭಕ್ತಿಯನ್ನು ಸೃಷ್ಟಿಸುವ ವ್ಯಕ್ತಿಗಳೇ ಶಿಲ್ಪಿಗಳು. ಇವರ ಮೂಲ ವೃತ್ತಿ ದೇವಾಲಯದ ನಿರ್ಮಾಣ ಮತ್ತು ಜೀರ್ಣೋದ್ಧಾರ ಕಾರ್ಯಗಳಲ್ಲಿ ಭಾಗಿಯಾಗುವುದು. ಇಂತಹ ಶಿಲ್ಪಿಗಳನ್ನು ಓಜ ಎಂಬ ಅರ್ಥದಲ್ಲಿ ಇವರ ವೃತ್ತಿಯನ್ನು ಗುರುತಿಸಿದೆ. ಉದಾಹರಣೆಗೆ ಜವೋಜ, ಸಿಂಗೋಜ, ಬಿಸದೋಜ ಇತ್ಯಾದಿ. ಇವರು ದೇವಾಲಯ ನಿರ್ಮಾಣದ ಜೊತೆಗೆ ಮೂರ್ತಿಶಿಲ್ಪಗಳನ್ನು ನಿರ್ಮಿಸಿದ್ದಾರೆ. ಅಲ್ಲದೆ ಶಾಸನ ಶಿಲ್ಪಿಗಳು ಇವರಲ್ಲಿ ಕೆಲವರು ಇದ್ದರು. ಹಾಗಾಗಿ ಶಾಸನಗಳು ಕಲ್ಯಾಣ ಚಾಲುಕ್ಯರ, ಹೊಯ್ಸಳರ ಕಾಲದ ಶಾಸನಗಳಲ್ಲಿ ಅಲಂಕಾರಿಕೆ ತುಂಬಿ ತುಳುಕುತ್ತಿತ್ತು. ಹಾಗೂ ವರ್ಣಾತ್ಮಕ ರೂಪ ಕಾಣುತ್ತಿತ್ತು. ಒಟ್ಟಾರೆಯಾಗಿ ಈ ಓಜ ವೃತ್ತಿಯಲ್ಲಿ ದೇವಾಲಯ ಮತ್ತು ಮೂರ್ತಿಶಿಲ್ಪಗಳ ರಚನೆಯಲ್ಲಿ ಪಾತ್ರ ಮಹತ್ವವಾಗಿದೆ.

ಶಿಲ್ಪಗಳು, ಅಂತರಾಳ, ನವರಂಗ, ಮುಖಮಂಟಪ, ಶಿಖರ, ಸ್ಥಂಭಗಳು. ಕಪೋತ ಶಿಲ್ಪಗಳು ಭಿತ್ತಿಯ ಭಾಗ ಇತ್ಯಾದಿ ವಿವಿಧ ರೂಪಗಳನ್ನು ದೇವಾಲಯಗಳಿಗೆ ನೀಡಿ ಧಾರ್ಮಿಕ ಶ್ರದ್ಧೆಯನ್ನು ಜನರಲ್ಲಿ ಮೂಡಿಸುವಲ್ಲಿ ಮುಖ್ಯರಾಗಿದ್ದಾರೆ. ಶಿಲ್ಪಿಗಳ

ವಿಶ್ಲೇಷಣೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದುದ್ದು ವಿನಯಸೂಚಕವಾದ ಸರಸ್ವತಿ ಗಣಪಾದ ಪಂಕಜ ಬ್ರಮರಂ(ಎಕ-೭, ಶಿಕಾರಿ ೨೯೩, ಕ್ರಿ.ಶ.೧೦೮೦) ಹೀಗೆ ಶಿಲ್ಪಿಯ ಕರ್ಮಗಳಿಗೆ ಹೊಗಳಿಕೆಯಾಗಿ ಕಾಣಬಹುದು. 'ಓಜರು' ದೇವಾಲಯ ನಿರ್ಮಾಣಕ್ಕೆ ಅವಧಿಯನ್ನು ಗೊತ್ತು ಮಾಡಿಕೊಳ್ಳಬೇಕಾಗಿತ್ತು. ಬಳ್ಳಿಗಾವಿಯ ಕೇದಾರಮಂಟಪವನ್ನು ನಿಶ್ಚಿತ ಅವಧಿಯಲ್ಲಿ ನಿರ್ಮಾಣ ಮಾಡಿದಕ್ಕೆ ಬಿಸದೋಜ, ಚಾವೋಜ, ಸಿಂಗೋಜ, ಇವರಿಗೆ ರಾಜಗುರುಗಳು ಮೆಚ್ಚಿ ಭೂದಾನ ನೀಡಿದ ಉಲ್ಲೇಖ ಬಳ್ಳಿಗಾವಿಯ ಶಾಸನಗಳಲ್ಲಿ ದೊರೆಯುತ್ತದೆ.(ಎಕ-೭, ಶಿಕಾರ್ರಿ೨, ಕ್ರಿ.ಶ.೧೧೮೬)ಕೆಲವೊಮ್ಮೆ ಕಾಳುಕೊಡುತ್ತಿದ್ದರೆಂದು ಕಾಣುತ್ತಿದೆ. ಭೂಮಿಯನ್ನು ಕಮ್ಮ, ಕೊಳಗೆ, ಸಲಗಗಳಲ್ಲಿ ಅಳತೆ ಮಾಡಿ ಅವುಗಳಿಗೆ ಬಿತ್ತುವ ಕಾಳಿನ ಪ್ರಮಾಣದ ಆಧಾರದ ಮೇಲೆ ಅಳೆದು ಕೊಡುತ್ತಿದ್ದರು. ಇದ್ದು ಇವರಿಗೆ ಬರುತ್ತಿದ್ದ ಆದಾಯವಾಗಿದೆ. ಕೆಲವು ಸಲ ತೆರಿಗೆಯಿಂದ ದೂರವಾಗುವಂತೆ ಇರಲಿಲ್ಲ. ಇವರ ಜನಾಂಗದ ಅಕ್ಕಸಾಲಿಗ ಬಡಗಿಗಳ ಮೇಲೆ ಸುವರ್ಣಯ ಮತ್ತು ಸುತ್ತಿಗೆ ಬಳಸಿದ ತೆರಿಗೆ ಇರುತ್ತಿತ್ತು.

ದಾಸೋಜ:

ಹೆಚ್.ಆರ್. ರಘುನಾಥ ಭಟ್ಟರವರು ಗುರುತಿಸುವ ಬಳ್ಳಿಗಾವಿಯಲ್ಲಿರುವ ಭಗ್ನಗೊಂಡಿರುವ ಅಚ್ಚುತ ದೇವರ ಮೂರ್ತಿ ಇವು ತಮ್ಮ ಪಾದ ಪೀಠದ ಮೇಲೆ ದಾಸೋಜನ ನಾಮಾಂಕಿತ ಹೊಂದಿದೆ. ಕ್ರಿ.ಶ.೧೦೬೮ ರಲ್ಲಿ ಬಳ್ಳಿಗಾವಿಯ ಬಡಗಿಯರ ಹೊಂಡದ ಬಳಿ ಹಿತ್ತಲಿನಲ್ಲಿ ಬಿದ್ದಿರುವ ಒಂದು ಶಾಸನವು ದಾಸೋಜನ ಕಾಲದ್ದಾಗಿದೆ. ಶಾಸನದ ಕೊನೆಯಲ್ಲಿ.....ಗ ದಾಸೋಜ ಕಂಡರಿಸಿದಂ ಎಂದಿದೆ. ಬಹುಶಃ ತನ್ನ ತಂದೆಯ ಹೆಸರನ್ನು ಹೇಳಿದ್ದಾನೆ. ದಾಸೋಜನ ಕುರಿತಾಗಿ ಬೇಲೂರಿನ ಶಾಸನಗಳಲ್ಲಿ ಉಲ್ಲೇಖವಿದೆ. ಬಳ್ಳಿಗಾವಿಯ ರೂವಾರಿ ದಾಸೋಜ(ಎಕ-೭ ಶಿಕಾರಿ ೧೩೫ ಕ್ರಿ.ಶ.೧೦೨೦) ಸುಮಾರು ಮೂರು ಸ್ಥಳ ಭಂಜಿಕೆಗಳನ್ನು ಅವನ ಮಗ ಚಾವಣನು ಮೂರು ಸ್ಥಳ ಭಂಜಿಕೆಗಳನ್ನು ಕೆತ್ತಿರುವುದು ಲಘು ಶಾಸನಗಳು ತಿಳಿಸುತ್ತವೆ. ಜನಪದಗಳಲ್ಲಿ ನಂಬಿಕೆ ಇರುವ ಹೊಯ್ಸಳ ದೇವಾಲಯಗಳನ್ನು ಕಟ್ಟಿದ ತಂದೆ ಮತ್ತು ಮಗ ಜಕಣಾಚಾರಿ ಮತ್ತು ಡಂಕಣಾಚಾರಿಯರು ದಾಸೋಜ ಮತ್ತು ಚಾವೋಜರೇ ಇರಬಹುದು(ಗೋಪಾಲರಾವ್ ಹೆಚ್.ಎಸ್, ೧೯೯೩, ಶಾಸನಗಳ ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು-ಒಂದು ಸಾಂಸ್ಕೃತಿಕ ಅಧ್ಯಯನ, ಪುಟ ೨೫೧).

ಅಧ್ಯಾಯ–೮

ಸಮಾರೋಪ

ಅಧ್ಯಾಯ-೮

ಸಮಾರೋಪ

ಶಿಕಾರಿಪುರದ ಉದ್ದಗಲಕ್ಕೂ ಶಾಸನಗಳು ಹಾಗೂ ದೇವಾಲಯಗಳು ಹರಡಿವೆ. ಈ ಅಧ್ಯಯನಗಳಲ್ಲಿ ಪ್ರಮುಖವಾಗಿ ಶಿಕಾರಿಪುರದಲ್ಲಿ ಸಿಗುವ ಶಾಸನಗಳನ್ನು ಆಧರಿಸಿ ಇಲ್ಲಿ ಸಾಧಿಸಿದ ಸಾಧನೆಗಳನ್ನು ಕುರಿತಾದ ವಿಚಾರಗಳನ್ನು ಮಂಥನ ಮಾಡಲಾಗಿದೆ. ಈ ತಾಲ್ಲೂಕಿನ ಸಾಂಸ್ಕೃತಿಕ ಪಾತ್ರೆ. ಅದು ಅಕ್ಷಯ ಪಾತ್ರೆ ಅದನ್ನು ಅಗೆದಷ್ಟು ಆಳಕ್ಕೆ ಕಂಡಷ್ಟು ವಿಸ್ತಾರಕ್ಕೆ ಹುಡುಕಿದಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಪ್ರತಿ ಅಧ್ಯಯನಗಳನ್ನು ವಿಶ್ಲೇಷಿಸಿ ಬರೆಯುವಾಗ ಅದರ ಗುಣಕ್ಕೆ ತಕ್ಕದಾದ ಅಂಶಗಳನ್ನು ಕಟ್ಟಿಕೊಡಲಾಗಿದೆ. ಈ ಅಧ್ಯಯನಗಳಲ್ಲಿ ಶಾಸನದಲ್ಲಿ ಅಡಕವಾಗಿರುವ ಅಂಶಗಳನ್ನು ಎಳೆ ಎಳೆಯಾಗಿ ಬಿಚ್ಚಿಡಲಾಗಿದೆ. ಇದರಲ್ಲಿ ದೊರಕುವ ರಾಜಕೀಯ, ಆರ್ಥಿಕ, ಸಾಮಾಜಿಕ ಅಂಶಗಳನ್ನು ಮೈಗೂಡಿಸಿಕೊಂಡು ಬಿಡಿಸಿ ಅವುಗಳಲ್ಲಿನ ವೈವಿಧ್ಯತೆಯನ್ನು ತಿಳಿಸಲಾಗಿದೆ. ಶಾಸನಗಳ ಅಧ್ಯಯನವು ಸಾಗರದಷ್ಟು ವಿಸ್ತಾರವಾದುದು. ಅಧ್ಯಯನ ಮಾಡಿದಷ್ಟು ಮುಗಿಯುವುದಿಲ್ಲ. ಅಧ್ಯಯನದ ಉದ್ದೇಶ ಶಾಸನಗಳ ಹಿನ್ನೆಲೆಯಲ್ಲಿ ವೈವಿಧ್ಯತೆಯನ್ನು ತಿಳಿಸುವುದು ಹಾಗೂ ಅದರಲ್ಲಿ ವಿಚಾರಗಳನ್ನು ಸಂಕ್ಷಿಪ್ತವಾಗಿ ಹೊರಗೆಳೆಯುವುದು. ಜೊತೆಗೆ ವಿವಿಧ ಶೈಲಿಯಲ್ಲಿರುವ ದೇವಾಲಯಗಳನ್ನು ಅಧ್ಯಯನ ಮಾಡಿ ಅದರ ವಿಚಾರಗಳನ್ನು ತಿಳಿಸುವುದು. ಜೊತೆಗೆ ಅವುಗಳ ವಾಸ್ತುಶಿಲ್ಪ ಮೂರ್ತಿಶಿಲ್ಪಗಳ ಕುರಿತಾದ ಅಂಶಗಳನ್ನು ತೆರೆದಿಡುವುದಾಗಿದೆ.

ಅಧ್ಯಯನವು ಅರಸರ ಆಳ್ವಿಕೆಗೆ ಒಳಪಟ್ಟ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿ, ಬಂದಳಿಕೆ, ಬೇಗೂರು, ಹಿರೇಜಂಬೂರು, ಗಾಮ, ಈಸೂರು, ಸಾಲೂರು, ಮುಗುಳಗೆರೆ, ತಾಳಗುಂದ, ಗೊಗ್ಗ, ಮಯತ್ತಮನ ಮುಚ್ಚಡಿ, ಕಡೇನಂದಿಹಳ್ಳಿ, ಬಸವನಂದಿಹಳ್ಳಿ, ಅಡಗಂಟೆ, ಅಮಟೆಕೊಪ್ಪ, ಚಿಕ್ಕಪುರ, ಹಿತ್ತಲ, ನೆಲವಾಗಿಲು, ಕಿಟ್ಟದಹಳ್ಳಿ, ಅಗ್ರಹಾರ ಮುಚ್ಚಡಿ, ನೇರಲಗಿ, ಸಂಡ ಇತ್ಯಾದಿ ಕಡೆಗಳಲ್ಲಿ ದೊರೆಯುವ ದೇವಾಲಯಗಳ ಹಾಗೂ ಶಿಕಾರಿಪುರ ತಾಲ್ಲೂಕಿನ ಪ್ರತಿ ಹಳ್ಳಿಗಳಲ್ಲೂ ದೊರಕುವ ಶಾಸನಗಳಲ್ಲಿನ ವಿಚಾರಗಳನ್ನು ತೆಗೆದುಕೊಳ್ಳಲಾಗಿದೆ.

ಮೊದಲನೆಯ ಅಧ್ಯಯನದಲ್ಲಿ ಉದ್ದೇಶಕ್ಕೆ ಸಂಬಂಧಿಸಿದಂತೆ ಶಾಸನ ಮತ್ತು ದೇವಾಲಯಗಳಲ್ಲಿ ಅಡಗಿರುವ ವಿಶೇಷತೆಗಳನ್ನು ಸಮೀಕ್ಷೆ ಮಾಡಿ, ಅದರ ವಿಚಾರಗಳನ್ನು ಕಲೆ ಹಾಕಿ, ಮುಖ್ಯ ವಿಚಾರಗಳನ್ನು ತಿಳಿಸುವುದಾಗಿದೆ. ಜೊತೆಗೆ ತನ್ನದೆ ವ್ಯಾಪ್ತಿಯಲ್ಲಿ ಅಂದರೆ ಶಿಕಾರಿಪುರದಲ್ಲಿನ ಹಲವಾರು ಶಾಸನಾಧರಿಸಿದ ದೇವಾಲಯಗಳು,

ಸ್ವರೂಪದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ವಿಶ್ಲೇಷಣೆ ಹಾಗೂ ದೇವಾಲಯ ಗರ್ಭಗುಡಿ, ಅಂತರಾಳ, ನವರಂಗ, ಮುಖಮಂಟಪ ಕಂಬಗಳು, ಶಿಖರ, ಮೂರ್ತಿಶಿಲ್ಪಗಳು ಒಳಗೊಂಡ ವಿಚಾರಗಳನ್ನು ವಿಶ್ಲೇಷಿಸಿ ಬರೆಯಲಾಗಿದೆ. ಅಷ್ಟೇ ಅಲ್ಲ ಇಂದು ಶಿಕಾರಿಪುರದ ಅಧ್ಯಯನಕ್ಕೆ ಪೂರ್ವ ಪೀಠಿಕೆಯನ್ನು ನೀಡುವಲ್ಲಿ ಅಧ್ಯಯನ ವಸ್ತು ವಿಷಯವಾಗಿ ಆಯ್ಕೆ ಮಾಡಿಕೊಂಡಿದೆ ಜೊತೆಗೆ ಇಲ್ಲಿರುವ ಹಲವಾರು ವಿಚಾರಗಳನ್ನು ಶ್ರೀಸಾಮಾನ್ಯರಿಗೂ ತಿಳಿಸುವುದರಿಂದ ಇದರ ಅಧ್ಯಯನ ಮಹತ್ವದಿಂದ ಕೂಡಿದೆ. ಈವರೆಗೆ ಅಧ್ಯಯನಗಳನ್ನು ಪರಿಗಣಿಸಿ ಅವರ ಹಾದಿಯಲ್ಲಿ ಸಾಂಸ್ಕೃತಿಕ ವಿವರಗಳನ್ನು ನೀಡಲಾಗಿದೆ. ಶಾಸನ ಉಲ್ಲೇಖಿತ ವಿಷಯಾನುಕ್ರಮಗಳಲ್ಲಿ ನೈಜತೆಯ ವಿಷಯಗಳನ್ನು ತೆರೆದಿಡುವುದುದರಲ್ಲಿ ಈ ಅಧ್ಯಯನ ಮುಂದಾಗಿದೆ.

ನಂತರದಲ್ಲಿ ಶಿಕಾರಿಪುರ ಕುರಿತಂತೆ ಭೌಗೋಳಿಕ ಲಕ್ಷಣಗಳನ್ನು ಹಾಗೆ ಶಿಕಾರಿಪುರಕ್ಕೆ ಇರುವ ಹೆಸರು ಹೇಗೆ ಬಂತು, ಹಿಂದಿನ ಹೆಸರು ಏನು ಎಂಬುದನ್ನು ವಿಶ್ಲೇಷಣೆ ಮಾಡಲಾಗಿದೆ. ಹಾಗೆಯೇ ಇಲ್ಲಿ ಹಲವಾರು ರಾಜವಂಶಸ್ಥರ ಆಳ್ವಿಕೆಗೆ ಒಳಪಟ್ಟಿರುವ ಅಂಶಗಳಲ್ಲಿ ಶಾತವಾಹನ, ಕದಂಬ, ಕಲ್ಯಾಣ ಚಾಳುಕ್ಯರು, ಕಲಚೂರಿಗಳು, ವಿಜಯನಗರ ಇತ್ಯಾದಿಗಳು ತಿಳಿದು ಬರುತ್ತವೆ. ಹಾಗೆ ಇವರು ನೀಡಿದ ದೇವಾಲಯಗಳ ಕೊಡುಗೆ. ಶಾಸನಗಳ ಕೊಡುಗೆಗಳಿಂದ ಇದರ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಇದರ ಜೊತೆಗೆ ಶಿಕಾರಿಪುರ ತಾಲ್ಲೂಕಿನೊಂದಿಗೆ ಹೊಂದಿಕೊಂಡಂತೆ ಪರಿಸರ, ಬೆಟ್ಟ, ನೆಲ – ಜನ ಇತ್ಯಾದಿ ಅಂಶಗಳನ್ನು ತಿಳಿಸಲಾಗಿದೆ.

ಶಾಸನಗಳ ಅಧ್ಯಯನವನ್ನು ಸೀಮಿತ ಮಾಡಿ ರಾಜಕೀಯ ವಿಶ್ವೇಷಣೆ ಮಾಡುತ್ತಾ, ಅವರ ರಾಜಮನೆತನ, ಆಡಳಿತದ ವ್ಯವಸ್ಥೆ, ಅಧಿಕಾರಿಗಳ ವರ್ಗ, ದಂಡನಾಯಕರು, ಪೆರ್ಗಡೆಗಳು, ಪ್ರಭುಗಳು ಹಾಗೂ ಅವರವರ ಕಾರ್ಯಗಳನ್ನು, ಜೊತೆಗೆ ಅವರ ಕಾಲದಲ್ಲಿ ಯುದ್ಧಗಳಿಗೆ ಯಾವ ರೀತಿ ಮಹತ್ವ ನೀಡಿದ್ದಾರೆ, ಅವರ ಭೂ ವಿಸ್ತೀರ್ಣ ಮಾಡುವಲ್ಲಿ ಯಾವ ತಂತ್ರಗಾರಿಕೆ ಹೊಂದಿದ್ದರು ಹಾಗೂ ಅವರ ಸೈನಿಕ ಸಾಧನೆಗಳನ್ನು ತಿಳಿಸಲಾಗಿದೆ. ನಂತರದಲ್ಲಿ ಆರ್ಥಿಕ ವ್ಯವಸ್ಥೆಯನ್ನು ತಿಳಿಸುವಲ್ಲಿ ಅವರ ಮುಖ್ಯ ಕಸುಬು ಕೃಷಿ ಪದ್ಧತಿ, ಬೆಳೆಗಳು ನೀರಾವರಿ ವ್ಯವಸ್ಥೆ, ಕೆರೆಗಳ ಬಗ್ಗೆ ಹಾಗೂ ವ್ಯಾಪಾರ ವಾಣಿಜ್ಯಕ್ಕೆ ಕುರಿತಂತೆ ಅಧ್ಯಯನದಲ್ಲಿ ತಿಳಿಸಲಾಗಿದೆ. ಜೊತೆಗೆ ವಸ್ತುಗಳಿಗೆ ತೆರಿಗೆ, ಮನುಷ್ಯರಿಗೆ ತೆರಿಗೆ, ವಿನಿಮಯ ಕೈಗಾರಿಕೆ, ಗುಡಿ ಕೈಗಾರಿಕೆ ಬಗ್ಗೆ ತಿಳಿಸಲಾಗಿದೆ.

ಸಾಮಾಜಿಕ ಸ್ಥಿತಿಯನ್ನು ಶಾಸನಗಳಲ್ಲಿ ಉಲ್ಲೇಖಿತ ವಿಷಯಗಳ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆ. ಶಿಕಾರಿಪುರದಲ್ಲಿ ವಿದ್ಯಾಕೇಂದ್ರಗಳಾಗಿ ದೇವಾಲಯ, ಘಟಿಕಾಸ್ಥಾನ, ಮಠಗಳನ್ನು ಕಾಣಬಹುದು. ಇವುಗಳಲ್ಲಿ ಗುರು–ಶಿಷ್ಯರ ಸಂಬಂಧಗಳನ್ನು ತಿಳಿಯಬಹುದು. ಇಲ್ಲಿಯ ಶಾಸನಗಳ ಮೂಲಕ ಹಲವಾರು ರಂಗಗಳ ಕೊಡುಗೆಗಳನ್ನು ವಿಶ್ಲೇಷಿಸಲಾಗಿದೆ.

ಶಾಸನಗಳು ವಿವಿಧ ರೂಪಗಳಲ್ಲಿ ದೊರೆತರೂ, ಅವು ಹಾಳಾಗಿರುವುದು ಕಣ್ಣಿಗೆ ಕಾಣುತ್ತವೆ. ಆದರೆ ಕರ್ನಾಟಕ ಎಫಿಗ್ರಾಫಿಗಳಲ್ಲಿನ ಶಾಸನಗಳಲ್ಲಿ ಕಂಡುಬರುವ ವಿಷಯಗಳನ್ನು ವಿಶ್ಲೇಷಿಸಿದಾಗ ಸುಮಾರು ೪೦೦ ರಷ್ಟು ಶಾಸನಗಳು ಸಿಗುತ್ತವೆ. ಇದಲ್ಲದೆ ಉಳಿದಂತೆ ಶಾಸನ ಮೂರ್ತಿಗಳಾಗಿರುವ ಮಾಸ್ತಿಕಲ್ಲು, ವೀರಗಲ್ಲು, ತುರುಗೊಳ್, ಪ್ರಾಣಿಗಳೊಂದಿಗೆ ಕಳಗ, ಸಿಡಿತಲೆ, ಪೆಣ್ಬುಯಲ್, ವೇಳಾವಳಿಗಳನ್ನು ಕೂಡ ಗುರುತಿಸಬಹುದು.

ದೇವಾಲಯಗಳಿಗೆ ಸಂಬಂಧಿಸಿದಂತೆ, ದಾಸೋಜ, ಚಾವಣ ಇತ್ಯಾದಿಯವರ ಕೊಡುಗೆಗಳನ್ನು ಶಿಲ್ಪಗಳಲ್ಲಿ ಗುರುತಿಸಬಹುದು, ಶಿಕಾರಿಪುರ ತಾಲ್ಲೂಕಿನ ಬಂದಳಿಕೆ ಬಳ್ಳಿಗಾವಿ, ಈಸೂರು, ಬೇಗೂರು, ಮುಗಳಗೆರೆಗಳಲ್ಲಿನ, ದೇವಾಲಯಗಳು ಸೂಕ್ಷ್ಮ ಕೆತ್ತನೆಯಿಂದ ಕೂಡಿದ್ದು, ಕುಸುರಿತನ ಎದ್ದು ಕಾಣುತ್ತದೆ. ಬಳ್ಳಿಗಾವಿ, ಬಂದಳಿಕೆಗಳಲ್ಲಿ ದೇವಾಲಯಗಳು ರಕ್ಷಣೆಗೆ ಒಳಗಾಗಿದ್ದರೆ. ಈಸೂರು, ಮುಗಳಗೆರೆ, ಬೇಗೂರುಗಳಲ್ಲಿ ಜನರ ಮೂಢನಂಬಿಕೆಗಳಿಂದ ಅವಸಾನದ ಹಂತಕ್ಕೆ ಹೋಗುತ್ತಿವೆ.

ಶಾಸನಗಳು ಶೈವರಿಗೆ ಸಂಬಂಧಿಸಿದಂತೆ ಹೆಚ್ಚಾಗಿದ್ದು, ಜೈನ, ಬೌದ್ಧರಿಗೆ ಸಂಬಂಧಿಸಿದಂತೆ ಕಡಿಮೆ ಇವೆ. ಆದರೆ ವೈಷ್ಣವರಿಗೆ ಸಂಬಂಧಿಸಿದಂತೆ ತುಂಬಾ ವಿರಳ ಅದೇ ರೀತಿ ಶಾಸನಗಳಲ್ಲಿ ಉಲ್ಲೇಖಿತ ದೇವಾಲಯಗಳೆಲ್ಲವೂ ಕೂಡ ಇಂದಿಗೆ ಸಿಗುವುದು ಕಷ್ಟ. ಇದರಂತೆ, ದಾನ\ದತ್ತಿಯ ವಿಷಯಗಳನ್ನು ತಿಳಿಯಬಹುದು. ಶಿಕಾರಿಪುರದಲ್ಲಿ ಪ್ರಮುಖವಾಗಿ ದೇವಾಲಯಗಳು ವರ್ತಕರ, ವ್ಯಾಪಾರಿಗಳ ಕೊಡುಗೆಗಳಾಗಿವೆ. ಅದೇ ರೀತಿ ಅಗ್ನಿಷ್ಟಿಗೆ, ಸತ್ರಗಳು ಸಾಮಾಜಿಕ ಕಾರ್ಯ ನಿರ್ವಹಿಸಿದ್ದು, ಶಾಸನ ಮೂಲಕ ತಿಳಿಯಬಹುದು. ಇಂತಹ ದೇವಾಲಯಗಳು, ಮಠಗಳು, ಶಾಸನಗಳು ಕಾಲ ಕಳೆದಂತೆ ವಿವಿಧ ಸಂಸ್ಕೃತಿಗಳ ಹಿಡಿತಕ್ಕೆ ಸಿಕ್ಕು, ಅವರ ಸಂಪ್ರದಾಯಗಳು ಅವುಗಳಲ್ಲಿ ಮೈಗೂಡಿಸಿಕೊಂಡು ಜೀರ್ಣೋದ್ಧಾರವಾಗಿದ್ದು, ಬದಲಾಗುತ್ತಾ, ಕೆಲವು ಅವಸಾನಕ್ಕೆ ಹೋಗಿರುವುದು ಕಾಣಬಹುದು. ಇಂತಹ ಸ್ಥಿತಿಗಳು ಹಿಂದಿನಿಂದ ಇವತ್ತಿನ ಕಾಲದವರೆಗೂ ನಡೆದುಕೊಂಡು ಬಂದಿದೆ. ಉದಾಹರಣೆಗೆ ಬಳ್ಳಿಗಾವಿಯ ಪಚ್ಚಲಿಂಗೇಶ್ವರ ಮೂರ್ತಿಯನ್ನು ಕಳ್ಳತನಕ್ಕೆ ಸಿಲುಕಿದ್ದನ್ನು ಕಾಣಬಹುದು.

ಸಾಮಾಜಿಕ ಮೌಲ್ಯದ ವೀರರ ಹಲವಾರು ಮುಖಗಳಿಗೆ ಹಾಗೂ ಅತ್ಮಬಲಿಯ ವೇಳಾವಳಿ, ಸಿಡಿತಲೆ, ಮಾಸ್ತಿಯರ ಬಗ್ಗೆ ಶಿಕಾರಿಪುರ ತಾಲ್ಲೂಕಿನ ನಿದರ್ಶನಗಳನ್ನು ಒದಗಿಸಲಾಗಿದೆ. ಈ ನಾಡಿನಲ್ಲಿ ಕಂಡುಬರುವ ದಾನ ಶಾಸನಗಳಲ್ಲಿ ವಿಶಿಷ್ಟವೆನಿಸಿದ ಗೋಸಾಸನಗಳು ಬಂದಳಿಕೆ, ಗಾಮ, ಈಸೂರು, ಸಾಲೂರುಗಳಲ್ಲಿ ಕಂಡುಬರುತ್ತವೆ. ಇವುಗಳಿಗೆ ರಕ್ಷಣೆ ನೀಡಬೇಕಾಗಿದೆ.

ಈಗಾಗಲೇ ಹೇಳಿರುವಂತೆ, ಈ ಅಧ್ಯಯನ ಅಂಗವಾಗಿ ಸಂಬಂಧಪಟ್ಟ ಸುಮಾರು ೩೫೦ ಕ್ಕೂ ಹೆಚ್ಚು ಶಾಸನಗಳನ್ನು ಅಧ್ಯಯನ ಮಾಡಲಾಗಿದೆ. ಇವುಗಳಲ್ಲಿ ದೊರಕುವ ಒಟ್ಟಾರೆ ವಿಷಯಗಳನ್ನು ವಿಶ್ಲೇಷಣೆ ಮಾಡಿ ಅಧ್ಯಯನದಲ್ಲಿ ಅಳವಡಿಸಲಾಗಿದೆ.

"ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ದೇವಾಲಯಗಳು-ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಪ್ರಬಂಧ ಶಿಕಾರಿಪುರಕ್ಕೆ ಮಾತ್ರ ಸೀಮಿತವಾಗಿದ್ದು ಅದರಲ್ಲಿ ಶಾಸನಗಳ ವೈವಿಧ್ಯತೆ, ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ ಅಂಶಗಳನ್ನು ವಿಶ್ಲೇಷಿಸಿದೆ ಹಾಗೆ ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಕುರಿತು ಅಧ್ಯಯನ, ಮಾಡಲಾಗಿದೆ.

ಅನುಬಂಧಗಳು

೧) ದೇವಾಲಯಗಳ ಪಟ್ಟಿ
೨) ಪದಕೋಶ
೩) ಗ್ರಂಥ ಋಣ
೪) ಸಂಕ್ಷೇಪಗಳು
೫) ಪ್ರಮುಖ ದೇವಾಲಯಗಳ ತಳ ವಿನ್ಯಾಸಗಳು
೬) ಛಾಯಾ ಚಿತ್ರಗಳು

ದೇವಾಲಯಗಳ ಪಟ್ಟಿ

೧) ತ್ರಿಪುರುಷ ದೇವಾಲಯ- ಬಂದಳಿಕೆ
೨) ಪ್ರಭುಲಿಂಗೇಶ್ವರ- ಬಳ್ಳಿಗಾವಿ
೩) ಸೋಮೇಶ್ವರ -ಬಂದಳಿಕೆ
೪) ಶಾಂತಿನಾಥ ಬಸದಿ-ಬಂದಳಿಕೆ
೫) ಕೇದಾರೇಶ್ವರ- ಬಳ್ಳಿಗಾವಿ
೬) ಪಚ್ಚಲಿಂಗೇಶ್ವರ-ಬಳ್ಳಿಗಾವಿ
೭) ಮಲ್ಲಿಕಾರ್ಜುನ-ಬೇಗೂರು
೮) ಮಲ್ಲೇಶ್ವರ-ಮುಗಳಗೆರೆ
೯) ಬಸವೇಶ್ವರ -ನೆಲವಾಗಿಲು
೧೦) ರಾಮೇಶ್ವರ- ಮಾಯತ್ತಮ್ಮನ ಮುಚ್ಚಿಡಿ
೧೧) ಉಜ್ಜೇನೇಶ್ವರ-ಉಜ್ಜೇನೀಪುರ
೧೨) ಬಸವೇಶ್ವರ-ನೇರಲಗಿ
೧೩) ಮಲ್ಲಿಕಾರ್ಜುನ- ಅಟಗಂಟಿ
೧೪) ನಂದೀಶ್ವರ-ನಂದಿಹಳ್ಳಿ
೧೫) ರಂಗನಾಥ-ದಾಸನಕೊಪ್ಪ
೧೬) ಚನ್ನಬಸವಣ್ಣ-ಬಸವನಂದಿಹಳ್ಳಿ
೧೭) ಕಂಭಾಳೇಶ್ವರ-ಭಕ್ತನಕೊಪ್ಪ
೧೮) ಹಂಪೇಶ್ವರ- ಕಡೇನಂದಿಹಳ್ಳಿ
೧೯) ಸಿದ್ದರಾಮೇಶ್ವರ-ಕರ್ನಲಿ
೨೦) ಈರಣ್ಣ-ಈಸೂರು
೨೧) ಹೋರಿಹೋಳೆ ಬಸವೇಶ್ವರ-ಚಿಕ್ಕಾಪುರ
೨೨) ಕಾಳಿಕದೇವಿ-ಬಳ್ಳಿಗಾವಿ
೨೩) ತೋಟದ ವೀರಭದ್ರ-ಬಳ್ಳಿಗಾವಿ
೨೪) ಕಲ್ಲೇಶ್ವರ-ಬಳ್ಳಿಗಾವಿ

೨೫)   ಶಿವಲಿಂಗೇಶ್ವರ–ಬಳ್ಳಿಗಾವಿ

೨೬)   ನೀಲಕಂಠೇಶ್ವರ–ಬಳ್ಳಿಗಾವಿ

೨೭)   ಪಂಚಲಿಂಗೇಶ್ವರ–ಬಳ್ಳಿಗಾವಿ

೨೮)   ಅನಿಮಿಷರಣ್ಯ–ಮಾಳಗೊಂಡನ ಕೊಪ್ಪ

೨೯)   ಮಲ್ಲಿಕಾರ್ಜುನ–ತೊಗರ್ಸಿ

೩೦)   ಕೋಟೆರಾಮೇಶ್ವರ–ಈಸೂರು

೩೧)   ಜಿನಾಲಯ–ಅಮಟೆಕೊಪ್ಪ

೩೨)   ಕಲ್ಲೇಶ್ವರ–ಅಗ್ರಹಾರ ಮುಚ್ಚಡಿ

೩೩)   ಸೋಮೇಶ್ವರ–ಮುಗಳಿಗೆರೆ

೩೪)   ಬಸದಿ–ಚಿಕ್ಕಮಾಗಡಿ

೩೫)   ಬಸದಿ–ಗೊಗ್ಗ

೩೬)   ಹುಚ್ಚರಾಯ ಸ್ವಾಮಿ–ಶಿಕಾರಿಪುರ

೩೭)   ಪಾರ್ವತಿ–ಸುರುಗಿಹಳ್ಳಿ

ಪದಕೋಶ

೧) ಅಂತರಾಳ : ಗೂಢಮಂಟಪ ಮತ್ತು ಗರ್ಭಗೃಹದ ನಡುವೆ ಇರುವ ಕೋಣೆ

೨) ಅಧಿಷ್ಠಾನ : ತಳಹದಿ, ನೆಲಗಟ್ಟು, ದೇವಾಲಯದ ಕೆಳಭಾಗ

೩) ಅಮ್ಮನವರ ಗುಡಿ : ಪುರುಷ ದೇಗುಲದ ಎಡಬದಿಯ ಸಣ್ಣ ಸ್ತ್ರೀ ದೇಗುಲ

೪) ಆಮಲಕ : ನಾಗರಶೈಲಿಯ ಶಿಖರದ ಮೇಲ್ಭಾಗದಲ್ಲಿರುವ ನೆಲ್ಲಿಕಾಯಿ ಆಕಾರದ ರಚನೆ

೫) ಅಷ್ಟ ದಿಕ್ಪಾಲಕರು : ಎಂಟು ದಿಕ್ಕುಗಳ ದೇವತೆಗಳು ಇಂದ್ರ (ಪೂರ್ವ), ವರುಣ(ಪಶ್ಚಿಮ), ಕುಬೇರ(ಉತ್ತರ), ಯಮ(ದಕ್ಷಿಣ), ವಾಯು(ವಾಯುವ್ಯ), ಅಗ್ನಿ(ಆಗ್ನೇಯ), ನಿಋತಿ(ನೈಋತ್ಯ), ಈಶಾನ (ಈಶಾನ್ಯ)

೬) ಉತ್ತರಿಯ : ಮೇಲು ಹೊದಿಕೆ. ಪಂಚೆ

೭) ಉದ್ಭವಲಿಂಗ : ಒಡಮೂಡಿದ ಲಿಂಗ

೮) ಉಪಾನ : ದೇಗುಲದ ತಳಭಾಗ

೯) ಏಕಕೂಟ : ಒಂದು ಗರ್ಭಗೃಹವಿರುವ ದೇವಾಲಯ

೧೦) ಕಕ್ಷಾಸನ : ಕಟಾಂಜನ, ಕಟಕಟೆ, ಕುಳಿತುಕೊಳ್ಳಲು ಅನುವಾಗುವ ಕಟ್ಟೆ

೧೧) ಕಪೋತ : ದೇವಾಲಯದ ಮೇಲ್ಭಾವಣಿಯ ನೀರು ಗೋಡೆಗೆ ತಾಗದಿರಲು ಮಾಡಿದ ಮುಂಚಾಚಿದ ರಚನೆ.

೧೨) ಕರಂಡಮುಕುಟ : ಭರಣಿಯಾಕಾರದ ಕಿರೀಟ

೧೩) ಕಲ್ಯಾಣ ಮಂಟಪ : ಶುಭಕಾರ್ಯಗಳಿಗಾಗಿ ಕಟ್ಟಲಾದ ಮಂಟಪ

೧೪) ಕಳಸ : ದೇವಾಲಯದ ಗೋಪುರಕ್ಕೆ ಹಾಕುವ ಕಂಚು ಅಥವಾ ಹಿತ್ತಾಳೆಯ ವಸ್ತು

೧೫) ಕೀರ್ತಿಮುಖ : ಶಿಖರದಲ್ಲಿ ಅಳವಡಿಸಲಾದ ಸಿಂಹದ ಮುಖ

೧೬) ಕುಂಡಲ : ಕಿವಿಯ ಆಭರಣ, ಕಿವಿಯೋಲೆ

೧೭) ಕುಂಭ : ಗಡಿಗೆ, ಕುಂಭದ ಆಕಾರದ ಕೆಲಸ

೧೮) **ಕುಮುದ** : ಅಧಿಷ್ಠಾನದ ಮಡಿಕೆಗಳಲ್ಲಿ (ಕುಂಭ) ಮತ್ತು ಕಪೋತದ ನಡುವಿನ ಮಡಿಕೆ

೧೯) **ಕೂಟ** : ಚೌಕ ವಿನ್ಯಾಸದ ನಾಲ್ಕೂ ಕಡೆ ಇಳಿಜಾರಾದ ಚಾವಣಿಯುಳ್ಳ ಗುಡಿಸಲಿನಂತೆ ಕಾಣುವ ದೇಗುಲ ಮಾದರಿ

೨೦) **ಕೆಯೂರ** : ತೋಳಬಂದಿ

೨೧) **ಕೈಪಿಡಿಗೋಡೆ** : ಮೊಗಸಾಲೆ ಅಥವಾ ಮಾಳಿಗೆಯ ಸುತ್ತಲೂ ಕಟ್ಟಿರುವ ಅಲಂಕೃತ ತುಂಡುಗೋಡೆ

೨೨) **ಕೋಷ್ಠಕ** : ಶಿಲ್ಪಗಳನ್ನಿಡಲು ಗೋಡೆಯಲ್ಲಿ ರಚಿಸಿದ ಭಾಗ

೨೩) **ಗರ್ಭಗೃಹ** : ಮೂಲವಿಗ್ರಹವನ್ನು ಪ್ರತಿಷ್ಠೆ ಮಾಡಿರುವ ಭಾಗ

೨೪) **ಗ್ರೀವ** : ಶಿಖರದ ಕುತ್ತಿಗೆಯಂತಿರುವ ಭಾಗ

೨೫) **ಗೋಪುರ** : ಪ್ರವೇಶದ್ವಾರದ ಮೇಲೆ ಕಟ್ಟಲಾದ ಅಂತಸ್ತುಗಳುಳ್ಳ ರಚನೆ

೨೬) **ಚತುರ್ಭೂಜ** : ನಾಲ್ಕು ತಲೆಗಳ ರಚನೆಯಿರುವ ಶಿಖರ

೨೭) **ಚತುಷ್ಕೂಟ** : ನಾಲ್ಕು ಗರ್ಭಗೃಹಗಳನ್ನು ಹೊಂದಿದ ದೇವಾಲಯ

೨೮) **ಚಾಚುಪೀಠ** : ಕಂಬದ ಮೇಲ್ಭಾಗ ಮುಂಚಾಚಿದ ರಚನೆ

೨೯) **ಜಗತಿ** : ವೇದಿಕೆಯ ಕಟ್ಟೆ, ತಳಪಾಯ

೩೦) **ಜಗಲಿ** : ವೇದಿಕೆಯ ಕಟ್ಟೆ

೩೧) **ಜಟಾಮುಕುಟ** : ಜಟೆಗಳ ಕಟ್ಟಿನಂತೆ ಕಾಣುವ ಕಿರೀಟ, ಜಡೆಮುಡಿ

೩೨) **ತ್ರಿಕೂಟ** : ಮೂರು ಗರ್ಭಗೃಹಗಳನ್ನು ಹೊಂದಿದ ದೇವಾಲಯ

೩೩) **ದ್ರಾವಿಡಶೈಲಿ** : ದಕ್ಷಿಣ ಭಾರತೀಯ ದೇವಾಲಯಗಳ ವಾಸ್ತುಶಿಲ್ಪ ರಚನೆ

೩೪) **ದ್ವಾರಪಾಲಕ** : ದೇವಾಲಯದ ದ್ವಾರದ ಎರಡೂ ಮಗ್ಗುಲಲ್ಲಿರುವ ಶಿಲ್ಪ

೩೫) **ದ್ವಾರಬಂಧ** : ಬಾಗಿಲ ಚೌಕಟ್ಟು, ಬಾಗಿಲಿನ ನಿಲುವು

೩೬) **ದ್ವಿಕೂಟ** : ಎರಡು ಗರ್ಭಗೃಹಗಳನ್ನು ಹೊಂದಿದ ದೇವಾಲಯ

೩೭) **ದೀಪಸ್ತಂಭ** : ವಿಶೇಷ ಸಂದರ್ಭದಲ್ಲಿ ದೀಪ ಹಚ್ಚಲು ನಿಲ್ಲಿಸಿದ ಕಂಬ

೩೮) **ದೇವಕೋಷ್ಠಕ** : ದೇವತಾ ವಿಗ್ರಹವನ್ನಿರಿಸಲು ಗೋಡೆಯಲ್ಲಿ ಮಾಡಿರುವ ಗೂಡು ಇದಕ್ಕೆ ದೇಗುಲದಂತೆ ಶಿಖರ ಮುಂತಾದ ಅಲಂಕಾರವಿರುತ್ತದೆ.

೩೯) **ನವರಂಗ** : ಗರ್ಭಗುಡಿಯ ಎದುರಿನ ಸುಕನಾಸಿ ಅಥವಾ ಅಂತರಾಳದ ಮುಂಭಾಗದಲ್ಲಿ ನೃತ್ಯಗೀತಾದಿ ರಂಗಭೋಗಕ್ಕಾಗಿ ಕಟ್ಟುವ ಒಂಭತ್ತು ಅಂಕಣದ ಮಂಟಪ

೪೦) **ನಾಗರಶೈಲಿ** : ಉತ್ತರ ಭಾರತದ ದೇವಾಲಯಗಳ ವಾಸ್ತುಶಿಲ್ಪ ಮಾದರಿ

೪೧) **ನಾಗಶಾಖಾ** : ನಾಗನಾಗಿಣಿ ಜೋಡಿಗಳ ಸಾಲಿನಿಂದಾದ ದ್ವಾರಬಂಧದ ಶಾಖ

೪೨) **ನಿರಂಧಾರ** : ಗರ್ಭಗೃಹದ ಸುತ್ತ ಒಳಗಡೆ ಪ್ರದಕ್ಷಿಣೆ ಪಥವಿಲ್ಲದ ಪ್ರಸಾರ

೪೩) **ಪದ್ಮ** : ಅಧಿಷ್ಠಾನದಲ್ಲಿ ಸಾಮಾನ್ಯವಾಗಿ ಖುರಕದ ಮೇಲೆ ಬರುವ ಮಗುಚಿದ ಪದ್ಮದ ಆಕಾರದ ಮಡಿಕೆ

೪೪) **ಪದ್ಮನಾಭ** : ಹೊಕ್ಕಳು ಭಾಗದಲ್ಲಿ ಪದ್ಮ ಪದಕಗಳಿಂದ ಅಲಂಕೃತವಾಗಿರುವ ವಿತಾನದ ಪ್ರಕಾರ.

೪೫) **ಪದ್ಮಶಾಖಾ** : ಪದ್ಮದ ಪಕಳೆಗಳ ಸಾಲಿನಿಂದಾದ ದ್ವಾರಬಂಧದ ಶಾಖೆ

೪೬) **ಪಂಚಕೂಟ** : ಐದು ಗರ್ಭಗೃಹಗಳನ್ನು ಹೊಂದಿದ ದೇವಾಲಯ

೪೭) **ಪ್ರದಕ್ಷಿಣಾಪಥ** : ಭಕ್ತರು ಪ್ರದಕ್ಷಿಣೆ ಹಾಕಲೆಂದು ಗರ್ಭಗೃಹದ ಸುತ್ತಲೂ ಬಿಟ್ಟಿರುವ ಸ್ಥಳ

೪೮) **ಪ್ರಭಾವಳಿ** : ವಿಗ್ರಹಗಳ ಹಿಂಬದಿಯಲ್ಲಿ ಅಲಂಕರಣೆಯಿಂದ ಕೂಡಿದ ಕಮಾನಿನಾಕಾರದ ರಚನೆ ಪಾದಗಟ್ಟೆ ಅಥವಾ ಉತ್ಸವ ಮಂಟಪ– ರಥೋತ್ಸವ, ಉತ್ಸವಗಳ ದೇವಾಲಯದಿಂದ ಹೊರಟು ತಲುಪಬೇಕಾದ ನಿರ್ದಿಷ್ಟ ಸ್ಥಳ

೪೯) **ಪ್ರಾಕರಗೋಡೆ** : ದೇವಾಲಯದ ಸುತ್ತ ಕಟ್ಟಲಾದ ರಕ್ಷಣಾತ್ಮಕ ಗೋಡೆ

೫೦) **ಬಲಿಪೀಠ** : ಬಲಿ ಕೊಡುವ ಸ್ಥಳ

೫೧) **ಬಾಗಿಲುವಾಡ** : ಬಾಗಿಲಿನ ಚೌಕಟ್ಟು ಕೊಡುವ ಸ್ಥಳ

೫೨) **ಭೋದಿಗೆ** : ಕಂಬದ ಮೇಲೆ ತೊಲೆಯನ್ನು ಕೂಡಿಸಲು ಸಿದ್ಧಪಡಿಸಿದ ಭಾಗ

೫೩) **ಭುವನೇಶ್ವರಿ** : ಮೇಲ್ಚಾವಣಿಯ ಮಧ್ಯೆ ಒಳಸರಿದ ಭಾಗ

೫೪) **ಮಕರತೋರಣ** : ಬಾಗಿಲುವಾಡ ಅಥವಾ ಪ್ರವೇಶದಲ್ಲಿ ಮೊಸಳೆ, ಆನೆ,ಮೀನು ಶಿಲ್ಪ ಮೊದಲಾದ ಅಲಂಕರಣೆಗಳಿಂದ ಕೂಡಿದ ಆಕೃತಿ

೫೫) **ಮಚಬಂಧ** : ಮಂಚದಂತೆ ಕಾಣುವ ಅಧಿಷ್ಠಾನ ಪ್ರಕಾರ

೫೬) **ಮಂಟಪ** : ಸಾಮಾನ್ಯವಾಗಿ ಕಂಬಗಳಿರುವ ಸಭಾಗೃಹ

೫೭) **ಮಿಥುನ** : ಶುಭಸಂಕೇತವೆಂದು ಭಾವಿಸಲಾಗುವ ಗಂಡು ಹೆಣ್ಣು ಜೋಡಿ

೫೮) **ಮಹಾದ್ವಾರ** : ಹೆಬ್ಬಾಗಿಲು, ಮುಖ್ಯ ಪ್ರವೇಶದ್ವಾರ

೫೯) **ಮಹಾಮಂಟಪ** : ನವರಂಗ ಅಥವಾ ಸಭಾಮಂಟಪದ ಮುಂಭಾಗದಲ್ಲಿರುವ ಮಂಟಪ

೬೦) **ಮುಖಮಂಟಪ** : ದೇವಾಲಯದ ಪ್ರವೇಶ ಮಂಟಪ

೬೧) **ರಂಗಮಂಟಪ** : ಸಂಗೀತ, ನೃತ್ಯ, ನಾಟಕ ಮುಂತಾದವುಗಳ ಪ್ರದರ್ಶನ ಸ್ಥಳ

೬೨) **ರತ್ನಶಾಖಾ** : ರತ್ನಗಳ ಸಾಲಿನ ಅಲಂಕಾರವುಳ್ಳ ದ್ವಾರಬಂಧದ ಶಾಖೆ

೬೩) **ಲತಾ** : ಬಳ್ಳಿ

೬೪) **ಲಲಾಟಬಿಂಬ** : ಬಾಗಿಲ ಚೌಕಟ್ಟಿನ ಮಧ್ಯಭಾಗ

೬೫) **ವಿತಾನ** : ಛತ್ತು

೬೬) **ವಿಮಾನ** : ಗರ್ಭಗೃಹದ ಮೇಲಿನ ಶಿಖರ

೬೭) **ವೇಸರ ಶೈಲಿ** : ನಾಗರ ಮತ್ತು ದ್ರಾವಿಡ ವಾಸ್ತುಶೈಲಿಯ ಸಮ್ಮಿಳನ

೬೮) **ಶಿಖರ** : ದೇವಾಲಯದ ಗರ್ಭಗೃಹದ ಮೇಲಿನ ರಚನೆ

೬೯) **ಸಪ್ತಮಾತೃಕೆಯರು** : ಏಳು ದೇವತೆಗಳನ್ನೊಳಗೊಂಡ ಫಲಕ

೭೦) **ಸಭಾಮಂಟಪ** : ಅಂತರಾಳ ಮುಂಬದಿಯ ಒಂಭತ್ತು ಅಥವಾ ಅದಕ್ಕಿಂತ ಹೆಚ್ಚು ಅಂಕಣಗಳಿಂದ ಕೂಡಿದ ಮಂಟಪ

೭೧) **ಸಮಭಂಗಿ** : ಸಮಕೋನದಲ್ಲಿ ನಿಂತ ಭಂಗಿ

೭೨) **ಸುಕನಾಸಿ** : ಗಿಣಿಯ ಕೊಕ್ಕಿನಂತೆ ಶಿಖರದ ಮುಂಭಾಗದಲ್ಲಿ ಮುಂಚಾಚಿರುವ ರಚನೆ

೭೩) **ಸೋಪಾನ** : ಮೆಟ್ಟಿಲು, ಪಾವಟಿಗೆ

ಆಕರ ಗ್ರಂಥ ಸೂಚಿಗಳು

ಶಾಸನ ಸಂಪುಟಗಳು ಮತ್ತು ವರದಿಗಳು

Ephiraphia india –Vol-XIX,XXXII.

Ephiraphia camatica Vol,s. VII,VIII (shivamoga) (old editions).

Annual reports of india Ephiraphy .

Indian antiquary.

Mysore archeological reports .

ಶಾಸನ ಸಂಪದ.

ಶಾಸನ ಸಾಹಿತ್ಯ ಪರಿಚಯ.

ವಿಶ್ವಕೋಶಗಳು, ಗೆಜೆಟಿಯರ್‌ಗಳು, ನಿಘಂಟುಗಳು

Karnataka state gezetter, suryanth,v,kamath-1982

Shivamoga gezetter

ಕನ್ನಡ ವಿಶ್ವಕೋಶ ಸಂಪುಟಗಳು, ಮೈ.ವಿ.ವಿ, ಮೈಸೂರು.

ಸಂಕ್ಷಿಪ್ತ ಕನ್ನಡ ನಿಘಂಟು(ಪರಿಷ್ಕೃತ), ಕ.ಸಾ.ಪ, ಬೆಂಗಳೂರು

ಕನ್ನಡ ಕೃತಿಗಳು

ಅಪರ್ಣ.ಕೂ.ಸು. ೧೯೯೧, ದೇವಾಲಯ ವಾಸ್ತು ಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕರೀಗೌಡ ಬೀಚನಹಳ್ಳಿ(ಸಂ), ೨೦೦೦, ಕರಕುಶಲ ಕಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ. ಎಂ.ಎಂ. ೧೯೮೦, ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು, ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು.

ಕಲಬುರ್ಗಿ. ಎಂ.ಎಂ.(ಸಂ) ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ. ಎಂ.ಎಂ.(ಸಂ) ೧೯೯೯, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ. ಎಂ.ಎಂ. ೨೦೧೦, ಮಾರ್ಗ ಸಂಪುಟಗಳು, ಸಪ್ನಾಬುಕ್ ಹೌಸ್, ಬೆಂಗಳೂರು.

ಕೃಷ್ಣರಾವ್.ಎಂ.ವಿ., ಕೇಶವಭಟ್ಟ.ಎಂ, ೧೯೭೦, ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು.

ಕೆಳದಿ ವೆಂಕಟೇಶ ಜೋಯಿಸ (ಸಂ), ಕೆಳದಿ ಅರಸರ ಶಾಸನ ಸಂಪುಟ, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕೊಟ್ರೇಶ್.ಎಂ. ೨೦೧೦, ಹರಪನಹಳ್ಳಿ ತಾಲೂಕಿನ ರಕ್ಷಣಾ ಸ್ಮಾರಕಗಳು, ಮಂಟಪ ಮಾಲೆ, ಪ್ರಸಾರಂಗ ಕನ್ನಡ ವಿ.ವಿ, ಹಂಪಿ.

ಕೊಟ್ರೇಶ್.ಎಂ.(ಸಂ).೨೦೧೦, ಕಲ್ಯಾಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಂಗ ಕನ್ನಡ ವಿ.ವಿ, ಹಂಪಿ.

ಗೋಪಾಲ್. ಬಾ.ರಾ.೧೯೮೩, ಬನವಾಸಿ ಕದಂಬರು, ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ, ಶಿರಸಿ.

ಗೋಪಾಲರಾವ್. ಹೆಚ್.ಎಸ್.೧೯೯೩, ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು-ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಗೋಪಾಲ್.ಬಾ.ರಾ.೧೯೯೩, ಕರ್ನಾಟಕದ ಕಲೆಗಳು, ಸಂಪುಟ ೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚನ್ನಬಸವಯ್ಯ ಹಿರೇಮಠ.೨೦೧೪, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚನ್ನಬಸಪ್ಪ ಎಸ್ ಪಾಟೀಲ.೧೯೯೯, ಕರ್ನಾಟಕದ ಕೋಟೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದಮೂರ್ತಿ.ಎಂ.೧೯೮೨, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಐ.ಬಿ. ಹೆಚ್. ಪ್ರಕಾಶನ, ಬೆಂಗಳೂರು.

ಚಿನ್ನಸ್ವಾಮಿ ಸೋಸಲೆ.ಎನ್.(ಸಂ).೨೦೧೨, ಕರ್ನಾಟಕದಲ್ಲಿ ಶ್ವೇತಾಂಬರ ಜೈನ ಸಮಾಜ. ಸಾಂಸ್ಕೃತಿಕ ಅಧ್ಯಯನ ಪ್ರಸಾರಂಗ ಕನ್ನಡ ವಿ.ವಿ, ಹಂಪಿ.

ಚಿದಾನಂದಮೂರ್ತಿ.ಎಂ. ೨೦೦೨, ಕರ್ನಾಟಕ ಶಾಸನ ಸಾಂಸ್ಕೃತಿಕ ಅಧ್ಯಯನ, ಸಪ್ನಾಬುಕ್ ಹೌಸ್, ಬೆಂಗಳೂರು.

ಚೆನ್ನಕ್ಕ ಎಲಿಗಾರ. ೧೯೮೭, ಪ್ರಾಚೀನ ಕರ್ನಾಟಕ ರಾಣಿಯರು, ಶ್ರೀ ಎಸ್.ಕುಲಕರ್ಣಿ ಗೌರೀಶ್ ಮುದ್ರಣಾಲಯ, ಧಾರವಾಡ.

ಚೆನ್ನಕ್ಕ ಎಲಿಗಾರ. ೧೯೯೦, ಕರ್ನಾಟಕ ಸ್ತ್ರೀ ಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಚೆನ್ನಕ್ಕ ಪಾವಟೆ. ೨೦೦೮, ಕರ್ನಾಟಕ ಶಾಸನೋಕ್ತ ಮಹಿಳೆ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

ಜ್ಞಾನಾನಂದ.ಜಿ. ೨೦೦೨, ಶಿಲ್ಪದರ್ಶಿ ಸಂಪುಟ ೨, ಪ್ರಸಾರಾಂಗ, ಕ.ವಿ.ವಿ, ಹಂಪಿ.

ದೇವರಕೊಂಡಾರೆಡ್ಡಿ. ೧೯೯೪, ತಲಕಾಡಿನ ಗಂಗರ ದೇವಾಲಯಗಳು-ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ನಂಜುಂಡ ಸ್ವಾಮಿ.ಎ. ಎಸ್. ೨೦೦೪, ಚಾಳುಕ್ಯರ ಇತಿಹಾಸ, ಸಮಾಜ ಪುಸ್ತಕಾಲಯ, ಧಾರವಾಡ.

ನಂಜುಂಡ ಸ್ವಾಮಿ.ಎ. ಎಸ್. ೨೦೦೪, ರಾಷ್ಟ್ರಕೂಟರ ಇತಿಹಾಸ, ಸಮಾಜ ಪುಸ್ತಕಾಲಯ, ಧಾರವಾಡ.

ನರಸಿಂಹಮೂರ್ತಿ.ಎ.ವಿ.೧೯೭೧, ಕರ್ನಾಟಕ ನಾಣ್ಯ ಪರಂಪರೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ನಾಗಯ್ಯ.ಜೆ.ಎಂ. ೧೯೯೨, ೬ನೇ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ. ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ.

ನಾಗಯ್ಯ.ಜೆ.ಎಂ. ೨೦೧೧, ಕಲ್ಯಾಣ ಚಾಲುಕ್ಯರ ಶಾಸನಗಳು, ಸಂ.೧, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನಾಗರಾಜ್.ಡಿ.ಆರ್.೨೦೧೦, ಅಲ್ಲಮ ಪ್ರಭು ಮತ್ತು ಶೈವಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು.

ಪರಮಶಿವಮೂರ್ತಿ.ಡಿ.ವಿ ೧೯೯೯, ಕನ್ನಡ ಶಾಸನ ಶಿಲ್ಪ, ಪ್ರಸಾರಂಗ ಕನ್ನಡವಿಶ್ವವಿದ್ಯಾಲಯ ಹಂಪಿ.

ಪರಮಶಿವಮೂರ್ತಿ.ಡಿ.ವಿ. ೨೦೧೧, ತುರುಗೊಳ್ ಸಂಕಥನ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪರಮಶಿವಮೂರ್ತಿ.ಡಿ.ವಿ. ೨೦೧೦, ಪೆಣ್ಬುಯ್ಯಲ್. ಮಂಟಪ ಮಾಲೆ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಾಟೀಲ್.ಎಸ್.ಎಸ್(ಸಂ).೨೦೦೦, ಸಿರಿ ಚೇತನ ಸ್ಮರಣ ಸಂಚಿಕೆ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಶಿಕಾರಿಪುರ.

ಪಾಟೀಲ ಅಕ್ಕಮ್ಮ ನೀಲಕಂಠಗೌಡ, ೨೦೧೦, ಕಲ್ಯಾಣ ಚಾಲುಕ್ಯರ ಕಾಲದ ಬಿರುದಾವಳಿಗಳು, ಎಂ.ಫಿಲ್.ಪ್ರೌಢಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ಪಾಡಿಗಾರ ಎಸ್.ವಿ., ೧೯೮೭, ಪುರಾತತ್ವ ಪರಿಚಯ, ರಾಮಾಶ್ರಮ ಪಬ್ಲಿಕೇಶನ್ಸ್, ಧಾರವಾಡ.

ಪ್ರಭಾಕರ್.ಎಂ.ಎನ್.೨೦೧೧, ದೇವಾಲಯ ವಾಸ್ತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬಾಲಸುಬ್ರಮಣ್ಯ, ವಾಸುದೇವನ್.ಸಿ.ಎಸ್, ರಮೇಶ ನಾಯಕ. ೨೦೦೭, ಕನ್ನಡ ದೇವಾಲಯ ಕೋಶ.ಗದಗ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಭಗವತಿ.ಎಸ್.ಎಸ್, ಮೇಲಿನಮನಿ.ಹೆಚ್.ಎಸ್. ೨೦೦೪, ಕನ್ನಡ ಶಾಸನ ಅಧ್ಯಯನ . ವಿದ್ಯಾನಿಧಿ ಪ್ರಕಾಶನ, ಗದಗ.

ಭೋಜರಾಜ ಬ ಪಾಟೀಲ. ೧೯೯೫, ನಾಗರ ಖಂಡ-೭೦: ಒಂದು ಅಧ್ಯಯನ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರಂ.

ಮನೋಹರ ಎಸ್ ದೊಟ್ಟಮನಿ. ೨೦೧೧, ಮೂರು ಜಾವಿ ದೇವರ ಪರಂಪರೆ. ಮಂಟಪ ಮಾಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಲ್ಲಿಕಾರ್ಜುನ.ಕೆ, ವಿ.ಎಸ್.ಮಾಳಿ, ಬಿ.ಎಸ್.ಬಿರಾದಾರ, ಅಶೋಕ ನರೋಡೆ, ೨೦೧೨, ಡಾ.ಬಿ.ಆರ್.ಹಿರೇಮ್ಮಠರ ಶಾಸನ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಾದೇವ.ಸಿ. ೨೦೦೬, ಕರ್ನಾಟಕ ದೇವಾಲಯ ಕೋಶ. ಧಾರಾವಾಡ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮುರಳಯ್ಯ ಸ.ಸ (ಸಂ) ೧೯೭೭, ಬಳ್ಳಿಗಾವೆ ಕ್ಷೇತ್ರ ದರ್ಶನ, ಶ್ರೀ ಬಸವೇಶ್ವರ ಅಷ್ಟ ಶತಮಾನೋತ್ಸವ ಸಮಾರಂಭ ಆಚರಣಾ ಸಮಿತಿ, ಶಿವಮೊಗ್ಗ.

ಮೈಸೂರು ನಾಗರಾಜ ಶರ್ಮಾ.೨೦೧೦, ಹೊಯ್ಸಳ ಶಿಲ್ಪದಲ್ಲಿ ಶಿವ, ಪ್ರಸಾರಂಗ ಮೈಸೂರು ವಿ.ವಿ, ಮೈಸೂರು.

ಯಳನಾಡು ಅಂಜನಪ್ಪ. ೨೦೦೮, ಧರ್ಮ ಮತ್ತು ಮುಕ್ತ ವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಯೋಗೀಶ್ವರಪ್ಪ.ಡಿ.ಎನ್.೨೦೦೯, ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು, ಧಾತ್ರಿ ಪುಸ್ತಕ, ಬೆಂಗಳೂರು.

ರಘುನಾಥ ಭಟ್.ಹೆಚ್. ಆರ್. ೧೯೭೭, ಕರ್ನಾಟಕ ಶಾಸನ ಕಲೆ, ಭಾರತೀ ಪ್ರಕಾಶನ, ಮೈಸೂರು.

ರವೀಂದ್ರನಾಥ.ಕೆ.೨೦೧೧, ಕರ್ನಾಟಕ ಜೈನಮಠಗಳು ಮತ್ತು ಕನ್ನಡ ಸಾಹಿತ್ಯ. ಮಂಟಪ ಮಾಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ.೨೦೦೯, ಕರ್ನಾಟಕದ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ.೨೦೧೭, ಕರ್ನಾಟಕದ ಶಾಕ್ತಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಜಶೇಖರ್.ಎಸ್.೧೯೭೮, ಕರ್ನಾಟಕದ ಕಲೆ ಮತ್ತು ವಾಸ್ತು ಶಿಲ್ಪ, ಸುಜಾತ ಪಬ್ಲಿಕೇಶನ್ಸ್, ಧಾರಾವಾಡ.

ರಾಜಾರಾಮ ಹೆಗಡೆ.(ಸಂ).೨೦೦೨, ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಜಾರಾಮ ಹೆಗಡೆ,ಅಶೋಕ ಶೆಟ್ಟರ್.(ಸಂ) ೨೦೦೧, ಮಲೆಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಮಚಂದ್ರರಾವ್.ಎಸ್.ಕೆ. ೧೯೭೫, ಮೂರ್ತಿ ಶಿಲ್ಪ: ನೆಲೆ ಹಿನ್ನೆಲೆ, , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಮಭಟ್.ಬಿ.ಎಸ್. ೨೦೦೬, ಶಿವಮೊಗ್ಗ ನಗರದ ಇತಿಹಾಸ ದರ್ಶನ, ಕ.ಸಾ. ಪ, ಬೆಂಗಳೂರು.

ವಸಂತಕುಮಾರ್.ಬಿ.ವಿ(ಸಂ). ೧೯೯೮, ಮಹಾದಾನ ಸ್ಮರಣ ಸಂಚಿಕೆ, ತಾಲ್ಲೂಕು ಕನ್ನಡ ಸಾಹಿಸ್ಯ ಪರಿಷತ್ತು, ಶಿಕಾರಿಪುರ.

ವಸಂತಕುಮಾರ.ಬಿ.ವಿ. ೨೦೦೯, ಶಿಕಾರಿಪುರ ತಾಲ್ಲೂಕಿನ ಸಾಂಸ್ಕೃತಿಕ ಸಂಕಥನ, ನೇಕಾರ ಪ್ರಕಾಶನ, ಸೊರಬ.

ವಸಂತ ಕುಮಾರ್ ತಾಳ್ತಜ್, ೧೯೯೮, ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ, ವಿನಯ ಪ್ರಕಾಶನ, ಬೆಂಗಳೂರು.

ವಸಂತ ಲಕ್ಷ್ಮಿ.ಕೆ. ೨೦೦೬, ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು, ಸುಮುಖ ಪ್ರಕಾಶನ, ಬೆಂಗಳೂರು.

ವಾಸುದೇವ ಬಡಿಗೇರ.(ಸಂ).೨೦೦೮, ಹಾನಗಲ್ಲು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವನ್.ಸಿ.ಎಸ್.೨೦೧೨, ಕರ್ನಾಟಕ ದೇವಾಲಯ ಕೋಶ ರಾಯಚೂರು ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ.

ವಿಠಲರಾವ್ ಗಾಯಕ್ವಾಡ್.(ಕನ್ನಡಕ್ಕೆ ಅನುವಾದ).೨೦೦೩, ಲಜ್ಜಾಗೌರಿ, , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ.

ವಿನಾಯಕ.ಎಂ.ಶೆಟ್ಟಿ, ೨೦೦೬, ಶಿಕಾರಿಪುರ ಶಿರಿ, ಮಹಾಮನೆ ಪ್ರಕಾಶನ, ಧಾರವಾಡ.

ವೀರೇಶ ಬಡಗೇರ.೨೦೧೦, ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ.ಮಂಟಪ ಮಾಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿರೂಪಾಕ್ಷ ಕುಲಕರ್ಣಿ. ೨೦೦೫, ಕಾಪಾಲಿಕರು ಮತ್ತು ಕಾಳಾಮುಖರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಸುಂದರ ಅ, ೧೯೯೩, ಶಿವಮೊಗ್ಗ ನಗರ ಪ್ರದೇಶದಲ್ಲಿಯ ಮಹತ್ವದ ಪ್ರಾಗಿತಿಹಾಸದ ಸಾಂಸ್ಕೃತಿಕ ಕುರುಹುಗಳು, ವಜ್ರಪಥ ಕರ್ನಾಟಕ ಸಂಘ, ಶಿವಮೊಗ್ಗ.

ಸುರೇಶ್.ಶಿ.ಬಿ. ೧೯೮೬, ಶಿಕಾರಿಪುರ ತಾಲ್ಲೂಕು ದರ್ಶನ, ಶಿಕಾರಿಪುರ.

ಸೂರ್ಯನಾಥ ಕಾಮತ್, ೨೦೦೭, ಕರ್ನಾಟಕ ಕೈಗನ್ನಡಿ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಸೋಮಶೇಖರ್.ಎಸ್.೨೦೧೪, ಕರ್ನಾಟಕದ ಬಿರುದಾವಳಿಗಳು, ಪ್ರಸಾರಾಂಗ ಕನ್ನಡ ವಿ.ವಿ, ಹಂಪಿ.

ಶಾರದಾ.ಕೆ.೨೦೦೬, ಕರ್ನಾಟಕದಲ್ಲಿ ಜೈನಧರ್ಮ, ಮಂಟಪ ಮಾಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೇಷಶಾಸ್ತ್ರಿ.ಆರ್. ೨೦೦೪, ಕರ್ನಾಟಕ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಹಿರೇಮಠ.ಬಿ.ಆರ್. ೧೯೮೬, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಕರ್ನಾಟಕ, ವಿಶ್ವ ವಿದ್ಯಾಲಯ, ಧಾರವಾಡ.

ಹಿರೇಮಠ.ಆರ್.ಸಿ., ಕಲಬುರ್ಗಿ.ಎಂ.ಎಂ., ಕನ್ನಡ ಶಾಸನಸಂಪದ, ಕರ್ನಾಟಕ, ವಿಶ್ವ ವಿದ್ಯಾಲಯ, ಧಾರವಾಡ.

ಹಂದ್ರಾಳ ಗವಿಸಿದ್ದಪ್ಪ.೨೦೧೦, ಬೈಗುಳುಗಳಲ್ಲಿ ಮಹಿಳೆ. ಮಂಟಪ ಮಾಲೆ, . ಪ್ರಸಾರಂಗ ಕನ್ನಡ ವಿ.ವಿ, ಹಂಪಿ.

ಹಂಪಾ ನಾಗರಾಜಯ್ಯ. ೧೯೯೮, ಶಾಸನಗಳಲ್ಲಿ ಜೈನ ತೀರ್ಥಗಳು, ಪಂಡಿತ ರತ್ನ. ಎ.ಶಾಂತಿರಾಜ ಶಾಸ್ತ್ರಿ ಟ್ರಸ್ಟ್, ಬೆಂಗಳೂರು.

ಇಂಗ್ಲೀಷ್ ಕೃತಿಗಳು

Eshwar.n.natkar, The art & architecture of the chalyukyas of kalyana, Dharawad.

Desai Dinakara, 1951, The Mahamandalesvaras Under Chalukya of Kalyani, Indian Historical Research Institute, Poona.

Dhaky .M. A., 1996, Encyclopedia of Indian Temple Architecure, South Indian Upeer Dravida Desa, Vol 1, part-2 American Institute of Indian Studies, New Delhi.

Gopal B.R., 1981, The chalukyas of kalyana and kalachuries, k.u.Dharawad.

Jayaswal.K.P., 1967, Hindu polity.

Nagaraja rao.M.S.(ed). 1983, Chalukyas of kalyana, Mythic society, Bangalore.

ಸಂಕ್ಷೇಪಗಳು

ಎಕ–ಎಪಿಗ್ರಾಪಿಯ ಕರ್ನಾಟಿಕ್

ಎಇ–ಎಪಿಗ್ರಾಪಿಯ ಇಂಡಿಯ

ಮೈ.ಅ.ರೀ–ಮೈಸೂರ್ ಅರ್ಕಲಜಿಕಲ್ ರಿಪೋರ್ಟ್

ಇ ಅ–ಇಂಡಿಯನ್ ಅನ್ಟಿಕ್ವರಿ

ಶಿಕಾರಿ–ಶಿಕಾರಿಪುರ

ಇಂ.ಆ.ರಿ– ಇಂಡಿಯನ್ ಅನ್ಯೂವಲ್ ರೀಪೋರ್ಟ್

ಕ.ಸಾ.ಪ– ಕನ್ನಡ ಸಾಹಿತಯ ಪರಿಷತ್ತು

ಕ.ವಿ.ವಿ –ಕರ್ನಾಟಕ ವಿಶ್ವವಿದ್ಯಾಲಯ,

ಕನ್ನಡ ವಿಶ್ವವಿದ್ಯಾಲಯ

ಸಂ–ಸಂಪಾದಕರು



ತ್ರಿಪುರುಷ ದೇವಾಲಯ, ಬಂದಳಿಕೆ.



ಅಲ್ಲಮಪ್ರಭು ಮಂಟಪ, ಬಳ್ಳಿಗಾವಿ.



ಸೋಮೇಶ್ವರ ದೇವಾಲಯ, ಬಂದಳಿಕೆ.



ಶಾಂತಿನಾಥ ಬಸದಿ, ಬಂದಳಿಕೆ.



ಸೋಮೇಶ್ವರ ದೇವಾಲಯ, ಬಳ್ಳಿಗಾವಿ.



ಕೇದಾರೇಶ್ವರ ದೇವಾಲಯ, ಬಳ್ಳಿಗಾವಿ



ಪಚ್ಚಲಿಂಗೇಶ್ವರ ದೇವಾಲಯ, ಬಳ್ಳಿಗಾವಿ.



ರಾಮೇಶ್ವರ ದೇವಾಲಯ, ಮಾಯತ್ತಮ್ಮನ ಮುಚ್ಚಡಿ.



ಮಲ್ಲಿಕಾರ್ಜುನ ದೇವಾಲಯ, ಬೇಗೂರು.



ಮಲ್ಲೇಶ್ವರ ದೇವಾಲಯ, ಮುಗಳೆಗೆರೆ.



ಬಸವೇಶ್ವರ ದೇವಾಲಯ, ನೆಲವಾಗಿಲು.



ಬಸವೇಶ್ವರ ದೇವಾಲಯ, ನೇರಲಗಿ.



ಉಜ್ಜೇನೇಶ್ವರ ದೇವಾಲಯ, ಉಜ್ಜೇನಿಪುರ.



ಚನ್ನಬಸವೇಶ್ವರ ದೇವಾಲಯ, ಬಸವನಂದಿಹಳ್ಳಿ.



ಮಲ್ಲಿಕಾರ್ಜುನ ದೇವಾಲಯ, ಅಡಗಂಟಿ



ನಂದೀಶ್ವರ ದೇವಾಲಯ, ನಂದಿಹಳ್ಳಿ.



ರಂಗನಾಥ ದೇವಾಲಯ, ದಾಸನಕೊಪ್ಪ.



ಮಲ್ಲಿಕಾರ್ಜುನ ದೇವಾಲಯ, ತೊಗರ್ಸಿ.



ಸೋಮೇಶ್ವರ ದೇವಾಲಯ, ಮುಗಳಿಗೆರೆ.



ಕಲ್ಲೇಶ್ವರ ದೇವಾಲಯ, ಮಾಯತ್ತಮ್ಮನ ಮುಚ್ಚಡಿ.



ಈರಣ್ಣನ ದೇವಾಲಯ, ಈಸೂರು.



ಸೋಮೇಶ್ವರ ದೇವಾಲಯ, ಸುರಗಿಹಳ್ಳಿ.



ಮಲ್ಲೇಶ್ವರ ದೇವಾಲಯ, ನಾಗೀಹಳ್ಳಿ.



ಹೋರಿಹೊಳೆ ಬಸವೇಶ್ವರ ದೇವಾಲಯ, ಚಿಕ್ಕಾಪುರ.



ರಾಮೇಶ್ವರ ದೇವಾಲಯ, ಮಳವಳ್ಳಿ.



ಮಂಟಪ, ಬಳ್ಳಿಗಾವಿ.



ಪ್ರಣವೇಶ್ವರ ದೇವಾಲಯ, ತಾಳಗುಂದ.



ತೋಟದ ವೀರಭದ್ರೇಶ್ವರ ದೇವಾಲಯ, ಬಳ್ಳಿಗಾವಿ.



ಶಿವಾಲಯ, ಶಿವನಪಾದ.



ಕಾಳಿಕಾಂಭದೇವಿ ದೇವಾಲಯ, ಬಳ್ಳಿಗಾವಿ.



ಕಲ್ಲೇಶ್ವರ ದೇವಾಲಯ, ಮಳವಳ್ಳಿ.



ಸಿದ್ಧರಾಮೇಶ್ವರ ದೇವಾಲಯ, ಹಳೇಮುತ್ತಗಿ.



ತ್ರಿಪುರಾಂತಕ ದೇವಾಲಯ, ಬಳ್ಳಿಗಾವಿ.



ಹಂಪೇಶ್ವರ ದೇವಾಲಯ, ಕಡೇನಂದಿಹಳ್ಳಿ.



ಗಂಡಭೇರುಂಡ, ಬಳ್ಳಿಗಾವಿ.



ಅಜಗಣ್ಣ–ಮುಕ್ತಯಕ್ಕ, ಹಳೇಮುತ್ತಗಿ.

ಪಾಳುಬಿದ್ದ ಮಂಟಪಗಳು



ಹೀರೆಜಂಬೂರು



ಹೀರೆಜಂಬೂರು



ಬೆಂಡೇಕಟ್ಟೆ.



ನಂದಿಹಳ್ಳಿ.



ಅಂಬಾರಗೊಪ್ಪ.



ಮತ್ತಿಕೋಟೆ

ವಿವಿಧ ಶೈಲಿಯ ದೇವಾಲಯದ ಕಂಬಗಳು

(ಬ್ರಹ್ಮಕಾಂತ, ಶಿವಸ್ಕಾಂತ, ಸ್ಕಂದಕಾಂತ, ವಿಷ್ಣುಕಾಂತ, ಚಂದ್ರಕಾಂತ, ರುದ್ರಕಾಂತ)



ವೀರಗಲ್ಲುಗಳು









ವೀರ-ಮಾಸ್ತಿಗಲ್ಲು, ಮಾಸ್ತಿಗಲ್ಲುಗಳು








ಇಕ್ಕೈಯ್ ಮಾಸ್ತಿಗಲ್ಲುಗಳು




ವೀರ ಪ್ರಾಣಿಗಳ ಜೊತೆಗಿನ ಕಳಗ, ಆತ್ಮಬಲಿ, ಸಿಡಿತಲೆ ಶಾಸನಗಳು








ತುರುಗೊಳ್ ಶಾಸನಗಳು








ಬಾವಿ, ಕೆರೆ, ಕಟ್ಟೆ, ತಟಾಕಗಳು













ಪಂಚತಂತ್ರ ಕಥೆಗಳು, ಮಿಥುನ ಶಿಲ್ಪಗಳು.








VILLAGE BOUNDARY, G.P BOUNDARY WITH ROADNETWORK MAP OF SHIKARIPURA TALUK



NRDMS CENTRE
SHIMOGA